# ಕೊಮಾರ ರಾಮಯ್ಯನ ಚರಿತ್ರೆ

## ಕನ್ನಡಪ್ರಜ್ಞೆಯನ್ನು ವಿಶ್ವಪ್ರಜ್ಞೆಯಾಗಿಸುವತ್ತ

ಸಾವಿರಾರು ವರ್ಷಗಳ ಸುಧೀರ್ಘ ಮತ್ತು ಉಜ್ವಲ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವ ಕರ್ನಾಟಕದ ಆಧುನಿಕ ಇತಿಹಾಸದಲ್ಲಿ ಕರ್ನಾಟಕದ ಏಕೀಕರಣ ಒಂದು ಐತಿಹಾಸಿಕವೂ ಮತ್ತು ಮಹತ್ವಪೂರ್ಣವೂ ಆದ ವಿಶಿಷ್ಟ ಘಟನೆ. ಹಾಗಯೇ ವಿಶ್ವವಿದ್ಯಾಲಯದ ಸ್ಥಾಪನೆ ಮತ್ತೊಂದು ಮಹತ್ವದ ಐತಿಹಾಸಿಕ ಘಟನೆ. ಕರ್ನಾಟಕದ ಇತರೆ ವಿಶ್ವವಿದ್ಯಾಲಯಗಳು ಕೇವಲ ಕೆಲವು ಜಿಲ್ಲೆಗಳಿಗೆ ಮಾತ್ರ ಪರಿಮಿತಗೊಂಡಿದ್ದರೆ ಕನ್ನಡ ವಿಶ್ವವಿದ್ಯಾಲಯದ ವ್ಯಾಪ್ತಿ ಅಖಂಡ ಕರ್ನಾಟಕ ಮಾತ್ರವಲ್ಲದೆ ಕನ್ನಡಿಗ ಮತ್ತು ಕನ್ನಡ ಸಂಸ್ಕೃತಿ ನೆಲೆಸಿರುವ ಎಲ್ಲ ದೇಶ ಮತ್ತು ವಿದೇಶಗಳನ್ನು ಒಳಗೊಂಡಿದೆ. ಈ ಕಾರಣದಿಂದ ನಮ್ಮ ವಿಶ್ವವಿದ್ಯಾಲಯದ ದಾರಿ ಮತ್ತು ಗುರಿ ಎರಡೂ ವಿಭಿನ್ನವೂ ಮತ್ತು ವೈಶಿಷ್ಟ್ಯಪೂರ್ಣವೂ ಆಗಿದೆ.

ಕನ್ನಡ ವಿಶ್ವವಿದ್ಯಾಲಯ ಕನ್ನಡನಾಡು, ನುಡಿ, ಸಂಸ್ಕೃತಿ ಮತ್ತು ಜನಜೀವನದ ಸರ್ವಮುಖಗಳ ವಿಶಿಷ್ಟವಾದ ಅಂತರಂಗ ಮತ್ತು ಬಹಿರಂಗ ಸಂಪತ್ತನ್ನು ಕುರಿತು ಅಧ್ಯಯನಮಾಡುವ, ಸಂಶೋಧಿಸುವ ಮತ್ತು ಅದರ ಅಧ್ಯಯನದ ಫಲಿತಗಳನ್ನು ಜಗತ್ತಿನಾದ್ಯಂತ ಪ್ರಸಾರ ಮಾಡಿ ಕರ್ನಾಟಕದ ಬಗೆಗಿನ ಅರಿವನ್ನು ಜನಸಮುದಾಯದಲ್ಲಿ ವಿಸ್ತರಿಸುವ ಹಾಗೂ ಅನಂತಮುಖಿಯಾದ ವಿಶ್ವಜ್ಞಾನವನ್ನು ಕನ್ನಡಜ್ಞಾನವನ್ನಾಗಿ ಪರಿವರ್ತಿಸಿ ಅದು ಕನ್ನಡಿಗರೆಲ್ಲರಿಗೂ ದಕ್ಕುವಂತೆ ಮಾಡುವ ಮೂಲಭೂತ ಆಶಯದ ಪ್ರತಿನಿಧಿಯಾಗಿ ಸ್ಥಾಪಿತಗೊಂಡಿದೆ. ಬೋಧನೆಗಿಂತ ಸಂಶೋಧನೆ, ಸೃಷ್ಟಿಗಿಂತ ವಿಶ್ವಂಭರ ದೃಷ್ಟಿ, ಶಿಥಿಲ ವಿವರಣೆಗಿಂತ ಅತುಳ ಸಾಧ್ಯತೆಗಳನ್ನೊಳಗೊಂಡ ಅನನ್ಯ ಅಭಿವ್ಯಕ್ತಿ, ನಾಡಿನ ಕೋಟಿ ಕೋಟಿ ಶ್ರೀಸಾಮಾನ್ಯರ ವಿವಿಧ ಪ್ರತಿಭಾಶಕ್ತಿ ಮತ್ತು ಸಾಮರ್ಥ್ಯಗಳ ಸದ್ಬಳಕೆಯ ಮೂಲಕ ಅವರ ಅಂತಃಪ್ರಜ್ಞೆಯನ್ನು ಎಚ್ಚರಿಸುವ, ವಿಕಸಿಸುವ ಶ್ರದ್ಧಾನ್ವಿತ ಕಾಯಕ ಇದರ ದಾರಿಯಾಗಿದೆ.

ಕನ್ನಡ ನಾಡನ್ನು ಕನ್ನಡ ವಿಶ್ವವಿದ್ಯಾಲಯದಲ್ಲಿ ನೋಡು, ಕನ್ನಡ ವಿಶ್ವವಿದ್ಯಾಲಯವನ್ನು ನೋಡಿದಲ್ಲದೆ ಕನ್ನಡ ನಾಡಿನ ಯಾತ್ರೆ ಸಂಪೂರ್ಣವಾಗದು, ಸಾರ್ಥಕವಾಗದು ಎಂಬಂತೆ ರೂಪುಗೊಳ್ಳುತ್ತಿರುವ ಮತ್ತು ರೂಪುಗೋಳ್ಳಬೇಕಾದ ಮಹಾ ಸಂಸ್ಥೆ ಇದು. ಕನ್ನಡ ಪ್ರಜ್ಞೆ ತನ್ನ ಸತ್ವ ಮತ್ತು ಸತ್ವ ದೊಡನೆ ವಿಶ್ವಪ್ರಜ್ಞೆಯಾಗಿ ಅರಳಿ ನಳನಳಿಸಬೇಕು; ವಿಶ್ವಪ್ರಜ್ಞೆ ಕನ್ನಡ ದೇಶೀ ಪ್ರಜ್ಞೆಯೊಡನೆ ಪ್ರವೇಶಿಸಿ, ಪ್ರವಹಿಸಿ, ಸಮನ್ವಯಗೊಂಡು, ಸಂಲಗ್ನಗೊಂಡು, ಸಮರಸಗೊಂಡು ಸಾಕ್ಷಾತ್ಕಾರಗೊಳ್ಳಬೇಕು ಎಂಬುದೇ ಇದರ ಗುರಿ. ಈ ಗುರಿಯ ಮೂಲಕ ಕನ್ನಡ ಕರ್ನಾಟಕತ್ವದ ಉಸಿರಾಗಿ, ವಿಶ್ವಪ್ರಜ್ಞೆಯಾಗಿ ಬೆಳೆಯಲು ಸಾಧಕವಾಗಬೇಕು. ಕನ್ನಡಿಗರೆಲ್ಲರ ಸಾಮೂಹಿಕ ಶ್ರಮ ಮತ್ತು ಪ್ರತಿಭೆಗಳ ಸಮಷ್ಟಿ ಪ್ರಕ್ರಿಯೆಯಿಂದ ಬೆಳಕಿನ ಈ ಮಹಾಪಥವನ್ನು ಕ್ರಮಿಸುವುದು ನಮ್ಮ ವಿಶ್ವವಿದ್ಯಾಲಯದ ಮಹತ್ತರ ಆಶಯ.

ನಾಗಾಲೋಟದಿಂದ ಕ್ರಮಿಸುತ್ತಿರುವ ಜಗತ್ತಿನ ವ್ಯಾಪಕ ಜ್ಞಾನ, ತಂತ್ರಜ್ಞಾನ ಮತ್ತು ವಿಜ್ಞಾನಗಳ ಶೋಧನೆ ಮತ್ತು ಚಿಂತನೆಗಳನ್ನು ಕನ್ನಡದಲ್ಲಿ ಸತ್ವಪೂರ್ಣವಾಗಿ ದಾಖಲಿಸಿ ಕನ್ನಡ ಓದುಗರ ಜ್ಞಾನವನ್ನು ವಿಸ್ತರಿಸಿ ಅವರಲ್ಲಿ ಪುಸ್ತಕ ಸಂಸ್ಕೃತಿಯನ್ನು ಪ್ರಸರಿಸುವ ವಿಶೇಷ ಹೊಣೆಯನ್ನು ಹೊತ್ತು ನಮ್ಮ ವಿಶ್ವವಿದ್ಯಾಲಯದ ಪ್ರಸಾರಾಂಗ ಅಸ್ತಿತ್ವಕ್ಕೆ ಬಂದಿದೆ. ಶ್ರವ್ಯ, ದೃಶ್ಯ ಮತ್ತು ವಾಚನ ಸಾಮಾಗ್ರಿಗಳ ಸಮರ್ಪಕ ಉತ್ಪಾದನೆ ಮತ್ತು ವಿತರಣಾ ಪ್ರಕ್ರಿಯೆಗಳ ಮೂಲಕ ಇದು ಈ ಗುರಿಯನ್ನು ತಲುಪಲು ಶಕ್ತಿಮೀರಿ ಪ್ರಯತ್ನಿಸುತ್ತಿದೆ. ಈಗಾಗಲೇ ೭೦೦ ಕ್ಕೂ ಹೆಚ್ಚು ವೈವಿಧ್ಯಮಯ ಮತ್ತು ವೈಶಿಷ್ಟ್ಯಮಯ ಕೃತಿಗಳ ಮೂಲಕ ಕನ್ನಡ ಗ್ರಂಥಲೋಕದ ಅಂತರಂಗ ಮತ್ತು ಬಹಿರಂಗ ಸೌಂದರ್ಯಗಳನ್ನು ಉಜ್ವಲಿಸಿರುವ ಇದು ತನ್ನ ಮುಂದಿನ ಗುರಿಯ ಕಡೆಗೆ ಆಶಾದಾಯಕವಾಗಿ ಚಲಿಸುತ್ತಿದೆ.

ಕಮ್ಮಟದುರ್ಗದ ಮಹಾವೀರ ಕುಮಾರರಾಮನನ್ನು ಕುರಿತ ಸಾಹಿತ್ಯ ಕನ್ನಡದಲ್ಲಿ ಬಹಳಷ್ಟು ಪ್ರಮಾಣದಲ್ಲಿ ಲಭ್ಯವಾಗಿದೆ. ಪ್ರಮಾಣದಲ್ಲಿ ಅಷ್ಟೇನೂ ದೊಡ್ಡದಲ್ಲದ ಕಂಪಿಲ ರಾಜ್ಯದ ಕುಮಾರರಾಮನ ಚರಿತ್ರೆ ಮಾತ್ರ ಅವನು ಹುಟ್ಟಿದ ಕಾಲದಿಂದ ಇಂದಿನವರೆಗೂ ಶಿಷ್ಟ ಮತ್ತು

ಜನಪದ ಕವಿಗಳ ಸ್ಮೃತಿಯಲ್ಲಿ ಹಾಗೂ ಲೇಖನಿಯಲ್ಲಿ ಬೆಳೆಯುತ್ತಲೇ ಬಂದಿರುವುದು ವಿಚಾರಯೋಗ್ಯವಾಗಿದೆ. ಕುಮ್ಮಟದುರ್ಗದ ಆಸು ಪಾಸಿನಲ್ಲೇ ಬಾಳಿದ ವಿಜಯನಗರ ಅದರ ಹಿಂದಿನ ಶತಮಾನಗಳ ಕದಂಬ, ಹೊಯ್ಸಳ, ಚಾಲುಕ್ಯ ಚಕ್ರವರ್ತಿಗಳಿಗೆ ದೊರಕದ ಆದರ, ಗೌರವ ಮತ್ತು ಪ್ರೀತಿಗಳು ಜನಸಾಮಾನ್ಯರಿಂದ ಕುಮಾರರಾಮನಿಗೆ ದೊರೆತಿರುವುದು ಆತನ ಸಂಕ್ಷಿಪ್ತ ಜೀವನಾವಧಿಯಲ್ಲಿ ಅವನು ಸಾಧಿಸಿದ ಅಪಾರ ಹಿರಿಮೆಯ ದ್ಯೋತಕವಾಗಿರುವುದು ಮಾತ್ರವಲ್ಲದೆ ಅವನ ಪರನಾರಿ ಸೋದರತ್ವ ಅವನಿಗೆ ಗಳಿಸಿಕೊಟ್ಟ ನೈತಿಕ ಸ್ಥಾನ ಮಹಿಮೆ ಇದಕ್ಕೆ ಕಾರಣವಾಗಿರಬಹುದು.

ಕುಮಾರರಾಮನ ವೀರ ಸಾಹಸಗಳು ಶಿಷ್ಟ ಮತ್ತು ಗ್ರಾಮೀಣ ಮನಸ್ಸಿನ ಕವಿಗಳ ಅಂತರಂಗವನ್ನು ತೀವ್ರವಾಗಿ ಪ್ರಭಾವಿಸಿದ್ದು, ಅವನೊಬ್ಬ ದಂತಕಥೆಯ ಸೃಷ್ಟಿಯಂತೆ ಕನ್ನಡ ನಾಡಿನ ಪರಂಪರೆಯಲ್ಲಿ ಹಬ್ಬಿಕೊಂಡಿರುವುದು ವಿಶೇಷ ಅಧ್ಯಯನಕ್ಕೆ ಅರ್ಹವಾದ ಸಂಗತಿಯಾಗಿದೆ. ಪಾಂಚಾಳ ಗಂಗ, ಮಹಾಲಿಂಗ ಸ್ವಾಮಿ ಮತ್ತು ಇಬ್ಬರು ಅನಾಮದೇಯ ಕವಿಗಳಲ್ಲದೆ ಸಾಹಿತ್ಯ ಚರಿತ್ರೆಯಲ್ಲಿ ಪ್ರಸಿದ್ಧವಾದ ನಂಜುಂಡ ಕವಿ ಕೂಡ ವೀರನ ಹೃದಯಸ್ಪರ್ಶಿಯಾದ ಜೀವನ ಕಥನವನ್ನು ತನ್ನ ಶ್ರೇಷ್ಠ ಕಾವ್ಯದ ವಸ್ತುವನ್ನಾಗಿ ಆರಿಸಿಕೊಂಡಿದ್ದಾರೆ. ಈ ಕಾವ್ಯಗಳಲ್ಲದೆ ಜನಪದರ ನಾಲಗೆಯಲ್ಲಿ ಹತ್ತಾರು ವಿಭಿನ್ನ ಮುಖಗಳ ನೀಳ ಹಾಡುಗಳು ಮೂಡಿಬಂದು ಕುಮಾರರಾಮ ಕನ್ನಡಿಗರ ಪಾಲಿಗೆ ಮರೆಯಲಾಗದ ಮಹಾಸಂಸ್ಕೃತಿಕ ವೀರನಾಗಿ ಪರಿಗಣಿತವಾಗಿದ್ದಾನೆ. ಪ್ರೊ.ಜಿ.ವರದರಾಜರಾವ್ ಅವರು ಕುಮಾರರಾಮನ ಸಾಂಗತ್ಯಗಳ ಮೇಲೆ ತಲಸ್ಪರ್ಶಿಯಾದ ಸಂಶೋಧನೆಯನ್ನು ನಡೆಸಿ ಒಂದು ಮಹಾಪ್ರಬಂಧವನ್ನೇ ಪ್ರಕಟಿಸಿದ್ದಾರೆ. ಮತ್ತೆ ಮತ್ತೆ ಕುಮಾರರಾಮನನ್ನು ಕುರಿತ ಹೊಸ ಹೊಸ ಆಕರ ಶೋಧ ಆಗುತ್ತಲೇ ಇದೆ. ಪ್ರಸ್ತುತ ಕೃತಿ "ಕೊಮಾರ ರಾಮಯ್ಯನ ಚರಿತ್ರೆ" ಈ ನೆಲೆಯಲ್ಲಿ ಮತ್ತೊಂದು ವಿಶಿಷ್ಟ ಕೃತಿಯಾಗಿ ಮೂಡಿಬಂದಿದೆ.

ನಮ್ಮ ಪ್ರಸಿದ್ಧ ಸಂಶೋಧಕರಲ್ಲಿ ಒಬ್ಬರೂ, ಕನ್ನಡ ವಿಶ್ವವಿದ್ಯಾಲಯದ ನಿಕಟಪೂರ್ವ ಕುಲಪತಿಗಳೂ ಆದ ಡಾ.ಎಂ.ಎಂ.ಕಲಬುರ್ಗಿ ಅವರು ತಮಗೆ ದೊರೆತ ಹೊಸ ಹಸ್ತಪ್ರತಿಯ ಆಧಾರದ ಮೇಲೆ ಪ್ರಸ್ತುತ ಕೃತಿಯನ್ನು ಸಂಪಾದಿಸಿದ್ದಾರೆ. ೫೪ ಪುಟಗಳ ಸುದೀರ್ಘ ಪ್ರಸ್ತಾವನೆಯನ್ನು ಬರೆಯುವ ಮೂಲಕ ಈ ಕೃತಿಯ ಕಥಾ ವಿನ್ಯಾಸ, ಅದರ ರಾಜಕೀಯ, ಜಾನಪದೀಯ ಮತ್ತು ಸಾಂಸ್ಕೃತಿಕ ಮಗ್ಗುಲುಗಳ ವೈಶಿಷ್ಟ್ಯಗಳನ್ನು ತೆರೆದಿಟ್ಟಿದ್ದಾರೆ. ಈ ಹಿಂದೆ ಪ್ರಕಟವಾಗಿರುವ ಮತ್ತು ದೊರೆತ ಕುಮಾರರಾಮನನ್ನು ಕುರಿತ ಕೃತಿಗಳ ಸಮೀಕ್ಷೆಯೊಂದಿಗೆ ಈ ಹೊಸ ಸಂಪುಟ ತೆರೆದಿಡುವ ವಿನೂತನ ಅಂಶಗಳ ಬಗೆಗೆ ಬೆಳಕು ತೋರಿದ್ದಾರೆ. ಈ ಕೃತಿಯಲ್ಲಿ ಹಿಂದಿನ ಕೃತಿಗಳಲ್ಲಿ ದೊರೆಯದ ಎಷ್ಟೋ ಹೊಸ ಪ್ರಸಂಗಗಳು, ಪಾತ್ರಗಳು ವಿಶಿಷ್ಟವಾಗಿ ದೊರೆಯುವುದನ್ನು ಗುರುತಿಸಿದ್ದಾರೆ. ಯುದ್ಧ, ಕೌಟುಂಬಿಕ ಸಂಬಂಧ, ಆ ಕಾಲದ ಸಾಂಸ್ಕೃತಿಕ ಪರಿಸರ, ವ್ಯಕ್ತಿಗಳ ಮನೋಧರ್ಮ ಮತ್ತು ಕುಮಾರರಾಮನ ಜೀವನದಲ್ಲಿ ಕಾಡಿರುವ ಹೆಣ್ಣುಗಳ ಸೂಕ್ಷ್ಮ ಸ್ವರೂಪ ಮತ್ತು ಅದರಿಂದ ಎದ್ದು ನಿಲ್ಲುವ ಕುಮಾರರಾಮನ ವ್ಯಕ್ತಿಚಿತ್ರದ ಹಿರಿಮೆಯನ್ನು ತಮ್ಮ ಗಂಭೀರ ಪ್ರಸನ್ನ ಶೈಲಿಯಲ್ಲಿ ಇಲ್ಲಿ ಹಿಡಿದಿಟ್ಟಿದ್ದಾರೆ. ಈ ಕೃತಿಯ ಮೂಲಕ ಕುಮಾರರಾಮನ ಕಥೆಯ ಅಂತರ್ ದ್ರವ್ಯ, ಹರಹು ಮತ್ತು ಸಾಹಿತ್ಯ ಮೌಲ್ಯಗಳನ್ನು ತೌಲನಿಕವಾಗಿ ಅಧ್ಯಯನ ಮಾಡಲು ವಿದ್ವಾಂಸರಿಗೆ ಮತ್ತೊಂದು ಆಕರವನ್ನು ದೊರಕಿಸಿಕೊಟ್ಟಿದ್ದಾರೆ. ಡಾ.ಕಲಬುರ್ಗಿ ಅವರ ಈ ಕೃತಿಸಂಪಾದನೆ, ಹಳಗನ್ನಡ ನಡುಗನ್ನಡ ಕೃತಿಗಳನ್ನು ಸಂಪಾದನೆ ಮಾಡುವ ವಿದ್ವದ್ ಜನರಿಗೆ ಒಂದು ಮಾದರಿಯನ್ನು ಒದಗಿಸಿಕೊಟ್ಟಿದೆ. ಇಂತಹ ವಿದ್ವತ್ ಸಾಹಸಕ್ಕಾಗಿ ಅವರನ್ನು ನಾನು ಹೃತ್ಪೂರ್ವಕವಾಗಿ ಅಭಿನಂದಿಸುತೇನೆ.

**ಡಾ. ಎಚ್.ಜೆ.ಲಕ್ಕಪ್ಪಗೌಡ**

ಕುಲಪತಿಗಳು

# ಪ್ರಸ್ತಾವನೆ(೧)

ಪ್ರಾಚೀನ ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಕಂಪಿಲರಾಜ್ಯದ ನಾಶ, ವಿಜಯನಗರ ಸಾಮ್ರಾಜ್ಯದ ನಿರ್ಮಾಣ- ನಾಶಗಳು ತುಂಬ ಇಕ್ಕಟ್ಟಿನ ಸಂದರ್ಭಗಳೆನಿಸಿವೆ. ಇಂಥ ಸಂದರ್ಭಗಳನ್ನು ನಿಯಂತ್ರಿಸುವಲ್ಲಿ ಕಾಲ ಮತ್ತು ದೇಶಗಳು ಮಹತ್ವದ ಪಾತ್ರವಹಿಸುತ್ತವೆ.

'ಕಾಲ' ದೃಷ್ಟಿಯಿಂದ ಹೇಳುವುದಾದರೆ ೧೨ನೆಯ ಶತಮಾನದಲ್ಲಿ ದೇವಾಲಯ ನಾಶ-ಮತಾಂತರಗಳಂಥ ಚಟುವಟಿಕೆಗಳನ್ನೊಳಗೊಂಡ ಮುಸಲ್ಮಾನರ ಹೊಸಬಗೆಯ ಆಕ್ರಮಣ ಕೇವಲ ರಾಜಕೀಯ ದಾಳಿಯಾಗಿ ಉಳಿಯದೆ, ಸಾಂಸ್ಕೃತಿಕ ದಾಳಿಯಾಗಿ ಬೆಳೆಯಿತು. ಉತ್ತರದಿಂದ ಆರಂಭವಾದ ಈ ದಾಳಿಗೆ ದಕ್ಷಿಣ ಚಕ್ರವರ್ತಿಗಳಾದ ಈಗಿನ ಮಹಾರಾಷ್ಟ್ರದ ದೇವಗಿರಿ ಯಾದವರು ೧೩೦೭ ರಲ್ಲಿ, ಆಂದ್ರಪ್ರದೇಶದ ಕಾಕತೀಯರು ೧೩೦೯ ರಲ್ಲಿ, ಕರ್ನಾಟಕದ ಹೊಯ್ಸಳರು ೧೩೧೨ ರಲ್ಲಿ ಸೋತು ಶರಣಾಗತರಾದರು. ಇಂಥ ಅರಕ್ಷಕ ಸ್ಥಿತಿಯ ಇಕ್ಕಟ್ಟಿನಲ್ಲಿ ಕಂಪಿಲರಾಜ್ಯ ಕನ್ನಡಿಗರ ಏಕೈಕ ರಕ್ಷಣೆಯಾಗಿ ನಿಂತಿತು. ಆ ಕಡೆ ಎಲ್ಲಾ ಹಿಂದೂ ರಾಜ್ಯಗಳು ಹಾಳಾದ, ಈ ಕಡೆ ಹಿಂದೂ ರಾಜ್ಯವಾದ ವಿಜಯನಗರ ಹುಡ್ಡದ ಸಂಧಿಕಾಲದಲ್ಲಿ ಮುಸಲ್ಮಾನರನ್ನು ಎರಡು ಸಲ ಸೋಲಿಸಿ, ಕೊನೆಯ ಮೂರನೆಯ ಯುದ್ಧದಲ್ಲಿ ದುರಂತಕ್ಕೆ ಗುರಿಯಾಯಿತು. ಈ ದುರಂತ ಸಂಭವಿಸಿದುದು ೧೩೨೬ ರಲ್ಲಿ, ಮುಂದೆ ವಿಜಯನಗರ ಸಾಮ್ರಾಜ್ಯ ಹುಟ್ಟಿದುದು ೧೩೩೬ ರಲ್ಲಿ. ಅಂದರೆ ಕಾಲದೃಷ್ಟಿಯಿಂದ ಕೇವಲ ೧೦ ವರ್ಷಗಳ ಅಂತರದಲ್ಲಿಯೇ ಕಂಪಿಲರಾಜ್ಯದ ನಾಶದಲ್ಲಿ ವಿಜಯನಗರ ಸಾಮ್ರಾಜ್ಯ ನಿರ್ಮಾಣವಾಯಿತು.

'ದೇಶ' ದೃಷ್ಟಿಯಿಂದ ಹೇಳುವುದಾದರೆ ಕಂಪಿಲರಾಜ್ಯದ ರಾಜಧಾನಿ ಕುಮ್ಮಟದುರ್ಗ, ವಿಜಯನಗರ ಸಾಮ್ರಾಜ್ಯದ ರಾಜಧಾನಿ ಹಂಪಿ- ಇವುಗಳ ನಡುವಿನ ಅಂತರ ಕೇವಲ ೧೦ ಮೈಲು. ಹೀಗಾಗಿ ಕಂಪಿಲ ರಾಜ್ಯದ ನಾಶವನ್ನು ಕಣ್ಣಾರೆ ಕಂಡಿದ್ದ, ಮತ್ತು ಅಲ್ಲಿ ಭಂಢಾರಿಯಾಗಿ ರಾಜಕೀಯ ತರಬೇತಿ ಪಡೆದಿದ್ದ ಹುಕ್ಕ-ಬುಕ್ಕರಿಗೆ ವಿಜಯನಗರ ಸಾಮ್ರಾಜ್ಯದ ನಿರ್ಮಾಣ ಸಾಧ್ಯವಾಯಿತು. ಈಗ ಕಂಪಿಲ ರಾಜ್ಯದ ಮರುಸ್ಥಾಪನೆಯೆಂಬಂತೆ ಅಲ್ಲಿ ಪಡೆದ ಅನುಭವದ ಅವಶೇಷಗಳಿಂದಲೇ ವಿಜಯನಗರ ಸಾಮ್ರಾಜ್ಯದ ನಿರ್ಮಾಣವಾಯಿತೆನ್ನಬಹುದು. ಅಥವಾ ೧೦ ವರ್ಷಗಳ ಹಿಂದೆ ಕಿವಿಯಾರೆ ಕೇಳಿದ್ದ, ೧೦ ಮೈಲುಗಳ ಅಂತರದಲ್ಲಿ ಕಣ್ಣಾರೆ ಕಂಡಿದ್ದ ಕಂಪಿಲರಾಜ್ಯದ ಮುಂದುವರಿಕೆಯೇ ವಿಜಯನಗರ ಸಾಮ್ರಾಜ್ಯವೆನ್ನಬಹುದು.

ಹೀಗೆ ನಿರ್ಮಾಣಕ್ಕೆ ಕಾರಣವಾದಂತೆ ನಾಶಕ್ಕೂ 'ದೇಶ' ಕಾರಣವಾಗುವುದಕ್ಕೆ ಈ ಮನೆತನಗಳೇ ಉದಾಹರಣೆಯೆನಿಸಿವೆ. ಈ ಎರಡೂ ರಾಜ್ಯಗಳು ಅಸ್ತಿತ್ವಕ್ಕೆ ಬಂದುದು ಕರ್ನಾಟಕದ ಗಡಿ ಪ್ರದೇಶದಲ್ಲಿ. ಈ ಪ್ರದೇಶಕ್ಕೆ ಹೊಂದಿಕೊಂಡಿರುವ ತೆಲುಗನಾಡಿನ ತೆಲುಗರ ಪಾತ್ರವನ್ನು ಇಲ್ಲಿ ಕಡೆಗಣಿಸುವಂತಿಲ್ಲ. ಇದಕ್ಕೆ ನಿದರ್ಶನವೆಂಬಂತೆ ತೆಲುಗರ ಬೆಂಬಲದಿಂದ ಕರ್ನಾಟಕಮೂಲದ ಕುಮಾರರಾಮನ ರುಂಡ ಕತ್ತರಿಸಿದ ಮುಸಲ್ಮಾನರು ಕನ್ನಡಿಗರ ಬೆಂಬಲದಿಂದ, ತೆಲುಗು ಮೂಲದವನಾಗಿ ಕನ್ನಡ ರಾಜ್ಯವನ್ನಾಳುತ್ತಿದ್ದ ರಾಮರಾಯನ ರುಂಡ ಕತ್ತರಿಸಿದರು. ಅಂದರೆ ದಿಲ್ಲಿ ಮುಸಲ್ಮಾನರನ್ನು ಬಳಸಿಕೊಂಡು ಒಮ್ಮೆ ತೆಲುಗರು ಕನ್ನಡಿಗರ ನಾಶಕ್ಕೆ ಕಾರಣವಾದರೆ, ಇನ್ನೊಮ್ಮೆ ವಿಜಾಪುರ ಮುಸಲ್ಮಾನರನ್ನು ಬಳಸಿಕೊಂಡು ಕನ್ನಡಿಗರು ತೆಲುಗರ ನಾಶಕ್ಕೆ ಕಾರಣವಾದರು. ಆದುದರಿಂದ ಬಾಹ್ಯದಲ್ಲಿ ಹಿಂದೂ-ಮುಸಲ್ಮಾನ ಯುದ್ಧಗಳಂತೆ ತೋರಿದರೂ ಇವು ಆಂತರ್ಯದಲ್ಲಿ ಕನ್ನಡಿಗ ಮತ್ತು ತೆಲುಗರ ಯುದ್ಧಗಳೇ ಆಗಿವೆ. ಇವುಗಳಲ್ಲಿ ಒಮ್ಮೆ ಹೊರಗಿನ ತೆಲುಗರು ಒಳಗಿನ ಕನ್ನಡಿಗರ ವಿಷಯವಾಗಿ ನಡೆದುಕೊಂಡುದು ಅನ್ಯಾಯ ರೂಪದ್ದು, ಇನ್ನೊಮ್ಮೆ ಒಳಗಿನ ಕನ್ನಡಿಗರು ಹೊರಗಿನ ತೆಲುಗರ ವಿಷಯವಾಗಿ ನಡೆದುಕೊಂಡುದು ಅನಿವಾರ್ಯ ರೂಪದ್ದೆಂದು ತೀರ್ಮಾನಿಸಬಹುದಾಗಿದೆ. ಇದರಿಂದ ಗಡಿನಾಡಿನವರ ವಿಷಯದಲ್ಲಿ ನೆರೆನಾಡಿನವರ ವರ್ತನೆ ಯಾವ ಕಾಲಕ್ಕೂ ತೂಗುವ ಖಡ್ಗ ಮಾದರಿಯದೆಂದೇ ಹೇಳಬಹುದಾಗಿದೆ. ಇದನ್ನು ಗಮನಿಸಿದರೆ ಕಂಪಿಲರಾಜ್ಯ, ವಿಜಯನಗರ ಸಾಮ್ರಾಜ್ಯಗಳು ಗಡಿನಾಡಿಗೆ ಬದಲು ಒಳನಾಡಿನಲ್ಲಿ ಸ್ಥಾಪಿತವಾಗಿದ್ದರೆ ಇವು ಬೇಗ ನಾಶವಾಗುತ್ತಿರಲಿಲ್ಲವೇನೋ ಅಥವಾ ಇವುಗಳ ನಾಶ ಬೇರೆ ರೀತಿಯಲ್ಲಿ ಘಟಿಸಬಹುದಿತ್ತೇನೋ ಎನಿಸುತ್ತದೆ.

ಮುಸಲ್ಮಾನರ ದೈತ್ಯದಾಳಿಯನ್ನು ದಕ್ಷಿಣ ಭಾರತದಲ್ಲಿ, ಏಕಾಂಗ ವೀರನಾಗಿ ತಡೆಗಟ್ಟಿದ, ಮಲತಾಯಿಯ ಮೋಹ ನಿರಾಕರಣೆಯಲ್ಲಿ ನಲುಗಿದ, ಕೊನೆಗೂ ಮಾದಿಗಿತ್ತಿಯೆಂಬ ಹೆಣ್ಣಿನ ಕೈಯಲ್ಲಿ ಹತನಾದ- ಈ ಎಲ್ಲ ವಿಶಿಷ್ಟ ಘಟನೆಗಳು ಕಾರಣವಾಗ ಬಾಲವೀರ ಅಭಿಮನ್ಯುವಿನಂತೆ kuಕುಮಾರರಾಮ ಕನ್ನಡಿಗರ ಮನಸ್ಸಿನಲ್ಲಿ ಅಂದಿನಿಂದ ಇಂದಿನವರೆಗೂ ಜೀವಂತನಾಗಿದ್ದಾನೆ. ಮಯೂರವರ್ಮ, ಪುಲಿಕೇಶಿ, ವಿಕ್ರಮಾಧಿತ್ಯ, ವಿಷ್ಣುವರ್ಧನ, ಏಕೆ ಕೃಷ್ಣದೇವರಾಯನಂಥ ಪ್ರಸಿದ್ಧ ಅರಸರ ಹೆಸರನ್ನು ಮರೆತ ಕನ್ನಡ ಜನಸಮುದಾಯ ಕುಮಾರರಾಮನನ್ನು ಮರೆಯದೆ ಒಬ್ಬ ಸಾಂಸ್ಕೃತಿಕ ವೀರನನ್ನಾಗಿ ಬೆಳೆಸಿಕೊಂಡು ಬಂದರು. ಇದರ ಫಲವಾಗಿ ಇವನ ವಿಷಯದಲ್ಲಿ ಕಾಲಕಾಲಕ್ಕೆ ಭೌತಿಕ, ಅಭೌತಿಕ ಆಕರ ಸಾಮಾಗ್ರಿ ಅಪಾರ ಪ್ರಮಾಣದಲ್ಲಿ ಹುಟ್ಟಿಕೊಂಡಿತು. ರಾಜಕೀಯ, ಸಾಮಾಜಿಕ, ಆಚರಣಾತ್ಮಕ, ಭಾಷಿಕ ಅವಶೇಷಗಳು ನೂರಾರು ಸಂಖ್ಯೆಯಲ್ಲಿ ಹುಟ್ಟಿಕೊಂಡವು. ಸಾಲದುದಕ್ಕೆ ತೆಲಗು, ತಮಿಳು, ತುಳು ಭಾಷೆಗಳಲ್ಲಿಯೂ ಆಕರಗಳು ಸೃಷ್ಟಿಯಾಗುತ್ತ ಬಂದವು.

ರಾಜಕೀಯ ಅವಶೇಷಗಳನ್ನು ಕುರಿತು ಹೇಳುವುದಾದರೆ ಇಂದಿಗೂ ಕುಮ್ಮಟದುರ್ಗದಲ್ಲಿ ಕೋಟೆ, ರಾಮನ ಡೊಣೆ, ಕಾಟಪ್ಪನ ಗುಡ್ಡ, ಬೊಲ್ಲನ ಗುಂಡು, ಬಾದೂರನ ಬಂಡೆ, ಮಾದಿಗ ಹಂಪಯ್ಯನ ಗುಡ್ಡಗಳನ್ನು, ಹೊಸಮಲೆದುರ್ಗದಲ್ಲಿ (ಇಂದಿನ ರಾಮಗಡ) ಕೋಟೆ, ಬೊಲ್ಲನ ಬಂಡೆ, ಟಗರಿನ ಬಯಲು, ಬೊಲ್ಲನ ಹೆಜ್ಜೆ, ಕಾಟಣ್ಣ ಶಿಲ್ಪ, ಕುಮಾರರಾಮನ ಹಟ್ಟಿ, ಮಾದಿಗ ಹಂಪಯ್ಯನ ಕಲ್ಲು, ಹರಿಯಾಲಾದೇವಿ ಬಚ್ಚಲು, ರತ್ನಾಜಿ ಮಡಿಲು ಇತ್ಯಾದಿ ಸ್ಮಾರಕಗಳು ಸಿಗುತ್ತವೆ. ಹೊಳಲಗುಂದಿ (ಆದವಾನಿ ತಾಲೂಕು)ಯ ಸಿದ್ದೇಶ್ವರ ದೇವಾಲಯದ ಗೋಡೆಯ ಮೇಲೆ ಕುಮಾರರಾಮನ ಚೆಂಡಿನಾಟದ ಬಣ್ಣದ ಚಿತ್ರ ಬಿಡಿಸಲಾಗಿದ್ದು, ಇದರ ಕೆಳಗೆ 'ರಾಮಣ್ಣ' ಎಂಬ ಬರಹವೂ ಇದೆ.ಇದು ೧೮ನೆಯ ಶತಮಾನದ ಕಲಾಕೃತಿಯಾಗಿದೆ. ಸಾಲದುದಕ್ಕೆ ಕುದುರೆಯ ಮೇಲೆ ಕುಳಿತ ಕುಮಾರರಾಮನ ಶಿಲ್ಪಗಳು ಅಲ್ಲಲ್ಲಿ ಸಿಗುತ್ತveವೆ. ಸಾಮಾಜಿಕವಾಗಿ ಹೇಳುವುದಾದರೆ ರತ್ನಾಜಿ ಪರಂಪರೆಯ 'ದೊಂಬರು' ಹೆಸರಿನ ಒಂದು ಜನಾಂಗವೇ ಶಿವಮೊಗ್ಗ ಜಿಲ್ಲೆಯಲ್ಲಿ ಕಂಡುಬರುತ್ತದೆ. ಬೇಡರು ಮೊದಲಾದ ಹಿಂದುಳಿದ ವರ್ಗದವರು ಇವನನ್ನು ಅಭಿಮಾನದಿಂದ ಆರಾಧಿಸುತ್ತಾರೆ.

ಆಚರಣೆಗೆ ಬಂದರೆ ಕುಮ್ಮಟ ಮತ್ತು ಹೊಸಮಲೆ ದುರ್ಗಗಳಲ್ಲಿ ಕುಮಾರರಾಮನ ಗುಡಿಗಳಿವೆ. ದರೋಜಿ ಸಮೀಪದ ರಾಮಪುರ ಮತ್ತು ಕುಮ್ಮಟದುರ್ಗಗಳಲ್ಲಿ ಕುಮಾರರಾಮನ ಜಾತ್ರೆ, ಅನೇಕ ಬಿಡಿ ಆಚರಣೆಗಳು ಕಂಡುಬರುತ್ತವೆ. ಕುಮಾರರಾಮನ ರುಂಡದ ಮೆರವಣಿಗೆ, ಪೂಜೆ, ಯುದ್ಧದ ತುಣುಕು ಇತ್ಯಾದಿಗಳು ಇಲ್ಲಿ ಇನ್ನೂ ಜೀವಂತವಾಗಿವೆ. ನಾಡಿನ ಅನೇಕ ಕಡೆಗಳಲ್ಲಿ ರಾಮಸ್ವಾಮಿ, ಕುಮಾರದೇವರು, ರಾಮೇಶ್ವರ ಹೆಸರುಗಳಿಂದ ಈತ ಪೂಜೆಗೊಳ್ಳುತ್ತಲಿದ್ದಾನೆ.

ಭಾಷಿಕ ರಚನೆಗಳು ಅಂದಿನಿಂದ ಇಂದಿನವರೆಗೂ ಹುಟ್ಟುತ್ತಲಿವೆ. ಇದು ಮೌಖಿಕ ಮತ್ತು ಲಿಖಿತವೆಂದೂ, ಮೌಖಿಕದಲ್ಲಿ ವದಂತಿಕ, ಸಾಹಿತ್ಯಕವೆಂದೂ, ಲಿಖಿತದಲ್ಲಿ ದಾಖಲಾತ್ಮಕ, ಸಾಹಿತ್ಯಕವೆಂದೂ ಬಿಚ್ಚಿಕೊಂಡಿದೆ. ಮೌಖೀಕ ವಲಯದ ವದಂತಿಗೆ ಸಂಬಂಧಪಟ್ಟಂತೆ ಅಲ್ಲಲ್ಲಿ ಅನೇಕ ಹೇಳಿಕೆಗಳು ಕೇಳಿ ಬರುತ್ತಿದ್ದರೆ, ಸಾಹಿತ್ಯಕ್ಕೆ ಸಂಬಂಧಪಟ್ಟಂತೆ ನೂರಾರು ಜನಪದ ಹಾಡುಗಳು ಸಿಗುತ್ತವೆ. ಲಿಖಿತ ವಲಯದ ದಾಖಲೆಗಳಿಗೆ ಸಂಬಂಧಪಟ್ಟಂತೆ ಕೈಪಿಯತ್ತು, ಶಾಸನಗಳು ಲಭ್ಯವಿದ್ದರೆ ಸಾಹಿತ್ಯಕ್ಕೆ ಸಂಬಂಧಪಟ್ಟಂತೆ ಸಾಂದರ್ಭಿಕ ಉಲ್ಲೇಖಗಳೂ, ಸ್ವತಂತ್ರ ಕಾವ್ಯಗಳೂ ಸಿಗುತ್ತವೆ. ಈ ಎಲ್ಲ ಶಾಖೋಪಶಾಖೆಗಳ ಶೋಧ, ಸಂಗ್ರಹ, ಅಧ್ಯಯನಗಳ ಸಮಗ್ರ ಯೋಜನೆಯೊಂದು ಅಸ್ತಿತ್ವಕ್ಕೆ ಬರಬೇಕಾಗಿದೆ. ಈ ಸಮಗ್ರದ ಒಂದು ಭಾಗವೆಂಬಂತೆ ಕುಮಾರರಾಮನನ್ನು ಕುರಿತ ಸಾಹಿತ್ಯ ಕೃತಿಗಳು ಹೀಗೆ ಹುಟ್ಟಿಕೊಂಡಿವೆ:

**ಕುಮಾರರಾಮನನ್ನು ಕುರಿತ ಲಿಖಿತ ಸಾಹಿತ್ಯ**

ಕುಮಾರರಾಮನನ್ನು ಕುರಿತು ಪ್ರಾಸಂಗಿಕ ಉಲ್ಲೇಖದ ಕಾವ್ಯಗಳು, ಸ್ವತಂತ್ರ ಕಾವ್ಯಗಳು ಕಂಡುಬರುತ್ತವೆ. ಚೆನ್ನಬಸವ ಪುರಾಣ, ಇಮ್ಮಡಿ ಚಿಕ್ಕಭೂಪಾಲನ ಸಾಗಂತ್ಯ, ನವರತ್ನ ಮಾಲಿಕೆ ಮೊದಲಾದ ಕೃತಿಗಳಲ್ಲಿ ಕುಮಾರರಾಮನ ಪ್ರಾಸಂಗಿಕ ಪ್ರಸ್ತಾಪ ಬರುತ್ತದೆ.

ನೇರವಾಗಿ ಕುಮಾರರಾಮನನ್ನು ಕುರಿತು ಹುಟ್ಟಿದ ಸ್ವತಂತ್ರ ಕಾವ್ಯಗಳ ಸಂಖ್ಯಾನಿರ್ಣಯ ಇನ್ನೂ ಚರ್ಚೆಯ ವಸ್ತುವಾಗಿ ಉಳಿದಿದೆ. ಈ ವಿಷಯವಾಗಿ ಮೊದಲು ತಲೆ ಕೆಡಿಸಿಕೊಂಡವರು ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸರು. ಅವರ ಪ್ರಕಾರ ಈತನನ್ನು ಕುರಿತು ಕಾವ್ಯ

ಬರೆದವರು ೫ ಜನ. ೧) ನಂಜುಂಡ, ೨) ಪಾಂಚಾಳಗಂಗ, ೩) ಗಂಗ, ೪) ನಾಗಸಂಗಯ್ಯ, ೫) ಮಹಾಲಿಂಗಸ್ವಾಮಿ. ಈ ಸಮಸ್ಯೆಯನ್ನು ಪಿ.ಎಚ್.ಡಿ ಅಧ್ಯಯನದಗಂಗ, ನಾಗಸಂಗಯ್ಯ ಹೆಸರಿನಲ್ಲಿರುವ ಕೃತಿಗಳು ಒಂದೇ ಪಠ್ಯದ ವಿಸ್ತೃತ, ಸಂಕೋಚ ಆವೃತ್ತಿಗಳೆಂದು ಹೇಳುತ್ತ, ಇವುಗಳ ಸಂಖ್ಯೆಯನ್ನು ೫ ರಿಂದ ೩ ಕ್ಕೆ ಇಳಿಸಿದ್ದಾರೆ.

ಇಂಥ ಸಂದರ್ಭದಲ್ಲಿ ಈ ಸಮಸ್ಯೆಗೆ ಕೈಹಾಕಿದ ನಮಗೆ ಮೇಲುಕೋಟೆಯ 'ಸಂಸ್ಕೃತ ಸಂಶೋಧನ ಸಂಸತ್' ದಲ್ಲಿ 'ಹಳೆಯ ಕುಮಾರರಾಮನ ಸಾಂಗತ್ಯ'

[1]ಹೆಸರಿನ ತಾಳೆಗರಿ ಪ್ರತಿ, ಕಂಪಲಿಯ ಶ್ರೀ ದೊಡ್ಡನಗೌಡರ ಮನೆಯಲ್ಲಿ 'ಹೊಸ ಕುಮಾರರಾಮನ ಸಾಂಗತ್ಯ'[2]ಹೆಸರಿನ ಕಾಗದ ಪ್ರತಿ

ಲಭ್ಯವಾದವು. ಇವು ಲಿಪಿಕಾರರು ಬರೆದ ಹೆಸರುಗಳಾಗಿದ್ದು, ಇವೆರಡರ ಸಂಧಿ, ಪದ್ಯ ಸಂಖ್ಯೆ ಮತ್ತು ಅಂತರ್ಗತ ವಿಷಯ ಹೀಗಿದೆ:

**ಹಳೆಯ ಕುಮಾರರಾಮನ ಸಾಂಗತ್ಯ** (ಮೇಲುಕೋಟೆ ಸಂಸ್ಕೃತ ಸಂಶೋಧನ ಸಂಸತ್ ಪ್ರತಿ)

| **ಸಂಧಿ** | **ಪದ್ಯ ಸಂಖ್ಯೆ** |
|---|---|
| ೧. ಹೊಸಮಲೆದುರ್ಗ ವರ್ಣನೆ | ೯೩ |
| ೨. ಕುಮ್ಮಟದುರ್ಗ ವರ್ಣನೆ | ೮೦ |
| ೩. ಬಹಾದೂರನು ಕುಮ್ಮಟಕ್ಕೆ ಬಂದುದು | ೮೦ |
| ೪. ನೇಮಿಯ ಕಾಳಗ | ೧೪೩ |
| ೫. ಓರುಗಲ್ಲು ಯುದ್ಧ | ೨೫೬ |
| ೬. ನೀರಾಟ-ಚಂಡಿನಾಟ-ರತ್ನಾಜಿ ವ್ಯಾಮೋಹ | ೪೪೩ |
| ೭. ನೆಲಮಾಳಿಗೆಯಲ್ಲಿ ಕುಮಾರರಾಮ | ೨೦೮ |
| ೮. ನೇಮಿಯ ಕಾಳಗ-ಸೋಲು | ೧೬೩ |
| ೯. ಮಾದಿಗಿತ್ತಿ ಕಾಳಗ | ೧೮೦ |
| ೧೦. ತೆಲುಗರ ಸಂಚು-ರಾಮನ ಮರಣ | ೧೫೪ |
| **ಒಟ್ಟು** | ೧೮೦೦ |

**ಹೊಸ ಕುಮಾರರಾಮನ ಸಾಂಗತ್ಯ** (ಕಂಪಲಿ ಶ್ರೀ ದೊಡ್ಡನಗೌಡರ ಪ್ರತಿ)

| **ಸಂಧಿ** | **ಪದ್ಯ ಸಂಖ್ಯೆ** |
|---|---|
| ೧. ದೇವಗಿರಿ ಯಾದವರಲ್ಲಿ ಮುಮ್ಮಡಿಸಿಂಗ | ೬೬ |
| ೨. ರಾಯದುರ್ಗದಲ್ಲಿ ಮುಮ್ಮಡಿಸಿಂಗ-ಕಂಪಿಲ | ೧೦೨ |
| ೩. ಕುಮಾರರಾಮನ ಜನನ-ಹೊಸಮಲೆಯಲ್ಲಿ ಕಂಪಿಲ | ೧೦೩ |
| ೪. ಗುತ್ತಿಯ ಜಗದಪ್ಪನೊಡನೆ ಕಾಳಗ | ೮೬ |
| ೫. ಓರುಗಲ್ಲ ಪ್ರವೇಶ | ೧೪೭ |
| ೬. ಓರುಗಲ್ಲ ಯುದ್ಧ | ೧೩೭ |

| | |
|---|---|
| ೭. ಶೂಲದ ಹಬ್ಬ-ರತ್ನಾಜಿ ವ್ಯಾಮೋಹ | ೧೧೨ |
| ೮. ಕುಮ್ಮಟದುರ್ಗ ನಿರ್ಮಾಣ | ೧೦೦ |
| ೯. ನೀರಾಟ-ಚಂಡಿನಾಟ-ರತ್ನಾಜಿ ವ್ಯಾಮೋಹ | ೫೪೦ |
| ೧೦. ನೆಲಮಾಳಿಗೆಯಲ್ಲಿ ಕುಮಾರರಾಮ | ೨೮೫ |
| ೧೧. ನೇಮಿಯ ಕಾಳಗ-ಸೋಲು | ೪೬೨ |
| ೧೨. ಮಾದಗಿತ್ತಿ ಕಾಳಗ - ರಾಮನ ವೀರಮರಣ | ೩೧೩ |
| **ಒಟ್ಟು** | **೨೪೮೯** |



ಈ ಎರಡೂ ಯಾದಿಯಲ್ಲಿ ಇವುಗಳ ವ್ಯತ್ಯಾಸ ತಕ್ಕಮಟ್ಟಿಗೆ ಸ್ಪಷ್ಟವಾಗುತ್ತದೆ. ಹಳೆಯ ಕುಮಾರರಾಮನ ಸಾಂಗತ್ಯದ ಕಥೆ ನೇರವಾಗಿದೆ. ಹೊಸ ಕುಮಾರರಾಮನ ಸಾಂಗತ್ಯದ ಆರಂಭದಲ್ಲಿ ಮುಮ್ಮಡಿಸಿಂಗ ದೇವಗಿರಿ ಯಾದವರಲ್ಲಿ ರಾಜಸೇವೆಗೆ ನಿಂತನೆಂಬ, ಅಲ್ಲಿಂದ ಮಲೆಪಲ್ಲಿ ದೇಶದ ರಾಯದುರ್ಗದಲ್ಲಿ ಆಳಿದನೆಂಬ ಎರಡು ಸಂಧಿಗಳನ್ನು ಹೊಸದಾಗಿ ಸೇರಿಸುವ ಮೂಲಕ ಕಥೆಯನ್ನು ಒಂದಿಷ್ಟು ಹಿಂದಕ್ಕೆ ಒಯ್ಯಲಾಗಿದೆ. ಬಾದೂರನು ಕುಮ್ಮಟದುರ್ಗಕ್ಕೆ ಬಂದ ವಿವರವನ್ನು, ನೇಮಿಯ ಮೊದಲನೆಯ ಕಾಳಗವನ್ನು ಕೈಬಿಟ್ಟು, ಶೂಲದ ಹಬ್ಬದ ವಿವರವನ್ನು ಹೊಸದಾಗಿ ಸೇರಿಸಲಾಗಿದೆ. ಕುಮ್ಮಟದುರ್ಗದ ಹಳೆಯ ಕುಮಾರರಾಮನ ಸಾಂಗತ್ಯದಲ್ಲಿ ೨ನೆಯ ಸಂಧಿಯಾಗಿ ಬಂದರೆ, ಹೊಸ ಕುಮಾರರಾಮನ ಸಾಂಗತ್ಯದಲ್ಲಿ ೮ನೆಯ ಸಂಧಿಯಷ್ಟು ದೂರ ಬಂದಿದೆ. ಇನ್ನೂ ಕೆಲವು ಸಣ್ಣ ಪುಟ್ಟ ಘಟನೆಗಳನ್ನು (ರಾಮದೇವರಾಯನ ಆಸ್ಥಾನದಲ್ಲಿ ಚಾಮಿದೇವನ ಡೊಂಬರಾಟ, ರತ್ನಾಜಿಯ ತವರು ಮನೆ ವಿವರ ಇತ್ಯಾದಿ) ಅಲ್ಲಲ್ಲಿ ಹೆಚ್ಚಿಗೆ ಸೇರಸಲಾಗಿದೆ. ಸುಮಾರು ೩೦೦ ಪದ್ಯಗಳು ಎರಡರಲ್ಲಿಯೂ ಸಮಾನವಾಗಿದೆ. ಹೀಗಿದ್ದೂ ಕೃತಿಶಿಲ್ಪ, ಹೊಸಪದ್ಯಗಳ ಪ್ರಮಾಣ ಇತ್ಯಾದಿಗಳನ್ನು ಗಮನಿಸಿದರೆ ಇವೆರಡೂ ಸ್ವತಂತ್ರ ಕೃತಿಗಳೇ ಆಗಿವೆಯೆಂಬುದು ಸ್ಪಷ್ಟವಾಗುತ್ತದೆ.

ಈ ಎರಡೂ ಕೃತಿಗಳಿಗೆ ಕವಿ ಇಟ್ಟ ಹೆಸರೇನು? ಎಂಬುದು ಈಗ ಬಗೆಹರಿಯದ ಸಮಸ್ಯೆಯಾಗಿದೆ. ಆದರೆ ಪ್ರಾಚೀನ ಕಾಲದಲ್ಲಿ ಒಂದನ್ನು 'ಹಳೆಯ', ಇನ್ನೊಂದನ್ನು 'ಹೊಸ' ವಿಶೇಷಣದಿಂದ ಕರೆಯುವುದು ರೂಢಿಯಲ್ಲಿದ್ದತೆಂಬುದು ಕುತೂಹಲದ ಸಂಗತಿಯಾಗಿದೆ.

ಹೀಗೆ ಈ ಕೃತಿಗಳ ಜಿಜನಾಮದಂತೆ, ಇವುಗಳ ಕವಿನಾಮವೂ ಚರ್ಚೆಗೆ ಎಡೆಮಾಡಿಕೊಡುತ್ತದೆ. ಎರಡರಲ್ಲಿಯೂ

ಕನ್ನಡ ದೇಶಕ್ಕೆ ರನ್ನದ ಪದಜಾತಿ
ಇನ್ನು ಮುನ್ನಿನ ಪಾಂಚಾಳ |
ಚೆನ್ನ ಭುಜಂಗನ ಪುತ್ರ ಗಂಗಯ್ಯ ಸಂ
ಪನ್ನ ಹೇಳಿದನೀ ಕೃತಿಯ ||

ಎಂಬ ಪದ್ಯವಿದೆ. ಇದು, ಈ ಎರಡರಲ್ಲಿ ಮೂಲತಃ ಯಾವ ಕೃತಿಗೆ ಸಂಬಧಿಸಿದೆ? ಎಂಬುದು ಇಲ್ಲಿಯ ಮುಖ್ಯ ಪ್ರಶ್ನೆ. ಈವರೆಗೆ ವಿದ್ವಾಂಸರು ಭಾವಿಸಿದಂತೆ, ಈ ಪದ್ಯದಿಂದ ಇದನ್ನೊಳಗೊಂಡ ಕಾವ್ಯದ ಕರ್ತೃ ಪಾಂಚಾಳಗಂಗನೆಂಬ ಅರ್ಥ ಹೊರಡುವುದಿಲ್ಲ. ಈ ಮೊದಲು ಪಾಂಚಾಳಗಂಗನೆಂಬುವನು ('ಇನ್ನು ಮುನ್ನಿನ' ಗಮನಿಸಿರಿ. ಕೆಲವು ಪ್ರತಿಗಳಲ್ಲಿ 'ಇನ್ನು ಮುನ್ನಿನಲಿ' ಎಂದು ಸ್ಪಷ್ಟವಾಗಿಯೇ ಇದೆ.) ಆದುದರಿಂದ ಇದು ಹೊಸ ಕುಮಾರರಾಮನ ಸಾಂಗತ್ಯಕ್ಕೆ ಸಂಬಂಧಿಸಿದ ಪದ್ಯವೆಂದು ನಮ್ಮ ಭಾವನೆ. ಹಾಗಿದ್ದಲ್ಲಿ ಹಸ್ತಪ್ರತಿಗಳಲ್ಲಿ ಗಂಗನನ್ನು ಪ್ರಸ್ತಾಪಿಸುವ

*ಪದ ಜಾತಿಗೆ ಪಾಂಚಾಳ ಗಂಗಯ್ಯನು*
*ಮುದದಿ ಪೇಳಿದನು ಈ ಕೃತಿಯ |*

*ಸುಧೆಯ ಸೋನೆಯೊ ಮಾನಿತ ಮಂತ್ರದೇಳಿಗೆಯೊ*
*ಚದುರ ಸೊಬಗಿನಾ ಗರುವ ||*

*ಗುರಿಯಿಲ್ಲದಂಬುದನು ಐನೂರು ಎಚ್ಚರೆ*
*ಗುರಿಯ ತಾಕುವದೆ ಲೋಕದೊಳು |*
*ಗರಿಗಣೆ ಸುದ್ದ ರಾಮನ ಕೃತಿಬಾಣದಿ*
*ಉರವಿಯೊಳೆಚ್ಚ ಗಂಗಯ್ಯ ||*

ಈ ಪದ್ಯಗಳು ಮಾತ್ರ ಪಾಂಚಾಳ ಗಂಗಯ್ಯ ಬರೆದ ಹಳೆಯ ಕುಮಾರರಾಮನ ಸಾಂಗತ್ಯಕ್ಕೆ ಸಂಬಧಿಸಿವೆಯೆಂದು ಹೇಳಬಹುದಾಗಿದೆ. ಈವರೆಗಿನ ಚರ್ಚೆಯಿಂದ ಹಳೆಯ ಕುಮಾರರಾಮನ ಚರಿತ್ರೆಯ ಕರ್ತೃ ಪಾಂಚಾಳಗಂಗ, ಹೊಸ ಕುಮಾರರಾಮನ ಸಾಂಗತ್ಯದ ಕರ್ತೃ ಗೊತ್ತಿಲ್ಲವೆಂದು ಒಪ್ಪಿಕೊಳ್ಳಬೇಕಾಗುತ್ತದೆ.[3] ಅದೇನೇ ಇದ್ದರೂ, ಬಹುಶಃ ಪಾಂಚಾಳ ಗಂಗನನ್ನು ಹೊರತುಪಡಿಸಿ ಎಲ್ಲ ಕವಿಗಳೂ ವೀರಶಯವರಾಗಿರುವುದು ಒಂದು ವಿಶೇಷ. 'ಪಾಂಚಾಳ' ಎಂಬುದಕ್ಕೆ ಪಾಠಾಂತರಗಳಿರುವುದರಿಂದ, ಶೈವವಾತಾವರಣ ತುಂಬಿಕೊಂಡಿರುವುದರಿಂದ ಗಂಗನ ಕೃತಿಯೂ ಅದರ ಕರ್ತೃ ವೀರಶೈವನೆಂಬ ಸೂಚನೆ ನೀಡುತ್ತದೆ. ಈ ಹಿನ್ನೆಲೆಯಲ್ಲಿ ಹೇಳುವುದಾದರೆ ಹೊಸ ಕುಮಾರರಾಮನ ಸಾಂಗತ್ಯದ ಕರ್ತೃವೂ ವೀರಶೈವನೆನ್ನಬೇಕಾಗುತ್ತದೆ.

ಈ ಎರಡು ಕೃತಿಗಳ ಬಗೆಗೆ ಸ್ಪಷ್ಟಮಾಡಿಕೊಂಡು ಮುಂದುವರಿಯುವಲ್ಲಿ ಚಿತ್ರದುರ್ಗ ಪ್ರೊ. ಬಿ. ರಾಜಶೇಖರಪ್ಪ ಅವರಿಂದ ಕುಮಾರರಾಮನನ್ನು ಕುರಿತ ಒಂದು ತಾಳೆಗರಿ ಹಸ್ತಪ್ರತಿ ನಮಗೆ ಲಭಿಸಿತು. ಇದು ಈ ಹಿಂದೆ ಹುಲ್ಲೂರು ಶ್ರೀನಿವಾಸ ಜೋಯಿಸರು ಹೆಸರಿಸಿದ ನಾಗಸಂಗಯ್ಯನ ಕೃತಿ ಸಂತಾನವೇ ಆಗಿದೆ. ಜೋಯಿಸ ಅವರಿಗೆ ಸಿಕ್ಕಿದ್ದ ಕಾಗದ ಪ್ರತಿಯ ನಕಲು ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿದೆ. ತಮ್ಮ ಹತ್ತಿರದ ಕಾಗದ ಪ್ರತಿಯಲ್ಲಿಯ

*ಅಧಾರವಿಡಿದು ಹೇಳಿದ ನಾಗಸಂಗಯ್ಯ*
*ಈ ಧರೆಯ ವಿದ್ವಾಂಸರೊಳಗೆ |*
*ಸಾಧಿಸಿ ಅವರ ಸೇವಕನಾಗಿ ಪೇಳ್ವೆನು*
*ಯಾದವಸಖ ಪಾರ್ಥ ಕಥೆಯ ||*

ಎಂಬ ಪದ್ಯವನ್ನು ಗಮನಿಸಿ, ಹಲ್ಲೂರ ಅವರು, ಇದು ಸ್ವತಂತ್ರ ಕೃತಿಯೆಂದೂ, ಇದರ ಕರ್ತೃ ನಾಗಸಂಗಯ್ಯನೆಂದೂ ಪ್ರಚುರಪಡಿಸಿದ್ದಾರೆ. ಆದರೆ ಇದು ಗಂಗನ ವಿಸ್ತೃತ ಪಾಠವೇ ಹೊರತು ಸ್ವತಂತ್ರ ಕೃತಿಯಲ್ಲವೆಂದು ಡಾ. ವರದರಾಜರಾವ್ ಹೇಳುತ್ತಾರೆ. ಇಲ್ಲಿ ಒಂದಿಷ್ಟು ಚರ್ಚೆ ಅವಶ್ಯ. ಪ್ರೊ. ರಾಜಶೇಖರಪ್ಪ ಅವರಿಂದ ಬಂದ ತಾಳೆಪ್ರತಿಯಲ್ಲಿ 'ಆಧಾರವಿಡಿದು ಹೇಳಿದ ನಾಗಸಂಗಯ್ಯ' ಎಂಬುದಕ್ಕೆ ಬದಲು 'ಆಧಾರವಿಡಿದು ಪೇಳಿದನಾಗ ಗಂಗಯ್ಯ' ಎಂಬ ಪಾಠವಿದೆ. ಗಂಗಯ್ಯನೆಂಬುವನು (ಐತಿಹಾಸಿಕ) ಆಧಾರಗಳನ್ನವಲಂಬಿಸಿ ಪೂರ್ವ ಕಾಲದಲ್ಲಿ ಕೃತಿಯೊಂದನ್ನು ಬರೆದಿರುವನೆಂದು ಈ ಪದ್ಯ ಸೂಚಿಸುವಂತಿದೆ. ಆತ ಪಾಂಚಾಳ ಗಂಗನೇ ಆಗಿದ್ದಾನೆ. 'ಅವರ ಸೇವಕನಾಗಿ ಪೇಳ್ವೆನು' ಅಂದರೆ ನಾನು ಆ ಪಾಂಚಾಳ ಗಂಗನ ಸೇವಕನಾಗಿ ಈ ಕೃತಿ ಬರೆಯುತ್ತೇನೆ-ಎಂಬುದು ಇಲ್ಲಿಯ ಆಶಯ. ಇವನ ಹೊಸತನವೆಂದರೆ, ಇದರಲ್ಲಿ ಪಾರ್ಥನ ಕಥೆಯನ್ನು ಸಮೀಕರಿಸುತ್ತೇನೆ- ಎಂಬುದು. ಈ ಹೇಳಿಕೆಯಿಂದ ಅರ್ಜುನನೇ ಕುಮಾರರಾಮನಾಗಿ, ರಂಭೆಯೇ ರತ್ನಾಜಿಯಾಗಿ ಹುಟ್ಟಿದಳೆಂಬ ತಂತ್ರ ಬಳಸಿ ತನ್ನ ಕಾವ್ಯವನ್ನು ಈತ ಬರೆದಿದ್ದಾನೆ. ಈ ವಿವರಣೆಯ ಹಿನ್ನಲೆಯಲ್ಲಿ ಶ್ರೀ ಹುಲ್ಲೂರು ಅವರು ಒಪ್ಪಿಕೊಂಡ ನಾಗಸಂಗಯ್ಯನ ಹೆಸರನ್ನು ಕೈ ಬಿಡಬೇಕಾಗುತ್ತದೆ. ಆದರೆ ಈ ಕವಿ ತನ್ನ ಹೆಸರನ್ನು ಎಲ್ಲಿಯೂ ಹೇಳಿಕೊಂಡಿಲ್ಲ. ಸದ್ಯ ಕಾಲ, ದೇಶಗಳ ವಿಷಯವಾಗಿ ಏನೂ ಹೇಳುವಂತಿಲ್ಲ. ಕೃತಿನಾಮವನ್ನೂ ನಿರ್ದಿಷ್ಟವಾಗಿ ಉಲ್ಲೇಖಿಸಿಲ್ಲ. ಲಿಪಿಕಾರ ಸೂಚಿಸಿದ 'ಕೊಮಾರ ರಾಮಯ್ಯನ ಚರಿತ್ರೆ' ಎಂಬುದನ್ನು ನಾವು ಸ್ವೀಕರಿಸಿದ್ದೇವೆ.

ಈ ಮೂರು ಕೃತಿಗಳಲ್ಲದೆ ಹಂಪೆಯ ಮಹಾಲಿಂಗಸ್ವಾಮಿ ಬೇರೊಂದು ಕೃತಿ ಬರೆದುದು (ವರದರಾಜರಾವ್ ಪ್ರಕಾರ ಇದರ ಹೆಸರು 'ಬಾಲ ಕುಮಾರರಾಮನ ಸಾಂಗತ್ಯ') ಎಲ್ಲರಿಗೂ ಗೊತ್ತು. ಇವುಗಳಲ್ಲದೆ ಕುಮಾರರಾಮನನ್ನು ಕುರಿತು ನಂಜುಂಡ ಬರೆದ 'ರಾಮನಾಥ ಚರಿತೆ' ಸರ್ವಶ್ರುತ. ಆದುದರಿಂದ ಮೇಲೆ ವಿವೇಚಿಸಿದಂತೆ ಈವರೆಗೆ ಕುಮಾರರಾಮನನ್ನು ಕುರಿತು ಹೀಗೆ ೫ ಕೃತಿಗಳು ಹುಟ್ಟಿವೆ:

೧. ಹಳೆಯ ಕುಮಾರರಾಮನ ಸಾಂಗತ್ಯ - ಪಾಂಚಾಳ ಗಂಗ

೨. ಹೊಸ ಕುಮಾರರಾಮನ ಸಾಂಗತ್ಯ - ಅನಾಮಧೇಯ ಕವಿ-೧

೩. ಕೊಮಾರರಾಮಯ್ಯನ ಚರಿತ್ರೆ - ಅನಾಮಧೇಯ ಕವಿ-೨

೪. ಬಾಲ ಕೊಮಾರರಾಮನ ಸಾಂಗತ್ಯ - ಮಹಾಲಿಂಗಸ್ವಾಮಿ

೫. ರಾಮನಾಥ ಚರಿತೆ- ನಂಜುಂಡ

ಈ ಐವರಲ್ಲಿ ನಂಜುಂಡನ ಕೃತಿ ಮಾತ್ರ ಪ್ರಕಟವಾಗಿದ್ದುತು. ಕಳೆದ ವರ್ಷ ಅನಾಮಧೇಯ ಕಿಯ 'ಹೊಸ ಕುಮಾರರಾಮನ ಸಾಂಗತ್ಯ' ನನ್ನಿಂದ ಪರಿಷ್ಕರಿಸಲ್ಪಟ್ಟು ಪ್ರಕಟವಾಗಿದ್ದು, ಈಗ ಇನ್ನೊಬ್ಬ ಅನಾಮಧೇಯ ಕವಿಯ 'ಕೊಮಾರ ರಾಮಯ್ಯನ ಚರಿತ್ರೆ' ಬೆಳಕು ಕಾಣುತ್ತಲಿದೆ.

**ಕೊಮಾರ ರಾಮಯ್ಯನ ಚರಿತ್ರೆ**

ಮೇಲೆ ವಿವರಿಸಿದಂತೆ ಈ ಕವಿಯ ಹೆಸರಾಗಲೀ, ಕೃತಿಯ ಹೆಸರಾಗಲೀ ಸ್ಪಷ್ಟವಾಗಿ ಗೊತ್ತಾಗುವುದಿಲ್ಲ. ಶ್ರೀ ಹುಲ್ಲೂರ ಅವರು ಹೆಸರಿಸಿರುವ 'ನಾಗಸಂಗಯ್ಯ' ಎಂಬುದು ಲಿಪಿಕಾರರು ಸೃಷ್ಟಿಸಿದ ಪಾಠಭೇದದಿಂದ ಮತ್ತು ವಿದ್ವಾಂಸರು ತಪ್ಪಾಗಿ ಓದುವುದರಿಂದ ಹುಟ್ಟಿದುದಾಗಿದೆ. ಆದುದರಿಂದ ಕನ್ನಡದ ಅನೇಕ ಕೃತಿಗಳಂತೆ ಈ ಕೃತಿ ಕರ್ತೃವಿನ ಹೆಸರೂ ಅಜ್ಞಾತವೆಂದು ಹೇಳಬಹುದಾಗಿದೆ. ಹೀಗೆ ಕರ್ತೃನಾಮ ನಮೂದಿಸದೇ ಇರುವುದಕ್ಕೆ ಗದುಗಿನ ಭಾರತ, ಪ್ರಭುಲಿಂಗಲೀಲೆ ಕರ್ತೃಗಳ ಧೋರಣೆಗಿಂತ, ಜನಪದ ಕೃತಿಕರ್ತೃಗಳ ಧೋರಣೆ ಕಾರಣವಾಗಿರುವಂತಿದೆ. ಆದುದರಿಂದ ಜನಪದ ಕೃತಿಯ ಕವಿನಾಮ ಜೀವಿತ ಕಾಲಗಳಂತೆ ಈ ಕೃತಿಯ ಕವಿನಾಮ ಜೀವಿತಕಾಲ ಸಿಗುವುದಿಲ್ಲವೆಂದೇ ತೋರುತ್ತದೆ. ಕವಿನಾಮ ಬಿಟ್ಟರೂ ಕಾಲ ವಿಷಯವಾಗಿ ಆಂತರಿಕ ಆಧಾರಗಳೂ ಸಿಗುವುದಿಲ್ಲ. ಆರಂಭದ 'ಶ್ರೀ ಗಿರಿಜಾಸ್ಯಾಂಬುಜ ದಿನನಾಯಕ' ಎಂಬ ಪದ್ಯ ಹಳೆಯ ಕುಮಾರರಾಮನ ಸಾಂಗತ್ಯ, ಬಾಲ ಕುಮಾರರಾಮನ ಸಾಂಗತ್ಯಗಳನ್ನು ಹೊರತುಪಡಿಸಿ ಮಿಕ್ಕ ಮೂರರಲ್ಲಿಯೂ ಅಂದರೆ ರಾಮನಾಥ ಚರಿತೆ, ಕುಮಾರರಾಮಯ್ಯನ ಚರಿತ್ರೆಗಳ ಎಲ್ಲ ಸಂಧಿಗಳ ಆದಿಯಲ್ಲಿ, ಹೊಸ ಕುಮಾರರಾಮನ ಸಾಂಗತ್ಯದ ಕೆಲವು ಸಂಧಿಗಳ ಆಧಿಯಲ್ಲಿ ಕಂಡುಬರುತ್ತದೆ. ಹೀಗಾಗಿ ಮೂಲತಃ ಈ ಪದ್ಯ ಯಾರದು? ಸ್ಪಷ್ಟವಾಗುವದಿಲ್ಲ. ನಂಜುಂಡದೆನ್ನಬೇಕೆಂದರೆ ಅವನ ಕೃತಿಯ ಕೆಲವು ಹಸ್ತಪ್ರತಿಗಳಲ್ಲಿಯೂ ಕೆಲವೊಮ್ಮೆ ಈ ಪದ್ಯ ಕಂಡುಬರುವುದಿಲ್ಲ. ಹೀಗಾಗಿ ಇವರಲ್ಲಿ ಯಾರು ಮೊದಲು, ಯಾರು ಆಮೇಲೆ ಎಂದು ನಿಕರವಾಗಿ ನಿರ್ಣಯಿಸುವುದು ಕಷ್ಟ. ಹೀಗಿದ್ದೂ ಹಳೆಯ ಕುಮಾರರಾಮನ ಸಾಂಗತ್ಯ, ಹೊಸ ಕುಮಾರರಾಮನ ಸಾಂಗತ್ಯ, ಕೊಮಾರ ರಾಮಯ್ಯನ ಚರಿತ್ರೆ, ರಾಮನಾಥ ಚರಿತ್ರೆ- ಎಂದು ಕಾಲಕ್ರಮವನ್ನು ಹೇಳಬಹುದಾದರೂ, ಮಹಾಲಿಂಗಸ್ವಾಮಿ ಈ ಕ್ರಮದಲ್ಲಿ ಎಲ್ಲಿ ನಿಲ್ಲುವನೆಂಬುದು ಸ್ಪಷ್ಟವಾಗುವುದಿಲ್ಲ. ಕೊನೆಯಪಕ್ಷ ಎಲ್ಲರಿಗೂ ಮೂಲವಾಗಿರುವ ಗಂಗನ ಕಾಲವೂ ಗೊತ್ತಾಗುವುದಿಲ್ಲ. ಇದೇ ರೀತಿ ಈ ಕವಿಯ ಸ್ಥಳವಾಗಲೀ, ಮಿಕ್ಕ ವಿವರಗಳಾಗಲೀ ಸಿಗುವುದಿಲ್ಲ.

**ಕೃತಿ–ಆಕೃತಿ–ಸಂಸ್ಕೃತಿ**

ಜೀವನವೆನ್ನುವುದು ಕ್ರಿಯಾ ಸರಣಿಯಾಗಿರುವುದರಿಂದ ಪ್ರತಿಯೊಬ್ಬನ ಜೀವನ ಬೃಹತ್ 'ಕೃತಿ' ಎನಿಸುತ್ತದೆ. ಶಸನಗಳಲ್ಲಿ ಕುಮಾರರಾಮನ 'ಜೀವನಕೃತಿ'ಗೆ ಸಂಬಂಧಪಟ್ಟ ವಿವರಗಳು ಕಡಿಮೆ. ಜನಪದ ಸಾಹಿತ್ಯದಲ್ಲಿ ಒಂದಿಷ್ಟು ವಿವರಗಳಿದ್ದರೂ ಅದು ಬಾಯಿಯಿಂದ ಬಾಯಿಗೆ ಬದಲಾಗುತ್ತ ಬಂದ ಪಾಠ. ಆದುದರಿಂದ ಕವಿಯ ಕಾಲದಷ್ಟು ಹಿಂದೆ ದಾಖಲಾಗಿರುವ ಮತ್ತು ತುಂಬ ವಿವರಣಾತ್ಮಕವಾಗಿರುವ ಕಾವ್ಯಗಳಲ್ಲಿ ಮಾತ್ರ ಅದು ವಿಸ್ತಾರವಾಗಿ ಮೂಡಿರುತ್ತದೆ.

## ಕೃತಿ

ಕುಮಾರರಾಮನನ್ನು ಕುರಿತು ಹುಟ್ಟಿರುವ ಐದು ಕಾವ್ಯಗಳಲ್ಲಿ ಚರಿತ್ರೆಯ ಚಿತ್ರಣ ಒಂದಿಷ್ಟು ವಿಭಿನ್ನವಾಗಿದೆ. ಕಾವ್ಯವಾಗಿರುವ ಕೊಮಾರ ರಾಮಯ್ಯನ ಚರಿತ್ರೆ ತನ್ನ ಅಳವಿಗೆ ಸಿಕ್ಕಷ್ಟು, ನಿಲವಿಗೆ ಗಕ್ಕಷ್ಟು ಸೆರೆಹಿಡಿದಿರುವ ಇವನ 'ಜಿವನಕೃತಿ' ಹೀಗಿದೆ.

---

[1] ಈ ಹಸ್ತಪ್ರತಿಯ ಆರಂಭದಲ್ಲಿ "ಹಳೆ ಕುಮಾರರಾಮನ ಚರಿತೆ" ಎಂಬ ಪಾಠವಿದೆ. ಇದನ್ನು ನಾವು "ಹಳೆಯ ಕುಮಾರರಾಮನ ಸಾಂಗತ್ಯ" ಎಂದು ಇಟ್ಟುಕೊಂಡಿದ್ದೇವೆ.

[2] ಈ ಹಸ್ತಪ್ರತಿಯು ಅಂತ್ಯದಲ್ಲಿ "ಹೊಸ ರಾಮ ಸಾಂಗತ್ಯ", "ಹೊಸ ರಾಮನ ಸಾಂಗತ್ಯ" ಎಂಬ ಪಾಠಗಳಿವೆ. ಇವನ್ನು ನಾವು "ಹೊಸ ಕುಮಾರರಾಮನ ಸಾಂಗತ್ಯ" ಎಂದು ಇಟ್ಟುಕೊಂಡಿದ್ದೇವೆ.

[3] ಶ್ರೀ ಎಸ್. ಆರ್. ಕೂಡ್ಲಿಗಿ ಅವರು ಇದರ ಕರ್ತೃ ಗಂಗಾಧರ ಎಂದು ಹೇಳುತ್ತಾರೆ (ಜಯಕರ್ನಾಟಕ, ಜೂನ್ ೧೯೪೨). ಇದಕ್ಕೆ ಆಧಾರ ಕೊಟ್ಟಿಲ್ಲ. ಗಂಗ ಎಂಬುದನ್ನೇ ಗಂಗಾಧರ ಎಂದು ಸುಧಾರಣೆ ಮಾಡಿರುವರೇ?

ಕುಮಾರರಾಮನ ಸಾಂಗತ್ಯವನ್ನು ಕುರಿತು ಹುಲ್ಲೂರ ಶ್ರೀನಿವಾಸ ಜೋಯಿಸರು ವಾಗ್ಭೂಷಣದಲ್ಲಿ (೧೯೪೮) ಲೇಖನ ಬರೆದಿರುವರೆಂದೂ, ಇದರಲ್ಲಿ ೮ ಸಂಧಿ, ೧೮೮೫ ಪದ್ಯಗಳಿದ್ದು, ಇದನ್ನು ಬೂದಿಹಾಳ ಗಂಗ ಬರೆದಿರುವನೆಂದೂ ಹೇಳಿರುವರೆಂದು ತಿಳಿದುಬರುತ್ತದೆ. ಗಂಗಾಧರ ಮತ್ತು ಬೂದಿಹಾಳ ಇವೆರಡೂ ಪರಿಶೀಲನಾರ್ಹವಾಗಿವೆ.

## ಪ್ರಸ್ತಾವನೆ(೨)

**ಸಂಧಿ:** ೧

ಶಿವ, ಪಾರ್ವತಿ, ವೀರಭದ್ರ, ಕೃಷ್ಣ - ಇವರಿಗೆ ಶರಣು ಸಮರ್ಪಿಸಿ, ಈ ಕಥೆಯನ್ನು ಆರಂಭಿಸುತ್ತೇವೆ.

ಅರ್ಜುನನು ಕರ್ನಾಟಕದಲ್ಲಿ ಹುಟ್ಟಿ, ಪರನಾರೀ ಸಹೋದರನಾಗಿ ಮೆರೆದ ಕಥೆಯನ್ನು ವಿವರಿಸುತ್ತೇನೆ. ಈ ಹಿಂದೆ (ಐತಿಹಾಸಿಕ) ಆಧಾರಗಳನ್ನು ಆಧರಿಸಿ ಗಂಗಯ್ಯನೆಂಬುವನು ಈ ಕಥೆಯನ್ನು ಹೇಳಿದನು. ಆತನಿಗೆ ವಿನೀತನಾಗಿ, ಕುಮಾರರಾಮನನ್ನು ಅರ್ಜುನನೊಂದಿಗೆ ಸಮೀಕರಿಸಿ, ನಾನು ಮತ್ತೆ ಆ ಕಥೆಯನ್ನು ಈಗ ವಿವರಿಸುತ್ತೇನೆ.

ಪೂವಲಿ ಮನೆತನದ ಮುಮ್ಮಡಿ ಸಿಂಗನು ಕಂಪಣವೊಂದಕ್ಕೆ ಅರಸನಾಗಿದ್ದನು. ಇವನ ಹೆಂಡತಿ ಮಂಚಕ್ಕ. ಈಕೆ ಮನೆದೈವ ಕಂಪಿಲದೇವರಿಗೆ ಪುತ್ರಭಿಕ್ಷೆ ಬೇಡಿದಳು. ಬಿಲ್ಲ ಮೇಲಿನ ಪುಷ್ಪವನ್ನು ವರವಾಗಿ ಪಡೆದು, ಮಗನನ್ನು ಹಡೆದು, ಕಂಪಿಲರಾಯನೆಂದು ಹೆಸರಿಟ್ಟಳು.

ಮುಮ್ಮಡಿಸಿಂಗ ವೃದ್ಧಾಪ್ಯ ಕಾರಣವಾಗಿ ಮಡಿದನು. ಬರಗಾಲ ಬಂದಿತು. ಆಗ ವಿಧವೆ ಮಂಚಕ್ಕ ನಾಲ್ಕಾರು ಬೇಡ ಕುಟುಂಬ ಸಹಿತ ಮಗನೊಂದಿಗೆ ಜಟ್ಟಂಗಿ ರಾಮೇಶ್ವರ ಬೆಟ್ಟಕ್ಕೆ ವಲಸೆ ಬಂದಳು. ಕಾಲ ಗತಿಸಿತು. ಈ ಬೇಢಡ ಕುಟುಂಬಗಳು ಬೇಟೆಯಾಡುತ್ತ ಲೋಹಾರಿ ಗಿರಿಗೆ ಬಂದವು. ಅಲ್ಲಿಯ ಕೋಟೇಶ್ವರ (ಷಣ್ಮುಖ)ನಿಗೆ ನಮಸ್ಕರಿಸಿ, ಮುಮದೆ ಸಾಗಿ, ಹೊಸಮಲೆಗೆ ಬಂದು, ಶಾಶ್ವತ ನೆಲೆಯೂರಿದವು.

**ಸಂಧಿ:೧**

ಜಗತ್ತಿನಲ್ಲಿಯೇ ಶ್ರೇಷ್ಠವಾದುದು ಕರ್ನಾಟಕ. ಅಲ್ಲಿಯ ವಿದ್ಯಾನಗರದ ದಕ್ಷಿಣಕ್ಕೆ ಹೊಸಮಲೆಯಿದೆ. ಇಲ್ಲಿ ವಾಸವಾಗಿದ್ದ ಕಿರಾತನಾದ ಕಂಪಿಲರಾಯನು ದಾರಿ ಸುಲಿದು, ಗುತ್ತಿಯ ಜಗದಪ್ಪನಿಗೆ ಕಪ್ಪನಿತ್ತು, ಹತ್ತೆಂಟು ಗ್ರಾಮಗಳನ್ನಾಳುತ್ತಿದ್ದನು. ಕಂಪಿಲರಾಯ ಹೊಸಲಮಲೆಯಲ್ಲಿ ದುರ್ಗ ಕಟ್ಟಿಸಿದ. ಅಗಳು, ಆಳ್ವೇರಿ, ಜಿಡ್ಡಿ, ಕೊತ್ತಳ, ಹುಲಿಮುಖ, ಕೋಟೆಯ ತೆನೆಗಳಿಂದ; ಸೋಮವಿಧಿ, ಸರ್ಯವೀಧಿ, ಉಪ್ಪರಗುಡಿ, ನವಿಲುಯ್ಯಲೆ, ಅಂಗಡಿ, ರಂಗಮಂಟಪ, ಕೆಂಡದೋಕುಳಿಗಳಿಂದ ಅದು ಶೋಭಿಸುತ್ತಿದ್ದಿತು.

ಹೀಗಿರಲು ಗುಜ್ಜಾರಿಯನ್ನಾಳುತ್ತಿದ್ದ ಅರೆಯ ಚಾರಮರಾಯ ರಾಜ್ಯಭ್ರಷ್ಟನಾಗಿ ವರುಣನ ನದಿಯೆಂಬ ಕೃಷ್ಣಯನ್ನು ದಾಟಿ ಕಂಪಿಲನ ಹತ್ತಿರ ಬಂದನು. ಮಗಳು ಹರಿಯಲದೇವಿಯನ್ನು ಕಂಪಿಲನಿಗೆ ಧಾರೆಯೆರೆದು, ಅವನಿಂದ ಪಡುವಣರಾಜ್ಯ ಪಡೆದು, ಅಲ್ಲಿಯೇ ಉಳಿದನು.

ಕಂಪಿಲರಾಯ, ಹರಿಯಲದೇವಿ ಸುಖದಲ್ಲಿದ್ದರು. ಆಗ ಕೈಲಾಸದಲ್ಲಿ ಒಂದು ಘಟನೆ ಜರುಗಿತು: ಶಿವನ ಒಡ್ಡೋಲಗದಲ್ಲಿ, ಅರ್ಜುನ ಗಣನಾಥ ಕುಳಿತಿದ್ದನು. ಆಗ ಪರಿವಾರದೊಂದಿಗೆ ಬಂದ ಪಾರ್ವತಿಯನ್ನು ಅವನು ಕಣ್ಣೆತ್ತಿಯೂ ನೋಡಲಿಲ್ಲ. ಇದನ್ನು ಗಮನಿಸಿದ ಆಕೆ, ಅರ್ಜುನನಿಗೆ ಅಹಂಕಾರವನ್ನು ಆರೋಪಿಸದಳು. ಆಗ ಶಿವ 'ಇದು ಅಹಂಕಾರವಲ್ಲ, ಪರನಾರೀ ಸಹೋದರ ಭಾವನೆಯವನಾಗಿರುವುದರಿಂದ ಹೀಗೆ ವರ್ತಿಸಿದ' ಎಂದು ಹೇಳುತ್ತಲೇ, ಪಾರ್ವತಿ 'ಹಾಗಿದ್ದರೆ ರಂಭೆಯ ಮೂಲಕ ಇವನ ವ್ರತ ಪರೀಕ್ಷಿಸುತ್ತೇನೆ' ಎಂದಳು. 'ಈ ನನ್ನ ಅರ್ಜುನ ಮತ್ತು ಆ ನಿನ್ನ ರಂಭೆ ಭೂಲೋಕದಲ್ಲಿ ಜನಿಸಲಿ' ಎಂದು ನುಡಿದ ಶಿವನ ಆದೇಶದಂತೆ, ಅವರು ಮರ್ತ್ಯದಲ್ಲಿ ಹುಟ್ಟಬೇಕಾಯಿತು.

ಹರಿಯಲದೇವಿ ಪುತ್ರನನ್ನು ಬಯಸಿ ಜಟ್ಟಂಗಿ ರಾಮೇಶ್ವರನನ್ನು ಪ್ರಾರ್ಥಿಸಿದಳು. ದೇವರಿಗೆ ಮೀಸಲು ಹಾಲು, ತುಪ್ಪ, ಬಾಳೆಹಣ್ಣು, ಸಣ್ಣಕ್ಕಿ, ಬೇಳೆ ಕಳಿಸಿದಳು. ಸ್ವೀಕರಿಸಿದ ಪೂಜಾರಿ ದೇವರ ವರವೆಂದು ಬಾಳೆಹಣ್ಣು, ಹೂವು ಕೊಟ್ಟು ಕಳಿಸಿದ, ಹರಿಯಲದೇವಿ ಅಂದು ನಿದ್ರೆಯಲ್ಲಿ ದೇವರು ಹೂವು ಕೊಟ್ಟ ಸ್ವಪ್ನ ಕಂಡಳು. ಅರ್ಜುನ ಮಗನಾಗಿ ಹುಟ್ಟುವನೆಂದು ಹೇಳಿದಂತಾಯಿತು. ಒಂಬತ್ತು ತಿಂಗಳು ತುಂಬಿ ಗಂಡುಮಗನಿಗೆ ಜನ್ಮನೀಡಿದಳು. ಇದೇ ಕಾಲಕ್ಕೆ ರಾಣಿ ತಿಂದು ಎಸೆದ ಹಣ್ಣಿನ ಸಿಪ್ಪೆ ಸೇವಿಸಿದ ದಾಸಿ, ಕಳ್ಳರಾಮನಿಗೆ ಜನ್ಮನೀಡಿದಳು. ಹರಿಯಲದೇ ಮಗನಿಗೆ ರಾಮ ಎಂದು ಹೆಸರಿಟ್ಟಳು. ಅರಳೆಲೆ, ಮಾಗಾಯಿ, ಬೆರಳಹೊನ್ನುಂಗುರ, ಕೊರಳ ಮುತ್ತಿನ ಹಾರ, ಸರಪಳಿ ಗೆಜ್ಜೆ, ಹೊನ್ನುಡಿದಾರದಿಂದ ಮಗುವನ್ನು ಅಲಂಕರಿಸಿದರು. ಓದು, ಸಾಧನೆ, ಕಾದಾಡುವ ರೀತಿ, ಗಜ-ತುರಗ ಹೋರಾಟ, ವಾದಗಳಲ್ಲಿ ಪರಿಣತನಾಗಿ ಮಗ ಬೆಳೆದನು.

**ಸಂಧಿ: ೨**

ಇತ್ತ ಸಾಲ್ಗುಂದಿ ಗ್ರಾಮದ ದೇವಿರೆಡ್ಡಿ - ಎಲ್ಲಮ್ಮ ದಂಪತಿಗಳ ಗರ್ಭದಿಂದ ರಂಭೆ ರತ್ನಾಜಿಯಾಗಿ ಹುಟ್ಟಿದಳು. ಅರಳೆಲೆ, ಮಾಗಾಯಿ, ಮೂರುಡಿಯ ಸರಪಳಿ, ಕೊರಳ ರತ್ನಹಾರ, ಹರಳುಂಗುರ, ಕಾಲಕಡೆ, ಪೆಂಡೆಯದಿಂದ ಮಗುವನ್ನು ಅಲಂಕರಿಸಿದರು. ಮಗಳು ಯುವತಿಯಾಗಿ ಬೆಳೆದಳು.
ಬೇಟೆಗೆ ಬಂದ ಕಂಪಿಲರಾಯ, ಈ ಯುವತಿಯ ರೂಪಕ್ಕೆ ಮರುಳಾದ. ಕನ್ಯೆಯನ್ನು ಕೇಳಿ ಅವಳ ತಂದೆ ತಾಯಿಯಲ್ಲಿಗೆ ಚರನನ್ನು ಕಳಿಸಿದ. ಕಿರಾತನಿಗೆ ಕನ್ಯೆ ಕೊಡಲು ಅವರು ನಿರಾಕರಿಸಿದರು. ಕೊನೆಗೆ ಕನ್ನೆಯನ್ನೇ ಕೇಳಿ, ಒಪ್ಪಿಗೆ ಪಡೆದು, ಸಾಲಗುಂಡಿ ಅರಮನೆ, ಎರಡು ಗ್ರಾಮ ನೀಡಿ ಅವಳನ್ನು ಕರೆದುಕೊಂಡು ಬಂದನು.

ಈ ಸುದ್ದಿ ಕೇಳಿ ಹರಿಯಲದೇವಿ ದುಃಖಿತಳಾದಳು. ಮಗ ರಾಮನೊಂದಿಗೆ ಈ ವಿಷಯವನ್ನು ಪ್ರಸ್ತಾಪಿಸಿ 'ಮಾಗಿಯ ಕೋಗಿಲೆ' ಯಂತೆ ಮೌನತಾಳಿದಳು.

**ಸಂಧಿ : ೪**

ರಾಮಯ್ಯ 'ಕೋಮಲೆಯರ ಕಣ್ಣ ಬೇಟಕ್ಕೆ ಸಿಲುಕಿದ' ವ್ರತ ಹಿಡಿದ. ಮೇಘವಾಹನಾಚಾರಿಯನ್ನು ಕರೆಯಿಸಿ, 'ಪರನಾರಿ ಸಹೋಸರ' ಹೆಸರಿನ ನವರತ್ನ ಖಚಿತ ಬಿರುದ ಮಾಡಿಸಿ, ಎಡಗಾಲಿನಲ್ಲಿ ಧರಿಸಿದ. ಬೇಟೆಗಾಗಿ ಹಂಪಿಯ ಮಾರ್ಗದಲ್ಲಿ ನಡೆದ ರಾಮಯ್ಯ ಕಾಟಣ್ಣ ಮೊದಲಾದವರು ದುರ್ಗವೊಂದನ್ನು ಕಂಡರು. 'ರಾಮಯ್ಯ ಕುಮ್ಮಟ' ವೆಂದು ಅದಕ್ಕೆ ಹೆಸರಿಟ್ಟು, ಹೊಸಮಲೆಗೆ ಬಂದರು. 'ರಾಯರ ಗರ್ಭದೊಳ್ ಜನಿಸಿದ ಬಳಕಿನ್ನು ಕಾಯದಾಸೆಯ ಬಿಡಬೇಕು' ಎಂಬ ಧ್ಯೇಯದ ರಾಮಯ್ಯ, ಕುಮ್ಮಟದುರ್ಗ ನಿರ್ಮಿಸುವ ವಿಚಾರವನ್ನು ತಂದೆಗೆ ಹೇಳಿದನು. ದುರ್ಗ ನಿರ್ಮಾಣ ಆರಂಭವಾಯಿತು. ಕೋಟೆ, ತೋಟ, ವನ, ಕೆರೆ, ಬಾವಿ, ರಾಜಬೀದಿ, ಪೇಟೆಸಾಲು, ಒಪ್ಪರಿಗೆ ಮನೆ, ಕಾಟಣ್ಣನ ಅರಮನೆ, ಆನೆಸಾಲು ಬೀದಿ, ಜಿಡ್ಡಿ, ಬಾಗಿಲು, ಹೊರಕೋಟೆ, ಶೃಂಗಾರ ತೋಟ, ರತ್ನಿಯ ಅರಮನೆ, ನಾಟಕ ಶಾಲೆ, ಕುದುರೆಲಾಯ, ಆಟ-ಪಾಟ ನೋಡುವ ಚಾವಡಿ, ಮಹಾನೌಮಿ ಮಂದಿರ, ರಾಮಯ್ಯನ ಅರಮನೆ, ಬೈಚಪ್ಪನ ಅರಮನೆ, ಮನ್ನೆಯರ ಕೇರಿ, ಕಾರಾಗೃಹ, ಐದಾಯಿಗಳ ಬಾಜಾರ, ಹಾರೋರ ಕೇರಿ, ಹರದರ ಕೇರಿ, ಚಾರಮರಾಯನ ಅರಮನೆ, ಮಾರೆಮ್ಮ - ಸಿಂಗಮ್ಮಗಳ ಅರಮನೆ, ಹೊಸಬರ - ಹಳಬರ - ಅಗಸರ ಕೇರಿ, ಮೊಸರು ಮಾರುವ ಬಾಜಾರ, ಶಿಶುವಿಗೆ ಹಾಲ್ಬಣ್ಣೆ ಮನೆ, ಛತ್ತದ ಮನೆ ನಿರ್ಮಾಣವಾದವು.

ದುರ್ಗಕ್ಕೆ ಕುರಿ ಕೋಣಗಳ ಬಲಿಶಾಂತಿ, ಬ್ರಾಹ್ಮಣರಿಗೆ ಅನ್ನಶಾಂತಿ ಜರುಗಿತು. ಮಲ್ಲೇಶನ ಗುಡಿಯ ಮುಂದೆ ಪಟ್ಟಣ ಬೆಳೆದು ನಿಂತಿತು, ಹೊಸಮಲೆದುರ್ಗವನ್ನು ಬಿಟ್ಟು ಎಲ್ಲರೂ ಕುಮ್ಮಟದುರ್ಗಕ್ಕೆ ಬಂದರು. 'ಅನ್ನುಂಟು ಆಳಿಲ್ಲ, ಹೊನ್ನುಂಟು ಕುದುರಿಲ್ಲ'. ಈ ಕೊರತೆಯನ್ನು ತುಂಬಿಕೊಳ್ಳುವುದಕ್ಕಾಗಿ ಬಾಬೋಜಿ ಮಲ್ಲನನ್ನು ಅತ್ತಿತ್ತ ಕಳಿಸಿ, ಸೈನ್ಯ ಸಂಗ್ರಹಿಸಲಾಯಿತು. ಕುಮ್ಮಟದಲ್ಲಿ ಬೇಡರ ಪಡೆ ನಿರ್ಮಾನವಾಯಿತು. ಎಪ್ಪತ್ತು ಮಂದಿ ಮನ್ನೆಯರನ್ನು ಆಮಂತ್ರಿಸಿ, ಹೊನ್ನ ಹಂಚಲಾಯಿತು. ಮೇಚ(ಬೇಡ)ರಿಗೆ ಹೊನ್ನು ಜವಳಿ ಉಡುಗೊರೆ ನೀಡಲಾಯಿತು. ಚಾಮರಾಯನ ಮಕ್ಕಳ ಆರುನೂರು ಕುದುರೆ, ತನ್ನ ಲಾಯದ ಮುನ್ನೂರು ಕುದುರೆ, ಕಾಟಣ್ಣನ ಹನ್ನೊಂದು ಸಾವಿರ ಕುದುರೆ ನೆರೆದವು. ಸುತ್ತಲಿನ ರಾಜ್ಯಗೆದೆಯಲು ರಾಮಯ್ಯ ಸಿದ್ಧನಾದ. ಹಾನ್ಗಲ್ಲ ಸೀಮೆ ಮತ್ತು ನಾನಾ ರಾಜ್ಯಗಳನ್ನು ಸುಲಿಯಲಾಯಿತು. ನೀಲನನ್ನೇರಿ ರಾಮ ಬಾದಾಮಿ ತನಕ ನಡೆದ. ಕರಿಯ ಹೊಳೆದಾಟಿ ಮುನ್ನಡೆದು, ಕುಮ್ಮಟಕ್ಕೆ ಮರಳಿ ಬಂದ.

ಸುತ್ತಲಿನ ಪಾಳೆಗಾರರು ಒಂದೆಡೆ ಸೇರಿ, ತಮ್ಮ ಅರಸು ಹೊಯ್ಸಳ ಬಲ್ಲಾಳನಿಗೆ ರಾಮಯ್ಯನ ಬಗ್ಗೆ ದೂರು ಹೇಳಿದರು: 'ಕುಮಾರರಾಮ ನೇಮಿಯ ಎದುರು ದಂಡು ಸಿದ್ಧಪಡಿಸಿದ, ಹಳ್ಳಿ ಓರು ಸೀಮೆ ಸುಟ್ಟ, ದೊಡ್ಡ ದೊಡ್ಡ ಗ್ರಾಮಗಳನ್ನು ಕಟ್ಟಿಸಿದ. ಈತನ ಖಡ್ಗಕ್ಕೆ ಎದುರಾಗಿ ನಿಲ್ಲುವವರು ಇಲ್ಲ' ವೆಂದು ದೂರಿದರು. ಬಲ್ಲಾಳ ಇವರೆಲ್ಲರಿಗೆ ಅಭಯ ನೀಡಿದನು.

ಈ ಪಾಳೆಗಾರರು ಗುತ್ತಿಯ ಜಗದಪ್ಪನಲ್ಲಿಗೂ ಹೋಗಿ, 'ಕಂಪಿಲನು ರಾಮನ ಮೂಲಕ ನೆರೆಯ ರಾಜ್ಯಗಳನ್ನು ಮತ್ತು ಕೋಟೆಗಳನ್ನು ವಶಪಡಿಸಿಕೊಳ್ಳುತ್ತಲಿದ್ದಾನೆ' ಎಂದು ನಿವೇದಿಸಿದರು. ಅವರಿಗೆ ಜಗದಪ್ಪ ಸಮಾಧಾನ ಹೇಳಿದನು. ರಾಮನ ಈ ಎಲ್ಲ ಚಟುವಟಿಕೆ ದಿಲ್ಲಿ ಸಿರಿತಾಳನ ಕಿವಿಗೆ ಮುಟ್ಟಿತು. ಸುರಿತಾಳನ ಮಗಳು ಪರಾಕ್ರಮಿಯೂ ಚೆಲುವನೂ ಆಗಿದ್ದ ರಾಮನನ್ನು ಮದುವೆಯಾಗ ಬಯಸಿದಳು.

**ಸಂಧಿ : ೫**

ಸುರಿತಾಳನು ಮಗಳು ಬಾಬಮ್ಮನ ಮದುವೆ ಬಗ್ಗೆ ಯೋಚಿಸಿದ. ದೇಶದೇಶದ ಖಾನ ವಜೀರರನ್ನು ಕರೆಸಿದ. ಬಾಬಮ್ಮ ಒಪ್ಪಲಿಲ್ಲ. ಅಷ್ಟರಲ್ಲಿ ಕಾಶಿ-ರಾಮೇಶ್ವರ ಯಾತ್ರೆ ಮುಗಿಸಿಕೊಂಡು ಬ್ರಾಹ್ಮಣರು ದಿಲ್ಲಿಗೆ ಬಂದರು. ಸೇನಾಪತಿ ನೇಮಿಖಾನ ಅವರಿಗೆ ಸ್ವಯಂಪಾಕಕ್ಕಾಗಿ ತುಪ್ಪ, ಅಕ್ಕಿ, ಬೇಳೆ, ಸಕ್ಕರಿ, ಗೋದಿಹಿಟ್ಟು ವ್ಯವಸ್ಥೆಮಾಡಿದ. 'ಬಾದಶಹನ ಮಗಳಿಗೆ ಯೋಗ್ಯವಾದ ವರವನ್ನು ನೀವು

ಎಲ್ಲಿಯಾದರೂ ಕಂಡಿರಾ?, ಎಂದು ಕೇಳಿದ.ಮುನ್ನೂರ ಅರವತ್ತು ಗಾವುದ ದೂರದಲ್ಲಿ ಕುಮ್ಮಟದುರ್ಗವಿದೆ. ಅಲ್ಲಿಯ 'ಚೆನ್ನಿಗ ರಾಮ ಕಾಮನ ರೂಪಿಗತಿ ಚೆಲ್ವ' ಎಂದು ಹೇಳಿದರು. ಸುರಿತಾಳನೂ ಬ್ರಾಹ್ಮಣರನ್ನು ಕರೆಸಿ ಕೇಳಿದ, 'ನಳನೋ, ಜಯಪ್ರದನೋ, ನಳಿನನಾಭನೋ, ಮನ್ಮಥನೋ ಎಂಬಂಥ ರೂಪ. ಖಡ್ಗದಲ್ಲಿ ಸಮರ್ಥ' ಎಂದೆಲ್ಲ ಹೇಳಿದರು. ಇದನ್ನು ಕೇಳಿ 'ರಾಮನಲ್ಲದೆ ಬೇರೆಲ್ಲರು ನನಗೆ ತಂದೆ ಸಮಾನ' ಎಂದು ಬಾಬಮ್ಮ ಹಟಹಿಡಿದಳು. ಅವನಿಗೆ ಸೂನಿತ ಮಾಡಿ ಅಳಿಯನನ್ನಾಗಿಸಿಕೊಳ್ಳಲು ಸುರಿತಾಳ ಯೋಚಿಸಿದ. ನೇಮಿಯ ಸೈಚನೆಯಂತೆ, ದೇಶ ದೇಶದ ರಾಜರಿಂದ ಕಪ್ಪಕಾಣಿಕೆ ತರಲು, ರಾಮನನ್ನು ವಶಪಡಿಸಿಕೊಂಡು ಬರಲು ಪಗುದಿಯಖಾನ, ಆಕಾಶಖಾನ, ಅಬ್ದುಲಖಾನ, ಖಂಡೆಯಖಾನರು ಸಜ್ಜಾದರು. "ಐವತ್ತಾರು ದೇಶ ಸುತ್ತಿರಿ. ಮೈಲಾಪುರಿ, ಮಲೆಯಾಳ, ಕೊಂಕಣ, ಐಗಾರರೆಡ್ಡಿ ಇತ್ಯಾದಿ ಪಾಳ್ಯಗಳಿವೆ. ಕರ್ನಾಟಕದಲ್ಲಿ ಚಿಕ್ಕ ಪಾಳ್ಯಗಳಿವೆ. ಮಿಕ್ಕ ಪಾಳೆಗಾರರು ಜಗದಪ್ಪನ ವಶದಲ್ಲಿದ್ದಾರೆ. ಐಗಾರ ರೆಡ್ಡಿಯನ್ನು ಸುಲಿಯಿರಿ. ಇವರೆಲ್ಲರಿಂದ ಸಂಗ್ರಹಿಸಿದ ಕಪ್ಪ ಕಾಣಿಕೆಯನ್ನು ದಿಲ್ಲಿಗೆ, ಕುಮ್ಮಟದುರ್ಗಕ್ಕೆ ಹೋಗಿರಿ. ಒಮ್ಮನ ಹೊನ್ನ ಕೇಳಿರಿ, ಕೊನೆಗೆ ಕೊಟ್ಟಷ್ಟು ಪಡೆದು, ಕುಮಾರರಾಮನ ರೂಪ ಸಾಮರ್ಥ್ಯಗಳ ವಿವರ ತಿಳಿಯಿರಿ.ಅವನನ್ನು ಇಲ್ಲಿಗೆ ಕರೆದು ತನ್ನಿರಿ. ಬರದಿದ್ದರೆ ಆಮೇಲೆ ನಾನು ಹಿಡಿತರಿಸುತ್ತೇನೆ" ಎಂದು ಹೇಳಿ ಖಾನರನ್ನು ಕಳುಹಿಸಲಾಯಿತು. ಸುರಿತಾಳನ ಪಾದುಕೆ ಇಟ್ಟ ಪಲ್ಲಕಿಯನ್ನು ಹೊತ್ತು ಪಾರಸಿ, ಪರಮಾನೆ, ಮುದ್ರೆಗಳೊಂದಿಗೆ ಅವರು ಪ್ರಯಾಣ ಬೆಳೆಸಿದರು. ದಕ್ಷಿಣಕ್ಕೆ ಸಾಗಿ ಚಿಕ್ಕಡಿಳ್ಳಿ (ದೇವಗಿರಿ)ಗೆ ಬಂದರು. ಅಂಗ, ಕಳಿಂಗ, ಕಾಶ್ಮೀರ, ಕಾಮಬೋಜ, ಕೊಂಗಾಳ, ಸೌರಾಷ್ಟ್ರ, ಬಂಗಾಳ, ಕೇರಳ, ಸಿಂಹಳ, ಕರಾಡ, ವಂಗದೇಶಗಳಿಂದ ಕಪ್ಪ ಕಾಣಿಕೆ ಪಡೆದು, ಗುತ್ತಿ ಜಗದಪ್ಪನಲ್ಲಿಗೆ ಬಂದರು.

ಜಗದಪ್ಪ ಎದುರು ಬಂದು ಹಿಡಿ ಹೊನ್ನ ಕಾಣಿಕೆ ನೀಡಿ, ಪಲ್ಲಕ್ಕಿಯಲ್ಲಿಯ ಪಾದುಕೆಗೆ ಅಡ್ಡಬಿದ್ದು, ಬಂದವರಿಗೆ ವಸತಿ ವ್ಯವಸ್ಥೆಮಾಡಿದ. ಈ ವರೆಗೆ ಸಂಗ್ರಹಿಸಲಾಗಿದ್ದ ಹೊನ್ನ ಜಾಳಿಗೆಗಳನ್ನು ವಜೀರರು ದಿಲ್ಲಿಗೆ ಕಳುಹಿಸಿದರು. ಪಾದುಕೆಯನ್ನೊಳಗೊಂಡ ಪಲ್ಲಕ್ಕಿ ಕುಮ್ಮಟದುಗರಗಕ್ಕೆ ನಡೆಯಿತು. ಚರರು ಈ ಸುದ್ಧಿಯನ್ನು ಕಂಪಿಲನಿಗೆ ಹೇಳಿದರು. ಬೈಚಪ್ಪ ಅವರನ್ನು ಒಂದು ಮನೆಯಲ್ಲಿ ಇಳಿಸಿ, ಉಲುಪೆ ಉಡುಗೊರೆ ಕೊಟ್ಟು, ಅವರೊಂದಿಗೆ ಸಮಾಲೋಚಿಸಿ, ಕಂಪಿಲನಲ್ಲಿಗೆ ಬಂದನು. ಬಂದ ವಜೀರರು ಬಳ್ಳದ ತುಂಬ ಹೊನ್ನ ಬಯಸುವುದನ್ನು ಕೇಳಿ ಕಂಪಿಲ ಚಿಂತಾಕ್ರಾಂತನಾದ.

ಮರುದಿನ ಮುಂಜಾನೆ ಕಂಪಿಲ, ಬೈಚಪ್ಪ, ರಾಮ, ವಜೀರರ ಹತ್ತಿರ ಹೋದರು. 'ಬಳ್ಳದ ತುಂಬ ಹಣ ಕೊಡುವ ಶಕ್ತಿ ನನಗಿಲ್ಲ. ಅಡವಿಯ ಸೀಮೆಗೆ ತಕ್ಕಂತೆ ಹೊನ್ನ ಕೊಡುವೆ'ನೆಂದು ಕಂಪಿಲ ಹೇಳಿದ. ವಜೀರರು ರಾಮನ ರೂಪಕ್ಕೆ ಮಾರುಹೋದರು. 'ಹೊನ್ನ ಕೊಡಲು ಸಾಧ್ಯವಿಲ್ಲದಿದ್ದರೆ ಮಗನಾದ ರಾಮನನ್ನು ನಮ್ಮೊಂದಿಗೆ ಕಳಿಸು, ಸುರಿತಾಳನ ದರ್ಶನಮಾಡಿಸಿ ಹಿಂದಿರುಗಿಸುತ್ತೇವೆ'- ಎಂದರು. ಕಂಪಿಲ ಇದಕ್ಕೆ ಒಪ್ಪಲಿಲ್ಲ. ಹೊನ್ನಕೊಡುವಂತೆ ನಟಿಸಿ, ರಾಮ ಒಪ್ಪಿದ. ವಂದನೆ ಆಡಿ ಕಾಣಿಕೆ ಸಲ್ಲಿಸುವುದಕ್ಕೋಸುಗ ಪಲ್ಲಕ್ಕಿಯಲ್ಲಿರುವ ಪಾದುಕೆ ತೋರಿಸಲು ಹೇಳಿದ. ಖಾನರು ಅವುಗಳನ್ನು ಹೊರ ತೆಗೆಯುವುದೇ ತಡ, ಅವುಗಳನ್ನು ಮೆಟ್ಟಿ 'ಇವು ನನ್ನ ಪಾದಕೆ ಸರಿಯಾಗಿ ಹೊಂದಿಕೊಳ್ಳುತ್ತವೆ. ನನ್ನ ಅಣ್ಣನ ಪಾದುಕೆ ಹೊಂದಿಕೆಯಾಗುವ ಇನ್ನೊಂದು ಜೋಡು ತರಿಸಿಕೊಟ್ಟರೆ, ಇನ್ನೂ ಹೆಚ್ಚು ಹೊನ್ನು ಕೊಡುವೆ' ಎಂದು ನುಡಿದ. ಎಲ್ಲರೂ ಮೂಗಿನ ಮೇಲೆ ಬೆರಳಿಟ್ಟರು, ಮುಂಗೈ ಕಚ್ಚಿಕೊಂಡರು. ಬೊಬ್ಬೆಯಿಟ್ಟು ಬೆರಗಾರು. 'ನಿನ್ನ ಕುಮ್ಮಟ ಹಾಳಾಯಿತು. ನಿನ್ನ ತಲೆಗೆ ವ್ಯಾಳ್ಯೆಬಂತು' ಎಂದು ಅರಚಿದರು. 'ಮಕ್ಕಳಾಟಿಕೆ ಮಾಡಿದೆ ರಾಮಯ್ಯ, ಸಿಕ್ಕಿದೆ ತುರುಕರ ಸೆರೆಗೆ' ಎಂದು ಕಂಪಿಲ ನುಡಿದ. ಪಾದುಕೆ ಬಿಟ್ಟು ದೂರ ಸರಿಯಲು ಒತ್ತಾಯಿಸಿದ.'ಎಂದಿದ್ದರೀ ಕಾಯ ಉಳಿವುದೆ ಜಗದೊಳೂ?' ಎನ್ನುತ್ತ, 'ಸುರಿತಾಳನ ಸೈನ್ಯಕ್ಕೆ ನಾನಂಜಲಾರೆ' ಎಂದು ಮಾರ್ನುಡಿದ. 'ಮಂಜು ಮುಸುಕೀತೆ ತರುಗಿರಿಯ? ಕುಂಜರದಾನೆಗೆ ಜಂಬುಕ ಬಲ್ಲುದೆ?' ಎಂದು ವಾದಿಸಿದ. 'ಹನ್ನೊಂದನೆಯ ವರ್ಷಕ್ಕೆ ಕನ್ನೆ ಹುಯ್ಯುಲು ಕೈಗೊಳ್ಳಲು ಯೋಚಿಸುತ್ತಿದ್ದೆ, ಕೈಗೂಡಿತು' ಎಂದು ನುಡಿದ. ಮಂತ್ರಿ ಬೈಚಪ್ಪ ಬಂದವರಿಗೆ ಒಂದಿಷ್ಟು ಕಾಣಿಕೆ ನೀಡಿ ಕಳಿಸಿದ. ಅವರು ಗುತ್ತಿಗೆ ಹೋಗಿ, ಸುರಿತಾಳನ ಪರವಾಗಿ ರಾಮನ ಮೇಲೆ ಯುದ್ಧ ಮಾಡಲು ಜಗದಪ್ಪನಿಗೆ ಹೇಳಿದರು. ಆರೇಳು ತಿಂಗಳು ಪ್ರಯಾಣಿಸಿ, ಸುರಿತಾಳನಿಗೆ ಎಲ್ಲ ವಿವರ ನೀಡಿದರು. ರಾಮನ ರೂಪವನ್ನು ಕೊಂಡಾಡಿದರು. 'ಕತ್ತಿಗೆ ಅಳುಕುವನಲ್ಲ, ಕರ್ನಾಟದೊಳ್ ಉತ್ತಮ ಪುರುಷ ಪುಟ್ಟಿಹನು' ಎಂದು ಹೇಳುತ್ತಲೇ, ಸುರಿತಾಳ ನೇಮಿಯನ್ನು ಕರೆಸಿದನು. ಸಿಟ್ಟಿಗೆದ್ದು, ರಾಮನ ಮೇಲೆ ದಂಡೆತ್ತಿ ಹೋಗಲು ಆಜ್ಞಾಪಿಸಿದನು. ಅದನ್ನು ಕೇಳಿ ಮಗಳು ಬಾಬಮ್ಮ 'ನನ್ನ ಮುತ್ತೈದೆತನ ಉಳುಹು' ಎಂದು ಬೇಡಿಕೊಂಡಳಲ್ಲದೆ, 'ನಿನ್ನ ಅಳಿಯನಿಗೆ ಪಾದಕೆ ಕೊಟ್ಟೆನೆಂದು ಭಾವಿಸು' ಎಂದು ಹೇಳಿದಳು.

**ಸಂಧಿ:೬**

ಹರಿಯಲದೇವಿ ಬೈಚಪ್ಪನನ್ನು ಕರೆಸಿದಳು. 'ರಾಮ ಮಾಡಿದ ಕಥೆ ಬರೆದೋದಿ ಕೇಳಿದರೆ ತೀರದು' ಎಂದು ಮರುಗಿದಳು. 'ರಾಮ ಸಾಮಾನ್ಯನಲ್ಲ, ಶ್ರೀ ಕೃಷ್ಣ ನಿನ್ನ ಗರ್ಭದಲ್ಲಿ ಜನಿಸಿರುವ'ನೆಂದು ಇತ್ತ ಬೈಚಪ್ಪ ಸಮಾಧಾನ ಪಡಿಸುವಷ್ಟರಲ್ಲಿ, ಅತ್ತ ಗುತ್ತಿಯ ಜಗದಪ್ಪನ ಸೇವಕರು ಕುಮ್ಮಟಕ್ಕೆ ಬಂದು ಕಪ್ಪಕಾಣಿಕೆ ಕೇಳೀ, ಬೀದಿಯಲ್ಲಿಯೇ ಕಂಪಿಲನನ್ನು ತಡೆದು ನಿಲ್ಲಿಸಿದರು. ಅಷ್ಟರಲ್ಲಿ ತನ್ನ ಐದು ಜನ ವಿಶ್ವಾಸಿಕರೊಂದಿಗೆ ಬಂದ ರಾಮಯ್ಯ, ಅಲ್ಲಿ ತಾನು ನಿಂತುಕೊಂಡು, ಕಂಪಿಲನನ್ನು ಮನೆಗೆ ಕಳಿಸಿದನು. ಆಮೇಲೆ ಗುತ್ತಿಯವರನ್ನು ಕತ್ತು ಹಿಡಿದು ನೂಕಿಸಿ, ಮನೆಗೆ ಬಂದನು.

ಇದನ್ನು ಕೇಳಿದ ಜಗದಪ್ಪ ಸಿಟ್ಟಿಗೆದ್ದು, ಸುತ್ತಲಿನ ಪಾಳೆಯಗಾರರಿಗೆ ಓಲೆ ಬರೆದು 'ಲಾಳ, ಕೊಂಕಣ, ಮಲೆಯಾಳ, ಸಿಂಗ, ಬಂಗಾಳ ದೇಶಗಳ ಸೈನಿಕರೆಲ್ಲ ಒಟ್ಟಾಗಿರಿ, ಕುಮ್ಮಟದ ಮೇಲೆ ದೊಡ್ಡ ದಾಳಿ ಮಾಡೋಣ' ಎಂದು ತಿಳಿಸಿದ. ವೀರ ಕನ್ನೋಜಿ, ಕರಾಳ, ಸಿಂಧು, ಮಹಾರಾಷ್ಟ್ರದ ಬಲ ಒಂದುಗೂಡಿತು. ಜಗದಪ್ಪ ಕಮ್ಮಟದುರ್ಗ ಮುತ್ತಿದ. 'ಧರೆಯ ರಾಯರ ಗಂಡ' ಎಂಬ ಬಿರುದು ಧರಿಸಿ, ಕುದುರೆ ಏರಿ, ರಾಮಯ್ಯ ರಣರಂಗವನ್ನು ಪ್ರವೇಶಿಸಿದ. ಮನ್ನೂಲ ಮಾಚ, ಬೂಟಲ ಬೊಮ್ಮ, ಮನ್ನುಲ ಚಿನುಮಾದ, ಬುಕ್ಕನ ಪಾಲ, ಮುದುಗೊಂಡ್ಲ ಮೂಗ, ರಾಹುತ ಮಲ್ಲಣ್ಣ ಜೊತೆಗೂಡಿ ಹೋರಾಟ ಮುಂದುವರಿಸಿದರು. 'ಸ್ವಾನೆಯ ಮಳೆಯಂತೆ ಸುರಿದವಂಬಿನ ಮಳೆ'. ಆಗ ಕಾಮಗೇತಿಯ ತಿಮ್ಮ ಬೋನಗುರಿಯಂತೆ ಆನೆಗಳನ್ನು ಸೆರೆ ಹಿಡಿದು, ರಾಮನಿಗೆ ಒಪ್ಪಿಸಿದ. ಬೆಟ್ಟದ ಸಿಂಹ ಸಮಾನರಾದ ಕೊಟ್ಟದ ಬೇಡರು, ಮರಳೆ ಪಾಪನವರು, ಚಾಮರಾಯನ ಮಕ್ಕಳು, ಕಾಟಣ್ಣ ಸೇರಿ ಮಾಳವ, ಮಗಧ, ಪಾಂಚಾಲ ನಾಯಕರನ್ನು ಕೊಂದರು. ಗಡಿಯಂಕ ಚೆನ್ನನು ಯುದ್ಧವಿಜಯದ ಸುದ್ದಿ ಹೇಳಿ 'ಧರ್ಮಗಾಳೆಯ' ನುಡಿಸಲು ಸೂಚಿಸಿದನು. ಜಯಶಾಲಿಗಳಾಗಿ ಎಲ್ಲರೂ ಅರಮನೆಗೆ ಮರಳಿದರು.

ಜಗದಪ್ಪ, ಸೋಲಿನ ಸುದ್ದಿ ಕೇಳಿದ. ರಾಮನ ಸಾಹಸಕ್ಕೆ ಬೆರಗಾದ. ಐದು ಕುದುರೆ ಮತ್ತು ಮಗಳನ್ನು ನೀಡುವುದಾಗಿ ತಿಳಿಸಿ, ಒಪ್ಪಂದ ಮಾಡಿಕೊಂಡ. ಕಂಪಿಲರಾಯ ಮಗಳ ಪರಾಕ್ರಮಕ್ಕೆ ಮೆಚ್ಚಿ, ಮುತ್ತಿನ ತುರಾಯಿ ಕೊಟ್ಟ. ಹರಿಯಲದೇವಿ ಆರತಿ ಬೆಳಗಿ, ನಿವಾಳಿ ತೆಗೆದಳು. ಎಲ್ಲರೂ ಸೇರಿ ಸಕ್ಕರೆ, ಚಿನಿಪಾಲು, ತುಪ್ಪ, ಮೃಷ್ಟಾನ್ನ, ಕಡಬು, ಕಜ್ಜಾಯ ಊಟ ಮಾಡಿದರು.

ಮರುದಿನ ಮುಂದಾನೆ ಕಂಪಿಲ ಆಸ್ಥಾನವನ್ನಲಂಕರಿಸಿ, ಗುತ್ತಿ ಯುದ್ಧದಲ್ಲಿ ಹೋರಾಡಿದ ಯೋಧರನ್ನು ಕರೆಸಲು ರಾಮಯ್ಯನಿಗೆ ಹೇಳಿದ. ಬಣವೆಯ ಹುಲ್ಲು ಬಸವಗೆ ಕೊಟ್ಟಂತೆ ರಾಮಯ್ಯ ಯೋಧರಿಗೆ ಊಟ ಮಾಡಿಸಿದ. ಬಳಿಕ ಕಾಲಗಗ್ಗರಿ, ತೋಳಬಾಪುರಿ ಮೋಹನ್ಮಾಲೆ, ಚೌಕುಳಿ, ತಿಸರ, ಕಾಲಸರ, ಹೊನ್ನಗಂಟೆ, ಪುಲಿಚರ್ಮ, ಚೌರಿ, ತೊಡರು, ಬಾಪುರಿಗಳನ್ನು ಕೊಟ್ಟನು. ಊರು ಉಂಬಳಿ, ಉಡಾಸ, ನಾರಂಜಿ, ತೋಪಿ, ಹಗಲು ದೀವಟಿಗೆ, ಜಲ್ಲಿ, ಜಗಜಂಪಿ, ಸತ್ತಿಗೆ ವಸ್ತ್ರ, ಮುತ್ತಿನೊಂಟಿ, ಆಯುಧ, ಆನೆ, ಕುದುರೆ, ಸೇನೆ, ಭಂಡಾರ ಕೊಟ್ಟನು. ಅವರ ಮದುವೆಗೆ ಬೋನಕ್ಕೆ ಗದ್ದೆ-ಹೊಲ ಮಾನ್ಯ ನೀಡಿದನು.

ತೊಡರು, ಬಾಪುರಿ, ನಡುವಿನೊಡ್ಯಾಣ, ಉಡಿದಾರ, ವಂಕುಡಿ ಕೊಟ್ಟನು. ಬಡವರಿಗೆ ಹಣಹೊನ್ನು ನೀಡಿದನು. ಸತ್ತವರ ಮಕ್ಕಳನ್ನು ಕರೆಸಿ, ಮುತ್ತು ಬಂಗಾರ ಕೊಟ್ಟು, ಹೆತ್ತ ತಂದೆಯ ಮರೆಯದಂತೆ ನಡೆದುಕೊಳ್ಳಲು ಹೇಳಿದನು.

ಮಗನ ಶ್ರೇಯಸ್ಸನ್ನು ನೋಡಿ ಕಂಪಿಲ ಹರ್ಷಿತನಾದ. 'ಕನ್ನೆ ಹುಯ್ಯಲ ಕಡಿದು ಬಂದ ರಾಮಯ್ಯಗೆ ಕನ್ನೆವೆಣ್ಣುಗಳೈದು' ತಂದು ಮದುವೆಮಾಡಲು ಬೈಚಪ್ಪನೊಡನೆ ಆಲೋಚಿಸಿದ. ಭಾವ ಮಂಚಣ್ಣನ ಮಗಳು (ಕಾಮಕ್ಕ), (ಜಗದಪ್ಪನ ಮಗಳು) ರಾಮಲದೇವಿ, ಮಾವ ಚಾರಮರಾಯನ ಇಬ್ಬರು ಮೊಮ್ಮಕ್ಕಳು (ಸೋಮಾಯಿ, ಭೀಮಾಯಿ), ಬೈಚಪ್ಪನ ಮಗಳು (ತಿಮ್ಮಾಯಿ)- ಹೀಗೆ ಐದು ಜನರನ್ನು ನಿಶ್ಚಯಿಸಿದರು. 'ಕನ್ಯೆ ಹುಯ್ಯಲ ಕಡಿದು, ಹೆಣ್ಣುಗಳ ಮದಿವ್ಯಾದ ಚೆನ್ನಿಗ ರಾಮಯ್ಯ' ಎಂಬ ಕೀರ್ತಿ ಪಸರಿಸಿತು.

ಸಂಧಿ:೭

ಉದಯಕಾಲದಲ್ಲಿ ಕಂಪಿಲರಾಯ ಆಸ್ಥಾನವನ್ನಲಂಕರಿಸಿದ. ಸುರಿತಾಳನ ಮನಸ್ಸನ್ನು ತಿಳಿದುಕೊಳ್ಳಲು ರಹಸ್ಯಭೇದಕರಾದ 'ಕಳಭಂಟ'ರನ್ನು ಕಳುಹಿಸಿದ. ಅಷ್ಟರಲ್ಲಿ ಗುತ್ತಿಯ ಚರರು ಬಂದು, ಕೊಟ್ಟ ಮಾತಿನಂತೆ ಜಗದಪ್ಪನು ಮಗಳನ್ನು ಕಳಿಸಿಕೊಡಲು ಸಿದ್ಧನಾಗಿರುವ ವಿಷಯ ತಿಳಿಸಿದರು. ಕಂಪಿಲ ಸಮ್ಮತಿಸಿದ. ಚರರು ನುಡಿದ ಸಕ್ಕರೆ ಸವಿಯಂಥ ಸುದ್ಧಿಯಿಂದ ಜಗದಪ್ಪ ಸಂತುಷ್ಟನಾಗಿ, ಮಂತ್ರಿ ತಿಮ್ಮರಸ ಮತ್ತು ಮಗ ಉತ್ತುಂಗರಾಯನೊಂದಿಗೆ ಮಗಳನ್ನು ಕಳಿಸಿದ. ಮಗಳಿಗೆ ಮುತ್ತು, ಬಂಗಾರ, ಬಗೆಬಗೆಯ ಆಭರಣ, ಉಂಬಳಿಯಾಗಿ ಐದೂರು ನೀಡಿದ. ಅಳಿಯನಿಗೆ ಐದು ಕುದುರೆ, ಬಳುವಳಿಯಾಗಿ ಆಕಳ ಹಿಂಡು, ಸೆಳೆಮಂಚ, ಕರೆವ ಎಮ್ಮೆಹಿಂಡು ಕೊಟ್ಟ. ಶೋಭನ ಹಾಡಿನೊಂದಿಗೆ ಸೊಗಸಾದ ದಿಬ್ಬಣ ಹೊರಟಿತು. ನಲವತ್ತು ಜನ ಊಳಿಗದ ಹೆಣ್ಣು ಮಕ್ಕಳ, ಕಳಸ-ಚವರಿ-ಕನ್ನಡಿಯೊಂದಿಗೆ ಹಡಪದ ಸ್ತ್ರೀಯರು ನಡೆದರು. ಮಂತ್ರಿಮನ್ನೆಯರು, ಅರಸು ಮಕ್ಕಳು, ವೇದಪಾಠಕರು, ಜೋಯಿಸರು, ವಿದ್ವಾಂಸರು, ಹಿರಿಯರು, ಸಾವಿರ ಕುದುರೆ ಸವಾರರು ಜೊತೆಗೂಡಿದರು.

ಬೀಗರು ಬರುವ ಸುದ್ದಿ ಕುಮ್ಮಟಕ್ಕೆ ತಲುಪಿತು. ಕಾಟಣ್ಣನು ಹಂಪರಾಜ, ಕಂಪರಾಜ, ಸಂಗಮದೇವ ಮೊದಲಾದ ದೊರೆ ಮಕ್ಕಳೊಂದಿಗೆ ಬೀಗರನ್ನು ಎದುರುಗೊಳ್ಳಲು ಹೋದನು. ಉತ್ತುಂಗರಾಯ ಆನೆಯ ಮೇಲೆ, ಮುತ್ತಿನ ಸತ್ತಿಗೆ ಕೆಳಗೆ, ಶೊಭಿಸುತ್ತ ಬಂದನು. ಕನ್ನೆ ನಗಾರಿ, ಚಿನ್ನಗಾಳೆ, ಪಲ್ಲಕ್ಕಿ ಸಾಲುಗಳಲ್ಲಿ ರಾಮಲದೇವಿ ಬಂದಳು.

ಶೃಂಗಾರವನಕ್ಕೆ ರಾಮನನ್ನು ಕರೆದುಕೊಂಡು ಬಂದರು. ಕಂಪಿಲನೂ ಅಲ್ಲಿಗೆ ಬಂದ. ಅಲ್ಲಿ ಉತ್ತುಂಗರಾಯ ಮೊದಲಾದ ಬೀಗರನ್ನು ಸ್ವಾಗತಿಸಿ, ಬಿಡದಿಯ ಮನೆಗೆ ಅವರೆಲ್ಲರನ್ನು ಕರೆತಂದರು. ಬಾಗಿಲಲ್ಲಿ ಎರಡು ಕುರಿ ಕಡಿದು ನಿವಾಳಿ ತೆಗೆದರು. ರಾಮಯ್ಯನಿಗಾಗಿ ತಂದ ಉಡುಗೊರೆಯನ್ನು ಕಂಪಿಲನಿಗೆ ವಿವರಿಸಿದರು. ರಾಮಕ್ಕ ಮಾವನಿಗೆ ವಂದಿಸಿದಳು. ಮಾಘ ಶುದ್ಧ ತದಿಗೆಯ ಗುರುವಾರ ಅಮೃತಸಿದ್ಧಿಯೋಗ, ಸೂರ್ಯೋದಯ ಹತ್ತುಗಳಿಗೆಗೆ ಜೋಯಿಸರು ಮುಹೂರ್ತ ತೆಗೆದುಕೊಟ್ಟರು. ಅಂದಿನಿಂದ ಐದು ದಿನ ಪ್ರಶಸ್ತವೆಂದು ಹೇಳಿದರು. ರಾಮಕ್ಕ ಮದಲಗಿತ್ತಿಯಾಗಿ, ರಾಂಯ್ಯ ಮದಲಿಂಗನಾಗಿ ಶೋಭಿಸಿದರು.

ಕಂಪಿಲರಾಯ ಬೈಚಪ್ಪರು ಮಂಚಣ್ಣನ ಮನೆಗೆ ಬಂದು, ಮಗಳು ಕಾಮಕ್ಕನನ್ನು ವಧುವಾಗಿ ಕೊಡಲು ಕೇಳಿದರು. "ಬಡವರ ಮಗಳು ರಾಜರಿಗೆ ಉಚಿತವೇ?" ಎಂದು ಮಂಚಣ್ಣ ನುಡಿದು, ಒಪ್ಪಿಕೊಂಡರು. ಅಲ್ಲಿಂದ ಆರೆಯ ಚಾರಮರಾಯನ ಮನೆಗೆ ಹೋದರು. 'ನೀವು ನಮಗೆಲ್ಲ ಹಿರಿಯರು. ನಿಮ್ಮ ಇಬ್ಬರು ಮೊಮ್ಮಕ್ಕಳನ್ನು ರಾಮನಿಗೆ ಕೊಡಬೇಕು' ಎಂದು ಬೈಚಪ್ಪ ಬಿನ್ನವಿಸಿದ. 'ಜಾತಿ ಬೇಧಗಳುಂಟು ನಮಗೂ ನಿಮಗೂ' ಎಂದು ಚಾರಮರಾಯ ನುಡಿದ. 'ರಾಮ, ನಿಮ್ಮ ಮಗಳು ಹರಿಯಲದೇವಿಯ ಮಗನಲ್ಲವೆ?' ಎಂದು ಬೈಚಪ್ಪ ನುಡಿಯುತ್ತಲೇ, ಚಾಮರಾಯ ತನ್ನ ಮಕ್ಕಳಾದ ವೆಂಕಟರಾಯ, ಮಧೂಸೂದನರಾಯರ ಅಭಿಪ್ರಾಯ ಕೇಳಿದ. ಅವರೂ ಒಪ್ಪಿದರು.

ಕನ್ಯೆಗಳನ್ನು ಕರೆತರಲು ಕಂಪಿಲ ಪಲ್ಲಕ್ಕಿ ಕಳಿಸಿದ. ಅಕ್ಕ ಮಾರಮ್ಮ-ಸಿಂಗಮ್ಮ ರಾಮಯ್ಯನಲ್ಲಿಗೆ ಬಂದರು. ಅರಿಷಿಣ-ಎಣ್ಣೆ-ಶ್ರೀಗಂಧ ಲೇಪಿಸಿ, ಜಾಜಿಯ ಪೂಮಾಲೆ ತೊಡಿಸಿದರು. ಬಳಿಕ ಎಣ್ಣೆ ಮಜ್ಜನ ಮಾಡಿಸಿ, ಉಡುಗೊರೆ ಕೊಟ್ಟು ಅರಿಷಿಣ ಕಾರ್ಯ ಪೂರೈಸಿದರು. ಹರಿಯಮ್ಮ ಕರ್ಪೂರದಾರತಿ ಬೆಳಗಿಸಿ, ಶಾಶೆಯಿಡಿಸಿ, ಪಲ್ಲಕ್ಕಿ ಏರಿ, ಮಂತ್ರಿ ಬೈಚಪ್ಪನ ಮನೆಗೆ ನಡೆದಳು. ಅವನ ಮಗಳು ತಿಮ್ಮಾಯಿಯನ್ನು ಮಗನಿಗೆ ಬೇಡಿ ಪಡೆದಳು. ಮಂಚಣ್ಣನ ಮನೆಗೆ ಹೋಗಿ, ಕನ್ನೆಗೆ ಎಣ್ಣೆ ಅರಿಷಿಣ ನೀಡಿ, ತಂದೆ ಚಾರಮರಾಯನ ಮನೆಗೆ ಬಂದಳು. ಅವನ ಮೊಮ್ಮಕ್ಕಳು ಸೋಮಾಯಿ ಭೀಮಾಯಿಗಳನ್ನು ಪ್ರೀತಿಯಿಂದ ಮಾತನಾಡಿಸಿ, ರಾಮಕ್ಕನಲ್ಲಿಗೆ ಬಂದು, ಉಡುಗೊರೆ ನೀಡಿ, ಅರಮನೆಗೆ ಮರಳಿದಳು.

ಹಂದರ ಹಾಲಗಂಬ ಹಾಕಿದರು. ಜೋಯಿಸರು, ಬ್ರಾಹ್ಮಣರು, ಅವಧಾನಿಗಳು ಆಗಮಿಸಿದರು. ಅಮೃತಸಿದ್ಧಿಯೋಗ ಸಮೀಪ ಬರುತ್ತಲೇ ಊರೊಳಗಿನ ಮಂತ್ರಿ, ಅರಸುಮಕ್ಕಳು, ಮನ್ನೆಯ ಮಾಂಡಲಿಕರನ್ನು ಕರೆಸಿದರು. ಶೆಟ್ಟಿ ವರ್ತಕರು ಪಟ್ಟಣವನ್ನು ಶೃಂಗರಿಸಿದರು. ಹಟ್ಟಿಕಾರರು, ಹಳ್ಳಿಕಾರರು, ಕರಣಿಕರು ಬಂದರು. ನೌಬತ್ತು, ನಗಾರಿ, ಸಾನಾಯಿ, ಮೃದಂಗ, ಡಿಂಡಿಮ, ಚಿನ್ನಾಳೆ ಧ್ವನಿ ಮೊಳಗಿತು. ರಾವುತ ರಾಣೆಯರು, ಗುರಿಕಾರರು, ಎಕ್ಕಟಿಗರು ಆಗಮಿಸಿದರು.

ನಮ್ಮೆಲ್ಲರಿಗೆ ಹಿರಿಯ ಚಾರಮರಾಯ. ಅವನನ್ನು ಕರೆತರಬೇಕೆಂದು ಕಂಪಿಲರಾಯ ಕಾಟನಿಗೆ ಹೇಳಿದ. ಪಲ್ಲಕ್ಕಿ, ಕುದುರೆಯೊಂದಿಗೆ ಕರೆಯಲು ಹೋದನು. ಚಾರಮರಾಯ ಮೊಮ್ಮಕ್ಕಳೊಡನೆ ಬಂದನು. ಮಂಚಣ್ಣ, ಬೈಚಪ್ಪರ ಮನೆಗೂ ಕಾಟಣ್ಣನನ್ನು ಕಳಿಸಿದನು. ಅವರೂ ವಧುಗಳೊಂದಿಗೆ ಬಂದರು. ಕಾಟಣ್ಣ ರಾಮಕ್ಕನನ್ನು ಕರೆಯಲು ಮುತ್ತಿನ ಅಂದಣ, ಪಲ್ಲಕ್ಕಿ, ಕರಿಯ ಕುದುರೆ, ಸತ್ತಿಗೆ, ಸಕಲ ವಾದ್ಯಗಳೊಂದಿಗೆ ಹೋದನು. ರಾಮಕ್ಕ ಅಂದಣವನ್ನೇರಿದಳು. ಮಂದಗಮನೆಯವರು ಶೋಭನ ಹಾಡುತ್ತ ಹಿಂಬಾಲಿಸಿದರು. ಜೊತೆಗೆ ಉತ್ತುಂಗರಾಯನೂ ಬಂದನು. ಹರಿಯಲದೇವಿ ಮದುವೆಗೆ ಬಂದ ಎಲ್ಲ ಮಹಿಳೆಯರನ್ನು ಮನ್ನಿಸಿ ಕುಳ್ಳಿರಿಸಿದಳು, ಐದು ಜನ ಕನ್ಯೆಯರ ಕೈಯಲ್ಲಿ, ಅಕ್ಷತೆ ಕೊಟ್ಟರು. ಐವರೂ ರಾಮಯ್ಯನ ಮಂಡೆಯ ಮೇಲೆ, ರಾಮಯ್ಯ ಐವರ ಮಂಡೆಯ ಮೇಲೆ ಪರಸ್ಪರ ಅಕ್ಷತೆ ಹಾಕಿದರು. ಐವರೂ ಹೂಮಾಲೆ ಹಾಕಿ ರಾಮಯ್ಯನಿಗೆ ಆರತಿ ಎತ್ತಿದರು. ಕಂಪಿಲ ಸೊಸೆಯಂದಿರಿಗೆ ಆಭರಣವನ್ನಿತ್ತನು. ಮಗನಿಗೆ ಒಂದೊಂದು ಬಿರುದಿಗೂ ಒಂದೊಂದು ಆಭರಣ ಕೊಟ್ಟನು. ಬಂದ ಬೀಗರಿಗೆ ಉಡುಗೊರೆ, ವೀಳ್ಯ ಕೊಡಲಾಯಿತು. ಮನೆತುಂಬಿಸುವ ಕಾರ್‍ಯ್ಯ ನೆರವೇರಿಸಿದರು. ಮನ್ನೆಯರು ಖಾನ ವಜೀರರು ಶೆಟ್ಟಿ ಮಹಾನಾಡುಗಳು ರಾಮಯ್ಯನಿಗೆ ಉಡುಗೊರೆ ನೀಡಿದರು.

ರಾಮಯ್ಯನಿಗೆ ಗುತ್ತಿಯ ಉತ್ತುಂಗರಾಯ ಮುತ್ತಿನ ತುರಾಯಿಯನ್ನು, ಚಾರಮರಾಯ ಆರು ರತ್ನ ಹಾರವನ್ನು ನೀಡಿದರು. ಬೈಚಪ್ಪ ಮಗಳಿಗೆ ಸಂಚಿಯ ತುಂಬ ಹೊನ್ನ, ಪಂಚವಣ್ಣಿಗೆ ಐಸಾಲೆ ಉಡುಗೊರೆ, ಕೈಬಳೆ, ಮುರುಡಿ ಸರಪಳಿ ಕೊಟ್ಟನು. ಮಂಚಣ್ಣ ಮಗಳಿಗೆ, ಅಳಿಯನಿಗೆ ಪಂಚವಣ್ಣಿಗೆ ಉಡುಗೊರೆ ನೀಡಿದನು.

ಸಣ್ಣ ಗಂಬಳಿಹಾಸಿ ಮುತ್ತಿನ ಹಸೆ ಬರೆದರು. ಮಾರಮ್ಮ ಸಿಂಗಮ್ಮ ಅಣ್ಣನನ್ನು ಕರೆದುಕೊಂಡು ಬಂದು, ಅರಿಷಿಣ ಎಣ್ಣೆ ಹಚ್ಚಿದರು. ಊಟಕ್ಕಾಗಿ ಎಲ್ಲರೂ ಸಾಲು ಸಾಲಾಗಿ ಕುಳಿತರು.

ಬಾಲೆ ವೆಣ್ಣುಗಳು ಕಾಯಿ ಸೊಪ್ಪು ಬಡಿಸಿದರು. ಹಾಲಗುಂಬಳಕಾಯಿ, ಸಕ್ಕರೆಗುಂಬಳಕಾಯಿ, ಚಿಣಿಯ ಕಾಯಿ, ಹಾಗಲ, ಹೀರೆಕಾಯಿ, ಕೋಗುಲೆ ಸೆಂಬೆಯಕಾಯಿ, ಪಡುವಲಕಾಯಿ, ಬದನೆಕಾಯಿ, ಬಿಳಿಯ ಚೆಳ್ಳವರೆಕಾಯಿ, ಬಾಳೆಕಾಯಿ, ಹಲಸಿನಕಾಯಿ, ಗೆಣಸು, ಹರಲೆಸೊಪ್ಪು, ಬಸಲೆಸೊಪ್ಪು, ಮೆಂತೆಸೊಪ್ಪು, ಪರಮಾನ್ನ, ಮಾಲದಿ, ಶಾವಿಗೆ, ಬಟ್ಟುವೆ, ಪರಡಿ, ತಾಲಿ, ಹಾಲಿನ ಪರಮಾನ್ನ, ಹೂರಿಗೆ, ಗಾರಿಗೆ, ಹೋಳಿಗೆ, ಒಡೆ, ಬೀಸುಹೂರಿಗೆ, ಎಣ್ಣೆ ಮಂಡಲಿ, ಚಕ್ಕುಲಿ, ಸೂಸಲ, ಮಂಡಿಗೆ, ಕಡಬು, ದೋಸೆ, ಸಕ್ಕರೆ ಮಂಡಿಗೆ, ತೊಗರಿತೋವೆ, ಅಲಸಂದಿ ತೋವೆ, ಕಡಲೆಯ ತೋವೆ, ಸಣ್ಣಗೆಂಬತ್ತಿಗೆ, ಸರಮುತ್ತಿನಕ್ಕಿಯ ಚಿನ್ನದಾರಿ, ಚೊಕ್ಕಟಿ, ಅರಸರದಾನಿ, ರಾಜಾನ್ನ, ತೊಗರಿ ಕಟ್ಟು, ಕಡಲೆಯ ಕಟ್ಟು, ಹುರುಳಿ ಕಟ್ಟಿನಾಂಬ್ರ, ಮಜ್ಜಿಗೆಸಾರು, ಹುಳಿಸಾರು, ಆಕಳತುಪ್ಪ, ಎಮ್ಮೆಯ ತುಪ್ಪ, ಕುರಿಯ ತುಪ್ಪ, ಮೇಕೆಯ ತುಪ್ಪ, ಜೇನತುಪ್ಪ, ಕಚ್ಚಡಿ, ಹಿಂಡಿ, ಹುಳಿಗಾಳು, ಉಪ್ಪಿನಕಾಯಿ, ಮಾವಿನಹಿಂಡಿ, ನೆಲ್ಲಿಯ ಚಟ್ಟು, ಹಲಸಿನ ಹಣ್ಣು, ಮಾವಿನ ಹಣ್ಣು, ರಸದಾಳಿ, ಬಾಳೆಯಹಣ್ಣು ಬಡಿಸಿದರು. ಎಲ್ಲರೂ ಉಂಟು ಕೈತೊಳೆದರು. ಕಾಟಣ್ಣ ಎಲ್ಲರಿಗೂ ವೀಳ್ಯ ನೀಡಿದರು.

ಮದುಮಕ್ಕಳಿಗೆ ಹಸೆಯ ಮೇಲೆ ಕುಳ್ಳರಿಸಿ, ಮಲ್ಲಿಗೆ ಮುಡಿಸಿ, ಅರಿಷಿನೆಣ್ಣೆಯ ನೆರವೇರಿಸಿ ಕೊನೆಯ ದಿನ ನಾಗೋಲೆ ಮಾಡಿದರು. ಓಕುಳಿಯಾಡಿದರು. ಕಾಟಣ್ಣ ಬೀಗರನ್ನು ಗ್ರಾಮದ ವರೆಗೆ ಬೀಳ್ಕೊಟ್ಟು ಬಂದನು.

**ಸಂಧಿ:೮**

ಕುಮಾರರಾಮ ಗೆದ್ದು ತಂದ ಕುದುರೆಗಳನ್ನು, ಕಂಪಿಲರಾಯ ತನ್ನ ಐದು ಜನ ಮಕ್ಕಳಿಗೆ ಕೊಟ್ಟನು. ಸಿಟ್ಟಿಗೆದ್ದ ರಾಮ ಐವರನ್ನೂ ಗಾಸಿಗೊಳಿಸಿದ. ಅವರು ತಂದೆಗೆ ಚಾಡಿ ಹೇಳಿದರು. ಕಂಪಿಲ ರಾಮಯ್ಯನನ್ನು ಕರೆಯಿಸಿ 'ನಿನ್ನಲ್ಲಿ ಸಾಮರ್ಥ್ಯವಿದ್ದರೆ ಓರುಗಲ್ಲ ರುದ್ರನ ಮಗ ಎಪ್ಪತ್ತಿರಾಜನ ಕುದುರೆ ಬೊಲ್ಲನನ್ನು ಗೆದ್ದು ತಾ' ಎಂದು ಮೊದಲಿಸಿದ, ಭೇರಿ, ಮೃದಂಗ, ಕೈತಾಳ, ಕಾಳೆ, ಕೊಂಬು, ಢಮಾಮಿ ವಾದ್ಯಗಳೊಂದಿಗೆ ರಾಮ ಓರಗಲ್ಲಿಗೆ ಸನ್ನದ್ಧನಾದ. ತಾಯಿ ಹರಿಯಲದೇವಿ ಆರತಿ ಎತ್ತಿದಳು. ಮನ್ನೆಯರೊಂದಿಗೆ ರಾಮಯ್ಯ ಪ್ರಯಾಣ ಬೆಳೆಸಿದ.

ಎಕ್ಕಟಿಗ ಸಿಂಗ, ಮೀನಿಗರ ಲಕ್ಕ, ಚಿಕ್ಕ ತಮ್ಮುಗ, ಗುಜ್ಜಲೋಬ, ರಕ್ಕಸ ಮಾದ, ಕರವೂರ ತಿಪ್ಪ, ಬೊಕ್ಕ ಬೋಳುಗ, ಓಬುಗ-ಹೀಗೆ ೬೨ ಮನ್ನೆಯರು ಶಿವದೇವಾಲಯದ ಎದುರು ಸೇರಿದರು. ಕುಮ್ಮಟದಿಂದ ಪ್ರಯಾಣ ಬೆಳೆಸಿ, ಕಂಪಲಿಗೆ ಬಂದು ಸೋಮಯ್ಯನಿಗೆ ವಂದಿಸಿ, ಎಮ್ಮಿಗನೂರು ದಾಟಿದರು. ಬಳಿಕ ಹೊಸಮಲೆಯಿಂದ ದೊಡ್ಡ ಬಸವನ ಕುರುಗೋಡು ಮಾರ್ಗವಾಗಿ ಕರಡಿಕಲ್ಲು ಹತ್ತಿರ ಹೊಳೆದಾಟಿ, ಯಾದವಗಿರಿಗೆ ಬಂದರು. ಮಜ್ಜನ, ಊಟ, ನಿದ್ರೆ ಮುಗಿಸಿ ಆದವನ್ನಿ, ರೊಳ್ಳಿ, ಗೊನಗೆಂದಿ ಮೂಲಕ ಕಲ್ಲೂರಿಗೆ ಬಂದರು. ತುಂಗಭದ್ರೆಯನ್ನು ದಾಟಿ ಉದ್ಯಾವಾರಣ್ಯಕ್ಕೆ, ಅಲ್ಲಿಂದ ಸಿದ್ಧವಟ್ಟಕ್ಕೆ, ಅಲ್ಲಿಂದ ಉದ್ದಗಿರಿಗೆ ಆಗಮಿಸಿದರು. ಇನಗೊಂಡೆ, ಶರಣಪುರ, ಇಂದ್ರಕೀಲ ದಾಟಿ, ಆಂಧ್ರಪ್ರದೇಶ ಸೀಮೆಗೆ ಬಂದು, ಅಲ್ಲಿಂದ ಲಾಳದೇಶ ಪ್ರವೇಶಿಸಿದರು.

ಒಳ್ಳೆಯ ದಿನ ಶುಭಲಗ್ನದಲ್ಲಿ ಹಗಲು ಹುಟ್ಟಿದ್ದ ಕುದುರೆ ಬೊಲ್ಲನನ್ನು ಮುಂಗುಲಿರಾಯನಿಂದ ಲಕ್ಷ ಹಣಕೊಟ್ಟು ಎಪ್ಪತ್ತಿರಾಜ ಖರೀದಿಸಿದ್ದ. ನೆಲಮಾಳಿಗೆಯಲ್ಲಿಟ್ಟು ಉಕ್ಕಿನ ಕಡಲೆ ಮೇಯಿಸುತ್ತಿದ್ದ. ಈ ಕುದುರೆ ತರಲು ಹೊರಟಿದ್ದ ಕುಮಾರರಾಮ ಇಂದ್ರಕೀಲದಿಂದ ರಹುದ್ರೇಕಪುರಕ್ಕೆ, ಆಮೇಲೆ ಕಂದರ, ಮಾಳ, ಕರಾಳ ದೇಶಗಳಿಗೆ, ಮಾದ್ರಿಗಿರಿಗೆ ಬಂದನು. ಅಲ್ಲಿಂದ ರುದ್ರನಗಿರಿ, ಮೈಲಾಪುರ, ಧರ್ಮಾವತಿ ಮಾರ್ಗವಾಗಿ ನಲ್ಲೂರಪುರ, ಉದ್ದುರಪುರಗಳಿಗೆ ಬಂದು, ಅಲ್ಲಿಯ ಶರಣರ ಮಠ ಸೇರಿ, 'ಬೊಲ್ಲ ಕೈ ಸೇರಿದರೆ ಶೂಲದ ಹಬ್ಬ ಮಾಡಿಸುವೆ' ಎಂದು ಅಲ್ಲಿಯ ಗುಂಡ ಬ್ರಹ್ಮಯ್ಯದೇವರಿಗೆ ಹರಕೆ ಹೊತ್ತನು. ಅಲ್ಲಿಂದ ಮುಂದೆ ಬರುವಷ್ಟರಲ್ಲಿ ಓರುಗಲ್ಲ ಪಟ್ಟಣಶೆಟ್ಟಿ ದೇವಿಶೆಟ್ಟಿಲಿಂಗನ ಭೇಟಿಯಾಯಿತು, ಇಬ್ಬರೂ ಸ್ನೇಹಿತರಾದರು. ರಾಮ ತನ್ನ ಆಗಮನದ ಉದ್ದೇಶ ಹೇಳಿದ. ಸಹಕರಿಸುವುದಾಗಿ ಲಿಂಗ ಸಮ್ಮತಿಸಿದ. ತಂದೆಯೊಡನೆ ಮುನಿದು ಕುಮಾರರಾಮ ಬಂದುದನ್ನು ಕೇಳಿ, ಪ್ರತಾಪರುದ್ರ ಓಲಗಕ್ಕೂ ಬರಲು ತಿಳಿಸಿದ. ರಾಮನು ಲಿಂಗನೊಡನೆ ಪ್ರತಾಪರುದ್ರನ ಓಲಗಕ್ಕೆ ಹೊರಟ. ಓರುಗಲ್ಲ ಸ್ತ್ರೀಯರು ಇವರ ರೂಪಕ್ಕೆ ಸೋತು ಹೋದರು. ಎತ್ತಿದ ಮಕ್ಕಳ ಕೆಳೆಯಕೆ ಬಿಟ್ಟರು. ನೆತ್ತಿಯ ಕೊಡಗಳ ಬಿಟ್ಟು ಕೈಮರೆದರು. ಹಡೆದ ತಾಯಂದಿರು ಮಗನನ್ನು ನೋಡುತ್ತಲಿರುವರೆಂದು ಭಾವಿಸುತ್ತ, ರಾಂಯ್ಯ ಮುನ್ನಡೆದ. ಹುಳಿಯೇರ (ಗಳಿಯಾರ?) ಬಾಗಿಲ ದಾಟಿ ಆಸ್ಥಾನ ಪ್ರವೇಶಿಸಿದ. ಎಡ ಬಲದಲ್ಲಿ ರಾಜರು, ರಾಜಕುಮಾರರು, ಮಂತ್ರಿ, ರಾಹುತರು ತುಂಬಿದ್ದರು. ಕುಮಾರರಾಮ ರುದ್ರರಾಜನಿಗೆ ಕಾಣಿಗೆ ಸಲ್ಲಿಸಿ, ನಮಸ್ಕರಿಸಿದ. ಅವನೂ ಉಡುಗೊರೆ ನೀಡಿದ. ಸಭೆಯಿಂದ ರಾಮ ನಿರ್ಗಮಿಸುತ್ತಲೇ ಅವನ ಭಟ್ಟರು 'ಮಣಿವ ರಾಯರ ಗಂಡ, ಮಲೆವ ರಾಯರ ಗಂಡ, ನರಪತಿ-ಗಜಪತಿ-ಅಶ್ವಪತಿಗಳೆಂಬ ಅರಸುಗಳಿಗೆ ಗಂಡ' ಎಂದು ಬಿರುದು ಘೋಷಿಸಿದರು. ಇದನ್ನು ಕೇಳಿ ರುದ್ರ ರಾಲರುದ್ರನಾದ. ಲಿಂಗನನ್ನು ಆಸ್ಥಾನಕ್ಕೆ ಕರೆಸಿ, 'ಇಂಥವನನ್ನು ಕರೆದುಕೊಂಡು ಬಂದುದು ಸರಿಯಲ್ಲ' ವೆಂದು ಅಬ್ಬರಿಸಿದ. ಲಿಂಗ ರಾಮನಿಗೆ ವಿವರ ಹೇಳಿದ. ರುದ್ರನನ್ನು ಎದುರಿಸಲು ಇಬ್ಬರೂ ಒಟ್ಟಾದರು. ರಾಜಧಾನಿಯಲ್ಲಿ ಇರಲು ತನಗೆ ಇನ್ನು ಸಾಧ್ಯವಿಲ್ಲವೆನಿಸಿ, ಲಿಂಗ ತನ್ನ ಮೇಲುಪ್ಪರಿಗೆ, ಚಾವಡಿ, ಪಟ್ಟಾವಳಿ, ಬತ್ತದ ಕಣಜ, ಸುಡಿಸಿದ. ಹೆಣ್ಣು ಮಕ್ಕಳಿಗೆ ಕಾಲ ಕುಪ್ಪಸಕೊಟ್ಟು ಕರೆದುಕೊಂಡು ರಾಮನೊಂದಿಗೆ ಹೊರಹೊರಟ.

ಇದನ್ನು ಕೇಳಿ ರುದ್ರ ಸೈನ್ಯ ಕಳಿಸಿದ. ಯುದ್ಧ ಏರ್ಪಟ್ಟಿತು. ರಾಮಯ್ಯ, ಲಿಂಗ, ಕಾಟಣ್ಣರನ್ನು ಎದುರಿಸದೆ ರುದ್ರನ ದಂಡ ಸೋತಿತು. ರುದ್ರನ ಮಗ ಎಪ್ಪತಿರಾಜ ಯುದ್ಧಕ್ಕೆ ಸಿದ್ಧನಾದ. ಮಲ್ಲಯ್ಯ ಸಾಹಣಿ ತಂದು ನಿಲ್ಲಿಸಿದ ಬೊಲ್ಲನನ್ನು ಹೂವು ಗಂಧಗಳಿಂದ ಪೂಜಿಸಿದರು. ಹಕ್ಕರಿಗೆ ಜೋಡು, ಹೊಕ್ಕುಳ ಗಂಟೆ, ಎಡಬಲದಲ್ಲಿ ಬಿಲ್ಲು, ಅಂಬು, ಸಿಂಗಾಡಿ, ಪಕ್ಕದಲ್ಲಿ ರಂಚಿಕೆ, ಕಡಿವಾಣ, ಉಕ್ಕಿನ ಜಲ್ಲೆಯ, ವಂಕಿ, ಕೈಯಂಬು, ಬಿರುದುಗಳಿಂದ ಬೊಲ್ಲನನ್ನು ಸಜ್ಜುಗೊಳಿಸಿದರು. ಎಪ್ಪತ್ತಿರಾಜ ಮೈಜೋಡು ತೊಟ್ಟು, ತಲೆಗೆ ಠೌಳಿ ಧರಿಸಿದ, ವೀರಜಡೆ ಹೆಣಿಸಿ ಕುದುರೆ ಏರಿದ, ತುಡುಮು, ತಮ್ಮಟೆ, ಭೇಡಿ, ಗಿಡಿಬಿಡಿ, ನಿಸ್ಸಾಳ, ಚೆನ್ನಗಹಳೆ, ಬುರುಗು, ನೌಬತ್ತು ಮೊಳಗಿದವು. ರಾಮ ನೀಲನನ್ನೇರಿ ಎದುರಿಸಿದನು. ನಿಕರ ಕಾಳಗ ಏರ್ಪಟ್ಟಿತು. ತಪ್ಪತ್ತಿರಾಜ ಕೆಳಗೆ ಬೀಳುತ್ತಲೇ ಬೊಲ್ಲ ಕುಮಾರರಾಮನಿಗೆ ಬೆನ್ನುಕೊಟ್ಟಿತು. ಅವನು ಕುದುರೆಯನ್ನು ಕೋಟೆ ಗೋಡೆಯಿಂದ ನೆಗೆಸಿದ ಭರದಲ್ಲಿ, ಅದರ ಎದೆಯ ಚರ್ಮದ ಬಾರ ಹರಿದು ಹೋಯಿತು. ತಕ್ಷಣ ಮಾದಿಗ ಹಂಪ ತನ್ನ ಒಳದೊಡೆ ಚರ್ಮ ತೆಗೆದು, ಎದೆ ಬಾರವನ್ನು ಹೊಂದಿಸಿದ. ಬಳಿಕ ಏರಿಬಂದ ಪ್ರತಾಪರುದ್ರನೂ ಸೋತು ಹೋದ. ನೀಲನನ್ನೇರಿ ರಾಮಯ್ಯ ಕುಮ್ಮಟಕ್ಕೆ ಹಿಂದಿರುಗಿದ. ದಾರಿಯಲ್ಲಿ ನೆಲ್ಲೂರಿಗೆ ಬಂದು, ವೀರಶರಣರ ದ್ವಾರವಾಟಕ್ಕೆ ಆಗಮಿಸಿದ. ಮಧ್ಯದಲ್ಲಿ ಬೊಲ್ಲನನ್ನು ಬಿಡಿಸಿಕೊಳ್ಳಲು ಬಾಬಾಜಿ ಏರಿಬಂದು, ಸೋತು ಹಿಂದಿರುಗಿದ. ಕೊಳ್ಳಿಯ ನಾಗಣ್ಣ, ಗುಜ್ಜಲ ಓಬ, ಚಿಗತಮ್ಮ, ಚುನುಮಾದ, ಕೋಟಿಗರ ದ್ಯಾವ, ಮರುಳೆ ಪಾಪಯ್ಯ, ಬೂಟಕ ಬೊಮ್ಮ ರಾಮನಿಗೆ ಈ ಯುದ್ಧದಲ್ಲಿ ನೆರವಾದರು. ದಾರಿಯಲ್ಲಿ ಕಾಶ್ಮೀರರಾಜ ಬೊಲ್ಲನನ್ನು ಬಿಡಿಸಿಕೊಳ್ಳಲು ಹೋರಾಡಿ ಸೋತುಹೋದನು. ರಾಮನ ಪರಿವಾರ ಸಿದ್ಧವಟದಲ್ಲಿ ತಂಗಿ, ರಟ್ಟಿನ ಹೊಳೆ

ದಾಟಿ, ಯಾದವಗಿರಿ ದುಗ್ಗ, ಆದವನ್ನಿ, ಕುರುಗೋಡು ಮಾರ್ಗವಾಗಿ ಕಂಪಲಿಗೆ ಬಂದು ಸೋಮೇಶ್ವರನಿಗೆ ಪೂಜೆ ಸಲ್ಲಿಸಿತು. ಅಲ್ಲಿಗೆ ಬಂದ ಕಂಪಿಲರಾಯನಿಗೆ ವಂದಿಸಿ, ಲಿಂಗ, ಮಾದಿಗರ ಹಂಪ ನೀಡಿದ ನೆರವನ್ನು ರಾಮಯ್ಯ ವಿವರಿಸಿದ. ಇವರಿಬ್ಬರನ್ನೂ ಉಡುಗೊರೆಯಿಂದ ಸನ್ಮಾನಿಸಿದ. ಬಳಿಕ ಹೊಸಮಲೆಗೆ ಬರಲು, ಹರಿಯಲದೇವಿ ಆರತಿ ಎತ್ತಿದಳು. ಮಿಕ್ಕ ಪರಿವಾರದವರೂ ಎದುರುಗೊಂಡರು. ರಾಮಯ್ಯ ಅರಮನೆಗೆ ನಡೆದ.

**ಸಂಧಿ:೯**

ಹೊಯ್ಸಳ ಪಾಳೆಗಾರನಾದ ಹುಳಿಯಾರ ಮಾರಭೂಪಾಲನು ರಾಮನೊಡನೆ ಕಾಳಗ ಮಾಡಲು ಹವಣಿಸಿದನು. ಇದನ್ನು ಕೇಳಿದ ರಾಮಯ್ಯ 'ಹುಳಿಯಾರ ಮಾಡಿಗೊಂಡನ ಗಂಡ' ಎಂಬ ಪದಕ ಧರಿಸಿ ಹೊರಟು, ಗಂಡಿಬಾಗಿಲ ಮುಂದೆ ದಂಡು ಸಂಗ್ರಹಿಸಿ, ಉಜ್ಜಣಿ ಬಯಲಿಗೆ ಬಂದನು. ಬಳಿಕ ಕೊಡಲಿಗೆ, ಕಣಜದ ಹಳ್ಳಿ, ಮರಿವುಂಟ್ಲ, ಬೂದಿಹಾಳ ಬಾಗೂರ ಕಟ್ಟೆಯ ನಾಯ್ಕ, ಗೋವಿಂದ, ಸಣ್ಣಕ್ಕಿ ಬಾಗೂರನಾಳುವ ನಾಯಕರನ್ನು ಒಳಗು ಮಾಡಿಕೊಂಡು ಯುದ್ಧಕ್ಕೆ ಸಿದ್ಧನಾದನು. ಅಸಗೋಡ ನಾಯಕ, ಬಾಗೂರ ಓಬಯ್ಯ, ಬಾಗೂರ ತಿಪ್ಪ, ಹುಳಿಯೇರ ನಂದರಾಯನಪಾಲ, ರಾಯಿಪಾಲ, ಮನ್ನೂಲ ಮಾರ, ಕಂಪಿಲಿಯ ಸೋಮುಗ, ಹೊನ್ನೂರ ಇರುಪಯ್ಯ, ಸೋಮುಗ, ನಡಗೂರ ಬಸವ, ಬಸವಾಪುರ ಬೊಮ್ಮಲಿಂಗ, ಕಾದಲೆ ಗಿರಿಯ, ಮುರುಡಿಯ ಚೆನ್ನಸೋಮ, ಮನ್ನೂಲ ಮಾಚ, ಕನ್ನ, ಬೂಟಕ ಚೆನ್ನ, ಮರುಳೆಯ ಪಾಪಯ್ಯ, ಮೀನಿಗರ ಲಕ್ಕ, ಮುದ್ದು ಬಸವಯ್ಯ ಸ್ಪರ್ಧೆಯಿಂದ ವೀಳ್ಯ ಹಿಡಿದರು. ಯುದ್ಧ ಆರಂಭವಾಯಿತು. ಮಾರಭೂಪಾಲನ ಸೈನ್ಯ ಮುರಿಯಿತು. ಅವನು ಮತ್ತೆ ಕಟ್ಟಿ ನಿಲ್ಲಿಸಿಯೂ ಸೋತುಹೋದ. ಮಂತ್ರಿ ಕಲ್ಲರಸನ ಮುಖಾಂತರ ಬಿಂದಿಗೆ ಹೊನ್ನ, ಐದೂರು, ಅರಗಿಳಿ ಕೊಟ್ಟು ಸಂಧಿ ಮಾಡಿಕೊಂಡ. ರಾಮಯ್ಯ ಕಣಗಿನಹಳ್ಳಿ ಮಾರ್ಗವಾಗಿ ಮರಳಿದ. ಮಗನನ್ನು ಮಧ್ಯ ಮಾರ್ಗದಲ್ಲಿಯೇ ಕಂಪಿಲ ಎದುರಗೊಂಡ. ಹರಿಯಮ್ಮ, ಮಾರಮ್ಮ, ಸಿಂಗಮ್ಮ ರಾಮನನ್ನು ಆರತಿ ಎತ್ತಿ ಸ್ವಾಗತಿಸಿದರು. ರಾಮಯ್ಯ ಪರಿವಾರವನ್ನು ಮನೆಗೆ ಕಳುಹಿಸಿದ.

## ಪ್ರಸ್ತಾವನೆ(೩)

**ಸಂಧಿ:೧೦**

ರಾಮಯ್ಯ ಸುತ್ತಲಿನ ರಾಜ್ಯಗಳನ್ನು ಒತ್ತಿ ಆಳುತ್ತಲಿರುವ ಸಂದರ್ಭದಲ್ಲಿ ದಿಳ್ಳಿ ಸುರಿತಾಳನಿಗೂ ಅವನ ಸರದಾರ ಬಹದ್ದೂರನಿಗೂ ವಿರಸ ಹುಟ್ಟಿತು. ಬಹದ್ದೂರ ಅಲ್ಲಿಂದ ತಪ್ಪಿಸಿಕೊಂಡು ಮುಂಗುಲಿರಾಯನ ಹತ್ತಿರ ಆಶ್ರಯ ಹೇಳಿದನು. ನೇಮಿಗೆ ಅಂಜಿ ಅವನು ಆಶ್ರಯ ನಿರಾಕರಿಸಲು, ಬಹದ್ದೂರ ಓರುಗಲ್ಲಿಗೆ, ಅಲ್ಲಿಂದಲೂ ನಿರಾಕೃತನಾಗಿ ಗುತ್ತಿ ಜಗದಪ್ಪನಲ್ಲಿಗೆ, ಅಲ್ಲಿಂದಲೂ ನಿರಾಕೃತನಾಗಿ 'ಬೆದರಿದ ಹುಲ್ಲೆ'ಯಂತೆ ಕುಮ್ಮಟಕ್ಕೆ ಬಂದನು. ರಾಮಯ್ಯ 'ಮೊರೆಹೊಕ್ಕ ಖಾನರ ಕೊಡೆ'ನೆಂಬ ಬಿರುದು ಧರಿಸಿ, ಅವನಿಗೆ ಆಶ್ರಯ ನೀಡಿದನು. ಉಂಬಳಿಯಾಗಿ ಒಂದು ಗ್ರಾಮವನ್ನೂ ಮುನ್ನೂರು ವರಹಗಳನ್ನೂ ಕೊಟ್ಟನು.

ಬಹದ್ದೂರ ತಲೆಮರೆಸಿಕೊಂಡು ಹೋದುದನ್ನು ಕೇಳಿದ ಸುರಿತಾಳ ಸಿಟ್ಟಿಗೆದ್ದು, ಚರರನ್ನು ಕಳಿಸಿದ. ಅವರು ಅಂಗ, ಕಳಿಂಗ, ಕಾಶ್ಮೀರ, ಬರ್ಬರ, ಬಂಗಾಳ, ತೆಲುಗು, ಕಾಂಬೋಜ ದೇಶಗಳನ್ನು ಸುತ್ತಿ, ಕರ್ನಾಟಕದ ಗುತ್ತಿಗೆ ಬಂದು, ಅವನು ಕುಮ್ಮಟದಲ್ಲಿರುವುದನ್ನು ಜಗದಪ್ಪನಿಂದ ತಿಳಿದುಕೊಂಡರು. ಸುದ್ದಿ ತಿಳಿದ ಸುರಿತಾಳ, ಅವನನ್ನು ಹಿಡಿತರಲು ನೇಮಿಖಾನನನ್ನು ದಂಡಿನೊಂದಿಗೆ ಕಳಿಸಿದನು. ರಾಮನನ್ನು ಜೀವ ಸಹಿತ ತರಲು ಬಾಬಮ್ಮ ಹೇಳಿದಳು. ಆಗ ಅಂಬರಖಾನ, ತುಂಬರಖಾನ, ಅಬ್ದುಲ್, ಶಂಬರಖಾನ್, ಶೇರ್ಖಾನ, ಡೊಂಬಿಸಾಹೇಬ ಖಾನ, ಅಲ್ಲಿಯಖಾನ, ಶಂಭಾರಿಖಾನ, ಜಲ್ಲಿಖಾನ, ಯಕಲಾಸಖಾನ, ಯಕ್ಕಟಿಖಾನ, ಸೈದ್ರಲ್ಲಿ, ಬಕರಿಯ ಖಾನ, ಬಲೆಖಾನ, ಮಕರಂಕಖಾನ, ಮಾಮುದ್ದು ಬಕರಿಯಖಾನ, ಶಕುನಾದಖಾನ, ಬಿಬ್ಬಖಾನ, ಬಿಜ್ಜಾರಿಖಾನ, ಗುಜ್ಜಾರಿಖಾನ, ಮೀರಲ್ಲಿ, ರಾಜಖಾನ, ತುಂಬರಝಾನ, ಲುಙ್ಘಖಾನರೆಲ್ಲ ಒಂದಾದರು. ಎಪ್ಪತ್ತು ಸಾವಿರ ಕುದುರೆ ವಜೀರನಾದ ಎಪ್ಪತ್ತಿಖಾನ, ಕುಪ್ಪಳಿಸುತ ಅರಿಬಲದೊಳು ತೋರುವ ಅಪ್ಪಾಜಿಖಾನ, ಮೂವತ್ತು ಸಾವಿರ ಕುದುರೆ ವಜೀರನಾದ ಮೀರ ಅಬ್ದುಲ್‌ಖಾನ, ಸುರಿತಾಳನ

ಹುಜರಿನಲ್ಲಿರುವ ಮಾವೀ ಹಳದಿಖಾನ, ಐವತ್ತು ಸಾವಿರ ಕುದುರೆ ಮಾಜೀರನಾದ ಸೈದಾಲಖಾನ, ಮೈಜೋಡು, ಸಿಂಗಾಡಿ, ತರ್ಕಾಸ, ಕೈಯಂಬುಗಳ ಸೈದಲಖಾನ, ಅರುವತ್ತು ಸಾವಿರ ಕುದುರೆ ವಜೀರನಾದ ತರುವೋಲಿಖಾನ, ಬರುದಲೆ ಬಾಬಾಜಿಖಾನ, ಎಪ್ಪತ್ತು ಸಾವಿರ ಕುದುರೆ ವಜೀರನಾದ ಮಜರಲ್ಲಿ ಖಾನ ಬಂದು ಸೇರಿದರು. ಎಲ್ಲರೂ ಹೊರಟು ಗಂಗಾಸಾಗರಕ್ಕೆ ಬಂದರು. ಭಂಗಿಯ ಹೇರು, ಕಡಲೆ, ಮಿಠಾಯಿ, ಜಾಜಿಕಾಯಿ, ಜಾಪತ್ರೆ, ಬೇಯಿಸಿದ ರೊಟ್ಟಿ, ಅಕ್ಕಿ, ಬೇಳೆ, ಸಕ್ಕರೆ, ಗೋದಿಹಿಟ್ಟು, ತುಪ್ಪದ ಹೇರು ಸಾಗಿದವು. ಹಸಿರು ಕೆಂಪಿನ ಗುಡಿ, ಸಾಳುಪಟ್ಟೆದ ಗುಡಿ, ಹಸುರಂಜಿ ಬಿಳಿದಿನ ಗುಡಿ, ಬಿಸಿಲು ಗುಡಾರ ಸಹಿತ ಹೊರಟು, ಚಿಕ್ಕಡಿಳ್ಳಿ (ದೇವಗಿರಿ) ಮಾರ್ಗವಾಗಿ ಮುನ್ನಡೆದರು. ಭಾಗೀರಥಿ ದಾಟಿ ಸುರಿತಾಳಪುಡ, ಧನಂಜಯ ಪಟ್ಟಣ, ವಾರಣಾಸಿ, ಚಿತ್ರಕೂಡ ಮಾರ್ಗವಾಗಿ ಯಮುನೆಯ ತೀರಕ್ಕೆ ಬಂದರು. ಸೊಲ್ಲಾಪುರದಿಂದ ವಿಜಾಪುರಕ್ಕೆ ಬಂದುನಿಂತರು. ಪುಗುದಿಯಖಾನನನ್ನು ಐದು ಜನ ಕುದುರೆ ಚರರೊಂದಿಗೆ ಕುಮ್ಮಟಕ್ಕೆ ನೇಮಿ ಕಳಿಸಿದನು. “ದುಂಡು ಮಿರಜಿ ವರೆಗೆ ಬಂದಿದೆ, ಒಪ್ಪಂದ ಮಾಡಿಕೊಳ್ಳಬೇಕೆಂದು” ಕಂಪಿಲನಿಗೆ ಚರರು ಹೇಳಿದರು. ‘ಕುರಿಯಟ್ಟಿಯ ಹೊಕ್ಕರೆ ಕುರುಬ ಕೊಡನು ತನ್ನ ಮೊರೆ ಹೊಕ್ಕ ಪೋರನ’. ಹೀಗಿರುವಾಗ ನಾನು ಬಾಹದೂರರನ್ನು ಬಿಟ್ಟುಕೊಡಲಾರೆ, ಎಂದು ರಾಮಯ್ಯ ಹೇಳಿ ಚರರನ್ನು ಮರಳಿಸಿದ.

ತಂದೆಯಿಂದ ಒಂದು ಬಿಂದಿಗೆ ಹೊನ್ನಪಡೆದು ಎಲ್ಲರಿಗೂ ಹಂಚಿ, ರಾಮಯ್ಯ ಯುದ್ಧಕ್ಕೆ ಸಿದ್ಧನಾದ. ರಾಮನ ಸಿಮೆ ಗಡಿವಾಡಕ್ಕೆ ನೇಮಿಯ ದಂಡು ಬಂದಿತು. ಅಲ್ಲಿಂದ ಯುದ್ಧವಾಡುತ್ತಲೇ ಕುಮ್ಮಟವನ್ನು ಸಾರಿತು. ಮುಖ್ಯ ದಂಡು ಮಿರಜೆ, ತೊರಗಲ್ಲು, ಬದಾಮಿ, ನರಗುಂದ ನದಿಮಾರ್ಗವಾಗಿ ಕುಮ್ಮಟವನ್ನು ತಲುಪಿತು. ಮಾವ ಗುತ್ತಿ ಜಗದಪ್ಪ ಸೈನ್ಯ ಸಹಾಯ ಕಳಿಸುವುದಾಗಿ ರಾಮನಿಗೆ ಹೇಳಿದ. ಸುರಿತಾಳನೊಂದಿಗೆ ಬಳಕೆಯಾಡುವ ನಿಮ್ಮ ನೆರವು ನ್ಯಾಯ ಸಮ್ಮತವಲ್ಲವೆಂದು ರಾಮ ಉತ್ತರ ಕಳಿಸಿದ.

**ಸಂಧಿ:೧೧**

ನೇಮಿಯ ದಂಡು ಕಮ್ಮಟವನ್ನು ಮುತ್ತಿತು. ಮರಬಿಲ್ಲು, ಕತ್ತಿ, ಈಟಿ, ಬಾಣ, ಪೆಟ್ಟಿಲು, ಬರುಚಿ, ಕಠಾರಿ, ಕೈಯಂಬು, ಆನೆ, ಕುದುರೆ, ಕಾಲ್ಬಲದೊಂದಿಗೆ ರಾಮ ಯುದ್ಧಕ್ಕೆ ಸಿದ್ಧನಾದ. ಚಾಮರಾಯನ ಇಬ್ಬರು ಮಕ್ಕಳು ವೈರಿಯ ದಾರಿಕಟ್ಟಿದರು. ಗುನುಗುನು ಮುನ್ನೂರು ಸೈನಿಕರು, ಹನ್ನೊಂದು ಆನೆಗಳನ್ನು ಸೆರೆಹಿಡಿದು, ರಾಮನಿಗೆ ಒಪ್ಪಿಸಿದ. ಗಡಿಯ ಕಾವಲ ಕಾಯುವ ಕಾಟನಾಯಕ ಕಡೆಯಕಲ್ಲ ಹತ್ತಿರ ವೈರಿಗಳನ್ನು ಎದುರಿಸಿ, ಕುದುರೆಗಳನ್ನು ಸೆರೆಹಿಡಿದು, ರಾಮನಿಗೆ ಒಪ್ಪಿಸಿದ. ಮಲೆಯ ಕಾವಲ ಕಾಯುವ ಹೊಲೆಯರ ಹೊನ್ನುಗ ಕೋಡುಗಲ್ಲನ್ನೇರಿ ವೈರಿಗಳನ್ನು ಕೊಂದು, ಆನೆಯ ಕುದುರೆ ಸೆರೆಹಿಡಿದು, ರಾಮಯ್ಯನಿಗೆ ತುರುಕರನ್ನು ಬೆದರಿಸಿ, ಓಡಿದಿರ. ೯೦ ಕುದುರೆ ಹಿಡಿತಂದು ರಾಮಯ್ಯನಿಗೆ ಒಪ್ಪಿಸಿದ. ಮಾಚನು ಗೊಂದಿಯ ಕಣಿವೆಯಲ್ಲಿ ವೈರಿಗಳನ್ನು ಕೊಂದು, ಇನ್ನೂರು ಕುದುರೆಗಳನ್ನು ಸೆರೆಹಿಡಿದು ತಂದು, ಒಪ್ಪಿಸಿದ. ಗುಜ್ಜಲ ಓಬನೂ ಇಲ್ಲಿ ನೆರವಾದ. ಎಮ್ಮೆಗುಡ್ಡಕ್ಕೆ ಬಂದ ವೈರಿಗಳನ್ನು ಕೊಲ್ಲಲಾಯಿತು. ಮನ್ನಾಲ ಮಾಚ, ಒಕ್ಕಲಿಗರ ಮುದ್ದ ಹೋರಾಡಿದರು. ಆನೆಯಕಲ್ಲಿನ ಹತ್ತಿರ ಅಡಗಿ, ಮೀನಿಗರ ಲಕ್ಕ ತುರುಕರನ್ನು ತುಂಡರಿಸಿದ. ರಕ್ಕಸಮಾದ, ಬುಕ್ಕನ ಪಾಲ, ಮಾದಿಗರ ಹಂಪ, ಕೋಟಿಗರ ದ್ಯಾವ, ಆದವನ್ನಿಯ ಗಿರಿಯ ಸೇರಿ ಅಸಂಖ್ಯಾತ ವೈರಿಗಳನ್ನು ಕೊಂದರು. ೩೦೦ ಕುದುರೆ, ೩೦ ಆನೆ, ೧೧ ಜನ ರಾವುತರು ಸೆರೆಸಿಕ್ಕರು. ಗೋದಿಕಣಿವೆ ಕಟ್ಟಿ, ತಮ್ಮ ಸೈನ್ಯವನ್ನು ವೈರಿಗಳು ನಾಶಗೊಳಿಸಿದ್ದಕ್ಕಾಗಿ ನೇಮಿ ಚಿಂತಿಸಿದ.

ಮುಂಜಾನೆ ರಾಮ ಬೊಲ್ಲನಲ್ಲಿಗೆ ಬಂದು, ಪೂಜಿಸಿ, ಸಜ್ಜುಗೊಳಿಸಿದ, ಬೈಚಪ್ಪನ ಮಕ್ಕಳನ್ನು ಕರೆಸಿದ. ದೇವಿಶೆಟ್ಟಿಯಲಿಂದ, ಬೇವಿನ ಸಿಂಗ, ಕೋಟಿಗರ ದ್ಯಾವ, ಮಾವ ಮಂಚಣ್ಣ, ಬಾದುರಖಾನ, ಮಹಿಮೆಯಖಾನ, ಬಾಣದ ಬಸವ, ಆದವನ್ನಿಯ ಅರಸು ಮಕ್ಕಳು, ಬಾದಾಮಿ ಬಸವರಾವುತರನ್ನು ನೆರೆಸಿ, ರಾಮಯ್ಯ ಸೈನ್ಯದೊಂದಿಗೆ ಮಾವಿನ ಮರದ ಹತ್ತಿರ ಹೋದ. ಅತ್ತ ಸುರಿತಾಳನೂ ದಂಡು ಸಿದ್ಧಪಡಿಸಿದ. ಎಲ್ಲರೂ ಬಗಲಿಗೆ ರೊಟ್ಟಿಕಟ್ಟಿ ಹೊರಟರು. ಗುಡ್ಡಕ್ಕೆ ಮಂಜು ಮುಸುಕುವಂತೆ ಸೈನ್ಯವನ್ನು ಮುಸುಕಿದರು. ಕಲ್ಲುಕೋಟೆಯ ಚಿಕ್ಕ. ಕಾಮಗೇತಿಯ ತಿಮ್ಮ, ಜಿಲ್ಲಿಬಿಲ್ಲಿನ ಬುಕ್ಕಿನಾಯ್ಕ ಸೇರಿ ರಹುಡೆಖಾನನನ್ನು ಕೆಡವಿದರು. ಸಂಜೆಯಾಯಿತು. ಬಾದುರಖಾನ ಸೈನ್ಯದೊಂದಿಗೆ ಚೋರಗಂಡಿ ಇಳಿದು, ನೇಮಿಖಾನನ ಡೇರಿ ಮುತ್ತಿ, ನಾಶಮಾಡಿದ. ಮುಂಜಾನೆ ಮತ್ತೆ ನೇಮಿಖಾನನ ಸೈನ್ಯ ಕುಮ್ಮಟವನ್ನು ಮುತ್ತಿ ಹೊರಪೇಟೆ ಲೂಟಿ ಮಾಡಿತು. ಬಳಿಕ ಒಳ ಬೀದಿಗೆ ಇಳಿದು, ಬೇಡ ಪಡೆಯನ್ನು ನಾಶಪಾಡಿತು. ಆಗ ಸ್ವತಃ ರಾಮನೇ ‘ಮಾಗಿದ ಹಣ್ಣಿಗೆ ಕೋಲು ಸೆಳೆಗಳೇಕೆ’ ಎನ್ನುತ್ತ, ತನ್ನ ಮಂದಿಗೆ ಹರಿಯಲದೇವಿ ಕೈಯಿಂದ ಊಟ ಮಾಡಿಸಿದ. ‘ಸುರಿತಾಳ

ನೇಮಿಯ ಗಂಡ'ನೆಂಬ ಕೊರಳ ಪದಕ, 'ಧರೆಯೊಳಗುಳ್ಳ ರಾಯರಗಂಡ' ನೆಂಬ ಬೆರಳ ಹೊನ್ನುಂಗುರ, 'ಉತ್ತುಂಗರಾಯನ ಗಂಡ'ನೆಂಬ ಮುತ್ತಿನ ಚೌಕುಳಿ, 'ಮುಂಗುಲಿರಾಯನ ಗಂಡ'ನೆಂಬ ಉಂಗುರ-ಪಚ್ಚೆಕಡಗ, 'ಹುಳಿಯೇರ ಮಾಡಿಗೊಂಡನ ಗಂಡ'ನೆಂಬ ಉಳಿಯ ಸರಪಳಿ ಧರಿಸಿ, ತಾಯಿಗೆ ತಂದೆಗೆ ನಮಿಸಿ, ಬೈಚಪ್ಪನ ಮಕ್ಕಳನ್ನು ಕರೆಯಿಸಿದ, ಬೊಲ್ಲನನ್ನು ತರಿಸಿದ. ಬಾದೂರಖಾನ, ಮಹಿಮೆಖಾನ, ಸಾಧನೆ ಬಸವರಾಜಯ್ಯ, ದೇವಿಶೆಟ್ಟಿಯ ಲಿಂಗ, ಬೇವಿನ ಸಿಂಗಯ್ಯ, ಕೊಳ್ಳಿನಾಗ, ಚಾರಮನ ಮಕ್ಕಳನ್ನು ಕರೆಸಿ, ಸನ್ನೆಗಾಳೆ ಹಿಡಿಸಿದ. ಸೈನ್ಯ ದುರ್ಗವನ್ನಿಳಿದು, ಹೊರಬಾಗಿಲ ದಾಟಿ, ಮುಂದಣ ಬಯಲಿಗೆ ಬಂದಿತು. ಇದನ್ನು ನೋಡಿ ಸುರಿತಾಳನ ಸೈನ್ಯವೂ ಸಜ್ಜಾಯಿತು.

**ಸಂಧಿ:** ೧೧

ರಾಮಯ್ಯ ಗುಡಿಗೆ ಬಂದು ರಾಮೇಶನಿಗೆ ವಂದಿಸಿದ. ಕಾಟಣ್ಣನಿಗೆ ಬೇರೊಂದು ಪೌಜು ಮಾಡಿ, ಅವನನ್ನು ಚಾರಮರಾಜನ ಮಕ್ಕಳು; ಹೊಸಮಲೆದುರ್ಗದ ಹಳೆಯ ಮಂದಿ, ಗಡಿವಾಡದ ಮಂದಿಯೊಂದಿಗೆ ಕಳಿಸಿದ. ತಾನೂ ಒಂದು ಪೌಜ ಮಾಡಿಕೊಂಡು ನಡೆದ. ನಬಿಯಖಾನ ರಣರಂಗದಲ್ಲಿ ಮಡಿದ. ಬೊಲ್ಲ ಎಲ್ಲರನ್ನೂ ತುಳಿದುಹಾಕಿತು. ಮನ್ನೂಲ ಮಾಚ ತಲೆ ತಂದೊಪ್ಪಿಸಿದ. ಬಾಣದ ಬಸವಯ್ಯ ಮನ್ನೂರು ಕುದುರೆ ಕೊಂದ. ಬೂಟಕ ಬೊಮ್ಮಯ್ಯ, ಗುತ್ತಿಯಖಾನ, ಯನುಮಾಲ ಚಿತ್ತ, ಯರಬೇತು ಗಂಗ, ಚುನುಮದ ಚಿಕ್ಕ ತಮ್ಮಗ, ಪೆನುಗೊಂಡೆ ಪಾಪನಾಯಕರೆಲ್ಲ ಸೇರಿ, ರಣಧೂಲಖಾನನನ್ನು ಕೊಂದರು.

ಕಬ್ಬಿಲ ನಾಗ, ಹೆಬ್ಬುಲಿ ಚಿಕ್ಕ ಬೈಯಣ್ಣ, ಅಬ್ಬಯ್ಯನಾಯಕರು ಅಬ್ದುಲಖಾನನನ್ನು ಕೊಂದರು. ಅಸಗೊಡ ಬಸವ, ಅಕ್ಕಸಾಲೆರ ಚಿಕ್ಕ, ಬುಕ್ಕನ ಪಾಲ, ಸಿಂಗ, ಬೆಂಗಳೂರು ಚಿಕ್ಕ, ಗಾಣಿಗ ಬೊಮ್ಮ ಕಾಮಗೇತಿಯ ತಿಮ್ಮ ಒಕ್ಕಲಿಗರ ಮುದ್ದ, ರಕ್ಕಸ ಮಾದ, ನಲ್ಲೂರ ನಲ್ಲ, ನಿಡಿಗಲ್ಲ ಕಾಮ, ಬಿಲ್ಲ ಪೆನ್ನ ದ್ಯಾವ, ಮಾದಿಗ ಹಂಪ, ಹೊಲೆಯರ ಹೊನ್ನುಗರು ನೇಮಿಯ ಸೈನ್ಯವನ್ನು ಮುತ್ತಿದರು. ರಾಮನ ಏಟಿನಿಂದ ಮುಂಗುಲಿಖಾನ ಎರಡು ತುಂಡಾದ. ನೇಮಿಯ ದಂಡು ಜೋಳದ ಸೊಪ್ಪೆ ಹೊಲದೊಳು ಬಿದ್ದಂತೆ ಹಾಳಾಯಿತು. ಭೂತಗಳು ಹೆಣವನ್ನುಂಡು ಕುಣಿದವು. ರಾಮಯ್ಯ ವೈರಿಗಳನ್ನು ತೊರೆಯ ಹತ್ತಿರದ ಬಾದಾಮಿ ತನಕ ಓಡಿಸಿ, ಧರ್ಮಗಹಳೆ ಹಿಡಿಸಿದ. ಮಗನ ವಿಜಯವಾರ್ತೆ ಕೇಳಿ ಕಂಪಿಲ ಹರ್ಷಿತನಾದ. ಹರಿಯಮ್ಮ ಆರತಿ ಬೆಳಗಿದಳು. ಅಕ್ಕ ಮಾರಮ್ಮ ಸಿಂಗಮ್ಮ ಹರಸಿದರು. ಸೋತ ನೇಮಿಖಾನನು ವೀರ ಬಲ್ಲಾಳ, ಮಾರಿಗೊಂಡ, ಓರುಗಲ್ಲರಸು, ಮುಂಗಲಿರಾಯ, ಗುತ್ತಿ ಜಗದಪ್ಪ ಇವರಿಗೆ, ಇನ್ನೊಮ್ಮೆ ನಾವೆಲ್ಲ ಸೇರಿ ರಾಮನನ್ನು ಮುತ್ತುವ ಬಗ್ಗೆ ಪತ್ರ ಬರೆದು, ಚಿಕ್ಕದಿಲ್ಲಿ ಮಾರ್ಗವಾಗಿ ದಿಲ್ಲಿಗೆ ಹೋದ.

**ಸಂಧಿ:**೧೨

ಕಂಪಿಲರಾಯ ಮತ್ತು ರಾಮಯ್ಯ ಹಜಾರದಲ್ಲಿ ಬಂದು ಕುಳಿತು, ಯುದ್ಧದಲ್ಲಿ ಹೋರಾಡಿದವರನ್ನೆಲ್ಲ ಕರೆಸಿದರು. ದೊರೆಮಕ್ಕಳಿಗೆ ಮುರುಡಿಯ ಸರಪಳಿ, ಪದಕ, ರಾವುತರಿಗೆ ಪರಿಪರಿಯ ವಸ್ತ್ರ, ಬಿರುದು ಬಾವಲಿ, ತಂದೆ ಮಕ್ಕಳಿಗೆ ಹೊನ್ನು, ಬಣ್ಣದ ಉಡುಗೊರೆ, ಗಾಯದವರಿಗೆ ಜಾಳಿಗೆ ಹೊನ್ನ, ನಾಯಕವಾಡಿಗಳಿಗೆ ಉಡುಗೊರೆ ನೀಡಿದರು.

ಈ ಸಂದರ್ಭದಲ್ಲಿ ರಾಮನ ಕೀರ್ತಿವಾರ್ತೆ ಕೇಳಿ ಅಸೂಯೆಗೊಂಡ ಹೊಯ್ಸಳ ಬಲ್ಲಾಳರಾಯನು ನೇಮಿಖಾನನ ಪತ್ರದಿಂದ ಪ್ರಚೋದಿತನಾಗಿ, ಯುದ್ಧದ ಯೋಚನೆ ಮಾಡಿದ. ಓರುಗಲ್ಲಿಗೆ ಹೋಗಿ ವಿವರ ತಿಳಿದುಕೊಂಡು ಬರಲು ಮಂತ್ರಿ ನರಸಿಂಗರಾಯನನ್ನು ಕಳಿಸಿದ. ಸುದ್ದಿ ತಿಳಿದುಕೊಂಡು ಬಂದು ಬಲ್ಲಾಳನಿಗೆ ವಿವರ ಒಪ್ಪಿಸಿದರು. ಬಲ್ಲಾಳ ಮಲೆಯಾಳ-ಕೊಂಕಣ ರಾಯರು, ಓರಗಲ್ಲ ಪ್ರತಾಪರುದ್ರ ಸೈನ್ಯಸಮೇತ ಬಂದರು. ಮುಂಗುಲಿರಾಯನ ಮಗ ಸಿಂಗಯ್ಯನೂ ಇವರನ್ನು ಕೂಡಿದ. ರಾಮನ ಸೀಮೆಯನ್ನು ಸುಡುತ್ತ ಮುಂದುವರಿದು, ಗಡಿಯನ್ನು ಮುತ್ತಿದರು. ಗಡಿದುರ್ಗದಲ್ಲಿದ್ದ ಕಾಟ ರಾಮನಿಗೆ ವಂದಿಸಿದ. ಬೈಚಪ್ಪ, ಮಂಚಣ್ಣ, ಚೇರಮರಾಯನ ಮಕ್ಕಳು, ಹಂಪರಾಜ, ಕಂಪರಾಯ, ಕಾಟಣ್ಣ ಬಂದು ಸೇರಿದರು. ಪೂಜೆ ಮಾಡಿ ಬೊಲ್ಲನನೇರಿ ಪ್ರಯಾಣ ಬೆಳಗಿಸಿದರು. ಕಾಟಣ್ಣನಿಗೆ ಒಂದು ಪೌಜನ್ನು ರೂಪಿಸಿಕೊಡಲಾಯಿತು. ನಾಲ್ಕು ಬಗೆಯ ವೈರಿಗಳಿದ್ದ ನರಗುಂದ ಹೊಳೆಯ ಹತ್ತಿರ ಬಂದನು. ಕಳ್ಳಬಂಟ (ಗುಪ್ತಚಾರ) ರನ್ನು ಸುದ್ದಿ ಸಂಗ್ರಹಕ್ಕಾಗಿ ಕಳಿಸಲಾಯಿತು. ಮುನವಳ್ಳಿಯಲ್ಲಿ ಗುಜ್ಜಲೋಬ ಮೊದಲಾದವರನ್ನು ಕರೆಯಿಸಿ. ಅಲ್ಲಿಂದ ದಂಡು ಮುಂದೆ ಸಾಗಿತು. ಬಲಕ್ಕೆ ಬಹದ್ದೂರ, ಎಡಕ್ಕೆ ಕಾಟಣ್ಣ, ಕಡೆಯಲ್ಲಿ ಚಾರಮರಾಜನ ಮಕ್ಕಳು, ಮುಂದೆ ದೇಮಯ್ಯ ನಡೆದರು. ಯುದ್ಧ

ಆರಂಭವಾಯಿತು. ರಾಮನನ್ನು ಸೆರೆ ಹಿಡಿಯುವ ಬಗ್ಗೆ ಬಲ್ಲಾಳ-ರುದ್ರದೇವ ಮಾತನಾಡಿಕೊಂಡರು. ಅಷ್ಟರಲ್ಲಿ ರಾಮಯ್ಯ ಮಿಸಮಿಲ್ಲಖಾನನನ್ನು ಕೊಂದನು. ರುದ್ರರಾಯರಿಗೆ ಗಾಯವಾಯಿತು. ಸಿಂಗ ಹಿಮ್ಮೆಟ್ಟಿದ, ವೈರಿಗಳು ಸೋತುಹೋದರು. ರಾಮಯ್ಯ ಧರ್ಮಗಹಳೆ ಹಿಡಿಸಿದ. ಹಾನಗಲ್ಲ ಹತ್ತಿರ ಅವನ ದಂಡು ಬೀಡುಬಿಟ್ಟಿತು. ಅಂಜಿದ ಬಲ್ಲಾಳನು ಮಂತ್ರಿ ನರಸಿಂಗನನ್ನು ಮುಂದಿಟ್ಟುಕೊಂಡು, ಒಂದು ಬಿಂದಿಗೆ ಹೊನ್ನು, ಪಚ್ಚೆವರ್ಣದ ಶಾಲು, ಎರಡು ಹಿಡಿತೇಜಿ ಕೊಟ್ಟು ಒಪ್ಪಂದ ಮಾಡಿಕೊಂಡ. ಬಾದೂರಖಾನ, ಭಾವಸಂಗಮ, ದೇವಿಶೆಟ್ಟಿಲಿಂಗ, ಕೊಟಗರ ದ್ಯಾವ ಇವರಿಗೆ ಹುಸಿಗಾಯಗಳಾದವು. ಕಂಪಿಲ ಮಗನನ್ನು ಎದುರುಗೊಂಡ. ಪಂಪಾವಿರೂಪಾಕ್ಷನಿಗೆ ವಂದಿಸಿ, ಕುಮ್ಮಟಕ್ಕೆ ಬಂದರು. ರಾಮೇಶನಿಗೆ ನಮಸ್ಕರಿಸಿದನು. ಹರಿಯಲದೇವಿ ಆರತಿ ಎತ್ತಿದಳು.

**ಸಂಧಿ: ೧೪**

ಕಂಪಿಲರಾಯನೊಂದಿಗೆ ಬೇಟೆಗೆ ಹೋಗದೆ ರಾಮ ಅರಮನೆಯಲ್ಲಿಯೇ ಉಳಿದ. ನೀರಾಟವಾಡಲು ಬಯಸಿ ಹಂಪಿಯ ಹೊಳೆಗೆ ಹಂಪರಾಜ, ಕಂಪರಾಜ, ಸಂಪಿಗೆರೆಯ ಸಿಂಗರಾಜ, ಹಡಪದ ಬೊಲ್ಲಗ, ಗಂಗಯ್ಯ, ಕಾಟಣ್ಣ, ಬೈಚಪ್ಪನ ಮಕ್ಕಳು, ಮಂಚಣ್ಣನ ಮಕ್ಕಳು, ಭಾವಸಂಗಮದೇವ, ಕಾಟನಾಯಕನ ಮಕ್ಕಳು, ದೇವಿಶೆಟ್ಟಿಲಿಂಗ, ಚಾರಮರಾಯನ ಮಕ್ಕಳು, ಸಾರಂಗ, ಗೊಲ್ಲರ ಗುಜ್ಜಯ್ಯರೊಂದಿಗೆ ಬಂದನು. ಎಲ್ಲರೂ ಹರಿಗೋಲನ್ನೇರಿದರು. ಕಾಟಣ್ಣನ ಪರಿವಾರ ಮತ್ತು ರಾಮನ ಪರಿವಾರ ಅಂಡೆ, ಜೀರ್ಕೊಳವಿ ಹಿಡಿದು ಪರಸ್ಪರರ ಮೇಲೆ ನೀರು ತೂರಿ ನಲಿದರು. ಮಲೆನಾಡ ಸೋನೆ ಸುರಿವಂತೆ ನೀರಾಟ ಜರುಗಿತು. ನಂತರ ವಿರೂಪಾಕ್ಷನ ಗುಡಿಗೆ ಬಂದು ಮನಸ್ಕರಿಸಿ, ಅರಮನೆಗೆ ಮರಳಿದರು.

**ಸಂಧಿ:೧೫**

ಹರಿಯಲದೇವಿಯ ವಶದಲ್ಲಿರುವ ಚೆಂಡನ್ನು ತರಬೇಕೆಂದೂ, ನಾವೆಲ್ಲ ಆಡೋಣವೆಂದೂ ಕಾಟಣ್ಣ ರಾಮನಿಗೆ ಹೇಳಿದ. ರಾಮ ಸಿಂಗರಿಸಿಕೊಂಡು ತಾಯಿಯ ಮನೆಗೆ ಬಂದ. ಮಗನ ಆಗಮನ ನೋಡಿ ಹರಿಯಲದೇವಿ ಹಿಗ್ಗಿದಳು. “ನೆತ್ತ, ಪಗಡೆ, ಜೂಜು ಆಡಿದೆವು. ಹೊತ್ತು ಹೋಗುತ್ತಿಲ್ಲ, ಆಡವಾಡಲು ಮುತ್ತಿನ ಚೆಂಡು ಕೊಡು” ಎಂದು ತಾಯಿಯನ್ನು ಕೇಳಿದ. ತಾಯಿಗೆ ಅಸಮಾಧಾನವಾಯಿತು. “ಇದು ಸಾಮಾನ್ಯ ಚೆಂಡಲ್ಲ, ಕೃಷ್ಣ, ಅಭಿಮನ್ಯು, ಮುಮ್ಮಡಿಸಿಂಗ ಇದನ್ನು ಆಡಿ ಕೆಟ್ಟರು. ಆಟ ಸಂದರ್ಭದಲ್ಲಿ ಯುವತಿಯರ ಮನೆಯಲ್ಲಿ ಬಿದ್ದರೆ, ನಿನ್ನ ನಾಶಕ್ಕೆ ಕಾರಣವಾಗುತ್ತದೆ” ಎಂದು ಹೇಳಿದಳು. “ಪರಸ್ತ್ರೀಯರು ನಿನ್ನ ಸಮಾನ, ಸೋದರಿ ಮಾರಮ್ಮ ಸಿಂಗಮ್ಮರ ಸಮಾನ” ಎಂದು ರಾಮಯ್ಯ ಉತ್ತರಿಸಿದ.

‘ಬೇಡ, ರಾಮುಗ ನಿನ್ನ ನೋಡಿದ ಸತಿಯರು ಮಾಡರು ಮನೆಗೆಲಸಗಳ, ಊಡೆಉ ತಮ್ಮ ಕಂದಗೆ ಮೊಲೆಹಾಲನು, ಕೊಡರು ತಮ್ಮ ಪುರುಷರ’ ಎಂದು ಹೇಳಿದಳು. ಕೃತಯುಗದಲ್ಲಿ ಇದು ಕಾರ್ಯವೀರ್ಯನನ್ನು, ದ್ವಾಪರದಲ್ಲಿ ದ್ರೌಪದಿಯನ್ನು ಅಡವಿಗೆ ಅಟ್ಟಿತು. ಕೀಚಕನನ್ನು ಕೊಲ್ಲಿಸಿತು. ಹರಿಶ್ಚಂದ್ರನನ್ನು ರಾಜ್ಯ ಬಿಡಿಸಿತು- ಏನೆಲ್ಲ ಹೇಳಿದರೂ ಕೇಳದೆ ಕಾಡಿದ. ಬೇಸತ್ತ ಹರಿಯಲದೇವಿ, ಪ್ರಾಣಬಲಿಕೊಟ್ಟು ತೆಗೆದುಕೊಂಡು ಹೋಗೆಂದಳು. ಬಲಿ ಕೊಟ್ಟು ಒಯ್ಯುವಾಗ ಮಗನಿಂದ ‘ಪರನಾರಿ ಸೋದರ’ ಪ್ರತಿಜ್ಞೆ ಮಾಡಿಸಿದಳು.

ಸ್ನೇಹಿತರೆಲ್ಲ ಸೇರಿ ಆಟಕ್ಕೆ ಆಳು ಹಂಚಿದರು. ಗಾಣಿಗ ಬೆಮ್ಮ, ಕುಂಬಾರ ಸೋಮ, ಇರುಪ, ನೆಲಗತ್ತಿಕಾಮ, ಭಟ್ಟರ ಭೀಮ, ಚಿಕ್ಕಯ್ಯ, ಒಕ್ಕಲಿಗರ ಮುದ್ದ, ಅಕ್ಕಸಾಲೆಯ ಚಿಕ್ಕ, ಮೀನಿಗ ಬೊಮ್ಮ, ಕೊಳ್ಳಿಯ ನಾಗ, ಯನುಮಲ ಚಿತ್ತ, ಯರಬೇತು ಗಂಗ, ಮನ್ನೂಲ ಚೆನ್ನ, ಬೂಟಕ ಬೊಮ್ಮ, ಮಿಡಿಗೇಸಿ ನಲ್ಲ, ರವಳಿಯ ಹನುಮ, ಅರಸು ಮಕ್ಕಳಾದ ಹಂಪರಾಜ, ಕಂಪರಾಜ, ಮನ್ನಾಲ ಮಾಚ, ಮುದಕೊಂಡ ಲೋಬ, ಕೊಟಿಗರ ದೇವ, ಬುಕ್ಕನಪಾಲ, ಹೊಳಕೆಯ ಕೆಂಚ, ರಕ್ಕಸ ಚಿನುಮಾದ, ಬಾದೂರಖಾನ, ಮಹಿಮೆಯ ಖಾನ, ಸಾಧನೆ ಬಸವಯ್ಯ, ಮಣಿಹದ ಮಲ್ಲ, ಕರಿಸಿದ್ದ, ಹಳದಿಯ ತಿಪ್ಪ, ಬಾನಿಯ ಮಲ್ಲ, ರಕ್ಕಸ ಮಾದ, ಇವರೆಲ್ಲ ಸೇರಿದರು. ರತ್ನಾಜಿ ಅರಮನೆಯ ಬಯಲಿಗೆ ಹೋದರು. ಚಿನ್ನದ ಏಳು ಲೆಗ್ಗೆ, ಬೆಳ್ಳಿಯ ಏಳು ಲೆಗ್ಗೆ ಹೂಡಿದರು.

ಚಂಡಿನಾಟ ನೋಡಲು ಸೂಳೆ ಹಂಪಾಜಿ, ಹೊಳೆಹೊನ್ನೂರ ರಾಮಾಜಿ, ಗುರುಮುಕುಂಡದ ಸೋಮಿ, ಇಕ್ಕೇರಿ ದುರ್ಗಾಯಿ, ಪಾಳೇದ ಪಾಪಾಜಿ, ಹಳೆಯ ಬೀಡಿದ ಹಂಪಾಜಿ, ಬಾಣವಾರದ ಭದ್ರಿ, ಕೊಟ್ಟೂರ ಕಾಮಾಜಿ, ಬಾದಾಮಿ ಬಸವಿ, ಕುಂದುರ್ಪೆ ಕೊಂಡಾಜಿ, ಬೇಲೂರ ಬೆನಕಾಜಿ, ಆದವನ್ನಿಯ ನಾಗಾಜಿ, ಕುಂಭಕೋಣದ ಮೀರಾಜಿ, ಚೆನ್ನಪಟ್ಟಣದ ಚೆನ್ನಾಗಿ, ಚಂದ್ರಗಿರಿಯ ಚೆನ್ನೆ, ಹೊಸಪ್ಯಾಟೆ ಜಂಬುಲಿಂಗಿ, ವಸವಂತಪುರದ ಮಲ್ಲಾಜಿ-ಈ ಸೂಳೆಯರೆಲ್ಲ ಅಲ್ಲಿ ನೆರೆದರು.

**ಸಂಧಿ: ೧೬**

ಚಂಡಿನಾಟದ ಗದ್ದಲ, ಕೂಗು ರಾಜಧಾನಿಯಲ್ಲಿ ಪ್ರತಿಧ್ವನಿಸಿತು. ರತ್ನಾಜಿಯ ಸೂಚನೆಯಂತೆ ಸಂಗಿ ಹೊರ ಬಂದು ನೋಡಿ, ಒಡತಿಗೆ ರಾಮನ ಆಟದ ಸುದ್ದಿ ಹೇಳಿದಳು. ಹೊರ ಬಂದು ಅವನನ್ನು ನೋಡಬೇಕೆಂದು ರತ್ನಾಜಿ ಸಿಂಗಾರವಾಗತೊಡಗಿದಳು. ಕಾಲುಂಗುರ, ಪಿಲ್ಲೆ, ಹೊನ್ನುಡಿದಾರ, ತೋಳ ಬಾಪುರಿ, ಭುಜಕೀರ್ತಿ, ಸಾಲ ಮುತ್ತಿನ ಸರ, ಕೊರಳ ಚಿಂತಾಕ, ಬೆರಳ ಹೊನ್ನುಂಗುರ, ಕೊರಳ ಮುತ್ತಿನ ಹಾರ, ಹರಳ ತೆತ್ತಿಸಿದ ಸೂಡಂಗ, ಚಿನ್ನದ ಸರ, ಹೊನ್ನ ಹೂವು, ಮುತ್ತಿನ ಕೊಪ್ಪ ಧರಿಸಿದಳು.

ಬಾಚಿ ಬೈತಿಲ ತೆಗೆದು, ನುಣ್ಣನೆ ತಿರುಬನಿಕ್ಕಿದಳು. ಕಣ್ಣ ಕಪ್ಪನೆ ಹಚ್ಚಿ, ಕಸ್ತೂರಿ ತಿಲಕವನ್ನು ಹಣೆಗೆ ಹಚ್ಚಿಕೊಂಡಳು, ಉಟ್ಟ ಉಡುಗೆ, ಕಟ್ಟಿದ ಸರಪಳಿ ಗೆಜ್ಜೆ, ತೊಟ್ಟ ಮುತ್ತಿನ ರವಿಕೆ, ಇಟ್ಟ ಮೂಗುತಿಗಳಿಂದ ಚೆಂದವಾದಳು. ಹಣೆಯಲ್ಲಿ ಮುತ್ತಿನ ಬೊಟ್ಟು ಇಟ್ಟುಕೊಂಡಳು. ಕಸ್ತೂರಿ ತಿಲಕ ಹಣೆಗೆ ಹಚ್ಚಿಕೊಂಡು, ಪಟ್ಟಾವಳಿ ಉಟ್ಟಳು. ಕಟ್ಟಿದ ನಿಲುಗನ್ನಡಿಯ ಮುಂದೆ ನಿಂತು ಕಟ್ಟಾಳು ರಾಮನಿಗೆ ತಾನು ತಕ್ಕವಳು-ಎಂದು ನಕ್ಕಳು. ಹೀಗೆ ಸಿಂಗರವಾಗಿ ನಾಗಿ, ಸಂಗಿರೊಡನೆ ಉಪ್ಪರಿಗೆ ಏರಿದಳು. ರಾಮನನ್ನು ವಶಮಾಡಿಕೊಳ್ಳುವುದರ ಸಲುವಾಗಿ ಚಿತ್ತಜ ಜಯತು, ತ್ರಿಯಂಬುಕ ಜಯತು-ಎಂದು ಪ್ರಾರ್ಥಿಸಿದಳು. ರಾಮ ವಶವಾದರೆ ಊರ ಮುಂದಣ ಮಾರಮ್ಮಗೆ ಮುನ್ನೂರು ಕೋಣ ಬಲಿಕೊಡುವೆ, ಬೋನಗುರಿಯ ಹೊಯ್ಸುವೆ, ಹಾರುಗೋಳಿಯ ಬಿಡುವೆ, ಗುತ್ತಿಯ ಎಲ್ಲಮ್ಮಗೆ ಹಬ್ಬವ ಮಾಡಿ ಕೋಣ ಬಲಿಕೊಟ್ಟು ಮೂರು ಮಾಣಿಕದ ಆರತಿ ಎತ್ತುವೆ. ಹುಲಿಗೆ ಹೊಸೂರಮ್ಮನಿಗೆ ಹಿಡಿಹೊನ್ನ ಕಾಣಿಕೆ ನೋಡುವೆ, ಒಪ್ಪತ್ತಿನೂಟ ಹಿಡಿಯುವೆ. ಕಂಪಲಿಸ್ವಾಮಿಗೆ ಮುಡುಪಿನ ಮುಂದಲೆ ಕೊಡುವೆ. ರಾಮನ ಸಂಭೋಗದಿಂದ ಒಂದು ಕೂಸು ಹುಟ್ಟಿದರೆ ತಿರುಮಲದೇವನಿಗೆ ತಿರುಮುಡಿ ಮಾಡಿಸುವೆ. ಹುಲಿಗೆರೆಯರಸ್ಥ ಸೋಮನಾಥನಿಗೆ ಸೋಮವಾರ ಉಪವಾಸವಿರುವೆ. ಶ್ರೀಶೈಲಕ್ಕೆ ಬಂಗಾರದ ಕಳಸ ಕೊಡುವೆ, ಹೊನ್ನ ಕಳಸ ಅರ್ಪಿಸುವುದಲ್ಲದೆ ಉಪ್ಪರಿಗೆ ಕಟ್ಟಿಸುವೆ, ಎಪ್ಪತ್ತೇಳು ಕಪಿಲೆಗಳನ್ನು ಬಿಡುವೆ. ಜಂಪೆಯಾಳ್ದನಿಗೆ ಹಣ್ಣುಹಂಪಲ ಸೇವೆ ಮಾಡುವೆ. ಹೊಸಪೇಟೆಯ ಜಂಬುಲಿಂಗಗೆ ವಸಂತವನ್ನಾಡುವೆ. ನಂದಿಗೆ ಹೊಕ್ಕಳುಗಂಟೆ- ಸರಪಳಿ ಸಲ್ಲಿಸುವೆ. ಗಂಗಾಧರನಿಗೆ ತಿಂಳ ಉಪವಾಸವಿದ್ದು ಮಂಗಳಾರತಿ, ಕಪಿನಿಪತಿ ನಂಜುಂಡಗೆ ಕರ್ಪೂರದಾರತಿ ಎತ್ತುವೆ- ಎಂದು ಹರಕೆ ಹೊತ್ತು. 'ಕಂಪಿಲರಾಯ, ಈ ಹರಕೆಗಳಿಗೆ ಕಾರಣ ಕೇಳಿದರೆ ಏನೆಂದು ಉತ್ತರ ಕೊಡುವೆ?' ಎಂದು ಸಂಗಿ ಪ್ರಶ್ನಿಸಿದಳು. 'ನೀನು ಬೇಟೆಯಿಂದ ಮರಳಿ ಬರಲು ತಡಮಾಡಿದ ಕಾರಣ, ಹಿಂಸ್ರ ಪ್ರಾಣಿಗಳು ನಿನಗೆ ಅಪಾಯ ಮಾಡದಿರಲೆಂದು ಹರಕೆ ಹೊತ್ತನೆಂದು ಉತ್ತರಿಸುತ್ತೇನೆ' ಎಂದಳು ರತ್ನಾಜಿ.

ಹಡಪದ ಸಂಗಿಯೊಡನೆ ರತ್ನಾಜಿ ಏಳುನೆಲೆಯ ಉಪ್ಪರಿಗೆ ಹತ್ತಿದಳು. ಒಡೆಯರಾರು, ಬಂಟರಾರು ಎಂಬುದು ಗೊತ್ತಾಗದಷ್ಟು ಆಟಗಾರರ ದಟ್ಟಣೆ ಇದ್ದಿತು. ಈಗ ರತ್ನಾಜಿ ಅವನಾರು? ಇವನಾರು? ಎಂದು ಕೇಳುತ್ತ ಹೋದಳು. ಇದಕ್ಕೆ ಉತ್ತರವಾಗಿ ಸಂಗಿ ತಳವಾರ ಹರಿಯ, ಬಾದೂರಖಾನ, ಕಾವಳಿ ಲಿಂಗ, ಗುಜ್ಜಲ ಹರಿಯ, ಕುಂಬಾರ ಕಲ್ಲ, ಒಕ್ಕಲಿಗರ ಮುದ್ದ, ಕಬ್ಬಲಿಗರ ನಾಗ, ಜಂಗಮರ ಬಸವ, ಮಡಿವಾಳ ಮಾಚ, ಅಸಗೋಡ ಬಸವ, ಕಂಚಗಾರ ಕಾಳ, ಗಂಡಿಕೋಟೆ ಗಂಗರಾಜ, ಪಾಂಡುರಂಗದೇಶದ ರಾಯ, ತುಳುವರ ಗಿರಿಯ, ಮುಚ್ಚಾಲ ಹನುಮ, ತೊರಗಲ್ಲ ಬಾದಾಮಿ-ಅರಸು, ಮಿಡಿಗೇಸಿ ನಾಗ, ಹೊಳಲಕೆರೆಯ ಸಂಗ, ಚಂದ್ರಗಿರಿಯ ಸಿದ್ಧ, ಪಂಚಮರ ಬಸವ, ಉದ್ದಗಿರಿಯ ಸಿದ್ಧರಾಜನ ಮಗ, ಪೆನಗುಂಡೆಯ ಸೋಮ, ಏಕಾಂಗಿ ವೀರ ಬಸವ, ರಾವುತ ಸಿದ್ಧ, ಅಕಳಂಕ ಸಿದ್ಧ, ಮಿಡಿಗೇಸಿ ನಾಗ, ನಿಡುಗಲ್ಲ ಕಾಮ, ಕುಂದುರ್ಪೆ ತಮ್ಮ, ರಾಯದುರ್ಗದ ವೀರ, ಬೋಗಾರ ಮಲ್ಲ, ಕುಂಭಕೋಣೆಯ ಕಲ್ಲ, ಉತ್ಸಂಗಿದುರ್ಗದ ಪಡುವಲದೇಶದ ಮತ್ತ ಕೋಕಿಲ, ಗಡಿಕೋಟೆಯ ದೇವ, ಗೊಲ್ಲರ ಗುಜ್ಜಯ್ಯ, ಮಾದಿಗ ಹಂಪ, ದಳಧೂಳಿ ಮಾದ, ಮನ್ನೂಲ ಮಾಚ, ಕುರುಗೋಡ ಸಂಗಮ, ಚಿನ್ಮೂಲಗಿರಿ ದೊಡ್ಡ, ಮೀನಿಗರ ಲಕ್ಕ, ಉಚ್ಚಂಗಿದುರ್ಗದ ಪಾಲ, ವಸದಾರಿ ಬಸವ, ತೊರಗಲ್ಲ ಜಾಯಿಶೆಟ್ಟಿ ಬಸವ, ಬಳ್ಳಾರಿ ಹನುಮ, ದೇವಿಶೆಟ್ಟಿ ಲಿಂಗ, ಸಾಲ್ಗುಂದಿ ಚೆನ್ನ, ಕಂಪಿಲನ ಅಳಿಯ, ಕಾಟಣ್ಣ, ಮಂತ್ರಿ ಬೈಚಪ್ಪನ ಮಗ, ಕಲ್ಲಕೋಟೆಯ

ಚಿತ್ತ, ಕೊಪ್ಪಳದ ತಿಮ್ಮ -ಎಂದು ಪರಿಚಯಿಸಿದಳು. ಇದರಿಂದ ಬೇಸತ್ತ ರತ್ನಾಜಿ 'ಬೇರೆಯವರನ್ನು ತೋರಬೇಡ, ಸಾಕು, ನನ್ನ ಸೊರೆಗೊಂಬ ರಾಮನನ್ನು ತೋರು, ನಿನ್ನ ಬಾಯಿತುಂಬ ಬಂಗಾರ ಕೊಡುವೆ' ಎಂದಳು. ಸಂಗಿ, ರಾಮನನ್ನು ತೋರಿಸುತ್ತಲೇ ರತ್ನಿಯಲ್ಲಿ ಕಾಮ ಕೆರಳಿತು. 'ರಾಮನು ಸ್ತ್ರೀಯರ ತನುದುರ್ಗವ ಇರದೆ ಮುತ್ತಿಗೆ ಮಾಡಬಂದ' ಎಂದು ಮನಸ್ಸಿನಲ್ಲಿ ನುಡಿದಳು. ಕನ್ನಡ ಜಾಣ ರಾಮನ ಕಂಡು ಮನಸೋತಳು, ವಿರಹದಲ್ಲಿ ಬುಡಬುಡನೆ ಹೊರಳಿದಳು, ಭೂಮಿಯಲ್ಲಿ ಉರುಳಿದಳು. ಆಗ ಸಂಗಿ ನೀರು ಸಿಂಪಡಿಸಿ ರತ್ನಿಗೆ ಎಚ್ಚರ ಹುಟ್ಟುವಂತೆ ಮಾಡಿದಳು. ಎದ್ದು ನಿಲ್ಲಿಸಿ ರಾಮನನ್ನು ಮತ್ತೆ ತೋರಿಸಿದಳು. 'ಕಪ್ಪು ಹತ್ತಿದ ಮೀಸೆ, ಕಸ್ತೂರಿ ತಿಲಕ, ಬಲ್ಪಿನ ಚಿಮ್ಮುರಿ ಸುತ್ತಿ'ದ್ದ ರಾಮನನ್ನು ನೋಡಿದಳು. 'ಒತ್ತಿ ಬರುವ ಮೀಸೆ, ಕನ್ನೆ ಕುಮರ ಗಡ್ಡ'ದ ರಾಮನನ್ನು ಬಯಸಿದಳು.

ಕಾಟಣ್ಣ ಚೆಂಡು ಎಸೆಯಲಾಗಿ ಸರಗೋಲು ಮುರಿದು, ಲೆಗ್ಗೆಯ ಹಲ್ಲೆ ನುಗ್ಗೆದ್ದು ಹೋಯಿತು. 'ಹೊಡಿರೋ ಲೆಗ್ಗೆಯ, ನೀಡಿರೋ ಚೆಂಡನು. ಓಡಿರೋ ನಾಲ್ಕು ದಿಕ್ಕಿನಲಿ' ಎಂಬ ಧ್ವನಿ ಎಲ್ಲೆಡೆ ತುಂಬಿಕೊಂಡಿತು. 'ರಾಮನಿಡಲು ಚೆಂಡು ಭೂಮಿಯಾಕಾಶಕ್ಕೆ ನೆಗೆಯಿತು'. ವಾಯುದೇವ ಅದನ್ನು ರತ್ನಾಜಿ ಅಂಗಳಕ್ಕೆ ಹಾಕಿದ. ರತ್ನಾಜಿ ಉಟ್ಟ ಉಡುಗೆಯೊಂದಿಗೆ ಚೆಂಡಿನ ಮೇಲೆ ಬಿದ್ದು, ಅರಮನೆಯ ಒಳಗೆ ಒಯ್ದು, ಪನ್ನೀರ ಚಿಮುಕಿಸಿ, ಆ ಚೆಂಡು ರಾಮನ ಸಮವೆಂದು ಎದೆಗೆ ಒತ್ತಿಕೊಂಡಳು. ಅದರ ಮೇಲೆ ಬಿದ್ದು ಹೊರಳಾಡಿದಳು, ನಖರೇಖೆ ಒತ್ತಿದಳು, ದಶವಸ್ತ್ರ ಹಾಕಿದಳು. ಎದಿಗೊತ್ತಿ ಬದಿಗೊತ್ತಿಕೊಂಡಳು. ಮುದದಿ ಮುದ್ದಿಸಿ ಮುಂಡಾಡಿದಳು. ಪುನುಗು ಜವಾದಿ ಕಸ್ತೂರಿ ಲೇಪಿಸಿದಳು. ಪಟ್ಟೆ ದೇವಾಂಗ ಸುತ್ತಿ, ಗಂಧ ಕಸ್ತೂರಿ ತಿಲಕವಿಟ್ಟಳು. ಮುತ್ತಿನಾರತಿ ಎತ್ತಿದಳು. ಒಸಗೆ ಪಾಡಿದಳು. ಚಿನ್ನದ ಗದ್ದುಗೆ ಮಾಡಿ, ಮಂಚದ ಮೇಲಿಟ್ಟು ಪೂಜಿಸತೊಡಗಿದಳು. ಹೊರಗೆ ಕಾವಲಿರುವಂತೆ ಸಂಗಿಗೆ ಹೇಳಿದಳು.

**ಸಂಧಿ: ೧೬**

ಚೆಂದು ತರಲು ಕಾಟಣ್ಣನನ್ನು ಕಳಿಸಿದರು. ಅವನು ಹೋಗಿ, ಚೆಂಡನ್ನು ಕೊಡಲು ಸಂಗಿಯನ್ನು ಕೇಳಿದನು. 'ನಾನು ನೋಡಿಯೇ ಇಲ್ಲ' ಎಂದು ಉತ್ತರಿಸಿದಳು. 'ಗಂಡನಿಲ್ಲದ ಅರಮನೆಗೆ ಬಂದವರಾರು?' ಎಂದು ರತ್ನಾಜಿ ನುಡಿದು, ಅವನನ್ನು ನೂಕಿಸಿದಳು. ನಿಮ್ಮೊಂದಿಗೆ ನನ್ನ ಸಖಿಯರು ಆಡಲು ಬಂದಿದ್ದರೆ? ಎಂದು ಪ್ರಶ್ನಿಸಿದಳು. 'ರಾಮನಿಟ್ಟ ಚೆಂಡು' ನೆಗೆದು ಇಲ್ಲಿಗೆ ಬಂದಿತು ಎನ್ನಲು, ರತ್ನಾಜಿ ಶೃಂಗಾರ ತೋಟದಲ್ಲಿ ಹುಡುಕಿದಂತೆ ನಟಿಸಿದಳು. ಮಲ್ಲಿಗೆ, ಪಚ್ಚೆ, ಸಂಪಿಗೆ, ನಿಂಬೆಗಳ ಅಡಿಯಲ್ಲಿ ಸುತ್ತಾಡಿ ಬಂದು ಕಾಟಣ್ಣನಿಗೆ ಉಪಚಾರದ ಮಾತುಗಳನ್ನಾಡಿ, 'ಕಂದನಾದ ರಾಮನನ್ನು ನೋಡುವ ಬಯಕೆಯಾಗಿದೆ. ಕಳಿಸಿಕೊಡು, ಬಂದು ಚೆಂಡನ್ನೊಯ್ಯಲಿ. ಅವನ ಚೆಂಡನ್ನು ನಿನಗೆ ಕೊಟ್ಟರೆ ಇಬ್ಬರಲ್ಲಿ ದ್ವೇಷ ಹುಟ್ಟೀತು' ಎಂದು ತಿಳಿ ಹೇಳಿ, ಕಾಟನನ್ನು ಮರಳಿಸಿದಳು. ಈಗ ಹಳಬನಾದ ಬಲ್ಲುಗನನ್ನು ಕಳುಹಿಸಿದರು. ಅವನಿಗೂ ಅದೇ ಉತ್ತರ ಹೇಳಿದಳು. ಚೆಂಡಲು ತರಲು ರಾಮನೇ ಹೊರಟ. 'ಶೃಂಗಾರವನ್ನು ತೆಗೆ ತಮ್ಮ' ಎಂದು ಕಾಟ ಕೇಳಿದ. ರಾಮ ಹಾರವನ್ನು ತೆಗೆದ, ಹೆಸರುಳ್ಳವರಾಯರಗಂಡ ಬಿರುದಿನ ಕುಸುರಿನ ಪೆಂಡೆಯ ತೆಗೆದ, 'ಭೂಮಿಯೊಳುಳ್ಳ ರಾಯನ ಗಂಡ' ಎಂಬ ಕೊರಳಪದಕ ತೆಗೆದ, 'ಅಷ್ಟದಿಕ್ಕಿನ ರಾಯರ ಗಂಡ' ಎಂಬ ಬಾಪುರಿಯನ್ನು ತೆಗೆದ, 'ಸುತ್ತಣ ರಾಯರ ಗಂಡ'ನೆಂಬ ಸುತ್ತಿದ ಚಿಮ್ಮುರಿ ತೆಗೆದ, 'ಕನ್ನೋಜಿ ರಾಯರಗಂಡ'ನೆಂಬ ಹೊನ್ನುಂಗುರವನ್ನು ತೆಗೆದ, 'ಮನ್ನೆಯ ಮಗಧರಾಯರ ಗಂಡ'ನೆಂಬ ರನ್ನದ ಪದಕವ ತೆಗೆದ, 'ದಂಡೆತ್ತಿಬರುವ ರಾಯರ ಗಂಡ, ಎಂಬ ಕಾಲ ಪೆಂಡೆಯನ್ನು ತೆಗೆದ, ಕಂಠಮಾಲೆ, ದಂಡೆ ಹಾರ, ರನ್ನದ ಕಡಗ, ಚಿನ್ನದ ಸರ, ನಡುವಿನುಡುದಾರ ತೆಗೆದ, 'ಪಡುವಣ ರಾಯರ ಗಂಡ'ನೆಂಬ ತೊಡರು ಪೆಂಡೆಯವನ್ನು ತೆಗೆದ, 'ಗಡಿಯಂಕ ಮನ್ನೆಯರ ಗಂಡ'ನೆಂಬ ಕುಡುಕು ಚೌಕಳಿಯನ್ನು ತೆಗೆದ, 'ಬಂಗಾಳ ರಾಯರ ಗಂಡ'ನೆಂಬ ಬೆರಳುಂಗುರವನ್ನು ತೆಗೆದ, 'ಪಿಂಗಾಳ ರಾಯರ ಗಂಡ'ನೆಂಬ ಅಂಗದಾಭರಣವ ತೆಗೆದ. ಕಾಲೊಳುಲಿವ ಸರಪಳಿಗಳನ್ನೂ ತೆಗೆದುಕೊಟ್ಟು, ಮಂಡೆ ಒತ್ತಿ ಎಣ್ಣೆಗಂಟು ಬಿಗಿದ. ಹೊನ್ನ ನಾಮವನ್ನು ತೆಗೆಯುತ್ತ, ರನ್ನದ ಕಡೆಯವನ್ನು ಕಳಚಿದ. ಪರನಾರಿ ಸೋದರನೆಂಬ ಕಡೆಯವನ್ನು ಎಡದ ಕಾಲೊಳಗೆ ಧರಿಸಿ, ರತ್ನಾಜಿಯ ಬಾಗಿಲಿಗೆ ಬಂದ. ಬಾಗಿಲ ಗೊಲ್ಲರು, ಎಕ್ಕಟಿಗರು ಎದ್ದು ಕೈಮುಗಿದರು.

ಪಂಜರದೊಳಗಿದ್ದ ಗಿಳಿ 'ಕಂಪಿಲರಾಯನಿಲ್ಲದ ಅರಮನೆಗೆ ಬಂದವನಾರೆಲೆ ಪಾಪಿ' ಎಂದು ಕೇಳಿತು. 'ಹುಳಿಯೇರ ಮಾರಿಗೊಂಡನನ್ನು ಸೋಲಿಸಿ, ನಿನ್ನನ್ನು ತಂದ ರಾಮನು ನಾನೆಂಬುದನ್ನು ಮರೆತೆಯೊ' ಎಂದು ನೆನಪಿಸಿದ. ತಾನು ಬಂದ ಕಾರಣ ಹೇಳಿದ. ಹಿಂದಿರುಗಲು ಗಿಳಿ ಬಿನ್ನವಿಸಿದರೂ ಕೇಳದೆ ರಾಮ ಒಳಗೆ ಬಂದ. ಸಂಗಿ ದಂಡಪ್ರಣಾಮ ಮಾಡಿದಳು. 'ಚೆಂಡು ರತ್ನಾಜಿಯ ಹತ್ತಿರ ಇದೆ' ಎಂದು

ಹೇಳಿದಳು. ರಾಮ ರತ್ನಾಜಿಗೆ ನಮಸ್ಕರಿಸಿ, ಚೆಂಡು ಕೇಳಿದನು.'ಆಟವಾಡಿ ದಣಿದಿರುವೆ, ಬಾ ಕುಳ್ಳಿರು'-ಎಂದಳು. ರಾಮ ನಿರಾಕರಿಸಿದ. 'ಚೆಂಡು ಒಳಗೆ ಮಂಚದ ಮೇಲಿದೆ, ತೆಗೆದುಕೋ' ಎಂದು ಹೇಳುತ್ತಲೇ ರಾಮಯ್ಯ ಒಳಗೆ ಹೋದ. ಬೆನ್ನು ಹಿಂದೆಯೇ ಬಂದ ರತ್ನಾಜಿ ಅವನ ಮುಂದಲೆ ಹಿಡಿದು 'ಮನಸೋತೆ, ನೆರೆದುಳುಹು' ಎಂದಳು, ತಬ್ಬಿಕೊಂಡಳು. 'ನೀನು ಹರಿಯಮ್ಮನ ಸಮಾನ' ಎಂದು ನುಡಿದು ಬಿಡಿಸಿಕೊಳ್ಳಲು ಪ್ರಯತ್ನಿಸಿದ. 'ಬಾಲೆ ಹೆಣ್ಣು ಬಯಸಿ ಬಂದು ಹಿಡಿದರೆ ಒಲ್ಲೆನೆಂಬುದು ಗುಣವೇನೋ' ಎಂದು ಕೇಳಿದಳು. 'ನಿನಗೆ ಮುತ್ತು ಮಾಣಿಕ ನವರತ್ನ ಬಂಗಾರ ಕೊಡುವೆ' ಎನ್ನುತ್ತ ಗಟ್ಟಿಮೊಲೆಗಳನ್ನು ತೋರಿಸಿದಳು. 'ಹೊಸಮಲೆದುರ್ಗವನ್ನು ನಿನ್ನ ವಶಮಾಡುವೆ. ವಿಷವಿಕ್ಕಿ ಮುದಿ ಕಂಪಿಲನನ್ನು ಕೊಂದು, ನಿನಗೆ ಪಟ್ಟ ಕಟ್ಟುವೆ'ನೆಂದು ನುಡಿದಳು. ರಾಮ ಒಪ್ಪಲಿಲ್ಲ. 'ಕೊಂದು ಹೋಗೆಲೋ ರಾಮ ನಿಂದು ಸೈರಿಸಲಾರೆ, ಮುಂದುಗೆಟ್ಟೆನೊ ವಿರಹದಲಿ, ಒಂದು ಗಳಿಗೆ ಭೋಗವನಿತ್ತು ಸೈರಿಸು' ಎಂದು ಬೇಡಿಕೊಂಡಳು. 'ನನ್ನನ್ನು ಹೆಂಡತಿಯಾಗಿ ಮಾಡಿಕೊಳ್ಳು' ಎಂದಳು. 'ಪರಸತಿಗೆ ಮೋಹಿಸಿದವನು ಹೊಲೆಯನೇ ಸರಿ' ಎಂದು ರಾಮ ಬುದ್ಧಿ ಹೇಳಿದ. 'ಕಥೆಯನೋದವರೆಲ್ಲ ವ್ರತಗೆಟ್ಟು ಹೋದರೋ', 'ಸರಿಗೊಳಗಾಗದವರಾರೋ' ಎಂದು ಹಲುಬಿದಳು. 'ನಿನಗಾಗಿ ಕಂಪಿಲ ನನ್ನನ್ನು ತಂದು, ತಾನೇ ಮದುವೆಯಾದ. ನಾನು ನಿನಗೆ ಹೆತ್ತತಾಯಿಯಲ್ಲ, ಸೋದರತ್ತೆಯ ಮಗಳೋ ರಾಮಯ್ಯ' ಎಂದಳು. 'ತಂದೆಯ ಹೆಂಡತಿಯೊಂದಿಗೆ ಕೂಡುವುದು ನ್ಯಾಯವೇ?' ಎಂದರೆ 'ತಂದೆ ಏರುವ ಪಲ್ಲಕ್ಕಿಯ ಕಂದ ಏರುವುದಿಲ್ಲವೇ?' ಎಂದು ವಾದಿಸಿದಳು. 'ಕಲ್ಯಾಣದಲ್ಲಿ ರಾಮನಾಯಕನ ಹೆಂಡತಿ ಚಿಕ್ಕಯ್ಯನನ್ನು ಪ್ರೀತಿಸಿದಳು. ಅವನು ನಿರಾಕರಿಸಿ ತಲೆ ಕಳೆದುಕೊಂಡ. ಹಾಗಾದೀತು ಎಚ್ಚರಿಕೆ' ಎಂದಳು. 'ನಾನು ಬಾಸಿಂಗ ಕಟ್ಟಿಕೊಂಡು ಮದುವೆಯಾದವಳಲ್ಲ. ದೊರೆಯ ಊಳಿಗದವಳು' ಎಂದು ಏನೇನೋ ಆಲಾಪಿಸುತ್ತಲೇ, ರಾಮ ಅವಳನ್ನು ನೂಕಿದರೆ, ಮುರಿಮುರಿದು, ಮತ್ತೆ ಮತ್ತೆ ತೊಡರಿದಳು. ಈ ಸೆಣಸಾಟದಲ್ಲಿ ಓಲೆ ಸಡಿಲಿತು, ಮುತ್ತು ಹರಿದು ಬಿದ್ದವು, ರತ್ನದ ಹಾರ ಹದಿನಾರು ತುಂಡಾಯಿತು, ಬಳೆಗಳು ಒಡೆದವು, ಮಾಣಿಕ ಸಿಡಿದವು, ತೊಡಿಗೆಗಳು ಬೆಸುಗೆ ಬಿಚ್ಚಿದವು, ಬಾಯ ತಾಂಬೂಲ ಪುಡಿ ಪುಡಿಯಾಯಿತು, ಕೂದಲು ಕಿತ್ತು ತಲೆ ತರಗಾಯಿತು. ರಾಮಯ್ಯ ಬಿಡಿಸಿಕೊಂಡು ಹೊರಗೆ ಬಂದು, ಆಟದ ಮನ್ನೆಯರನ್ನು ಮನೆಗೆ ಕಳಿಸಿದ. ಇದನ್ನು ಶಿವ ಮೆಚ್ಚಿದ. 'ಅರ್ಜುನನ ಅವತಾರವಾದ ರಾಮನನ್ನು ರಂಭೆಯ ಅವತಾರವಾದ ರತ್ನಾಜಿಯು ಸೋಲಿಸಲಿಲ್ಲ' ಎಂಬ ಶಿವನ ಮಾತಿಗೆ ಪಾರ್ವತಿ ಸಮ್ಮತಿಸಿದಳು.

**ಸಂಧಿ: ೧೮**

ರತ್ನಾಜಿ ಗಾಯಗೊಂಡ ಹುಲಿಯಂತಾಗಿ 'ರಾಮನ ಕೊರಳ ಕೊಯಿಸದೆ ಊಟಮಾಡಲಾರೆ, ಹಾಗೆ ಮಾಡದಿದ್ದರೆ ನಾನು ಹೊತ್ತುವ ಮೊಲೆಗಳೇ ಅಲ್ಲ' ಎಂದು ಪ್ರತಿಜ್ಞೆ ಮಾಡಿದಳು, ರತ್ನಾಜಿ. ಹಾರ ಹರಿದು, ಸೀರೆ ಸೀಳಿ, ತೋಳು ತೊಡೆಗಳಿಗೆ ಚೂರುಗಾಯ ಮಾಡಿಕೊಂಡು, ಅಗ್ಗಷ್ಟಿಗೆ ಮಗ್ಗುಲಿಟ್ಟುಕೊಂಡು ವದನಗೃಹದಲ್ಲಿ ಮಲಗಿದಳೂ. ಕಂಪಿಲರಾಯ ಬೇಟೆಯಿಂದ ಮರಳಿದ. ಅರಮನೆಯ ಸ್ತ್ರೀಯರು ಆರತಿ ಎತ್ತಿದರು. ಈ ಸಮಯದಲ್ಲಿ ರತ್ನಾಜಿ ಇಲ್ಲದುದನ್ನು ಗಮನಿಸಿದ ಕಂಪಿಲ, ಅವಸರದಿಂದ ಅವಳ ಮಂದಿರಕ್ಕೆ ಬಂದ. 'ಮುತ್ತಿನ ಹಾರ ಹರಿದಿದೆ, ಕೂದಲು ಅಸ್ತವ್ಯಸ್ತವಾಗಿವೆ, ಕೈಬಳೆ ಒಡೆದಿವೆ, ಮೂಮೇಲೆ ನಖರೇಖೆ ಮೂಡಿವೆ, ಇದಕ್ಕೆ ಕಾರಣವೇನು?' ಎಂದು ಕೇಳಿದ. 'ನಿನ್ನ ಮಗ ರಾಮ ಆಟದ ಚೆಂಡು ಕೇಳುವ ನೆವದಿಂದ ಒಳಗೆ ಬಂದು, ಬಂಡು ಮಾಡಿದನು ಮೈಗೆಡಿಸಿ. ತಂದೆ ಮಗನಿಗೆ ಒಬ್ಬಳಾದೆ. ನಿನಗೆ ಹೆಂಡತಿ, ನಿನ್ನ ಮಗನಿಗೂ ಹೆಂಡತಿಯಾದೆ. ನನ್ನನ್ನು ನಿನ್ನ ಮಗನಿಗೆ ಒಪ್ಪಿಸು, ಇಲ್ಲವೆ ಅವನ ತಲೆ ಹಾರಿಸು. ಇಲ್ಲದಿದ್ದರೆ ವಿಷ ತೆಗೆದುಕೊಳ್ಳುತ್ತೇನೆ' ಎಂದೆಲ್ಲ ಹೇಳಿ ಅವನ ಮನಸ್ಸನ್ನು ಕೆಡಿಸಿದಳು. ಕಂಪಿಲರಾಯ ಭಂಡಾರಿ ಬುಕ್ಕನನ್ನು ಕರೆಸಿ ವಿವರ ಹೇಳಿ, ಬೈಚಪ್ಪನನ್ನು ಕರೆತರಲು ತಿಳಿಸಿದ. ಬಂದ ಬೈಚಪ್ಪನಿಗೆ ಕಂಪಿಲರಾಯ ಎಲ್ಲ ವಿವರಿಸಿ, 'ಕೊಂದು ರಾಮನ ಅಂಗವ ತಾರದಿದ್ದರೆ ನಿಂದೆಯ ನೀನೆ ಮಾಡಿಸಿದೆ' ಎಂದು ಭಾವಿಸುತ್ತೇನೆ- ಹೀಗೆ ನಿಷ್ಠುರ ನುಡಿದ. ಆಣೆಯನ್ನು ಇಟ್ಟ. ಅರಸನ ಅಪ್ಪಣೆ ಪಡೆದು ಮನೆಗೆ ಬಂದು ಬೈಚಪ್ಪ 'ಹುಲಿಯಡಗಿದ ಮಳೆಯಂತಿರ್ದ ರಾಮನ ಕೊಲುವರೆ ಕೈಯೆಳದು ಎಂದು' ಚಿಂತಿಸಿದ. ರಾಮ ಸತ್ತರೆ ಏರಿ ಬರುವ ದಿಳ್ಳಿಯ ದಂಡನ್ನು ಎದುರಿಸುವರಾರು' ಎಂದೂ ಚಿಂತಿಸಿದ. ರಾಮನನ್ನು ಮುಚ್ಚಿಡುವ ಯೋಚನೆ ಮಾಡಿದ.

**ಸಂಧಿ: ೧೯**

'ಹೆಣ್ಣಿನಿಂದ ವಾಲಿ-ಸುಗ್ರೀವರು ಕೆಟ್ಟರು, ಹೆಣ್ಣಿನಿಂದ ಕೀಚಕ ಕೆಟ್ಟ' ಎಂದು ಬೈಚಪ್ಪ ಕಂಪಿಲನಿಗೆ ತಿಳಿಹೇಳಿದ. 'ರಾಮನನ್ನು ಕೊಲ್ಲದಿದ್ದರೆ ನಿನ್ನನ್ನೇ ಕೊಲ್ಲಿಸುವೆ, ಕಲ್ಲಗಾಣಕ್ಕೆ ಹಾಕಿಸುವೆ' ಎಂದು ಗರ್ಜಿಸಿದ. ನಿರುಪಾಯನಾಗಿ ಬೈಚಪ್ಪ ರಾಮನ ಹತ್ತಿರ ಬಂದು, ಎಲ್ಲ ವಿವರ ಹೇಳಿದ. ಕೇಳುತ್ತಲೇ ಅಪವಾದದಿಂದ ಕುಗ್ಗಿಹೋದ ರಾಮಯ್ಯ 'ಕೊಲ್ಲು ಪ್ರಧಾನಿಗಳರಸ' ಎಂದು ನುಡಿದ. ಪ್ರಧಾನಿ ಇದಕ್ಕೆ ಒಪ್ಪದೆ, ಉಪ್ಪಲಿಕರ ಸಿಂಗಯ್ಯನನ್ನು ಕರೆದು, ಜಟ್ಟಂಗಿರಾಮೇಶ್ವರ ಗುಡಿಯ ಹತ್ತಿರ ನೆಲಮಾಳಿಗೆ ಮಾಡಿಸಿದ. ಏಳು ತಿಂಗಳ ವರೆಗೆ ಸಾಲುವಷ್ಟು ಅಕ್ಕಿ, ಕಡಲೆ, ಗೋದಿ, ಬೇಳೆ, ಬೆಲ್ಲ, ದೀಪದ ಎಣ್ಣೆ, ತೂಗುಮಂಚ, ಉಪ್ಪು, ಮೆಣಸು, ಅಡಕೆ, ಬಿಳಿಯಲೆ, ಸುಣ್ಣ ಸಂಗ್ರಹಿಸಿ ನೆಲಮಾಳಿಗೆಯಲ್ಲಿಟ್ಟ. ರಾಮನ ಜೊತೆಗೆ ದೇವಿಶೆಟ್ಟಿಯ ಲಿಂಗ, ಕೊಳ್ಳಿಯ ನಾಗ, ಭಾವ ಸಂಗಮ, ಗುಜ್ಜಲೋಬ, ಕೋಟೆಗರ ದ್ಯಾವ, ಮಾದಿಗರ ಹಂಪ, ಹಾವಳಿಕಾರ ಹನುಮ, ಲಿಂಗ, ಕಾಟಣ್ಣ, ನಲ್ಲನಾಯಕ, ಮುಮ್ಮಡಿ, ಸಿಂಗಯ್ಯ-ಹೀಗೆ ಹನ್ನೆರಡು ಜನರನ್ನೂ ಆ ನೆಲಮಾಳಿಗೆಯಲ್ಲಿ ಇರಿಸಿದ.

ಸೆರೆಮನೆಯಲ್ಲಿದ್ದ, ರಾಮಯ್ಯನ ಪ್ರತಿರೂಪವೆನಿಸಿದ್ದ, ಕಳ್ಳರಾಮನ ಹತ್ತಿರ ಬಂದು, ಎಲ್ಲ ವಿವರಿಸಿ, ರಾಮಯ್ಯನಿಗೆ ಪ್ರತಿಯಾಗಿ ನಿನ್ನ ತಲೆ ಕೊಡುವುದೆಂದು ಒಪ್ಪಿಸಿದ. ಮೀಸೆ ಒತ್ತಿಸಿ, ಬವರಿ ತಿದ್ದು, ಕಸ್ತೂರಿ ತಿಲಕವನ್ನಿಟ್ಟು ಮುತ್ತಿನ ಕಡುಕ ಇಕ್ಕಿ, ವೀರಜಡೆ ಹೆಣೆಸಿ, ರಾಮಯ್ಯನ ಹಾಗೆ ರೂಪಗೊಳಿಸಿ, ಬೈಚಪ್ಪ ಕಳ್ಳರಾಮನ ತಲೆ ಕತ್ತರಿಸಿದ. ಜೊತೆಗೆ ಸೆರೆಯಲ್ಲಿದ್ದ ಬೇರೆ ಹನ್ನೆರಡು ಜನರ ತಲೆಯನ್ನು ಕತ್ತರಿಸಿ, ಕಂಪಿಲನೆದುರಿಗೆ ತಂದ. ರಾಮನ ತಲೆ ಕತ್ತರಿಸಲು ಅವಕಾಶ ಕೊಡದ ಕಾರಣ, ಈ ಮಿಕ್ಕ ಹನ್ನೆರಡು ಜನರ ತಲೆ ಕತ್ತರಿಸಿದೆನೆಂದು ಸುಳ್ಳು ಹೇಳಿ ನಂಬಿಸಿದ. ರತ್ನಾಜಿ ನಗುತ್ತ ಬಂದು ರಾಮನ ತಲೆಯನ್ನು ದಿಟ್ಟಿಸಿನೋಡಿದಳು. ಈ ಕೊಲೆಗೆ ಕಂಪಿಲ ಮರುಗಿದ. 'ಏಳೇಳು ಜನ್ಮಕ್ಕೆ ಕಂಪಿಲ ತಂದೆಯಾಗಲಿ, ರತ್ನಾಜಿ ತಾಯಿಯಾಗಲಿ' ಎಂದು ರಾಮಯ್ಯ ಹಾರೈಸಿದನೆಂದು ಮಂತ್ರಿ ಹೇಳಿದ. ಹರಿವಾಣದಲ್ಲಿಟ್ಟ ತಲೆಯನ್ನು ರತ್ನಾಜಿ ಮೆಟ್ಟಿನಿಂತಳು. ಹರಿಯಲದೇವಿ ದುಃಖಿಸಿದಳು. ಬಲಗೈಯ ಕಂಕಣ ಮುರಿವ, ಬೊಲ್ಲ ನೆಲದ ಮೇಲೆ ಬಿದ್ದ ದುಃಸ್ವಪ್ನ ತಾನು ಕಂಡುದಾಗಿ ಗೋಳಿಟ್ಟಳು. 'ಶೂಲದ ಹಬ್ಬಕ್ಕೆ ನಮ್ಮನ್ನು ಯಾರು ಕರೆಸುವರು?' ಎಂದು ಸಿಂಗಮ್ಮ ಮಾರಮ್ಮ ದುಃಖಿಸಿದರು. ಸಿಂಗಮ್ಮ ನೆಲದಲ್ಲಿ ಹೊರಳಿದಳು. ವಾಲೆ ಹರಿದವು, ಕೀವು ಕಂಕಣ ಸಡಿಲಿಸಿದವು, ಸಾಲು ಮುತ್ತಿನ ಸರ ಹರಿದವು. ಸುಡು ಸಂಸಾರ, ಎಂದು ಹರಿಯಮ್ಮ ಹಲುಬಿದಳು.

ಅರಮನೆಯಲ್ಲಿ ರಾಮನ ಪತ್ನಿಯರು ತಾವು ಕಂಡ ದುಃಸ್ವಪ್ನವನ್ನು ಪರಸ್ಪರ ಹೇಳಿಕೊಂಡು ಹೌಹಾರಿದರು. ನಮ್ಮ ಅರಮನೆ ಹೆಗ್ಗಂಬ ಮುರಿದು, ನಮ್ಮ ತಾಯಿ ಕಳಿಸಿದ್ದ ಕರಬಾನ ಕೆಡೆದು ಬಿದ್ದ ಕನಸ ಕಂಡೆನೆಂದು ರಾಮಲದೇವಿ ಹೇಳಿದಳು. ನನ್ನ ತುರುಬಿಗೆ ಬೆಂಕಿ ಹತ್ತಿದ ಕನಸು ಕಂಡುದಾಗಿ ಕಿರಿಯಾಕೆ ಹೇಳಿದಳು. ನನ್ನ ಕೊರಳ ಮುತ್ತಿನಹಾರ ಕತ್ತರಿಸಿ ಬಿದ್ದ ಕನಸು ಕಂಡುದಾಗಿ ತಿಮ್ಮಾಜಿ, ರಾಮನ ಸತ್ತಿಗೆ ಮುರಿದ ಮತ್ತು ನಾನಿಟ್ಟ ವಾಲೆ ಭೂಮಿಗೆ ಬಿದ್ದ ಕನಸು ಕಂಡದನ್ನು ಕಾಮಾಯಿ ಹೇಳಿದಳು. ರಾಮನೇರುವ ಬೊಲ್ಲ ಸತ್ತ ಕನಸು ಕಂಡುದಾಗಿ ಭೀಮಾಯಿ ಹೇಳಿದಳು. ಅಷ್ಟರಲ್ಲಿ ಅಲ್ಲಿಗೆ ಬಂದ ಅತ್ತೆ ಹರಿಯಮ್ಮನಿಂದ ನಿಜ ಸಂಗತಿ ತಿಳಿದ ಸೊಸೆಯಂದಿರು ಹೌಹಾರಿ, ಮಾವನ ಹತ್ತಿರ ಕಿಚ್ಚು ಕೇಳಲು ನಡೆದರು.

ದುಕೂಲವ ಸಣ್ಣ ನಡುವಿಗಿಟ್ಟು, ನವರತ್ನಖಚಿತದಾಭರಣವಿಟ್ಟು, ಬಲಗೈಯಲ್ಲಿ ಕಠಾರಿ ಹಿಡಿದು, ಎಡಗೈಯಲ್ಲಿ ಕನ್ನಡಿ ಲಿಂಬೆ ಹಿಡಿದು, ಕಂಪಿಲರಾಯನ ಓಲಗಕ್ಕೆ ಹೊರಟರು. ಕನ್ನಡಿ ನೋಡುತ್ತ, ನಲಿದಾಡುತ್ತ, ರಾಮನ ಸದ್ಗುಣ ಪಾಡುತ್ತ ಬಂದರು. ಎಳೆಮೀಸೆ ಕೊನೆಮೀಸೆ ಬರುವಂಥ ಭೂಮಿಯ ದಳಪತಿ ರಾಯರ ಗಮಡ, ಕಳೆಯುಳ್ಳ ಚೆಲುವ ಚೆನ್ನಿಗರಾಮ, ಭೀಮ ಪರಾಕ್ರಮ ರಾಮ, ಬಿಟ್ಟಗಲುವರೆ ನಿಸ್ಸೀಮ, ಖಾನವಜೀರರ ಮೇಲೆ ದಂಡೆತ್ತಿ ಹೋಗದೆ ನಮ್ಮನ್ನು ಅಗಲಿದರೆ ನಾವು ನಿನ್ನ ಬೆನ್ನಬಿಡೆವು-ಎಂದು ದುಃಖಿಸಿದರು. ಆವ ಠಾಣ್ಯಕ್ಕೆ ರಾಮನ ಕಳುಹಿದೆ ಮಾವ, ಬಲ್ಲಾಳನ ಮೇಲೆ ಕಳುಹಿದೆಯಾ, ಪ್ರತಾಪರುದ್ರನ ಮೇಲೆ ಕಳುಹಿದೆಯಾ, ಜಗದಪ್ಪರಾಯನ ಠಾಣ್ಯಕ್ಕೆ ಮುತ್ತಿಗೆ ಹಾಕಲು ಕಳುಹಿದೆಯಾ, ಹುಳಿಯಾರ ಮಾರಿಗೊಂಡನ ಮೇಲೆ ಕಳುಹಿದೆಯಾ- ಎಂದು ಅತ್ತರು. ಅಂಬಲಿಗಾಗಿ ಅಮೃತಾನ್ನ ಚೆಲ್ಲಿದೆ, ಕಂಬಳಿಗಾಗಿ ದೇವಾಂಗ ಬಿಸುಟೆ- ಎಂದು ಅಳಲಿದರು. ರಾಮನನ್ನು ಕೊಲ್ಲಲು ಕೈಗಳಾದರೂ ಹೇಗೆ ಎದ್ದವು, ಕಿಚ್ಚು ದಯಪಾಲಿಸು- ಎಂದು ಮೊರೆ ಇಟ್ಟರು. ನಾಡ ಹಂಚಿಕೊಡುವೆ, ನಿಮ್ಮ ಅತ್ತೆಯ ಜೊತೆ ಇದ್ದು ಬಿಡಿರಿ- ಎಂದು ಕಂಪಿಲ

ಹೇಳಿದ. ರಾಜ್ಯ ಪಡೆದು ರಂಡೆಯಾಗಿ ಬಾಳಲಾರೆವು- ಎಂದು ಹಟ ಹಿಡಿದರು. ಇದಕ್ಕೊಂದು ಉಪಾಯ ಮಾಡಲು ಮಂತ್ರಿಗೆ ರಾಜ ಹೇಳಿದ. ಮಂತ್ರಿ ಅವರನ್ನು ಕರೆದುಕೊಂಡು ಬಂದು" ನೀವು ಸತಿ ಹೋದರೆ ರಾಮನು ಸತ್ತ ಸುದ್ದಿ ಇನ್ನೂ ಖಚಿತವಾಗಿ, ಸುರಿತಾಳ ದಂಡೆತ್ತಿ ಬರುತ್ತಾನೆ. ಆರು ತಿಂಗಳು ತಡೆಯಿರಿ" ಎಂದು ತಿಳಿ ಹೇಳಿದನು.

**ಸಂಧಿ: ೧೦**

ಕುಮಾರ ರಾಮ ಸತ್ತ ಸುದ್ದಿ ದಿಳ್ಳಿಗೆ ತಲುಪಿತು. ಕಾಳಗ ಕೈಕೊಳ್ಳಲು ನೇಮಿಗೆ ಸುರಿತಾಳ ಆಜ್ಞೆ ನೀಡಿದ. ನೇಮಿ ಈ ಸುದ್ದಿ ನಂಬಲಿಲ್ಲ. ಗುಪ್ತಚಾರರನ್ನು ಕಳಿಸಿ, ಸತ್ತ ಸುದ್ದಿ ಖಚಿತಪಡಿಸಿಕೊಂಡನು. ನೇಮಿಯ ನೇತೃತ್ವದಲ್ಲಿ ಸೈನ್ಯ ಕುಮ್ಮಟಕ್ಕೆ ತೆರಳಿತು. ಭೇಡಿ, ತಮ್ಮಟೆ, ಗಿಡಿಬಿಡಿ, ನಿಸ್ಸಾಳ, ಕೊಂಬು, ವೀರವಾದ್ಯ ಮೊಳಗಿದವು. ಖಾನ ಮಲುಕ, ಗುಜ್ಜರಾಹುತ, ಆರೆಯ ದೊರೆ, ಗೌಳಗುಜ್ಜರ ರಾವುತ, ಲಾಳದೇಶದ ಮರಾಳ ಖಾನರೆಲ್ಲ ಸೇರಿದರು. ಕನ್ನೋಜಿ ಕೂಡಿಕೊಂಡನು. ಸಿಂಧುಮರಾಳ, ಮಗಧ, ಮಾಳವರಾಜರು ಸೇರಿದರು. ದುರ್ಜಟಿಖಾನ, ಬಬ್ಬಿರಖಾನ, ಸೈದ್ರಲ್ಲಿ, ಬಿಜ್ಜಾಟಿ ಹರಟೆಖಾನ, ಜಂಬಾರಕಾನ, ಲುಬ್ಧಖಾನ, ರಾರಾಜಿಖಾನ, ರಾಜೆಯಖಾನ, ಮಾಮುದ್ದು ಸಾಹೇಬಖಾನ, ಎಕಲಾಸಖಾನ, ಎದ್ದೂಲಖಾನ, ಮಖರಂಕಖಾನ, ರುಕುಮಸಖಾನ, ಬಾಬಾಜಿಖಾನ, ಮುಸಲಖಾನ, ಸಾಹೇಬಖಾನ, ಸಕಲಾತಿಖಾನ, ಹೈದರಖಾನ ಮೊದಲಾದವರು ಸೈನ್ಯದೊಂದಿಗೆ ನಡೆದರು.

ತಿತ್ತಿ ಸಜ್ಜುಮಾಡಿಕೊಂಡರು, ಸಾರಾಯಿ ತುಂಬಿಸಿದರು. ಭೇರಿಯ ಸನ್ನೆಯ ಮೇರೆಗೆ ಸೈನ್ಯ ಮುನ್ನಡೆಯಿತು. ಜಾಯಿಕಾಯಿ, ಜಾಪತ್ರಿ, ಬೇಯಿಸಿದ ರೊಟ್ಟಿ ಮೊದಲಾದ ಆಹಾರ ಸಂಗ್ರಹಿಸಿ ಗಂಗಾಸಾಗರಕ್ಕೆ, ಅಲ್ಲಿಂದ ಚಿಕ್ಕಡಿಲ್ಲಿಗೆ (ದೇವಗಿರಿ) ಬಂದರು. ಭಾಗೀರಥಿ ದಾಟಿ, ಮಿರುಜೆ, ಅರುಣಾವತಿಗೆ ಬಂದರು. ದಾರಿಯಲ್ಲಿ ಶಕುನ ನೋಡಲು ಶಾಸ್ತ್ರಿಗಳನ್ನು ಕರೆಸಿದರು. ಟಗರು, ಕೋಳಿ ಕಾಳಗ ಏರ್ಪಡಿಸಿದರು. ರಾಮನ ಹೆಸರಿಟ್ಟುವು ಗೆದ್ದು, ನೇಮಿ ಹೆಸರಿಟ್ಟುವು ಸೋತವು. ನೇಮಿ ಅಧೀರನಾದ. ಹಿಂದಿರುಗಿದರೆ ಸುರಿತಾಳ ಕೊಂದುಹಾಕುವನೆಂಬ ಭೀತಿಯಿಂದ ಮುಂದೆ ನಡೆದ. ತೋರಗಲ್ಲು, ಬಾದಾಮಿ, ಗಲಗಲಿ, ವಿಜಯಪುರಕ್ಕೆ ಸೈನ್ಯ ಬಂದಿತು.

ಕಾಡಮೊಲ್ಲೆಯ ಸೊಪ್ಪನ್ನು ಒಡಿಲಿ ಹುರಿದು ತಿನ್ನುವ ಬೇಡರು, ಕೈಯಲ್ಲಿ ನಾಯಿ, ಬಡಿಕೋಲು, ನೆತ್ತಿಯ ಮೇಲೆ ಮೊಟ್ಟೆಗಂಟು, ಹಸ್ತದ ಮೇಲೆ ಗಿಡುಗ, ಹೆಗಲಿನ ಎರಡೂ ಕಡೆಗೆ ಹತ್ತಿಯ ಗೂಡು ಸಹಿತ ಗೂಳೆ ನಡೆದರು.

ಹೆಬ್ಬಲೆ, ಕುರುವಲೆ, ಮೊಲವಲೆ, ಕಾಲ್ವಲೆ, ಗುಬ್ಬಯ ಬಲೆ, ಹಕ್ಕಿಯ ಬಲೆಗಳೊಂದಿಗೆ ಮೃಗದ ಬೇಟೆಯಾಡುತ್ತ ಕಬ್ಬೇರು ಗೂಳೆಯ ನಡೆದರು. ಕುರಿಯ ಹಿಂಡುಗಳನ್ನು ಹೊಡೆದುಕೊಂಡು, ಮರಿಗಳನ್ನು ಹೊತ್ತುಕೊಂಡು, ಮರುಗುವ ಹೆಂಡಿರ ಕೈಹಿಡಿದುಕೊಂಡು, ಗೊಲ್ಲರು ಗೂಳೆ ನಡೆದರು. ಗಟ್ಟಣಿಗೆ, ಕೊಡತಿ ಹೆಗಲಮೇಲಿಟ್ಟುಕೊಂಡು ಅಗಸರು ಗೂಳೆ ನಡೆದರು. ಓದುಗ ಹಲಗೆ, ಕಡತ, ಬಳಪ, ವೇದದ ಪೆಟ್ಟಿಗೆಯೊಡನೆ ಓದಿಸುವಣ್ಣಗಳೂ, ಅವರ ಹೆಂಗಸರೂ ಗೂಳೆ ನಡೆದರು. ಪಟ್ಟಸ್ವಾಮಿಗಳೊಂದಿಗೆ ಸೆಟ್ಟರು ಗೂಳೆಯ ನಡೆದರು. ಅಡಿಗಲ್ಲು, ತಿದಿಮುಟ್ಟು, ಇಕ್ಕಳ, ಕೆತ್ತುವ ಉಳಿ, ಬಾಚಿ, ಕೊಡತಿಗಳೊಂದಿಗೆ ಬಡಗಿ ಕುಂಬಾರರು ಗೂಳೆ ನಡೆದರು. ಅಚ್ಚ ಕುಂಚಿಗೆ, ಹಚ್ಚಡ ಕುಂಚಿಗೆ, ರಚ್ಚು ಹೊರುವ ಮಕ್ಕಳನೆತ್ತಿಕೊಳ್ಳುವ ಜಾಡೆಲು ಗೂಳೆಯ ನಡೆದರು. ಚಿಪ್ಪಿಗ, ಉಪ್ಪಾರ, ಕುಂಬಾರ, ಡೊಂಬ, ಬ್ರಾಹ್ಮಣ, ಉಪಾಧ್ಯೆ, ಜೋಯಿಸ, ನಾಯಿದ ಮೊದಲಾದ ಜಾತಿಗಳ ಜನರು ಗೂಳೆಯ ನಡೆದರು.

ತೊರಗಲ್ಲು ಬಾದಾಯಿ ಮುಂದೆ ಕದನ ಏರ್ಪಟ್ಟು, ಏಳು ತಿಂಗಳಿಗೆ ದಂಡು ಕಮ್ಮಟಕ್ಕೆ ಬಂದಿತು. ಐದು ಜನ ಕುದುರೆ ಏರಿ ಕುಮ್ಮಟಕ್ಕೆ ಬಂದು ಅಟ್ಟಳೆಯ ಮೇಲೆ ಕಾಗದ ಇಟ್ಟು, ತಾವು ಬಂದ ಸುದ್ದಿ ಕಂಪಿಲನಿಗೆ ತಿಳಿಸಿದರು. ಬೆಟ್ಟವ ನಂಬಿ ಕೆಡಬೇಡ, ಈಗ ಕೊಟ್ಟದ ರಾಮುಗನಿಲ್ಲ. ಬಾದೂರನನ್ನು ಒಪ್ಪಿಸು ಎಂದು-ಕಂಪಿಲನಿಗೆ ಕೇಳಿದರು. ಮೊರೆಹೊಕ್ಕ ಖಾನರ ಕೊಡೆನೆಂಬ ಬಿರುದು ಸಾರ್ಥಕವಾಗುವಂತೆ ವೈರಿಗಳನ್ನು ಹೆದ್ದೊರೆಯ ತನಕ ಓಡಿಸುವೆ- ಎಂದು ಕಂಪಿಲ ಉತ್ತರಿಸಿದ. ಮಗನ ಅಗಲಿಕೆಗೆ ಮರುಗಿದನಾದರೂ ಹುಡೆಯ, ಹುಲಿಮುಖ, ಕೊತ್ತಳಗಳಿಗೆ ಪೆಟಲು ಬಾಣ ಸಜ್ಜುಗೊಳಿಸಿದ. ಹೆಬ್ಬಾಗಿಲು, ಚೋರಗಂಡಿಗಳಿಗೆ ರಣಬಲಿ ಇಕ್ಕಿಸಿದ. 'ಪತ್ನಿಯನ್ನು ಕರೆಯಿಸು, ಕಾದಲಿ' ಎಂದು ಬೈಚಪ್ಪ ಹಂಗಿಸಿದ. ಬಹಾದ್ದೂರ ಮೊದಲಾದವರು ವೀಳ್ಯ ಹಿಡಿದು ಸಜ್ಜಾದರು. ಚೋರಗಂಡಿ ಇಳಿದು, ರಾತ್ರಿ ವೈರಿಪಾಳೆಯದಲ್ಲಿ ಕಗ್ಗೊಲೆ ನಡೆಸಿದರು. ಕುದುರೆ, ಆನೆ ಸೆಡೆ ಹಿಡಿದು ಕಂಪಿಲನ ಜನ ಕುಮ್ಮಟಕ್ಕೆ ಮರಳಿದರು.

ಮರುದಿನ ತುರುಕರ ಸೈನ್ಯ ಕುಮ್ಮಟವನ್ನು ಸುತ್ತುವರಿಯಿತು. ಮಗನಿಗಾಗಿ ಕಂಪಿಲ ಹಳಹಳಿಸಿದ. ಮೃತ್ಯು ನುಂಗಿದ ತುತ್ತು ಬಹುದೇ? ಎಂದು ಬೈಚಪ್ಪ ಸಮಾಧಾನಪಡಿಸಿದ. ಮಗನ ಹಂಬಲ ಬಿಟ್ಟು ಸೈನ್ಯಕ್ಕೆ ಸಂಪತ್ತು ಹಂಚು- ಎಂದು ಹೇಳಿದ.

**ಸಂಧಿ: ೨೧**

ಕುಮ್ಮಟ ಕಮಲಪತ್ರದ ಜಲಬಿಂದುವಿನಂತೆ ತಲ್ಲಣಿಸಿತು. ಒಂದು ಸುತ್ತಿನ ಕೋಟೆಯನ್ನು ವೈರಿಗಳು ವಶಪಡಿಸಿಕೊಂಡರು. ಬೈಚಪ್ಪ ಕಂಪಿಲನಿಗೆ ಧೈರ್ಯ ಹೇಳಿ, 'ಈಗ ಹೆದ್ದೊರೆತನಕ ವೈರಿಗಳನ್ನು ಓಡಿಸುತ್ತೇನೆ, ನೋಡು' ಎಂದು ಅವನನ್ನು ಉಪ್ಪರಿಗೆ ಏರಿಸಿದ. ರಾಮೇಶನ ಗುಡಿಗೆ ಬಂದು ನಮಸ್ಕರಿಸಿ, ಬಲಿ ನೀಡಿದ. ನೆಲ ಮಾಳಿಗೆ ಹತ್ತಿರ ಬಂದು 'ತಳಮಳಗೊಂಡು ದುರ್ಗ ಕಣುಗೆಡುತಿದೆ, ಏಳು' ಎಂದು ಕೂಗಿ ರಾಮನನ್ನು ಕರೆದ. ಚದುರಂಗ ಪಗಡೆಯಾಟದಲ್ಲಿ ತೊಡಗಿದ್ದ ರಾಮ 'ಅಂದೇ ಕಂಪಿಲ ನನ್ನನ್ನು ಕೊಂದಿದ್ದಾನೆ. ಇಂದೇಕೆ ನಿಮಗೆ ನಮ್ಮಾಸೆ. ಸಾಕು ಬೈಚಪ್ಪ ಸಂಸಾರದ ಸುಖ ದುಃಖ, ಬೇಕಿಲ್ಲ ದೊರೆತನ ನಮಗೆ' ಎಂದು ನೊಂದು ನುಡಿದ. 'ತುರುಕರು ನಿಮ್ಮ ತಂದೆಯ ಜೀವ ಕಳೆವೆವೆನ್ನುತ ನಿಂದಿಹರು, ಏಳು' ಎಂದು ಬೈಚಪ್ಪ ಒತ್ತಾಯಿಸಿದ. 'ತಂದೆ-ತಾಯಿಗಳಿಲ್ಲ. ಬಂಧು-ಬಳಗವಿಲ್ಲ, ಹಿಂದು ಮುಂದಾರು ಎನಗಿಲ್ಲ. ಕಂದರ್ಪಹರ ಜಟ್ಟಿಂಗ ಲಿಂಗನ ಪಾದ ಹೊಂದುವುದು ಲೇಸು' ಎಂದು ರಾಮ ನೊಂದು ನುಡಿದ. 'ಕಾಳಮೇಘದ ಹಾಗೆ ಕವಿದು ತುರುಕರ ದಂಡ ಹಾಳುಮಾಡುವ ಧೀರ ಏಳೋ' ಎಂದು ಬೈಚಪ್ಪ ಒತ್ತಾಯಿಸಿದ. 'ಏಳದಿದ್ದರೆ ಕಂಪಿಲನಾಣೆ, ಕುಲಗುರುವಿನ ಆಣೆ, ತಾಯಿ ಹರಿಯಮ್ಮನ ಆಣೆ' ಎಂದು ಒತ್ತಾಯಿಸಿದ. ರಾಮ ತನ್ನ ಜನರೊಂದಿಗೆ ಹೊರಬಂದ. ಸ್ತ್ರೀಯರು ಆರತಿ ಎತ್ತಿದರು. ಬೊಲ್ಲನನ್ನು ಕಾಲ ಗಗ್ಗರ, ಕೊರಳಗೆಜ್ಜೆ, ಮಾಣಿಕದ ಹಲ್ಲಣ, ತಳಪು, ರನ್ನದ ಪಟ್ಟೆ, ಮುತ್ತಿನ ಬಾಸಿಂಗ, ಹಕ್ಕರಿಕೆಯ ಮೇಲೆ ಇತ್ತರದಲಿ ಝುಲ್ಲಿ, ಕಕ್ಕಸ ಭಲ್ಲೆಗಳಿಂದ ಸಜ್ಜುಗೊಳಿಸಿದರು. ರಾಮಯ್ಯನಿಗೆ ಜೋಡು ವಜ್ರಾಂಗಿ, ರಾಗವಳಿಯ ಡೌಳಿ ತೊಡಸಿದರು.ರಾಯರಾಹುತ ಎಂದು ಬೂಚಪ್ಪ ಹೊಸ ಹೆಸರಿಟ್ಟು, 'ಈತ ಕಲ್ಯಾಣದಿಂದ ಬಂದವ'ನೆಂದು ಪ್ರಚಾರ ಮಾಡಿದ. ದೇವಿಶೆಟ್ಟಿ ಲಿಂಗ, ಬೇವಿನ ಸಿಂಗಯ್ಯ, ಭಾವ ಸಂಗಮ, ಹಾರೋ ಲಿಂಗ, ಕೊಟಗರ ದ್ಯಾವ, ಇರುವ, ಹಾವಳಿಕಾರ ಹಂಪಯ್ಯ, ಮಾದಿಗ ಹಂಪ, ಮುದಗೊಂಡ ಲೋಬ, ಸಾಧನೆ ಬಸವಯ್ಯ, ಬಾದೂರಖಾನ, ಎನುಮಾಲ ಚಿತ್ತ, ಎರಬೊತು ಗಂಗ, ಬೆಟ್ಟದ ಸಂಗ, ಮರುಳೆಯ ಪಾಪ, ಬೂಟಕ ಬೊಮ್ಮ, ಕೊಳ್ಳಿಯ ನಾಗ ಇವರೆಲ್ಲ ಸೇರಿದರು. ಅಬ್ದುಲ್‌ಖಾನ ಮುಂದಾಗಿ ನಡೆದ. ಬಾದೂರಖಾನ ವೈರಿಗಳ ಮೇಲೆ ಎರಗಿದ. ರಾಮನಾಥ ಸೈನ್ಯ ಸವರುತ್ತ ನಡೆದ. ಈ ರಭಸ ನೋಡಿ, ಇವನು ರಾಮಯ್ಯನೇ ಇರಬಹುದೆಂದು ಕೆಲವರು ಅನುಮಾನಿಸಿದರು. ನೇಮಿ ಸೈನ್ಯದಲ್ಲಿ ತುಂಬುರಖಾನ ಅಳಿದ. ಭೂತಗಳಿಗೆ ಹಬ್ಬವಾಯಿತು. ತುರುಕರ ಸೈನ್ಯ ಹೆದ್ದೊರೆ ತನಕ ಓಡಿಹೋಯಿತು. ಬಾದೂರಖಾನ ಬಾದಾಮಿ ತೊರಗಲ್ಲ ತನಕ ಸೈನ್ಯ ಓಡಿಸಿದ. ಉಪ್ಪರಿಗೆ ಮೇಲಿನಿಂದ ಇದನ್ನೆಲ್ಲ ನೋಡಿದ ಕಂಪಿಲ, ಬೈಚಪ್ಪನ ಮೂಲಕ ಹೊಸ ರಾಯರಾಹುತನನ್ನು ಕರೆಸಿದ. ರಾಮ ಕಂಪಿಲನಿಗೆ ನಮಸ್ಕರಿಸಿ ತಲೆಯ ಡೌಳಿ, ವಜ್ರಾಂಗಿ ತೆಗೆಯುತ್ತಲೇ ಅವನು ಮಗನನ್ನು ಗುರುತಿಸಿ ಅಪ್ಪಿಕೊಂಡನು. ರಕ್ತಕಾಯವನ್ನು ತೊಳೆಸಿ, ಉತ್ತಮ ವಜ್ರಾಂಗಿ ತೊಡಿಸಿ, ದಾನಧರ್ಮಮಾಡಿ, ಮುತ್ತು ನಿವಾಳಿ ಚೆಲ್ಲಿಸಿದನು. ಹರಿಯಮ್ಮ ಹರಿದು ಬಂದಳು. ಅಕ್ಕ ಮಾರಮ್ಮ, ತಂಗಿ ಸಿಂಗಮ್ಮ ಓಡಿಬಂದರು. ರಾಮಲದೇವಿ ಸವತಿಯರೊಂದಿಗೆ ಬಂದು ರಾಮನಿಗೆ ನಮಸ್ಕರಿಸಿದಳೂ. ಈ ಸಡಗರದ ಗದ್ದಲ ಕೇಳಿ, ತಿಳಿದುಕೊಂಡು ಬರಲು ರತ್ನಾಜಿ ಸಂಗಿಯನ್ನು ಕಳಿಸಿದಳು. ಸಂಗಿ ಹೇಳಿದ ಸಂಗತಿ ಕೇಳಿ ಬೆರಗಾಗಿ, ಉರುಲುಹಾಕಿಕೊಂಡು ಸತ್ತಳು. ಸಂಗಿ ಕಠಾರಿಯಿಂದ ಇರಿದುಕೊಂಡು ಸತ್ತಳು. ಈ ಸುದ್ದಿ ಕೇಳಿದ ಕಂಪಿಲ 'ಹೆಣವನ್ನು ಆನೆಕಾಲಿಗೆ ಕಟ್ಟಿ ಎಳೆಸಿರಿ' ಎಂದು ಆಜ್ಞಾಪಿಸಿದ. ಮಂತ್ರಿ ಎಳೆದು ಅಗುಳಿಗೆ ಹಾಕಿಸಿದ.

## ಪ್ರಸ್ತಾವನೆ(೪)

**ಸಂಧಿ: ೨೨**

ರಾಮಯ್ಯನಿಗೆ ರಾಜಪಟ್ಟ ಕಟ್ಟಲು ನಿರ್ಧರಿಸಲಾಯಿತು. ಜೋಯಿಸರು, ಹಳಬರು, ಮಾನ್ಯರು, ಅರಸು ಮಕ್ಕಳು ನೆರೆದರು. ರಾಮನಿಗೆ ಪಟ್ಟಾಭಿಷೇಕವಾಯಿತು. ಪಟ್ಟಣ ಸಿಂಗರಿಸಿ, ಆನೆಯ ಮೇಳೆ ಸಕ್ಕರೆ ಹಂಚಿದರು. ಬ್ರಾಹ್ಮಣರಿಗೆ ದಕ್ಷಿಣೆ, ಮಿಕ್ಕವರಿಗೆ ಗಂಧವೀಳ್ಯ

ಕೊಡಲಾಯಿತು. ರಾಮಯ್ಯ ಹರಿಯಲದೇವಿ ಪಾದಕ್ಕೆ ನಮಿಸಿದ. ಅವನಿಗೆ ಮುತ್ತಿನಾರತಿ ಎತ್ತಿದರು. ಮರುದಿನ ಮುಂಜಾನೆ ಚಾವಡಿಗೆ ಬಂದು ಸಿಂಹಾಸನದಲ್ಲಿ ರಾಮ ಕುಳಿತ. ಮನ್ನೆಯ ರಾಹುತರನ್ನು, ಕರಣಿಕ ಲಿಂಗನನ್ನು ಕರೆಸಿದ. ಮನ್ನೆಯರು ತಮ್ಮ ಸೈನ್ಯದೊಂದಿಗೆ ಬಂದರು. ನೂರಾರು ಮಂದಿಯೊಂದಿಗೆ ಬಂದ ಬೂಟಕ ಬೊಮ್ಮನಿಗೆ ಪಟುನೂಲ ಕೊರಳ ಪದಕ ಕೊಟ್ಟ. ಇನ್ನೂರು ಆಳುಗಳೊಂದಿಗೆ ಬಂದ ಮನ್ನಾಲ ಮಾಚಲಿಗೆ ಹೊನ್ನ ಸರಪಳಿಕೊಟ್ಟ. ನೂರಾಳು ಸಹಿತ ಬಂದ ಗಡಿಯಕೋಟೆಯ ದೇವನಿಗೆ ಕಡುಕು ಕಂಠಮಾಳೆಯನ್ನು ಕೊಟ್ಟ, ಬಂಟರೈವತ್ತು ಜನರೊಂದಿಗೆ ಬಂದ ಯನುಮಾಲ ಚಿತ್ತನಿಗೆ ಕನಕ ಮಣಿ ಕೊಟ್ಟ. ಅರುವತ್ತು ಬಿಲ್ಲ ಮಂದಿಯೊಂದಿಗೆ ಬಂದ ಮರುಳೆಯ ಪಾಪನಿಗೆ ಸರಮುತ್ತು ಚೌಕುಳಿಕೊಟ್ಟ. ಬರುಚಿಯ ನೂರು ಮಂದಿಯೊಂದಿಗೆ ಬಂದ ಎರಬೋತು ಕಾಮನಿಗೆ ಬಿರುದು ಬಾವಲಿ ಸರಪಳಿಕೊಟ್ಟು. ಇನ್ನೂರು ಜನ ಒಳಕಾವಲ ಮಂದಿಯನ್ನು ಕರೆದುಕೊಂಡು ಬಂದ ತುಳುವರ ಹಿರಿಯನಿಗೆ ಹಳದಿಯ ಬಿರುದು, ಮುತ್ತಿನೊಂಟಿ, ಕಡೆಗಳನ್ನು ಕೊಟ್ಟ. ಇನ್ನೂರು ಜನ ಹೊಣಕೆಯ ಮಂದಿಯನ್ನು ಕರೆದುತಂದ ನೆಲಗತ್ತಿ ತಿಮ್ಮನಿಗೆ ಹಳದಿಯ ಬಿರುದು, ಮತ್ತಿನೊಂಟಿ, ಕಡೆಗಳನ್ನು ಕೊಟ್ಟ. ಮೀಟಾದ ಮುನ್ನೂರು ಹರಿಗೆಯ ಜನರೊಂದಿಗೆ ಬಂದ ಕೊಟಗರ ದೇವನಿಗೆ ಕಟುಕು ಮುರುಡಿ ಸರಪಳಿ ಕೊಟ್ಟ. ನೂರು ಮುಕ್ಕಣ್ಣಬಲ್ಲೆ ಸಹಿತ ಬಂದ ಒಕ್ಕಲಿಗರ ಮುದ್ದನಿಗೆ ಹೊಕ್ಕುಳ ಗಮಟೆಯನ್ನು ಕೊಟ್ಟ. ಮಾದಿಗ ಹಂಪನಿಗೆ ಐದುನೂರು ಉಮ್ಮಳಿಕೊಟ್ಟ. ಇನ್ನೂರು ಹೊಸ ಕಟ್ಟಿನ ಈಟಿ ತಂದ ಅಸಗೋಡ ಬಸವನಿಗೆ ಜವಳಿ ಕೊಟ್ಟ. ಉಕ್ಕುವ ಬಾಣ ಮುನ್ನೂರು ಹಿಡಿದು ತಂದ ಅಕ್ಕಸಾಲಿಗ ಚಿಕ್ಕನಿಗೆ (ಉಡುಗೊರೆ ಕೊಟ್ಟ). ಮುನ್ನೂರು ಹಳೆಯ ಮಂದಿಯೊಂದಿಗೆ ಬಂದ ಮಲೆಯ ಕಾವ ಕಾಟಿನಾಯಕನಿಗೆ ಉಡುಗೊರೆ ಕೊಟ್ಟ. ನೂರು ಬಾಣದ ಮಂದಿಯೊಂದಿಗೆ ಬಂದ ಬಾಣದ ಬಸವನಿಗೆ ಹಿಡಿ ಹೊನ್ನಕೊಟ್ಟ. ಒಳಕಾವಲ ನೂರು ಮಂದಿಯೊಂದಿಗೆ ಬಂದ ದಳಧೂಳಿ ಮಾದನಿಗೆ ಬಳೆಯನ್ನು ಕೊಟ್ಟ. ಮುನ್ನೂರು ಮುಕ್ಕಣ್ಣ ಬರುಚಿ ಸಹಿತ ಬಂದ ಬುಕ್ಕನ ಪಾಲನಿಗೆ ಲೆಕ್ಕವಿಲ್ಲದಷ್ಟು ಹೊನ್ನ ಕೊಟ್ಟ. ನೂರಾರು ಹತ್ತಿಕಾರಿಕೆಯೊಂದಿಗೆ ಬಂದ ಗುತ್ತಿಯ ಚಾಮನಿಗೆ ಮುತ್ತಿನಾಭರಣವನ್ನು ಕೊಟ್ಟ. ಮುನ್ನೂರು ಗಾಜಿನ ಮಂದಿಯೊಂದಿಗೆ ಬಂದ ಗುಜ್ಜಲ ಓಬನಿಗೆ ಬಾಪುರಿಕೊಟ್ಟ. ಮುನ್ನೂರು ಮುಕ್ಕಣ್ಣ ಬಲ್ಲೆಯದೊಂದಿಗೆ ಬಂದ ರಕ್ಕಸ ಮಾದನಿಗೆ ಪಚ್ಚೇದ ಕಡಗಕೊಟ್ಟ, ಮುನ್ನೂರು ಕಂಬಿಮರ ಬಿಲ್ಲಿನೊಂದಿಗೆ ಬಂದ ಕುಂಭಕೋಣೆಯ ವಿರನಿಗೆ ಜಾಳಿಗೆ ಹೊನ್ನು ಕೊಟ್ಟ. ನೂರು ಜನ ಬಿಲ್ಲುಗಾರರೊಂದಿಗೆ ಬಂದ ಹಗ್ಲಾದ ಮಾದನಿಗೆ ಹುಗ್ಗಿ ತುಪ್ಪಕ್ಕೆ ಊರಕೊಟ್ಟ. ನೂರು ಜನ ಬಿಲ್ಲ ಮನ್ನೆಯರನ್ನೊಳಗೊಂಡು ಬಂದ ನಲ್ಲೂರ ನಲ್ಲನಿಗೆ (ಕಾಣಿಕೆಕೊಟ್ಟ). ನೂರಾಳು ಮನ್ನೆಯರೊಂದಿಗೆ ಬಂದ ಕುಂದುರ್ಪಿಪ ಲನಿಗೆ ಚಂದ್ರಗಾವಿಯ ಬಿರುದ ಕೊಟ್ಟ. ಕಾಲ ಸರದ ನೂರು ಮಂದಿಯೊಂದಿಗೆ ಬಂದ ರಾಯದುರ್ಗದ ರಾಮನಿಗೆ ಹೊನ್ನು-ಜವಳಿ ಉನ್ನತ ವಸ್ತ್ರಾಭರಣ ಕೊಟ್ಟ. ಎಪ್ಪತ್ತು ಏಳು ಮಾನ್ಯರಿಗೆ ವೀಳ್ಯವ ಕೊಟ್ಟ.

ಕುದುರೆಯ ಫೌಜು, ಆನೆಯ ಫೌಜು ತರಬೇಕೆಂದು ರಾಮ ಆದೇಶ ನೀಡಿದ. ಆಗ ಆರೇರ ಚಾಮರಾಯನ ಮಕ್ಕಳು, ದೇವಿಶೆಟ್ಟಿಯ ಲಿಂಗ, ಭಾವ ಸಂಗಮದೇವ, ಜೀವರತ್ನದ ಮಲ್ಲಿದೇವ, ಅಣ್ಣ ಕಾಟಣ್ಣ ಕುದುರೆ ಪೌಜು ತಂದರು. ಇವರೆಲ್ಲರಿಗೆ ರಾಮಯ್ಯ ಉಡುಗೊರೆ-ವೀಳ್ಯ ಕೊಟ್ಟ. ಕರಣಿಕ ಲಿಂಗನ ಕರೆದು ಸೈನ್ಯದ ಲೆಕ್ಕ ಕೇಳಿದ. ಸೈನ್ಯ ಸಾಳುವುದಿಲ್ಲ, ಹೆಚ್ಚಿನ ಸೈನ್ಯ ಸಂಗ್ರಹಿಸಲು ಬೈಚಪ್ಪನಿಗೆ ಹೇಳಿದ.

ಅಂದು ಬೈಗಿನ ಸಮಯದಲ್ಲಿ ರಾಮಯ್ಯ ಮತ್ತೆ ಆಸ್ತಾನಕ್ಕೆ ಬಂದು ಆಸೀನನಾದ. ಶೆಟ್ಟಿ, ಮಾನ್ಯರು, ಗೌಡ, ಒಕ್ಕಲುಗಳು ಬಂದು ಪಟ್ಟದುಡುಗೊರೆ ಕೊಟ್ಟರು. ಪ್ರಜೆಗಳು ಬಂದು ಹೊನ್ನಡಿದಾರ ಕೊಟ್ಟರು. ರಾಮಯ್ಯ ಅವರಿಗೆ ವಂದಿಸಿ 'ನಿಮ್ಮಿಂದ ನಮ್ಮ ದೊರೆತನವು' ಎಂದು ನುಡಿದು, ಗಂಧವೀಳ್ಯ ನೀಡಿದ. ಬೈಚಪ್ಪನನ್ನು ಬರಮಾಡಿಕೊಂಡು ಸುತ್ತಣ ಗೌಡರ ಕರೆಸಲು ಸೂಚಿಸಿದ. ಓಲೆಗೆ ಮನ್ನಣೆಯಿತ್ತು, ಹುಕ್ಕೇರಿ ಸೀಮೆಯ ಗೌಡ ಕುಲಕರ್ಣಿಗಳು ಬಂದು ಒಕ್ಕುಳ ಹೊನ್ನು, ಉಡುಗೊರೆ, ಹಣ್ಣು, ಫಲ ಅರ್ಪಿಸಿದರು. ಇಕ್ಕೇರಿ ಸೀಮೆಯ ಗೌಡರು ಲಕ್ಷದ ಮೇಲೆ ಹನ್ನೊಂದು ಸಾವಿರ ಕಾಣಿಕೆ ನೀಡಿದರು. ಕಲ್ಯಾಣ ಕಲಬುರಗಿ ಮೊದಲಾದ ಸೀಮೆಗಳ ನಾಡಿಗರು ಐದು ಲಕ್ಷ ಹೊನ್ನು ನೀಡಿದರು. ಸಾಗರ ಸೀಮೆಯ ಶೆಟ್ಟಿ ಪ್ರಜೆ-ಗೌಡ-ಕುಲಕರ್ಣಿಗಳು ಐದು ಲಕ್ಷ ಹೊನ್ನ ಸಲ್ಲಿಸಿದರು. ತೊರಗಲ್ಲು ಬದಾಮಿ ಸೀಮೆಯ ಗೌಡರಾದ ಮರಿಗೌಡ, ಮುದಿಗೌಡರು ಎರಡು ಸಾವಿರ ಹೊನ್ನು ಉಡುಗೊರೆ ಸಲ್ಲಿಸಿದರು. ಬಸವಪಟ್ಟಣದ ಮುದ್ದನಗೌಡ ಐವತ್ತು ಸಾವಿರ ಹೊನ್ನು ನೀಡಿದನು. ಆದವನ್ನಿ ಸೀಮೆ ರೆಡ್ಡಿ ಕುಲಕರ್ಣಿಗಳು ಹದಿನೆಂಟು ಸಾವಿರ ಹೊನ್ನ ಸಲ್ಲಿಸಿದರು. ಉಮ್ಮಳಿದಾರರು, ಪುರವರ್ಗದವರು ಒಮ್ಮನ ಹೊನ್ನ ಸಲ್ಲಿಸಿದರು. ಬಂದವರಿಗೆ ಗೌರವಿಸಿ ರಾಮಯ್ಯ ತಂದೆಗೆ ವಂದಿಸಿದ. ಮಾವನಾದ ಗುತ್ತಿಯ

ಜಗದಪ್ಪನು ಅಳಿಯ ರಾಮನಿಗೆ ಪಟ್ಟದ ಉಡುಗೊರೆ, ಪೆಟ್ಟಿಗೆ ಬಂಗಾರವನ್ನೂ ಕಂಪಿಲನಿಗೆ ಪಟ್ಟಾವಳಿ ಮುತ್ತಿನಾಭರಣವನ್ನೂ ಕಳಿಸಿದ. ಮಗಳು ರಾಮಕ್ಕಗೆ ಮುತ್ತಿನಾಭರಣ, ಐದೂರು ಜೀಬಿ ನಾಣ್ಯ ಕೊಟ್ಟನು.

**ಸಂಧಿ:೧೩**

ರಾಮಯ್ಯ ಮಂತ್ರಿಯನ್ನು ಕರೆಯಿಸಿ ಜಟ್ಟಂಗಿ ರಾಮೇಶ್ವನ ದರ್ಶನಕ್ಕೆ ಹೋಗುವ ಬಗ್ಗೆ ಹೇಳಿದ. ಅಕ್ಕಿ, ಬೇಳೆ, ಗೋದಿಹಿಟ್ಟು, ಸಂಬಾರ, ಸಕ್ಕರೆ, ಬೆಲ್ಲ, ಸಣ್ಣಕ್ಕಿ ಹೇರು ಸಿದ್ಧವಾದವು. ಅಡಕೆ, ಬಿಳಿ ಎಲೆ, ಕರ್ಪೂರ, ಮಾದಾಳ, ಖರ್ಜೂರ, ಹಾಲು, ಮೊಸರು, ಆಲೆ, ರಸದಾಳಿ, ಕ್ಷೀರಗಳು ನೈವೇದ್ಯಕ್ಕೆ; ಜವಳಿ, ರೊಕ್ಕ ಹೊನ್ನು ಪಾದಗಾಣಿಕೆಗೆ ಪಲ್ಲಕ್ಕಿ ಏರಿ ನಡೆದ. ಹಿರಿಯ ಸೊಸೆ ಕಂಚಲವ್ವ ಸಹಿತ ಎಲ್ಲ ಅರಸುವೆಣ್ಣುಗಳು ನಡೆದು ಹಂಪಿಯ ವಿರೂಪಾಕ್ಷನ ದರ್ಶನ ಪಡೆದರು. ಜಂಗಮಕೆ ಪರ್ವಮಾಡಿ, ಬ್ರಾಹ್ಮಣರಿಗೆ ಸಮಾರಾಧನೆ ಮಾಡಿ ಮುನ್ನಡೆದರು. ಕಂಪಲಿಯ ಸೋಮೇಶನಿಗೆ ಮಹಾಪರುವ ಮಾಡಿ ಮುಂದಕ್ಕೆ ಸಾಗಿ, ಜಟ್ಟಂಗಿ ರಾಮನ ಗುಡಿಗೆ ಬಂದರು. ಅಲ್ಲಿ ದೇವಸಮುದ್ರವೆಂಬ ಕೆರೆಯಿಂಟು, ಬಾವಿ ಪೋದೋಟ ವನವುಂಟು, ಕಾವಲ ಮಲೆಯುಂಟು, ಕಸ್ತೂರಿಮೃಗವುಂಟು. ಸ್ನಾನಮಾಡಿ ಎಲ್ಲರೂ ಮಲ್ಲಿಕಾರ್ಜುನನ, ಜಟ್ಟಂಗೇಶನ ಗುಡಿಗಳಿಗೆ ಬಂದರು. ರಾಮಯ್ಯ ಪೂಜೆಮಾಡಿ ಬ್ರಾಹ್ಮಣರಿಗೆ, ಜಂಗಮರಿಗೆ ದಕ್ಷಿಣೆ ನೀಡಿದನು. ದೊರೆ ಮಕ್ಕಳಿಗೆ ಕರಣಿಕ ಲಿಂಗನ ಮೂಲಕ ಉಲುಪೆಕೊಡಿಸಿದನು. 'ನರಜನ್ಮದೊಳಗೆನ್ನನೇಕೆ ಪುಟ್ಟಿಸಿದಯ್ಯ, ಧರಿಸಿದ ಬಿರಿದ ದಕ್ಕಿಸಿ ರಣರಂಗದಿ ಕರೆದೊಯ್ಯಬೇಕೆನ್ನ ನೀನು' ಎಂದು ಬೇಡಿಕೊಂಡ. ಎಂದಿದ್ದರೀ ಕಾಯ ಎನಗೆ ನಂಬಿಗೆಯಿಲ್ಲ, ಕಂದನ ಮೇಲೆ ದಯಮಾಡೋ' ಎಂದು ಪ್ರಾರ್ಥಿಸಿದ. ಜಟ್ಟಂಗಿ ರಾಮೇಶ್ವರ ಮೆಚ್ಚಿ ಮಲ್ಲಿಗೆ ಪುಷ್ಪದ ವರವನ್ನಿತ್ತ. ರಾಮಯ್ಯ ಕುಮ್ಮಟಕ್ಕೆ ಮರಳಿ, ತಂದೆ ತಾಯಿಗಳಿಗೆ ನಮಸ್ಕರಿಸಿದ. ಸುರಿತಾಳನ ಮಗಳು, ತನ್ನನ್ನು ಹಿಡಿತರಿಸಿ ಮದುವೆಯಾಗ ಬಯಸಿದ ಸಂಗತಿಯನ್ನು ಅವರಿಗೆ ಹೇಳಿ, ಈ ವಿಷಯದಲ್ಲಿ 'ಪರನಾರಿ ಸಹೋದರ'ನಾಗುವೆನೆಂದು ಸಾರಿದ.

ಮರುದಿನ ಬೈಚಪ್ಪನೊಡನೆ ಹೊಸಮಲೆದುರ್ಗಕ್ಕೆ ಹೋಗಿ, ಬಿದ್ದ ಕೋಟೆಗಳನಿಕ್ಕಿಸಿ, ಬೊಕ್ಕಸ ಪರೀಕ್ಷಿಸಿ, ಒಕ್ಕಲುಗಳಿಗೆ ಬುದ್ಧಿಯ ಹೇಳಿ, ಗಡಿಗಳನ್ನು ನೋಡಲು ಹೊರಟ. ಗಡಿಗಳನ್ನು ಭದ್ರಮಾಡಿ, ಕಣಜ ಬೊಕ್ಕಸ ಬಲಿಸಿ, ಕೆರೆ ಹೂದೋಟ ನಿರ್ಮಿಸಿ, ಸೆರೆಯಲ್ಲಿದ್ದವರನ್ನು ಬಿಡಿಸಿ, ಹಸಿದು ಬಂದವರಿಗೆ ಅನ್ನವ್ಯವಸ್ಥೆಮಾಡಿದ. ಎಲ್ಲ ಕಡೆ ಕೆರೆ, ಕಾಲುವೆ, ಬಾವಿ, ತೋಪು, ವನ, ಮಲ್ಲಿಗೆ ಶೃಂಗಾರ ತೋಟ, ಮಂಟಪಗಳನ್ನು ರಾಮಯ್ಯ ನಿರ್ಮಿಸಿದ. ಅನ್ನಛತ್ರ, ಅರವಟ್ಟಿಗೆ, ಮಠಮಾನ್ಯ, ಅಗ್ರಹಾರಗಳನ್ನು ರಚಿಸಿದ. ರಾಮನ ಕೀರ್ತಿ ದಿಳ್ಳಿಗೆ ತಲುಪಿತು. ನೇಮಿಯನ್ನು ಕಳಿಸಿ ರಾಮನನ್ನು ಬೇಗ ಹಿಡಿತರಿಸಲು ಮಗಳು ಸುರಿತಾಳನಿಗೆ ಹೇಳಿದಳು. 'ಮುಪ್ಪಾಗಿ ಹೋದೆನಯ್ಯಯ್ಯೋ' ಎಂದು ವ್ಯಥೆ ಪಟ್ಟಳು.

**ಸಂಧಿ: ೧೪**

ಮಂತ್ರಿ ನೇಮಿಖಾನ ಕುಮಾರರಾಮನ ಚಿತ್ರಪಟವನ್ನು ಸುರಿತಾಳನ ಮಗಳಿಗೆ ಕಳಿಸಿದ. ನೋಡುತ್ತಲೇ ಆಕೆ ಮೂರ್ಛೆಹೋದಳು. ಸುರಿತಾಳ ಕಾರಣ ಕೇಳುತ್ತಲೇ "ಹಿಂದಣ ಜನ್ಮದಲ್ಲಿ ನಾನು ದ್ರೌಪದಿಯಾಗಿದ್ದೆ, ಕುಮಾರರಾಮ ಅರ್ಜುನನಾಗಿದ್ದ" ಎಂದು ಹೇಳುವಷ್ಟರಲ್ಲಿ 'ಎಲ್ಲಿಗಾದರೂ ನನ್ನನ್ನು ಯುದ್ಧಕ್ಕೆ ಕಳುಹು. ಬಲ್ಲಿದ ರಾಮನ ಮೇಲೆ ಬೇಡ' ಎಂದು ನೇಮಿ ನುಡಿದನು. ಕಳಹು ಗುಜರಾತಿಯ ಮೇಲೆ, ತೆಲುಗರ ಮೇಲೆ, ಕಳುಹು ಮಲೆಯಾಳದ ಮೇಲೆ, ಕಳುಹು ಮಗಧ ವಡ್ಡದೇಶದ ಮೇಲೆ, ಕಳಹಿಸಬೇಡ ಕುಮ್ಮಟದ ಮೇಲೆ. ಎಂದು ಮತ್ತೆ ನುಡಿದ. ಅಷ್ಟರಲ್ಲಿ ಮಾದಿಗಿತ್ತಿ ಬಂದು 'ರಾಮನನ್ನು ನಾನು ಹಿಡಿತರುತ್ತೇನೆ' ಎಂದು ವೀಳ್ಯ ಹಿಡಿದಳು. ನೇಮೀಖಾನನೂ ಒಳಗೊಂಡಂತೆ ಸೈನ್ಯ ಸಜ್ಜಾಯಿತು. ತೆಂಕಣದೇಶದ ಮಧ್ಯದಿ ಮಾತಂಗಿಯ ದಂಡು ಬೀಡು ಬಿಟ್ಟಿತು. ಮುನ್ನೂರು ಅರುವತ್ತು ಗಾವುದ ನಡೆದು ಬಂದ ದಂಡ ಕುಮ್ಮಟವನ್ನು ತಲುಪಿತು. ರಾಮಯ್ಯ ಕಡೆಯಕಲ್ಲನ್ನು ಹತ್ತಿ ವೈರಿಸೈನ್ಯ ನೋಡಿದ. 'ದುರ್ಗಕ್ಕೆ ತನಗೆ ಮದುವೆ'ಯೆಂದು ನುಡಿದ. ಕಂಪಿಲರಾಯ ಹೊಸಮಲೆದುರ್ಗಕ್ಕೆ ಹೋದ. ಭಂಡಾರವನ್ನು ಅಲ್ಲಿಗೆ ಸಾಗಿಸಲಾಯಿತು. ರಾಮಯ್ಯ ವೈರಿಸೈನ್ಯದ ಮೇಲೆ ಎರಗಿ ಭೂತಗಳಿಗೆ ಹೆಣಗಳನ್ನು ಉಣಬಡಿಸಿದ. ಹರಿಯಲದೇವಿ ಎರಡು ಖಂಡುಗ ಹಣ ಕಳಿಸಿದಳು. ಕತ್ತಲಾಗುತ್ತಲೇ ಕುಮ್ಮಟದುರ್ಗದಲ್ಲಿ ಕೈದೀವಿಗೆ ಬೆಳಗಿದವು. ಮುಂಜಾನೆ ಮನ್ನೆಯರನ್ನು ಕರೆಸಿ ಆಭರಣ ಉಡುಗೊರೆ ಕೊಟ್ಟು,

ದುರ್ಗವನ್ನಿಳಿದು ಹೋರಾಟ ಮಾಡಿದ. ವೈರಿಸೈನ್ಯ ಓಡಿಹೋಯಿತು. 'ಕಲ್ಲೊಳು ಕಾದಬಹುದು, ರಾಮನ ಕೊರೆ ನಿಲ್ಲಬಾರದು' ಎಂದು ತುರುಕ ಸೈನ್ಯ ತಮ್ಮತಮ್ಮಲ್ಲಿ ಮಾತನಾಡಿತು. ಮಾತಂಗಿ ಸೋತು ಒಂದು ಗಾವುದ ಹಿಂದೆ ಸರಿದಳು.

ಆಗ ರಾಮನ ಸೈನ್ಯದ ತೆಲುಗ ಮಾನ್ಯರೆಲ್ಲ ಸಭೆಸೇರಿ, 'ನವಲಕ್ಷ ತೆಲುಗರ ಗಂಡ' ಎಂಬ ರಾಮನ ಬಿರುದು ನಮಗೆ ಅಪಮಾನ. ಕಾರಣ ಇವನನ್ನು ಕೊಲ್ಲಿಸಬೇಕೆಂದು ತೀರ್ಮಾನಿಸಿ, 'ಹಿಂದಿರುಗಿ ಬಂದರೆ ಬಾಗಿಲ ತೆಗೆದುಕೊಡುವೆ'ವೆಂದು ಮಾದಿಗಿತ್ತಿಗೆ ಪತ್ರ ಕಳಿಸಿದರು.

**ಸಂಧಿ: ೧೫**

ಓಡಿಹೋದ ಮಾತಂಗಿ ತಿರುಗಿ ಬಂದಳು. 'ತೆಲುಗರ ಸಂಚಿನಿಂದಾಗಿ ಒಳಕೋಟೆ ಹೋಯಿತು. ಲೆತ್ತ ಬಿಟ್ಟು ಏಳು' ಎಂದು ರಾಮನಿಗೆ ಕಾಟಣ್ಣ ಹೇಳಿದ. ರಾಮಯ್ಯ ಈ ಅನಿರೀಕ್ಷಿತ ಬೆಳವಣಿಗೆಗೆ ಬೆರಗಾಗಿ, ಅರಮನೆಗೆ ಹೋದ. 'ಕಿಚ್ಚುಕೊಂಡು ಅಂಜಬೇಡಿರಿ. ನನ್ನೊಡನೆ ಸ್ವರ್ಗಕ್ಕೆ ಬನ್ನಿರಿ' ಎಂದು ಹೆಂಡಿರಿಗೆ ಹೇಳಿ, ತಾಂಬೂಲಕೊಟ್ಟು, ಯುದ್ಧಕ್ಕೆ ನಡೆದ. ಹೆಂಡತಿ ಬಂಗಾರದ ಬಟ್ಟಲಲ್ಲಿ ತಂದ ಅನ್ನವನ್ನು ಕಾಟಣ್ಣನೊಡನೆ ಒಟ್ಟಿಗೆ ಉಂಡ. ಮನ್ನೆಯರಿಗೆ ವೀಳ್ಯಕೊಟ್ಟು, ಬಿಲ್ಲು ಹಿಡಿದು ದ್ವಾರವಾಟಕ್ಕೆ ನಡೆದ. ಅಷ್ಟರಲ್ಲಿ ನಲ್ಲನಾಗನು ಬಿದ್ದ, ಬಿಲ್ಲ ಪೆನ್ನನು ಬಿದ್ದ, ಮೀನಿಗೆ ಸಿಂಗ ಬಿದ್ದ, ಜಲ್ಲಿಬಿಲ್ಲಿಯ ಬುಕ್ಕಿನಾಯಕ ಬಿದ್ದ, ಕಲ್ಲಿಕೋಟೆಯ ಚಿಕ್ಕ ಬಿದ್ದ, ಅಕ್ಕಸಾಲೆರ ಚಿಕ್ಕ ಬಿದ್ದ, ರಕ್ಕಸ ಮುನಿಯ ಬಿದ್ದ, ಕೊಳ್ಳಿಯ ನಾಗ ಬಿದ್ದ, ಬೇವಿನ ಸಿಂಗ ಬಿದ್ದ, ಹೊಲೆಯರ ಹಳ್ಳುಗ ಬಿದ್ದನೆಂಬ ವಾರ್ತೆ ಕೇಳಿ ರಾಮಯ್ಯ ದುರ್ಗವನ್ನಿಳಿದ. ತುರುಕರು ಬೆದರಿದರು. ಬೊಲ್ಲನನ್ನೇರಿ ಬಂದ ರಾಮನನ್ನು ಆನೆಯನ್ನೇರಿ ಬರುತ್ತಲಿದ್ದ ಮಾತಂಗಿ ಎದುರಿಸಿದಳು. ವೈರಿ ಸೈನ್ಯವನ್ನು ಕತ್ತರಿಸಿ ಹಾಕಿದ ಕುಮಾರರಾಮ ಮಾದಿಗಿತ್ತಿಯ ವೀರಜಡೆ ಹಿಡಿದೆಳೆದ. 'ಸಂಗ್ರಾಮದಲಿ ಹೆಂಗಸ ಕೊಂದರೆ ದುಸ್ಸಂಗ ತಪ್ಪದು ಸ್ವರ್ಗದಲಿ' ಎನ್ನುತ ಅವಳ ಮುಂದರೆ ಬಿಡುವುದೇ ತಡ, ಆಕೆ ಸಿಂಗಾಡಿಯಿಂದ ಹೊಡೆದು, ಬಾಣದ ಮಳೆಸುಳಿದಳು. ರಾಮ ತನ್ನೆದೆಯ ಮಾಣಗಳನ್ನು ಕಿತ್ತುಹಾಕಿದನು. ಅಷ್ಟರಲ್ಲಿ ಬಾಣದ ಬಸವ ಸತ್ತ. ವೈರಿಗಳು ರಾಮನನ್ನು ಸುತ್ತಲೂ ಮುತ್ತಿದರು. ರಾಮಯ್ಯ ಗೊಗೆಗಲ್ಲಿನ ಮೇಲೆ ನಿಂತನು. ದೂರದಿಂದ ರಾಮನ ಸ್ಥಿತಿ ನೋಡಿದ ಕಾಟ ಕಾದುತ್ತ ಸಮೀಪ ಬಂದನು. 'ನಮ್ಮ ಸೈನ್ಯ ಹಾಳಾಯಿತು, ನೀನು ಮನೆಗೆ ಹೋಗಿ ಹೆಂಡಂದಿರಿಗೆ ಕಿಚ್ಚುಕೊಟ್ಟು ಬಾ. ನನ್ನ ಗಾಯ ಹೆಚ್ಚಿತು. ತಾಯಿಗೆ ನನ್ನ ಕಡೆಯವನ್ನು ಒಪ್ಪಿಸಿ ಬಾ' ಎಂದು ಕಾಟಣ್ಣನಿಗೆ ಹೇಳಿದ.

ಸುಣ್ಣ ಸಾಸಿವೆ ಒಡಲಲ್ಲಿ ಹೊಯ್ದಂತೆ, ಕಣ್ಣೋದ ಮರಿಯಂತೆ ಕಾಟಣ್ಣ ದುಃಖಿಸಿದ. 'ನಿನ್ನೊಡನೆ ಸಾಯುವೆ ತಮ್ಮ' ಎಂದು ಹಲುಬಿದ. 'ಮನ್ನಿಸೋ ನಿನ್ನ ಪ್ರಾಣವನೊಂದುಗಳಿಗೆ. ನಾನು ನಿನ್ನೊಂದಿಗೆ ಅಳಿಯುತ್ತೇನೆ' ಎಂದು ನುಡಿದ. 'ನಾನು ಹೋಗಿ ಬರುವ ವರೆಗೆ ವೈರಿಗೆ ಅಂಗವ ಕೊಡಬೇಡ' ಎಂದು ಹೇಳಿ, ಕಾಟಣ್ಣ ಉರಿಗೊಂಡ ಕರ್ಪೂರದಂತೆ ಹೊಸಮಲೆಗೆ ಓಡಿಬಂದು, ಕಂಪಿಲ ಹರಿಯಮ್ಮನಿಗೆ ಹೇಳಿದ. ತಿರುಗಿ ಕುಮ್ಮಟಕ್ಕೆ ಬಂದು ರಾಮನ ಮಡದಿಯರಿಗೆ ಶೃಂಗಾರ ಮಾಡಿಸಿದ. ದುಃಖಿಸಿದ ಅವರು ಆಡುತ್ತ ಪಾಡುತ್ತ ರಾಜಬೀದಿಯಲ್ಲಿ ಬಂದಡು. ಮಳಲಗೌರಿಯನ್ನು ಪೂಜಿಸಿ, 'ಏಳೇಳು ಜನ್ಮದಲ್ಲಿ ನೀನೇ ಗಂಡನಾಗೆ'ದು ನುಡಿದು ಓಡಿಬಂದು, ಕೊಂಡದ ಕಟ್ಟೆಯನ್ನು ಹತ್ತಿ, ರಾಮಯ್ಯನನ್ನು ಪಾಡುತ್ತ ಕೊಂಡದಲ್ಲಿ ಧುಮಿಕಿದರು. ತನ್ನ ಮನೆಗೆ ಬಂದ ಕಾಟನಿಗೆ 'ತಡಬೇಡ ಎನ್ನನು ಕಡಿ' ಎಂದು ಹೆಂಡತಿ ಕೈಗೆ ಖಡ್ಗಕೊಟ್ಟಳು. ಕಡಿದ ಕಾಟ ಹೆಂಡತಿಯ ಬಾಯಲ್ಲಿ ಬಾಯಿ ಇಟ್ಟು, ಅವಳ ಹೆಣವನ್ನು ಭೂಮಿಯ ಮೇಲೆ ಒರಗಿಸಿ, ರಾಮಯ್ಯನಿದ್ದಲ್ಲಿಗೆ ಬಂದರು. 'ಊರು ಹೋಯಿತು, ಒಳಹೊಕ್ಕರು ತುರುಕರು' ಎಂದು ನಿಶ್ಚಯಿಸಿಕೊಂಡ. ಅಷ್ಟರಲ್ಲಿ ದೇವಿಶೆಟ್ಟಿಯ ಲಿಂಗ ಹೋರಾಡುತ್ತ ಸತ್ತ. ಏರಿಬಂದ ಬಾಣ ನಟ್ಟು, ಕುದುರೆಮೇಲಿಂದ ರಾಮ ಬೀಳುತ್ತಲೇ ನೇಜೆಯೂರಿ ಮೂರ್ಛೆಯಲ್ಲಿ ನಿಂತ. ಇದನ್ನು ನೋಡಿದ ಕಾಟ ಮಾದಿಗಿತ್ತಿಯನ್ನು ಕೊಲ್ಲಲು ಧಾವಿಸಿದ. ಅಷ್ಟರಲ್ಲಿ ಬಾಣ ತಾಗಿ ಉರುಳಿದ.

**ಸಂಧಿ: ೧೬**

ಮಾದಿಗಿತ್ತಿ ತಿರುಗಿಬಂದು ರಾಮನ ಮೇಲೆ ಬಾಣಗಳನ್ನು ಸುರಿದಳು. ಬೊಟ್ಟು ಊರಲು ಜಾಗವಿಲ್ಲದಂತೆ ಮೈತುಂಬ ನೆಟ್ಟವು. ಮಿಕ್ಕವರು ಮುತ್ತಿದರು. ರಾಮಯ್ಯ ಪ್ರಾಣಬಿಟ್ಟ. ಆತನ ಮೇಲೆ ಕಾಗೆ ಕುಳಿತುದನ್ನು ಕಂಡು, ಸತ್ತುದನ್ನು ಖಚಿತ ಮಾಡಿಕೊಂಡ ವೈರಿ ಸೈನಿಕರು ಸಮೀಪ ಬಂದರು. ಮಾತಂಗಿ ರಾಮನನ್ನು ಎಳೆದು ಹಾಕಿದಳು. ಅಷ್ಟರಲ್ಲಿ ಜೀವ ಮರುಕಳಿಸಲು ಎಲ್ಲರೂ ಅಂಜಿ ನಮಸ್ಕರಿಸಿದರು.

ಸುರಲೋಕದ ಅಪ್ಸರೆಯರು ಎತ್ತಿಕೊಳ್ಳಲು ಬಂದರೆ 'ಪರನಾರಿ'ಯರೆಂದು ರಾಮ ಹಿಂದೆ ಸರಿದನು. ಮತ್ತೆ ಮೇಲೆ ಕಾಗಿ ಕುಳಿತುಕೊಳ್ಳಲು ಸತ್ತುದನ್ನು ಖಚಿತಪಡಿಸಿಕೊಂಡು, ಅವನನ್ನು ಒತ್ತಿ ತಿವಿದು ನೂಕಿದರು. ಮಾತಂಗಿ ಹತ್ತಿರ ಬಂದು ತಲೆಗೊಯ್ದರು. ಬೊಲ್ಲನನ್ನು ಹಿಡಿಯಲು ತುರುಕರು ಸರಪಳಿ ತಂದರು. ಪಕ್ಷಿಯಂತೆ ಆಕಾಶಕ್ಕೆ ಹಾಕಿ ಭೂಮಿಗೆ ಬಿದ್ದಿತು. ರಾಮನ ಬಾಯಿಯನ್ನು ಮುತ್ತಿ ಮಾಣಿಕ ಚಿನ್ನ ತುಂಬಿ, ತಲೆಗೆ ದೇವಾಂಗ ಸುತ್ತಿದರು. ಗಂಧ ಕಸ್ತೂರಿ ಕುಂಕುಮ ಜಾಜಿ ಮಲ್ಲಿಗೆ ಸಂಪಗೆಗಳಿಂದ ಅಲಂಕರಿಸಿ, ಕೊಯ್ದ ತಲೆಯನ್ನು ಸುರಿತಾಳನೆಡೆಗೆ ಕಳಿಸಿದರು. ಸುರಿತಾಳ ಮಗಳೊಂದಿಗೆ ಬಂದು ತಲೆಯನ್ನು ನೋಡಿದ. 'ರಾಮನನ್ನು ಜೀವಂತ ತರಲು ಹೇಳಿದೆ, ಹೀಗಾಯಿತೇ' ಎಂದು ಮರುಗಿದ. 'ಪ್ರಾಣಸಹಿತ ತರುವರೆಂದು ನಿರೀಕ್ಷಿಸಿದ್ದೆ' ಎಂದು ಮಗಳು ಅತ್ತಳು. 'ರಾಮನನ್ನು ಬಿಡಲಾರೆ'ನೆಂದು ಅವನ ಜಡೆಯ ಮುತ್ತಿನ ಗೊಂಡೆ ತೆಗೆದು ತನ್ನ ಮುಡಿಯಲ್ಲಿ ಇಟ್ಟುಕೊಂಡಳು. ತಲೆಯನ್ನು ತೊಡೆಯ ಮೇಲಿಟ್ಟುಕೊಂಡು ನೋಡಿದಳು. ಉಡಿಯಲ್ಲಿ ಕಟ್ಟಿಕೊಂಡು ಕಿಚ್ಚಿನಲ್ಲಿ ಬೀಳಲು ಸಿದ್ಧಳಾದಳು. ಸುರಿತಾಳ, ಅಪಕೀರ್ತಿಗೆ ದಾರಿಮಾಡಿಕೊಡಬೇಡೆಂದು ಮಗಳಿಗೆ ಬುದ್ಧಿ ಹೇಳಿ ಬಿಡಿಸಿದ.

ಉಳಿಗದವರು ರುಂಡವನ್ನು ದಿಳ್ಳಿಯ ಸುರಹೊನ್ನೆ ಮರದ ರೆಂಬೆಗೆ ಕಟ್ಟಿದರು. ರಾತ್ರಿ ರಾಮನ ಬೊಬ್ಬೆಗೆ ನಡುಗಿ ಜನ ಭಯಭೀತರಾದರು. ಆಗ ಆ ತಲೆಯನ್ನು ಕೋಟೆಯ ಅಗುಳಿಗೆ ಹಾಕಿದರು. ಆಗಲೂ ರಾಮನ ಧ್ವನಿ ಕೇಳಿ ಜನ ಪ್ರಾನೀಗತೊಡಗಿದರು. ಆಗ ಸುರಿತಾಳನ ಆಜ್ಞೆಯಂತೆ ಒಬ್ಬ ಭಟ್ಟನು ಕಂಪಿಲನಲ್ಲಿಗೆ ಬಂದು, ರಾಮನ ತಲೆ ಒಯ್ಯಲು ಹೇಳಿದ. ಕಂಪಿಲ ಭಟ್ಟರ ರೂಪಿದೇವಯ್ಯನನ್ನು ಡಿಳ್ಳಿಗೆ ಕಳುಹಿಸಿದ. ಸುರಿತಾಳನನ್ನು ಕಂಡ. ರಾತ್ರಿ ಮಲಗಿದ ರೂಪಿದೇವಯ್ಯನ ಕನಸಿನಲ್ಲಿ ಬಂದು, 'ದಿಳ್ಳಿ ಸುರಿತಾಳನ ಗಂಡ' ಎಂದು ಬಿರುದು ಉಗ್ಘಡಿಸಿದರೆ ಮಾತ್ರ ಬರುವೆ- ಎಂದು ರಾಮಯ್ಯ ಹೇಳಿದ. ಮುಂಜಾನೆ ರುಂಡದ ಹತ್ತಿರ ಸುರಿತಾಳ, ಆರತಿ ಹಿಡಿದು ಅವನ ಮಗಳು ನಿಂತರು. ರೂಪಿದೇವಯ್ಯ ಬಿರುದು ಹೊಗಳಿದ. ಕೈಗೆ ಬಂದ ರುಂಡದೊಂದಿಗೆ ಕುಮ್ಮಟಕ್ಕೆ ಮರಳಿದ. ದಾರಿಯಲ್ಲಿ ರುಂಡ ನೆಲದ ಮೇಲಿಟ್ಟು ರೂಪದೇವಯ್ಯ ವಿಶ್ಯಾಲ್ಯ(?)ಕ್ಕೆ ಹೋದ. ಅಷ್ಟರಲ್ಲಿ ಅದು ಮರವನ್ನೇರಿತು. 'ಅಡಗದೆ ನಿನ್ನ ಪರಾಕ್ರಮ ಕೀರ್ತಿ' ಎನ್ನುತ್ತ ಹೋಗಿ ರುಂಡವನ್ನು ಹಿಡಿಯಲು, ಪ್ರಾಣ ಅಳಿಯಿತು. ರೂಪಿದೇವಯ್ಯ ರುಂಡದೊಂದಿಗೆ ಕುಮ್ಮಟಕ್ಕೆ ಬಂದ. ಕಂಪಿಲ, ಹಿರಿಯಮ್ಮ, ಒಡಹುಟ್ಟುದವರು, ಪ್ರಜಾ ಪರಿವಾರ ಗೋಳಿಟ್ಟಿತು. ಹರಿಯಮ್ಮ ಈ ರೀತಿ ಹಣೆಯ ಬರಹವನ್ನು ಬರೆದ ಬ್ರಹ್ಮನನ್ನು, ಮಿಕ್ಕ ದೇವರನ್ನು ಶಪಿಸಿದಳು. ಕಂಪಿಲನ ಆಜ್ಞೆಯಂತೆ ರಾಮನ ತಲೆಯನ್ನು ಕಾಶಿಗೆ ತೆಗೆದುಕೊಂಡು ಹೋದರು. ಇತ್ತ ಶಿವ, ರಾಮನ ಮುಂಡವನ್ನು ಕೈಲಾಸಕ್ಕೆ ತರಿಸಿದ. ಗಂಗಾನದಿಗೆ ರುಂಡವನ್ನು ಹಾಕುವಷ್ಟರಲ್ಲಿ ಗರುಡಬಂದು ಕೈಲಾಸಕ್ಕೆ ಒಯ್ದು ಬಿಟ್ಟಿತು. ರುಂಡ ಮುಂಡ ಕೂಡಿಸಿ ಶಿವ ದೇಹದಲ್ಲಿ ಪ್ರಾಣ ಪ್ರತಿಷ್ಠಾಪಿಸಿದ. 'ನನ್ನ ಜೂಜ ಗೆಲಿಸಿದೆ'ಯೆಂದು ರಾಮಯ್ಯನನ್ನು ಶಿವ ಹೊಗಳಿದ. ನನ್ನ ರಂಭೆ ನಿನ್ನ ಅರ್ಜುನನನ್ನು ಗೆಲ್ಲಲಿಲ್ಲವೆಂದು ಪಾರ್ವತಿ ನುಡಿದಳು. ಆಗ ಶಿವನ ಆಜ್ಞೆಯಂತೆ ಅರ್ಜು ವಿಷ್ಣು ಗರುಡವನ್ನೇರಿ ವೈಕುಂಠಕ್ಕೆ ಹೋದರು.

**ಆಕೃತಿ**

ಕವಿಯೊಬ್ಬ, ಜೀವನವೆಂಬ 'ಕೃತಿ'ಯನ್ನು ಒಂದು 'ಆಕೃತಿ' ವಿನ್ಯಾಸದಲ್ಲಿ ಕಟ್ಟಿಕೊಡುತ್ತಾನೆ. ಈ ಆಕೃತಿ ಪದ್ಯವಾಗಿದ್ದ ಪಕ್ಷದಲ್ಲಿ, ಅದು ಕಥಾವಿನ್ಯಾಸದ ಜೊತೆಗೆ ಛಂದೋವಿನ್ಯಾಸವನ್ನೂ ಒಳಗೊಳ್ಳುತ್ತದೆ, ಒಂದು ಕಲಾಕೃತಿಯಾಗಿ ನಿಲ್ಲುತ್ತದೆ.

ಕುಮಾರರಾಮ ರಾಜಕೀಯ ಕ್ಷೇತ್ರದ ವ್ಯಕ್ತಿ. ಈ ಹೊತ್ತಿಗೆ ಕರ್ನಾಟಕದ ಸಾರ್ವಭೌಮತ್ವ ಬಿರುಕುಬಿಟ್ಟು, ರಾಜರನ್ನು ಕುರಿತು ಮಹಾಕೃತಿ ನಿರ್ಮಾಣ ಮಾಡುವ ವಾತಾವರಣ ನಾಶವಾಗಿದ್ದಿತು. ಈ ಕಡೆ ಎತ್ತರ ಪ್ರತಿಭೆಯ ಭಕ್ತಕವಿಗಳೂ ದೈವತ್ವಕ್ಕೆ ಮುಖಮಾಡಿ, ರಾಜತ್ವಕ್ಕೆ ಬೆನ್ನು ತಿರುಗಿಸಿದ್ದರು. ಇಂಥ ಪರಿಸ್ಥಿತಿಯಲ್ಲಿ ರಾಜರ ಮೇಲೆ ಸಾಮಾನ್ಯ ಕವಿಗಳ ಗಮನ ಮಾತ್ರ ಕೇಂದ್ರೀಕೃತವಾಯಿತು. ಇದಲ್ಲದೆ ಸಾಹಿತ್ಯಕ್ಕೆ ಸಾಮಾನ್ಯರೇ ಸಹೃದಯರಾಗಿದ್ದ ಮತ್ತು ಅವಸರದಿಂದ ವೀರಮೌಲ್ಯ ಪ್ರಸಾರ ಮಾಡಬೇಕಿದ್ದ ಕಾಲವದು. ಹೀಗಾಗಿ ಸಾಹಿತ್ಯದ ಶ್ರೇಷ್ಠತೆಯ ಮೇಲಿನ ಒತ್ತು ಕಡಿಮೆಯಾಗಿ, ಅದು ಮೌಲ್ಯ ಪ್ರಸಾರ ಮತ್ತು ಜನಪ್ರಿಯತೆಗಳ ಕಡೆಗೆ ಸರಿಯಿತು.

ಇಷ್ಟು ಹಿನ್ನೆಲೆಯಲ್ಲಿ ಕಥಾವಿನ್ಯಾಸವನ್ನು ಕುರಿತು ಹೇಳುವುದಾದರೆ, ಪ್ರಾಚೀನ ಕರ್ನಾಟಕದಲ್ಲಿ ಪುರಾಣ, ಚರಿತ್ರೆ, ಪುರಾಣದ ಚರಿತ್ರೀಕರಣ, ಚರಿತ್ರೆಯ ಪುರಾಣೀಕರಣ ಇತ್ಯಾದಿ ಸಾಹಿತ್ಯಕ ಪ್ರಯೋಗಗಳು ಉದ್ದಕ್ಕೂ ನಡೆದುಬಂದಿವೆ. ಆದಿಪುರಾಣವು ಪುರಾಣ, ವಿಕ್ರಮಾರ್ಜುನ ವಿಜಯವು ಪುರಾಣದ ಚರಿತ್ರೀಕರಣ, ಕಂಠೀರವ ನರಸರಾಜ ವಿಜಯವು ಚರಿತ್ರೆ, ಸಿದ್ಧರಾಮ ಚರಿತೆಯು ಚರಿತ್ರೆಯ ಪುರಾಣೀಕರಣ. ಈ ಅಂಶವನ್ನು ಗಮನಿಸಿ ಹೇಳುವುದಾದರೆ ಕುಮಾರರಾಮನ ಕಥೆಯು ಗಂಗ, ಅನಾಮಧೇಯ ಕವಿ-೧ ಇವರಲ್ಲಿ ಚರಿತ್ರೆಯಾಗಿ, ನಂಜುಂಡ, ಅನಾಮಧೇಯ ಕವಿ-೨, ಮಹಾಲಿಂಗಸ್ವಾಮಿಗಳಲ್ಲಿ ಚರಿತ್ರೆಯ ಪುರಾಣೀಕರಣವಾಗಿ ಹುಟ್ಟು ಪಡೆದಿದೆ. ಅಂದರೆ ಕುಮಾರರಾಮನನ್ನು ಮಹಾಲಿಂಗಸ್ವಾಮಿಯಲ್ಲಿ ಪರಶುರಾಮನೊಂದಿಗೆ, ನಂಜುಂಡನಂತೆ ಈ ಅನಾಮಧೇಯ ಕವಿ-೨ ರಲ್ಲಿ ಅರ್ಜುನನೊಂದಿಗೆ ಸಮೀಕರಿಸಲಾಗಿದೆ. ಇದರಿಂದ ಕನ್ನಡಿಗರ ಮನಸ್ಸಿನಲ್ಲಿ ಕುಮಾರರಾಮ 'ಲೌಕಿಕ ವೀರನಾಗಿ' ಹುಟ್ಟಿ, 'ಪುರಾಣವೀರನಾಗಿ' ಬೆಳೆದುದು ಸ್ಪಷ್ಟವಾಗುತ್ತದೆ. ಇಷ್ಟು ಹಿನ್ನೆಲೆಯಲ್ಲಿ ಪ್ರಸ್ತುತ ಕೃತಿಯ ಕಥಾವಿನ್ಯಾಸವನ್ನು ಚರ್ಚಿಸಬಹುದು.

ಕುಮಾರರಾಮನನ್ನು ಕುರಿತ ೫ ಕಾವ್ಯಗಳಲ್ಲಿ ೨೬ ಸಂಧಿ ಪದ್ಯಗಳ ಈ ಕೃತಿ, ಗಾತ್ರ ದೃಷ್ಟಿಯಿಂದ ಈ ಕಡೆ ಹಳೆಯ ಕುಮಾರರಾಮನ ಸಾಂಗತ್ಯ, ಹೊಸ ಕುಮಾರರಾಮನ ಸಾಂಗತ್ಯ, ಆ ಕಡೆ ಬಾಲ ಕುಮಾರರಾಮನ ಸಾಂಗತ್ಯ, ರಾಮನಾಥ ಚರಿತೆಗಳ ಮಧ್ಯೆ ನಿಲ್ಲುತ್ತದೆ. ಕಥೆಯ ಕ್ರಮ ಸಾಮಾನ್ಯವಾಗಿ ಎಲ್ಲ ಕೃತಿಗಳಂತೆ ಮುಂದುವರಿದಿದ್ದರೂ ಸುರಿತಾಳ ಕಾಣಿಕೆ ಕೇಳಿ ಪಾದುಕೆ ಕಳಿಸಿದುದು, ಗುತ್ತಿಯ ಜಗದಪ್ಪನ ಅಧಿಕಾರಿಗಳು ಕಾಣಿಕೆ ಕೇಳಿ ಕಂಪಿಲನನ್ನು ನಡುದಾರಿಯಲ್ಲಿ ತಡೆದು ನಿಲ್ಲಿಸಿದುದು, ಕೊಮಾರ ರಾಮಯ್ಯನ ಮದುವೆ, ಕೊಮಾರರಾಮಯ್ಯನಿಗೆ ಪಟ್ಟಗಟ್ಟಿದುದು, ಜಟ್ಟಂಗಿ ರಾಮೇಶ್ವರನ ದರ್ಶನ-ಇವು ಈ ಕಾವ್ಯದ ಹೊಸ ಸೇರ್ಪಡೆಯಾಗಿವೆ.

ಜಗದಪ್ಪನ ಮಗಳು ರಾಮಕ್ಕ, ಮಂಚಣ್ಣನ ಮಗಳು ಕಾಮಕ್ಕ, ಚಾರಮರಾಯನ ಮೊಮ್ಮಕ್ಕಳಾದ ಸೋಮಾಯಿ, ಭೀಮಾಯಿ, ಬೈಚಪ್ಪನ ಮಗಳು ತಿಮ್ಮಾಯಿ-ಹೀಗೆ ೫ ಜನ ಕನ್ಯೆಯರೊಂದಿಗೆ ಕುಮಾರರಾಮನ ಮದುವೆ ಇಲ್ಲಿ ಜರುಗುತ್ತದೆ. ಚಾರಮರಾಯನಿಗೆ ಮಧುಸೂದನ, ವೆಂಕಟರಾಯ ಹೆಸರಿನ ಮಕ್ಕಳಿರುವುದು, ಹುಳಿಯಾರ ಮಾರಭೂಪಾಲನಿಗೆ ಕಲ್ಲರಸ ಹೆಸರಿನ ಮಂತ್ರಿ, ಹೊಯ್ಸಳ ಬಲ್ಲಾಳನಿಗೆ ನರಸಿಂಗರಾಯನೆಂಬ ಮಂತ್ರಿ ಇರುವುದು, ಜಗದಪ್ಪನ ಮಗ ಉತ್ತುಂಗರಾಯ, ಕಾಟಣ್ಣನ ಹೆಂಡತಿ ಕಂಚಲಮ್ಮ-ಇವೆಲ್ಲ ಹೊಸ ಸಂಗತಿಗಳು ಇಲ್ಲಿವೆ. ಕುಮಾರರಾಮನ ಮದುವೆ ಮಾಘ ಶುದ್ಧ ತದಿಗೆ ಗುರುವಾರ ಅಮೃತ ಸಿದ್ಧಿಯೋಗದಲ್ಲಿ, ಸೂರ್ಯೋದಯವಾದ ೧೦ ಗಳಿಗೆಯಲ್ಲಿ ಜರುಗಿದ ಸೂಚನೆ ಇಲ್ಲಿದೆ.

ಇವೆಲ್ಲವುಗಳಿಂದ ಅವಶ್ಯ ಗಮನಿಸಬೇಕಾದ ಸಂಗತಿಯೆಂದರೆ ರಾಮಯ್ಯನ ಚರಿತ್ರೆಯನ್ನು ಪುರಾಣ ಶಿಲ್ಪದಲ್ಲಿಅಳ ವಡಿಸುವ ಪ್ರಯತ್ನ ಮಾಡಿದುದು. 'ಆಧಾರವಿಡಿದು ಪೇಳಿದನಾಗ ಗಂಗಯ್ಯ' ಎಂಬ ಪದ್ಯದ ಮೂಲಕ ಈ ಧೋರಣೆಯನ್ನು ಸ್ಪಷ್ಟಪಡಿಸಿದ್ದಾನೆ. ಕೈಲಾಸದಲ್ಲಿ ಪಾರ್ವ್ವತಿಗೆ ಅಗೌರವ ತೋರಿದ ಅರ್ಜುನ ಗಣನಾಥನು ಕುಮಾರರಾಮನಾಗಿ, ರಂಭೆಯು ರತ್ನಾಜಿಯಾಗಿ ಜನಿಸಿದ 'ಸಮಸ್ತೀಕರಣ' ಪ್ರಯೋಗವಿಲ್ಲಿದೆ. ಪಂಪ ರನ್ನರ ಮಾದರಿ ಅನುಸರಿಸಿದ್ದರೂ, ಆ ಕೃತಿಗಳಲ್ಲಿಯಂತೆ ಈ ಪರಯೋಗ ಇಲ್ಲಿಯೂ, ಒಂದು ತೇಪೆಯಾಗಿ ನಿಂತಿದೆ. ಪಾರ್ವತಿಯ ಆದೇಶದ ಮೇರೆಗೆ, ರಂಭೆಯು ಕುಮಾರರಾಮನ ಪರನಾರಿ ಸೋದರವ್ರತ ನಾಶಪಡಿಸಲು ರತ್ನಾಜಿಯಾಗಿ ಹುಟ್ಟಿದಳೆಂಬ ಕಲ್ಪನೆಯು, ಪ್ರಭುಲಿಂಗ ಲೀಲೆಯ ಮಾಯಾದೇವಿಯ ಜನನದ ಅನುಕರಣೆಯಾಗಿದೆ. ಅದೇನೇ ಇದ್ದರೂ ಲೌಕಿಕ ವೀರನೊಬ್ಬನನ್ನು ಪುರಾಣವೀರನನ್ನಾಗಿಸುವ ಪ್ರಯತ್ನವಿಲ್ಲಿದೆ.

ಹಳೆಯ ಕುಮಾರರಾಮನ ಸಾಂಗತ್ಯ, ಹೊಸ ಕುಮಾರರಾಮನ ಸಾಂಗತ್ಯ ಮತ್ತು ಕೊಮಾರ ರಾಮಯ್ಯನ ಚರಿತ್ರೆಗಳಲ್ಲಿ ಸುಮಾರು ೩೦೦ ಪದ್ಯಗಳು ಸಮಾನವಾಗಿದೆ. ಇದಕ್ಕೆ ಕಾರಣ ಕರ್ತೃಗಳೇ? ಸಹೃದಯರೇ ಸ್ಪಷ್ಟವಾಗುವುದಿಲ್ಲ. ಅದೇನೇ ಇರಲಿ, ಈ ಮೂರು ಕೃತಿಗಳು ಶೂನ್ಯಸಂಪಾದನೆಯಂತೆ ಪರಿಷ್ಕಾರಗೊಂಡು ಸ್ವತಂತ್ರಕೃತಿ ರೂಪ ಪಡೆದಿವೆ.

ಛಂದೋವಿನ್ಯಾಸ ದೃಷ್ಟಿಯಿಂದ ಹೇಳುವುದಾದರೆ, ಸಾವಿರ ವರುಷಗಳ ಇತಿಹಾಸದಲ್ಲಿ ಕನ್ನಡ ಸಾಹಿತ್ಯ ವಿದ್ವಜ್ಜನಸಮುದಾಯದಿಂದ ಜನ ಸಮುದಾಯದತ್ತ ಸಾಗಿಬಂದಿದೆ. ಈ ಪ್ರಕ್ರಿಯೆ ಕಾರಣವಾಗಿ ಅದು ವಾಚನಪಾತಳಿಯಿಂದ ಶ್ರವಣ ಪಾತಳಿಗೆ ತಡೆಯುತ್ತ ಬಂದಿದೆ. ಈಗ ಸಹಜವಾಗಿಯೇ ಸಾರ್ವಜನಿಕರು ಕೇಳಲು ಯೋಗ್ಯವಾದ ಗೇಯಬಂಧಬಗಳನ್ನು ಹುಡುಕುತ್ತ ಬರಲಾಯಿತು. ಇದರ

ಫಲವೆಂಬಂತೆ ವಾರ್ಧಕ, ಭಾಮಿನಿಗಳು ಬಿಚ್ಚಿಕೊಂಡವು. ಇನ್ನೂ ಗೇಯತೆಯಂತೆ ಬಯಸಿದಾಗ ಸಾಂಗತ್ಯ ಸಾಕಾರಗೊಂಡು, ನೂರಾರು ಕೃತಿಗಳು ಸೃಷ್ಟಿಯಾದವು. ಒಂದು ನಾಟಕ ಕೃತಿಯನ್ನು ಕಣ್ಣಿನಿಂದ ಓದುವುದು ಬೇರೆ, ರಂಗದ ಮೇಲೆ ನೋಡುವುದು ಬೇರೆ. ಹಾಗೆಯೇ ಒಂದು ಗೇಯ ಬಂಧವನ್ನು ಕಣ್ಣಿನಿಂದ ಓದುವುದು ಬೇರೆ, ಕಿವಿಯಿಂದ ಕೇಳುವುದು ಬೇರೆ. ಅಂದರೆ ಗೇಯ ಬಂಧಗಳನ್ನು ಓದುವುದಕ್ಕಿಂತ ಕೇಳುವುದೇ ಈ ಕೃತಿಗಳಿಗೆ ಒದಗಿಸುವ ಸರಿಯಾದ ನ್ಯಾಯವೆನಿಸುತ್ತದೆ. ಈ ಕೇಳುವ ಪರಂಪರೆಯಲ್ಲಿ ಸಿರುಮನನ್ನು ಕುರಿತು ೩ ಕೃತಿಗಳು, ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ಕಂಠಿರವ ನರಸರಾಜ ವಿಜಯಗಳಂತೆ, ಕುಮಾರರಾಮನನ್ನು ಕುರಿತು ೫ ಕೃತಿಗಳು ಕನ್ನಡದಲ್ಲಿ ಹುಟ್ಟಿಕೊಂಡವು.

ವೀರ, ಪ್ರಾಚೀನ ಕಾಲದಲ್ಲಿ ಬಹುಮುಖ್ಯ ಮೌಲ್ಯವಾಗಿದ್ದಿತು. ವೀರನೊಬ್ಬ ಯುದ್ಧದಲ್ಲಿ ಮಡಿಯುತ್ತಲೇ ಒಂದೆಡೆ ವೀರಗಲ್ಲ ಪೂಜೆ ನಡೆದರೆ, ಇನ್ನೊಂದೆಡೆ ಸಾಹಿತ್ಯ (ಶಿಷ್ಟ/ ಜಾನಪದ) ಮಾಧ್ಯಮದಲ್ಲಿ ಅವನ ಕೀರ್ತಿ ಪ್ರಸಾರಕಾರ್ಯ ನಡೆಯುತ್ತಿದ್ದಿತು. ಚಕ್ರವರ್ತಿಗಳಿಲ್ಲದ ಕರ್ನಾಟಕದಲ್ಲಿ ಸಂಭವಿಸಿದ ಚಿಕ್ಕಪುಟ್ಟ ಪಾಳೆಯಗಾರರ ಪರಸ್ಪರ ಘರ್ಷಣೆ ಮತ್ತು ಮುಸಲ್ಮಾನರ ಆಕ್ರಮಣಗಳಿಂದಾಗಿ ಈ ವೀರ ಮತ್ತು ಅದರ ಪ್ರಸಾರ ಇನ್ನೂ ಮಹತ್ವ ಪಡೆದವು. ಸಾಮಾನ್ಯವಾಗಿ 'ವೀರನ ಸಾವು ಕತೆಯಾಗಿ ಪರಿದುದು' ಎಂಬ ಶಾಸನ ಮಾತಿನಂತೆ ಸಾವನ್ನು ಸಾಹಿತ್ಯ ಮಾಡುವ ಮತ್ತು ಅದನ್ನು ಸಮಾಜದ ತುಂಬ 'ಪರಿಚಯಿಸುವ' ಸಲುವಾಗಿ ಚರಣ ಕವಿಗಳು, ಜಾನಪದ ನೀಲಗಾರರು (ಲೀಲೆಗಾರರು) ಹುಟ್ಟಿಕೊಂಡರು.

ಹೀಗಾಗಿ ಕುಮಾರರಾಮನನ್ನು ಕುರಿತ ಎಲ್ಲ ಕೃತಿಗಳು ಸಾಂಗತ್ಯದಲ್ಲಿಯೇ ಹೆಪ್ಪು ಗಟ್ಟಿದವು. ಇವುಗಳಲ್ಲಿ ನಂಜುಂಡನದು ವಿದ್ವತ್ತು ಕಾರಣವಾಗಿ ಭಾಷಾಲಯ ಒಂದು ಕಡೆ, ಛಂದೋಲಯ ಇನ್ನೊಂದು ಕಡೆ ನಡೆದು, ಬಹಳಷ್ಟು ಸಲ ಹಿತವಾದ 'ಸಾಂಗತ್ಯಪಾಕ' ಅಲ್ಲಿ ಸಿದ್ಧವಾಗಲಿಲ್ಲ. ಮಿಕ್ಕವರು ಜಾನಪದ ಪ್ರಜ್ಞೆಯ ಕವಿಗಳಾದ ಕಾರಣ, ಜಾನಪದ ನೆಲೆಯ ಸಾಂಗತ್ಯದಲ್ಲಿ ಭಾಷಾಲಯ-ಛಂದೋಲಯಗಳು ಬಹುಮಟ್ಟಿಗೆ ಕೈಹಿಡಿದು ನಡೆಯಲು ಸಾಧ್ಯವಾಯಿತು. ಈ ಮಾತು ಕೊಮಾರರಾಮಯ್ಯನ ಚರಿತ್ರೆಗಿಂತ ಹಳೆಯ, ಹೊಸ ಕುಮಾರರಾಮನ ಸಾಂಗತ್ಯಗಳಿಗೆ ಹೆಚ್ಚು ಅನ್ವಯಿಸುತ್ತದೆ. ಕೆಲವೊಮ್ಮೆ ಆಶುಕವಿತ್ವದಂತೆ ಸಾಂಗತ್ಯಪದ್ಯಗಳು ರೂಪುಗಳ್ಳುತ್ತ ಹೋಗುತ್ತಲಿರುವುದು ಇಲ್ಲಿಯ ವಿಶೇಷತೆಯಾಗಿದೆ.

ಸಾಮಾನ್ಯವಾಗಿ ಕಾವ್ಯರಚನೆ ಮಾರ್ಗದಿಂದ ದೇಶಿಗೆ ಹೊರಳುತ್ತ ಹೋದಷ್ಟು ಏನು ಹೇಳಬೇಕು ಎಂಬುದು ಮುಖ್ಯವಾಗಿ, ಹೇಗೆ ಹೇಳಬೇಕೆಂಬುದು ಅಮುಖ್ಯವಾಗುತ್ತದೆ. ಆಗ ಅದರ ಕಲಾತ್ಮಕತೆ ಗೌಣಸ್ಥಾನಕ್ಕೆ ಸರಿಯಾಗುತ್ತದೆ. ಈ ಮಾತಿಗೆ ಪ್ರಸ್ತುತ ಕೃತಿಯನ್ನು ಉದಾಹರಣೆಯಾಗಿ ಹೇಳಬಹುದು. ಇಲ್ಲಿ ಕಥಾನಿರೂಪಣೆಯೇ ಪ್ರಧಾನವಾಗಿ, ಕೆಲವೊಮ್ಮೆ ಮಾತ್ರ ಸಂದರ್ಭ ಇಲ್ಲವೆ ಪದ್ಯಗಳು ಸುಂದರ ಘಟಕಗಳಾಗಿ ಕಾಣಿಸಿಕೊಳ್ಳುತ್ತವೆ. ಇದಕ್ಕೆ ಈ ಕೃತಿಯಲ್ಲಿಯ ಕುಮಾರರಾಮಯ್ಯನ ಮದುವೆಯ ಸಂದರ್ಭ ನಿದರ್ಶನವೆನಿಸಿದೆ. ಆಡಂಬರ, ವೈಭವಗಳೇನೂ ಇಲ್ಲದೆ, ಸ್ವಭಾವೋಕ್ತಿರೂಪದಲ್ಲಿ ಬಿಡಿಸಿದ ಮದುವೆ ಮುಂತಾದ ಆಚರಣೆ, ಜಾನಪದ ಮನಸ್ಸು- ಸಂಸ್ಕೃತಿಗಳು ಇಲ್ಲಿ ತುಂಬ ಸೊಗಸಾಗಿವೆ. ಇಂಥದೇ ಪರಿಣಾಮಕಾರಿಯಾಗಿ ಚಿತ್ರಿಸಿದ ಉತ್ತಮ ಪದ್ಯಗಳು ಅಲ್ಲಲ್ಲಿ ಕಾಣಸಿಗುತ್ತವೆ. ರಾಮಯ್ಯನ ಮರಣಕ್ಕಾಗಿ, ತಾಯಿ-ಅಕ್ಕ-ತಂಗಿಯರು ವ್ಯಕ್ತಪಡಿಸಿದ ಶೋಕ ಪ್ರಸಂಗವೂ ಇಂಥ ಇನ್ನೊಂದು ಉದಾಹರಣೆಯಾಗಿದೆ.

ಈ ಸಂದರ್ಭದಲ್ಲಿ ಒಂದು ವಿಷಯವನ್ನು ಹೇಳಬಹುದಾಗಿದೆ. ಸಾಹಿತ್ಯಕೃತಿಯ ಆಸ್ವಾದನೆ, ವಿಮರ್ಶೆಗಳು ನಮ್ಮಲ್ಲಿ ಸತ್ಯದಿಂದ ಒಂದಿಷ್ಟು ದೂರ ಸರಿದಂತೆ ಕಾಣುತ್ತವೆ. ದೃಶ್ಯ, ಶ್ರವ್ಯ ಎರಡೂ ಸಾಹಿತ್ಯಗಳನ್ನು ಆಯಾ ಮಾಧ್ಯಮಗಳಲ್ಲಿಯೇ ಆಸ್ವಾದಿಸಿದಲ್ಲಿ, ವಿಮರ್ಶಿಸಿದಲ್ಲಿ ಅವುಗಳಿಗೆ ನ್ಯಾಯ ಒದಗಿಸಿದಂತಾಗುತ್ತದೆ. ಇಂದು ಅವುಗಳನ್ನು ವಾಚನಪಾತಳಿಗೆ ತಂದು ಆಸ್ವಾದಿಸುವ-ವಿಮರ್ಶಿಸುವ ಸಂಪ್ರದಾಯ ಇತ್ತೀಚೆ ಹೆಚ್ಚು ಬೆಳೆದಿದೆ. ಈ ಹಿನ್ನೆಲೆಯಲ್ಲಿ ಹೇಳುವುದಾದರೆ ಸಾಂಗತ್ಯ ನಿಜ ಸ್ವರೂಪದಲ್ಲಿ ಕಾಣಿಸಿಕೊಳ್ಳುವುದು ಶ್ರವ್ಯ ಪಾತಳಿಯಲ್ಲಿವೇ. ಕೊಮಾರರಾಮಯ್ಯನ ಚರಿತ್ರೆಯ ಮೌಲ್ಯ ನಿರ್ಣಯಿಸುವಾಗ ಈ ಮಾತನ್ನ ಗಮನದಲ್ಲಿಡಬೇಕೆಂದು ಕಾಣುತ್ತದೆ.

**ಸಂಸ್ಕೃತಿ**

ಸಾಹಿತ್ಯವೆನ್ನುವುದು ಸಮಕಾಲೀನ ವಾಸ್ತವ, ಸಾರ್ವಕಾಲೀನ ಆದರ್ಶಗಳ ಪ್ರಸಾರಮಾಧ್ಯಮವಾಗಿದೆ. ಸಾಮಾನ್ಯವಾಗಿ ಎಲ್ಲ ಕೃತಿಗಳಲ್ಲಿ ಸಾರ್ವಕಾಲೀನ ಆದರ್ಶ ಚಿತ್ರಿತವಾಗಿದ್ದರೆ, ಕೆಲವು ಕೃತಿಗಳಲ್ಲಿ ಮಾತ್ರ ಸಮಕಾಲಿನ ವಾಸ್ತವ ದಾಖಲಾಗಿ, ಅವು ಸಾಂಸ್ಕೃತಿಕ ಮಹತ್ವ ಪಡೆಯುತ್ತವೆ. ಇಂಥ ಕೃತಿಗಳೆಂದರೆ ವಡ್ಡಾರಾಧನೆ, ಪಂಪಭಾರತ, ಬಸವಣ್ಣನವರ ವಚನ, ಹರಿಹರನ ರಗಳೆ, ಬ್ರಹ್ಮಶಿವನ ಸಮಯ ಪರೀಕ್ಷೆ ಇತ್ಯಾದಿ. ಈ ಮಾಲಿಕೆಯಲ್ಲಿ ಕೊಮಾರ ರಾಮಯ್ಯನ ಚರಿತ್ರೆ ತಪ್ಪದೇ ಸೇರಿಕೊಳ್ಳುತ್ತದೆ.

ಸಂಸ್ಕೃತಿಯೆನ್ನುವುದು ಸಮೂಹ ಸಮ್ಮತ ಜೀವನ ಪದ್ಧತಿಯಾಗಿದೆ. ಸಾಮಾನ್ಯವಾಗಿ ಇದು ಪ್ರಕ್ರಿಯಾತ್ಮಕವಾಗಿದ್ದು, ತನ್ನ ಕಾಲದ ಆದರ್ಶ-ವಾಸ್ತವಗಳ ನಿರಂತರ ಕ್ರಿಯೆಯಾಗಿದೆ. ಇದು ಈ ಕೃತಿಯಲ್ಲಿ ಧಾರ್ಮಿಕ, ಆಚರಣಾತ್ಮಕ, ಸಾಮಾಜಿಕ, ರಾಜಕೀಯ ಮೊದಲಾದ ಕ್ಷೇತ್ರಗಳನ್ನು ವ್ಯಾಪಿಸಿದೆ.

ಧರ್ಮಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ ಕಂಪಿಲ ಸೋಮೇಶ್ವರ, ಜಟ್ಟಂಗಿ ರಾಮೇಶ್ವರ ಈ ಮನೆತನಕ್ಕೆ ಮುಖ್ಯ ದೇವತೆಗಳೆನಿಸಿದ್ದರು. ಹೀಗಾಗಿ ಈ ಕಾವ್ಯದ ತುಂಬ ಹೆಚ್ಚಾಗಿ ಶಿವಭಕ್ತಿವಾತಾವರಣವೇ ತುಂಬಿದೆ. ಕಂಪಿಲ ಸೋಮೇಶ್ವರನ ಪ್ರಸಾದದಿಂದ ಕಂಪಿಲರಾಯ, ಜಟ್ಟಂಗಿ ರಾಮೇಶ್ವರನ ಪ್ರಸಾದದಿಂದ ಕುಮಾರರಾಮ ಹುಟ್ಟಿದರೆಂಬುದು ಮಕ್ಕಳ ಜನನದ ಬಗೆಗೆ ಜನರಿಗಿದ್ದ ನಂಬಿಕೆಯನ್ನು ದ್ಯೋತಿಸುತ್ತದೆ. ಕ್ಷುದ್ರದೇವತೆಗಳಿಗೆ ಕುರಿ ಕೋಳಿ ಕೋಣಗಳನ್ನು ಬಲಿ ಕೊಡುವುದು ಇಲ್ಲಿ ಅನೇಕ ಬಾರಿ ಗೋಚರಿಸುತ್ತದೆ. ಇಷ್ಟಾರ್ಥ ಸಾಧನೆಗಾಗಿ ರತ್ನಾಜಿ ಹಲವು ದೈವಗಳನ್ನು ಹಲವು ಬಗೆಯಲ್ಲಿ ಬೇಡಿಕೊಳ್ಳುವುದು ಇಲ್ಲಿ ಕಂಡುಬರುತ್ತದೆ. ರಾಜಪರಿವಾರ ಜಟ್ಟಂಗಿ ರಾಮೇಶ್ವರ ದರ್ಶನಕ್ಕಾಗಿ ಹೋಗುವಾಗಿನ ವ್ಯವಸ್ಥೆ, ಆ ಕ್ಷೇತ್ರದಲ್ಲಿ ಜರುಗಿಸಿದ ವಿವಿಧ ಆಚರಣೆಗಳು, ಕುಮಾರರಾಮಯ್ಯನ ಮದುವೆಯಲ್ಲಿ ನಡೆದ ಮಂಗಲಕಾರ್ಯಗಳು ಆ ಕಾಲದ ಚಿತ್ರವನ್ನು ಢಾಳವಾಗಿ ತೋರಿಸುತ್ತವೆ.

ರಾಜಧರ್ಮಕ್ಕೆ ಬಂದರೆ ಅಂದಿನ ರಾಜಸತ್ತಾಯುಗದ ಚಿತ್ರ ಇಲ್ಲಿ ಸ್ಪಷ್ಟವಾಗಿ ಮೂಡಿದೆ. 'ವೀರಭೋಜ್ಯಾ ಅಸುಂಧರಾ' ಎಂಬಂತೆ ತೋಳ್ಬಲದ ಮೇಲೆ ಅಂದಿನ ರಾಜ್ಯಭಾರ ನಡೆದಿದ್ದಿತು. ಸಣ್ಣಪುಟ್ಟ ಪಾಳೆಯಗಾರರನ್ನು ಕಂಪಿಲ ಅರಸು ಸೋಲಿಸಿದುದು, ದಿಲ್ಲಿ ಸುರತಾಳ-ಕಂಪಿಲರಾಯ- ಕಾಕತೀಯ ಪ್ರತಾಪರುದ್ರ- ಹೊಯ್ಸಳ ವೀರಬಲ್ಲಾಳರು ತಮ್ಮ ಪ್ರಭುತ್ವಕ್ಕಾಗಿ ಮೇಲಾಟ ನಡೆಸಿದುದು, ಸಮಕಾಲೀನ ಪ್ರಭುಶಕ್ತಿ ಸ್ಪರ್ಧೆಗೆ ನಿದರ್ಶನವೆನಿಸಿವೆ. 'ರಾಯರ ಗಬ್ಬದೊಳ್ ಜನಿಸಿದ ಬಳಿಕಿನ್ನು | ಕಾಯದಾಸೆಯ ಬಿಡಬೇಕು || ಆಯತವಾಗಿ ರಣಾಗ್ರದೊಳ್ ಕಡಿದಾಡಿ | ಸಾಯಬೇಕು ಯುಕ್ತಿಗಳುಂಟು' ಎಂಬ ನೀತಿ ಅಂದು ಬೆಲೆ ಪಡೆದಿದ್ದ ಕಾರಣ, ಅನೇಕ ಯೋಧರ ವೀರಮರಣ ಇಲ್ಲಿ ಚಿತ್ರಿತವಾಗಿದೆ. ವೀರಪತ್ನಿಗೆ ನಿದರ್ಶನವೆಂಬಂತೆ ಸ್ತ್ರೀಯರು 'ಮಾಸ್ತಿ'ಯಾಗುವ ವಿವರಗಳು ಇಲ್ಲಿ ದಟ್ಟವಾಗಿ ಮೂಡಿವೆ. ಇಲ್ಲಿ ಎರಡು ಸಲ ಇಂಥ ದೃಶ್ಯಗಳಿವೆ. ಕೈಯಲ್ಲಿ ಕನ್ನಡಿ, ಲಿಂಬೆಹಣ್ಣು, ಕಠಾರಿ, ಮಳಲ ಗೌರಿಯನ್ನು ಪೂಜಿಸುವುದು, ಗಂಡನ ಗುಣಗಾನ ಮಾಡುತ್ತ ಕಿಚ್ಚಿನ ಸುತ್ತ ಕುಣಿಯುವುದು, ಕಟ್ಟೆಯೇರಿ ಕಿಚ್ಚಿನಲ್ಲಿ ಧುಮುಕುವುದು ಇತ್ಯಾದಿ ಅಪೂರ್ವ ಚಿತ್ರಗಳು ಇಲ್ಲಿವೆ. ಸೋಲಿನ ಕೊನೆಯ ಹಂತದಲ್ಲಿ ಕಾಟಣ್ಣ ತನ್ನ ಹೆಂಡತಿಯನ್ನು ಕಠಾರಿಯಿಂದ ಇರಿಯುವುದೂ, ಸುರತಾಳನ ಮಗಳು ರಾಮಯ್ಯನ ರುಂಡವನ್ನು ಉಡಿಯಲ್ಲಿ ಇಟ್ಟುಕೊಂಡು ಚಿತಾಪ್ರವೇಶಕ್ಕೆ ಸಿದ್ಧಳಾಗುವುದು, ಗಮನಿಸತಕ್ಕ ಸಂಗತಿಯಾಗಿವೆ. ಕಳ್ಳರಾಮನ ಪ್ರಸಂಗವಂತೂ ವೇಳೆವಾಳಿ ಸಂಪ್ರದಾಯವನ್ನು ನೆನಪಿಸುತ್ತದೆ. ಹೊಸ ರಾಜಧಾನಿಯ ನಿರ್ಮಾಣ ಸ್ವರೂಪ ಮತ್ತು ಅದರ ಬೇರೆ ಬೇರೆ ಭಾಗಗಳ ಚಿತ್ರ ಕುಮ್ಮಟ ದುರ್ಗ ಸಂಧಿಯಲ್ಲಿ ದಟ್ಟವಾಗಿ ಮೂಡಿ ನಿಂತಿವೆ.

ಯುದ್ಧಕ್ಕೆ ಸಂಬಂಧಪಟ್ಟ ಕೋಟೆ, ಕೊತ್ತಳ, ಅಗಳು, ಅನೇಕ ಬಗೆಯ ಆಯುಧಗಳು, ಪೆಟಲು ಹೆಸರಿನ ಮದ್ದು ಉಪಯೋಗಿಸುವ ಬಂದೂಕು, ಯುದ್ಧದ ಪೂರ್ವಸಿದ್ಧತೆ, ಯುದ್ಧರಂಗ, ಸೈನ್ಯಸಂಗ್ರಹ ರೀತಿ, ಸೈನಿಕರ ಪೋಷಣೆ ಇತ್ಯಾದಿಗಳು ಸಮಕಾಲೀನ ಯುದ್ಧ ಜೀವನದ ಚಿತ್ರವನ್ನೀಯುತ್ತವೆ. ದಾಳಿ ಸಂದರ್ಭದಲ್ಲಿ ಸಾಮಾನ್ಯ ಕುಟುಂಬಗಳು ಅನುಭವಿಸುತ್ತಲಿದ್ದ ಬವಣೆ, ಗುಣೆ ಹೋಗುತ್ತಲಿದ್ದ ರೀತಿ ದಟ್ಟವಾಗಿ ಮೂಡಿದೆ. ಕುಮಾರರಾಮನ ಪಟ್ಟಾಭಿಷೇಕ ಸಂಧಿಯಲ್ಲಿ ರಾಜ್ಯಾಡಳಿತ ವಿವರಗಳು, ಆಸ್ಥಾನದ ಶಿಷ್ಟಾಚಾರಗಳು ದಾಖಲಾಗಿವೆ.

ಮೊರೆ ಹೊಕ್ಕವರ ಕಾಯ್ವುದು ರಾಜಸತ್ತಾಯುಗದ ಮುಖ್ಯ ಲಕ್ಷಣ. ಕುಮ್ಮಟದುರ್ಗದ ಯುದ್ಧಕ್ಕೆ ಮುಖ್ಯ ಕಾರಣ, ಮೊರೆ ಹೊಕ್ಕ ಬಹಾದ್ದೂರ (ಮಹಾವುದ್ದೀನ)ನಿಗೆ ಕುಮಾರರಾಮ ರಕ್ಷಣೆ ಕೊಟ್ಟುದು. ಈ ಒಂದು ವಿಷಯ ದಿಲ್ಲಿ ಸುಲ್ತಾನನ್ನು ಎದುರುಹಾಕಿಕೊಳ್ಳುವಂತೆ ಮಾಡಿತು. ಒಂದಲ್ಲ, ಎರಡಲ್ಲ, ಮೂರು ಸಲ ಯುದ್ಧವೇರ್ಪಟ್ಟು, ಅಭೇದ್ಯ ಕುಮ್ಮಟ ದುರ್ಗದ ನಾಶಕ್ಕೆ ಇದು ಕಾರಣವಾಯಿತು.

ರಾಜಸತ್ತಾಯುಗದ ಶೌರ್ಯಮೌಲ್ಯಕ್ಕೆ ಮೆರಗು ಬರುವುದು, ಪರಸ್ತ್ರೀ ವಿಷಯದ ಶುಚಿತ್ವದಿಂದ- ಎಂದು ನಂಬಿದ್ದ ಕಾಲವದು. ಹೀಗಾಗಿ ಈ ಪೂರ್ವದ ರಾಜರ ಶೌರ್ಯಘಟನೆಗಳಿಗಿಂತ ಶುಚಿಘಟನೆಯನ್ನೂ ಒಳಗೊಂಡ ಕುಮಾರರಾಮನ ಜೀವನ ಕವಿಗಳಿಗೆ ಹೆಚ್ಚು ಇಷ್ಟವಾಯಿತು, ಜನತೆಗೆ ಆದರ್ಶವಾಯಿತು. ಕುಮಾರರಾಮನ ಜೀವನದಲ್ಲಿ ಹೆಣ್ಣು ಮೂರು ರೂಪಗಳಲ್ಲಿ ಕಾಡಿದೆ. ಕಂಪಿಲನ ಕಿರಿಯ ರಾಣಿ ರತ್ನಾಜಿ 'ಮುನಿದರೆ ಮಾರಿಯಾಗಿ', ಸರಿತಾಳನ ಮಗಳು ಬಾಬಮ್ಮ 'ವಿಫಲ ಪ್ರೇಮಿಯಾಗಿ', ಏರಿಬಂದ ಮಾದಿಗಿತ್ತಿ 'ಜೀವಹಂತಕಿಯಾಗಿ' ಅವನ ಸುತ್ತ ಪಾತ್ರವಾಡಿದ್ದಾರೆ.* ಇವರಲ್ಲಿ ಮೊದಲಿನ ಇಬ್ಬರ ವಿಷಯದಲ್ಲಿ ಅವನು ಶುಷಿಮೌಲ್ಯವನ್ನು ಮೆರೆದು, ತನ್ನ 'ಪರನಾರಿ ಸೋದರ' ಬಿರುದಿಗೆ ಅರ್ಥ ತುಂಬಿದ್ದಾನೆ.

ಈತನ ಹೆಸರು ರಾಮ. 'ಕುಮಾರ'ವೆನ್ನುವುದು ವಿಶೇಷಣ. ಇದು ಷಣ್ಮುಖನ ಹೆಸರು. ಬ್ರಹ್ಮಚಾರಿಯಾಗಿರುವ ಷಣ್ಮುಖ ಶುಚಿಯೂ ಹೌದು, ಶೂರನೂ ಹೌದು. ಹೀಗಾಗಿ 'ಕುಮಾರ' ವಿಶೇಷಣವನ್ನು ರಾಮನಿಗೆ ಅಂಟಿಸಲಾಯಿತು. ಕರ್ನಾಟಕದಲ್ಲಿ ಈ ಪರಂಪರೆಗೆ ಕುಮಾರರಾಮನೇ ಮೊದಲಿಗನಾದ. ಇದರ ಮುಂದುವರಿಕೆಯೆಂಬಂತೆ ಸಿರುಮನ ಸಾಂಗತ್ಯದಲ್ಲಿ ಕುಮಾರಮಲ್ಲ, ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯದಲ್ಲಿ ಕುಮಾರ ತೋಂಟದರಾಯ ಎಂಬ ಹೆಸರುಗಳು ಕಾಣಿಸಿಕೊಳ್ಳುವುದನ್ನು ಅವಶ್ಯ ಗಮನಿಸಬೇಕು.

ರಾಜರ ಇನ್ನೊಂದು ಲಕ್ಷಣ 'ಶೃಂಗಾರ ಜೀವನ'. ಕುಮಾರರಾಮನ ಸಾಂಗತ್ಯದಲ್ಲಿ ಕಂಪಿಲರಾಯನು ಹರಿಯಲದೇವಿಯನ್ನು ಹೊರತುಪಡಿಸಿ, ಇನ್ನೂ ಹಲವರನ್ನು ಮದುವೆಯಾದುದು, ಹೆಚ್ಚಿನದಾಗಿ ತಾನು ವಯೋವೃದ್ಧನಾಗಿದ್ದರೂ ಯುವತಿ ರತ್ನಾಜಿಯನ್ನು ಮನದನ್ನೆಯಾಗಿ ಕರೆತಂದುದು, ಇಲ್ಲಿಯ ಮುಖ್ಯ ಅಂಶವೆನಿಸಿವೆ. ರತ್ನಾಖಿ ಕುಮಾರ ರಾಮನನ್ನು ಪ್ರೇಮಿಸಿದ ಪ್ರಸಂಗವಂತೂ ಈ ಕಾವ್ಯದ ಮುಖ್ಯ ಆಕರ್ಷಣೆಯೆನಿಸಿದೆ. ಇದಲ್ಲದೆ ಬೇಟೆ, ಜೂಜು, ಚೆಂಡಿನಾಟ ನೋಡಲು ಬಂದ ಸೂಳೆಯರ ವರ್ಣನೆಗಳು ಇಲ್ಲಿಯ ಶೃಂಗಾರ ವಿಲಾಸ ಜೀವನದ ಇನ್ನೊಂದು ಮುಖವೆನಿಸಿವೆ.

ಹೀಗೆ ಮಧ್ಯಕಾಲೀನ ಕರ್ನಾಟಕದ ವೀರಜೀವನವನ್ನು, ಅದಕ್ಕೆ ಪೂರಕವಾದ ಎಲ್ಲ ಮುಖಗಳನ್ನು ಚಿತ್ರಿಸುವ ಮಹತ್ವದ ಕೃತಿಯಾಗಿದೆ, 'ಕೊಮಾರ ರಾಮಯ್ಯನ ಚರಿತ್ರೆ'.

**ಪರಿಷ್ಕರಣ**

ಕುಮಾರರಾಮನನ್ನು ಕುರಿತ ೫ ಕೃತಿಗಳಲ್ಲಿ ಹಳೆಯ ಕುಮಾರರಾಮನ ಸಾಂಗತ್ಯ, ಹೊಸ ಕುಮಾರರಾಮನ ಸಾಂಗತ್ಯ, ಕೊಮಾರರಾಮಯ್ಯನ ಚರಿತ್ರೆ- ಈ ಕೃತಿಗಳು ಪಾಠಾಂತರ ಸ್ವರೂಪದಿಂದ ರೂಪಾಂತರ ಸ್ವರೂಪಕ್ಕೆ ಹೊರಳುವ ಪ್ರಮಾಣದಲ್ಲಿ ಆಕಾರ ಪಡೆದುಕೊಂಡಿವೆ. ಸಾಲದುದಕ್ಕೆ ಹಾಡುವುದರಿಂದ ಉಂಟಾಗುವ ಹ್ರಸ್ವದೀರ್ಘ ವ್ಯತ್ಯಾಸಗಳೂ ಇಲ್ಲಿ ತಲೆಹಾಕಿವೆ. ಇಂಥ ಸಂದರ್ಭದಲ್ಲಿ ನಿಯತ ಭಿನ್ನಪಾಠಗಳಿಂದ ಕೂಡಿದ ಮಾರ್ಗ ಕಾವ್ಯಗಳ ಸಂಪಾದನೆಗೆ ಬಳಸುವ ನಿಯಮಗಳನ್ನೇ ಇಂಥ ದೇಶೀಕಾವ್ಯಗಳಿಗೆ ಬಳಸುವುದು ಸರಿಯಲ್ಲವೆಂದು ತೋರುತ್ತದೆ. ಹೀಗಾಗಿ ದೇಶೀಕಾವ್ಯ ಸಂಪಾದನೆಯನ್ನು ಕುರಿತು ಒಂದು ಮಾತು: ಮಾರ್ಗಕಾವ್ಯ ಸಂಪಾದನೆಗೆ ಹೆಚ್ಚು ಪ್ರತಿ ಬಳಸಿದಷ್ಟೂ ಪಾಠ ಹೆಚ್ಚು ಶುದ್ಧವಾಗುತ್ತದೆ. ದೇಶೀಕಾವ್ಯ ಸಂಪಾದನೆಗೆ ಹೆಚ್ಚು ಪ್ರತಿ ಬಳಸಿದ್ದಷ್ಟೂ ಪಾಠ ಹೆಚ್ಚು ಅಶುದ್ಧವಾಗುತ್ತದೆ. ಈ ಸತ್ಯವನ್ನು ಅರ್ಥಮಾಡಿಕೊಳ್ಳದೆ ಈವರೆಗೆ ಸಂಪಾದಿಸಿದ ನಂಬಿಯಣ್ಣನ ರಗಳೆ, ಸೋಮನಾಥ ಚಾರಿತ್ರ ಮೊದಲಾದ ದೇಶೀ ಕಾವ್ಯಗಳ ಸಂಪಾದನೆ ಮಿಶ್ರಪಾಠಕ್ಕೆ ಗುರಿಯಾಯಿತೆಂದೇ ಹೇಳಬೇಕು. ಆದುದರಿಂದ ಇನ್ನು ಮೇಲೆ ಈ ಹಾದಿಯನ್ನು ಬಿಟ್ಟು ಕಾಲದೃಷ್ಟಿಯಿಂದ ಪ್ರಾಚೀನ, ಭಾಷಾದೃಷ್ಟಿಯಿಂದ ಶುದ್ಧ, ಪ್ರತಿದೃಷ್ಟಿಯಿಂದ ಪೂರ್ಣ, ಕಥೆಯ ದೃಷ್ಟಿಯಿಂದ ಸಮಗ್ರವಾಗಿರುವ ಒಂದು ಪ್ರತಿಯನ್ನು ಮಾತ್ರ ಆಯ್ದುಕೊಂಡು, ಸಾಧ್ಯವಿದ್ದಲ್ಲಿ ಲಿಪಿಕಾರನ ಭಾಷಾದೋಷಗಳನ್ನು ನಿವಾರಿಸಿ, ಅವಶ್ಯವಿದ್ದಲ್ಲಿ ಮಾತ್ರ ಬೇರೆ ಒಂದೋ ಎರಡೋ ಉತ್ತಮ ಪ್ರತಿಗಳಿಂದ ಶುದ್ಧಪಾಠ ಸ್ವೀಕರಿಸಬಹುದು. ತೀರ ಅನಿವಾರ್ಯ

ಪ್ರಸಂಗದಲ್ಲಿ ಊಹೆ ಮಾಡಬಹುದು. ಇದು ದೇಶೀಕಾವ್ಯ ಸಂಪಾದನೆಯ ಸರಿಯಾದ ಕ್ರಮ. ಇದರಿಂದ ಕೃತಿ ಮಿಶ್ರಪಾಠಕ್ಕೆ ಗುರಿಯಾಗುವುದನ್ನು ತಪ್ಪಿಸಿ, ಕೊನೆಯ ಪಕ್ಷ ಒಂದು ಪ್ರತಿಯನ್ನಾದರೂ ಶುದ್ಧವಾಗಿ ಉಳಿಸಿಕೊಟ್ಟಂತಾಗುತ್ತದೆ.

ಈ ದೃಷ್ಟಿಯಿಂದ ನಾವು ಚಿತ್ರದುಗ್ಗದ ಪ್ರೊ. ಬಿ. ರಾಜಶೇಖರಪ್ಪ ಅವರು ಪೂರೈಸಿದ ತಾಳೆಪ್ರತಿಯನ್ನು ಆಧಾರವಾಗಿಟ್ಟುಕೊಂಡು, ಅವಶ್ಯವೆನಿಸಿದಲ್ಲಿ ಅಂದರೆ ಪಾಠ ಅರ್ಥವಾಗದಲ್ಲಿ, ಮತ್ತು ತ್ರುಟಿತವಾಗಿದ್ದಲ್ಲಿ ಮೈಸೂರು ಕನ್ನಡ ಅಧ್ಯಯನ ಸಂಸ್ಥೆಯ ಕಾಗದ ಪ್ರತಿಯ ನೆರವು ಪಡೆದಿದ್ದೇವೆ. ಹಳೆಯ ಕುಮಾರರಾಮನ ಸಾಂಗತ್ಯ, ಹೊಸ ಕುಮಾರರಾಮನ ಸಾಂಗತ್ಯಗಳ ಸುಮಾರು ೩೦೦ ಪದ್ಯಗಳು ಇಲ್ಲಿರುವುದರಿಂದ, ಆ ಕಾವ್ಯಗಳ ಪಾಠವನ್ನು ಗಮನಿಸಿದ್ದೇವೆ. ಹೀಗೆ ಪಡೆದ ಸಹಾಯದ ಸೂಚನೆಗಾಗಿ ಯಾವ ಚಿಹ್ನೆಯನ್ನೂ ಬಳಸಿಲ್ಲ. ಇಷ್ಟಾಗಿಯೂ ತೃಪ್ತಿ ಸಿಗದ ಪಕ್ಷದಲ್ಲಿ ಊಹೆಗೆ ಶರಣುಹೋಗಿ, ಚೌಕಕಂಸದಲ್ಲಿ ಅದನ್ನು ನಮೂದಿಸಿದ್ದೇವೆ. ಇದನ್ನು ಮೀರಿಯೂ ಕೆಲವು ಪಾಠಸಮಸ್ಯೆಗಳು ಉಳಿದುಕೊಂಡಿವೆಯೆಂದು ತಿಳಿಸಬಯಸುತ್ತೇವೆ.

**ಹಸ್ತಪ್ರತಿ ವಿವರ**

ಪ್ರೊ. ಬಿ. ರಾಜಶೇಖರಪ್ಪ ಅವರ ಪ್ರತಿ: ಚಿತ್ರದುರ್ಗದ ಕನ್ನಡ ಪ್ರಾಧ್ಯಾಪಕರಾದ ಪ್ರೊ. ಬಿ. ರಾಜಶೇಖರಪ್ಪ ಅವರ ಹತ್ತಿರ ಇದ್ದ ತಾಳೆ ಪ್ರತಿ. ಈಗ ಇದು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಭಾಂಡಾರದಲ್ಲಿದೆ. ಆಕಾರ ೧೮" x ೨". ಪ್ರತಿಯ ಅಂಚು ಅಲ್ಲಲ್ಲಿ ಮುರಿದಿವೆ. ಲಿಪಿಕಾರ ಅವಸರದಲ್ಲಿ ಪದ್ಯಗಳನ್ನು ಅಪೂರ್ಣರೂಪದಲ್ಲಿ ಬರೆದಿದ್ದಾನೆ. ಕೆಲವೊಮ್ಮೆ ಸಾಲುಗಳು ಪುನರುಕ್ತವಾಗಿವೆ.

**ಆದಿ:** ಶ್ರೀ ಗುರುವೆ ಗತಿ. ಶ್ರೀ ವಿಜಯಭ್ಯುದಯ ಶಾಲಿವಾಹನ ಸಖಾಬ್ದ ೧೭೨೩ನೆ ವಿರೋಧಿ ಸಂವತ್ಸರದ ಚೈತ್ರ ಬಹಳ ೬ ಸೋಮವಾರ ದಿವ್ಸ ಪ್ರಥಮಾರಂಭವಂ ಮಾಡಿ ಕೊಮರ ರಾಂಯ್ಯನ ಚರಿತ್ರವ ಬರವುದಕ್ಕೆ ಶುಭಮಸ್ತು ಶೋಭನಮಸ್ತು ಆಯುರಾರೋಗ್ಯ ಐಶ್ವರ್ಯ ಮಸ್ತು. ನಿರ್ವಿಘ್ನಮಸ್ತು. ವಿನಾಯಕ ಮಂಗಳಂ ಬವತಂತುತೆ. ಬಿಳಿಚೋಡು ಮುಖ್ಯ ಪ್ರಾಣಯ ನಮಃ ಶ್ರೀ ಗಿರಿಜೇಶ್ವರಯ ನಮಃ. ರಾನ ತಮ್ಮಿಚ್ಚೆ. ಶ್ರೀ ಗಿರಿಜಾಶಂಬು ಜಗದೀಶನಾಯಕ ಭೋಗಿಭೂಷಣ ಭಾಳನೇತ್ರ.

**ಅಂತ್ಯ:** ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರುಷಂಗಳು ೧೭೨೩ನೆ ವಿರೋಧಿ ಸಂವತ್ಸರ ಜೇಷ್ಠಶು ೧೨ ಮಂದವಾರದ ಗಳಿಗೆ ೧೬ ರೊಳಗೆ ಪರನಾರಿ ಸೋದರನಾದಂತ ಕೊಮಾರ ರಾಮಯ್ಯನ ಚಾರಿತ್ರ ಸಂಪೂರ್ಣವಾಗಿ ಮುಗಿಯಿತು ಶ್ರೀ. ಈ ಪುಸ್ತಕವ ಬರದಾ x x x x ಈರಣ್ಣನ ಕುಮಾರನಾದಂತ ಸಣ್ಣಮಲ್ಲಪ್ಪ ತನ್ನ ಕುಮಾರನಾದಂತ ಸ್ತಿರಂಜೀವಿ ಮಲ್ಲಪ್ಪಗೆ ಧನಕನದ ವಸ್ತು ವಾಹನವಾಗಿ ಸಂತೋಷದಿಂದ ಓದಿಕೊಳ್ಳುವುದಕ್ಕೆ ಬರಕೊಟ್ಟಾತ ಬಿಳಿಚೋಡ ಓದಿಸುವ ಭೀಮಪ್ಪ ಬರದುಕೊಟ್ಟದು. ಬಿಳಿಚೋಡ ಮುಖ್ಯಃ ಪ್ರಾಣಾಯ ನಮಃ. ಕಣೆಕಲ್ಲ ಸಿದ್ದೇಶಾಯ ನಮಃ ಶ್ರೀ ಶ್ರೀ.

**ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಪ್ರತಿ:** ಇದು ಹುಲ್ಲೂರು ಶ್ರೀನಿವಾಸ ಜೋಯಿಸರಿಗೆ ಸಿಕ್ಕಿದ್ದ ಕಾಗದ ಪ್ರತಿಯ ನಕಲು. ಮೂಲತಃ ಈ ನಕಲು ಡಾ. ಜಿ. ವರದರಾಜರಾವ್ ಅವರಿಗೆ ಸಂಬಂಧಿಸಿದುದು. ಇದರ ಝೆರಾಕ್ಸ್ ಪ್ರತಿಯನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. ದುರ್ದೈವದ ಸಂಗತಿಯೆಂದರೆ ಈ ಝೆರಾಕ್ಸ್ ಪ್ರತಿಗೆ ಮೂಲವಾಗಿದ್ದ ಕನ್ನಡ ಅಧ್ಯಯನ ಸಂಸ್ಥೆಯ ಕಾಗದ ಪ್ರತಿಯೂ ಇಂದು ಅಲ್ಲಿ ಸಿಗುತ್ತಿಲ್ಲ. ಮತ್ತೂ ದುರ್ದೈವದ ಸಂಗತಿಯೆಂದರೆ ಈ ಕಾಗದ ಪ್ರತಿಗೆ ಮೂಲವಾಗಿದ್ದ ಹುಲ್ಲೂರ ಅವರು ದೊರಕಿಸಿಕೊಂಡಿದ್ದ ಕಾಗದ ಪ್ರತಿ ಎಂದೋ ಕಳೆದುಹೋಗಿದೆ. ಹೀಗಾಗಿ ಈಗ ಡಾ. ವರದರಾಜರಾವ್ ಅವರು ತಮ್ಮ ಪಿಎಚ್.ಡಿ. ಪ್ರಬಂಧದಲ್ಲಿ ಕೊಟ್ಟಿರುವ ಹುಲ್ಲೂರ ಅವರ ಪ್ರತಿಯ ಪರಿಚಯ ಕೊಡುವುದೇ ಇಲ್ಲಿ ನಮಗೆ ಅನಿವಾರ್ಯವಾಗಿದೆ. 'ನಾಗಸಂಗಯ್ಯ ರಚಿತವೆಂದು ಸೂಚಿಸಿರುವ ಪ್ರತಿಯಲ್ಲಿ ೨೫ ಸಂಧಿಗಳು ಸಮಗ್ರವಾಗಿವೆ. ಈ ವೇಳೆಗಾಗಿಯೇ ಪದ್ಯಗಳ ಸಂಖ್ಯೆಯನ್ನು ೨೫೭೩ ಎಂದು ಸೂಚಿಸಲಾಗಿದೆ. ಇಲ್ಲಿಗೆ ಕಾಟಣ್ಣನ ಮರಣ ಪ್ರಸಂಗ ಪೂರ್ಣವಾಗುತ್ತದೆ. ೨೬ನೆಯ ಸಂಧಿಯ ಮಂಗಳ ಪದ್ಯವು ಮಾತ್ರ ಉಲ್ಲೇಖಿತವಾಗಿ ಪ್ರತಿ ಇಲ್ಲಿಗೇ ನಿಲ್ಲುತ್ತದೆ.'

**ಕೃತಜ್ಞತೆ**

ಕುಮಾರರಾಮನನ್ನು ಕುರಿತ ಅಪ್ರಕಟಿತ ನಾಲ್ಕು ಕೃತಿಗಳ ಪರಿಷ್ಕರಣ ಶ್ರೇಣಿಯ ಈ ಎರಡನೆಯ ಸಂಪುಟಕ್ಕೆ ಹಸ್ತಪ್ರತಿಯನ್ನು ಪೂರೈಸಿದ ಪ್ರೊ. ಬಿ. ರಾಜಶೇಖರಪ್ಪ (ಚಿತ್ರದುರ್ಗ), ಪ್ರೊ. ಸಿ.ಪಿ. ಸಿದ್ಧಾಶ್ರಮ (ನಿರ್ದೇಶಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು) ಅವರಿಗೆ, ಸೂಕ್ತ ನೆರವು ನೀಡಿದ ಶ್ರೀಮತಿ ವೈ.ಸಿ. ಭಾನುಮತಿ ಅವರಿಗೆ ಕೃತಜ್ಞತೆಗಳು.

ಈ ಕೃತಿ ಪ್ರಕಟಣೆಗೆ ಅವಕಾಶ ಮಾಡಿಕೊಟ್ಟ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎಚ್. ಜೆ. ಲಕ್ಕಪ್ಪಗೌಡ ಅವರಿಗೂ, ಪ್ರಸಾರಾಂಗದ ಮಾಜಿ ನಿರ್ದೇಶಕರಾದ ಪ್ರೊ. ಎ.ವಿ. ನಾವಡ ಅವರಿಗೂ ವಂದನೆಗಳು.

ಈ ಕೃತಿಯ ಮುದ್ರಣಕಾರ್ಯದಲ್ಲಿ ನೆರವಾದ ಶ್ರೀ ಕೆ.ಎಲ್. ರಾಜಶೇಖರ್, ಅಚ್ಚುಕಟ್ಟಾಗಿ ಮುದ್ರಿಸಿದ ಕೈಲಾಸ್ ಪ್ರಿಂಟರ್ಸ್‌ನ ಮಾಲೀಕರಾದ ಶ್ರೀ ಎಂ. ರಾಜಶೇಖರ್ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ನೆನೆಕೆಗಳು ಸಲ್ಲುತ್ತದೆ.

**– ಎಂ.ಎಂ. ಕಲಬುರ್ಗಿ**

---

* ಈ ಮಾದಿಗಿತ್ತಿಯು ಸಗರದಲ್ಲಿ ನೆಲೆ ನಿಂತಿದ್ದ ಶೇಖ ಸೂಫಿ ಸರಮಸ್ತ ಎಂಬುವನ ಮಗಳೆಂದು ಈಟನ್ ಅವರು ತನ್ನ 'ಸೂಫೀಜ್ ಆಫ್ ಬಿಜಾಪುರ' ಪಸುತದಲ್ಲಿ (ಪುಟ ೧೧-೧೭) ಹೇಳಿದ್ದಾರೆ.

# ಸಂಧಿ ೧ - ಮುಮ್ಮಡಿ ಸಿಂಗ-ಕಂಪಿಲರ ವೃತ್ತಾಂತ

ಶ್ರೀ ಗಿರಿಜಾ[ಸ್ಯಾಂಬುಜ ದಿನನಾಯಕ]
ಭೋಗಿಭೂಷಣ ಭಾಳನೇತ್ರ |
ಭಾಗೀರಥಿಧರ ಭವರೋಗವೈದ್ಯನೆ
ನಾಗ[ಕುಂಡಲ] ಶರಣೆಂಬೆ || ೧ ||

ಶ್ರೀ ಗೌರಿ[ಯರ್ಧಾಂ]ಗ ಭಾ[ಗೀ]ರಥೀಮೌಳಿ |
ನಾಗಭೂಷಣ ಪರಮೇಶ |
ಆಗಮಾತೀತ ಪರಮ ಋಷಿಮುನಿವಂದ್ಯ
ಬೇಗದಿಂ ಕೊಡು ಮತಿಗಳನು || ೨ ||

[ದು]ಷ್ಟಾರಿಮದಭಂಗ ದುರಿತಸಂಹರ [ಶೃಂಗ]
ಸೃಷ್ಟಿಗಧಿಕ ಶಂಭುಲಿಂಗ |
ಅಷ್ಟದಿಕ್ಪಾಲಕರೊಡೆಯ ಗೌರೀಶನೆ
ಸೃಷ್ಟಿಸು ಮತಿಗೆ ಮಂಗಳವ || ೩ ||

ಸತಿಯರೊಳಗೆ ರೂಪವತಿಯ ನೆಚ್ಚಿನ ಪುಣ್ಯ
ವತಿಯಾದಳಾ ಪಾರ್ವತಿಯ |
ಕ್ಷಿತಿಯ ಜನರಿಗೆಲ್ಲ ಮತಿಯ ಕೊಡುವ ಮಾನ್ಯ
ವತಿಯುಮೆದೇವಿಯ ನೆನೆವೆ || ೪ ||

ಇಂದು ಪಾರ್ವತಿದೇವಿಗೆರಗಿ ಶ್ರೀ ಲೋಕೇಶ
ಗೊಂದಿಸಿ ವರಗಳ ಪಡೆದು |
ಚಂದದಿಂದಲಿ ಉಮೆಯಳ ನಾನು ಭಜಿಸಿ ಆ
ನಂದದಿ ಪೇಳ್ವೆನೀ ಕಥೆಯ || ೫ ||

ಲೇಪಾಕ್ಷಿಪುರವಾಸ ಲೀಲಾವಿಲಾಸನೆ
ಪಾಪಸಂಹರನೆ ಕರುಣಿಸು |
ಮಾಪತಿಯಾವಾಸ ಭದ್ರಕಾಳೀಶನೆ ಉ
ಮಾಪತಿ ಕುವರ ವೀರೇಶ || ೬ ||

ಹರನ ಮೋಹದ ಪುತ್ರ ಹರಿನೀಲಗಾತ್ರನೆ
[ಉರು]ತರಗುಣ [ಮ]ಹಾವೀರ |
ಪರಮಭಕ್ತರ ಪೋಷ ಕರುಣದಿಂದೆಮಗೆ ನೀ
ವರವ ಪಾಲಿಸು ಚೆನ್ನವೀರ || ೭ ||

ಕಾಮನ ಪೆತ್ತನೆ ಕಮಲಲೋಚನ ಸತ್ಯ
ಭಾಮೆಯರರಸ ಶ್ರೀಕೃಷ್ಣ |
ಈ ಮಹಿಯೊಳಗೆ ನಾನಾ ಜೀವಾತ್ಮನೆ
ಕಾಮಿತ ಫಲದಾಯಕನೆ || ೮ ||

ಕಲಿಯುಗದೊ[ಳ]ಗೆ ಕರ್ನಾಟದೊಳರ್ಜುನ
ಹಲವು ಶಾಪಗಳಿಂದ ಜನಿಸಿ |
ಬಲವಂತವಾಗಿನ್ನು ತಾ ಪುಟ್ಟಿ ಬರುವಂಥ
ಗೆಲುವಿನ ಕಥೆಯ ಪೇಳುವೆನು || ೯ ||

ಅಂದಿನ ಪಾರ್ಥ [ತಾ] ಇಂದಿನ ನಾಯಕ
ಬಂದು ಜನಿಸುವಂಥ ಬಗೆಯ |
ಚಂದದಿಂದೊರೆದು ಪೇಳುವೆನು ಈ ಕಥೆಯನು
ಚಂದ್ರಶೇಖರನ ವರದಿಂದ || ೧೦ ||

ಓದಿದ ಓದೆಲ್ಲ ಮೇದ ಕಬ್ಬಿನ ಹಿಪ್ಪೆ
ಓ[ದಿ]ದಡಲಿ ತಿಳಿದಂತೆ |

ಈ ಧರೆಯೊಳಗೆಲ್ಲ ಪರನಾರಿ[ಯರಿ]ಗೆ ತಾ
ಸೋದರನೆಂಬಂಥ ಕಥೆಯ || ೧೧ ||

ಆಧಾರವಿಡಿದು ಪೇಳಿದನಾ ಗಂಗಯ್ಯ
ಈ ಧರೆಯ ವಿದ್ವಾಂಸರೊಳಗೆ |
ಸಾಧಿಸಿ ಅವರ ಸೇವಕನಾಗಿ ಪೇ[ಳ್ವೆ]ನು
ಯಾದವಸಖ ಪಾರ್ಥ ಕಥೆಯ || ೧೨ ||

ಕುಲದಲ್ಲಿ ಪೂವಲಿ ಮುಮ್ಮಡಿಸಿಂಗನು
ಬಲವಂತನಾಗೊಬ್ಬ ಶಬರ |
ಹಲವು ಕಾಲದೊಳು ಕಂಪಳಕೆ ತಾನರಸಾಗಿ
ಇಳೆಯನಾಳುತ ಇರುತಿಹನು || ೧೩ ||

ನೂರಾರು ಮಂದಿ ಕಿರಾತರ[ನೊಡಗೊಂಡು]
ಆರಣ್ಯ ಅಡವಿಯೊಳ್ ತಾನು |
ಕಾರುಣ್ಯನಿಧಿಯೆ ಕಂಪಿಲದೇವರೆಂಬುತ
ಮಾರಹರನ ಪೂಜೆಯಿಂದ || ೧೪ ||

ಸತಿಪುರುಷರು ತಾವು ಅತಿ ಹರುಷದೊಳಿರೆ
ಮತಿವಂತೆ ಮಂಚಕ್ಕನವಳು |
ಗತಿಯಿಲ್ಲ ಮುಂದೆ ಕಂಪಳಕೆಂದು ಪುತ್ರನ
ಅತಿ ಹರುಷದೊಳು ಬೇಡಿದಳು || ೧೫ ||

ಕೊಟ್ಟನು ಬಿಲ್ಲಿನ ಮೇಲಣ ಪುಷ್ಪವ
ಇಟ್ಟನು ಮುಂದಕ್ಕೆ ಹೂವ |
ಕಟ್ಟಿಕೊಂಡಳು ಸೆರಗಿಗೆ ಪ್ರಸಾದವ
ಅಷ್ಟರೊಳ್ ಗರ್ಭ ಸೂಚಿಸಲು || ೧೬ ||

ಉದಿಸಿದನೊರ್ವ ಕುಮಾರಕ ಜನಿಸಿದ
ಪೊಡವಿಯನಾಳ್ವಂತನಾಗಿ |
ಸುದತಿಯೊರ್ವಳ ಕೂಡಿ ಸುತ[ನು] ಸಾಹಸವಾಗಿ
ಸದರನೇರುವ ಮುಂದೆ ಇವನು || ೧೭ ||

ಇಂತಪ್ಪ ಪುತ್ರನುದಿಸಲು ಕಂಪಿಲನೆಂದು}
ಕಾಂತೆ ಪೆಸರನಿಟ್ಟಳಾಗ |
ಸಂತೋಷದಲ್ಲಿ ಬಾಳುತಲಿರೆ [ಕಂಪಿಲ]
ಕಂತುಹರನ ಕರುಣದಿಂದ || ೧೮ ||

ದಿನಕೊಂದು ಚೆಂದದಿ ಬೆಳೆದು ದೊಡ್ಡವನಾಗಿ
ಮನೆಯೊಳು ತಾನಿರುತಿಹನು |
ವಿನಯದಿ ಸೋದರತ್ತೆಯ ಮಗಳನು ತಂದು ಜನಕ
ಮದುವೆಯ ಮಾಡಿದನು || ೧೯ ||

ತಮ್ಮ ಮಕ್ಕಳು ತಾವು ಕೂಡಿ ಸಂತೋಷದಿ
ಹೊಂದಿದ ಶಬರರು ಸಹಿತ |
ಕಂದರ್ಪದಹ ಪರಮಾತ್ಮನ ಕೃಪೆಯಿಂದ
ಚೆಂದದಿ ಬಾಳುತಲಿಹರು || ೨೦ ||

ಕೆಲವು ಕಾಲವು ಹೋದ ಬಳಿಕ ಮುಮ್ಮಡಿಸಿಂಗ
ಅಳಿದು ಹೋದನು ವೃದ್ಧನಾಗಿ |
ಬಳಿಕ ಕಂಪಿಲ ತಾನು ಹತ್ತೆಂಟು ವರುಷಾಗಿ
ಬಲವಂತನಾಗಿರುತಿರ್ದ || ೨೧ ||

ತಂದೆ ಮುಮ್ಮಡಿಸಿಂಗ ಸಂದುಹೋದ ಬಳಿಕ
ಬಂದಿತು ಬರಗಾಲ ದಿವಸ |
ಕಂದನ ಹಿಡಿಯಲಾರದೆ ಮಂಚಕ್ಕನು
ಬಂದಳು ಆ ಸ್ಥಲ ಬಿಟ್ಟು || ೨೨ ||

ಮೂಡಲದೆಸೆಯಿಂದ ಪಡುವಣ ದೇಶಕ್ಕೆ
ಕಾಡರಸಿ [ತಾ]ವಾಗ ಬರಲು |
ಕೂಡ್ಯೊಂದು ನಾಲ್ಕೆಂಟು ಮನೆಯ ಕಿರಾತರು
ಕೂಡಿ ಬಂದರು ಬಂಧುಬಳಗ || ೨೩ ||

[ಜಟ್ಟಂಗಿ] ರಾಮನ ಗಿರಿಗಾಗಿ ಬಂದರು
ಕೋಟಾಳೆ ಕಂಪಳ ಸಹಿತ |
ಕೋಟೀಶ್ವರನ ಪಾದವ ಕಂಡು ಪಡೆದರು
ಕಾಟಣ್ಣನೆಂಬಂಥ ಮಗನ || ೨೪ ||

ಮನೆದೈವವಾದನು ಜಟ್ಟಂಗಿ ರಾಮೇ[ಶ]
ಮನೆ ದೊಡ್ಡದಾ[ಯ್ತು] ಕಂಪಿಲನ |
ವನದೊಳು ಹಟ್ಟಿಯ ಹಾಕಿ ಕೆಲವು ಕಾಲ
ದಿನಗಳೆದರು ಅರ್ತಿಯಿಂದ || ೨೫ ||

ನಡುಮಲೆ ಮುಚ್ಚಾದ ಗುಡ್ಡದ ಮರೆಗಾಗಿ
ಒಡನೆ ಕಂಪಳ ಎದ್ದು ಹೋಗಿ |

ಅಡವಿಯೊಳ್ ಹಟ್ಟಿಯ ಹಾಕಿಕೊಂಡೆಲ್ಲರು
ಬಡತನದೊಳು ಇರುತಿಹರು || ೧೬ ||

ಬೇಟೆಯನಾಡುತ ಬಂದರು ಮಲೆಯೊಳು
ಮೀಟಾದ ಲೋಹಾರಿ ಗಿರಿ[ಯ]
ದಾಟುತ ಕಂಡರು ತಾರಕಸಂಹಾರಿ
ಕೋಟೇಶ್ವರನ ಪಾದವನು || ೧೭ ||

ಕಂಡಡ್ಡ ಬಿದ್ದು ಕಾಣಿಕೆಯಿಕ್ಕಿ ಫಲಗಳ
ಕಾಂಡ ಗೆಣಸು ಜೇನತುಪ್ಪ |
ಲಂಡ ಕಿರಾತರು ಕಂಪಿಲ ಸಹವಾಗಿ
ಖಂಡುಗ ಹರಕೆಯನಾಂತು || ೧೮ ||

ಅಲ್ಲಿಂದ ನಡೆದರು ಹೊಸಮಲೆ ಕಣಿವೆಗ
ಳೆಗಲ್ಲ ತಾವು ನೋಡುತಲಿ |
ಬಲ್ಲಿದರಾಗಿ ಬರಲು ಬಹು ಮಲೆಯೊಳು
ಬಲ್ಲಂತೆ ಮಾತನಾಡಿದರು || ೧೯ ||

ಸುತ್ತಣ ಅಡವಿ ಅರಣ್ಯವ ನೋಡುತ
ಒತ್ತಿ ಬೇಂಟೆಯನಾಡುತವರು |
ಕತ್ತಲೆಯೊಳು ತಮ್ಮ ಕಂಪಳಕೆ ಬಂದರು
ಹೊತ್ತು ತಂದರು ಮೃಗಗಳನು || ೨೦ ||

ಈ ರೀತಿಯಲಿ ತಾವು ಹಟ್ಟಿಯ ಮಾಡಿನ್ನು
ಸೇರಿಕೊಂಡರು ಹೊ[ಸ]ಮಲೆಯ |
ಕಾರಣ ಇವರಿಂದ ಪುಟ್ಟುವದು ಮುಂದೆ
ಪೂರಾಯವಾಯಿತ್ತು ಸಂಧಿ || ೨೧ ||

**ಅಂತು ಸಂಧಿ ೧ ಕ್ಕಂ ಪದನು ೨೧ ಕ್ಕಂ ಮಂಗಳ ಮಹಾಶ್ರೀ**

## ಸಂಧಿ ೨ - ಕೊಮಾರ ರಾಮಯ್ಯನ ಜನನ ವೃತ್ತಾಂತ

ಶ್ರೀ ಗಿರಿಜಾ[ಸ್ಯಾಂಬುಜ ದಿನನಾಯಕ]
ಭೋಗಿಭೂಷಣ ಭಾಳನೇತ್ರ |
ಭಾಗೀರಥಿಧರ ಭವರೋಗವೈದ್ಯನೆ
ನಾಗ[ಕುಂಡಲ] ಶರಣೆಂಬೆ || ೧ ||

ನಾಗಕಂಕಣ ನಿಗಮಾಗಮ ಜನದೀಶ
ಭಾಗೀರಥಿಯ ಮನೋಪ್ರಿಯನೆ |
ಯೋಗಿ ಪೀತಾಂಬರಧರಸಖಚೂಡನೆ
ಆಗಮ[ತತಿ] ವಂದಿತನೆ || ೧ ||

ಜಗದೊಳಧಿಕ ಕರ್ನಾಟಕಕೊಪ್ಪುವ ವಿದ್ಯಾ
ನಗರ [ದಕ್ಷಿಣಭಾ]ಗದಲ್ಲಿ |
[ಅಗ]ಜಾಧಿಪತಿ [ಇಹ] ಮೇರುಗಿರಿ [ಗು] ದೊಡ್ಡ
ಸೊಗಸೆನಿಸುವ ಹೊಸಮಲೆಯ || ೩ ||

ಗಿರಿಯಲ್ಲಿ ಬಹು ಬೇಂಟೆಕಾರನಾಗಿ[ಯೆ] ತಾನು
ಇರುವನು ಕಿರಾತನೊರ್ವ |
ಪರಿವೇಷ್ಟಿಸಿ ದಾರಿಯ ಕಟ್ಟಿ ಸುಲಿಕೊಂಡು
[ಅ]ರ[ಸನಾಗಿಯೆ] ಕಂಪಿಲನು || ೪ ||

ದಾರಿದಾರಿಯ ಜನರನೆಲ್ಲ ಸುಲಿದು ತಾನು
ಇರುವನು ಕಿರಾತನೊರ್ವ |
ಊರು ಗ್ರಾಮಗಳನು ಹಿಡಿದು ವೀರದಿ ಲುಬ್ದ
ಅರ[ಸಾಗಿ] ಆಳ್ವ ಹೊಸಮಲೆಯ || ೫ ||

ಈ ಪರಿಯಿಂದಿರುತಿರೆ [ತಾ]ನಾ ರಾಜ್ಯಕ್ಕೆ
ಭೂಪನಾಗಿಹನು ಕಂಪಿಲನು |
ತಾ ಪಿರಿದೆನಿಸಿ ಹತ್ತೆಂಟು ಗ್ರಾಮಗಳನು-
ಮಾಪತಿ ಕೃಪೆಯಲಾಳುವನು || ೬ ||

ಭೂಪತಿ ಗುತ್ತಿಯನಾಳ್ವ ರಾಯನು ಜಗ
ದಪ್ಪ ಕಪ್ಪವ ಬೇಡಿ ಕಳುಹೆ |
ಈ ಪರಿಯಿಂದ ಕಪ್ಪವನಿತ್ತು ಕಂಪಿಲ
ಕೋಟಾರಣ್ಯ ಮಧ್ಯದೊಳಿಹನು || ೭ ||

ಅಷ್ಟ ದಿಕ್ಕಿನ ರಾಯರಿಗೆ ಕಪ್ಪವನಿತ್ತು
ಪಟ್ಟಾಭಿಷೇಕಿತನಾಗಿ |
ಕೊಟ್ಟದ ಬೇಡರ ತಡೆದು ಆ ಗಿರಿಯೊಳು
ಸೃಷ್ಟೀಶನಾಗಿರುತಿಹನು || ೮ ||

ಸೃಷ್ಟಿಗಧಿಕ ಹೊಸಮಲೆಯೊಳು ದುರ್ಗವ
ಕಟ್ಟಿ ಆಳುವನು ಕಂಪಿಲನು |

ಕೊಟ್ಟ ಸಂಬಳ ಭಕ್ಷಪಡಿಗಳ ನಡೆಸಿ ಬಲು
ದಿಟ್ಟ ಈ ಬೇಡನೆಂದೆನಿಸಿ || ೯ ||

ಅಗುಳು ಆಳ್ವೇರಿಯು ಮಿಗೆ ಜಿಡ್ಡಿ ಕೊತ್ತಳ
ಜಗಳಕ್ಕೆ ಭಾರಿ ಹುಲಿಮುಖವು |
ನೆಗಳಿಹ ಕೋಟೆಗೆ ಫಣಿಪನಂತೆಸೆದಿಹ
ಅಗಣಿತ ತೆನೆಗಳೊಪ್ಪಿದವು || ೧೦ ||

ಸೋಮವೀಧಿಯು ಸೂರ್ಯವೀಧಿ ಉಪ್ಪರಗುಡಿ
[ಕಾರ್ಮುಕ]ಜನರರ್ತಿಜನರು |
ಪ್ರೇಮದಿ ನವಿಲುಯ್ಯಲೆಯ ನರ್ತನಗಳು
ಸ್ತೋಮದೊಳೆಸೆದೊಪ್ಪುತಿಹವು || ೧೧ ||

ಅಂಗಡಿ ವೀಧಿಯು ರಂಗಮಂಟಪಗಳು
ಶೃಂಗರಿಸಿದ ಕೆಂಡೋಕುಳಿಯು |
ಅಂಗಳ ಚಳೆಯಾಗಿ ಮಂಗಳ ಪಳುಕವು
ಅಂಗನೆಯರ ಕೇರಿಯೊಳು || ೧೨ ||

ಇತ್ತ ಈ ಪುರವನಾಳುತಲಿರೆ ಕಂಪಿಲ
ಅತ್ತ ಗುಜ್ಜಾರಿಯನಾಳ್ವ |
ಉತ್ತುಮ ಆರೆಯ ರಾಯ ರಾಜ್ಯವು ಕೆಟ್ಟು
ಮತ್ತೆ ಗೂಳೆಯವೆದ್ದು ಬಂದ || ೧೩ ||

ವರುಣನ ನದಿಯೆಂಬ ಕೃಷ್ಣನದಿಯ ದಾಟಿ
ತೊರುಗಲ್ಲು ಬಾದಾವಿಲಿಳಿದು |
ಸಾರಿದ ಕುಮ್ಮಟ ತುಂಗಭದ್ರೆಯ ದಾಂಟಿ
ಧೀರ ಕಂಪಿಲನಿದ್ದೆಡೆಗೆ || ೧೪ ||

ಧಾರುಣಿಯನು ಆಳ್ವ ಕಂಪಿಲರಾಯಗೆ ಕು
ಮಾರಿಯೊರ್ವಳನು ಕಾಣಿಕೆಯ |
ಓರಣದಲಿ ಇತ್ತು ಕಂಡನರಸನು ಭೂ
ಚಾರಮನೆಂಬ ಆರೆಯನು || ೧೫ ||

ಕಾಣಿಕೆಯನು ಇತ್ತು ಆರೆಯ ಚಾರ[ಮ]ಗೆ
ನಾಣ್ಯ ಬಂಗಾರ ವಸ್ತ್ರಗಳ |
ಊಣ್ಯವಿಲ್ಲದೆ ತಿರುಗಿಸಿ[ದ] ಹಿಂದಕೆ ಪಡು
ವಣರಾಜ್ಯ[ವಿತ್ತು] ಕಂಪಿಲನು || ೧೬ ||

ಪಡುವಣ ರಾಜ್ಯವನಿತ್ತವನಿಗೆ ಭೂಪ
ತಡೆದನು ಆರೆಯ ದೊರೆಯ |
ಸಡಗರದಿಂದಲಿ ಕಂಪಿಲರಾಯನು
ನಡೆವಳಿಗುಂಟಾಗಿ ಇಹನು || ೧೭ ||

ಬಂದ ಆರೆಯರಾಯ ನಿಂದ ಬಲ್ಲಿದನಾಗಿ
ನಿಂದನು ಅರಸು ಕಂಪಿಲನು |
ಚಂದ್ರವದನೆ ಹರಿಯಲದೇವಿಯು ಬಲು
ಚಂದದಿಂದಾರೈವುತಿರಲು || ೧೮ ||

ಸತಿ ಪುರುಷರು ಈ ಪರಿಯೊಳು ಇರುತಿರೆ
ಅತಿಶಯ ಕೈಲಾಸದೊಳಗೆ |
ಪೃಥ್ವಿಗೀಶ್ವರನ ವಾಲಗ ನೆರೆದಿರೆ ಗಣ
ತತಿಯು[ಮಾ]ದೇವಿಯರೊಲಿದು || ೧೯ ||

ವಾಲಗಗೊಟ್ಟು ಈಶ್ವರ ಕುಳಿ[ತಿರೆಯುವೆ]
ಬಾಲ ಜಾಹ್ನವಿ ಗಣತತಿಯು |
ಲೀಲೆಯಿಂದಲಿ ಬಂದ[ರ]ಷ್ಟವಧಾನದಿಂ
ದಾಲಿಸಿ ಗಣಸ್ತೋಮವೆರಸಿ || ೨೦ ||

ತೆತ್ತೀಸಕೋಟಿ ದೇವರ್ಕಳೆಲ್ಲರು ಕೂಡಿ
ಇತ್ತಲಗಜೆಯೊಳು ನೆರೆದು |
ಮೃತ್ಯುಂಜಯನ ವಾಲಗಕ್ಕೈದು ಬಂದರು
ಸಮಸ್ತ ಗಣರು ತಿಂಥಿಣಿಯು || ೨೧ ||

ಎಂಟು ದಿಕ್ಕುಗಳ ನೋಡುತ ಉಮೆ [ನೋ]ಟದಿ
ಗಂಟಿಕ್ಕಿ[ದ] ಮೊಗವ ನೋಡಿದಳು |
ಉಂಟು ದ್ವಾಪರರಾಯ [ರೈವರಲಿ] ಕೃಷ್ಣ[ನ]
ನಂಟನರ್ಜುನನುಮೆದೇವಿ || ೨೨ ||

ದೇವಸಭೆಯು ಹರಿಬ್ರಹ್ಮರುಮವರೆದ್ದು
ಭಾವಿತ ನಮಿತರು ಸಹಿತ |
ದೇವಿಯ ಕಾಣಲೊಡನೆ ಎದ್ದು ಕೈ ಮುಗಿ[ಯೆ ಸ]
[ದ್ಭಾವೆ] ಪರಬ್ರಹ್ಮ[ನೊ]ಡನೆ || ೨೩ ||

ಇವಗಿಷ್ಟು ಗರ್ವಿಕೆ ಯಾಕೆ ಮಾನವನೆಂದು
ಭೂವನೇಶನರ್ಧಾಂಗಿ ನುಡಿಯೆ |

ದಿವಿಜಾರಿಗಿಂದ ವೆಗ್ಗಳ ಕಾಣೆ
ಪಾರ್ವತಿ [ನವೆವ]ನರ್ಜುನ ಪರಸತಿಗೆ || ೧೪ ||

ಧರೆಯೊಳಗಿವನ ಕುರುಹ ನೋಡಬೇಕೆಂದು
ಪರನಾರಿಯರ ಬಿರಿದುಗಳ |
ಪರೀಕ್ಷಿಸಿ ನಾ ನೋಡಿದಲ್ಲದೆ ಬಿಡೆನೆಂದು
ವರ ರಂಭೆಯನು ತಾನಟ್ಟಿದಳು || ೧೫ ||

ಆದರೆ ಕೇಳು ಗೌರಾಯಿ ಮಾ[ತ]ನದೊಂದು
ಈ ಧರೆಯೊಳಗೆ ಈತನನು |
ಸಾಧಿಸಿ ವೆಗ್ಗಳವಾದರೆ ನಿನ್ನ ರಂಭೆಗೆ
ಮೇದಿನಿಯೊಳಗೆ ಸರಿಯುಂಟೆ || ೧೬ ||

ಶಂಭುವರ್ಧಾಂಗಿವಾದಿಗಳಿತ್ತ ಧರೆಯೊಳು
ರಂಭೆ ಅರ್ಜುನ ಸಹವಾಗಿ |
ಬೆಂಬಳಿಯಿಂದಲೀರ್ವ[ರ]
ಧರಣಿಗೆ ಕಳುಹೆ ಸಂಭ್ರಮ ಕೈಲಾಸವಿಳಿದು || ೧೭ ||

ಬಂದರಿರ್ವರು ಕೈಲಾಸವನಿಳಿಯುತ
ನಿಂದರು ಧರೆಯ ಮಧ್ಯದಲಿ |
ಕುಂದ[ದಿಳೆ]ಯೊಳು ಉದಿಸಬೇಕೆನುತಲಿ
ಅಂದವರು ಉಮೆ ಈಶ ರಚಿಸೆ || ೧೮ ||

ಇತ್ತ ಕಂಪಿಲನರಸಿ ಹರಿಯಾಲದೇವಿಯು
ಪುತ್ರರಿಲ್ಲೆನುತ ಮನದೊಳಗೆ |
ಮತ್ತೆ ಜಟಿಂಗ ರಾಮೇಶನ ವರಗಳ
ಅರ್ತಿಯಿಂ ಸಂಬಾಳಿಸಿದಳು || ೧೯ ||

ಪಾರ್ವತಿರಮಣನೆ ಉರ್ವಿಗೆ ಒಡೆಯನೆ
ನಿರ್ವಾಣಮುನಿಗಳೊಂದಿತನೆ |
ಸರ್ವಜೀವರ ಸಲಹುವ ಸೂತ್ರಧಾರನೆ
ಗರ್ವದಲ್ಲಣನೆ ಕೊಡು ಸುತನ || ೨೦ ||

ಇಂತಪ್ಪ ಭಕ್ತಿಯೊಳು ಚಿಂತಾಯಕನ ಸ್ತುತಿಸುವ
ಕಾಂತೆ ಇಹಳು ತನ್ನ ಮನದಿ |
ಅಂತು ಸಂತೋಷದಿಂದಲಿ ಮೀಸಲಗಳನು
ಕಂತುಹರಗೆ ಕಳುಹಿದಳು || ೨೧ ||

ಮೀಸಲ [ಕೊಡ] ಹಾಲು ತುಪ್ಪ ಕದಳಿಯ ಫಲ
ಸೂಸಲ ಸಣ್ಣಕ್ಕಿ ಬೇಳೆ |
[ಭಾ]ಸುರ ತೇಜನ ಬಲಗೊಂಡು ಬನ್ನೆಂದು
ಆ ಸಖಿಯರ ಕೂಡೆ ಕಳುಹೆ || ೩೧ ||

ಗಿರಿಜೆಯ ರಮಣಗೆ ವಂದಿಸಿ ಮೀಸಲೊಪ್ಪಿಸಿ
ಪರಮಾತ್ಮ ಕೊಡು ಇಷ್ಟಾರ್ಥವನು |
ದೊರೆಗಳ ಅರಸಿ ಹರಿಯಲದೇವಿಗೆ ಒಬ್ಬ
ವರಪುತ್ರನೆಂಬಂಥ ಮಗನ || ೩೩ ||

ವರಗಳ ಬೇಡಲು ಹರುಷದಿಂ ಪೂಜಾರಿ
ಕರೆದು ಕೊಟ್ಟನು ಪುಷ್ಪಗಳನು |
ಹರಿಯಲದೇವಿಗೆ ಕೊಡಿರೆಂದು ಕದಳಿಯ
ಪರಿಪರಿ ಹಣ್ಣು ಪುಷ್ಪಗಳ || ೩೪ ||

ಸೋಮವಾರದ ದಿನ ಆ ಮಹಾದೇವನ
ಪ್ರೇಮದಿಂದಲಿ ಪೂಜೆ ಮಾಡಿ |
ಕೋಮಲೆ ಹರಿಯಲದೇವಿಗೆ ಕಳುಹಿದರು
ಕಾಮಿತ ಫಲವಾಗಲೆನುತ || ೩೫ ||

ಬಂದರು ಪ್ರಸಾದ ಹಣ್ಣು ಪುಷ್ಪಗಳನು
ತಂದರು ಹರಿಯಮ್ಮನ ಬಳಿಗೆ |
ಗಂಧ ಪ್ರಸಾದ ಕದಳಿಯ ಫಲಂಗ[ಳ]
ಮುಂದಿಕ್ಕಿ ಕೈಯ ಮುಗಿದರು || ೩೬ ||

ಉಂಡುಟ್ಟು ಮಲಗಲು ಕಂಡಳು ಕನಸನು
ಪುಂಡರೀಕ ಪುರುಷೋತ್ತಮನ |
ಖಂಡುಗ ಪೂವಿನೊಳಗೆ [ಒಂದು] ಬಹು ದೊಡ್ಡ
ದುಂಡು ಮಲ್ಲಿಗೆ ಅರಳ ಕೊಟ್ಟ || ೩೭ ||

ಕೊಟ್ಟೆನು ಸುತನ ಹರಿಯಲದೇವಿ ಕೇಳಿನ್ನು
ಪಟ್ಟಾಭಿಷೇಕ[ನು] ಎನಿಸಿ |
ಕೊಟ್ಟದ ರಾಮನೆನಿಸಿ ಅರ್ಜುನ ಬಂದು
ಪುಟ್ಟುವನು ನಿನ್ನಾತ್ಮದೊಳಗೆ || ೩೮ ||

ಬಂದು ಜನಿಪ ಪಾಂಡವರೊಳಗೊರ್ವ ಮು
ಕುಂದನ ಮೈದುನ ನಿನ್ನ |

ಕಂದನಾಗಿಯೆ ಪುಟ್ಟಿ ರಾಯ ರಾಜ್ಯವನೆಲ್ಲ
ಬಂಧಿಸಿ ಪಿಡಿ[ವ] ದೊರೆಗಳ || ೩೯ ||

ಇಂತಪ್ಪ ಮಗನು ಪುಟ್ಟುವನೆಂದು ಸ್ವಪ್ನದೊಳ್
ಕಂತುಹರನು ಶಿವ ನುಡಿದ |
ಸಂತೋಷದಿಂ ನಿದ್ರೆ ತಿಳಿದೆದ್ದು ಹರಿಯಮ್ಮ
ಚಿಂತಾಯಕನ ಕರುಣದಲಿ || ೪೦ ||

ನವಮಾಸ ತುಂಬಿತು ಹರಿಯಲದೇವಿಗೆ
ಭವಹರ ರುದ್ರನ ದಯದಿ |
ಶಿವನ ಅನುಜ್ಞೆಯಿಂ ಪಡೆದಳು ಗಂಡು
ಕುವರನ ಹರಿಯಲದೇವಿ || ೪೧ ||

ದೇವ ಜಟ್ಟಿಂಗ ರಾಮೇಶನ ವರದಿಂದ
ಭಾವಕಿ ಪಡೆದಳು ಮಗನ |
ಕೋವಿದ ರಾಮ ಜನಿಸಲಿತ್ತಲತ್ತಲಾ
ದೇವೇಂದ್ರನ ವರ ರಂಭೆ || ೪೨ ||

ತೆಗೆದು ಬೀಸಾಟೆ ಸಿಪ್ಪೆಯನುಂಬ ದಾದಿಯು
ಅಘಹರನೇ ಗತಿಯೆಂದು |
ಜಗಿದು ನುಂಗಿದಳು ಏಕಭಕ್ತಿಯಿಂದವಳು
ಮಗ ಬಂಟ [ಕಳ್ಳ]ರಾಮ ಪುಟ್ಟೆ || ೪೩ ||

ರಾಮನೆಂಬ ಪೆಸರಿಟ್ಟು ಕಂಪಿನ ತನ್ನ
ಕುಮಾರನ ಅತಿ ಮೋಹದಿಂದ |
ಭೂಮಿಯೊಳತಿ ಚೆಲ್ವನಿಗೆ ಬಾಲದೊಡಿಗೆಯ
ಭೂಮೀಶ ತರಿಸಿದನಾಗ || ೪೪ ||

ಅರಳೆಲೆ ಮಾಗಾಯಿ ಬೆರಳ ಹೊನ್ನುಂಗುರ
ಕೊರಳಿಗೆ ಮುತ್ತಿನ ಹಾರ |
ಸರಪಳಿ ಗೆಜ್ಜೆ ನಡುವಿಗೆ ಹೊನ್ನುಡಿದಾರ
ದೊರೆ ರಾಮಗಳವಡಿಸಿದರು || ೪೫ ||

ಓದು ವಿದ್ಯವು ಸಾಧನೆಯ ಕಲಿತು ರಾಮ
ಕಾದುವ ಸಾಮ ಶಕ್ತಿಯನು |
ಭೇದಿಸಿ ಗಜ ತುರಗದೇರಾಟವನು ರಾಮ
ವಾದಿವಾದಿಗಳ ಗೆಲ್ವುದನು || ೪೬ ||

ಈ ರೀತಿಯಲಿ ರಾಮ ಬೆಳೆವುತಿರಲು ಇತ್ತ
ಕಾರಣದೊಳು ಮತ್ತೆ [ಇವಳು] |
ಊರ್ವಶಿ ರಂಭೆಯು ಪು
ಟ್ಟುವ ಕ್ರೀಯದು ಕಾರಣಿಕದ ಸಂಧಿ ಮುಂದೆ || ೪೭ ||

**ಅಂತು ಸಂಧಿ ೨ಕ್ಕಂ ಪದನು ೭೮ಕ್ಕಂ ಮಂಗಳ ಮಹಾಶ್ರೀ**

## ಸಂಧಿ ೩ - ರತ್ನಾಜಿಯ ಜನನ ವೃತ್ತಾಂತ

ಶ್ರೀ ಗಿರಿಜಾ[ಸ್ಯಾಂಬುಜ ದಿನನಾಯಕ]
ಭೋಗಿಭೂಷಣ ಭಾಳನೇತ್ರ |
ಭಾಗೀರಥಿಧರ ಭವರೋಗವೈದ್ಯನೆ
ನಾಗ[ಕುಂಡಲ] ಶರಣಾರ್ಥಿ || ೧ ||

[ಪಾವನ]ಚರಿತೆ ಪಾರ್ವತಿದೇವಿ ವರದಿಂದ
ಭಾವಕಿ ಪಡೆದಳು ಮಗನ |
ಜೀವರಾಶಿಯೊಳು ಜನಿಸಿದಳು ಊರ್ವಶಿ
ರಂಭೆ ಮೋಹದ ಕುವರಿ ಮರ್ತ್ಯದೊಳು || ೨ ||

[ಭೂವಳಯದಿ] ಸುರಸತಿಯು ತಾ ಜನಿಸಿ[ದಳ್]
ದೇವರ ವರದಿಂದಲಾಗ |
ತಾವವತರಿಸಿ ಸಾಲ್ಗುಂದಿ ಮುಕ್ಕುಂದಿಯ
ದೇವಿರಡ್ಡಿಯ ಪುತ್ರಿಯಾಗಿ || ೩ ||

ಬಂದಳು ರಂಭೆ ರತ್ನಾಜಿ ಪೆಸರ ತಾಳ್ದು
ನಿಂದು ಸಾಲ್ದುಂದಿ ಮುಕ್ಕುಂದಿಯಲಿ |
ಚಂದನಗಂಧಿ ಯಲ್ಲಮ್ಮನ ಗರ್ಭದಿ
ಚಂದ್ರವದನೆ ಜನಿಸಿದಳು || ೪ ||

ಇತ್ತ ರಂಭೆಯು ಜನಿಸಲು ಭೂಲೋಕದ
ಉತ್ತುಮ ಜನರು ಕಣ್ಗೆಟ್ಟು |
ಮತ್ತೆ ಸತಿಯರನುಳಿದು ಅವಳೊಳು ದೃಷ್ಟಿಯಿಸಿ
ಚಿತ್ತದಿ ನೋಡುತಲಿಹರು || ೫ ||

ಭೂಲೋಕಕತಿ ಚೆಲ್ವೆ ಬಾಲೆ ರತ್ನಾಜಿಯು
ಬಾಲಲೀಲೆಯೊಳಾಡುತಿರಲು |

ಬಾಲದೊಡಿಗೆ ತೊಡಿಸಿ ತಂದೆತಾಯಿಗಳಾಗ
ಲೀಲೆಯಿಂದಲಿ ಸಲಹುತಲಿ || ೬ ||

ಅರಳೆಲೆ ಮಾಗಾಯಿ ಮೂರುಡಿಯ ಸರಪಳಿ
ಕೊರಳೊಳು ರತ್ನದ ಹಾರ |
ಹರಳುಂಗುರ ಕಾಲಕಡೆಯ ಪೆಂಡೆಯನಿಟ್ಟು
ತರಳೆ ಒಪ್ಪಿದಳು ರತ್ನಾಜಿ || ೭ ||

ಈ ಪರಿಯಲಿ ಬೆಳೆದು ಹತ್ತೆಂಟು ವರುಷವು |
ರೂಪದೋರುತ ಇರುತಿಹಳು |
ಭೂಪಾಲ ಕಂಪಿಲರಾಯ ಬೇಂಟೆ ಮಾರ್ಗದಿ ಬಂದು
ಚಾಪಲಾಕ್ಷಿಯ ಕಂಡನಾಗ || ೮ ||

ಕಾಣುತಲಂಗಜ ಬಾಣದಿ ಸೊರಗಿದ
ತ್ರಾಣಗುಂದಿದನು ವಿರಹದಲಿ |
[ಏಣ]ಲೋಚನೆಯು ಇಳಾಪುತ್ರಿಯು ಎಂದು
ಮಾಣದೆ ಚರರ ಕೇಳಿದನು || ೯ ||

ಕೇಳು ಕಂಪಿಲ ಭೂಪ ದೇವಿರಡ್ಡಿಯವರ
ಬಾಲೆ ರತ್ನಾಜಿಯೆಂಬವಳು |
ಕೇಳಿ ಬನ್ನಿರೊ ಅವಳ ತಂದೆತಾಯಿಗಳನೆಂದು
ಹೇಳಿದನವರ್ಗೆ ಕಂಪಿಲನು || ೧೦ ||

ಹೇಳಲಾ ಮಾತ ಕೇಳುತ ಆ ಕ್ಷಣದಲ್ಲಿ
ತೊಳದಿಂದಲಿ ಪೋಗಿ ಚರರು |
ಕೇಳಲು ಅವರೊಳು ಪೇಳಿದ ಅವರಪ್ಪ
ಕೀಳು ಕುಲದವರಿಗೆ ಕೊಡೆವು || ೧೧ ||

ಚಿತ್ತೈಸು ಅರಸು ಕಂಪಿಲರಾಯ ಕೇಳ್ದೆವು
ಹೆತ್ತ ತಂದೆಗಳು ಆಡಿದುದ |
ಪೃಥ್ವಿ ಕಿರಾತಗೆ ಕೊಡೆನೆಂದು ಮಗಳನು
ಉತ್ತುಮ ಕುಲದವರ್ಗೆ ಕೊಡುವೆ || ೧೨ ||

ಇತ್ತಲಾ ಚರರು [ಆ]ಡಿತ ನುಡಿಗಳ ಕೇಳಿ
ಮತ್ತೆ ಕಂಪಿಲರಾಯ ನುಡಿದ |
ಒತ್ತಿ ಕೋಪದಿ ನಡೆದವರ ಮನೆಗೆ
ಮೃತ್ಯುವಿನಂತೆ ಗರ್ಜಿಸಿದ || ೧೩ ||

ಆದರೆ ಕೇಳು ನೀ ರಾಯ ಕೋಪಗಳ್ಯಾಕೆ
ಭೇದಿಸಿ ಬಾಲೆಯ ನುಡಿಯ |
ಮೂದಲಿಸಿ ಕೇ[ಳ್ವೆ] ಹೇಳೆ ನಾನೆಂಬುದ
ಕ್ರೋಧವ್ಯಾತಕೆ ಕಂಪಭೂಪ || ೧೪ ||

ಬಾಲೆಯ ಕರೆದು ಕೇಳಿದಳು ಅವರ ತಾಯಿ
ಪೇಳು ನಿನ್ನ ಮನದೊಳುಳ್ಳದನು |
ಹಾಳು ಮಾಡುವನು ಕಂಪಿಲರಾಯ ಬಿಡನೆಂದು
ಹೇಳಿದ ಅವರಪ್ಪ ಒಲಿದು || ೧೫ ||

ಮುನ್ನ ಪೂರ್ವದೊಳೆನ್ನ ಪಣೆಯ ಬರಹದ
ಪುಣ್ಯ ಚೆನ್ನಾಗಿದ್ದರೆ ಕಾಯ್ದಪು[ದು] |
ಇನ್ನು ನೀ ಮಾಡುವುದೇನು ನಾನೇನೆಂಬೆ
ತನ್ನ ಮನಸಿನಲ್ಲಿದ್ದಂತೆ || ೧೬ ||

ಮನ್ನಿಸಿ ಮಾತನಾಡಿ[ದಳು] ಕಂಪಿಲನೊಳು
ರನ್ನದೊಡಿಗೆಯ ಬೇಡಿದಳು |
ಚೆನ್ನನ ಸರ ಹೊನ್ನ ಹೂವು ಮುತ್ತಿನ ಕೊಪ್ಪ
ರನ್ನದುಂಗುರ ಭುಜ ಕೀರ್ತಿ || ೧೭ ||

ನೀಳಾಂಬಕಿಯು ಆಡಿದಳು ಕಂಪಿಲನೊಳು
ಸಾಲಗುಂದಿಯ [ಅ]ರಮನೆಯ |
ಬಾಲಕಿ [ಕೊ]ಡಿಸೇನೆಂದೆಂಬ ಭಾಷೆಯ
ನಾಳೆ ಕಳಹುಲೇನು ನಿನ್ನೊಡನೆ || ೧೮ ||

ಹಾಗೆಂದ ಮಾತ ಕೇಳುತ ಕಂಪಿಲರಾಯ ಚೆ
ನ್ನಾಗಿ ತೆರಳ್ದ ಕುಮ್ಮಟಕೆ |
ಬೇಗದಿಂದೆರಡು ಗ್ರಾಮವ ದೇವಿರಡ್ಡಿಗೆ
ಅಗಲಿತ್ತರಸು ತೆರಳಿದನು || ೧೯ ||

ಹೊನ್ನಂದಣವನೇರಿಸಿ ಕಂಪಿಲರಾಯ
ಚೆನ್ನಾಗಿ ತೆರಳ್ದ ಕುಮ್ಮಟಕೆ |
ಪನ್ನಂಗಗವಿದು ಸತಿಯಳ ತಾನೊಡಗೊಂಡು
ತನ್ನರಮನೆಯನು ಪೊಕ್ಕು || ೨೦ ||

ಇತ್ತ ಕಂಪಿಲರಾಯ ಬಂದ ಸುದ್ದಿಯ ಕೇಳಿ
ಚಿತ್ತದಿ ಹರಿಯಲದೇವಿ |

ಮತ್ತೆ ಚರರುಗಳನು ಕರೆಸಿ ಕೇಳಿದಳಾ
ಹೊತ್ತ ದುಗುಡದ ಸುದ್ದಿಯನು || ೧೧ ||

ಹೇಳುವೆನಮ್ಮಾಜಿ ಸಾಲಗೊಂದಿಯ ವರ
ಬಾಲೆಯ ನಿನ್ನ ವಲ್ಲಭನು |
ಲೀಲೆಯಂ [ತಂದ] ತಂದೆಗೆ [ಸಾಲ]ಗೊಂದಿಯ
ಲೋಲನುಮ್ಮಳಿಯನು ಇತ್ತು || ೧೧ ||

ಭೂ[ಪನ] ಸುದ್ದಿಯ ಕೇಳಿದಾಕ್ಷಣದಲಿ
ಕೋಪದಿ ಹರಿಯಲದೇವಿ |
ಶ್ರೀಪತಿ ಕರು[ಣು]ಳ್ಳವ ರಾಮನೊಡನಿಂತು
ತಾ ಪೇಳಿದಳು ಹರಿಯಮ್ಮ || ೧೩ ||

ತಂದುಕೊಂಡನು ಒಬ್ಬ ಸತಿಯಳನೆನಲಿತ್ತ
ಕಂದ ರಾಮಯ್ಯ ಕೇಳಿದನು |
ಹಿಂದಳ ಹಗೆಯ ತೀರಿಸಿಕೊಳ ಬಂದಳು
ಸಂದೇಹವೇಕೆಲೆ ತಾಯೆ || ೧೪ ||

ರಾಜೀವಲೋಚನೆ ಚಿಕ್ಕಮ್ಮ ಬಂದಳೆಂ
ಬೋಜೆಯ ಮಗಗೆ ಹೇಳಿದಳು |
ಮೂಜಗದೊಳು ರಾಮ ಪರಸತಿಯೆಂಬ ಸಂ
ವಾಜಕ್ಕೆ ಒಳಗಾಹನಲ್ಲ || ೧೫ ||

ಹಾಗೆಂಬ ನುಡಿಯ ಕೇಳುತ ರತ್ನಾಜಿಯು
ಬೇಗದಿ ಮನದಲ್ಲಿ ಭೀತಿಯ |
ತೂಗಿ ಹಿಡಿದು ಮಾಗಿಯ ಕೋಗಿಲಂದದಿ
ಜಾಗಿಸಿದಳು ತನ್ನ ಮನವ || ೧೬ ||

ಇವರಿರ್ವರು ಸಂವಾದದೊಳಿರಲಿತ್ತ
ಭುವನೇಶ ಕಂಪಿಲರಸನ |
ಹವಣಿಸಿ ನೋಡಿ ಮುಂದಣ ರಾಜಕಾರ್ಯವ
ವಿವರಿಸ ಬಂದ ರಾಮಯ್ಯ || ೧೭ ||

ಮುಂದೆ ರಾಮಯ್ಯ ತಾನೊಂದು ದಿವಸದೊಳು
ಚಂದದಿ ಬೇಂಟೆ ಮಾರ್ಗದೊಳು |
ಅಂದದಿ ಕುಮ್ಮಟದುರ್ಗವ ರಚಿಸುವ
ನಂದದ ಕಥೆಯು ಮುಂದುಂಟು || ೧೮ ||

ಇದು ರಾಮನಾಥ ಪದಕೃತಿಯೊಳಗೊರ್ವ
ಚದು[ರಾನನನು] ಪುಟ್ಟಿಸಿದ |
ಸುದಿತಿ ರಂಭೆಯು ಕಲಿಯುಗಕೆ ತಾ
ಬಂದಂಥ ಪದಗಳು ಪೂರಾಯವಾಯ್ತು || ೧೯ ||

**ಅಂತು ಸಂಧಿ ೩ಕ್ಕಂ ಪದನು ೧೦೭ಕ್ಕಂ ಮಂಗಳ ಮಹಾಶ್ರೀ**

## ಸಂಧಿ ೪ - ಕೊಮಾರ ರಾಮಯ್ಯನಿಂದ ಕುಮ್ಮಟದುರ್ಗ ನಿರ್ಮಾಣ

ಶ್ರೀ ಗಿರಿಜಾ[ಸ್ಯಾಂಬುಜ ದಿನನಾಯಕ]
ಭೋಗಿಭೂಷಣ ಭಾಳನೇತ್ರ |
ಭಾಗೀರಥಿಧರ ಭವರೋಗವೈದ್ಯನೆ
ನಾಗ[ಕುಂಡಲ] ಶರಣಾರ್ಥಿ || ೧ ||

ಜಗದೊಳಗೀ ಕೃತಿಯ ಹವಣಿಸಬೇಕೆಂದು
ಅಗಜೆಯರಸನ ನೆನೆದು |
ತಗಡೂರ ಕಟ್ಟೆಲಿ ನೆಲಸಿ ವರವನೀವ
ಮಿಗಿಲು ರೂಪಿನ ವಿಘ್ನರಾಜ || ೨ ||

ಸುರಲೋಕದಿಂದ ಊರ್ವಶಿ ರಂಭೆ ಶಾಪದೊಳು
ನರಲೋಕದೊಳಗೆ ತಾ ಜನಿಸಿ |
ಪರಪುರುಷರ ವ್ರತಗೆಡಿಸಿ ಹೋಗುವೆನೆಂದು
ಭರದಿಂದ ತಾ ಪುಟ್ಟಿ ಬಂ[ದು] || ೩ ||

ಕಾಮನ ಗೆಲುವಂತೆ ಕ್ಷೇಮವ ನುಡಿಸಿ
ರಾಮಯ್ಯ ಮನದೊಳು ಗುಣಿಸಿ |
ಕೋಮಲೆಯರ ಕಣ್ಣ ಬೇಟಕ್ಕೆ ಸಿ[ಕ್ಕ]ದ
ನೇಮವ ಕೈಕೊಂಡ ರಾಮ || ೪ ||

ಆಗಲೆ ಕರೆಸಿದ ಮೇಘವಾಹನಾಚಾರಿಯ
ಈ ಗಳಿಗೆಯಲೊಂದು ಬಿರಿದ |
ಬೇಗದಿ ಮಾಡೀಕ್ಷಣದೊಳು ತಂದುಕೊಡು ಎಂದು
ತ್ಯಾಗ ಉಡುಗೊರೆ ಕೊಟ್ಟ ರಾಮ || ೫ ||

ನವರತ್ನ ಖಚಿತದಿಂ ರಚಿಸಿ ಆಚಾರಿಯು
ಭುವನೇಶ ರಾಮಗೆ ಕೊಡಲು |

ಭವಹರ ಮೃತ್ಯುಂಜಯ ಜಯ ಜಯಮೆಂದು
ತವೆ ಧರಿಸಿದನು ಕಾಲೊಳಗೆ || ೬ ||

ಪರನಾರಿಯರ ಸಹೋದರನೆಂಬ ಬಿರಿದನು
ಧರಿಸಿದ ಎಡದ ಕಾಲೊಳಗೆ |
ಹರಿಯಲದೇವಿಯಮ್ಮಾಜಿ ಪಾದಕೆ ಬೀಳೆ
ಹರಸಿ ಎತ್ತಿದಳಾಗ ಮಗನ || ೭ ||

ಗರಡಿಯ ಮನೆಗಾಗಿ ಬಂದನು ರಾಮಯ್ಯ
ಪರಿಪರಿ ಸಾಮಸಾಧನೆಯ |
ಪರೀಕ್ಷಿಸಿ ಮಾಡಿ ಮಾಧವಗೆ ತಾ ವಂದಿಸಿ
ಅರಮನೆಗಾಗಿ ತಾ ಬಂದ || ೮ ||

ಉದಯದ ಊಟವ ಮಾಡಿ ರಾಮಯ್ಯನು
ಚದುರಂಗದಾಟವ ಮುಗಿಸಿ |
ಕುದುರೆಗಳನು ಏರಿ ನಡೆದರಣತಮ್ಮಗಳು
ಒದಗಿತು ಮಂದಿ ಮಾನ್ನೆಯರು || ೯ ||

ಬೇಂಟೆಯ ಮಾರ್ಗದಿ ಹೊರಟನು ರಾಮಯ್ಯ
ದಾಂಟಿದ ಹಂಪಿಯ ಹೊಳೆಯ |
ಕಾಟಣ್ಣ ಮನ್ನೆಯರು ಸಹವಾಗಿ ಕಂಡರು
ಮೀಟಾದ ದುರ್ಗವನವರು || ೧೦ ||

ಒಮ್ಮೆ ರಾಮಯ್ಯ ಪೆಸರಿನ ದುರ್ಗವ
ನಿರ್ಮಿಸಬೇಕು ಎಂದೆನುತ |
ಉಮ್ಮಯವಾಗಿ ಕಾಟಣ್ಣ ಮನ್ನೆಯರೆಲ್ಲ
ಗಮ್ಮನೆ ಪೆಸರಿಟ್ಟರಾಗ || ೧೧ ||

ರಾಮನ ಕುಮ್ಮಟವೆನುತ ಪೆಸರನಿಟ್ಟು
ಆ ಮಹಾ ಮನ್ನೆಯರೆಲ್ಲ |
ಕ್ಷೇಮದಿ ಹಿಂದಕ್ಕೆ ತಿರುಗಿ ಬೇಂಟೆಯನಾಡಿ
ಆ ಮಹ ಹೊಸಮಲೆಗಾಗಿ || ೧೨ ||

ತಂದೆಯ ಬಳಿಗೆ ಬಂದರು ಅಣ್ಣತಮ್ಮಗಳು
ವಂದಿಸಿ ವರಣಕ್ಕೆರಗಿದರು |
ಕಂದ ರಾಮಯ್ಯನ ಎತ್ತಿ ಮುದ್ದಾಡುತ
ಬಂದಿರಾ ಬೇಂಟೆಗಳಾಡಿ || ೧೩ ||

ದೊರೆಗಳ ಗರ್ಭದೊಳ್ ಜನಿಸಿದ ಬಳಿಕಿನ್ನು
ಧುರದೊಳು ಅಂಜದಿರಬೇಕು |
ಮರೆಯ ಹೊಕ್ಕವರ ಮರಳಿ ಕೊಡದಿರಬೇಕು
ಅರಿಗಳ ಹೊಕ್ಕಿರಿಯಬೇಕು || ೧೪ ||

ರಾಯರ ಗರ್ಭದೊಳ್ ಜನಿಸಿದ ಬಳಿಕಿನ್ನು
ಕಾಯದಾಸೆಯ ಬಿಡಬೇಕು |
ಆಯತವಾಗಿ ರಣಾಗ್ರದೊಳ್ ಕಡಿದಾಡಿ
ಸಾಯಬೇಕು ಮುಕ್ತಿಗಳುಂಟು || ೧೫ ||

ಹತ್ತೆಂಟು ವರುಷಕ್ಕೆ ಹುಯ್ಯಲ ಮಾಡ್ಬೇಕು
ಮತ್ತಾಳಬೇಕು ರಾಜ್ಯವನು |
ಸುತ್ತಣ ರಾಯರಿಗೆ ಕಪ್ಪವನ್ಯಾಕೆ ಕೊಡಬೇಕು
ಹತ್ತಿ ಬಲಿಸು ಕುಮ್ಮಟವ || ೧೬ ||

ಹುಟ್ಟುತ ಸಣ್ಣದು ಬೆಳವುತ [ದೊಡ್ಡದು]
ಕಟ್ಟಿಸು ಕೋಟೆಕೊತ್ತಳವ |
ಮುಟ್ಟಿಸೊ ಹಣ ಹೊನ್ನು ಮಂದಿಗೆ ಜೀತವ
ಕೊಟ್ಟದ ಬೇಡರ ನಿಲಿಸೊ || ೧೭ ||

ದಿನಕೊಂದು ಚಂದದಿ ದುರ್ಗವ ಬಲಿಸೊ ನೀ
ಅನುವಾದ ಮಂದಿಯ ನಿಲಿಸೊ |
ಮನಬಂದ ಕಾರ್ಯಕ್ಕೆ ನಮ್ಮನೀ ಕಳುಹಿಸೊ
ಜನಕ ನಮ್ಮ ಮಾತ ನಡೆಸೊ || ೧೮ ||

ಕಂದನ ಮಾತನು ಕೇಳಿ ಕಂಪಿಲರಾಯ
ಒಂದಾರು ಭುಜವಾದನಾಗ |
ಒಂದು ಹಿಡಿ ಹೊ[ನ್ನ]ದಿನ ಒಂದಕ್ಕೆ ಕೊಡುವಂತೆ
ಕಂದಗೆ ಕಟ್ಟು ಮಾಡಿಸಿದ || ೧೯ ||

ಮಗನ ಮಾತನು ಕೇಳಿ ಮಿಗೆ ಹರುಷವ ತಾಳಿ
ಸೊಗ[ಸಿಂ]ದ ಕಂಪಿಲರಾಯ |
ಅಗಣಿತವಾದ ಕುಮ್ಮಟದುರ್ಗವನು ತಾನು
ಜಗದೊಳಗತಿ ಪ್ರಿಯನೆನಿಸಿ || ೨೦ ||

ಕುಮ್ಮಟದುರ್ಗ[ದ] ಕೋಟೆಯ ಬಲಿಸಿದ
ತಮ್ಮರಮನೆಗಳ ರಚಿಸಿ |

ಎಮ್ಮೆಯ ಹಿಂಡು ಆಕಳ ಹಿಂಡು ಕುರಿಗಳ
ಗಮ್ಮನೆ ಹೊಡೆಸಿ ಕಂಪಳವ || ೧೧ ||

ಕೋಟೆ ಕೊತ್ತಳ ಅಗುಳು ತೋಟ ವನ ಕೆರೆ ಬಾವಿ
ಮೀಟಾದ ರಾಜಬೀದಿಗಳು |
ಪೇಟೆಯ ಸಾಲು ಉಪ್ಪರಿಗೆಯ ಮನೆಗಳು
ಕಾಟಣ್ಣನರಮನೆ ಸಹಿತ || ೧೨ ||

ಅಂಗಡಿ ಬೀದಿಯು ರಂಗಮಂಟಪಗಳು
ಶೃಂಗಾರ ವಿಟರ ಕೇರಿಗಳು |
ಹೊಂಗೆಲಸದ ಅರಮನೆಯುಪ್ಪರಿಗೆಯು
ಸಂಗ್ರಾಮಧೀರಗೆ ರಚಿಸಿ || ೧೩ ||

ದೊಡ್ಡರಮನೆಯ ಚಿಕ್ಕರಮನೆ ಪೇಟೆಯು
ದೊಡ್ಡಾನೆ ಸಾಲು ಬೀದಿಗಳು |
ಜಿಡ್ಡಿಯು ಊರ ಬಾಗಿಲು ಹೊರಕೋಟೆಯು
ವಡ್ಡರು ರಚಿಸಿದರಾಗ || ೧೪ ||

ರಂಗಮಂಟಪಗಳು ರಮಣಿಯರ ಕೇರಿಗಳು
ಶೃಂಗಾರದೋಟದ ಮನೆಯು |
ಅಂಗಳಕೇರಿಯು ರತ್ನಿಯ ಅರಮನೆಯು
ಶೃಂಗಾರವಾಗಿ ಒಪ್ಪಿದವು || ೧೫ ||

ಕಾಟಣ್ಣನರಮನೆ ನಾಟಕಸಾಲೆಯು
ಮೀಟಾದ ಕುದುರೆಯ ಲಾಯ |
ಆಟಪಾಟಗಳ ನೋಡುವರ್ತಿಯ ಚಾವಡಿ
ನೋಟವಾದವು ಪುರದೊಳಗೆ || ೧೬ ||

ಆನೆಯ ಸಾಲು ವಾಜಿಯ ಸಾಲು ಬೊಕ್ಕಸ ಮ
ಹನೌಮಿ [ರಸ್ತೀ]ನರಮನೆಯು |
ಜ್ಞಾನಿ ರಾಮಯ್ಯನ ಅರಮನೆ ಮೇಲೊಂದು
ನೂನವಿಲ್ಲದೆ ರಚಿಸಿದರು || ೧೭ ||

ಮಂತ್ರಿ ಬೈಚಪ್ಪಗೆ ಮತ್ತೊಂದು ಅರಮನೆ
ಅಂತು ಮನ್ನೆಯರ ಕೇರಿಗಳು |
ಕಂತುಕೇಳಿಯ ಮನೆ ಐದಾಯಿಗಳ ಬಾಜಾರ
ಎಂತು ಪೇಳುವೆನು ಶೃಂಗಾರ || ೧೮ ||

ಹಾರೋರ ಕೇರಿ ಹರದರ ಕೇರಿಗಳು
ಸಾರಿ ಕಟ್ಟಿದವು ಕುಮ್ಮಟದಿ |
ಆರೆಯ ಚಾರಮರಾಯನ ಅರಮನೆ
ಮಾರ್ಯಮ್ಮ ಸಿಂಗಮ್ಮನರಮನೆಯು || ೧೯ ||

ಹೊಸಬರ ಹಳಬರ ಅಸಗರ ಕೇರಿಯು
ಮೊಸರ ಮಾರುವವರ ಬಾಜಾರ |
ಶಿಶುವಿಗೆ ಪಾಲ್ಬೆಣ್ಣೆ ಛತ್ರದ ಮನೆಗಳು
ಹಸನಾದವು ನಗರದೊಳಗೆ || ೨೦ ||

ಕುರಿ ಕೋಣ ಬಲಿಗಳ ಕೊಡಿಸಿದ ದುರ್ಗಕೆ
ಪರಿಪರಿ ಶಾಂತಿ ಮಾಡಿಸಿದ |
ಬರಹೇಳಿ ಬ್ರಾಹ್ಮರ ತೃಪ್ತಿಪಡಿಸಿದ ಲಕ್ಷ
ಪರಿಯಲಿ ಅನ್ನ ಶಾಂತಿಯನು || ೨೧ ||

ಈ ಪರಿ ಪಟ್ಟಣ ರೂಪಿಸಿ ತುಂಬಿತು
ಮಾಪತಿಯ ದಯ ಕರುಣದಿಂದ |
ಪಾಪರಹಿತ ಮಲ್ಲೇಶನ ಗುಡಿ ಮುಂದೆ
ಆ ಪಟ್ಟಣದ ಶೃಂಗಾರ || ೨೨ ||

ಹೊಸಮಲೆದುರ್ಗವ ಬಿಟ್ಟು ಸಮಸ್ತರು
ವಾಸವಾದರು ಕುಮ್ಮಟಕೆ |
ಹೊಸಪರಿಯರಮನೆಯೊಳು ತಾವು ಇಳಿದರು
ದೆಸೆವಂತ ಕಂಪಿಲ ರಾಮ || ೨೩ ||

ಆಡಿದ ಸಂಬಳವ ಕೊಡದೆ ಉಳಿಹಿಕೊಂಬ
ನಾಡ ಮನ್ನೆರ ಗಂಡ ರಾಮ |
ಮಾಡಿದ ಜೀತವ ಕೊಡದೆ ನಿಲಿಸುವಂಥ
ಖೋಡಿ ರಾಯರ ಗಂಡನೆಂದು || ೨೪ ||

ಅನ್ನುಂಟು ಆಳಿಲ್ಲ ಹೊನ್ನುಂಟು ಕುದುರಿಲ್ಲ
ವೆನ್ನುತ ಸಾರಿ ಕುಮ್ಮಟದಿ |
ಬನ್ನಿ ಮನ್ನೆಯ ಬಲವಂತ ರಾಹುತರು
ಹಾಗೆನ್ನುತ ಕರೆದನು ರಾಮ || ೨೫ ||

ಹಣವಿಗಾಸೆಯ ಮಾಡಿ ರಣದೊಳು ಜುಣುಗುವ
ರಣಹೇಡಿ ರಾಯರ ಗಂಡ |

ಹೊಣಕೆಯ ಮಾಡಿ ಬೇಡಿದ ಬಿರಿದ ಕೊ[ಡದಂ]ಥ
ಬಣಗು ರಾಯರ ಗಂಡನೆಂದ || ೩೬ ||

ಬರಗಾಲ ಬಂದರೆ ಬಂಟರ ಜೀತವ
ಕರೆದು ಕೊಡದೆ ನಿಲಿಸಿಕೊಂಬ |
ಅರಸುಗಳ ಗಂಡನೆಂದೆಂಬ ಬಿರಿದನು
ಇರದೆ ಕೊಂಡಾಡಿದರಾಗ || ೩೭ ||

ಈ ಬಗೆಯಲ್ಲಿ ಬಿರಿದುಗಳ ಕೊಂಡಾಡಿಸಿ
ಬಾಬೋಜಿ ಮಲ್ಲನ ಕರೆಸಿ |
ಲೋಭಿಮಾನ್ಯರ ಗಂಡ
ನೆಂಬಂಥ ರಾಮಯ್ಯ ಆಗ ಪೇಳಿದ ಅವ[ನೊ]ಡನೆ || ೩೮ ||

ದೇಶ ದೇಶಂಗಳ ನೋಡಿ ಹುಡುಕಿ ಜೀವ
ದಾಶೆ ಇಲ್ಲದ ಮಾನ್ಯರುಗಳ |
ಭಾಷೆಯ ಕೊಟ್ಟು ನೀ ಕರಕೊಂಡು ಬಾರೆಂದು
ಲೇಸಿನಿಂದಲಿ ಅವಗುಸುರೆ || ೩೯ ||

ನಾನಾ ರಾಜ್ಯವನೆಲ್ಲ ನೋಡೆ ಬಾಬೋಜಿ ಮಲ್ಲ
ಆನಂದ ಹರುಷದೊಳ್ ತಾನು |
ನಾನಾ ಬಗೆಯ ಕಿರಾತರ ಕುಲ ಬೇಡರು
ಆನಂದದಿಂದ ಕೂಡಿದರು || ೪೦ ||

ಕೊಟ್ಟದ ಬೇಡರು ಕೂಡಿ ಬಂದರು ಒಳ್ಳೆ
ಹಟ್ಟಿಕಾರರು ಹರಿಗೆಯರು |
ದಿಟ್ಟ ಬೇಡರ ಪಡೆಗೂಡಿ ಕುಮ್ಮಟದೊಳು
ಕಟ್ಟಿತು ಕೇರಿಕೇರಿಗಳ || ೪೧ ||

ಬೂಟಕ ಬೊಮ್ಮನು ಮುದುಗೊಂಡ ಲೋಭನು
ಬೇಟದ ಸಿಂಗನೆಂಬವನು |
[ಕ]ಟ್ಟ ಬಿಲ್ಲಿನ ಮಂದಿ ಕೂಡಿತು ಕುಮ್ಮಟ
ಕೊಟ್ಟವಾಯಿತು ಲೋಕದೊಳಗೆ || ೪೨ ||

ಬಂದಂಥ ಕುದುರೆ ಮಂದಿಯನ್ನೆಲ್ಲ ನಿಲಿಸಿದ
ಹಿಂದೂವ ರಾಮಯ್ಯ ತಾನು |
ಮುಂದಳ ರಾಜಕಾರ್ಯವ ನೋಡಿ ಮನದೊಳು
ಮಂದಿಯ ಕೂಡಲಿಕ್ಕಿದನು || ೪೩ ||

ಕೊಟ್ಟದ ಬೇಡರ ಕರೆಸಿದ ರಾಮಯ್ಯ
ಕಟ್ಟಿದ ಮನ್ನೆಯರನೆಲ್ಲ |
ಒಟ್ಟನು ನಾನಾ ದೇಶದಲಿಂದ ಬಂದವರ
ದಿಟ್ಟರ ನೋಡಿ ರಾಮಯ್ಯ || ೪೪ ||

ಎಪ್ಪತ್ತು ಮಂದಿ ಮನ್ನೆಯರನು ಕೂಡಿಸಿ
ಎಪ್ಪತ್ತು ಸಾವಿರ ಹೊನ್ನ |
ಒಪ್ಪದಿ ಹಂಚಿಕೊಟ್ಟೆಲ್ಲರ ಮನ್ನಿಸಿ
ತೊಪ್ಪದ ಮೇಚರ ಕರೆಸಿ || ೪೫ ||

ಅವರಿಗೆ ಕೊಟ್ಟನು ವಿವರಿಸಿ ಹೊನ್ನುಗಳ
ಜವಳಿ ಉಡುಗೊರೆಯ ವಸ್ತ್ರಗಳ |
ಕವಿದು ಮೇಚರ ಪಡೆ ಕೂಡಿತು ಶಬರರ
ವಿವರವನೇನ ಬಣ್ಣಿಸುವೆ || ೪೬ ||

ಆರೇಯ ಚಾರಮರಾಯನ ಮಕ್ಕಳ ಆ
ನ್ನೂರು ಕುದುರೆಯ ಪೌಜು |
ಸಾರಿ ಕುಮ್ಮಟದೊಳು ಕೂಡಿಸಿ ಕಂಪಿಲ
ಧೀರನಾಗಿರ್ದ ಲೋಕದೊಳು || ೪೭ ||

ತನ್ನ ಲಾಯದ ವಾಜಿ ಮುನ್ನೂರು ಸಾವಿರ
ಹನ್ನೊಂದು ಸಾವಿರ ಬಲವು |
ಚೆನ್ನರಾಮಯ್ಯ ಕಾಟಣ್ಣನು ಸಹವಾಗಿ
ಮನ್ನೆಯರನು ಕೂಡಿಕೊಂಡು || ೪೮ ||

ಸುತ್ತಣ ರಾಜ್ಯಕ್ಕೆ ದಾಳಿಯನಿಕ್ಕುತ
ಎತ್ತ ನೋಡಿದಡತ್ತ ಗುಲ್ಲ |
ಹತ್ತಿಸಿ ಹಳ್ಳಿಪಳ್ಳಿಗಳ ಠಾಣ್ಯಗಳನು
ಒತ್ತಿಬಲಿಸಿದನು ರಾಮಯ್ಯ || ೪೯ ||

ಹಾನ್ಗಲ್ಲ ಸೀಮೆಯನೆಲ್ಲವ ಕಟ್ಟುತ
ನಾನಾ ರಾಜ್ಯವನು ಸುಲಿಸುತ |
ತಾನು ನೀಲನ ಏರಿ ನಡೆವುತ ರಾಮಯ್ಯ
ಮೋನಾದಿ ಬಾದಾವಿ ತನಕ || ೫೦ ||

ಕರಿಯ ಹೊಳೆಯ ದಾಟಿ ಕಟ್ಟಿದ ಸೀಮೆಯ
ಭರದಿಂದ ಠಾಣ್ಯವ ನಿಲಿಸಿ |

ಮರಳಿ ತಿರಿಗಿ ಬಂದು ಕುಮ್ಮಟವನು ಹೊಕ್ಕು
ಇರುತಿರ್ದ ಸಂತೋಷದಲಿ || ೫೧ ||

[ತೊ]ಟ್ಟನು ಮುತ್ತಿನಾಭರಣವ ರಾ[ಮುಗ]
ಇಟ್ಟನು ದೊಡ್ಡ ಚವುಕುಳಿಯ |
ಕಟ್ಟಿದ ಹೊನ್ನುಡಿದಾರ ಚೆನ್ನನ ಸರ
ಉಟ್ಟನು ಪಟ್ಟಾವಳಿಗಳನು || ೫೨ ||

ಕಡುಕು ಉಂಗುರ ತೊಟ್ಟ ತೊಡಕು ಸರಪಳಿ ತೊಟ್ಟ
ಬಿಡಿ ಮುತ್ತಿನ ಸರವನೆ ತೊಟ್ಟ |
ಕಡೆಯಾಣಿ ಚೆನ್ನದ ಬಳೆ ಸರಪಳಿ ತೊಟ್ಟ
ಸಡಗರವೇನ ಪೇಳುವೆನು || ೫೩ ||

ಸುತ್ತಣ ಸಣ್ಣ ಪಾಳೆಯಗಾರರೆಲ್ಲರು
ಮೊತ್ತದಿ ತಾವ್ದೊಡಿಕೊಂಡು |
ಅತ್ತಲು ತಮ್ಮನಾಳುವ ಬಲ್ಲಾಳಗೆ
ಇತ್ತಣ ರಾಜಕಾರ್ಯವನು || ೫೪ ||

ಕೊಟ್ಟದ ಕಂಪಿಲರಾಯನ ಮಗ ರಾಮು
ಬಿಟ್ಟನು ನೇಮಿಗೆ ದಂಡ |
ಸುಟ್ಟನು ಹಳ್ಳಿಪಳ್ಳಿಯ ಊರು ಸೀಮೆಯ
ಕಟ್ಟಿದ ದೊಡ್ಡ ಗ್ರಾಮಗಳ || ೫೫ ||

ಅವನ ಕತ್ತಿಗೆ ಇದಿರಾಗಿ ನಿಲ್ಲುವರಾರು
ಭುವನೇಶ ನೀನಲ್ಲದಿಲ್ಲ |
ತವಕ ಬೇಡವು ಸುಮ್ಮನಿರಿ ಕುಮ್ಮಟವನು
ಕವಿದು ಮುತ್ತಿಗೆಯ ಮಾಡು[ವೆ]ನು || ೫೬ ||

ರಾಮನ ಕೈಸೆರೆ ಹಿಡಿವೆನು ಕಂಪಿಲ
ನಾ ಮಾನ ಕೆಡಿಸಿ ನಾ ಬಿಡುವೆ |
ಕೋಮಲೆಯರಸ ತಾ [ನುಡಿದ] ಬಲ್ಲಾಳನು
ಆ ಮಹಾ ರುದ್ರಕೋಪದಲು || ೫೭ ||

ದಕ್ಷಿಣ ಸೀಮೆಯ ರಾಯರೆಲ್ಲರು ಕೂಡಿ
ಆ ಕ್ಷಣದೊಳು ತಾವು ಪೋಗಿ |
ಶಿಕ್ಷೆಯ ಮಾಡುವರಿಲ್ಲ ಕಂಪಿಲಗೆಂದು
ಲಕ್ಷಾಧಿಪತಿಗೆ ಹೇಳಿದರು || ೫೮ ||

ಸುತ್ತಣ ರಾಯ ರಾಜ್ಯಕ್ಕೆ ಧಣಿಯಾದ
ಗುತ್ತಿಯ ಜಗದಪ್ಪ ಅರಸೇ |
ಎತ್ತಿ ಬಂದನು ಕಂಪಿಲ ನಮ್ಮ ಸೀಮೆಯ
ಕತ್ತಿಯೊಳ್ ಬಲ್ಲಿದನೆನುತ || ೫೯ ||

ಮಗ ರಾಮನ ಬಿಟ್ಟು ಜಗವನೆಲ್ಲ ಸುಟ್ಟು
ಅಗಣಿತವಾದ ಕೋಟೆಗಳ |
ಮಿಗೆ ಠಾಣ್ಯ ಬಲಿದು ಮಂದಿಯ ಹಾಕಿ ಹೋದನು
ಜಗಳಕ್ಕೆ ಇದಿರಿಲ್ಲವೆನುತ || ೬೦ ||

ಕಳ್ಳ ಬೇಡನು ಇಷ್ಟು ಕಾರ್ಯವ ಮಾಡಿದ
ಒಳ್ಳಿತಾಯಿತು ಸುಮ್ಮಗಿರಿ |
ಬಳ್ಳದ ಹೊನ್ನ ಕಪ್ಪವ ತರಿಸುವೆನವನ
ಮಿಳ್ಳಾಟವ ಬಿಡಿಸುವೆನು || ೬೧ ||

ನಾನಾ ರಾಜ್ಯದ ದೊರೆಗಳನ್ನೆಲ್ಲ ರಾಮಯ್ಯ
ಕಾನಝುಂಗೆಯ ಮಾಡಿಕೊಂಡು |
ಆನಂದ ಅರ್ತಿಯೊಳಿರುತಿರೆ ಡಿಳ್ಳಿಯ
ಖಾನನು ತಾನು ಕೇಳಿದನು || ೬೨ ||

ಸುರಿತಾಳ ಪಾಚ್ಛನ ಮಗಳೊಲಿದು ರಾಮಗೆ
ಕರೆಸುವ ಕಾರಣಿಕರನು |
ಅರುಪುವೆ ಜಗದೊಳು ಇಲ್ಲಿಗೆ ಈ ಸಂಧಿ
ಹರುಷದೊಳ್ ಪೂರಾಯವಾಯ್ತು || ೬೩ ||

ಇದು ಪರನಾರಿ ಸೋದರ ರಾಮನಾಥನ
ಪರಕೃತಿಯೊಳಗೊಂದು ಕಥೆಯ |
ಪದುಳದಿಂ ಪೇಳುವೆ ಖಾನ ವಜೀರರ
ಕದನ ಪುಟ್ಟುವುದ ಕುಮ್ಮ[ಟದಿ] || ೬೪ ||

**ಅಂತು ಸಂಧಿ ೪ಕ್ಕಂ ಪದನು ೧೭೧ಕ್ಕಂ ಮಂಗಳ ಮಹಾಶ್ರೀ**

# ಸಂಧಿ ೫ - ಕೊಮಾರ ರಾಮಯ್ಯನ ಸುರಿತಾಳನ ಪಾದುಕೆ ಮೆಟ್ಟಿದುದು

ಶ್ರೀ ಗಿರಿಜಾ[ಸ್ಯಾಂಬುಜ ದಿನ]ನಾಯಕ
ಭೋಗಿಭೂಷಣ ಭಾಳನೇತ್ರ |
ಭಾಗೀರಥಿಧರ ಭವರೋಗವೈದ್ಯನೆ
ನಾಗ[ಕುಂಡಲ] ನಮೋಯೆಂಬೆ || ೧ ||

ಇತ್ತ ಕುಮ್ಮಟರಾಮ ರಾಜ್ಯವನಾಳೆ
ಅತ್ತ ಸುರಿತಾಳನು ಮಗಳ |
ಕತ್ತಿಯ ಖಾನರ ಕರೆಸಿ ಕೊಡುವೆನೆಂಬ
ಅರ್ತಿಯ ಮನದೊಳ್ಯೋಚಿಸಿದ || ೨ ||

ಪ್ರಾಯದ ಚೆಲುವ ಚೆನ್ನಿಗ ವಜೀರರ
ಬಾಯೆಂದು ಕರೆಸಿದನವರ |
ಕೋಯೆಂದು ಕೊಡುವೆ ಮಗಳು ಒಪ್ಪಿದವರಿಗೆ
ಆಯುಧ ಊರ ಉಮ್ಮಳಿಯ || ೩ ||

ಮಗಳು ಬಾಬಮ್ಮನ ಕರೆದು ತೋರಿದನವರ
ಸೊಗಸಿನ ಖಾನಖಾನರನು |
ಮೊಗ ನೋಡ್ಯವರ ಒಲ್ಲೆನೆಂದು ನುಡಿದಳಾಗ
ಸೊಗಸದು ಮನಕೆಂದಳವಳು || ೪ ||

ಇಂತಪ್ಪ ಚೆಲುವರೊಳಗೆ ಒಬ್ಬರೋರ್ವನು
ಕಾಂತೆ ನಿನಗೆ ಸರಿಬರದೆ |
ಪಂಥ ಯಾರ ಮೇಲೆ ಇದೆ ಕರೆಸುವೆನೆಂದು
ಚಿಂತೆಯೊಳಿರುತಿರ್ದನವನು || ೫ ||

ಭೂಮಿಯೊಳುಳ್ಳ ಖಾನರನೆಲ್ಲ ಕರೆಸಿದ
ಕೋಮಲೆ ತಾನೊಲ್ಲೆನೆಂದು |
ಆ ಮಹ ಕಾಶಿ ರಾಮೇಶ್ವರಕೆ ತಿರುಗುವ
ಬ್ರಾಹ್ಮ[ರು] ಕಾಡೊ[ಳು] ಬರಲು || ೬ ||

ನೇಮಿಯಖಾನನ ಬಳಿಗೆ ತಾ ಬಂದಾಗ
ಸ್ವಾಮಿ ನಮಗೆ ಸ್ವಯಂಪಾಕವ |
ಪ್ರೇಮದಿ ಕೊಡಿಸು ಉಂಡು ನಾವು ಪೋದೇವು
ಆ ಮಹಾ ಸಂತೋಷದಿಂದ || ೭ ||

ತುಪ್ಪ ಅಕ್ಕಿಯು ಬೇಳೆ ಸಕ್ಕರೆ ಗೋದಿಯ ಹಿಟ್ಟು
ತಪ್ಪದೆ ಕೊಡಿಸಿದ ಬೇಗ |
ತಪ್ಪದೆ ತಿರಿಗಿ ಬಂದಿರಿ ರಾಜ್ಯವನೆಲ್ಲ
[ಒ]ಪ್ಪಾದ ಡಿಳ್ಳಿಗೆ ನೀವು || ೮ ||

ನಮ್ಮ ಪಾಚ್ಛವನ ಮಗಳಿಗೆ ತಕ್ಕಂಥ
ಕಮ್ಮಗೋಲನ ರೂಪಿನವನ |
ಇಮ್ಮಡಿ ಕಾಮನ ಪೋಲ್ವಂಥ ಚೆಲ್ವನ
ರುಮ್ಮಿಯ ತನಕ ನೋಡಿದಿದೆ || ೯ ||

ನೀವು ರಿತುಗಿಬಂದ ರಾಜ್ಯದೊಳಲ್ಲಲ್ಲಿ
ಆವ ದೇಶದೊಳೊರ್ವ ಕುವರ |
ಜೀವರತ್ನಗಳಂತೆಸೆವಂಥ ಚೆಲುವನ
ನೀವು ಕಂಡವನ ಪೇಳೆಮಗೆ || ೧೦ ||

ಮುನ್ನೂರು ಅರವತ್ತುನಾಲ್ಕು ಗಾವುದ[ದೊ]ಳೊಂದು
ಹೊನ್ನ ಕುಮ್ಮಟ ಉಂಟು ಅಲ್ಲಿ |
ಚೆನ್ನಿಗ ರಾಮ ಕಾಮನ ರೂಪಿಗತಿ ಚೆಲ್ವ
ಮನ್ಮಥನಂತೆಸೆವನವನು || ೧೧ ||

ಇಂತಪ್ಪ ಸುದ್ದಿಯ ಕೇಳುತ್ತ ನೇಮಿಯು
ಅಂತರಿಸದೆ ತಾನು ಪೋಗಿ |
ಚಿಂತೆಯಾತಕೆ ಸುರಿತಾಳ ಚೆನ್ನಿಗನೊಬ್ಬ
ಕಾಂತೆಗೆ ತಕ್ಕಂಥ ವರ[ನು] || ೧೨ ||

ಕಾಶಿಯ ಜೋಯಿಸರ ಕರೆಸಿ ಕೇಳಲಿ ಬೇಕು
ಹಾಸ್ಯವ ನೀವ್ಮಾಡಬೇಡಿ |
ದೇಶವ ತಿರುಗಿ ಬಂದವರು ಪೇಳುವಂಥ
ವಾಸೆ ಮಾತುಗಳ ನೀವ್ಕೇಳಿ || ೧೩ ||

ಕರೆಸಿದ ಕಾಶಿಯ ಬ್ರಾಹ್ಮಣರ ಸುರತಾಳ
ಅರಿಕೆ ಮಾಡಿದರೆ ವಿಸ್ತರದಿ |
ಬಿರಿದಂಕ ಚೆಲುವ ಚೆನ್ನಿಗ ರಾಮನ ಸುದ್ದಿಯ ವಿ
ಸ್ತರಿಸಿ ಪೇಳಿದರಾಗ ಅವರು || ೧೪ ||

ನಳನೊ ಜಯದ್ರಥನೊ ನಳಿನನಾಭನೊ ದೊಡ್ಡ
ಕಳೆಯಲ್ಲಿ ಕಾಮ ಮನ್ಮಥನೋ |

ಇಳೆಯೊಳು ಅಂತಪ್ಪ ಚೆಲುವನಿಲ್ಲವು ಎಂದು
ಬೆಳೆಸಿ ಪೇಳಿದರು ಜೋಯಿಸರು || ೧೫ ||

ಕತ್ತಿಲಿ ಸಮರಂತ ಸುತ್ತಣ ರಾಯರು
ಮತ್ಯಾರು ಇದಿರಿಲ್ಲ ಅವಗೆ |
ಪುತ್ರರೊಳು [ಚೆನ್ನ] ಕುವರನ ರೂಪಿಂಗೆ
ಎಂತಪ್ಪ ಸತಿಯು ಸೋಲುವರು || ೧೬ ||

ಬಂದ ಬ್ರಾಹ್ಮಣರಿಗೆ ಉಡುಗೊರೆಗಳ ಕೊಟ್ಟು
ವಂದಿಸಿ ಕಳುಹಿದನವರ |
ಮುಂದೇನೊ ನೇಮಿಯೆ ಮಗಳನವನಿಗೆ ಕೊಟ್ಟು
ಚೆಂದದಿ ಮದುವೆ ಮಾಡುವೆ[ನೆ?] || ೧೭ ||

ಮಗಳ ಮೂರ್ಖತ್ವಕ್ಕೆ ಜಗದೊಡೆಯನು ತಾನು
ನಗುತ ಈ ಮಾತನಾಡಿದನು |
ಅಘಹರನಾಣೆ ಅವನಲ್ಲದೆ ಮತ್ತೊಬ್ಬ ಜಗದೊಳು ನಾ ಒಲ್ಲೆನೆಂದು || ೧೮ ||

ಪರಪುರುಷರು ನನಗೆ ನಿನ್ನ ಸಮಾನರು
ಬರಿಯ ಮಾತಲ್ಲ ಈ ಭಾಷೆ |
ಸ್ಥಿರವಾಯಿತೇ ನಿನ್ನ ವಾಕ್ಯವು ಭೂಪ ನೀ
ಕರೆದು ತರಿಸು ಅವನ ಬೇಗ || ೧೯ ||

ನಗೆಗೆ ನಾನೆಂದರೆ ಹಗರಣವ್ಯಾಕಮ್ಮ
ಜಗದೊಳು ಅಪಕೀರ್ತಿಯುಂಟೆ |
ಅಗಣಿತ ಬೇಡರ ಕುಲದಲ್ಲಿ ಹುಟ್ಟಿದ
ಮಗನಂತೆ ಕೇಳು ನೀ ಮಗಳೆ || ೨೦ ||

ಸೂನಿತವನು ಮಾಡಿ ನಮ್ಮ ಕುಲಕೆ ತಂದು
ಆನಂದ ಹರುಷದೊಳ್ ನೀನು |
ಜ್ಞಾನಿಯಲ್ಲವೆ? ಅವನಲ್ಲದೆ ಮತ್ತೊರ್ವ
ಮಾನವನ ಕೊಡುವಳಲ್ಲ || ೨೧ ||

ಇಂತಪ್ಪ ಪಂಥವನಾಡಿ[ದಳು] ಮಗಳಿಂದು
ಚಿಂತೆಯಾತಕೋ ನೇಮಿಖಾನ |
ಕಾಂತೆಯ ಮನಸಿನ ಬಯಕೆಯ ಇದ
ಕೆಂತು ಉಪಾಯ ಪೇಳೆನಗೆ || ೨೨ ||

ಛಪ್ಪನ್ನೈವತ್ತಾರು ದೇಶದ ದೊರೆಗಳು
ಕಪ್ಪವ ಕೊಡಬೇಕು ಎಲ್ಲ |
ಅಪ್ಪಂತ ಖಾನರ ಕಳುಹಿಸಿ ಕೊಡುವೆನು
ತಪ್ಪದೆ ಪ್ರಯಾಣವ ಮಾಡಿ || ೧೩ ||

ಕರೆಸಿದ ಪಗುದೀಯಖಾನ ಆಕಾಶ ಖಾನ
ಕರೆಸಿದ ಅಬ್ದೂಲಖಾನ |
ಕರೆಸಿದ ಖಂಡೇಯಖಾನ ಮಲುಕರನು
ಕರೆಸಿದ ಸುರಿತಾಳನೆಡೆಗೆ || ೧೪ ||

ಇಂದು ನಿಮಗೆ ಪ್ರಯಾಣವೆಂದು ಪೇಳಿದ ನೇಮಿ
ಸಂದೇಹವಿಲ್ಲದೆ ಹೊರಡಿ |
ಬಂದರು ಖಾನರು ನಿಂದು ಕೈಮುಗಿದರು
ವಂದಿಸಿದರು ಸುರಿತಾಳಗೆ || ೧೫ ||

ಐವತ್ತು ಆರು ದೇಶದ ರಾಯರ ಕೂಡ
ಸೈಮಾಡಿಕೊಂಡು ಪಗುದಿಯನು |
ಮೈಲಾಪುರಿ ಮಲೆಯಾಳ ಕೊಂಕಣದೇಶ
ಐಗಾರರಡ್ಡಿಯ ಹೊನ್ನ || ೧೬ ||

ಚಿಕ್ಕ ಪಾಳ್ಯಗಳುಂಟು ಕರ್ನಾಟದೊಳಗೆಲ್ಲ
ಲೆಕ್ಕವೆಷ್ಟಿದ್ದರೆ ಇರಲಿ |
ಮಿಕ್ಕ ಪಾಳೆಯಗಾರರು ಜಗದಪ್ಪನೊಳ
ಗೊಕ್ಕಲು ಅಹರೆಲ್ಲ ಅವಗೆ || ೧೭ ||

ಗುತ್ತಿಯ ನಾಡಿಗೆ ಅಯಿಗಾರರಡ್ಡಿಯ
ಅರ್ತೀಯ ಹೊಡೆದು ತಕ್ಕೊಳ್ಳಿ |
ಸುತ್ತಣ ಸಣ್ಣ ಪಾಳೆಯಗಾರರಿಗೆಲ್ಲ ಅದ
ರರ್ತು ತಕ್ಕೊಳ್ಳುವರ ಕೊಡೆ || ೧೮ ||

ಬಂದ ಧನವನೆಲ್ಲ ಒಂದು ಜಾಳಿಗೆ ಮಾಡಿ
ಮುಂದಾಗಿ ಕಳುಹಿಸಿ ಕೊಡಿರಿ |
ಇಂದು ನಾಳೆನ್ನದೆ ಸಾಗಿಸಿ ಡಿಳ್ಳಿಗೆ
ನಿಂದು ಒಪ್ಪಿಸುವಂತೆ ಮಾಡಿ || ೧೯ ||

ಕುಮ್ಮಟದರಸು ಕಂಪಿಲನ ಬಳಿಗೆ ಹೋಗಿ
ಒಮ್ಮನ ಹೊನ್ನ ನೀವು ಕೇಳಿ |

ಸುಮ್ಮನೆ ಕೊಟ್ಟಷ್ಟು ಸಯಿ ಮಾಡಿಕೊಂಡು
ನೀವು ಗಮ್ಮನೆ ಬರಬೇಕು ಎಂದು || ೩೦ ||

ಕಂಪಿಲರಾಯನ ಮಗನು ರಾಮಯ್ಯ[ನ]
ಸಂಪಿನಿಂದಲಿ ನೀವು ನೋಡಿ |
ಇಂಪಾದ ಪ್ರಾಯದ ರೂಪು ರೇಖೆಯ ನೀವು
ಸೊಂಪನೆಲ್ಲವ ತಿಳಿದುಕೊಳ್ಳಿ || ೩೧ ||

ಕಳೆ ಚೆಲ್ವು ರೂಪು ಕಾಮಗೆ ಮಿಗೆ ಚೆಲ್ವಂತೆ
ಕಳೆಯಂತೆ ಪೇಳಿದನರ್ಗೆ |
ಇಳೆಯೊಳು ಹೋಗಿ ಬಂದವರ ಸುದ್ದಿಯ ಕೇಳಿ
ನಳಿನಾಕ್ಷಿ ಮನಸೋತಳವಗೆ || ೩೨ ||

ಇದ ಪರೀಕ್ಷೆಯನೆಲ್ಲ ತಿಳಿಕೊಂಡು ಬನ್ನಿಂದು
ಮುದದಿಂದಲವನ ಕರೆಸುವೆನು |
ಬೆದರಿ ಬಾರದೆ ಇರಲು ಭಾಷೆಯ [ತೊ]ಟ್ಟೆ[ನು]
ಕದಲಿಸಿ ತರು[ವೆ] ರಾಮುಗನ || ೩೩ ||

ಈ ಬಗೆಯಲ್ಲಿ ಬುದ್ಧಿಯ ಪೇಳಿ ಖಾನರಿಗೆ
ಬೇಗ ಪ್ರಯಣ ಸಿದ್ಧಮಾಡಿ |
ಆಗಲೈವತ್ತು ಕುದುರೆಯ ಪ್ರಧಾನರ
ಸಾಗಿಸಿದನು ನೇಮಿಖಾನ || ೩೪ ||

[ಪಾರಸಿ] ಪರಮಾ[ನೆ] ಬರೆಸಿ ಕಾಗದಗಳ
ಓರಣದಲಿ ಮುದ್ರೆ ಇಟ್ಟು |
ಬೇರೊಂದು ಪಲ್ಲಕ್ಕಿಯೊಳಗೆ ಪಾವುಗೆಗಳ
ಆರಿಸಿ ಜೋಡನಿಕ್ಕಿದರು || ೩೫ ||

ನವರತ್ನ ಖಚಿತವಾದಂಥ ಪಾವುಗೆಗಳ
ಅವ ತಂದು ಪಲ್ಲಕ್ಕಿಯೊಳಗೆ |
ತಾವೆ ನಿತ್ಯ ಪೂಜೆ ಮಾಡಲ್ಕೆ ಒಬ್ಬರ
ಯುವತಿಯ ಕೊಟ್ಟರಾಗ || ೩೬ ||

ಹಾಗೆಂದು ಅಪ್ಪಣೆ ಕೊಡಲು ಪ್ರಧಾನರು
ಆಗ ಖಾನರ ಕೂಡಿಕೊಂಡು |
ಸಾಗ್ಯಡ್ಡಬಿದ್ದು ಸುರಿತಾಳಗೆ ವಂದಿಸಿ
ಸಾಗಿಯಾ ದಿನದಲ್ಲಿ ಅವರು || ೩೭ ||

ಹಳ್ಳಿಪಳ್ಳಿಗಳೊಳಿರದೆ ಮುಂದಕೆ ಸಾಗಿದರು
ಎಲ್ಲ ಗ್ರಾಮಗಳ ದಾಂಟಿ ಬಂದು |
ನಿಲ್ಲದೆ ಸಾಗಿ ಬಂದರು ಪಯಣದಿ ಚಿಕ್ಕ
ಡಿಳ್ಳಿಗೆ ಬಂದು ಇಳಿದರು || ೩೮ ||

ಅಂಗ ಕಾಳಿಂಗ ಕಾಶ್ಮೀರ ಕಾಂಬೋಜ
ಕೊಂಗಳ ಮಿಗೆ ಸೌರಾಷ್ಟ್ರ |
ಬಂಗಾಳ ಕೇರಳ ಸಿಂಹಳ ಕರಾಟ
ವಂಗದೇಶಂಗಳನೆಲ್ಲ || ೩೯ ||

ಸುತ್ತಿ ಛಪ್ಪನ್ನಾರು ದೇಶದ ಕಪ್ಪವ
ಒತ್ತಿ ತೆಗೆದುಕೊಂಡು ಬಂದು |
ಗುತ್ತಿಯ ನಾಡ ಜಗದಪ್ಪನ ಬಳಿಗಾಗಿ
ಅರ್ತಿಲಿ ಬಂದರು ಅವರು || ೪೦ ||

ಬಂದವರಿದಿರ್ಗೊಂಡು ಗುತ್ತಿ ಜಗದಪ್ಪನು
ತಂದು ಹಿಡಿ ಹೊನ್ನ ಕಾಣಿಕೆಯ |
ಮುಂದಿಟ್ಟ ಪಾವುಗೆಗಳಿಗಡ್ಡ ಬಿದ್ದನು
ವಂದನೆ ಮಾಡಿ ಕೈಮುಗಿದಿ || ೪೧ ||

ತಂದಂಥ ಪಾರಸಿ ಪರಮಾ [ನೆ] ಓದಿಸಿ
ಅಂದವರನು ಕರಕೊಂಡು |
ಒಂದು ಮನೆಯನು ಬಿಡಾರ ಮಾಡಲು [ಪೇಳಿ]
ಅಂದಚಂದದಲಿ ಕಳುಹಿದನು || ೪೨ ||

ಬೆಳಗೆದ್ದು ಕುಳಿತು ಕರೆಸಿದ ಖಾನಖಾನರ
ಒಳಿತಾಗಿ ಮಾತನಾಡಿದನು |
ಕುಳಿತು ಅವರ ಕಪ್ಪದ ಹೊನ್ನ ಕಟ್ಟಿಸಿ
ಉಳಿಕೆ ಇನ್ನೇನೆಂದು ಕೇಳೆ || ೪೩ ||

ಎಲ್ಲ ಆಯಿತು ರಾಯ ನಿಲ್ಲದೆ [ಬಂ]ದೆವು
ಇಲ್ಲಿಂದ ಡಿಳ್ಳಿಗೆ ಹೊನ್ನ |
ಬಲ್ಲಿದ ಸುರಿತಾಳ [ಪಾಚ್ಛಾನ] ಬಳಿಗೆ
ನಿಲ್ಲದೆ ಕಳುಹಬೇಕೆನಲು || ೪೪ ||

ಹಾಗಾಗಲಿ ಎಂದು ಒಂದೆ ಜಾಳಿಗೆ ಮಾಡಿ
ಸಾಗಿಸಿ ಕಳುಹಿದರಾಗ |

ಹೋಗಿರೈ ಸಂಗಾತ ಐದು ಸಾವಿರ ವಾಜಿ
ಸಾಗಿಸಿಕೊಟ್ಟ ಜಗದಪ್ಪ || ೪೫ ||

ಬಂದವರೊಳಗೆ ಸಂದ ಒಬ್ಬರಿಬ್ಬರು
ಹಿಂದಕ್ಕೆ ತಿರುಗಿದರವರು |
ಮುಂದುಳಿದವರು ಪಲ್ಲಕ್ಕಿಯ ಸಹವಾಗಿ
ಚೆಂದಂದಿ ಪ್ರಯಾಣ ಕುಮ್ಮಟಕೆ || ೪೬ ||

ಬಂದವರಿಗೆಲ್ಲ ಉಡುಗೊರೆ ಹೊನ್ನುಗಳ
ಅಂದಚೆಂದದಿ ವಸ್ತುಗಳನು |
ಕುಂದದೆ ಕೊಟ್ಟು ಭೂಷಣಮಾಡಿ ಜಗದಪ್ಪ
ಮುಂದಕ್ಕೆ ಕೊಟ್ಟು ಕಳುಹಿದನು || ೪೭ ||

ಸುರಿತಾಳ [ಪಚ್ಛಾನು] ಕುಮ್ಮಟವನು ಹೊಕ್ಕು
ಬರಹೇಳಿ ನಮ್ಮ ಕಳುಹಿದನು |
ಅರಸು ಜಗದಪ್ಪ ದಾರಿಯಕಾರರಿಬ್ಬರ
ಕರೆಸಿಕೊಂಡು ನಮ್ಮ ಸಂಗಡಲೆ || ೪೮ ||

ಅಲ್ಲಿಂದ ಚರರೋಡಿ ಬಂದರು ಬಾಗಿಲ
ಗೊಲ್ಲರ ಕರೆದು ಹೇಳಿದರು |
ಬಲ್ಲಿದ ಡಿಳ್ಳಿಯ ಸುರಿತಾಳ ಕಳುಹಿದ
ನಿಲ್ಲದೆ ಹೇಳೆ ಕಂಪಿಲಗೆ || ೪೯ ||

ಕೇಳುತ ಬಾಗಿಲ ಗೊಲ್ಲರೋಡಿ ಬಂದು
ಹೇಳಿದರು ಕಂಪಿಲನೊಡನೆ |
ಕೇಳು ಚಿತ್ತೈಸು ಅರಸೆ ಡಿಳ್ಳಿ ಖಾನನ
ಊಳಿಗದವರು ಬಂದಹರೆ || ೫೦ ||

ಬಂದವರನು ಆಗ ಕರೆಸೆ ಕಂಪಿಲರಾಯ
ನಿಂದರು ಬಂದು ಕೈಮುಗಿದು |
ಇಂದ್ಯಾಕೆ ಬಂದಿರಿ ಬಂದ ಕಾರ್ಯಗಳೇನು
ಎಂದು ಹೇಳಿದರು ಕಂಪಿಲನು || ೫೧ ||

ಪಾರಸಿ ಪರಮಾನೆ ಖಾನ ವಜೀರರು
ಧರೆಯ ಕಪ್ಪಗಳನೆಲ್ಲ ಕೊಂಡು |
ಭರದಿಂದ ನಿಮ್ಮ ಪವುದಿಯ ಕೇಳಬಂದೆವು
ಅರಸೆ ಕೇಳೆನ್ನ ಬಿನ್ನಪವ || ೫೨ ||

ಹೋಗು ಬೈಚಪ್ಪ ನೀ ಬೇಗ ವಿಚಾರಿಸು
ಸಾಗಿಸಿಕೊಂಡವರ ಬಾರೊ |
ಶೀಘ್ರದಿ ಬೀದಿಯ ಮನೆಯಲ್ಲಿ ಇಳುಹಿಸಿ
ಸಾಗಿಸೊ ಉಲುಪೆ ಉಡುಗೊರೆಯ || ೫೩ ||

ಎಂದ ಆತನು ಕೇಳಿ ಬಂದನು ಬೈಚಪ್ಪ
ಚೆಂದದೊಳವರ ಭೇಟಿಯನು |
ಮುಂದುಡುಗೊರೆ ಕೊಟ್ಟು ವೊಂದಿಲಿ ಅವರನು
ಬಂದನು ಕರಕೊಂಡು ಮನೆಗೆ || ೫೪ ||

ಚೆಂದಚೆಂದದ ಉಲುಪೆಯನು ಕೊಡಿಸಿ ಅವ
ಬಂದುದು ಏನೆಂದು ಕೇಳೆ |
ಸಂದೇಹವಿಲ್ಲದೆ [ನ]ಮ್ಮರಸಿ[ಗೆ ಕೊಡಿ]
ಸಂಧಿಸಿ ಕಪ್ಪವನೆನಲು || ೫೫ ||

ಪಾವುಗೆಗಳಿಗೆ ಕಾಣಿಕೆ ಇಟ್ಟು ವಂದಿಸಿ
ಆವಾಗ ಕೊಡುವಂಥ ಹೊನ್ನ |
ಭಾವ ಶುದ್ಧದೊಳು ಬಳ್ಳದ ಹೊನ್ನನಳಕೊಟ್ಟು
ಸಾವಧಾನದೊಳೆಮ್ಮ ಕಳುಹಿ || ೫೬ ||

ಎಂದ ಮಾತನು ಕೇಳಿ ಬಂದನು ಬೈಚಪ್ಪ
ತಂದೆ ಮಕ್ಕಳ ಕೂಡೆ ಹೇಳೆ |
ಕಂದಿದ ಕಂಪಿನ ಮನದೊಳಾಳಾಪದಿ
ಬಂದೀತು ಕಂಟಕವೆನುತ || ೫೭ ||

ಬಳ್ಳದ ಹೊನ್ನ ನಾನೆಲ್ಲಿಂದ ಕೊಡಬೇಕು
ಬಲ್ಲಿದ ಸುರಿತಾಳನೊಡನೆ |
ನಿಲ್ಲದ ಕಾದುವ ಶಕ್ತಿ ನಮಗಿಲ್ಲವೊ
ಬಲ್ಲಂತೆ ಪೇಳೊ ಮಂತ್ರೀಶ || ೫೮ ||

ಹೇಳುವುದೇನು ಕೇಳುವುದೇನು ಅಪ್ಪಾಜಿ
ನಾಳೆ ನಾವಿಬ್ಬರು ಹೋಗಿ |
ಬಾಳುವ ತೆರನ ಮಾಡಿದರೆ ಸರಿ
ಇಲ್ಲವೆ ಕಾಳಗ ಬಂತು ಕುಮ್ಮಟಕೆ || ೫೯ ||

ಬಂದರೆ ಬರಲಿ ನೋಡುವೆನೆಂದ ರಾಮಯ್ಯ
ತಂದೆಗೆ ಎದ್ದು ಕೈಮುಗಿದ |

ಸಂದೇಹವ್ಯಾತಕೆ ಮುಂದಾಗುವಂಥದ
ಕಂದುಗೊರಳ ಶಿವ ಬಲ್ಲ || ೬೦ ||

ಬಲ್ಲಿದನಹುದೆಂದು ನೋಡಿ ಭಾಸ್ಕರ ತಾನು
ನಿಲ್ಲದೆ ಪಡುವಣಾದ್ರಿಯೊಳು |
ಮೆಲ್ಲನೆ ಇಳಿದು ತಾ ಪೋದನು ಬೇಗದಿ
ಎಲ್ಲರು ಮನೆಗೆ ಐದಿದರು || ೬೧ ||

ಬೆಳಗೆದ್ದು ತಂದೆ ಮಕ್ಕಳು ಬೈಚಪ್ಪನು
ಉಳಿಯದೆ ಹೋಗಿ ತಾವೆಲ್ಲ |
ಕಳೆಯುಳ್ಳ ಖಾನ ಹೇಜೀಬರ ಕಂಡೀಗ
ಒಳಿತಾಗಿ ಮಾತನಾಡಿದರು || ೬೨ ||

ಬಂದಂಥ ಖಾನ ಹೇಜೀಬರನೆಲ್ಲರ
ಸಂದರುಶನ ಮಾಡಿಕೊಂಡು |
ಎಂದಿಗೆ ಇಲ್ಲದೆ ಇಂದಿಗೇತಕೆ ನೀವು
ಬಂದದ್ದು ಏನೆಂದು ಕೇಳೆ || ೬೩ ||

ಡಿಳ್ಳಿಯನಾಳ್ವ ಸುರಿತಾಳನು ಕಳುಹಿದ
ವೀಳ್ಯವ ಕೊಟ್ಟು ನಿಂ ಬಳಿಗೆ |
ಹಳ್ಳಿಪಳ್ಳಿಗಳ ಬಡಿದು ದೊಡ್ಡರಸಾದ
ಬಳ್ಳದ ಹೊನ್ನ ಕಪ್ಪವನು || ೬೪ ||

ಬಡವರ ವೀಳ್ಯಕ್ಕೆ ಬಳ್ಳದ ಹೊನ್ನುಂಟೆ
ಕೊಡುವೆವು ನೀವು ಬಂದುದಕೆ |
ಅಡವಿಯ ಸೀಮೆಗೆ ತಕ್ಕಂಥ ಹೊನ್ನನು
ಕೊಡುತೇವೆ ನೀವು ಕೊಂಡ್ಹೋಗಿ || ೬೫ ||

ಖಾನ ಹೇಜೀಬರು ನೋಡಿ ರಾಮಯ್ಯನ
ಆನಂದ ಹರುಷದೊಳ್ ತಾವು |
[ಮೌ]ನದಿ ತಮ್ಮೊಳು ತಾವೆ ಮಾತಾಡಿದರು
ಜ್ಞಾನಿ ಬಾಬಮ್ಮಗೇನಹುದು || ೬೬ ||

ಮಿಗೆ ಹೊನ್ನ ಕೊಡಲಾರದಿದ್ದರೆ ಕಂಪಿಲ
ಮಗ ರಾಮನ ಕೊಟ್ಟು ಕಳುಹೊ |
ಅಗಣಿತ ಪಾಚ್ಛನ ಸುರಿತಾಳನ ಕಾಣಿಸಿ
ಮಿಗೆ ಹರುಷದಿ ಕಳುಹುವೆನು || ೬೭ ||

ಮಗನ ಕೊಟ್ಟವರುಂಟೆ ಜಗದೊಳೆಲ್ಲಾದರು
ಜಗಳಕ್ಕೆ ಬಂದಿರಿ ನೀವು |
ಸೊಗಸದು ಈ ಮಾತು ಸಟೆ ಹೊನ್ನ ಕೊಡುವೆವು
ಮಗ ರಾಮನ ಕೊಟ್ಟುದುಂಟೆ || ೬೮ ||

ಚೆನ್ನಿಗ ರಾಮನು ನಗುತ ಮಾತಾಡಿದ
ಪನ್ನಂಗದೊಳಗಿರುವಂಥ |
ಹೊನ್ನ ಪಾವುಗೆಗಳ ನೋಡಿ ವಂದಿಸಿ ನಾನು
ಹೊನ್ನ ಕಪ್ಪಗಳ ಕೊಡುವೆನು || ೬೯ ||

ಪನ್ನಂಗ ತಗೆಯಿರೊ ಪಾವುಗೆಗಳ ನೋಡಿ
ಹೊನ್ನು ಕಾಣಿಕೆನಿಟ್ಟು ಮುಂದೆ |
ಉನ್ನತ ಭಕ್ತಿಲಿ ವಂದಿಸಿ ಕಪ್ಪವ
ಹೊನ್ನ ಕಟ್ಟಿಸಿ ಕಳುಹುವೆನು || ೭೦ ||

ಹಾಗೆಂದ ಮಾತನು ಕೇಳುತ ಖಾನರು ತಾವು
ಬೇಗದಿ ಪನ್ನಂಗ ತೆಗೆಯೆ |
ಜಾಗಿಸಿ ನೋಡಿ ಕಣ್ಣಿಟ್ಟು ಪಾವುಗೆ ಮೇಲೆ
ಮಾಗಿ ಕೋಗಿಲೆಯಂತೆ ಆದ || ೭೧ ||

ನವರತ್ನ ಖಚಿತ ಪಾವುಗೆಗಳ ರಾಮಯ್ಯ
ವಿವರಿಸಿ ನೋಡಿದನಾಗ}
ತವಕದಿ ಹೋಗಿ ಕಾಲಿಟ್ಟು ಮೆಟ್ಟಿದನಾಗ
ವಿವರವ ಮುಂದೆ [ಕೇಳೆಂದ] || ೭೨ ||

ನನಗೆ ಇವು ಸರಿಯಾದವು ನಮ್ಮಣ್ಣಗೆ
ಅನುವಾದವಿನ್ನೊಂದು ನೋಡ |
ಮನೆ ಮನುಷರ ಕೈಯ್ಯ ತರಿಸಿ ನೀವು ಕೊಟ್ಟ[ರೆ]
ಮನಬಂದ ಹೊನ್ನ ಕೊಡುವೆನು || ೭೩ ||

ಮೂಗಿಲಿ ಬೆರಳಿಟ್ಟು ಮುಂಗೈಯ್ಯ ಕಡಕೊಂಡು
ಕೂಗಿ ಒರೆದು ಬೊಬ್ಬೆನಿಟ್ಟು |
ನಿನ್ನ ಕುಮ್ಮಟದುರ್ಗ ಹಾಳಾಗಿ ಹೋಯಿತು
ನಿನ್ನ ತಲೆಗೆ ವ್ಯಾಳ್ಯ ಬಂತು || ೭೪ ||

ಇಂತಪ್ಪ ಬುದ್ಧಿಯು ಯಾತಕೆ ರಾಮಯ್ಯ
ಪಂಥವೆ ಸುರಿತಾಳನೊಡನೆ |

ಕಾಂತೆ ಹರಿಯಮ್ಮನು ಕೈಸೆರೆ ಹೋದಳು
ಇಂತು ಸುರಿತಾಳ ಕೇಳಿದರೆ || ೭೫ ||

ಮಕ್ಕಳಾಟಿಕೆ ನೀನು ಮಾಡಿದೆ ರಾಮಯ್ಯ
ಸಿಕ್ಕಿದೆ ತುರಕರ ಸೆರೆಗೆ |
ಕಕ್ಕುಲಾತಿಯ ಎಣಿಸದೆ ನಿನ್ನ ಮನದೊಳಗೆ
ಒಕ್ಕಲ ಕೆಡಿಸಿದೆ ಮಗನೆ || ೭೬ ||

ತರುವಲಿ ಬುದ್ಧಿಯ ಮಾಡಿದೆ ರಾಮಯ್ಯ
ದೊರೆತನವನು ಕಳಕೊಂಡೆ |
ಸೆರೆಯಾದ ಕಂಪಿಲರಾಯನು ತುರುಕರಿಗೆ
ಬರುವುದು ನವಲಕ್ಷ ಕುದುರೆ || ೭೭ ||

ಬಿಡುಬಿಡು ಪಾವುಗೆಗಳನು ನೀ ರಾಮಯ್ಯ
[ಕೆಡಬೇಡ] ಸುರಿತಾಳನೊಡನೆ |
ಹೆಡೆಗೈಯ್ಯ ಕಟ್ಟಿಕೊಂಡೊಯ್ವರು ಡಿಳ್ಳಿಗೆ
ಬಡವಾ ನಿನಗ್ಯಾಕೆ ಈ ತಳ್ಳಿ || ೭೮ ||

ಹೇಳಿದ ಮಾತು ಕೇಳದೆ ರಾಮಯ್ಯ
ಕೋಳ ಹೋಯಿತು ಕುಮ್ಮಟವು |
ಹಾಳಾಗಿ ಹೊಸಮಲೆದುರ್ಗವು ಮುಂದಿನ್ನು
ಬಾಳುವ ತೆರನಿಲ್ಲ ಮುಂದೆ || ೭೯ ||

ಎಂದಿದ್ದರೀ ಕಾಯ ಉಳಿವುದೆ ಜಗದೊಳು
ಬಂದರೆ ಬರಹೇಳೊ ದಂಡ |
ಕಗ್ಗೊಲೆಯನು ಮಾಡುವೆ [ನಾನು] ರಣದೊಳು
ಸಂದೇಹವೇಕೆ ಹೋಗೆಂದ || ೮೦ ||

ಒತ್ತಿ ಖಾನರನೆಲ್ಲ ಕಡಿವೆನು ರಣದೊಳು
ಸುತ್ತಿಕೊಂಡವರ ತಲೆಗಳನು |
ಮೊತ್ತವ ಮಾಡಿ ಕಳಿಸುವೆ ಯಮಪುರಿಗಾಗಿ
ಕತ್ತಿಯ ಮೊನೆಯ ನೋಡೆಂದ || ೮೧ ||

ಅಂಜುವರಾರಿಲ್ಲ ನಂಜುಗೊರಳನೆ ಬಲ್ಲ
ಮಂಜು ಮುಸು[ಗೀತೆ] ತರುಗಿರಿಯ |
ಕುಂಜರದಾನೆ[ಗೆ] ಜಂಬುಕ ಬಲ್ಲುದೆ ಹೋಗು
ಪಂಜು ಹಿಡಿದರೆ ಕೈಯ ಸುಡದೆ || ೮೨ ||

ಬಂದವರೆಲ್ಲರು ಒಂದಾಗಿ ಹೋಗಿರೊ
ಕುಂದದೆ ನಿಮ್ಮರಮನೆಗೆ |
ವಂದನೆ ಮಾಡಿ ಸುರಿತಾಳಗೆ ಪೇಳಿರೊ
ಬಂದರೊಳ್ಳಿತು ದಂಡು ನಮಗೆ || ೮೩ ||

ಹನ್ನೊಂದು ವರುಷಕ್ಕೆ ಕನ್ನೆ ಹುಯ್ಯಲು ಬೇಲು
ಎನ್ನುತಿ[ರ್ದೆ]ನು ಮನದೊಳಗೆ |
ಚೆನ್ನಾಗಿ ಕೊಟ್ಟ ಶಿವ ಕರುಣಿಸಲ್ ನಮಗೆ
ಇನ್ಯಾಕೆ ಬಿಡಲಿ ನಾನೆಂದ || ೮೪ ||

ಹೋಗಲಿ ಕೊಡಿಸಯ್ಯ [ಪಡಿಪೊನ್ನ] ವೆಚ್ಚಕ್ಕೆ
ಹಾಗೆ ಕಳಸಬೇಡ ಮಂತ್ರಿ |
ಹೋಗಲಿ ಸಾಗಿಸು ಅವರನು ಮನ್ನಿಸಿ
ಬೇಗ ಬಾರೆಂದರಮನೆಗೆ || ೮೫ ||

ಹೋಗೆಂದು ಹೇಳಿ ಉಡುಗೊರೆ ವೀಳ್ಯಗಳನಿತ್ತು
ಆಗ ಕಂಪಿನ ತಾನು ಸಹಿತ |
ಸಾಗಿ ಬಂದರು ಸದರು ಚಾವಡಿಯಲಿ ಕುಳಿತು
ಬೇಗ ಹೊಕ್ಕರು ಅರಮನೆಯ || ೮೬ ||

ಬಂದವರೆಲ್ಲರು ಒಂದಾಗಿ ಮಾತಾಡಿ
ಸಂದೇಹವೇಕಿನ್ನು ನಮಗೆ |
ಮುಂದಣ ಕಾರ್ಯವ ಬಲ್ಲನು ಸುರಿತಾಳ
ಇಂದು ನಾವು ತೆರಳಬೇಕೆಂದು || ೮೭ ||

ಇತ್ತಲಿ [ಪಡಿಪೊನ್ನ] ಹೊನ್ನನು ತೆಕ್ಕೊಡು
ಗುತ್ತಿಯ ಜಗದಪ್ಪನೆಡೆಗೆ
ಮತ್ತೆ ಸಂಗಡ ಬಂದ ಮನುಷರ ಕರಕೊಂಡು
ಹತ್ತಿದವರು ದಾರಿಯನು || ೮೮ ||

ಜಗದಪ್ಪ ರಾಯಗೆ ಹೇಳಿ ಈ ಮಾತನು
ಅಗಣಿತವಾದ ಸುದ್ದಿಯನು |
ಮಿಗೆ ರಾಮನ ಮೇಲೆ ಕಾರ್ಯವ ಮಾಡೆಂದು
ಬಗೆಯಿಂದ ಹೇಳಿದರವರೆ || ೮೯ ||

ಪಾಚ್ಛಾವನ ಕೂಡೆ ಖಾನಝುಂಗೆಯ ಮಾಡಿ
ರಚ್ಚೆಗಿಕ್ಕಿದನು ರಾಮುಗನು |

ಹುಚ್ಚಾದ ನೇಮಿಖಾನ ಬಂದರೆ ನಾಳೆ
ಫಜ್ಜೀತಿಯ ಮಾಡದೆ ಬಿಡನು || ೯೦ ||

ಆ ರಾತ್ರಿಯೊಳಿದ್ದು ಬೆಳಗೆದ್ದು ಹೋದರು
ಸಾರಿಕೊಳ್ಳುತ ಡಿಳ್ಳಿ ತನಕ |
ಆರೇಳು ತಿಂಗಳ ದಾರಿ ಶೀಘ್ರದಿ ಹೋಗಿ
ಸೇರಿದರು ಡಿಳ್ಳಿಯನು || ೯೧ ||

ಹೋದರು ಸುರಿತಾಳ ಖಾನರಾಯನ ಬಳಿಗೆ
ಆದ ವೃತ್ತಾಂತವೆಲ್ಲವನು |
ಭೇದವಿಲ್ಲದೆ ಪೇಳಿದರೊಂದು ವಿನಯದಿ
ಕಾದಲು ಬಲು ಗಟ್ಟಿ ರಾಮ || ೯೨ ||

ರೂ[ಪಿ]ಗೆ ಚೆಲುವನು ಎಳೆಯ ಯೌವನ ಪ್ರಾಯ
ಕೋಪವು ನೋಡು ಅರ್ಜುನನು |
ಮಾಪತಿ ವರದ ಕುಮಾರನಲ್ಲದೆ ಬೇರೆ
ಈ ಪರಿ ರಾಯರೊಳಗಿಲ್ಲ || ೯೩ ||

ಅಷ್ಟು ದಿಕ್ಕನು ನೋಡಿ ಬಂದೆವು ನಾವಿನ್ನು
ಅಷ್ಟರೊಳಗೆ ಕಾಣಲಿಲ್ಲ |
ಸೃಷ್ಟಿಯೊಳಗೆ ಇಲ್ಲ ಇಂತಪ್ಪ ಪುರುಷನು
ಕೃಷ್ಣನ ರೂಪಿಗೆ ಸಮನು || ೯೪ ||

ಕಾಮನ ಪೋಲ್ವಂತ ರೂಪಿನ ಚೆಲ್ವನು
ರಾಮಗೆ ಸಾಟಿ ಯಾರಿಲ್ಲ |
ಭೂಮಿಯನೆಲ್ಲ ತಿರಿಗಿದರಿಲ್ಲ ಅವನಂಥ
ಕೋಮಲಕಾಯ ಸನ್ನಿಭನು || ೯೫ ||

ಕರೆಸಿದ ಬಹುಮಾನದಲಿ ನಮ್ಮನೆಲ್ಲರ
ಇರಿಸಿದನೊಂದು ಮನೆಯೊಳಗೆ |
ಸರಸದಿಪ್ಪುಲುಪೆ ಉಡುಗೊರೆಯು ಹೊನ್ನುಗಳನು
ಹೊರಿಸಿ ಕಳುಹಿದ ಇದ್ದ ಬಳಿಗೆ || ೯೬ ||

ಬೆಳಗೆದ್ದು ತಂದೆ ಮಕ್ಕಳು ಕೂಡಿ ಬಂದರು
ಇಳುಹಿದ ಪಲ್ಲಕ್ಕಿಯ ತೆಗೆಸಿ |
ಒಳಗಿರ್ದ ಪಾವುಗೆಗಳ ನೋಡಿ ಮೆಟ್ಟಿದ
ವೈರಿಯ ಗಂಡ ನಾನೆಂದು || ೯೭ ||

ಆಡಿದ ಮಾತಿಗೆ ಆಡಿದ ಹತ್ತೆಂಟು
ಜೋಡಿಸಿದನು ಅರ್ಭಕತನವ |
ಕಾಡದೆ ಹೋಗಿ ಸುರಿತಾಳಗೆ ಪೇಳೆಂದು
ನೋಡಿ ನಗುತಲಿರ್ದ ರಾಮು || ೯೮ ||

ಕತ್ತಿಗೆ ಅಳುಕುವನಲ್ಲ ಕರ್ನಾಟದೊಳ್
ಉತ್ತಮಪುರುಷ ಪುಟ್ಟಿಹನು |
ಚಿತ್ತೈಸು ಸುರಿತಾಳ ಪಚ್ಥಾನೆ ಹೋಗಿ ಬಂ
ದರ್ತಿಯನೆಲ್ಲ ಪೇಳಿದೆವು || ೯೯ ||

ಬಂದ ಕಪ್ಪನ ಹೊನ್ನ ಮುಂದಕ್ಕೆ ಕಳುಹಿದೆವು
ಹಿಂದಾಗಿ ನಾವು ಹೊಕ್ಕು ನೋಡಿ |
ಚಂದದಿ ಅದರ ವರ್ತಮಾನವನೆಲ್ಲ
ಕುಂದದೆ ಬಿನ್ನೈಸಿದೆವು || ೧೦೦ ||

ಕೇಳಿದ ಸುರಿತಾಳ ಕರೆಸಿದ ನೇಮಿಯ
ಬಾಳ ಕೋಪವ ತಾಳಿ ಮನದಿ |
ಸಾಳುವನಹುದೊ ಕರ್ನಾಟದೊಳ್ ಕೀರ್ತಿಯ
ಬೀಳು ಮಾಡಿದ ನಮ್ಮ ಬಿರಿದ || ೧೦೧ ||

ಉರಿದೆದ್ದು ಸುರಿತಾಳ ಕರೆಸಿದ ನೇಮಿಯ
ಮರೆಮಾತೆ ಹೊರಡೊ ನೀ ದಂಡ |
ಬಿರಿದ ನುಂಗಿದನು ರಾಮನ ಹಿಡಿತರುವರೆ
ಕರಸಿದೆವಯ್ಯ ನಾವ್ನಿಮ್ಮ || ೧೦೨ ||

ತಂದೆಯ ಸಿಟ್ಟನು ಕಾಣುತ ಮಗಳೆದ್ದು
ವಂದಿಸಿ ಪಾದಕ್ಕೆ ಬಿದ್ದು |
ಇಂದೆನ್ನ ಮುತ್ತೈದೆತನವ ನೀನುಳುಹೆಂದು
ತಂದೆಗೆ ಬಿನ್ನೈಸಿದಳು || ೧೦೩ ||

ಇಂತಪ್ಪ ಬುದ್ಧಿಯ ಮಾಡಬಹುದೆ? ರಾಮು
ಎಂತು ಪೇಳಲು ಕೇಳಿದಿಲ್ಲ |
ಚಿಂತೆಯಾತಕೆ ನಿನ್ನಳಿಯಗೆ ನೀ ಕೊಟ್ಟೆ
ಅಂತರಂಗದಿ ನೋಡಲಿಕೆ || ೧೦೪ ||

ನಕ್ಕಳು ಸುರಿತಾಳ ಮಗಳ ಮಾತನು ಕೇಳಿ
ರಕ್ಕಸ ಸಿಟ್ಟನು ಬಿಟ್ಟ |

ಅಕ್ಕನ ಕರಕೊಂಡು ನೇಮಿಗಪ್ಪಣೆ ಕೊಟ್ಟು
ಹೊಕ್ಕನು ತನ್ನರಮನೆಯ || ೧೦೫ ||

ಇಲ್ಲಿ ಸಂತೋಷದೊಳಿರಲತ್ತಲಿತ್ತ
ಬಲ್ಲಿದ ಕಂಪಿಲರಾಯ |
ನಿಲ್ಲದೆ ರಾಮ ಮಾಡಿದ ಮಾಟಂಗಳ
ಎಲ್ಲವ ಕಂಡೆಲೊ ಮಂತ್ರಿ || ೧೦೬ ||

ರಾಮನು ಮಾಡಿದ ಮಹತ್ಕಾರ್ಯ ಮುಂದಿಟ್ಟು
ಭೂಮಿ ತೂಕದ ದಂಟುಬಹದೆ |
ಸ್ವಾಮಿ ಜಟ್ಟಂಗಿ ರಾಮೇಶನೆ ಗತಿಯೆಂದ
ಆ ಮಹಾದೇವನೆ ಕಾಯ್ವ || ೧೦೭ ||

ಸುರಿತಾಳ ಕಳುಹಿದ ಪವುದಿ ಪಾವುಗೆಗಳ
ದೊರೆ ರಾಮ ಮೆಟ್ಟಿದನೆಂದು |
ಧರೆಯೆಲ್ಲ ಕೇಳಿತು ಮುಂದೆ ಹುಟ್ಟುವಂಥ
ನರರಿಗೆ ಆಶ್ಚರ್ಯವಾಯ್ತು || ೧೦೮ ||

ಇದು ಪರನಾರಿ ಸೋದರ ರಾಮನಾಥನ
ಪದಕೃತಿಯೊಳಗೊಂದು ಕಥೆಯ |
ಚದುರ ರಾಮಯ್ಯ ಮಾಡಿದ [ವೀರ]ರಸಗಳ
ಕದನದ ಕಥೆಯು ಸಂಪೂರ್ಣ || ೧೦೯ ||

**ಅಂತು ಸಂಧಿ ೫ ಕ್ಕಂ ಪದನು ೨೮೦ಕ್ಕಂ ಮಂಗಳ ಮಹಾಶ್ರೀ**

## ಸಂಧಿ ೬ - ಗುತ್ತಿಯ ಜಗದಪ್ಪನೊಂದಿಗೆ ಕೊಮಾರ ರಾಮಯ್ಯನ ಕಾಳಗ

ಶ್ರೀ ಗಿರಿಜಾ[ಸ್ಯಾಂಬುಜ ದಿನ] ನಾಯಕ
ಭೋಗಿ ಭೂಷಣ ಭಾಳನೇತ್ರ |
ಭಾಗೀರಥಿಧರ ಭವರೋಗವೈದ್ಯನೆ
ನಾಗ[ಕುಂಡಲ] ಶರಣೆಂಬೆ || ೧ ||

ಅಘಹರ ಭವಹರ ಮಿಗೆ ಮೂರು ಕಣ್ಣುಳ್ಳ
ಜಗದೀಶ್ವರ ರುದ್ರರೂಪ |
ಜಗಕೆಲ್ಲ ಕರ್ತೃ ಶಂಭುವೆ ತ್ರಾಹಿ ಗಿರಿಜೇಶ
ಸೊಗಸಿಂದ ಕೊಡು ಮತಿಗಳನು || ೨ ||

ಕರೆಸಿ[ದಳ್] ಮಂತ್ರಿಯ ಹರಿಯಲದೇವಿಯು
ದೊರೆ ರಾಮ ಮಾಡಿದ ಕಥೆಯ |
ಬರೆದೋದಿ ಕೇಳಿದರೆ ತೀರದೊ ಮಂತ್ರೀಶ
ಸರಸವೆ ಸುರಿತಾಳನೊಡನೆ || ೩ ||

ಇಂತಪ್ಪ ಬುದ್ಧಿಯು ಹುಟ್ಟಿತೆ ರಾಮಗೆ
ಚಿಂತಾಯಕ ತಾನೆ ಬಲ್ಲ |
ಪಂಥವ ಗೆಲ್ಲದೆ ಬಿಡನು ರಾಮಯ್ಯನು
ಚಿಂತೆ ಯಾತಕೆ ತಾಯೆ ನಮಗೆ || ೪ ||

ಅಪ್ಪಾಜಿ ರಾಮಯ್ಯ ಮೆಚ್ಚಿದ ಮೇಲಿನ್ನು
ಸೊಪ್ಪುಂಟು ಕಸವ ತೆಗೆವರೆ |
ಒಪ್ಪವ ಮಾಡಿ ಪೇಳುವೆ ಮಂತ್ರಿ ಬೈಚಪ್ಪ
ಮುಪ್ಪಾಯಿತು ಕುಮ್ಮಟವು || ೫ ||

ಮತ್ತೆ ರಾಮನ ಮೇಲೆ ಚಿಂತೆಗಳ್ಯಾತಕೆ
ಕರ್ತೃ ಹರನು ಶಿವ ಬಲ್ಲ |
ಅ[ರ್ತಿಯೆ] ನೋಡಿ ಪುಟ್ಟಿಸಿದ ಜಗದೊಳು
ಮರ್ತ್ಯದ ದೊರೆಯೆ ಕೇಳಮ್ಮ || ೬ ||

ನಾಳೆ ಸುರಿತಾಳನ ದಂಡು ಬಂದರೆ ಮಂತ್ರಿ
ಕೋಳುಹೋಗದೆ ಕುಮ್ಮಟವು |
ಹೇಳುವ ಮಾತಲ್ಲ ಕೇಳಮ್ಮ ಜಗದೊಳು
ಏಳುಕೋಟಿಗೆ ದೊರೆಯವನು || ೭ ||

ಎಲ್ಲರಂತಲ್ಲವೊ ಡಿಳ್ಳಿಯ ಸುರಿತಾಳ
ಎಲ್ಲ ರಾಜ್ಯಕೆ ಪಾಚ್ಛವ |
ಮಲ್ಲೇಶ್ವರನ ದಯವುಂಟು ರಾಮಯ್ಯಗೆ
ಬಲ್ಲಿದನವನು ಅಂಜುವನೆ || ೮ ||

ಯಾಕಿಷ್ಟು ಮಾಡಿದನರಿಯನೆ ಹರಿಯಮ್ಮ
ನಾಕಜರುಂಟು ಅವನಲ್ಲಿ |
ಲೋಕದ ದೊರೆಯಲ್ಲ ಜನಿಸಿದ ಧರಣಿಗೆ
ಶ್ರೀ ಕೃಷ್ಣ ನಿನ್ನ ಗರ್ಭದೊಳು || ೯ ||

ಇವರೀರ್ವರು ಸಂಹರುಷದೊಳಿರೆ
ಭುವನೇಶ ಕಂಪಿಲನ[ನ]ರಸಿ |

ಹವಣಿಸಿ ಗುತ್ತಿಯ ಜಗದಪ್ಪನವರು ಬಂದು
ನವಲಕ್ಷ ಹೊನ್ನ ಬೇಡಿದರು || ೧೦ ||

ಕಪ್ಪದ ಹೊನ್ನ ತಾರೆನ್ನುತ ಕಂಪಿಲನ
ಬಪ್ಪ ಬೀದಿಯಲಿ ನಿಲ್ಲಿಸಲು |
ಕಪ್ಪುಗೊರಳನ ವರದಲ್ಲಿ ತನ್ನೊಡ [ನೋಡ]
[ನಿ]ಪ್ಪ ಬಾಲಕರೈವರೊಡನೆ || ೧೧ ||

ಬರುತ ಬರತಲಿ ಕಂಡನು ರಾಮನಾಥನು
ದೊರೆಯು ಕಂಪಿಲನ ತರುಬಿದುದ |
ನೆರೆದು ಕೇಳಿದನು ಇವರ್ಯಾಕೆ ಬೀದಿಯೊಳಿನ್ನು
ತರುಬಿಕೊಂಡಿಹರಿವರ್ಯಾರು || ೧೨ ||

ಜಗದಪ್ಪ ಗುತ್ತಿಯ ರಾಯನ ಚ
ರರ್ಗಳು ಕಪ್ಪವ ಕೊಡಹೇಳಿ ಕಳುಹೆ |
[ತ]ಗಹಿಂದ ತಮ್ಮ ಪೊನ್ನುಗಳಿಗೆ ನಿಲಿಸಿದರು
ಅಘಹರ ಚೆನ್ನಿಗರಾಮ || ೧೩ ||

ನೀನು ಬಾಹನಕ ನಾನಿಲ್ಲಿಹೆ ಪೋ[ಗೆನೆ]
ಭಾನುಸಖನ ಮುಖದವ[ನು] |
ಜ್ಞಾನಿ ರಾಮನ ನಿಲಿಸಿದನು ಕಂಪಿಲರಾಯ
ತಾನರಮನೆಗೆ ಐತಂದ || ೧೪ ||

ಅವರಿಗವನನಿತ್ತು ಭವನಕ್ಕೆ ನಡೆತಂದು
ನವಯೌವನೆಯಳ ಕರೆ[ಯೆ] |
ತವಕದೊಳುದಕವ ಅರಸಗೆ ತಂದಿಕ್ಕೆ
ಭುವನೇಶ ತಾನು ಕೈಕೊಂಡ || ೧೫ ||

ಕೈಕಾಲು ಮುಖದೊಳೆದು ಕಂಪಿಲರಾಯನು
ಗಮ್ಮನೆ ಪೊಕ್ಕ ತಾ ಗೃಹವ |
[ಕೈ]ಯಿಟ್ಟು ಕುಳಿತು ಊಟವ ಮಾಡಲಂಗನೆ
ಕರದಲ್ಲಿ ತಾಂಬೂಲವಿಡಿದು || ೧೬ ||

ಅತ್ತ ಕಂಪಿಲ ತನ್ನ ಅರಮನೆ ಹೆಂಗಳ
ಅರ್ತಿಯಿಂ[ದಿರೆ] ಇತ್ತ ರಾಮ |
ಗುತ್ತಿಯ ಸ್ಥಾನಪತಿಗಳ ಪ್ರಧಾನರ ಹಿಡಿ
ದತ್ತ ನೂಕಿಸಿದ ಪೋಗೆನುತ || ೧೭ ||

ಹೊತ್ತ ಹಣವನು ಕೊಡದೆ ರಾಮನಾಥನು
ಕತ್ತನು ಹಿಡಿದು ನೂಕಿಸಿದ |
ಗುತ್ತಿಯ ಜಗದಪ್ಪರಾಯ ಕೋಪವ ತಾಳಿ
ಮತ್ತೆ ಮನ್ನೆಯರನು ಕಳುಹಿ || ೧೮ ||

ಇತ್ತ ವಾಲಗವಿತ್ತು ಜಗದಪ್ಪರಾಯನು
ಮೊತ್ತದ ಮಂತ್ರಿ ಮನ್ನೆಯರು |
ಸುತ್ತಣ ರಾಯರಿಗೋಲೆಯ ಬರೆಸಿದ
ಮತ್ತೆ ಕಳುಹಿದನು ಚರರುಗಳ || ೧೯ ||

ಚರರೋಡೆ ದಿಕ್ಕುದಿಕ್ಕಿನ ರಾಯರಿಗೆಲ್ಲ
ಇರದೆ ವಾಲೆಗಳ ಕಳುಹಿದನು |
ಕರದೊಳು ವಾಲೆಯ ಪಿಡಿದೋ[ದೆ] ಕರಣಿಕರ್
[ಉರು]ತರ ಮಾತು ನೀತಿಗಳ || ೨೦ ||

ಶ್ರೀಮನ್ಮಹಾರಾಯ ಮಂಡಲೇಶ್ವರ ಭೂಪ
ಭೀಮ ವಿಕ್ರಮನ ಪ್ರತಾಪ |
ರಾಮಾಭಿರಾಜಿತ ಜಗದಪ್ಪರಾಯನು
ಪ್ರೇಮದಿ ಕಳುಹಿದ ಕಾರ್ಯ || ೨೧ ||

ಲಾಳ ಕೊಂಕಣ ಮಲೆಯಾಳ ಸಿಂಗ ಬಂಗಾರ
ದಾಳು ನೆರೆದು [ಏಳಿ] ಭೂಪ |
ಕಾಳೆಯ ಹಿಡಿಸಿ ಭೂಪಾಲರೇಳಿರಿ ದೊಡ್ಡ
ದಾಳಿಯು ನಡೆವ ಸಂಭ್ರಮವು || ೨೨ ||

ವೀರ ಕನ್ನೋಜಿ ಕರಾಳ ಮನ್ನೆಯ ಸಿಂಧು ಮ
ಹಾರಾಷ್ಟ್ರ ಬಲವೆಲ್ಲ ಸಹಿತ |
ದೂರದೈವತ್ತಾರುದೇಶದ ಅರಸುಗಳು
ಸಂಗ್ರಾಮಕ್ಕಾಗಿ ನಡೆದರು || ೨೩ ||

ಕೊಟ್ಟದ ಬೇಡರು ಹಟ್ಟಿಕಾರರು ಸಹ
ನೆಟ್ಟನೆ ಏಳು ಸಾವಿರವು |
ಬಿಟ್ಟರು ಪಾಳ್ಯೆಯ ಗುತ್ತಿಯ ಜಗದಪ್ಪ
ಸೃಷ್ಟಿಪ ರಾಯನ ಮುಂದೆ || ೨೪ ||

ಸುತ್ತಣ ಮನೆಯರ ಕೂಟವು ನೆರೆದಿದೆ
ಗುತ್ತಿಯ ಜಗದಪ್ಪನೊಡನೆ |

ಎತ್ತಿ ಸಾರುವ ಕಹಳೆ ಭೇರಿ ಮೃದಂಗವು
ಮೊತ್ತದ ಧ್ವನಿಗೂಡಿ ನಡೆಯೆ || ೧೫ ||

ವಾರುಧಿಯಂತೆ ಕೂಡಿತು ಒಂದು ಲಕ್ಷವು
ವಾರುವನಾರು ಸಾವಿರವು |
ಧೀರ ಮನ್ನೆಯರೇಳು ಲಕ್ಷವು ಸಹವಾಗಿ
ಧೀರ ನಡೆದನು ಕುಮ್ಮಟಕೆ || ೧೬ ||

ದಂಡೆತ್ತಿ ನಡೆದರು ಮಂಡಲಿಕರು ಕೂಡಿ
ಡಂಡಾಮ ಡಂಮೆಂದು ನಡೆಯೆ |
ದಿಂಡ ಕಂಪಿಲನು ಸೆಣಸಿ ತೋರಿದ ತನ್ನ
ಗಂಡಾಳುತನದ ರೀತಿಯನು || ೧೭ ||

ಬೇಡ ಸಾರಿದೆನು ಕಪ್ಪವ ಕೊಡು ಕಂಪಿಲ
ರೂಢಿಗೆ ಹೊಸತು ಮಾತು [ದೆ]ನು |
ಮಾಡದ ಮಾಟವ ಮಾಡಿ ಕೊಲ್ಲುವೆನೆಂದು
ನಾಡೊಡೆಯನು ಮಾತಾಡಿದನು || ೧೮ ||

ಆಡಲ್ಯಾತಕೆ ಕಂಪಿಲನಿನ್ನು ಬಿಡುವೆನೆ
ದಾಳಿಯ[ನಿ]ಡುವೆ ಕುಮ್ಮಟಕೆ |
ರೂಢೀಶ ಜಗದಪ್ಪರಾಯ ರಾಜ್ಯವ ಕೊಂಡು
ಹೂಡಿದ ಕದನಕಾಯುಧವ || ೧೯ ||

ಬಂದು ಬಿಟ್ಟನು ಕುಮ್ಮಟಕ್ಕೆ ಉರವಣಿಯಿಂದ
ಮಂದಿ ಮಾರ್ಬಲವೆಲ್ಲ ಸಹಿತ |
ನೊಂದನೂರೊಳಗೆ ಕಂಪಿಲನು ಠಾಣ್ಯ[ವ] [ಮುತ್ತಿ]
ಬಂದು ಹಿಡಿದರು ಕಾಳಗವ || ೨೦ ||

ಊರ ಹತ್ತಿರಕ್ಹೋಗಿ ಸಾರಿ ಹುಯ್ಯಲ ತೆಗೆದು
ಆರೇಳು ಸಾವಿರ ಬಿಲ್ಲು |
ಭೂರಿ ಜಗಳದೊಳು ಏರಿ ತಾವ್ಕಡಿವುತ
ತೂರಿದ ಶಿರ ಲೆಕ್ಕವಿಲ್ಲ || ೨೧ ||

ಒಂದೆಸೆ ಕಾಲಾಳು ಒಂದೆಸೆ ತುರಗವು
ಒಂದೆಸೆಯಲಿ [ಆ]ನೆ ಪಡೆಯು |
ಒಂದೆಸೆಯಲಿ ಸರ್ವ ದಂಡೇರಿ ಕಡಿಯಲು
ನೊಂದರು ಕಂಪಿಲನವರು || ೨೨ ||

ನೊಂದ ದಂಡ ಸಂತೈಸುತ ರಾಮಯ್ಯ
ಬಂದು ಹಿಡಿದನು ಕಾಳಗವ |
ಸಂದೇಹವ್ಯಾತಕೆ ಪರಬಲದೊಳು ರಾಮ
ಕೊಂದುಹಾಕೊಡನೆ ತಾನಿರಿದ || ೩೩ ||

ಪರಬಲಮಸ್ತಕಶೂಲನೆಂದೆನಿಸುವ
ಬಿರಿದನು ಹೊಗಳಿಸಿ ರಾಮ |
ಧರೆಯ ರಾಯರ ಗಂಡನೆಂಬ ಕಡೆಯವನಿಟ್ಟು
ಧುರಧೀರ ನಡೆದನರ್ತಿಯಲಿ || ೩೪ ||

ಸಾರಿ ಬಿರಿದನೆಲ್ಲ ಮಾರಿ ಹೆಗ್ಗಾಳೆಯು
ಚೀರುವ ಚಿನ್ನಗಾಳೆಗಳು |
ಧೀರ ಕೊಮಾರ ರಾಮಯ್ಯ ಮುಂಗಾಳಗಕೆ
ಭೋರನೆ ತನ್ನೈವರೊಡನೆ || ೩೫ ||

ಗುತ್ತಿಯನಾಳ್ವ ಜಗದಪ್ಪರಾಯನ ಗಂಡ
ಸುತ್ತಣ ರಾಯರ ಮಿಂಡ |
ಉತ್ತರಿಗೆಯ[ನು]ಟ್ಟು ನಡೆದನು ರಾಮಯ್ಯ
ಅರ್ತಿಯಿಂದಲಿ ಮುಂಗಾಳಗಕೆ || ೩೬ ||

ವಾರುವನೇರಿ ದುವ್ವಾಳಿಸಿ ರಾಮಯ್ಯ
ಸಾರ ಕನ್ನೋಜಿ ನಾಯಕರು |
ಭೂರಿ ದಳವ ಕೂಡಿಕೊಂಡವರ ಶಿರಗಳ
ಹಾರಿಸಿದನು ಯಮಪುರಿಗೆ || ೩೭ ||

ಮುಂದಣ ತಲೆಯನು ಮನ್ನೂಲ ಮಾಚನು
ತಂದನು ರಾಮಯ್ಯನೆಡೆಗೆ |
ವಂದಿಸಿ ಕರಗಳ ಮುಗಿದು ಬೂಟಲ ಬೊಮ್ಮ

ಮುಂದಕ್ಕೆ ನಡೆಯಬೇಕೆಂದ || ೩೮ ||

ಮನ್ನಲ ಚಿನಮಾದ ವಂದಿಸಿ ರಾಮಗೆ
ಕನ್ನೆ ಹುಯ್ಯಲರಸ ನೀ ನೋಡು |
ಮುನ್ನೂರು ಮೊನೆ ಈಟಿ ಹೊಕ್ಕಿರಿದನು ಅವ
ಹನ್ನೊಂದು ಸಾವಿರ ಪೌಜ || ೩೯ ||

ಬಕ್ಕನಪಾಲನು ಹೊಕ್ಕನು ರಣದೊಳು
ಒಕ್ಕಲಿಕ್ಕುವ ಅರಿಬಲವ |

ಮಿಕ್ಕು ಬಂದವರನು ಮುದುಗೊಂಡ್ಲ ಮೂಗನು
ಕುಕ್ಕೂತ ಮುನ್ನೂರು ಈಟಿ || ೪೦ ||

ಕನಕ ತಪ್ಪಟೆಯನು ಹೊಯ್ದೂತ ಬಂದನು
ಚೆನುಕ ರಾಹುತನು ಮಲ್ಲಣ್ಣ |
ಅನುವಾದವೈವತ್ತು ರಾಜಯೊಳ್ ಕೈರತ್ತು
ಅನುವಾದವು ರಾಮನ ಮುಂದೆ || ೪೧ ||

ಮದಗಜ ಹಿಂಡು ಮುತ್ತಲು ರಾಮಯ್ಯನು
ಕುದುರೆಯ ಹಾರಿಸಿ ಕಡಿಯೆ |
ಒದಗಿತು ಮೂರು ಸಾವಿರ ಬಿಲ್ಲು ಅಂಬಿನ
ಹೊದೆಗಳು ತೀರಿದವಲ್ಲಿ || ೪೨ ||

ಸ್ವಾನೆಯ ಮಳೆಯಂತೆ ಸುರಿದವಂಬಿನ ಮಳೆ
ಆನೆಯ ಹಿಂಡಿನ ಮೇಲೆ |
ಮೌನದಿ ಮುದಿಲನ್ನಕ ಹೊಕ್ಕಿರಿದನು
ಆನೆಯ ಹಿಡಿದ ಕೈಸೆರೆಯ || ೪೩ ||

ಕಾಮಗೇತಿಯ ತಿಮ್ಮನ ಮಂದಿ ಸಹವಾಗಿ
ಆನೆಯ ಹಿಂಡಿನ ಮೇಲೆ |
ಬೋನಗುರಿಯ ಹಿಡಿದು ತಂದಂತೆ ಹತ್ತೆಂಟು
ಜ್ಞಾನಿ ರಾಮಯ್ಯಗೆ ಒಪ್ಪೊ || ೪೪ ||

ಕೊಟ್ಟದ ಬೇಡರು ಬೆಟ್ಟದ ಸಿಂಹರು
ಕಟ್ಟಿನ ಬಿಲ್ಲು ಮುನ್ನೂರು |
ಪಟ್ಟೆದ ಮಂದಿ ಮರುಳೆ ಪಾಪನವರಿನ್ನು
ದಿಟ್ಟ ರಾಮಯ್ಯನೆಡಬಲದಿ || ೪೫ ||

ಚಾರಮರಾಯನ ಮಕ್ಕಳು ಮುನ್ನೂರು
ವಾರುವ ಕಾಟಣ್ಣ ಸಹಿತ |
ಬ್ಯಾರೊಂದು ಕಡೆಯೆ ಕಡಿದಾಡುತಲಿರ್ದರು
ಧೀರ ಮಾನ್ಯರ ಕೂಡಿಕೊಂಡು || ೪೬ ||

ಮಾಳವ ಮಗಧ ಪಾಂಚಾಲ ನಾಯಕರನು
ಬೀಳಲಿ ಹೊಯ್ದು ಕೆಡಹಿದರು |
ತಾಳಿ ಕೋಪವನು ಗುತ್ತಿಯನಾಳ್ವ ರಾಯನ
ಚೂಣಿಯ ಮುರಿಯಲಿಕ್ಕಿದರು || ೪೭ ||

ಇರಿದು ತರಿದು ಶಿರಗಳನು ಉತ್ತರಿಸುತ
ಕೊರೆದು ಕೊರಳನು ಕತ್ತರಿಸಿ |
ಭರದಿಂದ ಬಲವ ಮುರಿಯಲೊದೆದ ರಾಮಯ್ಯ
ದೊರೆಮಗ ಕಂಪಿಲನೆಡೆಗೆ || ೪೮ ||

ಕಾಡ ಬೇಡರ ಪಡೆಗೂಡಿತು ರಣಕಂಜಿ
ಓಡುವ ರಾಯರ ಗಂಡ |
ಮೂಡಲ ಪೌಜಿಗೆ ಕುದುರೆಯ ಹಾಕಿದ
ಕಾಡ ಬೇಡರು ಬೊಬ್ಬೆಯಿಡುತ || ೪೯ ||

ಮೂಡಲ ಪೌಜನು ಮುರಿಯಲಿಕ್ಕಿದ ರಾಮ
ನೋಡಿದ ತನ್ನ ಎಡಬಲವ |
ಓಡಿಹೋದನು ರಾಯ ಆರೆಯರ [ದ]ಳನೆಲ್ಲ
ಕೂಡಿ ಬಂದಿತು ನಮ್ಮ ಬಲವು || ೫೦ ||

ಕಡೆಯ ಕಾಳಗ ಮಾಡಿ ಗಡಿಯಂಕ ಚೆನ್ನನು
ಒಡೆಯಗೆ ಬಂದು ಕೈಮುಗಿದ |
ಹಿಡಿಸು ರಾಮಯ್ಯ ಧರ್ಮಗಾಳೆಯನಿನ್ನು
ನಡೆಯಿನ್ನು ಹೋಗುವ ತಿರುಗು || ೫೧ ||

ರಂಗುಮೊಟ್ಟೆ ಕಟ್ಟಿದವರುಂಟೆ ಲೋಕದೊಳು
ಸಂಗ್ರಾಮಧೀರ ವಜೀರ |
ಮುಂಗಡೆಯಲಿ ಬಂದು ಕಾಟಣ್ಣ ಕೂಡಿದ
ಸಂಗಾತ ಅಣ್ಣತಮ್ಮಗಳು || ೫೨ ||

ಹಿಡಿಯೆಂಬ ಧರ್ಮಗಾಳೆಯನು ರಾಮಯ್ಯನು
ಹಿಡಿಸಿ ಮುಂದಕೆ ನಡೆಸಿದನು |
ಒಡನೈದು ಮಂದಿ ಮನ್ನೆಯರು ತಾ ಸಹವಾಗಿ
ಕಡುಗಲಿ ಹಿಂದಕ್ಕೆ ತೆರಳಿ || ೫೩ ||

ತನ್ನೊಡನಿದ್ದೈವರು ಬಿಲ್ಲುಕಾರರು
ಮನ್ನೆಯ ಮಕುಟವರ್ಧನರು |
ಸನ್ನುತವನು ಮಾಡಿ ಕಡಿದೊಟ್ಟಿ ರಣದೊಳು
ತನ್ನರಮನೆಗಾಗಿ ತಿರುಗಿ || ೫೪ ||

ಅರಮನೆಗೈದರು ಆ ಕ್ಷಣ [ದ]ಲತ್ತವು
ಧುರಧೀರ ಜಗದಪ್ಪನೊಡನೆ |

ಮುರಿದೋಡಿಹೋಗಿ ಪೇಳ್ದರು ತಮ್ಮರಸಗೆ
ಧುರಧೀರ ರಾಮನ ಬಿರಿದ || ೫೫ ||

ಬಿರಿದ ಕೇಳಿದನಾಗ ಜಗದಪ್ಪರಾಯನು
ಭರದಿ ವಾಜಿಗಳೈದ ನೋಡಿ || ೫೬ ||

ಮಗಳ ಕಪ್ಪವನಿತ್ತು ಜಗದಪ್ಪರಾಯನು
ನಗುತ ವಾರುವನೈದ ನೋಡಿ |
ಸೊಗಸಿನ ತೇಜಿಯು ಸಹ ಕನ್ನೆಯ ಬೇಗ
ಮಿಗೆ ಕೊಟ್ಟು ಒಂದಾದನಾಗ || ೫೭ ||

ಮಂತ್ರಿಗಳೆರಡು ಮಾತಾಡಲು ರಾಮಯ್ಯ
ನಂತವನೆಲ್ಲಿ ಪುಟ್ಟುವನು |
ಕಂತುಹರನ ವರದಿಂದ ಪುಟಿದವನ
ನೆಂತೆಂದು ನೋಡಲಿಬ್ಯಾಡ || ೫೮ ||

ಬಿರಿದಂಕನಾದ ಕಾರಣದಿಂದ ಡಿಳ್ಳಿಯ
ಸುರಿತಾಳನವರ ಪಾವುಗೆಯ |
ಧರೆಯೊಳು ಮೆಟ್ಟಿ ದಕ್ಕಿಸಿಕೊಂಡನಲ್ಲದೆ
ಮರುಳರಾದರಿಗೆ ದಕ್ಕುವುದೆ || ೫೯ ||

[ದ್ವಾಪರದ]ಲ್ಲಿ ತಾ ಪಾರ್ಥನು ಜನಿಸಿದ
ಭೂಪ ಕಂಪಿಲನ ಗರ್ಭದಲಿ |
ಈ ಪರಿ ಬಿರಿದನು ಪೊಗಳಿಸಿ ನಡೆದಂತು
ಮಾಪತಿ ದಯವುಂಟು ಅವಗೆ || ೬೦ ||

ಪರನಾರಿಯ ಸಹೋದರನೆಂಬ ಬಿರಿದನು
ಧರಿಸಿದನಂತೆ ಕಾಲೊಳಗೆ |
ಧರೆಯೊಳು ಈ ಬಿರಿದ ದಕ್ಕಿಸಿಕೊಂಬಂಥ
ದೊರೆಯುಂಟೆ ಮೂರು ಲೋಕದೊಳು || ೬೧ ||

ಸುರರೊಳು ನರರೊಳು ನಾರಿಗೆ ಸೋಲದ
ಪುರುಷರಿನ್ನುಂಟೆ ಲೋಕದೊಳು |
ಪರನಾರಿ ಶಾಪವು ಮುನ್ನುಂಟು ಪಾರ್ಥಗೆ
ಪರಿಹರಿಸಿಕೊಂಬರೆ ಬಂದು || ೬೨ ||

ಆದ ಕಾರಣದಿ ಮಗಳ ಕೊಟ್ಟೆ ಮಂತ್ರೀಶ
ಚದುರ ರಾಮಯ್ಯಗೆ ನಾನು |

ಮದುವೆಯ ಮಾಡಿಕೊಂಡು ನೀ ಬಾರೈ ಚಂದ್ರ
ವದನೆ ರಾಮಲದೇವಿಯನು || ೬೩ ||

ಇತ್ತ ಜಗದಪ್ಪನು ಮದುವೆಯ ಸಂಭ್ರಮ
ಅತ್ತ ಕಂಪಿಲರಾಯನ ಮಗನ |
ಎತ್ತಿ ಮುದ್ದಾಡಿ ಮಗನ ಮುಖವನು ನೋಡಿ
ಮುತ್ತಿನ ತುರಾಯವ ಕೊಟ್ಟ || ೬೪ ||

ಅರ್ತಿಯಿಂದಾರತಿಗಳ ತಂದು ಹರಿಯಮ್ಮ
ಮೊತ್ತರ ಹೆಮ್ಮಕ್ಕಳೊಡನೆ |
ಎತ್ತಿಸಿ ನಾನಾ ಪರಿಯ ನಿವಾಳಿಯ
ಮತ್ತೆ ತೆಗಸಿ ಕಾಡಿಗಿಡಿಸಿ || ೬೫ ||

ತಂದೆತಾಯಿ ಪಾದಕೆ ಬಿದ್ದನು ರಾಮಯ್ಯ
ವಂದಿಸಿದನು ಭಕ್ತಿಯಲಿ |
ಇಂದಾದ ರಾಜ್ಯವನೆಲ್ಲವ ಕೇಳುತ
ತಂದೆ ಮಕ್ಕಳು ಹರುಷದಲಿ || ೬೬ ||

ಸಕ್ಕರೆ ಚಿನಿಪಾಲು ತುಪ್ಪ ಮೃಷ್ಟಾನ್ನವು
ಚೊಕ್ಕಟ ಕಡುಬು ಕಜ್ಜಾಯ |
ಅಕ್ಕರದಿಂದ ಮಗನ ಕರೆದು ಕೂಡುಂಡು
ಚಿಕ್ಕರಮನೆಗಾಗಿ ನಡೆದ || ೬೭ ||

ಉದಯದೊಳೆದ್ದು ಊಟವ ಮಾಡಿ ಕಂಪಿಲ
ಸದರಿನೊಳಗೆ ಬಂದು ಕುರಿತ |
ಚದುರ ರಾಮಯ್ಯನ ಕರೆಸಿ ರಣಾಗ್ರದ
ಹದನ ಕೇಳುತ ಅರ್ತಿಯಿಂದ || ೬೮ ||

ನಿನ್ನೆ ರಣಾಗ್ರದೊಳ್ ಕಡಿದಾಡಿ ಬಂದಂಥ
ಮನ್ನೆಯರೆಲ್ಲರ ಕರೆಸು |
ಚೆನ್ನಾಗಿ ನೋಡಿ ನೋಡಿದಂಥ ಕಷ್ಟವ
ಮನ್ನಿಸು ರಾಮಯ್ಯನೆನುತ || ೬೯ ||

ಬೊಕ್ಕಸದೊಳಗಿಂದ ತರಿಸಿದ ಹಣ ಹೊನ್ನ
ಚೊಕ್ಕಟ ಒಡವೆ ವಸ್ತುಗಳ |
ಅಕ್ಕರ ಮಿಗೆ ಜವಳಿಯ ಜೀಬಿ ನಾಣ್ಯವ
ಇಕ್ಕಿದ ರಾಮಯ್ಯನೊಡನೆ || ೭೦ ||

ಕರೆಸಿದ ರಾಮಯ್ಯ ರಾಣುವೆ ಮಂದಿ ಮಕ್ಕಳ
ಧುರಧೀರ ಮನ್ನೆಯರುಗಳ |
ದೊರೆಯ ಮಕ್ಕಳು ರಾಹುತರು ಕುಮಾರರ
ಮರೆಯದೆ ಕರೆಸಿದ ರಾಮ || ೭೧ ||

ರಣರಂಗದೊಳು ಹೊಕ್ಕು ಹೆಣಗಿದ ಬಂಟರನು
ಎಣಿಕೆಯ ಮಾಡಿಸಿ ರಾಮ |
ಬಣವೆಯ ಹುಲ್ಲ ಬಸವಗೆ ಕೊಟ್ಟ ತೆರನಂತೆ
ಉಣಿಸಿದ ಮಂದಿ ಮಕ್ಕಳನು || ೭೨ ||

ಕಾಲಗಗ್ಗರ ಕೊಟ್ಟ ತೋಳಬಾಪುರಿ ಕೊಟ್ಟ
ಮೇಲಾಗಿ ಕೊಟ್ಟ ಚೌಕುಳಿಯ |
ಸಾಲು ಮೋಹನ್ಮಾಲೆ ಸರಗಳ ಕೊಟ್ಟನು
ಕಾಲಸರವ ಕೊಟ್ಟ ರಾಮು || ೭೩ ||

ಹೊನ್ನ ಗಂಟೆಯ ಕೊಟ್ಟ ಪುಲಿಯ ಚರ್ಮವ ಕೊಟ್ಟ
ಮನ್ನಿಸಿ ಕೊಟ್ಟ ಚೌರಿಗಳ |
ಚೆನ್ನನ ಸರ ಮುತ್ತು ತೊಡರು ಬಾಪುರಿಗಳ
ಚೆನ್ನಾಗಿ ಕೊಟ್ಟ ರಾಮಯ್ಯ || ೭೪ ||

ಊರು ಉಮ್ಮಳಿ ಕೊಟ್ಟ ಭಾರಿ ನಿಗಳವ ಕೊಟ್ಟ
ಹಾರುವ ಉಡಾಸವ ಕೊಟ್ಟ |
ನಾರಂಜಿ ತೋಪಿಗಳ ಕೊಟ್ಟನು ರಾಮಯ್ಯ
ಮೀರಿದ ಬಿರಿದುಗಳ ಕೊಟ್ಟ || ೭೫ ||

ಹಗಲು ದೀವಿಟಿಗೆ ಕೊಟ್ಟ ಮಿಗೆ ಜಲ್ಲಿಗಳ ಕೊಟ್ಟ
ಜಗಜಂಪಿನ ಸತ್ತಿಗೆಗಳನು |
ಮಿಗಿಲು ವಸ್ತ್ರವ ಕೊಟ್ಟ ಮುತ್ತಿನೊಂಟಿಯ ಕೊಟ್ಟ
ಜಗಳಕ್ಕೆ ಕೊಟ್ಟ ಆಯುಧವ || ೭೬ ||

ಆನೆ ಕುದುರೆ ಕೊಟ್ಟ ಸೇನೆ ಭಂಡಾರ ಕೊಟ್ಟ
ಮಾನನಿಧಿ ಮದುವೆಗೆ ಕೊಟ್ಟ |
ಬೋನಕ್ಕೆ ಕೊಟ್ಟ ಗದ್ದೆಯು ಹೊಲ ಮಾನ್ಯವ
ಆನಂದ ಅರ್ತಿಲಿ ರಾಮ || ೭೭ ||

ತೊಡ[ರು] ಬಾಪುರಿ ಕೊಟ್ಟ ನಡುವಿನೊಡ್ಯಣ ಕೊಟ್ಟ
ಉಡಿದಾರ ವಂಕುಡಿ ಕೊಟ್ಟ |

ಬಡತನವನು ನೋಡಿ ಹೊನ್ನು ಹಣಗಳ ಕೊಟ್ಟ
ಎಡರಿಲ್ಲದಂತೆ ರಾಮಯ್ಯ || ೭೮ ||

ಗಾಯದವರಿಗೆ ಕೊಟ್ಟ ಬಾಯಿತುಂಬ ಹೊನ್ನ
ಆಯುತವಾದ ಉಡುಗೊರೆಯ |
ಗಾಯದಾರೈಕೆಗೆ ಕೊಟ್ಟನು ಹಿಡಿ ಹೊನ್ನ
ಆಯುತವಾಗಿ ರಾಮಯ್ಯ || ೭೯ ||

ಸತ್ತವರ ಮಕ್ಕಳ ಕರೆಸಿದ ರಾಮಯ್ಯ
ಮುತ್ತು ಬಂಗಾರವ ಕೊಟ್ಟ |
ಹೆಚ್ಚ ತಂದೆಯ ಮರೆಯದೆ ನಡೆವಂತೆ
ಒತ್ತಿ ಹೇಳಿದನು ಕಂಪಿಲನು || ೮೦ ||

ಈ ಪರಿಯಲಿ ರಾಮ ಮಂದಿ ಮಕ್ಕ[ಳಿಗೆ]ಲ್ಲ
ಭೂಪತಿ ಸಮದಾಸಿ ಕೊಟ್ಟ |
ಅಪಾರವಾಗಿ ಉಡುಗೊರೆ ಗಂಧ ವೀಳ್ಯವ
ಭೂಪ ಕೊಡಿಸಿದನೆಲ್ಲರಿಗೆ || ೮೧ ||

ಮೊತ್ತದ ವೀಳ್ಯವ ಕೊಡಿಸಿದ ರಾಮಯ್ಯ
ಇತ್ತನೆಲ್ಲರಿಗೆ ಅಪ್ಪಣೆಯ |
ಹೆತ್ತ ತಂದೆಯ ಪಾದಕೆ ಬಿದ್ದು ರಾಮಯ್ಯ
ಒತ್ತಿ ನಡೆದನರಮನೆಗೆ || ೮೨ ||

ಮಗನ ಸಂತೋಷದ ಮಿಗೆ ನೋಡಿ ಕಂಪಿ
ಮುಗುಳು ನಗೆಯಲ್ಲಿ ನಗುತಿರ್ದ |
ಬಗೆಯೇನೊ ಮಂತ್ರಿ ರಾಮಯ್ಯನೆದ್ದು ಪೋದ
ಸೊಗಸು ತಿಳಿಯದು ನಮಗೆಂದ || ೮೩ ||

ಕನ್ನೆ ಹುಯ್ಯಲ ಕಡಿದುಬಂದ ರಾಮಯ [ಗೆ]
ಇನ್ನೇನ ಕೊಡಬೇಕು ಮಂತ್ರಿ |
ಕನ್ನೆವೆಣ್ಣುಗಳೈದು ಧಾರೆಯೆರೆಯಲಿ ಬೇಕು
ಉನ್ನತ ಹರುಷದೊಳ್ ನಾವು || ೮೪ ||

ಬಿರುದಿಗೆ ಒಂದೊಂದು ಒಡವೆಯ ಕೊಡಬೇಕು
ಮನೆಯ ಮಾತಿನ್ಯಾಕೆ ರಾಯ |
ಧರೆಯ ರಾಯರಗಂಡನೆಂದು ಹೊಗಳಿಸುವನು
ಅರಿಕೆಯಿಲ್ಲವೆ ನಿನ್ನ ಮನಕೆ || ೮೫ ||

ಹಿರಿಯ ನೀ ಬೈಚಪ್ಪ ಹೇಳಿದ ಮಾತಿಗೆ
ಅರೆಮರೆಯುಂಟೆ ನಮ್ಮೊಳಗೆ |
ದೊರೆತನ ರಾಮಗೆ ಮಾಡುವೆ ನಾ ಮುಂದೆ
ಬರಿಯ ಮಾತಲ್ಲವೊ ಮಂತ್ರಿ || ೮೬ ||

ಭಾವ ಮಂಚಣ್ಣನ ಮಗಳೊಂದು ನೀ ನೋಡು
ಭಾವೆ ರಾಮಲದೇವಿಯೊಡನೆ |
ಮಾವ ಚಾರಮನ ಮೊಮ್ಮಕ್ಕಳು ಇಬ್ಬರ
ಭಾವಿಸಿ ನೋಡು ಬೈಚೊಂಬ || ೮೭ ||

ಇನ್ನೊಂದು ಕನ್ನಿಕೆ ನಿನ್ನಲ್ಲಿ ನೀ ನೋಡು
ಕನ್ನೆವೆಣ್ಣುಗಳೈದ ಮಾಡೊ |
ಜೊನ್ನಿನ ಕಳೆ ರೂಪು ಲಕ್ಷಣಂಗಳ ನೋಡಿ
ಚೆನ್ನಾಗಿ ಮದುವೆಯ ಮಾಡು || ೮೮ ||

ಕನ್ನೆ ಹುಯ್ಯಲ ಕಡಿದು ಹೆಣ್ಣುಗಳ ಮದಿವಾದ
ಚೆನ್ನಿಗ ರಾಮಯ್ಯನೆಂದು |
ಉನ್ನತ ಕೀರ್ತಿಯ ಪಡೆದನು ಜಗದೊಳು
ಕನ್ನೆ ಜಗಳದ ಸಂಧಿ ಮುಗಿಯೆ || ೮೯ ||

ಇದು ಪರನಾರಿ[ಸೋ]ದರ ರಾಮನಾಥನ
ಪದ[ಕೃತಿಯೊ]ಳಗೊಂಡು ಪದನು |
ಕದನವ ಗೆಲಿದು ರಾಮಲದೇವಿಯನು
ತಂದ ಕದನದ ಸಂಧಿ ಸಂಪೂರ್ಣ || ೯೦ ||

**ಅಂತು ಸಂಧಿ ೬ಕ್ಕಂ ಪದನು ೩೭೦ಕ್ಕಂ ಮಂಗಳ ಮಹಾಶ್ರೀ**

## ಸಂಧಿ ೭ - ಕೊಮಾರ ರಾಮಯ್ಯನ ಮದುವೆ

ರಾಮನ ನೆನೆ ಕಂಡ್ಯಾ ಮನವೆ ಜಟ್ಟಂಗಿಯ
ರಾಮನ ನೆನೆ ಕಂಡ್ಯಾ ತನುವೆ |
ರಾಮರಾಮಾ ಎಂಬ ನಾಮವ ನೆನೆದರೆ
ಕಾಮಿತ ಫಲವೀವ ರಾಮ || ೧ ||

ನಂದಿವಾಹನರೂಢ ನಾಗಭೂಷಣ [ಹ]ರ
ಕಂದುಗೊರಳ ಸದಾಶಿವನೆ |

ಇಂದುಧರನೆ ಈಶ ಪರಮೇಶ ಉಮೆಯರಸ
ಚಂದ್ರಮೌಳೀಶ ಕೊಡು ಮತಿಯ || ೧ ||

ಉದಯಕಾಲದೊಳೆದ್ದು ಸದರಿಗೆ ಬಂದು ಕಂಪಿಲ
ಮುದದಿಂದ ಮಂತ್ರಿಯ ಕೂಡ |
ಹದನೇನೊ ಮುಂದೆ ಕಾರ್ಯಂಗಳು ಬೈಚಪ್ಪ
ಒದಗೀತು ಮುಂದೆ ಕಾಳಗವು || ೩ ||

ಡಿಳ್ಳಿಯ ಖಾನ ವಜೀರರು ಬಂದಿನ್ನು
ತಳ್ಳಿಯ ಮಾಡಿ ಪೋದುದನು |
ಒಳಿತಾಗಿ ನೀನು ಕಣ್ಣೆಲಿ ಕಂಡೆಲ್ಲ [ವೆ]
ಕಳಬಂಟರ ನೀನು ಕಳುಹೋ || ೪ ||

ಒಳಹೊಕ್ಕು ಹೋಗಿ ಪಟ್ಟಣದೊಳು ಸುದ್ದಿಯ
ಒಳಿತಾಗಿ ತಿಳಿದು ತಾ ಬರಲು |
ಇಳೆಗೆ ಪಾಚ್ಛಾವ ಸುರಿತಾಳನ ಮನಸನು
ತಿಳಿಯಬೇಕೆಂದನು ರಾಯ || ೫ ||

ಇತ್ತ ಮಂತ್ರಿಯ ಕೂಡ ಮಾತಾಡುತಿರಲಾಗ
ಗುತ್ತಿಯ ರಾಯನ ಚರರು |
ಮತ್ತೋಡಿ ಬಂದು ಬಾಗಿಲ ಗೊಲ್ಲರ ಕೂಡೊಂದು
ಅರ್ತಿಯ ಸುದ್ದಿಯ ಪೇಳೆ || ೬ ||

ಬಾಗಿಲ ಗೊಲ್ಲರು ಬಂದಡ್ಡ ಬಿದ್ದರು
ಈಗ ಬಂದರು ಗುತ್ತಿ ಚರರು |
ಸೋಗೆಗಣ್ಣರಸ ರಾಮಯ್ಯನ ಮದುವೆಗೆ
ಸಾಗಿ ಬರುತಾರಂತೆ ರಾಯ || ೭ ||

[ಬಂದಿಹ ಚರರ] ಕರೆಸಿಕೊಂಡನು ರಾಯ
ಇಂದ್ಯಾಕೆ ಬಂದಿರೆಂದೆನುತ |
ಚೆಂದಾಗೆ ಜಗದಪ್ಪ[ನಿಂ]ದ ಸುದ್ದಿಗಳೇನು
ವೊಂದಿಲಿ ಪೇಳಿ ನೀವೆನಲು || ೮ ||

ಮಗಳು ರಾಮಕ್ಕನ ಕೊಡತಕ್ಕ ಮಾತಿಗೆ
ಜಗದೊಳು ತಪ್ಪುವರುಂಟೆ |
ಸೊಗಸಿಂದ ನಾಳೆ ಕೇಳು[ವ] ಸುದ್ದಿಯ [ಇಂದು]
ಜಗದಪ್ಪ ಕಳುಹಿದನರಸೆ || ೯ ||

ಸಂತೋಷದ ಸುದ್ದಿಯ ಕೇಳುತ ರಾಮನ
ಪಂಥವ ನೋಡೊ ಬೈಚಪ್ಪ |
ಬಂದವರಿಗೆ ಉಡುಗೊರೆಯನು ಕೊಡಿಸಿದ
ಅಂದವರನು ಕಳುಹಿದನು || ೧೦ ||

ಹಿಂದಕ್ಕೆ ಚರರೋಡಿ ಬಂದು ಜಗದಪ್ಪಗೆ
ವಂದಿಸಿ ಕರಗಳ ಮುಗಿದು |
ಹೊಂದಿಕಾಯಿತು ನಿಮ್ಮ ಅವರಂತರಂಗವು
ಕುಂದಿಲ್ಲ ಅವರಲ್ಲಿ ಅರಸೆ || ೧೧ ||

ಸಕ್ಕರೆ ಸವಿದಂಥ ಸುದ್ದಿಯ ಕೇಳುತ
ಹೊಕ್ಕನು ಹರುಷ ಸಾಗರವ |
ಅಕ್ಕರೆ ಕುವರ ಉತ್ತುಂಗರಾಯನ ಕರೆದು
ಅಕ್ಕನ ಕೂಡೆ ಹೋಗೆಂದ || ೧೨ ||

ಮಗಳಿಗೆ ಕೊಟ್ಟನು ಮುತ್ತು ಬಂಗಾರವ
ಬಗೆಬಗೆ ಆಭರಣಗಳ |
ಅಗಣಿತವಾದ ಐದೂರು ಉಮ್ಮಳಿಯನು
ಮಗಳ ಮೈದೊಡಿಗೆ ವಸ್ತುಗಳ || ೧೩ ||

ಅಳಿಯಗೆ ಕೊಟ್ಟನು ಮಿಗೆ ಐದು ತೇಜಿಯ
ಬಳುವುಲಿ ಕೊಟ್ಟಾಕಳ ಹಿಂಡ |
ಸೆಳೆಮಂಚ ಕರೆವೆಮ್ಮೆ ಹಿಂಡನೆ ಹೊಡೆಸಿದ
ಒಳಿತಾಗಿ ಕೊಟ್ಟ ಜಗದಪ್ಪ || ೧೪ ||

ಮಗನು ಮಂತ್ರಿಯು ತಿಮ್ಮರಸನ ಕೂಡಿಸಿ
ಜಗದೊಳು ಅತಿ ಪ್ರೀತಿಯಿಂದ |
ಸೊಗಸಾಗಿ ನಿಬ್ಬಣ ಸೋಬನವ ಪಾಡುವ
ಮೃಗನೇತ್ರೆ ನಡೆದ[ಳ]ರ್ತಿಯಲಿ || ೧೫ ||

ತಂದೆಯ ಪಾದಕ್ಕೆ ತಾಯಿ ಪಾದಕೆ ಬಿದ್ದು
ಚಂದಿಸಿ ಕರಗಳ ಮಗಿ[ಯೆ] |
ಸಂದೇಹವ್ಯಾಕಮ್ಮ ತಮ್ಮನು ಬರುತಾನೆ
ಎಂದನು ಜಗದಪ್ಪರಾಯ || ೧೬ ||

ಊಳಿಗದ ಹೆಂಗಳು ನಾಲ್ವತ್ತು ಮಂದಿಯು
ಕಳಸ ಚೌರಿಗಳು ಕನ್ನಡಿಯು |

ಮೇಳವಿಸಿದ ಗಿಂಡಿ [ಹಡಪದ] ಸ್ತ್ರೀಯರ
ಕಳೆಯನಾನೆಂತು ಪೇಳುವೆನು || ೧೭ ||

ಮಂತ್ರಿ ಮನ್ನೆಯರು ಅರಸುಮಕ್ಕಳು ಸಹ
ತಂತ್ರ ವೇದಾಂತ ಪಾಠಕರು |
ಅಂತು ಜೋಯಿಸರು ಸಕಲ ವಿದ್ವಾಂಸರು ಅ
ನಂತ ಕಾಲದ ಹಿರಿಯರುಗಳು || ೧೮ ||

ಸಂಗಾರ ಸಾವಿರ ಕುದುರೆ ಮಂದಿಯ ಕೊಟ್ಟು
ತ್ತುಂಗ[ದ] ತೇಜಿಯ ಕೊಟ್ಟ |
ಶೃಂಗಾರವ ಮಾಡಿ ಕಳುಹಿ ಕೊಟ್ಟನು ಬೇಗ
ಮಂಗಳ ಶುಭಕರವೆನುತ || ೧೯ ||

ಸಾಗಿ ಕಳುಹಿಸಿದನು ಗಾವುದ ದಾರಿಯನು
ಝೂಗಿಸಿ ಹಿಂದಕ್ಕೆ ತಿರುಗಿ |
ಸಾಗಿತು ಪ್ರಯಾಣ ಉತ್ತುಂಗರಾಯನು
ಬೇಗದಿ ನಡೆದ ಕುಮ್ಮಟಕೆ || ೨೦ ||

ಮುಂದಾಗಿ ಚರರನು ಕಳುಹಿಸಿ ಕೊಟ್ಟನು
ಹಿಂದಾಗಿ ಬರುತೆವೆಂದೆನುತ |
ಸಂಧಿಸಿ ಸುದ್ದಿಯ ಪೇಳಿರಿ ನೀವೆಂದು
ಮುಂದಾಗಿ ಆಳ ಕಳುಹಿದನು || ೨೧ ||

ಬಂದ ಸುದ್ದಿಯ ಕೇಳಿ ಕಂಪಿಲ ಕಾಟಣ್ಣ
ಬಂದನು ಹೊಸ ಚಾವಡಿಗೆ |
ಮಂದಿ ಮನ್ನೆಯರು ಕುದುರೆಯ ಪೌಜ ಕರೆಸಿದ
ವೊಂದಿಲಿ ಅರಸುಮಕ್ಕಳನು || ೨೨ ||

ಹಂಪರಾಜನು ಕಂಪರಾಜ ಸಂಗಮದೇವ
ಇಂಪಾದ ದೊರೆಯ ಮಕ್ಕಳನು |
ಸಂಪಿಲಿ ವಂದಿಸಿ ಕರಕೊಂಡು ಕಾಟಣ್ಣ
ಹೊಂಪುಳಿಯಿಂದ ತಾ ಹೊರಟ || ೨೩ ||

ಅರಸುಮಕ್ಕಳು ತಾನು ಆನೆಯನೇರಿ[ಯೆ]
ಪರಿಪರಿ ವಾದ್ಯಗಳಿಂದ |
ಕರಕೊಂಡು ಬರುವ ಸಂಭ್ರಮದಲ್ಲಿ ಕಾಟಣ್ಣ
ಹರುಷದಿ ಹರಿದಾರಿಗಿದಿರ || ೨೪ ||

ಗುತ್ತಿಯ ಉತ್ತುಂಗರಾಯನ ಭೇಟಿಯ
ಅರ್ತಿಲಿ ತೆಕ್ಕೊಂಡ ಕಾಟ |
ಮತ್ತುಡುಗೊರೆ ಮಾಡಿ ಆನೆಯನೇರಿಸಿ
ಒತ್ತಿಲಿ ಕರೆತಂದನವರ || ೧೫ ||

ಸತ್ತಿಗೆ ಸತ್ತಿಗೆ ಸಾಲಿಟ್ಟು ಬರುವಾಗ
ಮುತ್ತಿನ ಸತ್ತಿಗೆ ಕೆಳಗೆ |
ಉತ್ತುಂಗರಾಯನು ಬರುವಂಥ ಸಂಭ್ರಮ
ಅರ್ತಿಯ ನೋಡುತ ಜನರು || ೧೬ ||

ಕನ್ನೆ ನಗಾರಿಯು ಚೆನ್ನಾಳೆ ವಾದ್ಯದ
ಉನ್ನತ ರಭಸಗಳಿಂದ |
ಮನ್ನೆಯರು ಮಂದಿ ಕುದುರೆ ಎಡಬಲದಲ್ಲಿ
ಚೆನ್ನಾಗಿ ನೋಡುತ ಜನರು || ೧೭ ||

ಪಲ್ಲಕ್ಕಿ ಪಲ್ಲಕ್ಕಿ ಸಾಲಿಟ್ಟು ಬರುವಾಗ
ಎಲ್ಲ ಹೆಂಗಳು ಕೂಡಿಕೊಂಡು |
ನಿಲ್ಲದೆ ರಾಮಲದೇವಿ ತಾ ಬರುವಂಥ
ಉಲ್ಲಾಸವನು ಕಂಡ ಜನರು || ೧೮ ||

ಬಂದನು ಕಾಟಣ್ಣ ಕರಕೊಂಡು ರಾಮಯ್ಯನ
ಮುಂದಣ ಶೃಂಗಾರವನಕೆ |
ಬಗೆಬಗೆ ರತ್ನಪೀಠಂಗಳ ಕಾಟಣ್ಣ ತಂದು
ಇಳುಹಿದನು ಕೋಟೆಗಳ || ೧೯ ||

ಎಂದ ಮಾತನು ಕೇಳಿ ಎದ್ದನು ಕಂಪಿಲ
ಬಂದವರಿಗೆ ಇದಿರ ತಾನು |
ಮಂದಿ ಮಕ್ಕಳ ಕೂಡಿಕೊಂಡು ತಾ ನಡೆದನು
ಬಂದನುತ್ತುಂಗನ ಬಳಿಗೆ || ೨೦ ||

ಎತ್ತ ಉತ್ತುಂಗರಾಯನ ತಬ್ಬಿಕೊಂಡನು
[ಮುದ್ದಾಡಿ]ಮೋಹದಿ ಕುಳಿತು |
ಇದ್ದಂತ ಕ್ಷೇಮ ವಾತೆಗಳನೆಲ್ಲವ ಕೇಳಿ
ಎದ್ದನು ಬೇಗ ಕಂಪಿಲನು || ೨೧ ||

ಉಡುಗೊರೆಯನು ಕೊಟ್ಟ ಉತ್ತುಂಗರಾಯಗೆ
ಒಡನೆದ್ದು ಗಂಧ ಪರಿಮಳವ |

ಕೊಡುವಂತೆ ಮಾಡಿ ಎಬ್ಬಿಸಿಕೊಂಡು ಬಂದನು
ಬಿಡಿದಿಯ ಮನೆಗಾಗಿ ಸಾಗಿ || ೩೧ ||

ಬಂದರು ಬಿಡಿದಿಯ ಮನೆಗಾಗಿ ಕರಕೊಂಡು
ನಿಂದೆರಡು ಕುರಿಯ ಬಾಗಿಲಿಗೆ |
ಬಂಧಿಸಿ ಕಡಿಸಿ ನಿವಾಳಿಯ ತೆಗೆಸಿದ
ಹಿಂದೆ ಹೊಕ್ಕರು ಬಿಡದಿ ಮನೆಯ || ೩೩ ||

ಅಲ್ಲಿ ಕುಳಿತು ಸಮೆದನು ರಾಯರಾಯನು
ಎಲ್ಲ ಉಲುಪೆಗಳ ತರಿಸಿದನು |
ಬಲ್ಲಿದ ಕಂಪಿಲರಾಯಗೆ ಉಡುಗೊರೆ
ವೀಳ್ಯದ ಕೊಟ್ಟ ಉತ್ತುಂಗ || ೩೪ ||

ಬಂದಳು ರಾಮಕ್ಕ ತಂದಳು ಬಳುವುಲಿಯ
ಒಂದಾನೆ ವಾಜಿಗಳೈದು |
ಮುಂದೊಂದು ಹಿಡಿ ತೇಜಿ ಬಲ್ಲೆಯವಂ ಕೂಡಿ
ತಂದೆವು ರಾಮಯ್ಯನೆನಲು || ೩೫ ||

ಆಕಳ ಹಿಂಡು ಎಮ್ಮೆಯ ಹಿಂಡು ಸೆಳೆಮಂದ-
ಗೋಕುಲವಾದುವೈದೂರು |
ಏಕಾತ [ಸೆ]ಳೆಮಂಚ ಲೇಪು ಸುಪ್ಪತ್ತಿಗೆ
ಶ್ರೀಕಾಂತೆ ರಾಮಕ್ಕ ಸಹಿತ || ೩೬ ||

ತಂದೆವು ನಿಮ್ಮ ಬಳಿಗೆ ನಾವು ಮಾವಾಜಿ
ತಂದೆ ಜಗದಪ್ಪ ಕಳುಹಿದನು |
ಹಿಂದುವರಾಯ ರಾಮಯ್ಯನ ಮದುವೆಗೆ
ಬಂದೆವು ಕಂಪಿಲ ಮಾವಾ || ೩೭ ||

ಸೊಸೆಯು ರಾಮಕ್ಕನು ವಂದಿಸಿ ಮಾವಗೆ
ಮುಸುಕ ತೆಗೆದು ಅಡಡಬೀಳೆ |
ಸೊಸೆಯಳ ಮಂಡೆಯೊಳ್ ಕೈಯಿಟ್ಟು ಹರಸಿದ
ಹಸುಮಕ್ಕಳನು ಪಡೆಯೆನುತ || ೩೮ ||

ಕರೆಸಿದನಾಗ ವಿದ್ವಾಂಸ ಜೋಯಿಸರ
ಕರೆಸಿದ ವೇದ ಪಾಠಕರ |
ಕರೆಸಿದ ಶಾಸ್ತ್ರ ಪುರಾಣ ಅವಧಾನಿಗಳ
ಕರೆಸಿದ ಮಾನ್ಯ ಹಿರಿಯರ || ೩೯ ||

ಬಂದ ಶಾಸ್ತ್ರಿಗಳು [ಪಾಠಕರು] ನೀವೆಲ್ಲರು
ಒಂದು ಲಗ್ನವನು ನಿಶ್ಚೈಸಿ |
ಕಂದ ರಾಮಯ್ಯಗೆ ಶುಭ ಮುಹೂರ್ತದೊಳ್ನೀವು
ನಿಂದುಧಾರೆಯನೆರೆಯಿರೆಂದ || ೪೦ ||

ಎಲ್ಲರು ಗುಣಿಸಿಕೊಂಡರು ಲಗ್ನವ ತಾವು
ಒಳ್ಳೆಯ ಬಲುಮೆಯ ದಿನದಿ |
ಎಲ್ಲ ದೋಷಂಗಳ ಕಳೆದು ಉಳಿದದೊಂದು
ಬಲ್ಲಿದ ಲಗ್ನವನಿಟ್ಟು || ೪೧ ||

ಮಾಘ ಶುದ್ಧ ತದಿಗೆಯ ಗುರುವಾರವು
ಯೋಗ ಅಮೃತಸಿದ್ಧಿ ದಿನವು |
ಯೋಗ ಭಾಸ್ಕರ ಉದಿಸಿದ ಹತ್ತು ಗಳಿಗೆಯ
ಸಾಗಿಸೊ ರಾಯ ನೀನೆನಲು || ೪೨ ||

ಇಂದಿಗೈದು ದಿನ ಬಂದಿತು ಲಗ್ನವು
ಚೆಂದದಿ ಮದ[ಲ]ಗಿತ್ತಿಯನು |
ಮುಂದಾಗಿ ಮಾಡಿಸಿ ಎನುತ ಜೋಯಿಸರಿಗೆ
ನಿಂದು ಪೇಳಿದನಾಗ ರಾಯ || ೪೩ ||

ಎಲ್ಲರ ಮನ್ನಿಸಿ ಎದ್ದನಾ ಕಂಪಿಲ
ತನ್ನರ ಮನೆಗಾಗ ನಡೆದ |
ಬಲ್ಲಿದ ಮಂತ್ರಿ ಬೈಚಪ್ಪನ ಕರಕೊಂಡು
ಉಲ್ಲಾಸದಿಂದಿಬ್ಬರು ಕೂಡಿ || ೪೪ ||

ಮದಲಿಂಗನಾಗಲಿ ರಾಮಯ್ಯನೆನುತಲಿ
ಮದುವೆ ಇಂದಿಗೆ ಐದು ದಿನವು |
ಒದಗಾಗಿ ಏಳೆಂದು ಹರಿಯಲದೇವಿಗೆ ಹೇಳಿ
ಕದಲಿದರು ಮಂಚಣ್ಣನ ಮನೆಗೆ || ೪೫ ||

ಬಂದ ರಾಯನ ಕಂಡು ವಂದಿಸಿ ಮಂಚಣ್ಣ
ಇಂದೇನು ಪ್ರಸ್ತವೆಂದೆನಲು |
ಬಂದೆವು ನಿನ್ನ ಮಗಳು ಕಾಮಕ್ಕನ
ಕಂದ ರಾಮಗೆ ಕೊಡಬೇಕು || ೪೬ ||

ಎಂದ ಮಾತನು ಕೇಳಿ ಬಡವರ ಮಕ್ಕಳ
ತಂದುಕೊಂಬುವರೆ ದೊರೆಗಳು |

ಇಂದ್ಯೆದು ಹೆಣ್ಣು ಮಾಡಲಿಬೇಕು ರಾಮಯ್ಯಗೆ
ಸಂದೇಹವ್ಯಾಕೊ ಮಂಚಣ್ಣ || ೪೭ ||

ಆಗಲಿ ರಾಯ ಒಳಿತಾಯಿತು ನಿಮ್ಮ
ಯೋಗವಿದ್ದಂತೆ ಮಾಡೆನಲು |
ಹಾಗಲ್ಲವೆಂದರೆ ಬಿಡುವನೆ ರಾಮಯ್ಯ
ಸಾಗಿಸಿ ಪ್ರಸ್ತವನೆಂದ || ೪೮ ||

ಅಲ್ಲಿಂದ ವೀಳ್ಯವ ಕೊಟ್ಟು ತಾವು ನಡೆದರು
ಮೆಲ್ಲನೆ ಆರೆಯ ದೊರೆಯ |
ಬಲ್ಲಿದ ಚಾರಮರಾಯನ ಅರಮನೆಗೆ
ನಿಲ್ಲದೆ ಬಂದರು ಆಗ || ೪೯ ||

ರಾಯ ಬಂದುದ ಕಂಡು ಆಲಯ ಬಾಲಯ
ಆಯತದಲಿ ಅಪ್ಪಿಕೊಂಡು |
ಬಾಯೆಂದು ಕರೆದು ಸಾದರಮಾಡಿ ಕುಳಿತಾಗ
ರಾಯರೆ ಬಂದಿರಿಂದ್ಯಾಕೆ || ೫೦ ||

ಹೇಳಯ್ಯ ಮಂತ್ರಿ ನಾವ್ಬಂದಂಥ ಕಾರ್ಯವ
ಕೇಳಲಿ ಚಾರಮರಾಯ |
ಭಾಳ ಪಂಥದಲಿರ್ದ ಜಗದಪ್ಪರಾಯನು
ಮಗಳನು ಕಳುಹಿದನವನು || ೫೧ ||

ಮಗಳು ರಾಮಕ್ಕನ ಮಿಗೆ ಐದು ಕುದುರೆಯ
ಜಗದಪ್ಪರಾಯ ಕಳುಹಿದನು |
ಜಗದೊಳಗ್ಯೆದು ಹೆಣ್ಣುಗಳ ರಾಮಯ್ಯಗೆ
ಸೊಗಸಿಂದ ನಾವ್ಮಾಡಬೇಕು || ೫೨ ||

ನಿಮ್ಮ ಹೆಮ್ಮಕ್ಕಳ ಇಬ್ಬರ ರಾಮಗೆ
ಮನ್ನಿಸಿ ನೀವ್ಕೊಡಬೇಕು |
ಉನ್ನತ ಹರುಷದಿ ವಿವಾಹ ಮಾಡಲಿಬೇಕು
ಮುನ್ನಿನ ಹಿರಿಯರು ನೀವು || ೫೩ ||

ಜಾತಿ ಭೇದಗಳುಂಟು ನಮಗು ನಿಮಗು ಮಂತ್ರಿ
ಯಾತರ ಮಾತುಗಳಯ್ಯ |
ನೀತಿದಪ್ಪುವರೆ ನೀವು ದೊರೆಗಳು ಬೈಚಪ್ಪ
ಕಾತರ ಮಾತುಗಳ್ಯಾಕೆ || ೫೪ ||

ನಿಮ್ಮ ಬೆಳಸು ನಿಮ್ಮ ಮಗಳ ಮಗ ರಾಮ
ಸುಮ್ಮನಲ್ಲವೊ ಸೋದರಿಕೆ |
ಕಮ್ಮಗೋಲನ ರೂಪ ದೊರೆ ರಾಮಯ್ಯಗೆ
ಒಮ್ಮನದಲಿ ಕೊಡಬೇಕು || ೫೫ ||

ಮಕ್ಕಳ [ಕರೆ]ದನು ಚಾರಮರಾಯನು
ನಕ್ಕನು ಮುಗುಳುನಗೆಯನು |
ಮಿಕ್ಕ ಮಾತುಗಳೇನು ಚೆಲುವ ರಾಮಯ್ಯನು
ಮಕ್ಕಳ ಕೊಡಬೇಕು ನೀವು || ೫೬ ||

ಹಿರಿಯರ ಮಾತಿಗೆ ಕಿರಿದು ಮಾಡುವರುಂಟೆ
ಹಿರಿ ಮಗ ವೆಂಕಟರಾಯ |
ಕಿರಿಯ ಮಗನು ಮಧುಸೂದನರಾಯನು
ಧರೆಯನಾಳುವ ರಾಮಯಗೆ || ೫೭ ||

[ಹಿಂ]ದುವ ರಾಮಗೆ ಒಂದೆ ಮನಸಿನೊಳು
ತಂದೆಯ ಮಾತನು ಕೇಳಿ |
ಬಂದ ಮಾತಿಗೆ ಮಾತ ಕೊಟ್ಟೆವು ಬೈಚಪ್ಪ
ಇಂದು ಪ್ರಸ್ತವ ಮಾಡಿಕೊಳ್ಳಿ || ೫೮ ||

ವೀಳ್ಯವ ಕೊಟ್ಟು ಒಳ್ಳೆಯ ಮಾತ ಕೈಕೊಂಡು
ನಿಲ್ಲದೆ ಬಂದರು ಮನೆಗೆ |
ಮೆಲ್ಲನೆ ಮದ[ಲ]ಗಿತ್ತಿಯ ಮಾಡುವುದಕ್ಕೆ
ಎಲ್ಲರ ಕಳುಹಿದ ರಾಯ || ೫೯ ||

ಮಕ್ಕಳ ಕರಕೊಂಡು ಬರಹೇಳಿ ರಾಯನು
ಪಲ್ಲಕ್ಕಿಯ ಕಳುಹಿದ ಬೇಗ |
ಅಕ್ಕ ಮಾರಮ್ಮ ಸಿಂಗಮ್ಮನವರು ತಾವು
ಗಕ್ಕನೆ ರಾಮಯ್ಯನೆಡೆಗೆ || ೬೦ ||

ಬಂದ ಮಕ್ಕಳ ತಬ್ಬಿಕೊಂಡಳು ಹರಿಯಮ್ಮ
ವಂದನೆ ಮಾಡಿದರವರು |
ಕಂದ ರಾಮಯ್ಯನ ಅರಿಷಿಣ ಎಣ್ಣೆ ಶ್ರೀ
ಗಂಧ ಜಾಜಿಯ ಪೂಮಾಲೆಗಳು || ೬೧ ||

ಅಣ್ಣ ರಾಮಯ್ಯನ ಕರೆದು ಅಕ್ಕರದಿಂದ ಕ
ಮ್ಮೆಣ್ಣೆ ಮಜ್ಜನಗಳ ಮಾಡಿ |

ಬಣ್ಣ ಶೃಂಗಾರದುಡುಗೊರೆ ಕೊಟ್ಟು ರಾಮಗೆ
ಎಣ್ಣೆ ಅರಿಷಿಣವ ಪೂಸಿದರು || ೬೨ ||

ಕರ್ಪೂರದಾರತಿ ಬೆಳಗಿಸಿ ಹರಿಯಮ್ಮ
ಒಪ್ಪದಿ ಶಾಶೆಯನಿಡಿಸಿ |
ಕಪ್ಪುಗೊರಳಸ್ವಾಮಿ ಕರುಣಿಸೊ ರಾಮಗೆ
ಒಪ್ಪಾದ ಹರಕೆಯನಿತ್ತು || ೬೩ ||

ಪಲ್ಲಕ್ಕಿಯನೇರಿ ನಡೆದಳು ಹರಿಯಮ್ಮ
ಮೆಲ್ಲನೆ ಮಂತ್ರಿಯ ಮನೆಗೆ |
ಎಲ್ಲರು ಎದ್ದು ವಂದಿಸಿ ಹರಿಯಮ್ಮಗೆ
ಕುಳ್ಳಿರಿ ನೀವು ಎಂದೆನುತ || ೬೪ ||

ಬಂದ ಪ್ರಸ್ತಗಳೇನು ಇಂದೆಮ್ಮ ತಾಯಿ ಮನೆಗೆ
ಕಂದ ರಾಮಯ್ಯಗೆ ಮಗಳ |
ಒಂದೆ ನೀತಿಯಲಿ ಕೊಡಬೇಕು ತಿಮ್ಮಾಯಿ
ಎಂದು ಕೇಳಿದಳು ಹರಿಯಮ್ಮ || ೬೫ ||

ನಿನ್ನ ಮಾತಿಗೆ ನಾವು ಬದಲುಂಟೆ ಹರಿಯಮ್ಮ
ಕನ್ನೆಯ ಮನದ ನೀತಿಯನು |
ಇನ್ನು ನೀ ಮಾಡಿಕೊ ಹೋಗೆಂದು ಬೈಚಪ್ಪ
ಚೆನ್ನಾಗಿ ಪೇಳಿದನಾಗ || ೬೬ ||

ಮದಲಗಿತ್ತಿಯ ಮಾಡಿ ವೀಳ್ಯ ಉಡುಗೊರೆ ಇತ್ತು
ಕದಲಿ ಮಂಚಣ್ಣನ ಮನೆಗೆ |
ಸುದತಿಗರಿಷಿಣ ಎಣ್ಣೆ ತೀಡಿ ಉಡುಗೊರೆ ಕೊಟ್ಟು
ಒದಗಿ ಬಂದಳು ಚಾರಮನೆಡೆಗೆ || ೬೭ ||

ತಂದೆಯ ಪಾದಕ್ಕೆ ವಂದಿಸಿ ಹರಿಯಮ್ಮ
ನಿಂದಳು ಅತಿ ಹರುಷದಲಿ |
ಕಂದ ರಾಮಯ್ಯಗೆ ಕೊಡು ಮೊಮ್ಮಕ್ಕಳ
ನೆಂದು ಕೇಳಿದಳು ಹರಿಯಮ್ಮ || ೬೮ ||

ಕರೆದನು ಮಮಕಾರದಲಿ ಮೊಮ್ಮಕ್ಕಳ
ಪರನಾರಿ ಸೋದರನೆಂಬ |
ಬಿರಿದು ಧರಿಸಿದ ರಾಮ ಸೋಮಾಯಿ ಭಿಮಾಯಿ
ಇರಬೇಕ ಸತಿ[ಯ]ರೊಂದಾಗಿ || ೬೯ ||

ಕನ್ನೆರೈವರು ನೀವು ಚೆನ್ನಾಗಿ ಇರಬೇಕು
ಮುನ್ನ ಮಾಡಿದ ಫಲವೈಸೆ |
ಉನ್ನತ ಸೇವೆಯ ಮಾಡಿ ಮೆಚ್ಚಿಸಬೇಕು
ಚೆನ್ನಿಗ ರಾಮಯ್ಯನೊಡನೆ || ೭೦ ||

ಇಷ್ಟು ಪ್ರಕಾರದಿ ನಗೆಗಳ ಮಾಡುತ
ಕೊಟ್ಟನು ತನುಜೆಯ ಕೈಗೆ |
ಇಟ್ಟನು ಒಡವೆ ವಸ್ತುಗಳಾಭರಣವ
ಪೆಟ್ಟಿಗೆ ಜವಳಿ ಪೆಂಡಿಗಳ || ೭೧ ||

ಮದಲಗಿತ್ತಿಯ ಮಾಡಿ ಹೊರಟಳು ಅಪ್ಪಗೆ
ಚದುರೆ ಕೈಮುಗಿದಳಾಕ್ಷಣದಿ |
ಒದಗಿಂದ ಹಿರಿಯ ಸೊಸೆ ರಾಮಕ್ಕನ ಕಂಡು
ಮದ[ಲ]ಗಿತ್ತಿಯನು ಮಾಡಿ[ದಳು] || ೭೨ ||

ಕೊಟ್ಟ ಪಟ್ಟೆಗಳಾಭರಣ ಮುತ್ತುಗಳನು
ಇಟ್ಟಳು ಗಂಧ ಪರಿಮಳವ |
ನೆಟ್ಟನೆ ಉಡುಗೊರೆ [ತೊ]ಟ್ಟು ಬಂದಳು ಬೇಗ
ಸೃಷ್ಟೀಶ ಕಂಪಿಲನೊಡನೆ || ೭೩ ||

ಹಂದರ ಹಾಲಗಂಬಗಳ ಹಾಕಿದರಾಗ
ಚೆಂದಚೆಂದದಲಿ ಶೃಂಗರಿಸಿ |
ಬಂದು ಕುಳಿತು ಕಂಪಿಲರಾಯ ಕರೆಸಿದ
ಅಂದು ಲಗ್ನಕ್ಕೆ ಎಲ್ಲರನು || ೭೪ ||

ಬಂದರು ಜೋಯಿಸ ಬ್ರಾಹ್ಮರು ಆಗಲೆ
ಬಂದವಧಾನಿ ಶಾಸ್ತ್ರಿಗಳು |
ಬಂದರು ವೇದಪಾರಾಣಾಯತರೆಲ್ಲ
ನಿಂದರು ರಾಯನ ಹುಜುರ || ೭೫ ||

ಬಂದಿತು ಅಮೃತದ ಸಿದ್ಧಿಯೋಗಂಗಳು
ಬಂದವು ಶುಭಮುಹೂರ್ತಗಳು |
ಎಂದು ರಾಮಯ್ಯನ ಕೊಡೆ ಪೇಳಿದರಾಗ
ವಂದಿಸಿ ಜೋಯಿಸರು ತಾವು || ೭೬ ||

ಕರೆಸಿದ ಊರೊಳಗಣ ಮಂತ್ರಿಗಳನು
ಕರೆಸಿದ ಅರಸುಮಕ್ಕಳು |

ಕರೆಸಿದ ಮನ್ನೆಯ ಮಾಂಡಲಿಕರನು
ಬಿರಿದಂಕ ಕಂಪಿಲರಾಯ || ೭೭ ||

ಪಟ್ಟಣದೊಳಗುಳ್ಳ ಶೆಟ್ಟಿ ವರ್ತಕರೆಲ್ಲ
ಪಟ್ಟಣವೆಲ್ಲ ಶೃಂಗರಿಸಿ |
ಹಟ್ಟಿಕಾರರು ಹಳ್ಳಿಕಾರರು ಕರಣಿಕರು
ನೆಟ್ಟನೆ ತಾವೆಲ್ಲ ಬಂದು || ೭೮ ||

ನಾನಾ ವಾದ್ಯಗಳು ನೌಬತ್ತು ನಗಾರಿಯು
ಸಾನಾಯಿ ಮೃದಂಗ ಡಿಂಡಿಮವು |
ಆನಂದದಿಂದ ಭೋರಿಡುವ ಚಿನ್ನಳೆಯು
ಏನ ಹೇಳಲಿ ಅರ್ತಿಯನು || ೭೯ ||

ರಾಹುತ ರಾಣೆಯ ಗುರಿಕಾರರೆಕ್ಕಟಿಗರು ಭಾವ
ದಿ ಹರುಚದೊಳ್ಬಂದು |
ಕೋವಿನ ರಾಮನ ಮದುವೆ ಸಂಭ್ರಮಗಳ
ತಾವು ನೋಡಲಿ ಬಂದರೈಸೆ || ೮೦ ||

ಸಕಲರು ನೆರೆದು ಸದರಾಗಿ ಕುಳಿತು ರಾಯ
ಸುಕುಮಾರ ಕಾಟನ ಕರೆದು |
ಸಕಲರೊಳಗೆ ನಮಗೆ ಹಿರಿಯ ಚಾರಮರಾಯ
ಭಕುತಿ ಕರಕೊಂಡು ಬಾರೊ || ೮೧ ||

ಪಲ್ಲಕ್ಕಿ ವಾಜಿಯನೆಲ್ಲವ ಕಳುಹಿದ
ಬಲ್ಲಿದ ಚಾರಮರಾಯ |
ನಿಲ್ಲದೆ ಮಕ್ಕಳು ಮೊಮ್ಮಕ್ಕಳ ಕರಕೊಂಡು
ಮೆಲ್ಲನೆ ಮದುವೆಗೆ ಬಂದ || ೮೨ ||

ಹೋಗೊ ನೀ ಕಾಟಣ್ಣ ಬೇಗದಿ ಮಂಚಣ್ಣ
ಸಾಗಿ ಬರಲು ಕರೆದುಕೊಂಡು |
ಹಾಗೆ ಬೈಚಪ್ಪನ ಮಕ್ಕಳು ಕುಟುಂಬ
ಬೇಗದಿ ಕರೆತಾರೊ ನೀನು || ೮೩ ||

ಬಂದರು ಮಂತ್ರಿಯ ಹೆಂಡಿರು ಮಕ್ಕಳು
ನಿಂದರು ಕನ್ನಿಕೆ ಸಹಿತ |
ಒಂದಾಗಿ ಮಂಚಣ್ಣ ಮಗಳ ಕರೆದುಕೊಂಡು
[ಹಿಂ]ದೂವ ರಾಮನ ಬಳಿಗೆ || ೮೪ ||

ಮತ್ತೆ ಬೈಚಪ್ಪನ ಕಾಟಣ್ಣ ಕರಕೊಂಡು
ಗುತ್ತಿಯ ಜಗದಪ್ಪ ಮಗಳ |
ಉತ್ತುಂಗರಾಯ ಬಂದ ನಿಬ್ಬಣವನು
ಮೊತ್ತದಿ ಕರಕೊಂಡು ಬಾರೋ || ೮೫ ||

ಮುತ್ತಿನಂದಣವು ಪಲ್ಲಕ್ಕಿ ಕರಿಯ ವಾಜಿ
ಸತ್ತಿಗೆ ಸಕಲ ವಾದ್ಯಗಳು |
ಒತ್ತರಿಸುವ ಮಂದಿ ಮಕ್ಕಳು ಸಹವಾಗಿ
ಒತ್ತಿ ಬಂದರು ಬಿಡದಿ ಮನೆಗೆ || ೮೬ ||

ಬಂದ ರಾಮಕ್ಕನ ಅಂದಣವೇರಿಸಿ
ಮಂದಗಮನೆಯರು ಸಹಿತ |
ಚೆಂದದಿಂದಲಿ ಸೊಬನವ ಪಾಡುತ ಬಂದು
ನಿಂದರು ರಾಮಯ್ಯನೆಡೆಗೆ || ೮೭ ||

ಬಂದ ಉತ್ತುಂಗರಾಯನನಾಗ ತಬ್ಬಿಸೆ
ಚೆಂದದಿಂದಲಿ ಕಂಪಿಲನು |
ಅಂದಲ್ಲಿ ಮದುವೆ ಸಂಭ್ರಮದಲ್ಲಿ ಉತ್ತುಂಗ
ವೊಂದಿಲಿ ಕುಳಿತನಾಕ್ಷಣದಿ || ೮೮ ||

ಸಕಲ ಹೆಮ್ಮಕ್ಕಳ ಹರಿಯಮ್ಮ ಮನ್ನಿಸಿ
ಯುಕುತಿಲಿ ಕುಳ್ಳಿರಿಸಿದಳು |
ಮುಕುರವದನೆಯರು ಮುತ್ತಿನಾರತಿಗಳ
ಭಕುತಿಲಿ ಪಿಡಿದು ನಿಂದಿಹರು || ೮೯ ||

ಎಲ್ಲ ಸೋಪಸ್ಕಾರಂಗಳ ತಂದರು
ನಿಲ್ಲದೆ ಚೆಂದದಿ ಮಂತ್ರಿ ಬೈಚಪ್ಪ |
ಉಲ್ಲಾಸದಿಂದ ಸಾಗಲಿ ಲಗ್ನವೆಂದನು
ಮೆಲ್ಲನೆ ಜೋಯಿಸರಿಗೆ ಪೇಳ್ದ || ೯೦ ||

ಮಂತ್ರಾಕ್ಷತೆಯನು ಕೈಲಿ ಪಿಡಿದುಕೊಂಡು
ತಂತ್ರದ ಬ್ರಾಹ್ಮರು ತಾವು |
ನಿಂತು ಧಾರೆಯ ನೆರೆ ಪಿಡಿಕೊಂಡು ಬ್ರಾಹ್ಮರು
ಪಂಥಗಾರನೆ ರಾಮು ಬಾರೊ || ೯೧ ||

ಹಿರಿಯಾಕೆ ರಾಮಕ್ಕೆ [ಕಡೆಯ] ನಾಲ್ವರ ಕೈಗೆ
ಸೆರೆಯಕ್ಕಿಗಳನು ತಾವು ಕೊಟ್ಟು |

ಮರೆಯದೆ ರಾಮನ ಕೈಗೆ ಬೊಗಸಕ್ಕಿಯ
ಪರಿತಂದು ಕೊಟ್ಟರಾಕ್ಷಣದಿ || ೯೨ ||

ವೇದಘೋಷಣೆಯನು ಓದುತ್ತ ಬ್ರಾಹ್ಮರು
ಸಾಗಿಸಿ ಲಗ್ನವ ಮಾಡಿ |
ಮೇದುನಿಯಾಳ್ವ ರಾಮಯ್ಯನ ಮಂಡೆಯೊಳು ವಿ
ನೋದದಿ ಅಕ್ಕಿಯ ತಳಿದು || ೯೩ ||

ಐವರ ಮಂಡೆಯೊಳು ಅಕ್ಕಿಯ ತಳೆದನು
ಸಯ್ಯಾಡಿಕೊಂಡು ಹೆಣ್ಣುಗಳ |
ಜಯವಂತನಾಗೆಂದು ಬ್ರಾಹ್ಮರಕ್ಷತೆಗಳ
ಜಯ್‌ಸಿರಿಗಳನೆಂದು ತಳೆದು || ೯೪ ||

ಗಂಧರ್ವ ವಿವಾಹ ಮಾಡಿಕೊಂಡೊಯ್ದಾರ
ಒಂದೆ ಸಮುಹೂರ್ತದಲವರು |
ಸಂದರುಶನ ಮಾಡಿ ಸ[ವೆ]ದ ಮುಹೂರ್ತಂಗಳ
ಗಂಧ ಪೂಮಾಲೆ ಹಾಕಿದರು || ೯೫ ||

ಮುತ್ತುಗಳಿಂದ ಶಾಸ್ವೆಯನಿಟ್ಟು ಐವರು
ಅರ್ತಿಲಿ ಗಂಧ ಪರಿಮಳವ |
ಪೃಥ್ವೀಶ ರಾಮಗೆ ವಂದಿಸಿ ಐವರು
ಮುತ್ತಿನಾರತಿಯನೆತ್ತಿದರು || ೯೬ ||

ಐವರು ಸೊಸೆಗಳಿಗೆಲ್ಲ ಕಂಪಿಲರಾಯ
ವೈಭೋಗದೊಡವೆಯ ಕೊಟ್ಟ |
ಐದೈದು ತೊಡಿಗೆ ಬಂಗಾರವ ಕೊಟ್ಟನು
ಐದು ಮೈದೊಡಿಗೆ ವಸ್ತ್ರವನು || ೯೭ ||

ಮಗನಿಗೆ ಕೊಟ್ಟನು ಮುತ್ತಿನ ಹಾರ ರಾ
ಮೈಗೆ ಬಳೆ ಮುರುಡಿ ಸರಪಳಿಯ
ಹಗದೊಳು ಎತ್ತಿದ ಬಿರಿದಿಗೆ ಒಂದೊಂದು
ಅಗಣಿತವಾದ ಭೂಷಣವ || ೯೮ ||

ಬಂದ ಬೀಗರಿಗೆಲ್ಲ ಉಡುಗೊರೆಗಳ ಕೊಟ್ಟು
ಗಂಧ ಪರಿಮಳ ವೀಳ್ಯಗಳನು |
ವೊಂದಿದ ಹಿರಿಯರು ಮಂದಿ ಮಕ್ಕಳಿಗೆಲ್ಲ
ಚೆಂದದಿ ವೀಳ್ಯವ ನಡೆಸಿ || ೯೯ ||

ಮನೆಯ ತುಂಬಿಸುವಂಥ ಪ್ರಸ್ತಕೆ ಕಂಪಿ
ಜನಕನ ಅರಮನೆಗೈದು |
ಮನಬಂದಂತೆ ಸಂಭ್ರಮಮಾಡಿ ಎಲ್ಲರು
ಮನೆದುಂಬಿಸಿದರು ಅರ್ತಿಯಲಿ || ೧೦೦ ||

ಮನ್ನೆಯರೆಲ್ಲರು ಒಂದುಡುಗೊರೆಗಳ
ಹೊನ್ನ ಕಾಣಿಕೆಗಳನಿಟ್ಟು |
ಚೆನ್ನಿಗ ರಾಮೈಗೆ ಬಂದಡ್ಡ ಬಿದ್ದರು
ಮನ್ನಿಸಿದರು ರಾಮನವರ || ೧೦೧ ||

ಖಾನ ಹೇಜಿಬರು ತಂದು ಉಡುಗೊರೆಯ
ನಾನಾ ದಿನಿಸಿ ಪರಿಮಳವ |
ಆನಂದ ಹರುಷ ಕೈಕೊಂಡು ರಾಮಯ್ಯ
ಮಾನನಿಧಿಯವರ ಮನ್ನಿಸಿದ || ೧೦೨ ||

ಸೆಟ್ಟಿ ಮಹನಾಡುಗಳು ತಂದರುಡುಗೊರೆಯ
ಪಟ್ಟೆಪಟ್ಟಾವಳಿ ಸಹಿತ |
ಕೊಟ್ಟು ಕೈಮುಗಿಯೆ ರಾಮಯ್ಯನದ ಕೈಕೊಂಡು
ಕೊಟ್ಟುಕೊಂಡವರ ಮನ್ನಿಸಿದ || ೧೦೩ ||

ಗುತ್ತಿಯ ಉತ್ತುಂಗರಾಯನು [ರಾ]ಮಗೆ
ಮುತ್ತಿನ ತುರಾಯ ಉಡುಗೊರೆಯ |
ಅತ್ಯಂತ ಹರುಷದಿ ಕೊಟ್ಟು ತಬ್ಬಿಕೊಂಡು
ಮತ್ತೆ ರಾಯನ ರಾಮನಪ್ಪಿ || ೧೦೪ ||

ಚಾರಮರಾಯ[ನು] ಮೊಮ್ಮಗ ರಾಮಗೆ
ಸಾರವಳಿಯು ಸರಪಣಿಯು |
ಆರು ರತ್ನದ ಹಾರ ಕೊರಳಿಗೆ ಹಾಕಿದ
ಮಾರಸನ್ನಿಭ ರಾಮ[ನು]ರದಿ || ೧೦೫ ||

ಬೈಚಪ್ಪ ಕೊಟ್ಟನು ಮಗಳಿಗೆ ಆಕ್ಷಣ
ಸಂಚಿಯ ತುಂಬ ಹೊನ್ನುಗಳ |
ಪಂಚವಣ್ಣಿಗೆ ಐಸಾಲೆ ಉಡುಗೊರೆಯ
ಕೈಬಳೆ ಮುರಡಿ ಸರಪಳಿಯ
ಮೈಜೋಡಿನಂಗಿಯು ಶಿಲೆಯ ಭಕ್ತಗಳ
ಬೈಷಪ್ಪ ಕೊಟ್ಟನರ್ತಿಯಲಿ || ೧೦೬ ||

ಮಂಚಣ್ಣ ಕೊಟ್ಟನು ಮಗಳಿಗೆ ಆಕ್ಷಣ
ಸಂಚಿಯ ತುಂಬ ಹೊನ್ನುಗಳ
ಪಂಚವಣ್ಣಿಗೆ ಉಡುಗೊರೆಗೊಟ್ಟು ಅಳಿಯಗೆ
ಮಂಚಣ್ಣ ಕರೆವೆಮ್ಮೆ ಉಂಗುರವ || ೧೦೭ ||

ಎಲ್ಲ ಉಡುಗೊರೆಗಳ ಕೈಕೊಂಡು ರಾಮಯ್ಯ
ಉಲ್ಲಾಸದೊಳು ಮನದೊಳಗೆ |
ನಿಲ್ಲದೆ ಎದ್ದು ಕೈಮುಗಿದು ವಂದಿಸಿದನು
ಎಲ್ಲರ ಹರಕೆಯನಾಂತು || ೧೦೮ ||

ಸಣ್ಣಗಂಬಳಿ ಹಾಸಿ ಮುತ್ತಿನ ಹಸೆಗಳ
ಬಣ್ಣವ ಬರೆದಂತೆ ರಚಿಸಿ |
ಅಣ್ಣನ ಕರೆದು ಮಾರಮ್ಮ ಸಿಂಗಮ್ಮನು
ನುಣ್ಣಿಸಿ ಅರಿಷಿನೆಣ್ಣೆಯನು || ೧೦೯ ||

ಎಲ್ಲರು ಕೂಡಿ ಒಂದರ್ತಿಲಿ ರಾಮನ
ನಲ್ಲೆಯರೈದು ಮಂದಿಯನು |
ಉಲ್ಲಾಸದಲಿ ರಾಮಗೆ ಹರಕೆಯ ಕೊಟ್ಟರು
ನಿಲ್ಲದೈದರು ಅರಮನೆಗೆ || ೧೧೦ ||

ಅಲ್ಲಿದ್ದ ಸ್ತ್ರೀಯರು ಪನ್ನೀರಂಗಳ ಕೊಟ್ಟು
ಎಲ್ಲರು ಪಂಕ್ತಿಲಿ ಕುಳಿತರು || ೧೧೧ ||

ಅರಸುಮಕ್ಕಳು ಎಲ್ಲ ಸರಸದಿ ಹರಿಯಮ್ಮ
ದೊರೆದೊರೆಗಳ ಪಂಕ್ತಿ ಬೇರೆ |
ಅರಿತು ಕುಳಿತರಾಗ ಸಾಲುಸಾಲನೆ ಹಿಡಿದು
ಸರಸವನೇನ ಬಣ್ಣಿಸುವೆ || ೧೧೨ ||

ಬಾಲೆವೆಣ್ಣುಗಳು ತಂದರು ಕಾಯಿ ಸೊಪ್ಪುಗಳ
ಸಾಲುಸಾಲನೆ ಹಿಡಿದುಕೊಂಡು |
ಹಾಲುಗುಂಬಳಕಾಯಿ ಸಕ್ಕರೆಗುಂಬಳಕಾಯಿ

ಮೇಲೊಂದ ಚೆಣ್ಣೆಯಕಾಯಿ || ೧೧೩ ||

ಹಾಗಲ ಹೀರೆಯ ಕೋಗುಲೆ ಸೆಂಬೆಯ
ತೂಗುವ ಪಡವಲಕಾಯಿ |
ಬೀಗಿ ಬೆಳೆದ ಬದನೆಯಕಾಯಿ ತಾಳಿಲ
ಸೋಗೆಗಂಗಳೆರು ತಂದರಾಗ || ೧೧೪ ||

ಬಿಳಿಯ ಚೆಳ್ಳವರೆಯಕಾಯಿ ಬಾಳೆಯಕಾಯಿ
ದಳವುಳ್ಳ ಹಲಸಿನಕಾಯಿ |
ಒಳಿತಾಗಿ ಬೆಳೆದ ಸುಲಿಗೆಣಸಿನ ತಾಳಿಲ
ನಳಿನಾಕ್ಷಿಯರು ತಂದು ನೀಡಿದರು || ೧೧೫ ||

ಚೊಕ್ಕಟ ಹರಿವೆಯಸೊಪ್ಪು ಗೋಣಿಯಸೊಪ್ಪು
ಚಕವಂತ ಬಸಲೆಯಸೊಪ್ಪು |
ಚಿಕ್ಕ ಚಿಲಿತೆಯ ಮೆಂತೆಯ ಸೊಪ್ಪುಗಳನು
ಲೆಕ್ಕವಿಲ್ಲದೆ ತಂದರೆಡೆಯ || ೧೧೬ ||

ಪರಮಾನ್ನ ಮಾಲದಿ ಶಾವಿಗೆ ಬಟ್ಟುವೆ
ಪರಡಿ ತಾಲಿಯು ಪರಮಾನ್ನ |
ಪರೊಪರೊ ಹಾಲಿನ ಪರಮಾನ್ನವ ಬೇಗ
ಹರದೇರು ತಂದು ನೀಡಿದರು || ೧೧೭ ||

ಹೊರಿಗೆ ಗಾರಿಗೆ ಹೋಳಿಗೆ ಒಡೆಗಳ
ಹೂರಣಗಡಬು ಕಜ್ಜಾಯ |
ಮಾರನ ರೂಪಿನ ಅಬಲೆಯರು ತಂದು
ವಾರಣದಲ್ಲಿ ನೀಡಿದರು || ೧೧೮ ||

ಅಪ್ಪಾಲು ಅತಿರಸ ಒಪ್ಪಾದ ಕಜ್ಜಾಯ
ತುಪ್ಪದ ಮನೋಹರಗಳನು |
ಕಪ್ಪಾದ ಕರಜಿಯಕಾಯಿ ಎಣ್ಣೂರಿಗೆ
ಒಪ್ಪವನೇನ ಬಣ್ಣಿಸುವೆ || ೧೧೯ ||

ಬೀಸುಹೂರಿಗೆ ತೊವೆ ಅಲಸಂದೆಯ ತೊವೆಗಾಳು
ಅಗಣಿತ ಕಡಲೆಯ ತೊವೆಯ |
ಸೊಗಸುವೆಣ್ಣುಗಳು ತಂದು ಸಾಲಲಿ ನೀಡಿ
ಬಗೆಬಗೆಯಲಿ ಬಡಿಸಿದರು || ೧೨೧ ||

ಸಣ್ಣಗೆಂಬತ್ತಿಗ ಸರಮುತ್ತಿನಕ್ಕಿಯ
ಚೆನ್ನದಾರಿಯ ಚೊಕ್ಕಟಿಯ |
ಬಣ್ಣವರಿದ ಅರಸರದಾನಿ ರಾಜಾನ್ನವ
ಹೆಣ್ಣುಗಳ್ ತಂದು ನೀಡಿದರು || ೧೨೨ ||

ತೊಗರಿಯ ಕಟ್ಟು ಕಡಲೆಯ ಕಟ್ಟು ಹುರುಳಿಯ
ಬಗೆ ಬಗೆ ಕಟ್ಟಿನಾಂಬ್ರಗಳ |

ಸೊಗಸಾದ ಮಜ್ಜಿಗೆಸಾರು ಹುಳಿಸಾರುಗಳ
ಸೊಗಸಿಂದ ತಂದು ನೀಡಿದರು || ೧೨೩ ||

ಆಕುಳತುಪ್ಪ ಎಮ್ಮೆಯತುಪ್ಪ ಕುರಿತುಪ್ಪ
ಮೇಕೆಯತುಪ್ಪ ಜೇನುತುಪ್ಪ |
ಬೇಕೆಂಬಷ್ಟು ತಂದು ನೀಡಿದರು ಬೇಗದಿ
ಏಕಚಿತ್ತದಲಿ ನಾರಿಯರು || ೧೨೪ ||

ಕಚ್ಚಡಿ ಹಿಂಡಿಯು ಮೆಚ್ಚಿನ ಹುಳಿಗಾಳು
ಹೆಚ್ಚಿನ ಉಪ್ಪಿನಕಾಯಿ |
ಬಚ್ಚಿಟ್ಟ ಮಾವಿನಹಿಂಡಿ ನೆಲ್ಲಿಯಕಟ್ಟು
ಅಚ್ಚಾಳು ತಂದು ನೀಡಿದರು || ೧೨೫ ||

ಹಲಸಿನಹಣ್ಣು ಮಾವಿನಹಣ್ಣು ರಸದಾಳಿ
ಸುಲಿದ ಬಾಳೆಯಹಣ್ಣುಗಳನು |
ಒಳಿತಾಗಿ ತಂದು ನೀಡಿದರು ಬಾಲೆಯರೆಲ್ಲ
ಕಲೆತು ಪಂಕ್ತಿಗೆ ನೀಡಿದರು || ೧೨೬ ||

ಉಂಡರು ಚೊಕ್ಕ ಭೋಜನಗಳ ಬೀಗರು
ಉಂಡು ಕೈದೊಳೆದು ಬೇಗದೊಳು |
ಚಂಡವಿಕ್ರಮ ಕಾಟ ವೀಳ್ಯವ ನಡೆಸಿದ
ಉಂಡಂಥ ಬೀಗರಿಗೆಲ್ಲ || ೧೨೭ ||

ಸಣ್ಣಗಂಬಳಿ ಹಾಸಿ ಮುತ್ತಿನ ಹಸೆಗಳ
ಬಣ್ಣವ ಬರೆದಂತೆ ರಚಿಸಿ |
ಅಣ್ಣನ ಕರೆದು ಮಾರಮ್ಮ ಸಿಂಗಮ್ಮನು
ನುಣ್ಣಿಸಿ ಅರಿಷಿನೆಣ್ಣೆಯನು || ೧೨೮ ||

ಎಲ್ಲರು ಕೂಡಿ ಒಂದರ್ತಿಲಿ ರಾಮನ
ನಲ್ಲೆಯರೈದು ಮಂದಿಯನು |
ಉಲ್ಲಾಸದಲಿ ಹಸೆ ಮೇಳೆ ಕುಳಿತರು ತಾವು
ಮಲ್ಲಿಗೆಯ ಹೂವ ಸೂಡಿದರು || ೧೨೯ ||

ಪರಿಪರಿ ವಿಧದಲ್ಲಿ ಅರಿಷಿನೆಣ್ಣೆಯ ಮಾಡಿ
ಸರಸದಿ ಗಂಡಹೆಂಡರಿಗೆ |
ಪರಿಮಳ ವೀಳ್ಯವ ಕೊಟ್ಟು ಕೈಮುಗಿಸಿದರು
ಬಿರಿದಂಕ ರಾಮಯ್ಯನೆಂದು || ೧೩೦ ||

ನಾರೆರೆಲ್ಲರು ಕೂಡಿ ಅರಿಷಿಣ ಕಸ್ತೂರಿಯ
ಸಾರ ಪರಿಮಳವ ಪೂಸಿದರು |
ವೀರ ರಾಮಯ್ಯ ಪೂಮಾಲೆ ಸರಗಳ ಹಾಕಿ
ಧೀರ ಮುಡಿಸಿದನವರ ಮುಡಿಗೆ || ೧೩೧ ||

ಅರಿಷಿನೆಣ್ಣೆಯ ಮಾಡಿ ಅರ್ತಿಲಿ ಬೀಗರು
ಸರಸದಿ ರಾಮಯ್ಯನೆಡೆಗೆ |
ಹರುಷದಿ ಹಾಡುವ ಹಾಕ್ಯಡ್ಡ ಬಿದ್ದರು
ಸರಸಿಜಮುಖಿಯರೊಂದಾಗಿ || ೧೩೨ ||

ಎರಡು ನಾಲ್ಕು ದಿನ ಸವಿದುಂಡು ಬೀಗರು
ಮರುದಿವಸ ನಾಗೋಲೆ ಮಾಡಿ |
ಕರೆಸಿ ಮಾಮನೆಗೆ ಕಂಪಿಲರಾಯನವರಿಗೆ
ಸರಿ ಊಟಗಳನುಣಿಸಿದರು || ೧೩೩ ||

ಓಕುಳಿ ಅರ್ತಿಯ ಮಾಡಿ ರಾಮಯ್ಯನು ಅ
ನೇಕ ಹರುಷದಿಂದ ತಾನು |
ಸಾಕು ಕಾಟಣ್ಣ ನೀ ಹೋಗು ಬೀಗರ ಕೊಡೆ
ಜೋಕೆಲಿ ಕಳುಹಿಸಿ ಬಾರೊ || ೧೩೪ ||

ಮಂದಿ ಮನ್ನೆಯರ ತಾ ತರಕೊಂಡು
ಅಂದವರನು ಕಳುಹುತಲಿ |
ಸಂದುದು ಗಾವುದ ದಾರಿಯಾಗಿ ಕಳುಹಿ
ಹಿಂದಕ್ಕೆ [ತಿ]ರುಗಯ್ಯ ಕಾಟ || ೧೩೫ ||

ಬಂದಡ್ಡ ಬಿದ್ದು ಕಂಪಿಲರಾಯಗೊಂದಿಸಿ
ಅಂದಾಗಿ ಸುದ್ದಿಯ ಪೇಳಿ |
ಇಂದುವ ರಾಮಗೆ ಅರಿಕೆ ಮಾಡಿಸಿ ತನ್ನ
ಮಂದಿರವನು ಒಳಪೊಕ್ಕ || ೧೩೬ ||

ಇತ್ತ ತನ್ನರಮನೆಯೊಳು ರಾಮ ಸುಖವಿದೆ
ಅರ್ತಿಯ ನೋಡುತ ರಾಯ |
ಹೆತ್ತ ತಾಯಿ ಹರಿಯಮ್ಮ ಸಂತಸದೊಳು
ಅರ್ತಿಯೊಳಿದುರಿರ್ದರವರು || ೧೩೭ ||

ಕನ್ನೆಗಾಳಗವ ಜಗದಪ್ಪನೊಳ್ ಮಾಡಿ ತಾ
ಮಾನ್ಯ ಮಾನ್ಯೆಯರನು ಗೆಲಿದು |

ಭಿನ್ನವಿಲ್ಲದೆ ಐದು ಕನ್ನೆವೆಂಗಳ ಗೆದ್ದ ಪ್ರ
ಸನ್ನ ಕಾಳಗ ಸಂಧಿ ಮುಗಿಯೆ || ೧೩೮ ||

ಇದು ಪರನಾರಿ ಸೋದರನೆಂಬ ರಾಮನ
ಪದಕೃತಿಯೊಳಗೊಂದು ಕಥೆಯ |
ಚದುರ ರಾಮಯ್ಯನು ಮದಿವ್ಯಾದ ಸುದ್ದಿಯ
ಪದಗಳು ಮುಗಿದು ಪೂರಾಯ್ತು || ೧೩೯ ||

**ಅಂತು ಸಂಧಿ-೭ ಕ್ಕಂ ಪದನು ೫೦೯ಕ್ಕಂ ಮಂಗಳ ಮಹಾಶ್ರೀ**

## ಸಂಧಿ ೮ - ಓರುಗಲ್ಲಿನಿಂದ ಬೊಲ್ಲನನ್ನು ತಂದುದು

ಶ್ರೀಗಿರಿಜಾ[ಸ್ಯಾಂಬುಜ ದಿನ] ನಾಯಕ
ಭೋಗಿಭೂಷಣ ಭಾಳನೇತ್ರ |
ಭಾಗೀರಥಿಧರ ಭವರೋಗವೈದ್ಯನೆ
ನಾಗ[ಕುಂಡಲ] ಶರಣೆಂಬೆ || ೧ ||

ತಂದೆ ಕುದುರೆಗಳ ರಾಮಯ್ಯಗೆ ತೋರದೆ
ಅಂದೆ ಕುಮಾರರಿಗಿತ್ತ |
ಯೆಂದು ಬಗೆ[ದು ಇಂ]ತು ಕಂದ ರಾಮಯ್ಯ |
ಮುಂದೆ ವೈಹಾಳಿ ಬಯಲಲ್ಲಿ || ೨ ||

ಬಂದನು ಇದಿರಲಿ ರಾಮನಾಥನು ಆಗ
ಕುಂದದೈವರು ಕುಮಾರಕರ |
ಕೊಂದು ಗೋಳಾಡಿಸಿ ತುರಂಗಗಳ ತಂದು
ಅಂದು ಕಟ್ಟಿದ ಲಾಯದೊಳಗೆ || ೩ ||

ತುರಗವೈದನು ಕೊಂಡು ಹೋದ[ನೆ]ನುತ ಬಂದು
ವರದ ಐವರು ಕುಮಾರಕರು |
ಪುರಜನವರಿಯೆ ಒಯ್ದನು ತುರುಗವನೆಂದು
ನೆರೆದು ಹೇಳಿದರು ಕಂಪಿಲ[ಗೆ] || ೪ ||

ಹೇಳಿದ ಸುದ್ದಿಯ ಕೇಳಿ ಕಂಪಿಲರಾಯ
ತಾಳಿದ ಮನದಿ ಕೋಪವನು |
ಊಳಿಗದವರ ಕೈಲಿ ಹೇಳಿ ಕಳುಹಿಸಿ ತನ್ನ
ಬಾಲರಾಮಯ್ಯನ ಕರೆ [ಸೆ] || ೫ ||

ಏನು ಕಾರಣ ನಮ್ಮ ಕರೆಸಿದೆ ಕಂಪಿಲ
ಏನು ಊಳಿಗವು ಹೇಳೆನಲು |
ಏನ ಹೇಳಲಿ ರಾಮ ಕುವರರೈವರ ಕೊಂದು
ನೀನು ಒಯ್ದೆಂತೆ ತೇಜಿಯವನು || ೬ ||

ಚಿಕ್ಕವರನು ಕೊಂದು ಕುದುರೆಯನೊಯಿವರೆ
ತಕ್ಕುದೆ ನಿನಗೆ ಈ ಬುದ್ಧಿ |
ಮಿಕ್ಕ ಮಾತೇನು ಮಕ್ಕಳ ಕೈಯಿನೊಯಿದಂಥೆ
ಅಕ್ಕರಿಂದಲಿ [ತಾ] ಬೊಲ್ಲನನು || ೭ ||

ಎಪ್ಪತ್ತಿರಾಜನ ಬೊಲ್ಲನ [ತಾಯೆಂ]ದು
ಒಪ್ಪದಿ ಕಂಪಿಲ ನುಡಿಯೆ |
ಅಪ್ಪಾಜಿ ನೀನಾಡಿದರೇನಾಯಿತು
ತಪ್ಪದ ತಹೆನು ಬೊಲ್ಲನನು || ೮ ||

ಭೇರಿ ಮೃದಂಗ ಕೈತಾಳ ತಾಳೆಯ ಕೊಂಬು
ವೀರಜಡೆಯು ಢಮಾಮಿ |
ಭೂರಿ ವಾದ್ಯಗಳ ಗಡಣದಿ ರಾಮಯ್ಯನು
ಧೀರ ನಡೆದನರ್ತಿಯಿಂದ || ೯ ||

ರಾಮಯ್ಯ ಬರುವ ಸಂಭ್ರಮ ಕಂಡು ಹರಿಯಮ್ಮ
ಪ್ರೇಮದಿಂದಪ್ಪಿ ಮುಂಡಾರಿ |
ಕೋಮಲೆಯರು ಆರತಿಯನೆತ್ತಿದರು ನಿ
ಸ್ಸೀಮನು ರಾಮನಾಥನಿಗೆ || ೧೦ ||

ಮುಂದೆ ಪೇಳುವೆನು [ಓರುಗಲ್ಲ] ಪ್ರತಾಪನ
ಕಂದ ಎಪ್ಪತ್ತಿರಾಜನನು |
ಚೆಂದದಿ ಬೊಲ್ಲನ ತರುವಂಥ ಸುದ್ಧಿಗೆ
ಇಂದೊದಗಿದವು ಪ್ರಯಾಣಗಳು || ೧೧ ||

ಓರುಗಲ್ಲಿಗೆ ಪ್ರಯಾಣ ಸಾರಿ ರಾಮಯ್ಯನು
ಸಾರಿಸಿ ಮಾನ್ಯರಿಗೆಲ್ಲ |
ಧೀರರ ಬೇಗ ಬರಹೇಳೆಂದು ಚರರನು
ಭೊರನಟ್ಟಿದನು ಕರೆಯಲ್ಕೆ || ೧೨ ||

ಎಕ್ಕಟಿಗೆ ಸಿಂಗನು ಮೀನಿಗರ ಲಕ್ಕನು
ಚಿಕ್ಕ ತಮ್ಮಗ ಗುಜ್ಜಲೋಬ |

ರಕ್ಕಸ ಮಾದನು ಕರುವೂರ ತಿಪ್ಪನು
ಬೊಕ್ಕ ಬೋಳುಗ ಓಬುಗನು || ೨೩ ||

ಕರೆಯಲಾ ಅರಸು ರಾಮನಾಥನ ಮಾನ್ಯರು
ನೆರೆದರು ದೊರೆಯ ಇದಿರಿನಲಿ |
ತರಹೇ[ಳಿ] ನೀಲನ್ನ ಬರಹೇಳೆಕ್ಕಟಿಗರ
ದೊರೆಯು ಹೇಳಿದ [ಮ]ರುಮಾತ || ೧೪ ||

ಎಪ್ಪತ್ತು [ಎರಡು] ಮನ್ನೆಯರು ಸಹವಾಗಿ
ಒಪ್ಪದಿಂದೂರ ಹೊರಗಣ |
ಮುಪ್ಪುರವೈರಿಯ ಗುಡಿಯ ಮುಂದಿಳಿದರು
ಒಪ್ಪುವ ರಾಮಯ್ಯ ಸಹಿತ || ೧೫ ||

ಕುಮ್ಮಟದಿಂದ ಹೊರಟುಬಂದರು ಬೇಗ
ಗಮ್ಮನೆ ಕಂಪಲಿಯ ಬಳಿಗೆ |
ಉಮ್ಮಯದಿಂದ ಸೋಮೇಶಗೆ ಶರಣೆಂದು
ಎಮ್ಮಿಗನೂರು ದಾಂಟಿದರು || ೧೬ ||

ಬರುತ ಕಂಡರು ಹೊ[ಸ] ಮಲೆಯ ದುರ್ಗವ
ಉರುತರ ದೊಡ್ಡ ಬಸವನ |
ಪುರ ಕುರುಗೋಡ ಪಯಣತಿಯೊಳು ರಾಮಯ್ಯ
ಭರದಿಂದ ತನ್ನ ಮನ್ನೆಯರ || ೧೭ ||

ಕರೆದು ವೀಳ್ಯವನಿತ್ತು ಹರುಷದಿ ರಾಮಯ್ಯ
ನೆರೆಗಲಿಗಳನು ಸಂತೈಸಿ |
ಪರಿವಾರವನೆಲ್ಲ ಇರದೆ ಬೋಳೈಸುತ
ಕರೆದು ವೀಳ್ಯಗಳ ತಾ ಕೊಡಿಸಿ || ೧೮ ||

ಧರೆಯು ಭೋರೆಂಬಂತೆ ದಾರಿ ಪ್ರಯಾಣವ
ಸಾರಿ ತೆರಳಿದನು ಆ ಕ್ಷಣಕೆ |
ಗುರುವೆ ಜಟ್ಟಂಗಿ ರಾಮೇಶನೆ ಗತಿಯೆಂದು
ಗರುವ ರಾಮಯ್ಯ ವಂದಿಸಿದ || ೧೯ ||

ಕುರುಗೊಡನುಳಿದು ಮುಂದಕೆ ದಾಂಟಿ ನಡೆದರು
ಕರ[ಡಿ]ಕಲ್ಲೂರ ಮುಂದಿಳಿದು |
ಹರಿವ ನದಿಯ ದಾಂಟಿ ಬಂದನು ರಾಮಯ್ಯ ನಿ
ಬ್ಬರದಲಿ ತಾನು ನಡೆದನು || ೨೦ ||

ತೆರಳಿ ಬಂದನು ರಾಮ ಯಾದವಗಿರಿಗಾಗಿ
ಮರಳಿ ಪಾಳ್ಯವ ತಾನಿಳಿದು |
ಇರದೆ ಮಜ್ಜನಮಾಡಿ ಉಂಡು ರಾಮಯ್ಯನು
ಹರುಷದಿ ಸುಖನಿದ್ರೆಗೈದ || ೧೧ ||

ನಿದ್ರೆಗೈದೆದ್ದು ರಾಮಯ್ಯ ಜಟ್ಟಂಗಿಯ
ರುದ್ರನ ನೆನೆದು ಮನದೊಳಗೆ |
ಕ್ಷುದ್ರರಾಯರ ಗಂಡ ತೆರಳಿ ಮುಂದಕೆ [ಬ]ರೆ
ಭದ್ರವನೇನ ಪೇಳುವೆನು || ೧೨ ||

ಅದವನ್ನಿಯ ದಾಂಟಿ ಅತ್ತ ಮುಂದಕೆ ನಡೆದ
ಮೇದಿನಿ ಅರಸರನೆಲ್ಲ |
ಸಾಧಿಸೇನೆಂಬ ಬಿರುದಿನ ಕಡೆಯವನಿಟ್ಟು
ಮೂದಲಿಸುತ ತಾ ನಡೆದ || ೧೩ ||

ಅಲ್ಲಿಂದ ಮುಂದಕ್ಕೆ ನಡೆದು ಬಂದನು ಬೇಗ
ರೊಳ್ಳೆಯ ಗೊನಗೊಂದಿಗಾಗ |
ಚೆಲ್ಲವರಿದು ನಡೆದರೆಲ್ಲರೊಂದಾಗಿ
ಕಲ್ಲೂರ ಮುಂದೆ ಇಳಿದರು || ೧೪ ||

ಮಜ್ಜನ ಭೋಜನಂಗಳ ಮಾಡಿ ರಾಮಯ್ಯ
ಗುಜ್ಜರಿ ಮಂಚದ ಮೇಲೆ |
ಸಜ್ಜನ ಜನದಿಂದ ನಿದ್ರಾಂಗನೆಯೊಳು
ಬೆಜ್ಜಾರಕೆಚ್ಚರಿಕೆಯಲಿ || ೧೫ ||

ಎದ್ದನು ಮುಂದಕ್ಕೆ ತುಂಗಭದ್ರೆಯ ದಾಂಟಿ
ಉದ್ಯಾವಾರಣ್ಯಕ್ಕೆ ಬಂದ |
ಸಿದ್ಧವಟ್ಟವ ದಾಂಟಿ ಬಂದಿಳಿದನು ಬೇಗ
ಉದ್ದಗಿರಿಯ ದುರ್ಗದಲಿ || ೧೬ ||

ಇಳಿದರು ಇನಿಗೊಂಡೆದ ಪಾಳ್ಯದ ಮುಂದೆ
ಗಳಿಲನೆ ಜಾಗುಜಾತೆನುತ |
ಭಳಿರೆ ಎನ್ನುತ ರಾಮ ಶರಣಪುರದ ಕೈಯ್ಯ
ಇಳಿದನು ಇಂದ್ರಕೀಲದಲಿ || ೧೭ ||

ಇಂದ್ರಕೀಲವ ದಾಂಟಿ ಮುಂದೆಕ್ಕೆ ನಡೆದನು
ಆಂದ್ರಪ್ರದೇಶ ಗಡಿಗಾಗಿ |

ಬಂದನು ಗಡಿಯ ದಾಂಟುತ ಲಾಳದೇಶಕ್ಕೆ
ಮುಂದುವರಿದು ರಾಮನಾಥ || ೧೮ ||

ಈ ಪರಿಯಲಿ ರಾಮನಾಥನು ಬರಲತ್ತ
ಭೂಪನೋರ್ಗಲ್ಲ ಅರಸಿನ |
ಚಾಪನ ಕುವರ ತಾನೆಪ್ಪತ್ತಿರಾಜನು ಲಕ್ಷ
ಹೊಂಗಳ ಕಟ್ಟಿಕೊಂಡು || ೧೯ ||

ಭೂಪತಿ ಮುಂಗುಲಿರಾಯನಲ್ಲಿಗೆ ಹೋಗಿ
ಮಾಪಾ ವಾಜಿಗಳು ಲಕ್ಷಗ[ಳ] |
ನಾ ಪರೀಕ್ಷಿಸಿ ತಾಹೆನೆನುತ ಎಪ್ಪತಿರಾಜ
ಕೂಪ ವಾರುವಗಳ ನೋಡೆ || ೨೦ ||

ಲಕ್ಷ ಕುದುರೆ ಲಾಯಗ[ಟ್ಟೆ] ಮುಂಗುಲಿರಾಯ
ದಿಕ್ಕನೆ ಈ ಬೊಲ್ಲನಿರುವ |
ಲೆಕ್ಕವಿಲ್ಲ[ದ] ತೇಜಿಯ ನೋಡಿ ಮನವನು
ಇಕ್ಕಿದ ಬೊಲ್ಲನ ಮೇಲೆ || ೨೧ ||

ಕೇಳಿದ ಎಪ್ಪತ್ತಿರಾಜ[ನು] ಬೊಲ್ಲನ
ಹೇಳೆಂದು ಮುಂದುಲಿಯೊಡನೆ |
ಪೇಳುವೆನಿದರ ವೃತ್ತಾಂತವ ನೀ ಕೇಳು
ಮೇಳವಿಸಿದ ಮನಸಿನಲಿ || ೨೨ ||

ಒಳ್ಳೆಯ ಶುಭಲಗ್ನದಲ್ಲಿ ಜನಿಸಿತು ಬೊಲ್ಲ
ಹೊಲ್ಲೆಯ ದಿನ ಶುದ್ಧ ಹಗಲೆ |
ಬಲ್ಲಿದ ಎಪ್ಪತ್ತಿರಾಜ ಲಕ್ಷವ ಕೊಟ್ಟು
ನಿಲ್ಲದೆ ತಂದೆ ಬೊಲ್ಲನನು || ೨೩ ||

ಬೊಲ್ಲನ ಏರಿದ ಎಪ್ಪತ್ತಿರಾಜ ಭೂ
ವಲ್ಲಭ ಪ್ರತಾಪ ದೊರೆಗೆ |
ಉಲ್ಲಾಸಮಂ ತೋರಿ ನೆಲಮಾಳಿಗೆಯೊಳಿಟ್ಟು
ಮೇಲೆ ಉಕ್ಕಿನ ಕಡಲೆಯನು || ೨೪ ||

ಇಂದ್ರಕೀಲವ ದಾಂಟಿ ಬಂದನು ರಾಮಯ್ಯ
ನಿಂದನು ರಹುದ್ರೇಕಪುರದಿ |
ಕಂದರ ಮಾಳ ಕರಾಳದೇಶವ ದಾಂಟಿ
ಬಂದಿಳಿದನು ಮಾದ್ರಿರಿಗೆ || ೨೫ ||

ಐವತ್ತು ಆರು ದೇಶವ ದಾಂಟಿ ರಾಮಯ್ಯ
ಒಯ್ಯನೆ ನಡೆದನರ್ತಿಯಲಿ |
ಒಯ್ಯನಿಳಿದು ರುದ್ರನಗಿರಿಯನು ದಾಂಟಿ
ಮೈಲಾರಪುರವ ದಾಂಟಿದನು || ೩೬ ||

ಎದ್ದನು ಅಲ್ಲಿಂದ ಧರ್ಮಾವತಿಯೆಂಬೂರ
ಹೊದ್ದಿ ಸಾರಿದನು ರಾಮಯ್ಯ |
ನಿರ್ಧಾರದಲಿ ಬಂದು ನಲ್ಲೂರಪುರವನು
ಉದ್ದುರಪುರ ಹೊಕ್ಕರೊಡನೆ || ೩೭ ||

ಶರಣರ ಮಠವನು ಸೇರಿದ ರಾಮಯ್ಯ
ಉರತರ ಹರಕೆಯನಾಂತು |
ಪುರದೋರುಗಲ್ಲ ಪ್ರತಾಪರುದ್ರನ ತೇಜಿ
ಭರದಿಂದಲೆನ್ನ ಸೇರಿದರೆ || ೩೮ ||

ದೊರೆ ರಾಮನಾಥನು ಗುಂಡಬ್ರಹ್ಮಯ್ಯಗೆ
ಉರುತರವಾದ ಶೂಲವನು |
ಸರಿಮಿಗಿಲಪ್ರತಿ ಹರುಷದಿ ಪೂಜೆಯ
ಧರೆಯೊಳಪ್ರತಿ ಮಾಡಿಸುವೆನು || ೩೯ ||

ಕಳುಹಲವರ ಕೈಯ್ಯ ಕಳುಹಿಸಿಕೊಂಡನು
[ತ]ಳುಹದೆ ರಾಮಯ್ಯ ಹೊರಟ |
ಘಳಿಲನೆ ಬೇಟೆವಿಡಿದು ಬಾಹನಿದಿರಿಗೆ
ಸುಳಿದನು ದೇವಿಶೆಟ್ಟಿಯ ಲಿಂಗ || ೪೦ ||

ದಾರಿಯೊಳಿದಿರು ತಾನಾಗಿ ಮಾತಾಡುತ
ಆರು ನೀನೆಂದ ಲಿಂಗಣ್ಣ |
ಧಾರುಣಿಯೊಳು ಹೊಸಮಲೆಯ ಕಂಪಿಲನ
ಕುಮಾರ ಚೆನ್ನಿಗ ರಾಮನೆನಲು || ೪೧ ||

ಏನು ಕಾರಣ ಬಂದೆ ಚೆನ್ನಿಗ ರಾಮಯ್ಯ
ಭಾನುಸಖನ ಮುಖದವನೆ |
ನಾನು ಕಂಪಿಲನೊಳು ಮುನಿದು ಬಂದೆನು ಎಂದು
ಮೌನದಿಂದವನೊಳು ನುಡಿದ || ೪೨ ||

ನೀನಾರು ನಿನ್ನ ಹೆಸರೇನು ನೀನಾವೂರು
ಊನ್ಯವಿಲ್ಲದೆ ಹೇಳೆನಗೆ |

ನಾನೋರುಗಲ್ಲ ಪಟ್ಟಣಸೆಟ್ಟಿ ಲಿಂಗಣ್ಣ
ಮಾನವಪತಿ ರಾಮ ಕೇಳು || ೪೩ ||

ತಂದೆ ಕಂಪಿಲನೊಳು ಪಂಥವನಾಡಿ ಬಂದೆನು
ಇಂದು ಬೊಲ್ಲನ ತಾಹೆನೆನುತ |
ಸಂದೇಹವ್ಯಾತಕೆ ರಾಮಯ್ಯ ನಾ ನಿನ್ನೊಳ
ಗೆಂದನು ದೇವಿಸೆಟ್ಟಿ ಲಿಂಗ || ೪೫ ||

ಬಂದು ರಾಮ ಓರ್ಗಲ್ಲದುರ್ಗದ ಮುಂದೆ
ನಿಂದಿರಿಸಿದ ನದಿಯ ತಡಿಯ |
ತಂದೆ ಕಂಪಿಲನೊಳು ಮುನಿದು ರಾಮಯ್ಯನು
ಬಂದನು ನಿಮ್ಮನೋಲೈಸಿ || ೪೬ ||

ಹಾಗೆಂದು ಪೇಳೆ ಪ್ರತಾಪರುದ್ರನು ಕೇಳಿ
ಬೇಗದಲವನ ಕರೆಸೆನಲು |
ಹಾಗೆಂದ ಮಾತನು ಕೇಳುತಲಿರ್ದಂತೆ
ಹೇಳಿದ ರಾಮಯ್ಯನೊಡನೆ || ೪೭ ||

ಹಸ್ತಿನಿ ಚಿತ್ತಿನಿ ಪದ್ಮಿನಿ ಶಂಕಿನಿ
ಮೊತ್ತದ ಸತಿಯರೊಗ್ಗಿನಲಿ |
ಮತ್ತು ಮಾಣಿಕ ದಿವ್ಯಾಭರಣ ಹೊನ್ನೋಲೆಯು
ಒತ್ತಿಲಿ ಎಸೆವ ಪೆಂಡೆಯವು || ೪೮ ||

ನೋಡಿ ರಾಮನ ರೂಪ ಹೆರೆ ಹಿಂಗಲಾರದೆ
ಕೂಡುವ ಪರಿಯು ಹ್ಯಾಗೆನುತ |
ಗೋಡೆಯ ಚಿತ್ರದ ಪರಿಯಂತೆ ನಿಂದರು
ಗಾಡಿಕಾತಿಯರು ಸಂಚಲದಿ || ೪೯ ||

ಎತ್ತಿ ಮಕ್ಕಳ ಕೆಳೆಯಾಕೆ ಬಿಟ್ಟರು
ಹತ್ತಿದ ವಿರಹ ತಾಪದಲಿ |
ನೆತ್ತಿಯ ಕೊಡಗಳು ಬಿಟ್ಟು ಕೈಮರೆದರು
ಚಿತ್ತದಿ ಭ್ರಮಿಸಿ ನಾರಿಯರು || ೫೦ ||

ಕಾಮನ ಕೆಳಗೆ ವೆಗ್ಗಳ ಪುಟ್ಟಿದನಿವ
ಭೂಮಿಯ ಚೆಲುವರ ಗಂಡ |
ಸಾಮಜಗಮನೆ ಪೆತ್ತವಳಾರೊ ಎನುತಲಿ
ಕೋಮಲೆಯರು ಕೊಂಡಾಡಿದರು || ೫೧ ||

ಮತ್ತೊಬ್ಬ ಸತಿಯು ರಾಮನ ಕಂಡು ಭ್ರಮಿಸಿಯೆ
ಚಿತ್ರದ ಬೊಂಬೆಯಂದದಲಿ |
ಚಿತ್ತವ ಕೈಸೆರೆವಿಡಿದನವನ ಕಂಡು ಮೂರ್ಚೆಯಾದಳು ತಾಪದಲಿ || ೫೨ ||

ಪಡೆದ ತಾಯಿಗಳು ಮಕ್ಕಳ ನೋಡುವಂದದಿ
[ಒ]ಡಹುಟ್ಟಿದವರು ತಮ್ಮಂದಿರನು |
ಕಡುಗಲಿ ರಾಮನ ಕಂಡು ಭ್ರಮಿಸಿಯೆ ಆಗ
ದೃಢವುಳ್ಳ ಪತಿವ್ರತೆ ಹೆಣ್ಣು || ೫೩ ||

ನೋಡಿ ಕಂಡನು ರಾಮ ವಿರಹದ ಹೆಣ್ಣು
ಆಡಿದ ತನ್ನೊಳು ತಾನು |
ರೂಢಿಗೀಶ್ವರ ಬಲ್ಲ ಹರಿಯಮ್ಮನಿವರೆಂದು
ಕೊಡೆ ಕಹಳೆಗಳ ಹಿಡಿಸಿದನು || ೫೪ ||

ಪರಿನಾರಿಯರ ಸೋದರನು ಚೆನ್ನಿಗರಾಮ
ಪರದಳ ರಣಭಯಂಕರ |
ಪರರಾಯದಲ್ಲಣನೆಂದು ನುಡಿಯ ಕೇಳಿ
ಬಿಡದೆತ್ತಿ ಹಲವು ಪರಿಯಲ್ಲಿ || ೫೫ ||

ಒಂದೊಂದು ಪರಿ ಚಂದ್ರಸಾಲೆ ಉಪ್ಪರಿಗೆಯ
ಚಂದವ ಲಿಂಗ ತೋರುವಲಿ |
ಮಂದಿ ಕುದುರೆ ಸಂದೋಹ ಸಂಭ್ರಮದಲ್ಲಿ
ಕಂದರ್ಪರೂಪ ನೋಡುತಲಿ || ೫೬ ||

ಇತ್ತರದಂಗಡಿಯುಪ್ಪರಿಗೆ ಸಾಲುಗಳಿಂದ
ಮೊತ್ತದ ಶೃಂಗಾರಗಳನು |
ಚಿತ್ರದ ಮಗಿಲು ಮಂದಿರಗಳ ನೋಡುವ
ಮತ್ತೆ ಬಂದರು ಅರಮನೆಗೆ || ೫೭ ||

ಹುಳಿಯೇರ ಬಾಗಿಲ ಹೊಕ್ಕನು ರಾಮಯ್ಯ
ಒಳೆಯಾಕ ನಡೆದನಾದಕ್ಷಣದಿ |
ಇಳಿದನು ಕುದುರೆಯ ಕನ್ನಡಿ ಮೋರೆಯ
ತಳುಹದೆ ನಡೆದನೋಲಗಕೆ || ೫೮ ||

ಧುರಗಲಿ ವೀರ ಪ್ರತಾಪರುದ್ರನೋಲಗ
ದಿರುವನು ಏನು ಬಣ್ಣಿಸುವೆ |
ಬಿರಿದುಳ್ಳ ಮನ್ನೆಯ ಮಕುಟವರ್ಧನರನು
ಅರಸು ರಾಮಯ್ಯ ನೋಡಿ ಕಂಡ || ೫೯ ||

ಎಡವಂಕ ಬಲವಂಕ ರಾಯರ ವಾಲಗ
ಕಡುಗಲಿ ರಾಜಕುವರರು |
ಧೃಡವುಳ್ಳ ಮಂತ್ರೀಶ ರಾಯ ರಾಹುತರೆಲ್ಲ
ಪೊಡವಿಪಾಲಕನೋಲಗದಿ || ೬೦ ||

ಮುತ್ತಿನ ಗದ್ದುಗೆಯಲಿ ರುದ್ರರಾಯನು
ಚಿತ್ತಜ ಕಳೆವೊಪ್ಪುತಿರಲು |
ಇಂತಪ್ಪ ವಾಲಗದೊಳಗೆ ಚೆನ್ನಿಗರಾಮ
ಅರ್ತಿಯಿಂದಲಿ ನಡೆತಂದ || ೬೧ ||

ತಾರಕಿಯೆಡೆಗೆ ಚಂದ್ರಮನು ಬಂದ ತೆರನಂತೆ
ತೆರನಂತೆ ಹಾರದೆಡೆಗೆ ಜೀವರತ್ನ |
ಓರುಗಲ್ಲರಸು ರುದ್ರರಾಯನೋಲಗದೊಳು
ಮಾರಸನ್ನಿಭ ರಾಮನೆಸೆದ || ೬೨ ||

ಕಟ್ಟಳಿಲ್ಲದ ಮನ್ನೆಯ ಮಂಡಳಿಕರು
ದಿಟ್ಟ ರಾಮನ ರೂಪ ನೋಡಿ |
ನೆಟ್ಟನೆ ಬೇರಗಾಗಿ ತಮತಮಗೆಲ್ಲರು
ಬೊಟ್ಟನೊಲಿದು ಕೊಂಡಾಡಿದರು || ೬೩ ||

ವಂದನೆಮಾಡಿ ರಾಮನು ರುದ್ರರಾಯಗೆ
ತಂದು ಕಾಣಿಕೆಯನಿಕ್ಕಿದನು |
ಚಂದ್ರನ ಕಳೆಯ ಕುಮಾರ ಕುಳ್ಳಿರು ಎಂದು
ಅಂದುರ ಆಯನು ಸಂತೋಷದಲಿ || ೬೪ ||

ನೋಡಿದ ರಾಯನ ಮಂದಿ ಕುದುರೆಯನು
ಮಾಡಿದ ಮನವ ಸಂತಸವ |
ಕೂಡಿದರೆಪ್ಪತ್ತಿರಾಜನ ರಾಮನಿಗೆ
ಬೇಡಿದ ಸೀಮೆಯ ಕೊಡುವೆ || ೬೫ ||

ಬುದ್ಧಿನಿತಿಲ್ಲವೊ ಕಂಪಿಲರಾಯಗೆ
ಮುದ್ದು ಮುಖದ ರಾಮನನು |
ಎದ್ದು ಮುನಿಸುಗುಟ್ಟಿ ಬರಲಿಬಹುದೆ ಎಂದು
ರುದ್ರ ಮಂತ್ರಿಯೊಳು ಪೇಳಿದನು || ೬೬ ||

ಇತ್ತನು ಕಂಠಮಾಲೆಯ ಉಡುಗೊರೆಯನು
ಅರ್ತಿಯಿಂದಲಿ ರಾಮನಿಗೆ |

ಉತ್ತುಮ ಪಡಿಬಿಡಾರವ ಕೊಡುವೆನುಯೆಂದು
ಮತ್ತೆ ಲಿಂಗಗೆ ಹೇಳಿದನು || ೭೭ ||

ಕಳುಹಿಸಿಕೊಂಡು ರಾಮಯ್ಯನಾಕ್ಷಣದಲ್ಲಿ
ಇಳಿದ ರುದ್ರನ ಚಾವಡಿಯ |
ನಳಿನನಾಭನೆ ಗತಿಯೆನುತಲಿ ರಾಮಯ್ಯ
ಕಳವಳಿಸುತ ನಡೆತಂದ || ೭೮ ||

ಆ ಸಮಯದಿ ಭಟ್ಟರು ಕೊಂಡಾಡಿದರು
ಸಾಸಿರ ಕಳೆಯ ರಾಮುಗನ |
ದೇಶದೊಳಗೆ ರಾಯರಗಂಥ ರಾಮನು
ಆಸೆಗೊಳ್ಳನು ಪರಸತಿಗೆ || ೭೯ ||

ಮಂಡಲದೊಳು ಜಟ್ಟಂಗಿರಾಮೇಶನ
ಪಿಂಡದ ನಿಜಸುತ ನಡೆದ |
ಹಿಂಡ ವೈರಿಯಗಂಡ ಸಿಂಹ ರಾಮಯ್ಯನು
ಕೊಂಡಾಡೆ ಮುಂದೆ ಪಾಠಕರು || ೭೦ ||

ಮುಂದಕ್ಕೆ ರಾಮನು ಅಡಿಯಿಟ್ಟು ನಡೆವಾಗ
ಮುಂದೆ ಬಿರಿದುಗಳ ಸಾರುತಲಿ ||
ಸಂದೆಹವಿಲ್ಲದೆ ಜೀವದಾಸೆ ಮಾಡುವ
[ಹಂ] ದೆ ರಾಯರಗಂಡ ರಾಮ || ೭೧ ||

ಮುಗಿಲ ಕೆಳಗೆ ಬಹು ತೋಳ ಬೀಸಿ ನಡೆವಂಥ
ಅಗಣಿತ ರಾಯರಗಂಡ |
ಜಗದಪ್ಪ ಮೊದಲಾದ ರಾಯರಗಂಡನೆಂದು
ಅಗಣಿತ ಕಹಳೆ ಸಾರಿದವು || ೭೨ ||

ಆಸೆಯ ಮಾಡಿ ದೇಶವನಾಳಬೇಕೆಂಬ
ಭಾಷೆ ಹೀನರಗಂಡ ರಾಮ |
ಕೂಸ ಹಾಸಿಗೆಯೊಳು ಮಲಗಿಸುವರ ಗಂಡ
ರಾಸಿ ಮಾಂಡಲಿಕರ ಗಂಡ || ೭೩ ||

ಕಳ್ಳತನದಿಂದ ಬಿರಿದ ಹೊಗಳಿಸಿಕೊಂಬ
ಅಳ್ಳೆದೆ ರಾಯರಗಂಡ |
ಡಿಳ್ಳಿಯ ಗಂಡ ಡಿಳ್ಳಿ ಸುರಿತಾಳನ ಮಿಂಡ
ಬಲ್ಲಿದ ನೇಮಿಯ ಗಂಡ || ೭೪ ||

ಎತ್ತಣ ಗಾಳಿ ಬೀಸಿದರತ್ತ ಮಲೆತಿಹ
ಮೊತ್ತದ ರಾಯರ ಗಂಡ |
ಸತ್ತಿಗೆ ನೆರಳಲ್ಲಿ ಬಹ ಮಾಂಡಲಿಕರ
ನೆತ್ತಿಯ ಶೂಲ ರಾಮಯ್ಯ || ೭೫ ||

ಕೊಟ್ಟ ಹಣವ ಗಂಡ ಕಟ್ಟಿಕೊಂಬರ ಗಂಡ
ಇಷ್ಟಲಿಂಗವು ಜಟ್ಟಿಂಗೇಶ || ೭೬ ||

ಮಣಿವ ರಾಯರಗಂಡ ಮಲೆವ ರಾಯರಗಂಡ
ರಣದಿ ಮಚ್ಚರಿಪರಗಂಡ |
ಢಣಢಣಿಸುವ ಗಂಟೆಗಳುಲಿಯಲು ಆಕ್ಷಣ
ಕಣಕಾಲಿನಲಿ ರಾಮಯಗೆ || ೭೭ ||

ನರಪತಿ [ಗಜ]ಪತಿ ಅಶ್ವಪತಿಗಳೆಂಬ
ಅರಸುಗಳಿಗೆ ಗಂಡನೆಂಬ |
ಬಿರಿದ ಪೊಗಳಲು ಭಟರು ರಾಮನಾಥನ
ಭರದಿ ಕೇಳಿದ ರುದ್ರರಾಯ || ೭೮ ||

ಬಿರಿದ ಕೇಳುತ ರುದ್ರ ಉರಿದೆದ್ದು ಕೋಪದಿ
ತರಹರಿಸದೆ ಮನದೊಳಗೆ |
ಹರುಷವಡಗಿ ಕಾಲರುದ್ರನಂತವನಾಗ
ಇರದೆ ಕೋಪವನು ತಾಳಿದನು || ೭೯ ||

ಕಡೆಗಣ್ಣು ಕಿಡಿಸೊಸೆ ಕುಡಿಮೀಸೆ ಕುಣಿದಾಡೆ
ಬಿಡದೆ ಗಂಟಿಕ್ಕಿ ಪುರ್ಬುಗಳು |
ಒಡನೆ ನುಡಿದನು ಮಂತ್ರಿಯ ಕೂಡೆ ರೋಷದಿ
ಕಡು ಬೇಗದೊಳು ಇಂತೆಂದ || ೮೦ ||

ಕಟ್ಟಾಣೆಲ್ಲದ ಬಿರಿದನು ರಾಮಯ್ಯ[ನ]
ಭಟ್ಟರು ಕೊಂಡಾಡಿದರು |
ಸೃಷ್ಟಿಪಾಲಕ ರಾಯ ಕೇಳಿ ಕೋಪವ ತಾಳಿ
ಮುಟ್ಟೆ ಮಂತ್ರಿಯೊಳಿಂತೆಂದ || ೮೧ ||

ನಮ್ಮ ಬಳಿಗೆ ರಾಮನೋಲೈಸಲು ಬಂದು
ಹಮ್ಮಿನ ಬಿರಿದನಿಕ್ಕಿದನೆ |
ಗಮ್ಮನೆ ಮಂಡಲಿಕರು ಗಜಬಜಿಸುತ್ತ
ಇಮ್ಮಡಿ ತಿಟ್ಟವಿಕ್ಕಿದರು || ೮೨ ||

ನಿಮ್ಮ ಸಮಾನದಿ ಕುಳಿತನಾದರೆ ಜಾತಿ
ಧರ್ಮವ ಬಿಡುವನೆ ಅವನು |
ನಿಮ್ಮ ಪಾದವನು ಕಾಣಿಸಿದಂದವು
ನಮ್ಮೆಲ್ಲರ ಗಂಡನೆಂದೆಂಬ || ೮೩ ||

ಘುಡಿಘುಡಿಸುತ ರುದ್ರಾರಾಯ ಕೋಪವ ತಾಳಿ
ಹಿಡಿತನ್ನಿ ಲಿಂಗನ ಬೇಗ |
ಒಡನೆ ಕಳುಹೆ ಕಂಚುಕಿಯರು ಬೇಗದಿ
ನಡೆದು ಬಂದರು ಲಿಂಗನೆಡೆಗೆ || ೮೪ ||

ಪರಿಪರಿ ಬಿಡಾರ ರಾಮಗೆ ಲಿಂಗಣ್ಣ
ಅರಿದೆನಿಸುತ ಮಾಡುತಿರಲು |
ಕರ ಬೇಗ ರಾಯ ನಿನ್ನನ್ನು ಬರಹೇಳಿದ
ಧುರಧೀರ ಲಿಂಗ ಬಾರೆನಲು || ೮೪ ||

ನಡೆದು ಬಂದನು ಲಿಂಗರಾಹುತ ವಹಿಲದಿ
ಒಡೆಯ ರುದ್ರನ ಕಂಡು ನಮಿಸೆ |
ಕಿಡಿಗೆದರುತ ರಾಯ ಕೋಪದಿ ಉರಿದೆದ್ದು
ಜಡಿದು ಗರ್ಜಿಸಿದ ಲಿಂಗನನು || ೮೭ ||

ಕೊಟ್ಟದ ಬೇಡನ ಕರೆತಂದೆ ಇಲ್ಲಿಗೆ
ಮುಟ್ಟಿ ಬಿರಿದನು ಹೊಗಳಿಸಿದೆ |
ಸೃಷ್ಟಿಯ ರಾಯರಗಂಡನು ತಾನಂತೆ
ಇಷ್ಟುವುಳ್ಳವ ಬರಬಹುದೆ || ೮೭ ||

ಬಂದನ್ಯಾತಕೆ ರಾಮನೋಲೈಸಲಿಲ್ಲಿಗೆ
ಗೊಂದಣ ಬಿರುದುಳ್ಳ ಬಂಟ |
ಹಿಂದಣ ಪಂಥವನೆಲ್ಲ ಬಿಟ್ಟಿರ ಹೇಳೊ ಇಲ್ಲ
ದಿರ್ದಡೆ ಹೋಗ ಹೇಳೊ || ೮೮ ||

ಬಲ್ಲಿದಗಲ್ಲದೆ ಬಿರಿದು ದೇವರೆ ಕೇಳು
ತಲ್ಲಣಿಸುವ ಹೇಡಿಗುಂಟೆ |
ನಿಲ್ಲದೆ ಗುತ್ತಿಯ ಜಗದಪ್ಪ ಮೊದಲಾದ
ಎಲ್ಲ ಮಾನ್ಯರ ಗೆದ್ದ ರಾಮು || ೮೯ ||

ಹಳೆಯಬೀಡಾಳುವ ಬಲ್ಲಾಳನ ಗೆಲಿದನು
ಚೆಲುವುಳ್ಳ ರಾಯ ಚಿತ್ತೈಸು |

ಛಲದಿಂದ ಹುಳಿಯೇರ ಮಾತಿಗೊಂಡನ ಗೆಲಿದ
ಬಲವುಳ್ಳ ನೇಮಿಯ ಮುರಿದ || ೯೦ ||

ಬಿರಿದ ಬಿಟ್ಟರೆ ರಾಮನಿರಲಿ ಕೇಳೊ ಲಿಂಗಾ
ಭರದಿಂದ ಪಂಥವಾಡಿದರೆ |
ಮುರಿವೆನು ತನ್ನಯ ಬಲುಹನೆಲ್ಲವನು ತಾ
ಸೆರೆಯಮನೆಯ ಕೂಡಿಸುವೆನು || ೯೧ ||

ದುಗುಡವ ತಾಳಿದ ದೇವಿಶೆಟ್ಟಿಯಲಿಂದ
ವಿಗಡ ರಾಮನ ಬಳಿಗೈದ |
ಅಗಣಿತ ಬಿರಿದ ಬಿಟ್ಟರೆ ಇರಹೇಳಿದ
ಸುಗುಣ ರಾಮಯ್ಯ ಚಿತ್ತೈಸು || ೯೨ ||

ಅಬ್ಬರಿಸುವ ರಾಮ ಕೋಪವ ತಾಳಿದ
ಉಬ್ಬಿ ಕಾಟಣ್ಣನಿಂತೆಂದ
ಕಂಪಿಲರಾಯನ ಸುತನು ರಾಮಯ್ಯನು
ಹಬ್ಬಿದ ಬಿರಿದ ಬಿಡುವನೆ || ೯೩ ||

ಕಟ್ಟಳಿಲ್ಲದ ದಂಡ ಕಡಿದು ಕುಪ್ಪೆಯನೊಟ್ಟಿ
ಸುಟ್ಟು ಬೊಟ್ಟಿಡುವೆ ಪಟ್ಟಣವ |
ಮುಟ್ಟಿ ಕಾದಲು ರುದ್ರರಾಯನ ಹಿಡಿವೆನು
ದಿಟ್ಟ ಲಿಂಗಣ್ಣ ಕೇಳ್ಬಿರಿದ || ೯೪ ||

ಭಂಡಾರ ಬೊಕ್ಕಸ ಹೆಂಡಿರು ಮಕ್ಕಳು
ತಂಡತಂಡದಿ ಪ್ರಯಾಣಮಾಡಿ |
ದಂಡೆತ್ತಿ ರುದ್ರರಾಯನು [ಬ]ರೆ ಕೊಡೆ ನಿನ್ನ
ಗಂಡಾಳು ಲಿಂಗ ಹೋಗೆಂದ || ೯೫ ||

ಬಂದು ಲಿಂಗಣ ದೇವಿಶೆಟ್ಟಿ [ಯರಿಗೆ] ಪೇಳೆ
ಅಂದು ರಾಯನ ಜಗಳವನು |
ಇಂದು ಇಲ್ಲಿದ್ದರೆ ಕೆಡುವೆವು ನಾವೆಲ್ಲ
ಸಂದೇಹ ಬೇಡವೇಳೆಂದ || ೯೬ ||

ಮುತ್ತು ಮಾಣಿಕ ನವರತ್ನ ಭಂಡಾರವ
ಮತ್ತೆ ಪೆಟ್ಟಿಗೆ ತುಂಬಿಸಿದನು |
ಉತ್ತಮ ಹೊನ್ನು ಹಣದ ಜಾಳಿಗೆಗಳ
ಇತ್ತನೆಕ್ಕಟಿಗರಿಗೆಲ್ಲ || ೯೭ ||

ಕಾಲು ಕುಪ್ಪಸವ ತೊಡಿಸಿ ಹೆಣ್ಣುಗಳಿಗೆಲ್ಲ
ಆಲಸ್ಯವಿಲ್ಲದೆ ಬೇಗ |
ಮೇಲು ಹಕ್ಕರಿಕೆಯ ಮುಸುಕನು ತೇಜಿಯ
ಸಾಲುಸಾಲಿನಲಿ ಶೃಂಗರಿಸಿ || ೯೮ ||

ತಡೆಯದೆ ಹೋಗಿ ಚಾವಡಿಗೆ ನಡೆದುಬಂದು
ಕರೆಸಿದ ತನ್ನ ರಾಹುತರ |
ಭರದಿ ಕಾಲಾಳು ಮೇಲಾಳುಗಳನು ಕರೆಸಿ || ೯೯ ||

ಸುಟ್ಟನು ಪಟ್ಟಾವಳಿಯ ಪೆಂಡಿಗಳನು
ಸುಟ್ಟನುಪ್ಪರಿಗೆ ಚಾವಡಿಯ |
ಸುಟ್ಟನು ಭತ್ತದ ಕಣಜ ಲಾಯಗಳನು
ಸುಟ್ಟು ಲಿಂಗನು ಹೊರಟನು || ೧೦೦ ||

ಅತ್ತ ಹೋಗಲು ಲಿಂಗ ಇತ್ತ ಮನ್ನೆಯರೆಲ್ಲ
ಒತ್ತಿ ಚಾಡಿಯನು ಹೇಳಿದರು |
ಚಿತ್ತೈಸಿ ಸ್ವಾಮಿ ರಾಮನ ಲಿಂಗ ಪೊಗಳಿದ
ಅತ್ಯಂತ ಸ್ವಾಮಿದ್ರೋಹಿಕೆಯ || ೧೦೧ ||

ಹೇಳಿದ ಚಾಡಿಯ ಕೇಳಿದ ರುದ್ರನು
ತಾಳಿದ ಕಡುಗೋಪವನು |
ಬೀಳುಕೊಟ್ಟನು ಮನೆಯ ಮುದ್ರಿಸೆದಾಗಲೆ
ಉಳಿಗದವರನು ಕಳುಹೆ || ೧೦೨ ||

ಹೆಡಕ ಹಿಡಿದು ನೂಕುನೂಕೆಂದು ಲಿಂಗನು
ಒಡೆಯ ರುದ್ರನು ನನಗಲ್ಲ |
ಸುಡುವೆ ಪಟ್ಟಣವನು ದಂಡೆತ್ತಿ ಬಂದರೆ
ಕಡಿವೆ ಮನ್ನೆಯರನೀಕ್ಷಣದಿ || ೧೦೩ ||

ಕಟ್ಟಿಗೆಕಾರರು ಹೇ[ಳೆ] ರಾಯನ ಕೊಡೆ
ದಿಟ್ಟ ಲಿಂಗಣ್ಣ ಕೋಪಿಸಿದ |
ಸೃಷ್ಟಿಪಾಲಕ ನೀನೊಡೆಯನು ಅಲ್ಲವೆಂದು
ಬಿಟ್ಟೋಡುತಾನೆ ಪಟ್ಟಣವ || ೧೦೪ ||

ಬೆರಸಿ ಚೂಣಿಯ ಹುಯ್ಯ[ಲ] ಮಾಡಿ ನಿಮುಷದಿ
ಕರ ಬೇಗ ಕಡಿದಾಡಿದರು |
ತುರುಗ ರುತಗ ಕೂಡಿ ಕೂಡಿದಾಡಿ ರಾಹುತರೆಲ್ಲ
ಇರಿದಾಡಿದರು ಹೊಳಕೆಯಲಿ || ೧೦೫ ||

ಕಂಡ ದೂರದಲಿಂದ ದೇವಿಶೆಟ್ಟಿಯಲಿಂಗ
ಹಿಂಡು ತುರಗ ರಾಹುತ |
ಗುಂಡಿಗೆ ಒಡೆದಂತೆ ಲವುಡಿಕೆ ಹೊಡೆಯೆನುತಲಿ
ಮುಂಡಗಳುರುಳೆ ಭೂಮಿಯಲಿ || ೧೦೬ ||

ಅಂಡಮಂಡೆಯ ರಾಸಿ ಕಂಡಗರುಳ ಸಂತೆ
ತಂಡತಂಡದಲಿ ಮುರಿದೋಡೆ ||
ಮಂಡಲಪತಿ ರುದ್ರರಾಯಗೆ ಪೇಳ್ದರು
ಕಂಡ ಗಜವನು ಕಳುಹಿದನು || ೧೦೭ ||

ದಿಕ್ಕಿದಿಕ್ಕಿನ ಬಾಗಿಲಲಿ ಹೊರಹೊಂಡರು
ಲೆಕ್ಕವಿಲ್ಲದೆ ಮಂದಿ ಕುದುರೆ |
ಕಕ್ಕಸದಲಿ ಮಂದಿ ಮಾನ್ಯರು ಕಡಿವಾಡಿ
ಒಕ್ಕಲಿಕ್ಕಿದರು ರಾಹುತರ || ೧೦೮ ||

ಮತ್ತೆ ರಾಮಯ ತನ್ನ ಪರಿವಾರವೆಲ್ಲಕೆ
ಮತ್ತೆ ಬೆಸನಯಿತ್ತು ಕಳುಹೆ |
ಕತ್ತಿ ಕಠಾರಿ ಮನ್ನೆಯರ ಮಾರ್ಬಲವೆಲ್ಲ
ಮುತ್ತಿತು ರುದ್ರನ ದಂಡ || ೧೦೯ ||

ಮುಂದಲೆ ಮುಂದಲೆ ಇರಿದಾಡಿ ಪರಿವಾರ
ಬಂದು ರಾಮನ ಪರಿವಾರ |
ಕುಂದದೆ ಕುದುರೆಯ ಕಡಿಕಡಿದು ಬೇಗದಿ
ಕಂಡದಲೊರಸಿ ಕತ್ತಿಗಳ || ೧೧೦ ||

ಚೆಲ್ಲಿತು ರುದ್ರನ ಬಲ ನಿಮುಷದೊಳಗೆ
ಭಲ್ಲೆವು ಚಕ್ರ ತೋಮರದಿ |
ಜಲ್ಲಿಸಿ ಕುದುರೆಯ ಪೌಜ ಹಾಕಿರಿದರು
ಬಲ್ಲಿದ ರಾಮನ ಭಟರು || ೧೧೧ ||

ಎಡಬಲದಲಿ ಕೆಲಕಡೆಯ [ಲೆ]ಲುಬೆಯಾಗಿ
ಜಡಿದು ರುದ್ರನ ದಂಡ ಕಡಿದು |
ಸಿಡಿಲು ಪರ್ವತಕೆ ಮುಸುಕುವಂತೆ ಮುಸುಕಿತು
ಕಡುಗಲಿ ರಾಮನ ಪೌಜ || ೧೧೨ ||

ಹೊಕ್ಕು ಕಾಲಾಳು ಮೇಲಾಳುಗಳೆಲ್ಲರ
ನಿಕ್ಕಡಿಯಾಗಿ ಕಡಿಯೆ ಬಾಣದಲಿ |

ಕಕ್ಕಸದಲಿ ಕಡಿದು ರಾಮನ ದಂಡ
ಒಕ್ಕಲಿಕ್ಕಲು ಹಿಮ್ಮೆಟ್ಟಿದರು || ೧೧೩ ||

ಹಿಮ್ಮೆಟ್ಟಿ ಬರುವ ಪೌಜನು ಕಂಡು ರಾಮಯ್ಯ
ಸುಮ್ಮಾನದಲಿ ನಸುನಗುತ |
ಹಮ್ಮು ಮುರಿ[ವೆ] ರುದ್ರರಾಯನ ದಂಡನು
ಒಮ್ಮೆಲಿಂಗಣ್ಣ ನೀ ನೋಡು || ೧೧೪ ||

ಎಡವಂಕ ಬಲವಂಕ[ಕೋ]ಡಿ ರಾಂಯ್ಯನು
ನಡೆದನು ಕೊಡೆ ವಹಿಲದಲಿ |
ನುಡಿದವು ಬಿರಿದಿನ ಕಹಳೆ ತಮ್ಮಟ ಭೇರಿ
ಪೊಡವಿರಾಯರ ಗಂಡನೆಂಬ || ೧೧೫ ||

ಬಲ ಒದಗಿತು ರುದ್ರನ ಮನ್ನೆಯರು ಬೇಗ
ಬಂದು ಜಗಳವನು ಮಾಡಿದರು |
ಕಾಟಣ್ಣ ದೇವಿಶೆಟ್ಟಿಯಲಿಂಗ ರಾಮಯ್ಯ
ಮೀಟುಳ್ಳ ಪರಿವಾರವೆಲ್ಲ || ೧೧೬ ||

ಕತ್ತರಿ ಬೋಳಯ್ಯ ಒತ್ತಿ ಮೆಟ್ಟಿ ಸೀಳಲು
ಮತ್ತೆ ತುರಗ ಕಡಿದಾಡಿ |
ರಕ್ತದ ಹಳ್ಳ ಕರಿಯೆ ಧರಣಿಯ ಮೇಲೆ
ಸುತ್ತಗರುಳು ಸುರಿಸುರಿಯೆ || ೧೧೭ ||

ದೆಸೆ ಬಾಯದೆರೆಯದೆನುತ ರುದ್ರನ ದಂಡು
ಬಿಸಿಯ ರಕ್ತವ ಸುರಿವುತಲಿ |
ಅಸಮಸಾಹಸ ರಾಮ ಬೆನ್ನಟ್ಟಿ ಬರುತಿರೆ
ಮುಸುಕಿಲಿ ಹಾಯೆ ಪಟ್ಟಣಕೆ || ೧೧೮ ||

ಕೇಳಿದ ದಂಡು ಮುರಿದ ಸುದ್ದಿಯ ರಾಯ
ತಾಳಿದ ಕಡುಗೋಪವನು |
ಕೋಳಹಳವ ಮಾಡಿ ಕಡಿವೆ ರಾಮನ ದಂಡ
ದಾಳಿ ಮಾಡುವೆ ಹೊಸಮಲೆಗೆ || ೧೧೯ ||

[ಇದ್ದೆ] ದೆಸೆಯ ಮಗುಟವರ್ಧನರ ನೋಡಿ ರಾಯ
ಗದ್ದುಗೆಯಿಂದೇಳುತಿರಲು |
ಬಿದ್ದು ಚರಣದಿ ಕೊಮಾರ ಎಪ್ಪತ್ತಿರಾಜ
ರುದ್ರ ಬೆಸನ ಪಾಲಿಸೆಂದ || ೧೨೦ ||

ಮನ್ನೆಯ ಮಂಡಲಿಕರು ಹೋಗಿ ರಾಮಗೆ
ಬೆನ್ನ ಕೊಟ್ಟರು ಕೇಳು ಕಂದ |
ನಿನ್ನ ಹವಣೇನು? ಸಮರಂಗ ಬಲ್ಲದೆ ರಾಯ
ಇನ್ನು ತೆಗದೇನು ಚಿತ್ತೈಸು || ೧೨೧ ||

ಪೊಡವಿಯೊಳಗೆ ಸುರಿತಾಳ ತಾ ಬಂದರೆ
ನಡೆಯಬೇಕಲ್ಲದೆ ಬೇಗ |
ಜ[ಡ]ದೇಹಿ ಮಾನ್ಯರ ಮೇಲೆ ಛಲವನಿತ್ತು
ಒಡನೆ ನೀ ಕಳುಹು ಕಾಳಗಕೆ || ೧೨೨ ||

ದಾಳಿಯ ಮಾಡಿ ರಾಮನ ಹಿಡಿಯಾಳ ಹಿಡಿವೆನು
ಜೋಡಿಸಿ ಕಡಿವೆ ಮನ್ನೆಯರ |
ಗೂಳೇವ ತೆಗೆಸುವ ಹೊಸಮಲೆದುರ್ಗವ
ಹೇಳ್ವರೆ ಹೆಸರ ಕೆಡಿಸುವೆನು || ೧೨೩ ||

ಎಪ್ಪತ್ತಿರಾಜನ ನುಡಿಗೇಳಿ ರುದ್ರನು
ಅಪ್ಪಿಕೊಂಡನು ಸಂತೋಷದಲಿ |
ಒಪ್ಪಿಸಿದನು ಮನ್ನೆಯ ಮಾಂಡಲಿಕರ
ಒಪ್ಪದಿ ಪ್ರಯಾಣ ಮಾಡಿದನು || ೧೨೪ ||

ಸರ್ಪಭೂಷಣ ಕಡಿದಾಡಿ ರಣದೊಳು
ಒಪ್ಪುವ ರಾಮನ ಹಿಡಿವೆ |
ಅಪ್ಪಣೆಯನು ಕೊಟ್ಟು ಕಳುಹಯ್ಯ ಬೇಗದಿ
ತಪ್ಪದೆ ತರಿಸು ಬೊಲ್ಲನನು || ೧೨೫ ||

ಬೊಲ್ಲನ ತರಹೇಳಿ ಮಲ್ಲಯ್ಯ ಸಾಣಿಯ
ನಲ್ಲಿ ರುದ್ರನು ಕಳುಹಿದನು |
ಬಂದ ಬೊಲ್ಲಗೆ ಗಂಧ ಪುಷ್ಪ ಪರಿಮಳವನು
ತಂದು ಒಪ್ಪಿಸಿ ನೈವೇದ್ಯಗಳ || ೧೨೬ ||

ಒಂದು ಖಂಡುಗ ರಾಶಿ ಉಕ್ಕಿನ ಕಡಲೆಯ
ತಂದು ಕಟ್ಟಿದರು ಕವಣವನು |
ಇಂದೇರಿಸಿದ ಕಂಪಿನ ಹೂವು ಗಂಧಕ್ಷತೆಯ
ನಂದು ಬೊಲ್ಲಗೆ ನೀರ್ಗುಡಿಸಿ || ೧೨೭ ||

ಹಕ್ಕರಿಕೆಯ ಜೋಡು ಹೊಕ್ಕುಳ ಗಂಟೆಯು
ಇಕ್ಕೆಲದಲ್ಲಿ ಬಿಲ್ಲುಗಳ |

ಇಕ್ಕಿದ ಕರ್ಕಸ ಅಂಬು ಸಿಂಗಾಡಿಯು
ಪಕ್ಕೆಲಿ ಬಿಗಿದ ರಂಚಿಕೆಯು || ೧೨೮ ||

ಇಕ್ಕಿದ ಕಡಿವಾಳ ಉಕ್ಕಿನ ಭಲ್ಲೆವು
ಕಕ್ಕಡ ವಂಕಿ ಕೈಯ್ಯಂಬು |
ಎಕ್ಕಲ ಕೋರೆಯು ರಕ್ಕಸ ಬೊಲ್ಲಗೆ
ಇಕ್ಕೆಲದಲಿ ಬಿರಿದುಗಳು || ೧೨೯ ||

ಬೊಲ್ಲನ ಶೃಂಗರಿಸಿ ಎಪ್ಪತ್ತಿರಾಜನು
ನಿಲ್ಲದೆಲ್ಲರ ಕರೆಸಿದನು |
ಸಲ್ಲೀಲೆಯಿಂದ ಮೈಜೋಡನಂಗಕೆ ತೊಟ್ಟು
ಬಲ್ಲೈಸಿದ ತಲೆ ಠೌಳಿ || ೧೩೦ ||

ವೀರಜಡೆಯ ಹೆಣೆಸಿದ ಎಪ್ಪತಿರಾಜ
ಧೀರ ಬಂದನು ಬೊಲ್ಲನೆಡೆಗೆ |
ಸಾರಿ ಅರ್ಚಿಸಿ ಧೂಪ ದೀಪ ನೈವೇದ್ಯವ
ವೀರವಿಕ್ರಮ ಗೆಲ್ಲೆನುತ || ೧೩೧ ||

ಹಚ್ಚ ಕೆಚ್ಚನೆ ಆರತಿಯೆ[ತ್ತಿ] ಬೊಲ್ಲಗೆ
ಮಚ್ಚರಿಸಿದ ವೈರಿ ಗೆಲ್ಲು |
ಪಚ್ಚೆಯ ಜೋಡು ಹಕ್ಕರಿಕೆ ಹಲ್ಲಣ ಗುಬ್ಬಿ
ಗಚ್ಚಿನ ಮುಖರಂಬವೆಸೆಯೆ || ೧೩೨ ||

ಹೆಚ್ಚಿನ ಬೊಲ್ಲಗೆ ಶರಣೆಂದು ಎಪ್ಪತಿರಾಜ
ಉತ್ಸಾಹದಲಿ ಏರಿದನು |
ಅಚ್ಚಾಳು ಕುದುರೆ ಐವತ್ತು ಸಾವಿರ ಸಹ
ನಿಶ್ಚೈಸಿದ ರಾಮನ ಮೇಲೆ || ೧೩೩ ||

ತುಡುಮು ತಂಬಟ ಭೇರಿ ಗಿಡಿಬಿಡಿ ನಿಸ್ಸಾಳ
ಬಿಡದೊದರುವ ಚಿನ್ನಗಹಳೆ |
ಒಡನೆ ಬುರುಗು ನೌಬತ್ತು ಅಬ್ಬರದಿಂದ
ನಡೆದನು ಪಡೆ ಬೆದರ್ವಂತೆ || ೧೩೪ ||

ಅರಿರಾಯದಲ್ಲಣಮರ್ದನ ಬಿರಿದನು
ಸಾರಿಸುತಲಿ ಧೀರ ನಡೆದ |
ಮರೆಯದಿರೆಪ್ಪತ್ತಿರಾಜ ಈ ಮಾತನು
ಬರಿಗೈವೆನು ನಿನ್ನ ಬಲವ || ೧೩೫ ||

ತೋರು ಸಾಹಸವ ಎನ್ನೊಳಗಿದಿರಾಗೆಂದು
ಮೀರಿ ಹೊಯ್ದನು ಖಡ್ಗದಲಿ |
ಬೆನ್ಹತ್ತಿ ಕಡಿವುತ ಬರುವರ ರಾಮಯ್ಯ
ಚೆನ್ನಾಗಿ ಕಣ್ಣಿಲಿ ಕಂಡ || ೧೩೬ ||

ಇನ್ನು ಜಗಳ [ಹೆ]ಚ್ಚಿತು ನೋಡಿ ನೀವೆಂದು
ಮಾನ್ಯರಿಗಪ್ಪಣೆ ಕೊಟ್ಟ |
ದೃಢದಲಿ ರಾಮಯ್ಯ ನಡೆದು ದುವ್ವಾಳಿಸಿ
ಜಡಿದನು ವಜ್ರದಾಯುಧವ || ೧೩೭ ||

ಏರಿ ಇಕ್ಕೆಲದಲಾಗುವ ಬೊಬ್ಬೆಯ ಕೇಳಿ
ತೋರಿದ ರಾಮ ಕೈಗುಣವ |
ಧಾರುಣಿಯೊಳು ಇದಿರಾದರ ಸೀಳುವ
ತೂರಿದ ಗಾಳಿಯ ಮಾಡಿ || ೧೩೮ ||

ವಾರುವನೇರಿಸಿ ಕರುಳ ತರಿದನಾಗ
ಸೇರಿಸಿದನು ಯಮಪುರಿಗೆ |
ತೋರಿದ ಸಾಹಸವೇರಿ ಬೊಲ್ಲನ ರಣ
ಭಾರಿಯ ಮುರಿಯಲೇರಿದನು || ೧೩೯ ||

ಹೊಕ್ಕನು ರಣವ ನಿರಾಕರಿಸಿ ಬಲವನು
ಒಕ್ಕಲಿಕ್ಕಿಯೆ ತುಳಿಸಿದನು |
ಸೊಕ್ಕಮುರಿದು ಪ್ರತಾಪರುದ್ರನ ದಂಡ
ಲೆಕ್ಕವಿಲ್ಲದೆ ತರಿದೊಟ್ಟಿ || ೧೪೦ ||

ರಕ್ಕಸ ನೀಲನ ಏರಿ ರಾಮಯ್ಯನು
ಇಕ್ಕಡಿ ಮಂಡಲಿಕರನು |
ಹೊಕ್ಕರೀ ಬಲವ ಮನ್ನೆಯರು ಸಂಹರಿಸುತ
ಮುಕ್ಕಿಸಿದರು ರಕ್ತವನು || ೧೪೧ ||

ಆದಡೀ ಗಾಯವ ನೋಡೆಂದು ಹೊಯ್ದನು
ಮೇದುನಿಪತಿಯು ರಾಮಯ್ಯ |
ಭೇದಿಸಿ ಮೈಜೋಡು ಕತ್ತರಿಸಿ ಬಲು
ನಾದದಿಂದ್ಹೊಯ್ದ ಖಡ್ಗದಲಿ || ೧೪೨ ||

ಜೋಡು ಕತ್ತರಿಸಲು ರೂಢೀಶ ಕೋಪದಿ
[ಓ]ಡಿದೆಪ್ಪತ್ತಿರಾಜನನ |

ನೋಡಿ ಅಂತರಿಸದೆ ಓಡಿ ನಿಂದವರೆಲ್ಲ
ಹೇಡಿಗೊಂಡಿಹ ವ್ಯಾಳ್ಯದೊಳಗೆ || ೧೪೩ ||

ಹಲವು ಬಗೆಯ ಸಾಹಸವ ತೋರಿದೆ ವೀರ
ಭಲರೆ ಭಾಪುರೆ ಜಗಜಟ್ಟಿ |
ಛಲದಂಕನಹುದೆಂದು ತಲೆಯ ತೌಳಿಗೆ ಹೊಯ್ಯೆ
ಒಲಿದು ಬಿದ್ದನು ರಣದೊಳಗೆ || ೧೪೪ ||

ಬೀಳಲೊಡನೆ ಹಿಂಗಾಲು ಮುಂಗಾಲಿಂದ
ಏಳಲೀಸದೆ ಬಂದು ಬೆನ್ನ |
ಕಾಳಗದೊಳು ರಾಮನಾಥಗೆ ಬೊಲ್ಲನಂ
ದೇಳೀಗೆಯಲಿ ಬೆನ್ನನಿತ್ತು || ೧೪೫ ||

ಬೊಲ್ಲ ತನಗೆ ಸಾಧ್ಯವಾಗಲು ರಾಮಯ್ಯ
ನಿಲ್ಲದೆ ಕೋಟೆಯ ನೆಗೆಸಿ |
ಗಲ್ಲದ ಬಾರಲ್ಲಿ ಜಲ್ಲನೆ ಹರಿಯಲು
ಅಲ್ಲಿ ಮಾದಿಗ ಹಂಪ ತನ್ನ || ೧೪೬ ||

ಒಳದೊಡೆ ತೊಗಲ ತೆಗೆದು ಎದೆಬಾರನು
ಗೆಲವಿಂದಲದಕೆ ಹೊಂದಿಸಲು |
ಸಲಹುವೆ ನಿನ್ನ ಪ್ರಾಣಕೆ ಎನ್ನ ಜೀವವ
ನೊಲಿದೀವೆ ಹಂಪ ನೀ ಕೇಳೂ || ೧೪೭ ||

ಗೆಲಿದೂರ ಹೊರಟು ಚರರ ಕಳುಹಿದ ರಾಮು
ಒಲಿದು ಲಿಂಗನ ಕರೆಯೆನುತ ||
ನಲಿದೋಡಿ ಚರರಿತ್ತ ಭರದಿಂದ ಬಂದರು
ಉಲುಹನಾರಿಸುತ ಊರೊಳಗೆ || ೧೪೮ ||

ಧುರರೊರಗಿದ ಜಾಳಿ ಹರಿದು ಎಪ್ಪತಿರಾಜ
ಅರೆಗಣ್ಣ ತೆರೆದು ಎಚ್ಚತ್ತು || ೧೪೯ ||

ನೆರೆದಿರ್ದ ಮನ್ನೆಯರ ಕಳುಹಿದನು ತಾನು
ಅರಮನೆಗೈದಿದನಾಗ |
ಸಾರಿದವರ ಕಾಯ್ವ ಮೀರಿದವರ ಕೊಲ್ವ
ನೋರುಗಲ್ಲಿಗೆ ಕೋಳಾಹಳ || ೧೫೦ ||

ನರಪತಿ ವೀರಪ್ರತಾಪ[ನ] ಕೊಮಾರ ಹೊಕ್ಕನು
ಊರು ದುಗುಡದಲಿ |

ಹರುಷದಿಂದಲಿ ದೇವಿಶೆಟ್ಟಿಲಿಂಗನು ಆಗ
ಭರದಿಂದ ಊರ ಹೊರಟನು || ೧೫೧ ||

ವೀರಪ್ರತಾಪ[ನ] ದುಗುಡವ ಕಂಡು ರಾಮಯ್ಯ
ಭೇರಿಯ ಹೊಯ್ಸಿದನಾಗ |
ಊರ ಹೊರಗೆ ಇಹ ಪೌಜಿಗೆ ಇದಿರಾಫಿ
ಏರಿ ಮನ್ನೆಯರುಗಳೆಲ್ಲ || ೧೫೨ ||

ಸಾವಿರ ಕುದುರೇ[ಳು] ಸಾವಿರ ಕಾಲಾಳು
ಸಾವಿರ ಮನ್ನೆಯರ ತುರಗ |
ಭಾರಿಯ ನಿಗಳದ ಪರಿವಾರ ಕೂಡಿ[ತಾ]
ವೀರ ರಾಮನ ಇದಿರಿನಲಿ || ೧೫೩ ||

ಹುಯ್ಯಲ ಹಿಡಿದು ರಾಮನ ಹೋಗಲೀಸದೆ
ಕೈಯ್ಯ ಆಯುಧವ ಝುಳಪಿಸುತ |
ಹೊಯ್ಯುಹೊಯ್ಯೆನುತ ಮೂದಲಿಸಿದ ಏರಿದರಾಗ
ಒಯ್ಯನೆ ವೀರ ಪರಿವಾರ || ೧೫೪ ||

ಎರಡು ಬಲವು ಕೂಡಿ ತಗರಂದದಿ ತಾಕ್ಯಾಡಿ
ದೊರೆದೊರೆಗಳ ನೇಮದಲಿ |
ತುರುಗಕೆ ತುರುಗವು ಕರಿಗಳಿಗೆ ಕರಿಗಳು
ಹರಿಗೆ ಹರಿಗೆ ಬಿಲ್ಲಿನವರು || ೧೫೫ ||

ವೀರ ರಾಮನು ಹೊಕ್ಕ ಸಾ[ರ]ದಿ ತನ್ನೊಡನೆ ಮು
ನ್ನೂರು ಕುದುರೆಯು ಎಪ್ಪತ್ತು |
ಭೋರನೆ ಇರಿದು ಸಾವಿರ ಶೂಲಗಳಲಿ
ಧೀರ ಪ್ರತಾಪನ ಇದಿರ || ೧೫೬ ||

ಶರಣರ ಸೂಲವು ಇರಿದು ನೂಕುತ [ಬರೆ]
ಮುರಿದೋಡಿ ತಮತಮಗಲ್ಲಿ |
ಪರಿವಾರ ಪುರಜನ ಬಂದೋಡಿ ಹೊಕ್ಕರು
ಪುರವೋರ್ಗಲ್ಲ ಪಟ್ಟಣವ || ೧೫೭ ||

ಹಿಂದುಮುಂದೆಲ್ಲ ರಾಮನ ಬಲ ಕೂಡಿತು
ಸಂದಣಿಸಿತು ಮನ್ನೆಯರ |
ಮುಂದುವರಿದು ರಾಮ ಊರು ಹೊಗಿಸಿ ತಾನು
ಹಿಂದಕ್ಕೆ ತಿರುಗಿದ ಬೇಗ || ೧೫೮ ||

ಧರ್ಮಗಾಳೆಯ ಹಿಡಿಸಿದ ರಾಮಯ್ಯನು
ನಿರ್ಮಳದೊಳು  ಲಿಂಗನೊಡನೆ |
ಪೆರ್ಮೆಯೊಳೊಂದಾಗಿ ಮಾತುಗಳನಾಡುತ
ವರ್ಮವಿಲ್ಲದೆ ಮನದೊಳಗೆ || ೧೫೯ ||

ಓರುಗಲ್ಲನು ಹೊಕ್ಕರು ತಾವಾಗಲೆ
ವೀರ ರಾಮಯ್ಯ ನೆಲ್ಲೂರು |
ಸಾರಿ ವನವನು ಹೊಕ್ಕು ಶರಣರು ಇಹ
ದ್ವಾರವಾಟವನೊಳಪೊಕ್ಕ || ೧೬೦ ||

ಹೊಕ್ಕು ಶರಣರ ಅಡಿಗೆರಗಿದ ರಾಮಯ್ಯ
ಗಕ್ಕನೆ ಹೊರಟ ಬೇಗದಲಿ |
ಅಕ್ಕರಿಂದಲಿ ಬಹ ದಳವನು ಕಾಣುತ
ಹೊಕ್ಕು ಬಾಬಾಜಿ ನಿಲ್ಲೆನುತ || ೧೬೧ ||

ಬಿಡು ನಮ್ಮ ಎಪ್ಪತ್ತಿರಾಜ ಬೊಲ್ಲನನೆಂದು
ನುಡಿಯನು ಕೇಳಿ ರಾಮಯ್ಯ |
ಖಡ್ಗವನುಚ್ಚಿ ಕೋಪದಿ ಘಡಿಘುಡಿಸುತ
ಹೊಡೆದು ಬಾಬಾಜಿಯ ಬಲವ || ೧೬೨ ||

ಬೊಲ್ಲನ ಏರಿ ದುವ್ವಾಳಿಸಿ ರಾಮಯ್ಯ
ನಿಲ್ಲದೆ ಹೋಗುತಿರಲೊಡನೆ |
ಬಲ್ಲಿದ ಕೊಳ್ಳಿಯ ನಾಗಣ್ಣನೊಳಪೊಕ್ಕು
ಬಿಲ್ಲಿನ ಮಂದಿ ತಾ ಸಹಿತ || ೧೬೩ ||

ಗುಜ್ಜಲ ಓಬನು ಚೆಗತಮ್ಮ ಚೆನುಮಾದ
ಮಜಬಾಪುರೆ ರಾಮನೆಡೆಗೆ || ೧೬೪ ||

ಮುಂದಣ ಪೌಜಿಗೆ ಕೋಟೆಗರ ದ್ಯಾವನು
ಮಂದಿನ ನೋಡೆ ಹಾಯ್ಸಿಕೊಂಡು |
ಹಿಂದಕ್ಕೆ ಮರಳೆ ಪಾಪಯ್ಯನು ಮೂಗನು
ಅಂದು ಹಾಕಿದನು ಕುದುರೆಯನು || ೧೬೫ ||

ಕುದುರೆಯ ಹಾಕಲು ಒಡನೈದು ಮಂದಿಯು
ಕದುಬಿ ತಮ್ಮಯ ಮಂದಿ ಸಹಿತ |
ಒದಗಿತು ಬೂಟಕ ಬೊಮ್ಮನ ಮಂದಿಯು
ಚದರದೆ ರಾಮಯ್ಯನೊಡನೆ || ೧೬೬ ||

ಕಡಿದು ಕತ್ತರಿಸಿ ಖಂಡ್ರಿಸಿ ತುಂಡುಮಾಡಿದ
ವದನ ಒತ್ತರಿಸಿ ನಡೆ ಚೆನ್ನ |
ಸಿಡಿಲು ಹೊಡೆದಂತಾಗೆ ನಡುಗಿ ಹೋದರೆಲ್ಲ
ಅಡವಿ ಗಿಡಕೆ ಒಬ್ಬರಾಗಿ || ೧೬೭ ||

ಅತ್ತಲವರನಟ್ಟಿ ಇತ್ತಲೀ ರಾಮಯ್ಯ
ಒತ್ತಿ ನಡೆದನು ಮುಂದೆಸೆಯ || ೧೬೮ ||

ಮುತ್ತಿನಂದಣವೇರಿ ದೇವಿಸೆಟ್ಟಿಯ ಲಿಂಗ
ಹತ್ತಿ ವಾರುವನು ಹಾರಿಸುತ |
ಒತ್ತಿಲಿ ಮಾದಿಗ ಹಂಪ ಸಂಪಯ್ಯನು
ಸುತ್ತಲೈವರು ಮನ್ನೆಯರು || ೧೬೯ ||

ಚಿತ್ತಜ ಸಮರೂಪ ರಾಮಯ್ಯ ಅರ್ತಿಲಿ [ಬರೆ]
ಮೊತ್ತವ ಕಂಡು ಕಾಶ್ಮೀರ |
ಹೊತ್ತ ನ್ಯಾಜ್ಯವು ಹನ್ನೆರಡು ಸಾವಿರ ಮಂದಿ
ಮುತ್ತಿ ಮುಸುಕಿತು ಆ ಬಲವ || ೧೭೦ ||

ಬಿಡು ರುದ್ರರಾಯನ ಮಗನ ತೇಜಿ [ಯ] ಎಂದು
ತಡೆದನು ಕಾಶ್ಮೀರ [ಭೂ]ಪ |
ಜಡಿದು ಖಡ್ಗವನೆತ್ತಿ ಹೊಡೆದು ನೂಕಿತು ಬಲ
ಅಡೆಯೆದ್ದು ಮುರಿದು ಓಡಿದರು || ೧೭೧ ||

ಓಡದಿರೆಲ್ಲೊ ಹೇಡಿ ಮಾಡು ಹುಯ್ಯಲನೆಂದು
ನೋಡಿ ಭಲ್ಲೆಯದವರು ತಿವಿಯೆ |
ಮೂಡಿದ ಗಾಯವು ಪೌಜೆಲ್ಲ ಹೊರಬಿಟ್ಟೆ
ಓಡಿತು ಅಡವಿ ಪಾಲಾಗಿ || ೧೭೨ ||

ರೂಢಿಗೀಶ್ವರನ ಕೃಪೆಯುಂಟವನಿಗೆ
ನಾಡಾಡಿ ಮನ್ನೆಯವರೆಲ್ಲ |
ಜೋಡುಂಟೆ ಅವನಿಗೆ ಈ ನಾಡಿನೊಳಗೆಂದು
ಓಡಿಹೋದರು ತಮತಮಗೆ || ೧೭೩ ||

ಓಡಲತ್ತಲು ರಾಮ ಕೂಡಿ ಎಕ್ಕಟಿಗರು
ಬೀಡ ಬಿಟ್ಟರು ವಹಿಲದಲಿ |
ಅಲ್ಲಿಂದ ಮುಂದಕ್ಕೆ ನಡೆದು ಮೂಗಾವುದ
ಬಂದರು ಸಿದ್ಧವಟಕಾಗಿ || ೧೭೪ ||

ಕೆಂಧೂಳು ಮುಸುಕೆ ನಡೆದ ರಾಮನಾಥನು
ಕುಂದದೆ ಸಿದ್ಧವಟ್ಟದಲಿ |
ಇರುಳ ಕಳೆದು ನಿದ್ರೆಯೊಳೊರಗಿರ್ದು
ತೆರಳಿ ಮುಂದಕ್ಕೆ ನಡೆವಾಗ || ೧೭೫ ||

ರಟ್ಟಿನ ಹೊಳೆಯ ದಾಂಟಿಸಿ ಕಡಿದು ಬಂದು
ಬಿಟ್ಟನು ಬೆಳಗಿನೇಳ್ಯದಲಿ || ೧೭೬ ||

ಅಲ್ಲಿಂದ ತೆರಳಿ ಯಾದವಗಿರಿದುರ್ಗಕ್ಕೆ
ಬಲ್ಲಿದ ವೀರ ರಾಮಯ್ಯ |
ಬೊಲ್ಲನ ಏರಿ ದುವ್ವಾಳಿಸುತಲಿ ಬಂದು
ನಿಲ್ಲದೆ ಹೊಳೆಯ ದಂಡೆಯಲಿ || ೧೭೭ ||

ಅಡಿಗೆಯ ಮಾಡುಂಡು ಒಡನೆ ಎದ್ದನು ರಾಮ
ನಡೆದನು ಬೆಳ್ಳಬೆಳ[ತನ]ಕ |
ಅಡಗಿದ ಬೇಡರು ಅಡೆಯೆದ್ದು ಹೋದರು
ನಡೆದನು ಮುಂದಕ್ಕೆ ರಾಮ || ೧೭೮ ||

ಆದವನ್ನಿಗಾಗಿ ನಡೆದನು ರಾಮಯ್ಯ ವಿನೋ
ದದಿ ಹೊಳೆಯ ದಂಡೆಯಲಿ |
ಸಾಧಿಸಿ ಸ್ನಾನಪಾನವ ಮಾಡಿ ಉಂಡುಟ್ಟು
ಆ ದಿನಗಳೆದನು ಅಲ್ಲಿ || ೧೭೯ ||

ಅಲ್ಲಿಂದ ಮುಂದಕ್ಕೆ ಆದವನ್ನಿ [ಬಿಟ್ಟು]
ಬಲ್ಲಿದ ವೀರ ರಾಮಯ್ಯ |
ಬೊಲ್ಲನ ಏರಿ ದುವ್ವಾಳಿಸುತ ಬಂದನು
ಮೆಲ್ಲನೆ ಕುರುಗೋಡ ಬಳಿಗೆ || ೧೮೦ ||

ಮೂರು ದಿವಸ ತನಕ ನಿಲದಂಡ ನಿಲಿಸಿದ
ಚಾರುತನದ ವಾಣಿಯಲಿ |
ಭೂರಿಯ ಚರರುಗಳು ಇತ್ತ ಕಮ್ಮಟದೊಳು
ಮತ್ತೆ ಕಂಪಿಲನೊಳು ಉಸುರೆ || ೧೮೧ ||

ಕುರುಗೋಡ ಬಳಿಗೆ ಬಂದನು ರಾಮನಾಥನು
ದೊರೆಗಳ ದೇವ ಕೇಳೊಲಿದು |
ಧರೆಯೊಳಗುಳ್ಳ ರಾಯರು ನಿಮ್ಮ ಕಂದಗೆ
ಸರಿಯಾರೊ ಕಂಪಿಲರಾಯ || ೧೮೨ ||

ಓರುಗಲ್ಲವನ ಬೊಲ್ಲನ ತರಹೇಳಿದೆ
ವೀರ ರಾಮಯ್ಯಗವನಿದುರೆ |
ಹಾರಲೊದ್ದವನ ಎಪ್ಪತಿರಾಜನ ಗೆದ್ದು
ಸಾರಿ ತಂದನು ಕಂಪಿಲಿದಿರ || ೧೮೪ ||

ಓರುಗಲ್ಲವನ ಬೊಲ್ಲನ ತರಹೇಳಿದೆ
ವೀರ ರಾಮಯ್ಯಗವನಿದುರೆ |
ಹಾರಲೊದ್ದವನ ಎಪ್ಪತಿರಾಜನ ಗೆದ್ದು
ಸಾರಿ ತಂದನು ಬಿರಿದುಗಳ || ೧೮೩ ||

ಇತ್ತ ರಾಮಯ್ಯ ಪಾಳ್ಯವನಿಳಿದುದ ಕೇಳಿ
ಮತ್ತೆ ಬಂದನು ಕಂಪಿಲಿದಿರ || ೧೮೪ ||

ಕುರುಗೋಡ ಬಿಟ್ಟು ನಡೆಯ ಮುಂದಕಲ್ಲಿಂದ
ಹರುಷದಿಂದಲಿ ರಾಮನಾಥ |
ಇರದೆ ಕಂಪಿಲಿಯ ಸೋಮೇಶನೆಡೆಗೆ ಬಂದು
ಧುರಗಲಿ ರಾಮ ತಾನಿಳಿದ || ೧೮೫ ||

ಇಳಿದು ಸೋಮೇಶಗೆ ಥಳಥಳಿಸುವ ವಸ್ತ್ರ
ವಿಳಿವಿಡಿಸಿದನು ರಾಮಯ್ಯ |
ಭಾಳಲೋಚನ ಭವಪಾಪನಾಶನೆ ತ್ರಿ
ಶೂಲಧರನೆ ಜಯಜಯತು || ೧೮೬ ||

ಜಯ ಜಯ ಪಾಪನಾಶನೆ ಜಯ ಶಿರಕರಧರ
ಜಯತು ಜಯತು ಸೋಮೇಶ || ೧೮೭ ||

ಭೇರಿ ಮೃದಂಗ ತಪ್ಪಟೆ ಗಿಡಿಬಿಡಿ ಕೊಂಬು
ಭೋರು ಮೊರೆವ ನಾಗಸರವು |
ಭೋರೆಂಬ ವಾದ್ಯ ಘೀಳಿಡೆ ಬಂದ ಕಂಪಿಲ
ವೀರ ರಾಮಯ್ಯನಿದ್ದೆಡೆಗೆ || ೧೮೮ ||

ಬಂದ ಕಂಪಿಲರಾಯಗೊಂದಿಸಿ ರಾಮಯ್ಯ
ಬಂದು ಅಪ್ಪಿದನು ಭುಜತುಂಬ |
ಕಂದ ನೀ ಬಲ್ಲಿದನಹುದೊ ಬೊಲ್ಲನ [ತಾ]
ರೆಂದ ಮಾತಿಗೆ ಹೋಗಬಹುದೆ || ೧೮೯ ||

ಈತನಾರೆಂದು ಕೇಳಿದ ಭೂಪನಂದು
ಹೇಳಿದ ರಾಮನಾಥ |

ಕುಂದದೆ ಓರ್ಗಲ್ಲ ಪಟ್ಟಣಸೆಟ್ಟಿಯು
ದೇವಿಸೆಟ್ಟಿ ಲಿಂಗಣ್ಣ || ೧೯೦ ||

ಓರುಗಲ್ಲರಸಿನ ಬಲಕೆ ಬಲ್ಲಿದನಿವ
ಕಾರಮಿಂಚಾಗಿ ಹೊಳೆವನು |
ವೀರ ಮಾದಿಗ ಹಂಪ ಭಾರಿ ಎಕ್ಕಟಿಗ[ನು]
ಧಾರುಣಿಗಧಿಕ ಸಮರ್ಥ || ೧೯೧ ||

ಇವರಿರ್ವರಿಂದ ತಂದೆನು ಬೊಲ್ಲನ
ಬವರಕ್ಕೆ ನಿಶ್ಯಂಕರಹುದು |
ಭುವನದೊಳಿವರ ಸಾಮರ್ಥ್ಯಕ್ಕೆ ಇದಿರುಂಟೆ
ತ್ರಿವಿಧ ಲೋಕದೊಳು ಕಾಣೆನೆಂದ || ೧೯೨ ||

ಹೋದೆ ನೆಲ್ಲೂರಪುರದ ಗುಂಡಬ್ರಹ್ಮಯ್ಯಗೆ
ಅದಿ ಶರಣರ ಮಠಕೊಲಿದು |
ಭೇದವಿಲ್ಲದೆ ಮುಂದಕ್ಕಡಿಯಿಟ್ಟು ಹೋಗಲು
ಹಾದಿಲಿ ಕಂಡಿದಿರಾಗಿ || ೧೯೩ ||

ಆರು ನೀನಾವೂರು ಆರ ಮಗನು ಎಂದು
ಹಾರು ಮಾತಿಂದ ಕೇಳಿದರೆ |
ಧೀರ ಕಂಪಿಲನ ಕುಮಾರನೆಂದುಸುರಲು
ಘೋರನವನು ಎನ್ನನೆತ್ತಿ || ೧೯೪ ||

ಏನು ಕಾರಣ ಬಂದೆ ಚೆನ್ನಿಗ ರಾಮಯ್ಯ ಅ
ದೇನು ಹೇಳಾ ಎನ್ನೊಡನೆ |
ನಾನುಸುರಿದೆನು ಬೊಲ್ಲನ ತಾಹರೆ ಬಂದೆ
ಮಾನವೇಶ್ವರ ಕೇಳಿ ನುಡಿಯೆ || ೧೯೫ ||

ನಂಬಿ ಬೊಲ್ಲನ ಕೊಂಡುಬಂದೆವೀ ತೆರದಿಂದ
ಉನ್ನತ ಹರುಷದೊಳ್ ನಾವು || ೧೯೬ ||

ಬೊಲ್ಲನ ತರಿಸಿ ನೋಡಿದನಾಗ ಕಂಪಿಲ
ಉಲ್ಲಾಸದಿಂದ ಹರುಷದಲಿ |
ಬಲ್ಲಿದ ರಾಮಗೆ ತಕ್ಕಂಥ ವಾಜಿಯು
ಒಲಿದು ಕೊಟ್ಟನು ಜಟ್ಟಂಗೀಶ || ೧೯೭ ||

ದೇವಿಸೆಟ್ಟಿಯ ಲಿಂಗಣ್ಣಗೆ ರಾಮಯ್ಯ
ಭಾವದಿ ಉಡುಗೊರೆಗಳನು |

ಕೋವಿದ ರಾಮಗೆ ಗೆಲ್ಲಿಸಿ ಕರೆತಂದೆ
ಆವ ಜಲ್ಮದ ಗೆಣೆತನವೊ || ೧೯೮ ||

ಸೆಟ್ಟಿ ಲಿಂಗಣ್ಣಗೆ ಕೊಟ್ಟನು ನೀಲನ
ಪಟ್ಟುಪಟ್ಟಾವಳಿಗಳನು |
ಇಟ್ಟನು ಹುರುಮಂಜ ಒಂಟೆಗಳನು ಆಗ
ಕೊಟ್ಟನು ಪದಕ ಸರಪಳಿಯ || ೧೯೯ ||

ಮನ್ನೆಯ ಮಾದಿಗ ಹಂಪಗೆ ಕೊಟ್ಟನು
ಉನ್ನಂತ ದಟ್ಟಿ ಕಬಾಯಿ |
ಹೊನ್ನ ಬಳ್ಳದ ಹತ್ತೆಕಟ್ಟು ಸರಪಳಿಯನು
ಮನ್ನಿಸಿ ಕೊಟ್ಟನುಡುಗೊರೆಯ || ೨೦೦ ||

ಜಗಳವ ಗೆದ್ದು ಬೊಲ್ಲನ ತಂದು ಮುಂದಿಟ್ಟು
ಸೊಗಸಿಂದಲವರು ಕೈ ಮುಗಿಯೆ || ೨೦೧ ||

ಬಂದಿರ ನಿರ್ಮಳದೊಳಗೆ ನೀವೆಲ್ಲರು
ಇಂದೆಮ್ಮ ರಾಮಯ್ಯನೊಡನೆ |
ಸಂದೇಹವ್ಯಾತಕೆ ಗುಜಲೋಬ ಚಿನುಮಾದ
ಮುಂದಾದ ಸುದ್ದಿಯನುಸರೆ || ೨೦೨ ||

ಇಲ್ಲಿಂದ ಹೊರಟು ಹೋದೆವು ಒರ್ಗಲ್ಲಿಗೆ
ಎಲ್ಲ ಮನ್ನೆಯರನು ದಾಂಟಿ |
ಬಲ್ಲಿದ ಪ್ರತಾಪರುದ್ರ ತಾ ಕರೆಸಲು
ಅಲ್ಲಿಗೆ ಹೋದೆವೆಂದ್ಯೆಸೆ || ೨೦೩ ||

ರಾಮು ಹೋಗಲು ಎದ್ದು ಕುಳಿತನು ಪ್ರತಾಪ
ತಾನು ಮಾಡಿದನು ಉಡುಗೊರೆಯ |
ನೂನವಿಲ್ಲದೆ ಬಿಡಿದಿಯ ಮನೆಯ ಕೊಡಿಸಿದ
ಆನಂದದಲಿ ಹೋಗಿರೆಂದ || ೨೦೪ ||

ಎದ್ದು ಬರುತ ರಾಮಯ್ಯನ ಬಿರಿದುಗಳ
ನಿರ್ಧರದಲಿ ಭಟಹೊರ್ಗಗಳೆ |
ಇದ್ದಂತೆ ಕೊಂಡಾಡಲು ಕದನ ಹುಟ್ಟಿತು
ಬಿದ್ದರು ನಮ್ಮ ಮೇಲವರು || ೨೦೫ ||

ಹೆಣಮಯ ರಣಮಯವಾಯಿತು ಊರೊಳು
ರಣಕೇರಿ ಬಂದ ಬೊಲ್ಲನನು |

ಸೆಣಸಲು ರಾಮಯ್ಯ ಕಡಿದೇರಿ ಕೊಂದನು
ಅಣಕವನೆಂತು ಪೇಳುವೆನು || ೧೦೬ ||

ಈ ಬಗೆಯಲ್ಲಿ ಕುದುರೆಯನೆತ್ತಿಕೊಂಡು
ಬೇಗ ಹೊರಟು ಬಂದೆವೆನುತ |
ಹೋಗಿ ಬಂದಂಥ ಸುದ್ದಿಯ ಕೇಳಿ ಕಂಪಿಲ
ಆಗ ಸಂತಸಗೊಂಡ ರಾಯ || ೧೦೭ ||

ಮಾನ್ಯರಿಗೆಲ್ಲ ಉಡುಗೊರೆಗಳ ಕೊಟ್ಟು
ಹೊನ್ನು ಹಣವ ಹಂಚಿ ಕೊಟ್ಟು |
ಉನ್ನಂತ ಹರುಷದಿ ಬಿರಿದು ಬಾವುಲಿ ಕೊಟ್ಟು
ಮನ್ನಿಸಿದನು ರಾಯನವರ || ೧೦೮ ||

ಮೂರು ಸಾವಿರ ಬಲ ಮುನ್ನೂರು ವಾಜಿಯು
ಸಾರಿ ರಾಮಯ್ಯನ ಕೊಡೆ |
ಭೇರಿಯ ಹೊಯ್ಯುತ ಬಂದು ಕೈಮುಗಿದರು
ಧಾರುಣಿಪತಿಯು ಕಂಪಿಲಗೆ || ೧೦೯ ||

ತೆರಳಿ ಅಲ್ಲಿಂದ ಮುಂದಕ್ಕೆ ಹೊಳೆಯ ದಾಂಟಿ
ಉರವಣಿಯಲಿ ಹೊಸಮಲೆಗೆ |
ಧುರಧೀರ ಬಾಹದ ಕಂಡು ಹರಿಯಲದೇವಿ
ಹರಿವಾಣದಾರತಿಯ ಪಿಡಿದು || ೧೧೦ ||

ವೀರ ರಾಮಯ್ಯಗಾರತಿಗಳ ತಂದಂಥ
ನಾರಿಯರುಗಳ ಶೃಂಗಾರವ |
ಆರು ಪೊಗಳುವರು ಧಾರುಣಿಯೊಳಗೊರ್ವ
ವಾರಿಜೋದ್ಭವಗಿಂದ್ರಗಳವೆ || ೧೧೧ ||

ಮನ್ನೆಯ ಮಾಂಡಲಿಕರು ಮಂತ್ರಿ ಬೈಚಪ್ಪ
ಅಣ್ಣ ಕಾಟಣ್ಣ ಸಹೋದರರು |
ಚೆನ್ನಾಗಿ ರಾಮಯ್ಯನ ಇದಿರುಗೊಂಡರು ಎಲ್ಲ
ಸನ್ಮತದಿಂದಲಾಕ್ಷಣದಿ || ೧೧೨ ||

ಬಂದ ರಾಮನ ತಬ್ಬಿ ನಿಂದು ಆರತಿ ಎತ್ತಿ
ಕಂದನ ಕೈವಿಡಿದುಕೊಂಡು || ೧೧೩ ||

ಕಳುಹಿದನಣ್ಣ ಕಾಟಣ್ಣನ ರಾಮಯ್ಯ
ಕಳುಹಿದ ಭಾವ ಸಂಗಮನ |

ಕಳುಹಿದ ಮಂತ್ರಿ ಬೈಚಪ್ಪನ ಬೇಗದಿ
ಕಳುಹಿದ ಮನ್ನೆಯರುಗಳ || ೨೧೪ ||

ತನ್ನೊಡನಿತ್ತ ಬಂದವರಿಗೆ ಮನೆಗಳ
ಉನ್ನಿಸಿದನು ರಾಮನಾಥ |
ಮನ್ನಿಸಿ ಕಳುಹಿದ ಮನ್ನೆಯರೆಲ್ಲರ
ಭಿನ್ನವಿಲ್ಲದೆ ಅರಮನೆಗೆ || ೨೧೫ ||

ಚಿನುಮಯ ರೂಪ ಜಟ್ಟಂಗಿರಾಮನೆ ಗತಿ
ಎನುತ ಹೊಕ್ಕನು ಅರಮನೆಯ || ೨೧೬ ||

ತನ್ನರಮನೆಯ ಹೊಕ್ಕನು ರಾಮನಾಥನು
ಪನ್ನಗಂಧರ ಗತಿಯೆನುತ |
ಭಿನ್ನವಿಲ್ಲದೆ ಭೋಜನ ಮಾಡಿ ರಾಮಯ್ಯ
ಮನ್ನಿಸಿ ಸತಿಯರೆಲ್ಲರನು || ೨೧೭ ||

ಇದು ಪರನಾರಿ ಸೋದರ ರಾಮನಾಥನ
ಪದಕೃತಿಯೊಳು ಬೊಲ್ಲನನು |
ಇರದೆ ಬೊಲ್ಲನ ತಂದು ಮೆರೆವ ಜಟ್ಟಂಗಿ
ವರದಿಂದ ನೀನಹುದೊ ಎಂದು || ೨೧೮ ||

ಇದು ಪರನಾರಿ ಸೋದರ ರಾಮನಾಥನ
ಪದಕೃತಿಯೊಳಗೊಂದು ಕಥೆಯ |
ಕದನವ ಗೆದ್ದು ಬೊಲ್ಲನ ತಂದ ರಾಮ
ಪದಗಳು ಪೂರಾಯ್ತು ಮುಂದೆ || ೨೧೯ ||

**ಅಂತು ಸಂಧಿ ೮ಕ್ಕಂ ಪದನು ೭೨೮ಕ್ಕಂ ಮಂಗಳ ಮಹಾಶ್ರೀ**

## ಸಂಧಿ ೯ - ಹುಳಿಯೇರ ಕಾಳಗ

ಶ್ರೀ ಗಿರಿಜಾ[ಸ್ಯಾಂಬುಜ ದಿನ]ನಾಯಕ
ಭೋಗಿಭೂಷಣ ಭಾಳನೇತ್ರ |
ಭಾಗೀರಥಿಧರ ಭವರೋಗವೈದ್ಯನೆ
ನಾಗ[ಕುಂಡಲ] ಶರಣೆಂಬೆ || ೧ ||

ದೇವ ಜಟ್ಟಂಗಿದೇವರ ಪಿಂಡ ರಾಮಯ್ಯ
ಕೋವಿದೆಪ್ಪತ್ತಿರಾಜನ |

ಅವನ ಬೊಲ್ಲನ ತಂದು ಕುಮ್ಮಟದೊಳು
ಭಾವಜ ರಾಮಯ್ಯನಿರಲು || ೨ ||

ಅತ್ತ ಹುಳಿಯೇರ ಮಾರಿಭೂಪನು ತನ್ನ
ಒತ್ತಿನ ಮನ್ನೆಯರೊಡನೆ |
ಚಿತ್ತಜರೂಪ ರಾಮನ ಕೊಡೆ ಕಾದುವ
ಅರ್ತಿಲಿ ಮಂತ್ರಿಯೊಳುಸುರೆ || ೩ ||

ಕೇಳುತ ಮಾತುಗಳನು ಶಿರೋಮಣಿ ತಾನು
ಬಹಳ ಹರುಷದಿಂದಲೆದ್ದು |
ವೀಳ್ಯವ ಎಕ್ಕಟಿಗರಿಗಿತ್ತನು ತಾನು
ಕೇಳಿದ ಕುಮ್ಮಟದರಸು || ೪ ||

ಮಾರಿಗೊಂಡನು ತನ್ನ ಮಂತ್ರಿಯೊಳುಸುರುತ
ಮೂರು ಮಾತುಗಳನಾಡಿದನು |
ಗಾರುಡವನು ಮಾಡಿ ಓರುಗಲ್ಲಿಗೆ ಹೋಗಿ
ವಾರುವ ತಂದನಂತೆ ರಾಮ || ೫ ||

ಅಲ್ಲಿ ತನ್ನಯ ಬಿರಿದುಗಳ ಕೊಂಡಾಡಿಸಿ
ಎಲ್ಲ ರಾಯರಗಂಡನೆಂದು |
ಇಲ್ಲದ ತಳ್ಳಿಗಳನು ಮಾಡಿ ಕಡಿದಾಡಿ
ನಿಲ್ಲದೆ ಓಡಿ ಬಂದನಂತೆ || ೬ ||

ಕಳ್ಳ ಬೇಡನಿಗಿಷ್ಟು ಕಾತರವೇಕೆನುತ
ವಿಳ್ಳಾಟವನು ಬಿಡಿಸುವೆನು |
ಬಳ್ಳಿ ತೋಟಿಗರು ಕೊಯ್ದಂತೆ ಕುಮ್ಮಟವನು
ಹಳ್ಳಿಯ ಮಾಡಿ ಆಳುವೆನು || ೭ ||

ಗುತ್ತಿಯ ಜಗದಪ್ಪರಾಯನ ಮಗಳನು
ಕತ್ತಿಲಿ ಗೆದ್ದು ತಂದೆನುತ |
ಸುತ್ತಣ ರಾಯರ ಗಂಡನೆಂದೆನಿಸು[ವ]
ಮೊತ್ತದ ಬಿರಿದ್ಯಾಕೆ ತನಗೆ || ೮ ||

ಸುತ್ತಣ ಸಣ್ಣ ಪಾಳೆಯಗಾರರಿಗೆಲ್ಲ
ಒತ್ತಿ ರಾಜ್ಯವ ಕಟ್ಟಿದಂತೆ |
ಮತ್ತೆ ನಮ್ಮ ಮೇಲೆ ಎತ್ತಿ ಬಂದರೆ ಇನ್ನು
ಮುತ್ತಿ ಹಿಡಿವೆನು ಕೈಸೆರೆಯ || ೯ ||

ಇಂತಪ್ಪ ಸುದ್ದಿಯ ಕೇಳಿ ರಾಮಯ್ಯನು
ಅಂತರಂಗದೊಳು ಕೇಳಿದನು |
ಪಂಥದಿ ಹುಳಿಯೇರು ರಣರಂಗ ಭಯವಾಯ್ತು
ಚಿಂತೆಯು ನಮಗೇತಕೆಂದ || ೧೦ ||

ಇತ್ತ ಸುದ್ದಿಯ ಕೇಳಿದನು ರಾಮಯ್ಯ
ಎತ್ತಿದ ಧ್ವಜ [ಪತಾ]ಕವನು |
ಮುತ್ತಿಗೆ ಹುಳಿಯೇರಿಗೆಂದು ಮನ್ನೆಯರನು
ಇತ್ತ ಶೃಂಗರಿಸಿ ರಾಮಯ್ಯ || ೧೧ ||

ಕರೆಸಿದ ತನ್ನ ಎಕ್ಕಟಿಗೆ ನಾಯಕರನು
ಕರೆಸಿದ ಕಂಪಿಲನರಸ |
ಕರೆಸಿದ ಮಂತ್ರಿ ಬೈಚಪ್ಪನ ಬೇಗದಿ
ಕರೆಸಿ ವೀಳ್ಯವನಿತ್ತ ರಾಮ || ೧೨ ||

ಅರುಸು ಮಂತ್ರಿಗಳೆ[ಲ್ಲ] ಎಕ್ಕಟಿಗರು ಎಲ್ಲ
ಬೆರಸಿ ಏಕಾಂತವಾಡಿದರು |
ತುರಗ ಕರಿಯು ಹರಿಗೆ ಭಟರುಗಳನು
ನೆರಹಿದ ಕಾಲಾಳು ಬೇಗ || ೧೩ ||

ಕರಿಯ ಸಾರಂಗನು ಕುಣಿಕಾಲ ಬೊಲ್ಲನು
ಬಿರಿದು ಬಿಂಕದ ಜಂಬನನು || ೧೪ ||

ಹುಳಿಯೇರ ಮಾರಿಗೊಂಡನ ಗಂಡನೆಂದೆಂಬ
ತಳುಕಿನ ಪದಕವನಿಟ್ಟು |
ಫಳಿಲನೆ ತೇಜಿಯನೇರಿ ತಾ ಹೊರಟನು
ಇಳಿದನು ಹೊರ ಪಯಣವನು || ೧೫ ||

ತಂದೆ ಕಂಪಿಲರಾಯಗೊಂದನೆಯನು ಮಾಡಿ
ಮುಂದೆ ತೆರಳಿದ ದಾರಿವಿಡಿದು |
ಬಂದು ಬಿಟ್ಟನು ದಂಡ ಗಂಡಿಬಾಗಿಲ ಮುಂದೆ
ಮುಂದಣುಜ್ಜಣಿಯ ಬಯಲಿಗೆ || ೧೬ ||

ಇರುಳಲಲ್ಲಿ ಕಳೆದು ಸೂರ್ಯ ಉದಯವಾಗಲು
ತೆರಳಿ ಕೊಡಲಿಗೆಯೊಳಿಳಿದ |
ಭರದಿಂದ ಉಂಡು ಬೈಗಿನ ಪಯಣವು ಬೇಗ
ಬೆರಸಿ ನಡೆಯಿತು ದಂಡು ಮುಂದೆ || ೧೭ ||

ಭರದಿಂದ ನಾಲ್ಕು ಪಯಣವ ಹೋಗಿ ಮುಂದಕ್ಕೆ
ತೆರಳಿ ಕಣಜದಹಳ್ಳಿಯಲ್ಲಿ |
ನೆರೆಯಲ್ಲಿ ಬೀಡು ಬಿಟ್ಟರು ಪಾಳೆಯವನು
ಮರಿವುಂಟ್ಲು ಬೂದಿಹಳ್ಳಿಯಲಿ || ೧೮ ||

ಅಲ್ಲಿಂದ ಮುಂದಕ್ಕೆ ತೆರಳಿ ಬಂದನು ಬೇಗ
ಎಲ್ಲರು ಒಂದೆ ಒಗ್ಗಿನಲಿ || ೧೯ ||

ನಿಲ್ಲದೆ ಬಂದಿಳಿದನು ಹುಳಿಯೇರಿನ
ಬಲ್ಲಿದ ನಂದನ ವನದಿ |
ನಿಲ್ಲದಿತ್ತಲಿ ಹುಳಿಯೇರ ಮಾರನು ತಾ
ಮೆಲ್ಲನೆ ಕರೆ[ಸೆ] ಮಂತ್ರಿಯನು || ೨೦ ||

ಕರೆಯಲು ಬಂದ[ರು] ಮಂತ್ರಿಕರೆಲ್ಲ[ರು]
ಅರಸೆ ನೀ ಕರೆಸಿರುವುದೇನು |
ತರಿಸುಡುಗೊರೆಯ ಎಕ್ಕಟಿಗರೆಲ್ಲಕೆ ನೀನು
ಕರೆಸು ಮನ್ನೆಯ ಮಾಂಡಲಿಕರ || ೨೧ ||

ಊರ ಬಳಸಿ ರಾಮ ದಂಡ ಬಂದಿಳಿದನು
ತೋರುತ ತನ್ನ ಸಾಹಸವ |
ಭೋರನೆಪ್ಪತ್ತು ಮನ್ನೆಯರು ಸಹವಾಗಿಯೆ
ಊರಮಂದಿಳಿದನೆಂದೆನಲು || ೨೨ ||

ಇತ್ತ ರಾಮನು ಪರಿವಾರ ಸಹ ಊರ
ಹತ್ತಿರೆ ಇಳಿದನೀ ಕ್ಷಣಕೆ |
ಮತ್ತೆ ಹುಳಿಯೇರು ಭೂಪತಿ ತನ್ನ ಮನದೊಳ
ಗತ್ಯಂತ ಹರುಷ ತಾಳಿದನು || ೨೩ ||

ಸುತ್ತಣ ಮಾನ್ಯರಿಗೋಲೆಯ ಬರೆಸಿದ
ಮತ್ತೆ ಬೇಗ ಬನ್ನಿರೆಂದು |
ಮುತ್ತಿಗೆ ಹುಳಿಯೇರಿಗಾಗಲು ಭೂಪ ತಾ
ನಿತ್ತ ಮಾನ್ಯರ ಕರೆಸಿದನು || ೨೪ ||

ಎಲ್ಲಿಯ ಮುತ್ತಿಗೆ ಎತ್ತಣ ದಾಳಿಯು
ಬಲ್ಲಿದರಾರು ನಿನ್ನೊಡನೆ |
ನಿಲ್ಲುವನಾವ ರಾಯನು ನಿನಗೆ ಭೂಪತಿ
ಸೊಲ್ಲಿಸೆನ್ನೊಳು ಸವಿಮಾತ || ೨೫ ||

ಹೊಸಮಲೆಯನಾಳುವ ಕಂಪಿಲ ಭೂಪನ
ಕುಶಲ ಕುಮಾರ ಬಂದಿಹನೆ |
ಎಸೆವ ಸತ್ತಿಗೆ ನೆಳಲಲಿ ರಾಮನಾಥನು
ಮುಸುಗುತ ಬಂದನಾಹವಕೆ || ೧೬ ||

ಕರೆಸು ನಮ್ಮಯ ಪರಿವಾರ ಎಕ್ಕಟಿಗರ
ಅರಸುಮಕ್ಕಳು ಮಂತ್ರಿಯನು |
ವಿರಸಕೆ ನೆರೆದುದು ಪದಿನೆಂಟು ಸಾವಿರ
ಕರಿ ತುರಗವು ಏಳ್ನೂರು || ೧೭ ||

ಹಿರಿಯೂರನಾಳ್ವ ನರಸನ ಕರೆಸಿದ
ದೊರೆ ಮಾರಭೂಪಾಲನೊಲಿದು |
ಕುರುಸಾಣಿ ಬಾಗೂರು ಕಟ್ಟೆಯನಾಯ್ಕನ
ಪರಿವಾರ ನೆರೆದುದು ಆರುನೂರು || ೧೮ ||

ಮಾನ್ಯರು ಗೋವಿಂದನೊಡಗೊಂಡು ಸಾವಿರ
ಮುನ್ನೂರು ವಾರುವ ಸಹಿತ |
ಸಣ್ಣಕ್ಕಿ ಬಾಗೂರನಾಳ್ವ ನಾಯಕನಿಗೆ
ಮಾನ್ಯರು ಕುದುರೆಯ ಪೌಜು || ೧೯ ||

ಮನ್ನೆಯ ಮಾರುಭೂಪತಿಯ ಕೂಟಕೆ ಬಂದ
ಮುನ್ನೂರು ಕರಿಯ ಆರುನೂರು |
ಇನ್ನೊಂದು ಸಾವಿರ ಕಾಲ್ಬಲಕಧಿಕವು
ಮುನ್ನೂರು ಲಕ್ಷ ಪೈಟಣೆಯು || ೨೦ ||

ಸುತ್ತಲ ಅರಸರ ಕೂಟವ ಕೂಡಿಸುವ ಭೂಪ
ನೊತ್ತಿ ಲೆತ್ತವನಾಡುತಿರಲು |
ಮುತ್ತಿಗೆ ತೆಗೆಸಬೇಕೆಂದು ಯೋಚನೆಮಾಡಿ
ಅತ್ತ ಮನ್ನಯರು ಹಿಗ್ಗುತಲಿ || ೨೧ ||

ಲೇಸನಾಡಿದೆ ದೊರೆಗಳ ದೇವ ನಿನ್ನಯ
ಭಾಷೆಯ ಸಲಿಸುವೆನೆನಲು |
ವಾಸೆಯಿಂದಲಿ ಬಂದು ಅಸಗೋಡ ನಾಯಕ
ಲೇಸಿನ ವೀಳ್ಯವ ಪಿಡಿದ || ೨೨ ||

ಮುಂದಣ ವೀಳ್ಯವು ಅವಗೇಕೆ ಎನುತಲಿ
ನಿಂದ ಬಾಗೂರ ಓಬಯ್ಯ |

ಹಿಂದಣ ಹುಯ್ಯಲದೊಳು ತಾನು ಪಿಡಿದಿರ್ದ
ಚಂದ್ರವಂಕಿಯ ಬಿಟ್ಟು ಬಂದ || ೩೩ ||

ತಂದ ನಮ್ಮೊಳಗಿರ್ದ ಬಂಟ ಬಾಗೂರ ತಿಪ್ಪ
ಮುಂದ್ಯಾಕೆ ಅವನಿಗೆ ವೀಳ್ಯ |
ಅಂದ[ಣ]ವೇರಿಯೆ ಹೊರಟು ಬಂದನು ಹುಳಿಯೇರ
ನಂದ ರಾಯಿನಪಾಲ ಸಹಿತ || ೩೪ ||

ವೀಳ್ಯವ ಹಿಡಿದು ಎಕ್ಕಟಿಗರೆಲ್ಲ ಕೂಡಿ
ಭಾಳದ ಲಿಪಿ ಒರೆಸುವಂತೆ |
ನಾಳಿಯ ಹುಯ್ಯಲೊಳಗೆ ಎನ್ನ ನೋಡೆಂದು
ವೀಳ್ಯವ ರಾಯಿಪಾಲ ಹಿಡಿದ || ೩೫ ||

ಹಿಡಿದಂಥ ವೀಳ್ಯವ ತಡೆದ ಮನ್ನೂಲ ಮಾಡ
ಕಡುಗಲಿ ರಾಯಿಪಾಲ ಜರಿದ |
ಬಿಡು ಅವರಿಗ್ಯಾಕೆ ರಾಯಿಪಾಲನನ್ನು
ತೊಡರ ಬಾಪು[ರ] ಬಿಟ್ಟು ಬಂದ || ೩೬ ||

ಮನ್ನೂಲ ಮಾರ [ನ] ವೀಳ್ಯವ ತಡೆದನು
ಚೆನ್ನ ಕಂಪಿಲಿಯ ಸೋಮುಗನು |
ಇಂದಿವಗ್ಯಾಕೆ ವೀಳ್ಯವು ಎಂದು ಜರಿದನು
ತನ್ನ ಜಲ್ಲಿಯು ಬಿದ್ದಿರಲು || ೩೭ ||

ಇರದೆ ನಮ್ಮೊಳಗಿಹ ಬಂಟ ತಂದನು ಜೀಯ
ಕರೆದೇಕೆ ಅವನು ಮನ್ನಿಸಿದೆ |
ಹಿರಿಯೂರವ ಜಗಳದಿ ತನ್ನ ಬಿರಿದಿನ
ಸುರಗಿ ಮುಕ್ಕ[ಣ] ನ್ಯಾಜ್ಯವನು || ೩೮ ||

ತನ್ನ ಕೊರತೆಯ ತಾನರಿಯದೆ ನ್ಯಾಜ್ಯವ
ಭಿನ್ನವಿಲ್ಲದೆ ಬಿಟ್ಟುಬರಲು |
ಹೊನ್ನೂರ ಇರಪಯ್ಯ ತಂದನು ಇವಗ್ಯಾಕೆ
ಮುನ್ನಿನ ವೀಳ್ಯವಿತ್ತಯ್ಯ || ೩೯ ||

ತಡೆದನಾತನ ವೀಳ್ಯವನು ಇರುಪನು
ಕಡುಗಲಿಯಿಂದ ಸೋಮುಗನು |
ಬಿಡದೆ ಜಡಿದನು ಸುರಗಿಯ ಕೊಂಡುಬಂದನು
ನಡಗೂರ ಬಸವನೆಂಬನು || ೪೦ ||

ಬಸವನ ವೀಳ್ಯವ ತಡೆದನು ಅವನೊಬ್ಬ
ಬಸವಾಪುರದ ಬೊಮ್ಮಲಿಂಗ |
ಅಸಗೋಡ ಜಗಳದೊಳಗೆ ತನ್ನ ಬಿರುದನು
ಬಿಟ್ಟು ಬಂದನು ಅವಗ್ಯಾಕೆ || ೪೧ ||

ಅಸಹಾಯಶೂರನೆಂದೆಂಬ ಗರ್ವಿಕೆಯಲ್ಲಿ
ಉಸುರಿದ ದೊರೆಯ ಮಧ್ಯದಲಿ |
ಆದರೆ ಲೇಸನಾಡಿದೆ ಬೊಮ್ಮುಗ ನಿನ್ನ
ವಾದ ವಾದಿಯ ಗೆಲ್ಲಬೇಕು || ೮೨ ||

ಭೇದಿಸಿ ವೀಳ್ಯವ ಇವನಿಗೆ ಕೊಡಬೇಕು
ಕಾದಲೆ ಗಿರಿಯ ನೋಡಿದನು |
ಕಾದಲೆ ವೀಳ್ಯವ ಗಿರಿಯನು ತಡೆದನು
ಸಾಧನೆ ಸಿದ್ಧನ ಮಗನು || ೪೩ ||

ಬೇಧವಿಲ್ಲದೆ ರಣರಣದಿ ತನ್ನ ಕತ್ತಿಯ
ಮೂದಲಿಸಲು ಬಿಟ್ಟುಬಂದ |
ಮೇದುನಿಪತಿ ಕೇಳು ಇವಗ್ಯಾಕೆ ವೀಳ್ಯವು
ಹಾಯ್ದು ತಡೆದುಕೊಂಡ ಗಿರಿಯ || ೪೪ ||

ಕದುಬಿ ತಡೆದ ಮುರುಡಿಯ ಚೆನ್ನಸೋಮನು
ಮೊದಲು ವೀಳ್ಯವು ತನಗ್ಯಾಕೆ || ೪೫ ||

ಚೆನ್ನಸೋಮಯ್ಯನ ಜರಿದು ವೀಳ್ಯವ ತಾನು
ಮನ್ನೂಲ ಮಾಚ ತಾ ನುಡಿದ |
ಚೆನ್ನಾಯಿತಿವನ ಕೈಯೊಳಗಣಾಯುಧವನು
ಕನ್ನವೆಂಬವ ತೆಗೆದು ತಂದ || ೪೬ ||

ಕನ್ನನ ವೀಳ್ಯವ ತಡೆದನು ಬೂಟಕ
ಚೆನ್ನಮರುಳೆಯ ಪಾಪಯ್ಯ |
ತನ್ನ ಆಯುಧವನು ಬಿಟ್ಟು ಬರಲು ಬೇಗ
ಉನ್ನತ ಮೀನಿಗರ ಲಕ್ಕ || ೪೭ ||

ಬಿದ್ದ ಆಯುಧವನು ಗೆದ್ದು ತಂದನು ತಮ್ಮ
ಮುದ್ದು ಬಸವಯ್ಯನೆಂಬವನು |
ಗೆದ್ದು ವೀಳ್ಯಗಳನು ಪಿಡಿದು ಬಾರೋ ನೀನು
............ ತಮತಮಗಾಗ || ೪೮ ||

ಮೇದುನಿಯೊಳಗೆ ಇವಗ್ಯಾಕೆ ವೀಳ್ಯಗಳೆಂದು
ಮೂದಲಿಸುವ ತಮತಮಗೆ |
ವಾದಿಸಿ ವೀಳ್ಯವ ಪಿಡಿದರೊಬ್ಬೊಬ್ಬರು
ಅದುಕೊಂಡರು ಹೊಳಕೆಯಲಿ || ೪೯ ||

ಹೊಳಕೆಯ ಹಿಡಿದು ಬಂಟರು ಮಾರಭೂಪನ
ಕಲಹವ ಕಂಡು ತಮತಮಗೆ |
ಗಲಭೆಯ ನಿಲಿಸುತ ಹೊಳಕೆಯ ಬಂಟರು
ಸುಳುಹುದೋರುತ ಪರಬಲಕೆ || ೫೦ ||

ಏರಿತು ಹನ್ನೊಂದು ಸಾವಿರ ಭಟರ್ಗಳು
ವೀರ ರಾಮಯ್ನ ಕೆಣಕಿದರು || ೫೧ ||

ಭರದಿಂದಲೇರಿ ಮುತ್ತಿಗೆಯನು ತೆಗೆಸಿದರು
ದೊರೆ ಮಾರಭೂಪನ ಭಟರು |
ತೆರಳದೆ ಹಿಂದೆ ರಾಮನ ಪರಿವಾರವು
ನೆರೆದ ಬಂಟರನು ಬೆನ್ಹತ್ತಿ || ೫೨ ||

ಹುಯ್ಯಲ ಹಿಡಿದರು ರಾಮನ ಭಟರಾಗ
ಒಯ್ಯಾರದಲಿ ಭಟರೊಡನೆ |
ಕೈಯ್ಯಮಾಡುತ ರಣದೊಳು ಕಲಿಭಟರಾಗ
ಮುಯ್ಯೆಂದು ಕೆಡಹಿ ಮಾರ್ಬಲವ || ೫೩ ||

ಅರಿರಾಯ ಮಾರಮರ್ದನ ಚೆನ್ನರಾಮನು
ಧುರಗಲಿಗಳ ಕೂಡಿಕೊಂಡ |
ನೆರೆದ ಮಾರ್ಬಲದೊಳು ತುರುಗವ ನೋಡುತ
ಇರಿದು ರಾಹುತರನು ಕೆಡಹಿ || ೫೪ ||

ಶಿರಗಳನರಿದು ಚೆಂಡಾಡುತ ರಾಮನ
ಪರಿವಾರ ನಾಯಕರೆಲ್ಲ |
ತರಿದು ಗೋನಾಳಿಯ ಬಿಡಿಸುವ ಭಟರ್ಗಳ
ಉರುಬಿ ರಣವ ಹೊಕ್ಕರೊಡನೆ || ೫೫ ||

ಅರೆ ರಾಹುತ ಭಲಭಲರೆ ರಣರಂಗದಿ
ಸರಸರಿ ನಿಲ್ಲುನಿಲ್ಲೆನುತ |
ಧುರಧೀರ ರಾಮನ ಪರಿವಾರವೆಲ್ಲವು
ಪರಬಲದೊಳಗೆ ಮೂದಲಿಸೆ || ೫೬ ||

ಮುಂದಿಟ್ಟ ಕಾಲನು ಹಿಂದಕ್ಕೆ ತೆಗೆಯದೆ
ಸಂಧಿಸಿ ಮುಂದ[ಲೆ] ಹಿಡಿದು |
ಬಂದು ಹೊಕ್ಕರು ಹುಳಿಯೇರ ಮಾರನ ಬಲ
ಒಂದುಳಿಯದೆ ತರಿದೊಟ್ಟಿ || ೫೭ ||

ಅಟ್ಟಿ ಇರಿದು ತಲೆಯೊಟ್ಟಿ ಮೂದಲಿಸುತ
ನಿಟ್ಟೆಲುವುಗಳ ಮುರಿವುತಲಿ || ೫೮ ||

ಮುರಿದ ಬಲವನು ಸಂತೈಸಿ ಮಾರಭೂಪಾಲ
ವರದ ಎಕ್ಕಟಿಗರ ಕೂಡೆ |
ಸರಿದೊರೆಗಳು ಮುನ್ನೂರು ಮಂದಿಯು ಸಹ
ಹರಿದು ಹೊಕ್ಕನು ರಣದೊಳಗೆ || ೫೯ ||

ಮುರಿದ ಬಲವು ಮತ್ತೆ ತಿರುಗಿ ಬಾಹುದ ಕಂಡು
ತುರುಗವೇರಿದವೆಡಬಲದಿ |
ಹರಿಗೆಯ ಬಲ ಈಟಿ ಪೆಟಲು ಸಬಳಿಗರು
ನೆರೆದು ಹೊಕ್ಕರು ತಮತಮಗೆ || ೬೦ ||

ಉರುಬಿ ಹುಯ್ಯಲ ಹಿಡಿದರು ರಾಮನಾಥನ
ಚರರು ಡೊಕ್ಕನೆ ರಣದೊಳಗೆ |
ತರಿವರು ಶಿರವನೆ ಕಡಿಮಾಡಿ ರಣದೊಳು
ಕೊರೆದು ಕತ್ತಿರಿಸಿ ಕಾಳಿಜವ || ೬೧ ||

ಹೊಯ್ದು ಹೆಯ್ದೂರ ಹೊಗಿಸಿ ಮುತ್ತಿದ ರಾಮ
ಕಪ್ಪ ಕೊಳದೆ ಬಿಡೆನೆಂದ |
ಐದಾರು ಬಿಂದಿಗೆ ಹೊನ್ನು ಹೊನ್ನರಗಿಳಿಯ
ಸೈಮಾಡಿ ಕೊಡದೆ ನಾ ಹೋಗೆ || ೬೨ ||

ಜೇರು ಮುತ್ತಿಗೆಯ ಮಾಡಿಸಿದ ರಾಮಯ್ಯನು
ಆರು ಸಾವಿರ ಬಲ ಮುತ್ತಿ |
ಬ್ಯಾರೊಂದು ಕಡೆಯಲ್ಲಿ ಮೂರು ಸಾವಿರ ಬಲ
ಸೇರೀತು ಹುಲಿಮುಖವಿಡಿದು || ೬೩ ||

ಕುದುರೆಯ ಪೌಜೊಂದು ಕಡೆಯಲ್ಲಿ ನಿಲಿಸಿದ
ಚೆದುರ ಮಾನ್ಯರ ಕೂಡಿಕೊಂಡು |
ಕದನ ಕೋವಿದರು ದೊರೆ ಮಕ್ಕಳು ತಾವೆಂದು
ಸದನದೊಳಗೆ ಕಾದುಕೊಂಡು || ೬೪ ||

ಈ ರೀತಿ ಮುತ್ತಿಗೆ ಮಾಡಿ ರಾಮಯ್ಯನು
ದುರದೊಳು ತಾ ನಿಂತುಕೊಂಡು |
ಮಾರತಮ್ಮನು ಜರಿದು ದೂರಿಕೊಂಡಹನಲ್ಲ
ತೋರ ಹೇಳೆಂದ ರಾಮಯ್ಯ || ೬೫ ||

ತನ್ನ ಬಿರಿದುಗಳ ಕೊಂಡಾಡಿಸುತಲಿ ರಾಮ
ತನ್ನ ಮಾನ್ಯರ ಕೂಡಿಕೊಂಡು |
ಉನ್ನತ ಮುತ್ತಿನ ಸತ್ತಿಗೆ ನೆಳಲಡಿ
ಹೊನ್ನ ಹಂಚಿಸಿ ಕೊಡುತಿರ್ದ || ೬೬ ||

ಹುಳಿಯೇರ ಮಾರಗೊಂಡನ ಗಂಡನೆಂಬಂಥ
ಕೊಳಲು ತಪ್ಪಟೆ ಚಿನ್ನಗಾಳೆ |
ಚಳಿಯದೆ ಕೂಗುವ ಭಟರ ಧ್ವನಿಯ ಕೇಳಿ
ಒಳಗಿರ್ದ ಮಾರಭೂಪಾಲ || ೬೭ ||

ಕೂಗುವ ಬಿರಿದ ಕೇಳುತ ಮಾರಭೂಪನು
ಆಗ ತನ್ನೊಳಗತಿ ನೊಂದು |
ಬೇಗ ತನ್ನ ಮಂತ್ರಿ ಕಲ್ಲರಸನ ಕರೆಸಿದ
ಮುಂದಣ ರಾಜಕಾರ್ಯಕ್ಕೆ || ೬೮ ||

ಹೇಳುವುದೇನು ಕೇಳುವುದೇನು ನಾವಿನ್ನು
ಕೋಳು [ಹೋಯಿತು] ಹುಳಿಯೇರು |
ಧೂಳುಗೋಡೆಯ ಮಾಡಿ ಕೆಡಿಸುವ ರಾಮನು
ನಾಳಿನ ದಿನದೊಳಗವನು || ೬೯ ||

ರಣಮಯವಾಯಿತ್ತು ರಾಜ್ಯದ ಬಲವೆಲ್ಲ
ಮುಣಗಿತು ಮಾನ್ಯರು ಸಹಿತ |
ಹೊಣಕೆಯ ಬಂಟರೆಲ್ಲರು ಅಳಿದು ಹೋದರು
ಕೆಣಕಿ ಮಾಡುವುದೇನು ನಾವು || ೭೦ ||

ಕಾರಣಿಕದ ರಾಮ ಪುಟ್ಟಿದ ಜಗದೊಳು
ಓರುಗಲ್ಲವ ತಾ ಗೆದ್ದ |
ಧಾರುಣಿಯೊಳು ಗುತ್ತಿ ಜಗದಪ್ಪರಾಯನ ಮಗಳ
ಕಾಳಗ ಗೆದ್ದು ತೆಕ್ಕೊಂಡ || ೭೧ ||

ಡಿಳ್ಳಿಯ ಸುರಿತಾಳನ ಪಾವುಗೆಗಳ
ನಿಲ್ಲದೆ ಮೆಟ್ಟಿದನಿವನು |

ಎಲ್ಲ ರಾಯರ ಸೀಮೆ ಒಳಹೊಕ್ಕು ಕಟ್ಟಿದ
ಸಲ್ಲದು ಅವನೊಳು ಕದನ || ೭೨ ||

ಈಗ ಅವನಿಗೆ ನಾವು ಬೇಗ ಪಗುಡಿಯ ಕೊಟ್ಟು
ಹೋಗೆಂದು ಕಳುಹುದೆ ಲೇಸು |
ಹಾಗಲ್ಲವೆಂದರೆ ನಿಮ್ಮ ಚಿತ್ತವು ಬಂದ
ಹಾಗೆ ಮಾಡುವೆನೆಂದ ಮಂತ್ರಿ || ೭೩ ||

ಆದರಾಗಲಿ ಅವನಿಗೆ ತಕ್ಕ ಮಾತನು
ಭೇದಿಸಿ ನೀನೊಂದು ಮಾಡು |
ಭೇದವಿನ್ಯಾತಕೆ ನಮ್ಮ ಬಲ ಮುರಿಯಿತು
ಕಾದುವರಿಲ್ಲ ಊರೊಳಗೆ || ೭೪ ||

ಸಾಯಕಗಳುವುಳ್ಳ [ಸೆ]ಳೆದುರುವಣಿಸುತು
ಪಾಯಕರೊಡನೆ ಮಾತಾಡಿ |
ಕೋಯೆಂದು ಕೊಟ್ಟು ಕಳುಹುದೆ ತಾನು ಬೇಡಿದುದ
ಮಾಡಿ ಕಳುಹಿದನಾಗ ಮಾತ || ೭೫ ||

ಹುಳಿಯೇರ ಮಾರಗೊಂಡನು ಕಪ್ಪವನಿತ್ತು
ಘಳಿಲನೆ ಸಮರಸವಾಗಿ |
ಅಳಿಕಿ ಬಿಂದಿಗೆ ಹೊನ್ನ ಐದೂರುಗಳನಿತ್ತು
ಗಿಳಿಯ ತಂದಿತ್ತು ಒಂದಾದ || ೭೬ ||

ಅತ್ತಲು ಮಾರಭೂಪನ [ಮೊ]ನೆಯೊಳಗೆ
ಮುತ್ತಿಗೆ ತೆಗಸಿ ರಾಮಯ್ಯ |
ಕೊತ್ತಲ ಚೆಂಚೆಯು ಕಣಜದಹಳಿಗಾಗ
ಮತ್ತೆ ತಿರುಗಿದನು ರಾಮಯ್ಯ || ೭೭ ||

ಮಗನ ನೋಡುವರೆ ತಾ ಮಂತ್ರಿಯ ಕರಕೊಂಡು
ಸೊಗಸಿಂದ ಬಂದ ಕಂಪಿಲನು |
ಅಗಣಿತವಾದಂಥ ಮಂದಿ ಕುದುರೆ ಸಹ
ಜಗಳವ ನೋಡಲಿ ಬಂದ || ೭೮ ||

ತಂದೆ ಬರುವುದ ಕೇಳಿ ಹಿಂದಕ್ಕೆ ತಿರುಗಿದ
ಬಂದ ಕಾರ್ಯವ ಮಾಡಿಕೊಂಡು |
ಒಂದಾಗಿ ಹುಳಿಯೇರ ಕಪ್ಪವ ತೆಕ್ಕೊಂಡು
ಮುಂದಕ್ಕೆ ನಡೆತಂದನಿದಿರ || ೭೯ ||

ಉತ್ತುಮ ಬೊಲ್ಲನ ಏರಿ ಕಾಟಿಗ[ರಿಗೆ]
ಮತ್ತೆ ಕರೆದ ರಾಮನಾಥ |
ಚಿತ್ತೈಸು ರಾಯ ಅರಿರಾಯಮಸ್ತಕಶೂಲ
ವೆತ್ತಣ ಪ್ರಯಾಣ ಪೇಳೆಮಗೆ || ೮೦ ||

ಅರಿರಾಯ ಮಾನಮರ್ದನಶೂಲ ನರಪತಿ
ಗಜಪತಿ ಅಶ್ವಪತಿಗಳ |
[ಪಿ]ರಿದೋರ್ಗಲ್ಲ ಪ್ರತಾಪರುದ್ರನ ಗಂಡ
ಕರಸಿದ್ಯಾತಕೆ ನಮ್ಮೆಲ್ಲರನು || ೮೧ ||

ಕಂಪಿಲರಾಯ ತನ್ನಯ ಕುಮಾರನ ಮಾತ
ಸಂಪಿಂದ ಕೇಳಿ [ನೀ ಒಡನೆ] |
ಮುಂ ಪರಿವುತ ಪೋಗಿ ಹುಳಿಯೇರ ಮಾರನ
ಚಂಪಕಮಾಲೆಯ ತಹೆಯಾ || ೮೨ ||

ಕಪ್ಪವ ಕೊಂಡು ಗಕ್ಕನೆ ರಾಮ ತಿರುಗಿದ
ಭೂಪಕರೊಡವೆರಸುತಲಿ |
ಅಪ್ಪಾಜಿ ಇ[ದ]ನೊಪ್ಪಿಸು ಮಂತ್ರಿ ನೀನು ಬೈ
ಚಪ್ಪನೆನುತ ರಾಮ ನುಡಿದ || ೮೩ ||

ರಾಮನಾಥನ ಪರಿತಾಪವ ಕಾಣುತ
ಪ್ರೇಮದಿ ಮಂತ್ರಿ ಬೈಚಪ್ಪ |
ಸಾಮ್ಯಗಳನು ಹೇಳಿ ಕಂಪಿಲರಾಯಗೆ
ಭೂಮಿರಾಯರಗಂಡನೆನುತ || ೮೪ ||

ಗುತ್ತಿಯ ಜಗದಪ್ಪನ ಮುರಿಯಲೊತ್ತಿದೆ
ಮತ್ತೆ ಒರ್ಗಲ್ಲವನ ಅಳಿದೆ |
ಇತ್ತಲಿ ಹುಳಿಯೇರ ಮಾರಿಗೊಂಡನ ಮೇಲೆ
ಒತ್ತಿ ಕಾದಿದೆ ರಾಮನಾಥ || ೮೫ ||

ಕೊಡದೆ ಬಾದ್ದೂರನ ಕಡಿದು ಸುರಿತಾಳನ
ಬಡಿದು ನೇಮಿಯನೆಲ್ಲ ತಾನು |
ಬಿಡದಪ್ಪಿ ಹುಳಿಯೇರ ಮಾರಗೊಂಡನ ಕೈಯ್ಯ
ತಡೆಯದೆ ತಂದೆ ಕಪ್ಪವನು || ೮೬ ||

ಕಪ್ಪದ ಬಿಂದಿಗೆ ಹೊನ್ನು ಪಂಜರಗಿಳಿಯನು
ಒಪ್ಪಿಸಿದನು ಮಾರಭೂಪ |

ಛಪ್ಪನ್ನ ದೇಶ ರಾಯರುಗಳ ಕೂಡೆ
ತಪ್ಪದೆ ಕಾದಿ ಗೆಲಿದ[ವ]ನು || ೮೮ ||

ಕಪ್ಪವ ಕೊಟ್ಟು ರಾಮನನೊಂದು ಮಾಡಿಕೊಂ
ಡೊಪ್ಪದಿ ಕಳುಹಿದನವರ |
ಅಪ್ಪಾಜಿ ಕೇಳು ನೀನಾಡಿದ ಮಾತಿಗೆ
ಕಪ್ಪವ ರಾಮಯ್ಯ ತಂದ || ೮೯ ||

ಎಂದ ಮಾತಿಗೆ ಹುಳಿಯೇರ ಮಾರಗೊಂಡನ ಕೈಯ್ಯ
ತಂದು ತೋರಿದನು ಕಪ್ಪವನು |
ಒಂದಾರು ಭುಜವಾಗಿ ಕಂಪಿಲರಾಯನು
ಬಂದ ರಾಮಯ್ಯನ ತಬ್ಬಿ || ೯೦ ||

ಹಂದೆ ಕುಮಾರರ ಕರೆದು ಕಂಪಿಲರಾಯ ಕೂ
[ಳ್ ಹಂದೆ] ಗಳಿರಾ ನೀವು |
ಕಂದ ರಾಮಯ್ಯ[ನು] ಪಿರಿದೆನಿಸುವ ಹಾ
ಗೆಂದು ನುಡಿದ ಕಂಪಭೂಪ || ೯೧ ||

ಅರಸು ಕಂಪಿಲರಾಯನೊಡನೆ ರಾಮಯ್ಯನು
ಬೆರಸಿ ಮಾತಾಡಿ ಸಂಭ್ರಮದಿ |
ಇರಿಸಿದ ಮಾರಭೂಪನ ಕೈಯ್ಯ ತಂದಂಥ
ಅರಗಿಳಿ ಕಪ್ಪವನೆಲ್ಲ || ೯೨ ||

ತಂದಿರಿಸಿದನು ಕಂಪಿಲರಾಯನ ಮುಂದೆ
ತಂದಿದ್ದ ಹೊನ್ನರಗಿಳಿಯ |
ಮುಂದರಿಯದ ಕುವರರೆಂದ ಮಾತಿಗೆ [ತಾನು]
ತಂದು ತೋರಿದನು ಕಪ್ಪವನು || ೯೩ ||

ತನ್ನ ಎಕ್ಕಟಿಗರು ಎಪ್ಪ[ತ್ತೆರ]ಳ್ಮನ್ನೆಯರು
ಮುನ್ನೂರು ವಾರುವ ಸಹಿತ |
ಚೆನ್ನ ರಾಮಯ್ಯನು ಏರಿ ಬೊಲ್ಲನ ಮೇಲೆ
ಸನ್ನೆಗಾಳೆಯ ಹಿಡಿಸಿದನು || ೯೪ ||

ಬಿರಿದಿನ ಕಾಳೆಯ ಕೇಳಿತ ಹರಿಯಮ್ಮ
ಹದಿರು ಬಂದಳು ಬೀದಿಗಾಗಿ |
ತರಳ ರಾಮಯ್ಯ[ಗೆಯ್ತು]ದಳು ಮಾರಮ್ಮ
ಎರಗಿ ಪಾದದ ಮೇಲೆ ಬಿದ್ದು || ೯೫ ||

ಅಣ್ಣ ರಾಮಣ್ಣನ ಕಾಣುತ ಮಾರಮ್ಮ
ಕಣ್ಣಹಬ್ಬವನು ನೋಡುತಲಿ |
ಸಣ್ಣವರೊಡಗೂಡಿ ತಂಗಿ ಸಿಂಗಮ್ಮನು
ಅಣ್ಣಗಾರತಿಯನೆತ್ತಿದರು || ೯೬ ||

ಆರತಿ ಎತ್ತಿ ಅಂಗಜ ರಾಮನಾಥಗೆ
ವೀರನಾರಿಯರೊಂದಾಗಿ |
ಭೋರನೆ ಅರಮನೆಗೈದು ಕನ್ನೆಯರನು
ಧೀರ ರಾಮಯ್ಯ ಕಳುಹಿದ || ೯೭ ||

ಕಳುಹಿದ ದೇವಿಸೆಟ್ಟಿಯ ಲಿಂಗಣ್ಣನ
ಕಳುಹಿದ ಭಾವ ಸಂಗಮನ |
ಕಲುಹಿದ ಮನ್ನೂಲ ಮಾಚನನಾಗ
ಕಳುಹಿದ ಕೊಳ್ಳಿ ನಾಗನನ || ೯೮ ||

ಕಳುಹಿದ ಬಾದೂರಖಾನನ ಮಂತ್ರಿಯ
ಕಳುಹಿದ ಅಣ್ಣ ಕಾಟಣ್ಣನ |
ಕಳುಹಿದ ಮಾದಿಗ ಹಂಪನ ಸಂಪನ
ಕಳುಹಿದ ಕಲಿ ಮುದ್ದುಗನ || ೯೯ ||

ಕಳುಹಿದ ಎಪ್ಪ[ತೆರಡು] ಮನ್ನೆಯರನು
ಕಳುಹಿದ ಹರಿಯಮ್ಮನವರ |
ಕಳುಹಿದ ತನ್ನಯ ಅರಮನೆಯನು ಹೊಕ್ಕು
ಲಲಗೆ ರಾಮಲದೇವಿ ಸಹಿತ || ೧೦೦ ||

ಒಲಿದರಮನೆಯ ಹೊಕ್ಕನು ರಾಮನಾಥನು
ಚೆಲುವ ಬಿರಿದಿನ ಮನ್ನೆಯರು |
ಗೆಲವಿಂದ ತಮ್ಮರಮನೆಯೊಳಗೆಲ್ಲರು
ಒಲಿದು ಹೊಕ್ಕರು ಅರ್ತಿಯಲಿ || ೧೦೧ ||

ಇದು ಪರನಾರಿ ಸೋದರ ರಾಮನಾಥನ
ಪದಕೃತಿಯೊಳಗೊಂದು ಕಥೆಯ |
ಚೆದುರ ರಾಮಯ್ಯ ಹುಳಿಯೇರ ಮಾರನ ಕೊಡೆ
ಒದಗಿ ಕಪ್ಪವ ತಾನು ತಂದ || ೧೦೨ ||

ಮುದರಿಂದ ಈ ಕೃತಿಯೊಳು ಮಾರಭೂಪನ
ಚೆದುರ ರಾಮಯ್ಯ ತಾ ಗೆದ್ದ |

ಕದನದಿ ಕಪ್ಪವ ತಂದು ತಂದೆಗೆ ಕೊಟ್ಟ
ಪದಗಳ ಸಂಧಿ ಪೂರಾಯ || ೧೦೩ ||

**ಅಂತು ಸಂಧಿ ೯ ಕ್ಕ ಪದನು ೮೩೧ಕ್ಕಂ ಮಂಗಳ ಮಹಾಶ್ರೀ**

## ಸಂಧಿ ೧೦ - ಬಾದೂರಖಾನ ಕಮ್ಮಟದುರ್ಗಕ್ಕೆ ಓಡಿಬಂದುದು

**ಶ್ರೀ ಗಿರಿಜಾ[ಸ್ಯಾಂಬುಜ ದಿನ] ನಾಯಕ**
**ಭೋಗಿಭೂಷಣ ಭಾಳನೇತ್ರ |**
**ಭಾಗೀರಥಿಧರ ಭವರೋಗವೈದ್ಯನೆ**
**ನಾಗ[ಕುಂಡಲ] ಶರಣೆಂಬೆ ||** ೧ ||

ರಾಮನ ನೆನೆ ಕಂಡ್ಯಾ ಮನವೆ ಜಟ್ಟಂಗಿಯ
ರಾಮನ ನೆನೆ ಕಂಡ್ಯಾ ತನುವೆ |
ರಾಮರಾಮಾ ಎಂಬ ನಾಮವ ನೆನೆದರೆ
ಕಾಮಿತ ಫಲವೀವ ರಾಮ || ೨ ||

ಸಕ್ಕರೆ ಸವಿದಂತೆ ಮಧುರ ಮಾವಿನಹಣ್ಣು
ಉಕ್ಕುವ ತನಿರಸದಂತೆ |
ಮಕ್ಕಳ ಮಾಣಿಕದಂತೆ ರಾಮನ ಕೃತಿ
ಸತ್ಕವಿಗಳು ಲಾಲಿಪುದು || ೩ ||

ಇತ್ತ ರಾಮಯ್ಯ ತಾ ಒತ್ತಿ ರಾಜ್ಯವನಾಳೆ
ಸುತ್ತಣ ರಾಯರ ಹೊಡೆದು |
ಅತ್ತ ಡಿಳ್ಳಿಯೊಳು ಬಾದೂರಖಾನಗೆ
ಮೃತ್ಯುಬಂಧವಗೆಡಿಸಿದರು || ೪ ||

ಮಾಡಬಾರದ ತಪ್ಪ ಮಾಡಿ ಬಾದೂರಖಾರ
ಓಡಿಬಂದನು ಡಿಳ್ಳಿ ಬಿಟ್ಟು |
ಕೂಡೈದು ಮಂದಿ ರಾಹುತರ ಕರಕೊಂಡು
ಕಾಡರಸುತ ರಾತ್ರಿಯಲಿ || ೫ ||

ಈ ಧರೆಯೊಳು ನಮ್ಮ [ಮೊರೆ] ಹಾಕಿಕೊಂಡು ತಾ
ಕಾದುವ ದೊರೆಗಳಿನ್ನಾರು |
ಆದರೊಳ್ಳಿತು ತನ್ನ ಮಾನವುಳಿದರೆ ಸಾಕು
ಭೇದ ಹುಟ್ಟಿದವು ಡಿಳ್ಳಿಯೊಳು || ೬ ||

ಸಾದಿಸೆನೆಂದರೆ ಶಕ್ತಿ ಸಾಲದು ಮುಂದೆ
ಹಾದಿ ಹತ್ತುವುದು ಲೇಸೆನುತ |
ಈ ಧರೆಗೆಲ್ಲ ಪಚ್ಚಾವನ ಪಾವುಗೆ
ನೆರೆದು ಮೆಟ್ಟಿದನಂತೆ ರಾಮ || ೭ ||

ಬಿರಿದಕಂನಹುದು ನಾನಲ್ಲಿಗೆ ಪೋ[ಪೆ]ನೆಂ
ದಿರದೆ ಬಂದನು ಬಾದೂರ |
ಬೆಳಗೊ ಹೊತ್ತಿಗೆ ಹತ್ತು ಗಾವುದ ಬಂದನು
ಒಳಗುದುರೆಯನೇರಿಕೊಂಡು || ೮ ||

ಕುಳಿತಲ್ಲಿ ಕುಳ್ಳಿರದೆ ನಿಂತಲ್ಲಿ ನಿಲ್ಲದೆ
ಹೊಳೆಯ ದಂಡೆಗೆ ಬಂದನಾಗ |
ಬುತ್ತಿಗಳನು ಉಂಡು ಮುಂದಕೆ ಸಾಗಿದನು
ಮತ್ತೆ ಬೈತನಕ ಬೆಳತನಕ || ೯ ||

ಒತ್ತಿ ನಡೆದನು ಮತ್ತಿಪ್ಪತ್ತು ಗಾವುದ
ಎತ್ತ ಹೋಗುವೆನೆಂದೆನುತ ಈ |
ರೀತಿಯಲಿ ಹತ್ತಉ ದಿವಸಕೆ ನರ್ಮದೆಯ
ತೀರವ ದಾಂಟಿದನಾಗ || ೧೦ ||

ಧಾರುಣಿಯೊಳಗೆ ಬಲ್ಲಿದನು ಮುಂದುಲಿರಾಯ
ಸೇರಬೇಕೆಂದು ನಡೆದನು |
ಬಾದೂರಖಾನನು ಬಂದನೆಂಬುದ ಕೇಳಿ
ಚೋದ್ಯವಾದನು ಮುಂಗುಲಿರಾಯ || ೧೧ ||

ಇದೇನು ಕಾರಣವೆಂದು ಕರೆಸಿದನಾಗ
ಭೇದವ ತಿಳಿಯಬೇಕೆಂದು |
ಬಂದ ಬಾದೂರಖಾನ ನಿಂದು ಮುಂದುಲಿರಾಯ
ಗೊಂದಿಸಿ ಉಡುಗೊರೆನಿತ್ತು || ೧೨ ||

ಇಂದು ನಮ್ಮನು ನಿಲ್ಲಿಸಿದ ಕಾರಣ[ವೇನು]
ಎಂದನು ಬಾದೂರಖಾನ |
ಸಂದೇಹವಾದರೆ ಸಾಗೆವು ಮುಂದಕೆ ನಾ
ವೆಂದಾನು ಖಾನ ವಜೀರ || ೧೩ ||

ಅಲ್ಲಿಂದ ಬಿಟ್ಟು ನೀ ಬಂದ ಸುದ್ದಿಗಳು
ಎಲ್ಲವ ಪೇಳು ನನ್ನೊಡನೆ |

ಇಲ್ಲದ ಸಂಶಯ ಪುಟ್ಟಿತು ನಮ್ಮೇಲೆ
ನಿಲ್ಲದೆ ಬಂದೆನು ರಾಯ || ೧೪ ||

ನಿಲ್ಲಿಸಿಕೊಂಡೇವು ನೇಮಿ ಬಂದರೆ ನಾಳೆ
ಎಲ್ಲೊಕ್ಕೊಬೇಕು ಬಾದೂರನೆ |
ಮೆಲ್ಲನೆ ಮುಂದಕ್ಕೆ ಸಾಗೆಂದು ಮುಂಗುಲಿರಾಯ
ವೀಳ್ಯ ಉಡುಗೊರೆ ಕೊಟ್ಟನವಗೆ || ೧೫ ||

ವೆಚ್ಚಕ್ಕೆ ಕೊಡುವಷ್ಟು ಹೊನ್ನು ಕೊಟ್ಟವನಿಗೆ
ಉಚ್ಛಾಹದಲಿ ಕಳುಹಿದನು |
ರಚ್ಚೆಯ ಮಾಡದೆ ಹೋಗಿ ಮುಂದಕೆ ನಿ
ಮ್ಮಿಚ್ಚೆ ಇದ್ದಂತೆ ನಡೆಯೆಂದ || ೧೬ ||

ಓರುಗಲ್ಲಿಗಾಗಿ ಬಂದನು ಬಾದೂರ
ವೀರ ಪ್ರತಾಪನ ಕಂಡು |
ಧಾರುಣಿಯೊಳು ನೀ ಬಲ್ಲಿದನಹುದೆಂದು
ಸೇರಿದೆವಯ್ಯ ನಾವ್ನಿಮ್ಮ || ೧೭ ||

ನಿಮ್ಮನಿಲ್ಲಿಸುವುದು ನಮ್ಮ ಕೈಲಾಗದು
ಗಮ್ಮನೆ ನೇಮಿ ತಾ ಬರಲು |
ಸುಮ್ಮನೆ ಹಿಡಿಕೊಡು ಎಂದರೆ ನಮಗಿನ್ನು
ಸಾಮ್ಯವೆ ಅದು ನಮಗೆ ಗುಣವೆ || ೧೮ ||

ಬಂದ ಬಾದೂರಖಾನಗೊಂದು ವೀಳ್ಯವನಿತ್ತು
ಮುಂದಕ್ಕೆ ಸಾಗಿ ನೀವೆಂದ |
[ಹಿಂ]ದುವ ರಾಮನು ಬಲ್ಲಿದನವ ನಿಲಿಸುವ
ನೆಂದು ಪ್ರತಾಪ ಹೇಳಿದನು || ೧೯ ||

ಅವನಲ್ಲದಿನ್ಯಾರು ನಿಲಿಸುವಂಥವರಿಲ್ಲ
ಭುವನದೊಳಗೆ ನಿಮ್ಮನಾರು |
ಅಹುದೆಂದು ಸಾಗಿದನವನು ಮುಂದಕೆ ಬೇಗ
ಕುವರ ರಾಮನ ನೋಡ್ವೆನೆನುತ || ೨೦ ||

ಗುತ್ತಿಯಾನಾಳುವ ಜಗದಪ್ಪರಾಯನ
ಒತ್ತಿಗೆ ಬಂದ ಬಾದೂರನು |
ಎತ್ತಣಿಂದಲಿ ಬಂದಿರೆನುತ ಜಗದಪ್ಪನು
ಒತ್ತಿ ಕೇಳಿದನು ಗುತ್ತಿಯರಸು || ೨೧ ||

ಡಿಳ್ಳಿಯ ಬಿಟ್ಟು ಬಂದೆವು ಜಗದಪ್ಪ
ತಳ್ಳಿ ತಗಾದಿಯ ಮಾಡಿ |
ಪೊಳ್ಳು ಹೋಗಲಿಬೇಡ ಜಗದೊಳು ನೀ ದೊಡ್ಡ
ಪಾಳ್ಯೆಯ ದೊರೆಯೆಂದು ನಾವು || ೧೧ ||

ಜಗದೊಳು ಕಂಪಿಲರಾಯನ ಮಗ ರಾಮ
ಅಗಣಿತ ಬಿರಿದ ಧರಿಸಿಹನು |
ಸೊಗಸಿಂದ ನೀವು ಅಲ್ಲಿಗೆ ಹೋಗಿರೆನುತಲಿ
ಜಗದಪ್ಪರಾಯ ಕಳುಹಿದನು || ೧೩ ||

ಬಂದಂಥ ಬಾದೂರಗೆ ವಂದಿಸಿ ವೀಳ್ಯವ ಕೊಟ್ಟು
[ಮುಂದು] ಮುಂದಕೆ ನಡೆಯಿನ್ನು |
ಸಾಗಿ ಹೋಗೆನುತಲಿ ಬಂದ ಬಾದೂರನ
ಅಂದು ಕಳುಹಿದ ಜಗದಪ್ಪ || ೧೪ ||

ನಡೆದು ಬಂದನು ಬಾದೂರಖಾನ ಕುಮ್ಮಟಕಾಗಿ
ಬೆದರಿದ ಹುಲ್ಲೆಯಂದದಲಿ |
ಚೆದುರ ರಾಮಯ್ಯ ಸ್ವಾರಿಯ ಹೋಗಿಬರುವಾಗ
ಒದಗಿ ಕಾಣಿಸಿಕೊಂಡರೆಲ್ಲ || ೧೫ ||

ಎಲ್ಲಿಂದ ಬಂದಿರಿ ಯಾವ ದೇಶವು ನೀವು
ಸೊಲ್ಲಿಸಿ ನಮ್ಮೊಡನೆನಲು |
ಡಿಳ್ಳಿಯ ಸುರಿತಾಳ ಪಾಚ್ಛಾವನ ಮೇಲಿನ್ನು
ತಳ್ಳಿಯ ಮಾಡ್ಬಂದೆವಯ್ಯ || ೧೬ ||

ಮೊರೆ ಹಾಕಿಕೊಂಬ ರಾಯರ ಕಾಣೆವೈ ನಾವು
ತಿರಿಗಿದೆವು ನಾನಾ ಪಾಳ್ಯಗಳ |
ದೊರೆಗಳ ಕಂಡೆವು ನಿಲಿಸಲಾರದೆ ನಮ್ಮ
ಪರಬಲಾಂತಕ ನಿನ್ನ ಬಳಿಗೆ || ೧೭ ||

ಬಿರಿದಂಕ ರಾಮನು [ಅಹ] ನಿಮ್ಮ ಮರೆಗೊಂಬ
ಅರಸುಗಳಲ್ಲ ನಾವೆನುತ |
ಮರೆಯ ಮಾತೇನು ಸುರಿತಾಳಗೆ ಅಂಜುವರು
ದೊರೆ ನಿಮ್ಮ ತೋರಿ ಕಳುಹಿದರು || ೧೮ ||

ಬಾದೂರಖಾನನು ಬಂದು ಕೈಮುಗಿದಿನ್ನು
ಸಾಧಿಸು ನಮ್ಮ ಮರೆಗೊಂಡು |

ಈ ಧರೆಯೊಳು ನಮ್ಮರಣದೊಳು [ಕಾ]ದುಕೋ
ಖೇದವಲ್ಲವು ಕೀರ್ತಿವುಂಟು || ೧೯ ||

ಮೊರೆಹೊಕ್ಕ ಖಾನರ ಕೊಡೆನೆಂಬ ಬಿರಿದನು
ಧರಿಸಿದ ರಾಮು ಕಾಲೊಳಗೆ |
ಬರಹೇಳಿ ನೇಮಿಯ ಕಂಡು ಕಾಬುವೆನೆಂದು
ದೊರೆ ರಾಮು [ಮೊರೆ] ಹಾಕಿಕೊಂಡ || ೨೦ ||

ಬಂದ ಬಾದೂರನಿಗೆ ವೀಳ್ಯಗಳನೆ ಕೊಟ್ಟು
ಒಂದು ಗ್ರಾಮವನು ಉಮ್ಮಳಿಯ |
ಚೆಂದದಿಂದಲಿ ಉಡಗೊರೆಗೊಟ್ಟು ರಾಮಯ್ಯ
ಬಂದ ಬಾದೂರನ ನಿಲಿಸಿದನು || ೨೧ ||

ಮನ್ನಿಸಿ ಕರೆದೊಯು ಮನೆಗಳನವರಿಗೆ
ಉನ್ನತ ಹರುಷದೊಳ್ಕೊಟ್ಟು |
ಮುನ್ನೂರು ವರಹವ ವೆಚ್ಚಕ್ಕೆ ಕೊಟ್ಟನು
ಚೆನ್ನಿಗನವನಿಟ್ಟುಕೊಂಡ || ೨೨ ||

ಬಾದೂರಖಾನನು ಹೋದನೆಂಬುದ ಕೇಳಿ
ಮೇದುನಿಪತಿಯು ಸುರಿತಾಳ |
ಖೇದವ ಮನದೊಳಗಿಟ್ಟು ನೇಮಿಯಖಾನನ
ಕ್ರೋಧದಿ ಕರೆಸಿದನವನು || ೨೩ ||

ಕರೆಸಲು ಬಂದು ನೇಮಿಯು ಕೈಮುಗಿದನು
ಬೆರಸಿ ಮಾತಾಡುತಲವನ |
ಇರದೋಡಿಹೋದ ಬಾದೂರ ಅಪರಾತ್ರಿಯೊಳ್
ಹರುಷವಾಯಿತೆ ನಿನಗೆಂದ || ೨೪ ||

ಕೋಪವ್ಯಾತಕೊ ಭೂಪ ಎಲ್ಲಿದ್ದರವನನು
ಧೂಪಿಸಿ ಪಿಡಿದುತರಿಸುವೆ |
ಈ ಪರಿಯಲಿ ಮೋಸವ ಮಾಡಿ ಹೋದನು
ತಾ ಪಿರಿದಾಗಿ ಬಾಳುವನೆ || ೨೫ ||

ಬಲವಂದ ಬಾದೂರನವನ ಮೋಸದಿ ನೀನು
ಒಲಿದು ಬಂಧಿಸಿ ಎಳೆತರಿಸಿ |
ಸುಲಿಸಿ ನಿಂದಿರಿಸಿ ಡಿಳ್ಳಿಯ ಪಟ್ಟಣಕೆಲ್ಲ
ಬಲಿಯ ಕೊಡೆಂದು ಪೇಳಿದನು || ೨೬ ||

ಮೋಸವ ಮಾಡಿ ಹೋದನು ರಾತ್ರಿಯೊಳು
ಹೇಸದೆ ಜೀವದಾಸೆಯೊಳು |
ದೇಶದೊಳೆಲ್ಲಿ ಹೊಕ್ಕರೆ ಬಿಡೆನವನ
ಭಾಷೆಯಲಿ ಪಾಲಿಸೊ ಪಾಚ್ಛಾ || ೩೭ ||

ಚರರನು ಕಳುಹಿಸಿ ನೆಲೆಯನ್ನು ತರಿಸಯ್ಯ
ಪರಬಲಾಂತಕ ನೇಮಿಖಾನ |
ಧರೆಯ ದೊರೆಗಳು [ಮೊರೆ] ಹಾಕಿಕೊಂಡರೆ ಅವರ
ದೊರೆತನವನು ಕೆಡಿಸಯ್ಯ || ೩೮ ||

ಆಗ ಸುರಿತಾಳನೆಂದೆಂಬಮಾ ತನು ಕೇಳಿ
ಬೇಗದೊಳ್ ಚರರನಟ್ಟಿದನು |
ಸಾಗಿ ಹೋಗಿ ನೀವು ಛಪ್ಪನ್ನಾರು ದೇಶವ
ಜೋಗಿ ವೇಷವ ತಾಳಿಕೊಂಡು || ೩೯ ||

ಎಲ್ಲಿರ್ದರವನ ನೆಲೆಯ ನೋಡಿ ಬನ್ನಿರೊ
ಬೇಗನೆ ಹೋಗಿ ನೀವೆನಲು || ೪೦ ||

ನಿಲ್ಲದೆ ಚರರೋಡಿ ಪೋದರು ಜಗಕೆಲ್ಲ ಭೂ
ವಲ್ಲಭನಪ್ಪಣೆಯ ತಕ್ಕೊಂಡು |
ಅಂಗ ಕಾಳಿಂಗ ಕಾಶ್ಮೀರ ಬರ್ಬರದೇಶ
ಬಂಗಾಳ ತೆಲುಗ ಕಾಂಬೋಜ || ೪೧ ||

ಛಪ್ಪನ್ನ ದೇಶವ ತಿರುಗಿ ಕರ್ನಾಟಕದ ಜಗ
ದಪ್ಪನ ಪುರಕೆ ತಾವ್ ಬಂದು |
ತಪ್ಪದೆ ಸುದ್ದಿಯ ಕೇಳುತ ಬರಲಾಗ
ಇಪ್ಪನು ಕುಮ್ಮಟದೊಳಗೆ || ೪೨ ||

ಬಂದು ಸುರಿತಳರಾಯಗೆ ಅಡ್ಡಬಿದ್ದರು
ವಂದಿಸಿ ಕರಗಳ ಮುಗಿದು |
ಬಂದೆವು ಸ್ವಾಮಿ ಕುಮ್ಮಟದೊಳು ಬಾದೂರ
ಹೊಂದಿದ ರಾಮಯ್ಯನೊಡನೆ || ೪೩ ||

ಇಂತಪ್ಪ ಸುದ್ದಿಯ ಕೇಳುತ ಸುರಿತಾಳ
ಪಂಥದ ರಾಮನ ಬಳಿಗೆ |
ಚಿಂತೆಯಾತಕೊ ನೇಮಿ ಹೊರಡೋ ನೀ ಬೇಗದಿ
ಇಂತು ದಂಡನೆ ಕೂಡಿಕೊಂಡು || ೪೪ ||

ಕೊಟ್ಟನು ಉಡುಗೊರೆ ಮೈಜೋಡು ದಗಲೆಯ
ಕೊಟ್ಟನು ಕೊರಳ ಪದಕವ |
ದಿಟ್ಟ ಕಾನರ ಕೂಡಿಕೊಂಡು ನೀ ಹೋಗೆಂದು
ಕೊಟ್ಟನು ಪಟ್ಟೆ ವೀಳೆಯವ || ೪೫ ||

ಜೀವದರಸಿ ರಾಮನ ತರಬೇಕೆಂದು
ಕೋವಿದೆ ಬಾಬಮ್ಮ ಪೇಳೆ |
ಜೀವದಾಸೆಯ ಬಿಟ್ಟು ಕಂಪಿಲನೊಳು ಕಾದಿ
ತೀವಿ ರಾಮನ ಕೈಸೆರೆಯ || ೪೬ ||

ಅಪ್ಪಣೆ ಕೊಟ್ಟ ಕಳುಹಲು ಸುರಿತಾಳನು
ತಪ್ಪದೆ ನೇಮಿ ತಾ ಹೊರಟ |
ಕಪ್ಪವ ಕೊಂಡು ಕುಮ್ಮಟದ ರಾಮನೊಂ
ದೊಪ್ಪದಿ ಪಿಡಿತಹೆನೆನುತ || ೪೭ ||

ಹೊರ ಪ್ರಯಾಣವ ಮಾಡಿ ಇಳಿದನು ನೇಮಿಯು
ಬರುವಂಥ ಖಾನರ ಕರೆಸಿ |
ತುರುಕರ ಬಲವ ಚೆನ್ನಾಗಿ ಕೂಡಿಸಿಕೊಂಡು
ತೆರಳಿದ ಡಿಳ್ಳಿಯ ಬಿಟ್ಟು || ೪೮ ||

ಕೂಡಿತು ಖಾನಖಾನರು ಒಂದು ಗುಂಪಾಗಿ
ಜೋಡು ಸಿಂಗಾಡಿ ನೇಜೆಗಳು |
ನಾಡೆಲ್ಲ ಬೆಸಲಾದಂತೆ ತುರುಕರ ಪಡೆ
ಕೂಡಿತು ಚಿಕ್ಕ ಡಿಳ್ಳಿಯಲಿ || ೪೯ ||

ಅಂಬರಖಾನ ತುಂಬುರಖಾನ ಅಬ್ದುಲ್ಲ
ಶಂಬಾರಖಾನ ಶೇರ್ಖಾನ |
ಡೊಂಬಿ ಸಾಹೇಬ್ಖಾನ ಅಲ್ಲೀಯಖಾನನು
ಶಂಬಾರಿಖಾನ ಜಲ್ಲಿಖಾನ || ೫೦ ||

ಯಕಲಾಸಖಾನ ಯಕ್ಕಟಿಖಾನ ಸೈದ್ರಲ್ಲಿ
ಬಕರಿಯಖಾನ ಬಲೆಖಾನ |
ಮಕರಂಕಖಾನ ಮಾಮುದ್ದು ಬಕರಿಯಖಾನ
ಶೇಕುನಾದಖಾನ ಬಾಬ್ಖಾನ || ೫೧ ||

ಬಿಜ್ಜಾರಿಖಾನ ಗುಜ್ಜರಿಖಾನ ಮೀರಲ್ಲಿ
ಮಜ್ಜಾ ಬಾಪುರೆ ರಾಜಖಾನ |

ಹೆಜ್ಜೆಹೆಜ್ಜೆಗೆ ಗೆಲ್ವ ತುಂಬುರಖಾನನು
ಉಜ್ಜಖಾನರು ಒದಗಿದರು || ೫೨ ||

ಎಪ್ಪತ್ತು ಸಾವಿರ ಕುದುರೆ ವಜೀರನು
ಎಪ್ಪತ್ತಿಖಾನನೆಂಬವನು |
ಕುಪ್ಪಳಿಸುತ ಅರಿಬಲದೊಳು ತೂರುವ
ಅಪ್ಪಾಜಿಖಾನನೆಂಬವನು || ೫೩ ||

ಮೂವತ್ತು ಸಾವಿರ ಕುದುರೆ ವಜೀರನು
ಮೀರ ಅಬ್ದುಲಖಾನನವನು |
ಆವಾಗ ಸುರಿತಾಳನ ಹುಜುರಿನಲ್ಲಿರುವಂಥ
ಮಾವೀ ಹಳದಿಯಖಾನ ಬಂದ || ೫೪ ||

ಐವತ್ತು ಸಾವಿರ ಕುದುರೆಯ ವಜೀರ
ಸೈದಾಲಖಾನನೆಂಬವನು |
ಮೈಜೋಡು ಸಿಂಗಾಡಿ ತರ್ಕಾಸ ಕೈಯಂಬು
ಸೈದಲಖಾನನೆಂಬವನು || ೫೫ ||

ಅರವತ್ತು ಸಾವಿರ ಕುದರೆ ವಜೀರನು
ತರುವೂಲಿಖಾನನೆಂಬವನು |
ಬಿರಿದಿನ ಟೆಕ್ಕೆಯು ಜಲ್ಲಿಯ ಮುಖರಂಬ
ಬರುದಲೆ ಬಾಬಾಜಿಖಾನ || ೫೬ ||

ಎಪ್ಪತ್ತು ಸಾವಿರ ಕುದುರೆ ವಜೀರನು
ಮುಪ್ಪಿನ ಮುಜುರಲ್ಲಿಖಾನ |
ತಪ್ಪದೆ ಥಂಮೆಂದಿರಿವನು ರಣದೊಳು
ಒಪ್ಪದಿ ಬಂದು ಕೂಡಿದನು || ೫೭ ||

ಅಚ್ಚಾಗಿ ಐವತ್ತು ಲಕ್ಷವು ಕೂಡಿತು
ಬಿಚ್ಚಿತು ಭೂಮಿ ಬಾಯ್ದೆರೆದು |
ಹುಚ್ಚಾದವು ಅಷ್ಟ ದಿಗ್ದಂತಿ ತಲೆಬಾಗಿ
ಮುಚ್ಚಿದ ಕೂರುಮ ಕಣ್ಣ || ೫೮ ||

ನೆರೆದುದು ನೆಮಿಖಾನನ ವಾಲಗದೊಳು
ಸುರಿತಾಳನಪ್ಪಣೆಯಿಂದ |
ಬರೆದು ಕಳುಹಿದನು ಐದು ಲಕ್ಷ ವಾಜಿಯ
ದೊರೆದೊರೆ ಖಾನಖಾನರನು || ೫೯ ||

ಇನ್ನೊಂದು ಲಕ್ಷ ರಾಜಪುತ್ರ ರಾಹುತರನು
ಮನ್ನಿಸಿ ಕಳುಹಿ ಸುರಿತಾಳ || ೭೦ ||

ನಾಳೆ ನೇಮಿಯನು ತೆರಳಿ ಹೋಗ ಹೇಳಿರೊ
ಬಾಳ ದಿನ ನೀವು ನಿಲುಪೇಕೆ |
ಕೋಳು ಹಿಡಿದು ಕುಮ್ಮಟವ ಲೆಗ್ಗೆಯ ಮಾಡಿ
ಸಾಳುವ ರಾಮನ ಬಿಡೆನೊ || ೭೧ ||

ಗಂಗಾಸಾಗರದ ಕೋಡೆಗೆ ಒಂದು ಸಾವಿರ
ಭಂಗಿಯ ಹೇರೊಂದು ಲಕ್ಷ |
ಶೃಂಗಾರ ಕಡಲೆ ಮೀಠಾಯಿ ಹೇರು ಸಾವಿರ
ಸಡಗರವೇನ ಬಣ್ಣಿಸುವೆ || ೭೨ ||

ಆಯತವನು ಮಾಡಿ ಆಹಾರಗಳನೆಲ್ಲ
ಜಾಯಿಕಾಯಿ ಜಾಪಾತ್ರೆಗಳನು |
ಬೇಯಿಸಿದ ರೊಟ್ಟಿಯ ಕಟ್ಟಿ ತಿತ್ತಿಗಳನು
ಆಯತವಾಗಿ ನಿಂದಿಹರು || ೭೩ ||

ನೇಮಿಖಾನನು ದಂಡ ಕೂಚೆಯ ಮಾಡಿ
ಮುಂದಕ್ಕೆ ನಡೆಯಬೇಕೆಂದ |
ಢಂಢಾಂ ಢಮಢಮ ಎಂದು ಗರ್ಜಿಸೆ ವಾದ್ಯ
ಮಂಡಲಿಕರು ತೆರಳಿದರು || ೭೪ ||

ಅಕ್ಕಿ ಬೇಳೆಯ ಹೇರು ಸಕ್ಕರೆ ಗೋದಿಯ ಹಿಟ್ಟು
ಲೆಕ್ಕವಿಲ್ಲದೆ ಹೇರಿದರು |
ಮಿಕ್ಕ ಮಾತಿನ್ನೇನು ತುಪ್ಪದ ನಗಗಳು
ಲಕ್ಷದ ಮೇಲೆ ಹೇರಿದರು || ೭೫ ||

ಹಸುರು ಕೆಂಪಿನ ಗುಡಿಯು ಸಾಳು ಪಟ್ಟೆದ ಗುಡಿ
ಹಸುರಂಜಿ ಬಿಳಿದಿನ ಗುಡಿಯು |
ಹೊಸ ಒಂದು ಲಕ್ಷ ಗುಡಿಗಳು ಹೇರಿದವು
ಬಿಸಿಲು ಗುಡಾರ ಲೆಕ್ಕವಿಲ್ಲ || ೭೬ ||

ಬೆಳಗಿದ ಮೇಲೊಂದು ಕೂಚೆ ನಗಾರಿಯು
ಬೋರುಗುಟ್ಟುವ ಕರ್ಣೆ ಬುರುಗು || ೭೭ ||

ಹೊಡೆದವು ಬರಸಿಡಲಂತೆ ವಾದ್ಯದ ಧ್ವನಿ
ಬಿಡದೊದರುವ ಚಿನ್ನಗಹಳೆ |

ಮೇದುನಿ ಘೀಳಿಡುವಂತೆ ವಾದ್ಯದ ಧ್ವನಿ
ಸಾಧಿಸಿ ದಂಡು ನಡೆಯಿತು || ೬೮ ||

ಚೆಕ್ಕನೆ ತುರುಕರ ದಂಡೆತ್ತಿ ನಡೆಯಿತು
ಚೆಕ್ಕ ಡಿಳ್ಳಿಯ ಬಿಟ್ಟು ನಡೆಯೆ |
ಉಕ್ಕಿತು ಕೆಂಧೂಳು ಸೂರ್ಯಮಂಡಲಕಾಗಿ
ದೊಕ್ಕನೆ ಆಕಾಶ ಮುಸುಕಿ || ೬೯ ||

ತೆಗೆದು ತೆರಳಿದುದು ಕುದುರೆಯ ಪೌಜಲ್ಲಲ್ಲಿ
ಒಗುಮಿಗಿಲಾಗಿ ನಡೆದರು |
ಅಗಣಿತ ಹರುಷದಿ ಭಾಗೀರಥಿಯ ದಾಂಟಿ
ಸೊಗಸಿಂದ ತೆರಳಿತು ದಂಡ || ೭೦ ||

ಹರಿದು ಬಂದಿತು ಕುದುರೆಯ ಪೌಜು ವಿಂಗಡಿಸಿ
ತೆರಳಿತು ಮುಂದಕ್ಕೆ ಸಾಗಿ |
ಕರಿಘಟೆಪೌಜು ನೇಮಿಯ ಖಾನರ ಬಲ
ಮರಡಿಗಳಂದದಿ ಬರಲು || ೭೧ ||

ಇತ್ತರದಲಿ ಛತ್ರ ಐನೂರು ಹಿಡಿದವು
ಎತ್ತ ನೋಡಲು ನೇಮಿಯೊಡನೆ |
ಎತ್ತಿದ ಮೊನೆಮೊನೆ ನ್ಯಾಜ್ಯದ ತುರುಕರು
ಮೊತ್ತದ ಕಾಲಾಳು ಸಹಿತ || ೭೨ ||

ಮುಂದೆ ಮೂವತ್ತು ಲಕ್ಷ ವಾಜಿಯು ನಡೆಯಿತು
ಇಪ್ಪತ್ತು ಲಕ್ಷದ ಪೌಜು |
ನಿಂದವಲ್ಲಲ್ಲಿ ಒಂದೇ ವಾದ್ಯ ರಭಸದಿ
ಆಂಧ್ರದೇಶದ ಗಡಿಗಾಗಿ || ೭೩ ||

ನಾಲ್ಕ ದಿನಕೆ ನಡೆವಂಥ ದಾರಿಯ ನೇಮಿ
ಎರಡು ದಿನಕೆ ನಡೆವುತಲಿ |
ನೂಕಿ ನಡೆಯಿತು ಕುದುರೆಯ ಪೌಜು ಮುಂದಕ್ಕೆ
ಏಕವಾಯಿತು ಗಂಗೆ ತಡಿಯ || ೭೪ ||

ಗಂಗೆಯ ತಡಿಯ ಸುರಿತಾಳಪುರದ ಮುಂದೆ
ಮುಂಗುಡಿಗಳ ಹೊಯ್ದರವರು |
ಶೃಂಗಾರದಾನೆಯನಿಳಿದು ನೇಮಿಯಖಾನ
ಸೊಗಸಿಂದ ಇಳಿದ ದಂಡಿನಲಿ || ೭೫ ||

ಮುಂದಾನೆ ಎದ್ದು ನಡೆಯಿತು ಮೂಗಾವುದ
ಸಂಜೆಗೆ ಎರಡು ಗಾವುದವು |
ಅಂಜದೆ ನೇಮಿಯು ನಡೆದನು ಈ ರೀತಿ ಧ
ನಂಜಯ ಪಟ್ಟಣಕಿಳಿದ || ೭೬ ||

ಆರು ದಿನದ ದಾರಿ ಮೂರು ದಿನಕೆ ನಡೆದು
ವಾರಣಾಸಿಯ ಸೀಮೆ ಗಡಿಗೆ |
ನೂರು ಗಾವುದ ರಾಯ ನೇಮಿ ನಡೆದು ಬಂದ
ಧಾರುಣಿ ಘೋರಿಡುವಂತೆ || ೭೭ ||

ಎಂಟು ದಿನದ ಪಯಣ ನಾಲ್ಕು ದಿನಕೆ ಬಂದ
ಬಂಟ ನೇಮಿಯಖಾನ ತಾನು || ೭೮ ||

ಹತ್ತು ದಿನದ ದಾರಿ ಐದು ದಿನಕೆ ನಡೆದ
ಒತ್ತಿ ಬಂದನು ನೇಮಿಖಾನ |
ಚಿತ್ರಕೂಟದ ಪುರವನು ದಾಂಟುತಾಗಲೆ
ಸುತ್ತಿ ಯಮುನೆ ತೀರಕಿಳಿದ || ೭೯ ||

ಅಲ್ಲಿಂದ ತೆರಳಿ ಹೊರಟ ದಂಡು ಬೇಗದಿ
ಸೊಲ್ಲಾಪುರವನು ದಾಂಟಿದರು |
ನಿಲ್ಲದೆ ನಾಲ್ಕೆಂಟು ಪ್ರಯಾಣಕೆ ನರ್ಮದೆ
ಬಲ್ಲಿದ ಗಂಗೆ ತೀರದಲಿ || ೮೦ ||

ಚೆಲ್ಲಿತು ಅಲ್ಲಿಯ ದಂಡು ಮುಂದಕೆ ಎದ್ದು
ಎಲ್ಲರು ಒಂದಾಗಿ ಕೂಡಿ |
ನಿಲ್ಲದೆ ಅವರಂಗಬಾದಿಗೆ ಇಳಿದರು
ಅಲ್ಲಿಂದ ಕುಮುಕ ಮಾಡಿದರು || ೮೧ ||

ಹಿಂದುಮುಂದೆಲ್ಲ ಕೂಡಿತು ದಣಿದಂದು
ಬಂದು ಕೂಡಿತು ಖಾನರೆಲ್ಲ |
ಇಂದಿಗೆ ಸುರಿತಾಳನ ಚಾಕರಿ ಸಾಕೆಂದು
ನುಡಿದರು ಬಾದುಬಾದುರರು || ೮೨ ||

ಇಷ್ಟು ತವಕದಿ ನಾವು ಹೋಗಲೇತಕೆ ರಾಮ
ಬಿಟ್ಟು ಹೋಗುವನೆ ನಮಗಂಜಿ |
ಸೃಷ್ಟಿಯೊಳಗೆ ಅವನು ಕಾರಣಿಕದ ಪುರುಷ
ಹುಟ್ಟಿಬಂದನು ಕಲಿಯುಗದಿ || ೮೩ ||

ಇಷ್ಟು ದಂಡಿನ ಮೇಲೆ ಕಡಿದಾಡದೆ ಅವ
ಬಿಟ್ಟುಹೋಗುವನೆ ಗೂಳೆಯುವ |
ದಿಟ್ಟತನವು ರಾಮಗಿಲ್ಲದಿದ್ದರೆ ಅವ
ಮೆಟ್ಟುತಲಹನೆ ಪಾವುಗೆಯ || ೮೪ ||

ಎಲ್ಲರು ಕೂಡಿ ಮಾತಾಡುತ್ತ ಖಾನರು
ಅಲ್ಲಿಂದ ವಿಜಾಪುರಕೆ ನಡೆದು |
ನಿಲ್ಲದೆ ನಾಲ್ಕಾರು ದಿವಸಕೆ ತಾವ್ಬಂದು
ಮೆಲ್ಲನಿಳಿದರು ನಿಲುಪಯಣ || ೮೫ ||

ಅಲ್ಲಿ ನಿಲ್ಲಿಸಿ ದಂಡ ನೇಮಿಯಖಾನನು
ಬಲ್ಲಿದ ಖಾನಖಾನರನು |
ಎಲ್ಲ ವಜೀರರ ಕರೆಸಿ ಆಲೋಚನೆ
ಬಲ್ಲಂತೆ ಪೇಳಿ ನೀವೆನಲು || ೮೬ ||

ಸಾವಧಾನವಮಾಡು ದಂಡ ಚತುರೋಪಾಯ
ನೇಮಗಳುಂಟು ದೊರೆಗಳಿಗೆ |
ಕ್ಷೇಮದೊಳಲ್ಲಿಂದ ಕುಳಿತು ಸುದ್ದಿಯ ತರಿಸಿ
ಆಮೇಲೆ ಮಾಡು ಕಾರ್ಯವನು || ೮೭ ||

ಎನಲು ವಜೀರರಾಡಿದ ಮಾತುಗಳನು
ಅನುಕರಿಸಿದ ನೇಮಿ ತಾನು || ೮೮ ||

ಸುತ್ತಣ ಸಣ್ಣ ಪಾಳ್ಯಗಾರರು ಎಲ್ಲ
ಎತ್ತಳ ಮಾಡಿ ಬಂತೆನುತ |
ಉತ್ರ ಉಡುಗೊರೆಗಳ ಕಟ್ಟಿಸಿ ಮಂತ್ರಿಗಳು
ಇತ್ತ ಕಳುಹಿದರು ಬೇಗದೊಳು || ೮೯ ||

ಬಂದರು ನಾಡಮಂತ್ರಿಗಳೆಲ್ಲ ಕೂಡಿನ್ನು
ತಂದಂಥ ಉಡುಗೊರೆಗಳನು |
ಮುಂದಿಕ್ಕಿ ಕರಗಳ ಮುಗಿದು ವಂದಿಸಿದರು
ಮುಂದೇನು ಗತಿ ನಮಗೆನುತ || ೯೦ ||

ಆವಾಗ ಕೊಡುವ ಕಪ್ಪವ ಕೊಟ್ಟು ಬರುವೆವು
ನಾವು ಕೊಟವನು ಮಾಡುವೆನು |
ಭಾವಶುದ್ಧವಾಗಿ ನಡೆಕೊಂಬೆವಲ್ಲದೆ
ನಾವು ಮಾಡಿದ ತಪ್ಪುಗಳೇನು || ೯೧ ||

ಕೆಲವು ರಾಜ್ಯವನ್ನೆಲ್ಲ ಕಟ್ಟಿಕೊಂಡನು ರಾಮ
ಉಳಿದ ರಾಜ್ಯವು ಹಾಳಾಯ್ತು |
ಬಳಿಕೀಗ ನಾವು ಬದುಕುವ ತೆರನಿಲ್ಲ ಮುಂದೆ
ಬೆಳೆದಂಥ ಪೈರೆಲ್ಲ ಹೋಯ್ತು || ೯೧ ||

ನಿಮ್ಮೇಲೆ ನಾವು ಕಾರ್ಯಕೆ ಬಂದವರಲ್ಲ
ಕುಮ್ಮಟವನು ಮುತ್ತಿಕೊಂಡು |
ಹಮ್ಮಿನ ರಾಮನ ಹಿಡಿದು ಕೈಸೆರೆಯನು
ಗಮ್ಮನೆ ಸುರಿತಾಳನೆಡೆಗೆ || ೯೩ ||

ಮುತ್ತಿಗೆಯನು ಮಾಡಿ ಕುಮ್ಮಟ ದುರ್ಗವ
ಒತ್ತಿ ರಾಮನ ಹಿಡಿಕೊಂಡು |
ಮತ್ತೆ ಸುರಿತಾಳನ ಹುಜುರಿಗೆ ಒಯ್ವೆವು
ಎತ್ತಣ ಕಾರ್ಯ ನಮ್ಮಗಿಲ್ಲ || ೯೪ ||

ಬಂದ ಮಂತ್ರಿಗಳೊಂದು ಉಡುಗೊರೆಯನು ಮಾಡಿ
ನಿಂದಿರಬೇಡಿ ನೀವು ಹೋಗಿ
ಮಂದಿಮಕ್ಕಳನೆಲ್ಲ ಕೂಟವು ಕಳಹಿಸಿ
ಮುಂದುವರಿದು ಕುಮ್ಮಟಕೆ || ೯೫ ||

ಪಗುದಿಯಖಾನನ ಕರೆಸಿದ ನೇಮಿಯು
ಸೊಗಸಿಂದ ಹೋಗು ಕಮ್ಮಟಕೆ |
ಮಿಗೆ ಐದು ಕುದುರೆಯ ಚರರನ್ನು ಕರಕೊಂಡು
ಅಗಣಿತ ಕಂಪಿಲನೆಡೆಗೆ || ೯೬ ||

ಒಪ್ಪದಿಂದಲಿ ಕಪ್ಪವ ಕೊಟ್ಟು ಬಾದ್ದೂರನ
ಒಪ್ಪಿಸ ಹೇಳೊ ಸ್ನೇಹದಲಿ |
ತಪ್ಪು ಮಾತುಗಳಾಡಿ ತಳ್ಳಿಯ ಮಾಡಿದರೆ
ತಪ್ಪ[ದೆ] ಬಾರೋ ನಮ್ಮೆಡೆಗೆ || ೯೭ ||

ಒಡೆಯ ಮಾತನು ಕೇಳಿ ಪಗುಡಿಯಖಾನ
ತಡೆಯದೆ ಪೊರಟನಾಕ್ಷಣದಿ |
ಒಡನೈದು ವಾಜಿ ಚೋರರ ಕರೆಸಿಕೊಂಡಾಗ
ನಡೆದನು ಕಮ್ಮಟಕಾಗಿ || ೯೮ ||

ಬಂದವು ಬಾಗಿಲಿಗೈದು ಕುದುರೆಯು ಬೇಗ
ನಿಂದಲ್ಲಿ ಸುದ್ದಿಯ ಪೇಳಿ |

ಅಂದು ಗೊಲ್ಲರು ಕಂಪಿಲರಾಯಗುಸುರಲು
ಬಂದವರನು ಕರೆಸಿದನು || ೯೯ ||

ವಂದಿಸಿ ಕರವ ಮುಗಿದು ಅವರು ಕುಳಿತಾಗ
ಎಂದರು ಮೂರು ಮಾಗುಗಳ |
ಬಂದಿತು ಸುರಿತಾಳನ ದಂಡು ಮಿರಿಜಿಗೆ
ಬಂದನು ಮೇಮಿಯಖಾನ || ೧೦೦ ||

ನಡೆತೆಲೊಂದಾಗಿ ಕಪ್ಪವ ಕೊಟ್ಟು ಬಾದ್ದೂರನ
ಹಿಡಿದುಕೊಡುವದು ಕರ ಲೇಸು |
ಬಿಡದೆ ಬಾದ್ದೂರನ ಹಿಂದಿಕ್ಕಿಕೊಂಡರೆ ನಾವು
ಅಡವಿಯ ಪಾಲೆಂದರವರು || ೧೦೧ ||

ಮುತ್ತಿ ಕುಮ್ಮಟವ ಕೈಸೆರೆಯನು ನಿಮ್ಮನು
ಒತ್ತಿ ಹಿಡಿಸುವ ನೇಮಿಖಾನ |
ಒತ್ತರದೋಡಿಹೋದರೆ ನಾವು ಬಿಡುವೆವೆ
ಚಿತ್ತೈಸಿ ಕೇಳು ಕಂಪಿಲನೆ || ೧೦೨ ||

ಅಗಣಿತ ಸುದ್ದಿಯ ಕೇಳುತ ಕಂಪಿಲರಾಯ
ಮಗ ರಾಮನ ಮುಖ ನೋಡಿ |
ಬಿಗುವಿನ ಮಾಗುಗಳೇಕೆ ನೇಮಿಗೆ ಎಂದು
ಸೊಗಸಿಂದ ಬರಹೇಳೋ ದಂಡ || ೧೦೩ ||

ಮರೆಹೊಕ್ಕಗಾಸರೆ ಕೊಡುವ ರಾಯರ ಗಂಡ
ಜಗದೊಳು ನೇಮಿಯ ಮಿಂಡ |
ಜಗಬಿರಿದನು ಧರಿಸಿದೆನು ಕಾಲೊಳು ನಾನು
ಮಿಗೆ ಕೊಡುವನಲ್ಲ ಬಾದೂರನ || ೧೦೪ ||

ಇಂತಪ್ಪ ಬಿರಿದು ಧರಿಸಿ ಕೊಟ್ಟರೆ ನನ್ನ
ಪಂಥವೇನಾಯ್ತಪ್ಪ ಜೀಯ |
ಚಿಂತೆ ಇನ್ಯಾತಕೆ ಬರಹೇಳೋ ನೇಮಿಯ
ಪಂಥವನೆಲ್ಲ ನೋಡುವೆನು || ೧೦೫ ||

ಬಂದ ಖಾನರಿಗೊಂಡು ವೀಳ್ಯ ಉಡುಗೊರೆ ಕೊಟ್ಟು
ಹಿಂದಕೆ ತೆರಳಿ ನೇವೆಂದ |
ಮಂದಿ ಮನ್ನೆಯರ ಕರೆಸಿಕೊಂಡು ರಾಮಯ್ಯ
ಬಂದನು ಹೊರ ಚಾವಡಿಗೆ || ೧೦೬ ||

ಬಂದನಂತೆ ನೇಮಿ ನಮ್ಮೇಲೆ ಕಾರ್ಯಕ್ಕೆ
ಇಂದು ಬಾದೂರನ ಕೊಡಹೇಳಿ |
ಬಂದಿದ್ದವೈದು ಕುದುರೆಯ ಸುದ್ದಿಯ ಕೇಳಿ
ಹಿಂದಕ್ಕೆ ಅಟ್ಟಿದೆವೆನಲು || ೧೦೭ ||

ಕುರಿಯ ಹಟ್ಟಿಯ ಹೊಕ್ಕರೆ ಕುರುಬ ಕೊಡಲು ತನ್ನ
ಮರೆಹೊಕ್ಕ ಪೋರನ ಎನುತ |
ಧರೆಯ ರಾಯರ ಗಂಡ ನೆರೆಸೋ ಸೇನೆಯನೆಲ್ಲ
ಬರಲಿನ್ನು ಮೇಮಿಯಖಾ || ೧೦೮ ||

ಎಡಬಲದಲಿ ನೋಡಿ ಬರುವಂಥ ಶಬರರ
ತಡೆಯದೆ ಕರೆಸಿರೋ ನೀವು |
ಬಿಡಬೇಡಿ ಬಂದಂಥ ಬೇಡಪಡೆಯ ಮುಂದೆ
ಕೊಡುವೆನು ವರುಷ ಸಂಬಳವ || ೧೦೯ ||

ತಂದೆಯ ಪಾದಕ್ಕೆ ಎರಗಿ ರಾಮಯ್ಯನು
ಒಂದು ಬಿಂದಿಗೆ ಹೊನ್ನ ಕೇಳಿ |
ಕಂದನ ಮಾತ ಕೇಳುತ ಕಂಪಿಲಭೂಪ
ಬಿಂದಿಗೆ ಹೊನ್ನ ಕೊಡಿಸಿದನು || ೧೧೦ ||

ಮಂದಿಮಕ್ಕಳು ರಾಹುತರು ರಾಣುವೆಗೆಲ್ಲ
ಗಂಧ ವೀಳ್ಯವ ಕೊಡಿಸಿದನು |
ತಂದಂಥ ಬಿಂದಿಗೆ ಹೊನ್ನ ಹಂಚಿಸಿ ಕೊಟ್ಟು
ಮಂದಿಯ ಸಮಾಜಾಸಿಕೊಂಡ || ೧೧೧ ||

ನೋಡು ಬೈಚಪ್ಪ ಕೂಡು ಬೇಗದಿ ಗಡಿ
ವಾಡದ ಮಂದಿ ನಾಯಕರ |
ಕೂಡಿಸೊ ಕರೆಸೋ ಬೇಗದೊಳೆಂದು ಪೇಳಿದ
ನಾಡ ಪರಿವಾರವನೆಲ್ಲ || ೧೧೨ ||

ಆರೆಯ ಚಾರಮರಾಯನ ಮಕ್ಕಳಿಗೆ
ಆರು ಸಾವಿರ ವಾಜಿಯನು |
ಭೋರನೆ ಕೊಡಿಸು ಎಂದು ಹಣವ ಕೊಟ್ಟು
ಬೇರೊಂದು ಪೌಜ ಮಾಡಿದನು || ೧೧೩ ||

ಇತ್ತ ರಾಮಯ್ಯನು ಕತ್ತಿ ಸಂಭ್ರಮದೊಳು
ಅರ್ತಿಯಿಂದಲಿ ಇರುತಿಹನು |

ಅತ್ತ ಪಗುದಿಯಖಾನ ನೇಮಿಯೊಳ್ ಸುದ್ದಿಯ
ಬಿತ್ತರದಿಂದ ಪೇಳಿದನು || ೧೧೪ ||

ಕೇಳಿದೆವೈ ನೇಮಿ ಎಮ್ಮೊಡೆಯ, ರಾಮನ ಸುದ್ದಿ
ಹೇಳುವುದೇನವನ ಕೊಬ್ಬ |
ಬಾಳ ಪಂಥದ ಬಿರುದುಗಳ ಕೊಂಡಾಡಿಸಿ
ಹೇಳಿ ನಿಮ್ಮೊಡೆಯಗೆ ಎನುತ || ೧೧೫ ||

ಅಡಗಿತ ಖಾನನ ಬಿಡಿಸುವ ನೇಮಿಯ
ಒಡೆಯ ಸುರಿತಾಳನ ಗಂಡ |
ಬಿಡೆನು ಬಾದೂರನ ಕೊಡೆನು ಕಪ್ಪವನೆಂದು
ಜಡಿದು ಖಡ್ಗವನು ಝಳ್ಪಿಸುತ || ೧೧೬ ||

ಹೇಳುವ ಮಾತನು ಕೇಳಿದ ನೇಮಿಯು
ಬಾಳ ಕೋಪವ ತಾಳಿ ಮನದಿ |
ಧೂಳುಗೋಟೆಯ ಮಾಡಿ ಕಡಿವೆನು ಕುಮ್ಮಟವ
ಸನ್ನೆಗಾಳಿಯ ಮಾಡಿಸಿದ || ೧೧೭ ||

ಅಲ್ಲಿಂದ ತೆರಳಿ ದಂಡು ಮುಂದಕ್ಕೆ ಸಾಗಿತು
ಮೆಲ್ಲನೆ ಮಿರುಜೆಯ ಬಳಿಗೆ |
ಬಲ್ಲಿದ ಖಾನಖಾನರು ಮುಂದಾಗಿ
ನಿಲ್ಲದೆ ದಾಳಿ ಮಾಡೆನುತ || ೧೧೮ ||

ಎಂಬತ್ತು ಸಾವಿರ ಕುದುರೆ ವಜೀರರ
ಮುಂಚಣಿ ಫೌಜ ನಡೆಯೆಂದ |
ಕುಂಭಿನಿ ಬಿರಿವಂತೆ ನಡೆಯಿತು ದಂಡಿನ
ಸಂಭ್ರಮವೇನ ಬಣ್ಣಿಸುವೆ || ೧೧೯ ||

ರಾಮನ ಸೀಮೆಯ ಗಡಿವಾಡದೊಳು ಬೇಗ
ನೇಮಿಯ ದಂಡು ಬಂದುದನು |
ಆ ಮಹಾ ಕಂಪಿಲರಾಯಗೆ ಪೇಳಲು
ರಾಮಗೆ ಪೇಳೆಂದನರಸ || ೧೨೦ ||

ಬಂದರು ಚರರು ರಾಮಗೆ ವಂದಿಸಿ ಬೇಗ
ನಿಂದು ಸುದ್ದಿಯನು ಪೇಳಿದನು |
ಇಂದೆಮ್ಮ ರಾಜ್ಯವ ಸಂದುತ ನೇಮಿಯ ದಂಡು
ಬಂದಿತು ರಾಮಯ್ಯನೆನಲು || ೧೨೧ ||

ಕೇಳಿದ ಸುದ್ದಿಯ ಹೇಳುವುದೇನೆಂದು
ಕಾಳಗ ಬಂತು ನಮಗೆಂದ |
ನಾಳಿನ ದಾಳಿಗೆ ಸಿಕ್ಕಿದೆ ನೀವೆಲ್ಲ
ಗೂಳೇವ ತೆಗಸು ಬನ್ನೆಂದ || ೧೨೨ ||

ಬಂದ ಚರರು ಓಡಿಹೋದರು ಹಿಂದಕ್ಕೆ
ಒಂದರಗಳಿಗೆ ನಿಲ್ಲದೆಲೆ |
ಕೂಡಿತು ಮಂಚೂಣಿ ಕುದುರೆ ಖಾನರು ಬಂದು
ನಾಡಿನ ಪ್ರಜೆಗಳ ಮೇಲೆ || ೧೨೩ ||

ಮುಂದಕ್ಕೆ ಗೂಳೆವ ತೆರಳಿಸಿಕೊಂಡು ಬಂದರು
ಬಂದಂಥ ಕುದುರೆಯ ನೋಡಿ |
ಹಿಂದಕ್ಕೆ ನಿಂತು ತರುಬುವ ಖಾನಖಾನರ
ಸಂದಣಿಯನು ನಿಲಿಸುತಲಿ || ೧೨೪ ||

ಹಿಂದಟ್ಟಿ ಬಂದಂಥ ಕುದುರೆಯ ಶಬರರು
ತಂದರು ಕುದುರೆಯ ಹಿಡಿದು |
ಕೊಂದು ಖಾನರನೆಲ್ಲ ಕಡಿದೊಟ್ಟುತಲಿ ತಾವು
ಹಿಂದುಮುಂದಾಗಿ ನಡೆವುತಲಿ || ೧೨೫ ||

ಎಡದಲ್ಲಿ ಬಾಹಂತ ಕುದುರೆಯ ಬೇಡರು
ಹಿಡಿದು ರಾಹುತರನ್ನು ಕಟ್ಟಿ |
ಕಟ್ಟಿದೊಟ್ಟಿ ಖಾನಖಾನರನೆಲ್ಲ ತಲೆಗಳ
ಪಿಡಿಕೊಂಡು ಮುಂದಕ್ಕೆ ನಡೆದು || ೧೨೬ ||

ಬಲದೊಳು ಬಾಹಂತ ಕುದುರೆಯನೆಚ್ಚರೆ
ಬಲದೊಳು ಕಲ್ಲು ಬಿದ್ದಂತೆ |
ಮರೆತು ಬಾಹಂತ ಕುದುರೆಯನೆಲ್ಲ ಶಬರರು
ಕತೆರು ಹಿಡಿಯುತಿರ್ದರಾಗ || ೧೨೭ ||

ಕೆಂದಗುದುರೆಯನೇರಿ ಬಾಹಂತ ರಾಹುತರ
ಮುಂದಲೆಗಳ ಪಿಡಿದುಕೊಂಡು |
ಕೊಂದು ಕೂಗುತ ಬೊಬ್ಬಿಡುತಲಿ ಶಬರರು
ಬಂದರು ಕುಮ್ಮಟಕಾಗ || ೧೨೮ ||

ಮಿರಜೆಯ ಬಿಟ್ಟು ಎದ್ದಿತು ದಂಡು ಕೂಚಾಗಿ
ಭರದಿಂದ ದಳ್ಳುದಳ್ಳಿಯಲಿ |

ತೊರಗಲ್ಲು ಬಾದಾವಿ ಬಳಿಗೆ ಬಂದಿತು ಬೇಗ
ಅರೆಮರೆಯಿಲ್ಲದೆ ನೇಮಿ || ೧೨೯ ||

ತೊರಗಲ್ಲು ಬಾದಾವಿಲಿಂದ ಕೂಚೆಯ ಮಾಡಿ
ನರಗುಂದದ ಹೊಳೆಯ ದಾಂಟಿ |
ಧುರಧೀರ ಖಾನವಜೀರರು ಮುಂದಾಗಿ
ಅರುವತ್ತು ಸಾವಿರ ವಾಜಿ || ೧೩೦ ||

ಬೆಟ್ಟವಾದುದು ಕಮ್ಮಟದುರ್ಗ ನಮಗೊಂದು
ಕೊಟ್ಟವಾಯಿತು ಧರೆಯೊಳಗೆ |
ಮುಟ್ಟಿ ಕೇಳುತ ನೇಮಿ ಚರರನು ಅಲ್ಲಿಂದ
ಅಟ್ಟಿ ಒತ್ತಿಗೆ ಬಂದಿಳಿದ || ೧೩೧ ||

ತುರುಕ ನೇಮಿಯಖಾನ ಬಂದ ಕುಮ್ಮಟಕೆಂದು
ಅರಸು ಜಗದಪ್ಪ ಕೇಳಿದನು |
ಕರೆಕರೆ ಮಾತಲ್ಲ ಕಳುಹುವೆ ಕುದುರೆಯ
ಬೆರಸಿ ಮಾತಾಡಿ ನೀವ್ ಬನ್ನಿ || ೧೩೨ ||

ದೊರೆ ಕಂಪಿಲನ ಬಳಿಗೆ ನೀವು ಹೋಗಿರೊ
ಕರೆಸಿಕೊಳ್ಳಲಿ ನಮ್ಮ ಪೌಜ |
ಕರೆಕರೆ ಮಾತಲ್ಲ ಕುಳುಹುವೆ ಕುದುರೆಯ
ಬೆರಸಿ ಮಾತಾಡಿರೊ ನೀವು || ೧೩೩ ||

ಹೋದರು ಚರರೋಡಿ ಕಂಪಿಲರಾಯಗೆ
ಭೇದವಿಲ್ಲದೆ ಅಡ್ಡ ಬಿದ್ದು |
ಕಾದುವ ಕುದುರೆ ಮಂದಿಯ ಕೊಟ್ಟ ಕಳುಹುವ
ಈ ಧರೆ ಜಗದಪ್ಪ ಅರಸು || ೧೩೪ ||

ಮಾವನ ಸುದ್ದಿಯ ಕೇಳುತ ರಾಮಯ್ಯ
ಆವ ರಾಯರ ಕೂಟ ಬೇಡ |
ತಾವು ಸುರಿತಾಳಗೆ ಪಗುದಿಯ ಒಕ್ಕಲು
ಸಾವಂತರ [ಕೂಟ] ನಮಗೇಕೆ || ೧೩೫ ||

ಕೂಟವ ಕೂಡಿಸಿ ಕಡಿದಾಡುವಂಥವರ
ಕೋಟಿ ರಾಯರ ಗಂಡನೆಂದು |
ಆಟಕೆ ಬಿರಿದ ನಾ ಧರಿಸಿದೆ ಅಪ್ಪಾಜಿ
ಕೂಟ ನಮಗ್ಯಾಕೆಂದ ರಾಮ || ೧೩೬ ||

ಪರಬಲವನು ಬಯಸಿ ರಣರಂಗ ಮಾಡುವ
ದೊರೆಗಳ ಗಂಡನೆಂದೆಂಬ |
ಧರೆಯೊಳು ಬಿರಿದ ನಾಧರಿಸಿದೆನಲ್ಲದೆ
ದೊರೆಗಳ ಕೂಟ ಬೇಕಿಲ್ಲ || ೧೩೭ ||

ಇಂತಪ್ಪ ಬಿರಿದ ಧರಿಸಿದೆನೆಂದು ಮಾವಗೆ
ನಿಂತು ಮಾತುಗಳನಾಡಿದನು |
ಚಿಂತೆಯಾತಕೊ ನೇಮಿಖಾನನ ನೋಡುವೆನು
ಪಂಥವ ನೋಡ ಹೇಳೆಂದ || ೧೩೮ ||

ಬಂದ ಚರರಿಗೆ ರಾಮ ಒಂದುಡುಗೊರೆ ಕೊಟ್ಟು
ಹಿಂದಕ್ಕೆ ಹೋಗಿ ನೀವೆನಲು |
ಮಂದಿ ಕುದುರೆಯು ಬೇಡ ನಮಗಿನ್ನು ಮಾವಗೆ
ವಂದಿಸಿ ಕರಮುಗಿವೆನಿನ್ನು || ೧೩೯ ||

ಅತ್ತವರನು ಕಳುಹಿಸಿದ ರಾಮಯ್ಯನು
ಒತ್ತಿ ಮಾನ್ಯರ ಕೂಡಿಕೊಂಡು |
ಸುತ್ತಣ ಕಣಿವೆಯ ಕಟ್ಟಿ ಕೊಲ್ಲುವೆನೆಂದು
ಅರ್ತಿಲಿ ಹೊರಟ ರಾಮಯ್ಯ || ೧೪೦ ||

ಇದು ಪರನಾರಿ ಸೋದರ ರಾಮನಾಥನ
ಪದಕೃತಿಯೊಳಗೊಂದು ಕಥೆಯ |
ಚದುರ ಬಾದೂರಖಾನ ರಾಮನ ಮರೆಬಿದ್ದ
ಕದನದ ಕಥೆಯು ಪೂರಾಯ್ತು || ೧೪೧ ||

**ಅಂತು ಸಂಧಿ ೧೦ ಕ್ಕ ಪದನು ೯೬೭೨ಕ್ಕಂ ಮಂಗಳ ಮಹಾಶ್ರೀ**

## ಸಂಧಿ ೧೧ - ನೇಮಿಖಾನ ಕುಮ್ಮಟದುರ್ಗ ಮುತ್ತಿದುದು

ಶ್ರೀ ಗಿರಿಜಾ [ಸ್ಯಾಂಬುಜ ದಿನ] ನಾಯಕ
ಭೋಗಿಭೂಷಣ ಭಾಳನೇತ್ರ |
ಭಾಗೀರಥಿಧರ ಭವರೋಗವೈದ್ಯನೆ
ನಾಗ[ಕುಂಡಲ] ಶರಣೆಂಬೆ || ೧ ||

ರಾಮ ಜಟ್ಟಂಗಿದೇವರ ಪಿಂಡ ರಾಮಯ್ಯ
ರಾಮನ ಕೃತಿಯ ಪೇಳುವೆನು |

ರಾಮರಾಮಾ ಎಂಬ ನಾಮವ ನೆನೆದರೆ
ಕಾಮಿತ ಫಲವೀವ ರಾಮು || ೨ ||

ಬಂದ ನೇಮಿಯಖಾನನ ದಂಡನೆಲ್ಲವ
ಹಿಂದು ಮುಂದನೆ ಮಾಡಿ ಕಡಿದು |
ಕೊಂದು ರಣದೊಳು ಸೂರೆಮಾಡಿದ ರಾಮಯ್ಯ
ಮುಂದಣ ಕಥೆಯ ಪೇಳುವೆನು || ೩ ||

ಅಷ್ಟದಿಕ್ಕಿನಲಿ ಇಳಿದುದು ಸುತ್ತಮುತ್ತಲು
ಮುತ್ತಿಗೆ ಕುಮ್ಮಟಕಾಯ್ತು |
ಎತ್ತ ನೋಡಲು ದುರ್ಗ ಕಣಿವೆ ಮಲೆಗಳೊಳು
ಬಿತ್ತರಿಸುತ ಖಾನರೆಲ್ಲ || ೪ ||

ಅಷ್ಟದಿಕ್ಕಿಲಿ ದಂಡು ಬಂದು ಇಳಿಯಿತೆಂದು
ಸುತ್ತಣ ಹಳ್ಳಿಪಳ್ಳಿಗಳು |
ಮತ್ತೊಡೆದು ಬಂದು ಕುಮ್ಮಟ ಹೊಕ್ಕು ಕಂಪಿಲಗೆ
ಒತ್ತಿ ಸುದ್ದಿಯನು ಪೇಳಿದರು || ೫ ||

ದಂಡು ಬಂತೆಂಬ ಸುದ್ದಿಯ ಕೇಳಿ ರಾಮಯ್ಯ
ಉಂಡು ಹೊರ ಚಾವಡಿಯೊಳಗೆ |
ಢಂಢಾಮ ಢಮ ಎಂದು ಹೊಯ್ಸಿ ನಗಾರಿಯ
ಮಂಡಲಪತಿ ಹೊರಹೊಂಟ || ೬ ||

ಕರೆಸಿ ತನ್ನಯ ಮಂದಿ ಮಕ್ಕಳೆಕ್ಕಟಿಗರ
ಬಿರಿದಂಕ ಮನ್ನೆಯರನೆಲ್ಲ |
ಹರುಷದಿ ಗಂಧ ಪರಿಮಳವನು ಕೊಟ್ಟಿನ್ನು
ತುರುಕರ ದಂಡಿನ ಮೇಲೆ || ೭ ||

ಬೊಬ್ಬೆಯಬ್ಬರಗಳು ಹತ್ತಿ ಕುಮ್ಮಟದೊಳು
ಇಬ್ಬಾಗವಾಯ್ತು ಪಟ್ಟಣವು |
ಗಬ್ಬಿ ರಾಮನ ಮನ್ನೆಯರೆಲ್ಲ ಕೂಡಿದರು
ಉಬ್ಬಿ ಹಿಡಿದರು ವೀಳ್ಯಯವ || ೮ ||

ಮರ ಬಿಲ್ಲು ಕತ್ತಿ ಈಟಿಯ ಬಾಣ ಪೆಟ್ಟಲು
ಬರುಚಿ ಕಠಾರಿ ಕೈಯಂಬು |
ಸರಸದಿ ಆನೆ ಕುದುರೆ ಕಾಲ್ಬಲ ಮಂದಿ
ಅರುವತ್ತು ಸಾವಿರ ಕೂಡಿ || ೯ ||

ಧರೆಯೊಳು ಕುಮ್ಮಟದರಸಿನ ಕಾರ್ಯಕ್ಕೆ
ಹರುಷವ ತಾಳಿ ಮನದೊಳಗೆ |
ಚಾರಮರಾಯನ ಮಕ್ಕಳ ಕರೆಸಿದ |
ಆರು ಸಾವಿರ ಕುದುರೆ ಪೌಜ || ೧೦ ||

ಧೀರರು ಹೋಗಿ ದಂಡಿಗೆ ನೀವು ಇದಿರೇರಿ
ಸ್ವಾರಿಯ ಮಾಡಬೇಕೆಂದ || ೧೧ ||

ಕೊಟ್ಟನು ರಾಮಯ್ಯ ತಬಕಿಲಿ ವೀಳ್ಯವ
ಬಿಟ್ಟನು ದಂಡಿಗೆ ಇದಿರ |
ಬೆಟ್ಟವ ಸುತ್ತಿ ಹೋಯಿತು ಕುದುರೆಯ ಪೌಜು
ನೆಟ್ಟನೆ ನೇಮಿ ಎಲ್ಲೆನುತ || ೧೨ ||

ಚಾರಮರಾಯನ ಮಕ್ಕಳಿಬ್ಬರು ಕೂಡಿ
ಆರು ಸಾವಿರ ಕುದುರೆಯಲಿ |
ದಾರಿಯ ಪಿಡಿದು ಬರುವಂಥ ಗುನುಗನು
ಸೂರೆಯ ಮಾಡಿನ್ನು ಸುಲಿದು || ೧೩ ||

ಮುನ್ನೂರು ಪೌಜಿಯ ಕೈಸೆರೆ ಹಿಡಿದರು
ಹನ್ನೊಂದು ಆನೆಯ ತೆಗೆದು |
ಚೆನ್ನರಾಮಯ್ಯನ ಬಳಿಗೆ ಬಂದು ಒಪ್ಪಿಸಿ
ಉನ್ನತ ಹರುಷದೊಳವರು || ೧೪ ||

ಗಡಿಯ ಕಾಲವ ಕಾವ ಕಾಟನಾಯಕ ಹೋಗಿ
ಕಡೆಯಕಲ್ಲನು ನೀನು [ಸೂ]ರೆ |
ಬಿಡಬೇಡ ಬರುವಂಥ ಖಾನರನವ
ಕಡಿದು ಹಿಂದಕೆ ಹಾಕೊ ನೀನು || ೧೫ ||

ಒಡೆಯನ ಮಾತ ಕೇಳುತ ಕಾಟನಾಯಕ
ತಡೆಯದೆ ವೀಳ್ಯವ ಹಿಡಿದು |
ಒಡನೊಂದು ಸಾವಿರ ಮಂದಿಯ ಕರಕೊಂಡು
ಬಿಡದೆ ಹತ್ತಿದ ಕಡೆಯಕಲ್ಲ || ೧೬ ||

ಕಣಿವೆಯ ಕಟ್ಟಿ ಬರುವಂಥ ಖಾನರನೆಲ್ಲ
ಭಿನ್ನವಿಲ್ಲದೆ ಕೊಂದನವರ || ೧೭ ||

ಐವತ್ತು ನೂರು ಕುದುರೆಯ ಹಿಡಿದುಕೊಂಡರು
ಬೈಗಿನ ಹೊತ್ತಿಗೆ ಬಂದು |

ಸೈಮಾಡಿ ಒಪ್ಪಿಸಿ ಒಡೆಯ ರಾಮಯ್ಯಗೆ
ಕೈಯ ಮುಗಿದರು ಮನ್ನೆಯರು || ೧೮ ||

ಮಲೆಯ ಕಾವಲ ಕಾವ ಹೊಲೆಯರ ಹೊನ್ನುಗ
ಸಲೆ ಕೋಡ್ಗಲ್ಲ ನೀನೇರೊ |
ಒಳಹೊಕ್ಕು ಬಾಹಂಥ ಖಾನ ವಜೀರರ
ಬಲಿಯನಿಕ್ಕಿಸೊ ಕಣಿವೆಯೊಳಗೆ || ೧೯ ||

ಪಟ್ಟಿ ವೀಳ್ಯವ ಕೊಟ್ಟು ಅಟ್ಟಿದನಲ್ಲಿಗೆ
ಬಿಟ್ಟು ಸೂಟಿಯನವರು ಹೋಗಿ |
ನೆಟ್ಟನೆ ಕೋಡ್ಗಲ್ಲನೇರಿ ನೋಡಿದರಾಗ
ಬಿಟ್ಟಿಹ ದಂಡಿನ ಸೊಬಗ || ೨೦ ||

ಒಳಹೊಕ್ಕು ಬರುವಂಥ ಕುದುರೆ ಖಾನರನೆಲ್ಲ
ಒಳಿತಾಗಿ ಹೊಗಬಿಟ್ಟುಕೊಂಡು |
ಇಳಿದರು ಕಲ್ಲಿನ ಸುತ್ತಡ್ಡಗಟ್ಟಿಕೊಂಡು
ಬಳೆಯ ಹೇರನು ಒಡೆವಂತೆ || ೨೧ ||

ಕಡಿದು ಕಡಿದು ಒಟ್ಟಿ ತಲೆಗಳ ಮಲೆಯೊಳು
ಅಟ್ಟಿ ಹಿಂದಕೆ ಹಾಕಿದರು |
ಕೊಟ್ಟದ ಬೇಡರು ಕೂಡಿ ಕುದುರೆಗಳ ಹೊಯ್
ದೊಟ್ಟಿ ಕೆಡಹಿದರು ರಾವುತರ || ೨೨ |

ನೂರೊಂದು ಕುದುರೆಯ ಆರಿಸಿ ಹಿಡಿದರು
ಸೂರೆ ಮಾಡಿದರು ಅರಿಬಲವ |
ಕಾರಣಿಕದ ರಾಮಯ್ಯಗೊಪ್ಪಿಸಿದರು
ಧೀರರು ಕೈಮುಗಿದರಾಗ || ೨೩ ||

ಬೆಟ್ಟದ ಸಿಂಗನಾಯಕಗೊಂದು ವೀಳ್ಯವ
ಕೊಟ್ಟನು ನಗುತ ರಾಮಯ್ಯ |
ಹಟ್ಟಿಕಾರರು ಹಳ್ಳಿಕಾರರ ಕೂಡಿಸಿ
ನೆಟ್ಟನೆ ಹಿರಿಯ ಕಣಿವೆಗೆ || ೨೪ ||

ಜಡಿದೇರಿ ಬರುವಂಥ ದೊಡ್ಡ ಪೌಜನು ಕಂಡು
ಕಡೆಯ ಕಣಿವೆಯ ಕಟ್ಟಿದರು |
ಸುತ್ತಡ್ಡಗಟ್ಟಿಕೊಂಡರು ದೊಡ್ಡ ಪೌಜನು
ಮುತ್ತಿಕೊಂಡರು ಅಡವಿಯೊಳಗೆ || ೨೫ ||

ಎತ್ತ ನೋಡಲು ಅಂಬಿನ ಮಳೆ ಗಾಯದಿ
ಸತ್ತ ಖಾನರು ಲೆಕ್ಕವಿಲ್ಲ || ೧೬ ||

ಸಾವಿರದೇಳ್ನೂರು ಮಂದಿಯ ಕೊಂದರು
ಗಾಯಾದ ಮಂದಿ ಕಡೆಯಿಲ್ಲ |
ಆವಿನ ಹಿಂಡು ಬೆದರಿದಂತೆ ತುರುಕರ ದಂಡು
ನೋವಿಂದ ಹಿಂದಕ್ಕೋಡಿದರು || ೧೭ ||

ಅರವತ್ತು ಕುದುರೆಯ ಹಿಡಿಕೊಂಡರಾಕ್ಷಣ
ಧರ್ಮಗಾಳೆಯ ಹಿಡಿಸುತಲಿ |
ಭರದಿಂದ ಬಂದು ರಾಮಯ್ಯಗೆ ಒಪ್ಪಿಸಿ
ಕರಗಳ ಮುಗಿದು ಮನ್ನೆಯರು || ೧೮ ||

ಹೊಳೆಯ ದಂಡೆಯ ಹಿಡಿದು ಬರುವಂಥ ದಂಡನು
ಇಳಿಯ ಹೊಡೆದು ಹಿಂದಕಟ್ಟಿ || ೧೯ ||

ಗೊಂದಿಯ ಕಣಿವೆಯ ಸುತ್ತಡ್ಡಗಟ್ಟಿದ
ಬಂಧೀಸಿ ತನ್ನ ಮಂದಿಯನು |
ಬಂದಂಥ ಖಾನರ ಕಟ್ಟಿದೊಟ್ಟಿದ ಮಾಚ
ಸಂಧಿನೊಳ್ ಹಿಡಿದ ವಾಜಿಗಳ || ೨೦ ||

ಇನ್ನೂರು ಕುದುರೆಯ ಕೈಸೆರೆಯ ಹಿಡಿದನು
ಚೆನ್ನಿಗ ರಾಮನ ಬಳಿಗೆ || ೨೧ ||

ಮಂದಿಯನೊಯ್ಯಗೊಡದೆ ಗುಜ್ಜಲ ಓಬ
ತಂದೆಯ ಕಾಲದ ಹಳಬ |
ಇಂದಿನ ಕಾರ್ಯವೆಷ್ಟೆಂಬು ಅಷ್ಟನೆ ಮಾಡಿ
ಹಿಂದಕ್ಕೆ ತಿರಿಗಿ ಬಾಯೆಂದ || ೨೨ ||

ಎಲ್ಲರಿಗೊಂದೊಂದು ಪಟ್ಟಿ ವೀಳ್ಯವ ಕೊಟ್ಟು
ನಿಲ್ಲದೆ ಹೋಗಿ ನೀವೆನುತ |
ಬಲ್ಲಿದ ರಾಮಯ್ಯ ಕಳುಹಲು ಮಾನ್ಯರು
ಎಲ್ಲರು ತೆರಳಿ ಸಾಗಿದರು || ೨೩ ||

ಎಮ್ಮೆಯಗುಟ್ಟಕ್ಕೆ ಹತ್ತಿ ತೋವರನಿಟ್ಟು
ಹೆಮ್ಮೆಯ ತುರುಕರು ಬರುವಾಗ |
ಗಮ್ಮನೆ ದಾರಿಯ ಕಟ್ಟಿ ಅವರನಟ್ಟಿ
ದಮ್ಮನೆ ದಣಿಸಿ ಕೊಲ್ಲುತಲಿ || ೨೪ ||

ಆರುಸಾವಿರ ಬಲ ಕೂಡಿತು ಅಲ್ಲಿಗೆ
ದಾರಿದಾರಿಯ ಕಟ್ಟಿಕೊಂಡು |
ದೂರಕರು ಘೋರಡವಿಯನೆ ಬಿದ್ದು
ದಾರಿಯರಿಯದೆ ಅಡೆಯೆದ್ದು || ೩೫ ||

ಮನ್ನಾಲ ಮಾಚನು ತನ್ನ ಮಂದಿಯ ಕೂಡಿ
ಮುನ್ನೂರು ಬಿಲ್ಲು ಈಟಿಗಳು |
ಚೆನ್ನಾಗಿ ಇರಿದಿರಿದು ನೂಕುತ ಕುದುರೆಯ
ಚೆನ್ನಾಗಿ ರಾಮಗೊಪ್ಪಿಸುತ || ೩೬ ||

ಒಕ್ಕಲಿಗರ ಮುದ್ದ ಹೊಕ್ಕನು ರಣದೊಳು
ಸೊಕ್ಕಾನೆ ಹಿಂಡನು ಕಂಡು |
ಗಕ್ಕನೆ ನಿಂತು ಮುಂದನೆ ಬರಲೀಸದೆ
ಸಿಕ್ಕಿದವೆಲ್ಲವ ಕಡಿದ || ೩೭ ||

ಖಾನಖಾನರನೆಲ್ಲ ಕಡಿದು ಹಿಂದಕೆ ಹಾಕಿ
ತಾನೊಂದು ನೂರು ವಾಜಿಯನು |
ಮಾನದಿ ತಂದು ರಾಮಯ್ಯಗೆ ಒಪ್ಪಿಸಿ
ಖಾನರ ಗಂಡನೆಂದೆನುತ || ೩೮ ||

ಆನೆಯಕಲ್ಲಿಗಾತುಕೊಂಡರು ಶರಬರು
ಮೌನದೊಳಡಗಿಕೊಂಡಿಹರು |
ಜಾಣ ಖಾನನು ಒಪ್ಪಿ ಬರುವ ದಾರಿಯ ಕಟ್ಟಿ
ಮೀನಿಗರ ಲಕ್ಕ ಹೊಕ್ಕಿರಿದ || ೩೯ ||

ರಕ್ಕಸ ಮಾದನು ಬುಕ್ಕನ ಪಾಲನು
ಹೊಕ್ಕು ಖಾನರ ಮೇಲೆ ಇರಿದ || ೪೦ ||

ಮಾದಿಗ ಹಂಪನು ಕೋಟೆಗರ ದ್ಯಾವನು
ಆದವನ್ನಿಯ ಗಿರಿಯನವ[ನು] |
ಸಂಧಿಸಿ ಹೊಕ್ಕು ತಲೆಗಳನು ಚಂಡಾಡಿದ ವಿ
ನೋದವನೇನ ಬಣ್ಣಿಸುವೆ || ೪೧ ||

ಎಲ್ಲ ಮಾನ್ಯರು ಕೂಡಿ ಕಣಿವೆಗಳನು ಕಟ್ಟಿ
ಬಲ್ಲಂತೆ ಕಾರ್ಯಮಾಡಿದರು |
ಮೆಲ್ಲನೆ ಹತ್ತುಸಾವಿರ ತುರುಕರ ಕೊಂದು
ಉಲ್ಲಾಸದಲಿ ತಿರುಗಿದರು || ೪೨ ||

ಮುನ್ನೂರು ಕುದುರೆ ಮುವತ್ತಾನೆ ಕೈಸೆರೆ
ಹನ್ನೊಂದು ಮಂದಿ ಖಾನರನು |
ಚೆನ್ನಾಗಿ ರಾಮಗೊಪ್ಪಿಸಿ ಕೈಮುಗಿದರು
ಮನ್ನೆಯರೆಲ್ಲ ಒಂದಾಗಿ || ೪೩ ||

ಹೊತ್ತು ಹೋಯಿತು ಕತ್ತಲಾಯಿತು ಅಲ್ಲಿಗೆ
ಸುತ್ತ ಹೋಗಿರ್ದವರೆಲ್ಲ |
ಮೊತ್ತದಿ ಬಂದು ರಾಮಯ್ಯಗೆ ಕೈಮುಗಿದು
ಒತ್ತಿ ನಿಂದರು ಎಡಬಲದಿ || ೪೪ ||

ಮಂದಿಯ ಹಾವಳಿ ಘನವಾಗಿ ತೋರಿತು |
ನೊಂದುಹೋದರು ತುರುಕರೆಲ್ಲ || ೪೫ ||

ಹತ್ತೆಂಟು ಸಾವಿರ ಲಕ್ಷ ವಾಜಿಯ ಬಲವು
ಹೊತ್ತು ಮುಳುಗಿತ್ತು ಒಂದಿನಕೆ |
ಚೆತ್ತೈಸು ನೇಮಿ ಬೇಡರ ಪಡೆ ಹೆಚ್ಚಿತ್ತು
ಎತ್ತ ನೋಡಲು ಕಲ್ಲು ಮುಳ್ಳು || ೪೬ ||

ಹಿಂದೆ ಬಾಹಂತ ಗುನುಗನೆಲ್ಲ ಸವರಿದರು
ಮಂದಿ ಮಕ್ಕಳನೆಲ್ಲ ಕಡಿದ |
ಹೊಂದಿ ಬಾಹಂತ ಖಾನರನೆಲ್ಲ ಕಡಿದರು
ಒಂದು ದಿನದ ಕಾಳಗಕೆ || ೪೭ ||

ನೊಂದುಕೊಂಡನು ನೇಮಿ ಮನದೊಳು ಚಿಂತಿಸಿ
ಮುಂದೆ ಹೋಗುವ ತೆರ ಹೇಗೆ |
ಬಂಧಿಸಿ ರಾಮನ ಹಿಡಿವೊರೆ ಆಶ್ಚರ್ಯ
ವೆಂದನು ತನ್ನ ಮನದೊಳಗೆ || ೪೮ ||

ಇಂದಿನ ದಿನ ನಮ್ಮ ಬಲವೆಲ್ಲ ನೊಂದಿತು
ಮುಂದೆ ರಾಮನ ಬಲ ಕೂಡಿ |
ಸಂದುಸಂದುಗಳ ಗೊಂದಿ ಕಣಿವೆಯ ಕಟ್ಟಿ
ಹೊಂದಲೀಸರು ಕುಮ್ಮಟಕೆ || ೪೯ ||

ನಾಳಿನ ದಿನದಲ್ಲಿ ಏಳಬೇಕೆಲೊ ದಂಡು
ಧೂಳಿಗೋಟೆಯ ಮಾಡಬೇಕು |
ಕೋಳ ಹಿಡಿದು ಕುಮ್ಮಟವ ಮುತ್ತಲಿ ಬೇಕು
ಪಾಳೆವ ನಾವಿಳಿಯಬೇಕು || ೫೦ ||

ಬೆಳಗಾದರೆ ಕೂಚೆಯ ಮಾಡಿಸಿ ದಂಡ
ಮೇಳೈಸಿ ಮುತ್ತ ಕಳುಹಿದನು |
ಕಾಳಗವನು ಮಾಡಿ ಹೊಕ್ಕು ಕುಮ್ಮಟವನು
ಮೇಳೈಸಿ ಮುತ್ತಲು ಬೇಕು || ೫೧ ||

ಬಂದ ಖಾನರಿಗೆಲ್ಲ ಒಂದು ವೀಳ್ಯವ ಕೊಟ್ಟು
ಅಂದದೊಳವರ ಕಳುಹಿದನು |
ಮುಂದೆ ಮಾಡುವ ಕಾರ್ಯದ ಆಲೋಚನೆಯಿಂದ
ಹೊಂದಿ ಮಲಗಿದ ನೇಮಿಖಾನ || ೫೨ ||

ಇತ್ತ ರಾಮನು ತನ್ನ ಮಂದಿ ಮಕ್ಕಳ ಕರೆಸಿ
ಮುತ್ತಿಗೆ ಬರುವುದು ನಾಳೆ |
ಒತ್ತರಿಸಿ ತುರುಕರು ಬರುವರು ನಿಲ್ಲದೆ
ಒತ್ತಿ ಹಿಡಿಯಲಿಬೇಕು ನಾವು || ೫೩ ||

ಬರುವಂಥ ದಾರಿ ಕಣಿವೆಗಳ ಕಟ್ಟಿರಿ ನೀವು
ದೊರೆ ಮಕ್ಕಳೆಲ್ಲರು ಸಹಿತ |
ಇರದೆ ನೀವು ಹೋಗಿ ಹನ್ನೆರಡು ಸಾವಿರ ಬಲ
ನೆರೆದಂಥ ಮನ್ನೆಯರೆಲ್ಲ || ೫೪ ||

ಸಂಜೆಯ ಊಟವನುಂಡು ನೀವ್ಹೋಗಿರೋ
ಗಂಡಿ ಕಣಿವೆಗಳೊಳು ಇಳಿದು |
ದಂಡು ಬರುವುದ ನೋಡಿ ಕಂಡು [ಹೇ]ಳಿರೋ ಎಂದು
ಗಂಡುಗಲಿಗಳಿಗೆ ಪೇಳಿದನು || ೫೫ ||

ಅಂದಿನ ವಾಲಗ ಹರಿಯಿತು ರಾಮಯ್ಯ
ತಂದೆಯ ಬಳಿಗೆದ್ದು ಬಂದ |
ವಂದಿಸಿ ಕರಗಳ ಮುಗಿದು ಬಿನ್ನೈಸಿದ
ಅಂದಿನ ರಾಜ್ಯಕಾರ್ಯವನು || ೫೬ ||

ಕೊಂದರು ನಮ್ಮ ಮನ್ನೆಯರು ಕಣಿವೆಯ ಕಟ್ಟಿ
ನೊಂದಿತು ನೇಮಿಯ ಬಲವು |
ಸಂದು ಹೋಯಿತು ಹತ್ತು ಸಾವಿರ ಖಾನರು
ತಂದರು ಕುದುರೆ ಸಾವಿರವ || ೫೭ ||

ನಾಳಿನ ದಿನದಲ್ಲಿ ಕಾಳಗ ಬಂತೆಮಗೆ
ಹೇಳುವುದೇನು ಬೈಚಪ್ಪ |

ಮಂದಿ ಮಕ್ಕಳನೆಲ್ಲ ಕಳುಹಿಸಿ ಮನೆಗಳಿಗೆ
ಬಂದನು ತನ್ನರಮನೆಗೆ || ೫೮ ||

ಅರಸು ರಾಮಯ್ಯನು ಕರೆದು ಕಾಟಣ್ಣನ
ಹೊರ ಚಾವಡಿಯಲ್ಲಿ ನೀನು |
ಇರುವಂಥ ಮಂದಿ ಮಕ್ಕಳನೆಲ್ಲ ಕೂಡಿಕೊಂ
ಡಿರು ಹೋಗೊ ಬೇಗದೊಳುಂಡು || ೫೯ ||

ಕಾಟಣ್ಣಗಪ್ಪಣೆ ಕೊಟ್ಟು ರಾಮಯ್ಯನು
ಕೋಟಲೆಯೊಳು ಉಂಡು ಮಲಗಿ |
ಮೇಳೈಸಿ ದುರ್ಗದ ಕಾವಲ ಮಂದಿಯ ಬ
ಹಳ ಎಚ್ಚರವೆನುತೆದ್ದ || ೬೦ ||

ತಂದೆಯ ಪಾದಕ್ಕೆ ಬಿದ್ದು ರಾಮಯ್ಯನು
ವಂದಿಲಿ ಕಾಟಣ್ಣ ಸಹಿತ || ೬೧ ||

ಕುಕ್ಕಟ ಕೂಗಿದ ಮೇಲೆ ರಾಮಯ್ಯನು
ಚೊಕ್ಕ ಭೋಜನ ಮಾಡಿಕೊಂಡು |
ಗಕ್ಕನೆ ಹೊರಟನು ಒಳಲಾಯವ ಪೊಕ್ಕು
ರಕ್ಕಸ ಬೊಲ್ಲನ ನೋಡಿ || ೬೨ ||

ಬೊಲ್ಲನ ಹಲ್ಲಣಿಸಿ ಪೂಜೆಯ ಮಾಡಿರೊ
ಮೆಲ್ಲನೆ ತೆಕ್ಕೊಂಡು ಬನ್ನಿ |
ಎಲ್ಲ ವಾಜಿಗಳನು ಶೃಂಗರಿಸಿರೊ ಶೀಘ್ರ
ನಿಲ್ಲದೆ ಕಾಟಣ್ಣನೆಡೆಗೆ || ೬೩ ||

ಹೊನ್ನಂದಣವೇರಿ ಹೊರಟನು ರಾಮಯ್ಯ
ತನ್ನ ಮಾನ್ಯರ ಕೂಡಿಕೊಂಡು |
ಚೆನ್ನಾಗಿ ಹೊರ ಚಾವಡಿಯಲ್ಲಿ ಕುಳಿತನು
ಉನ್ನಿಸಿದನು ಮನದೊಳಗೆ || ೬೪ ||

ಬೇಗ ಬೈಚಪ್ಪನ ಮಕ್ಕಳ ಕರೆಸಿದ
ಸೋಗೆಗಣ್ಣರಸು ರಾಮಯ್ಯ |
ದೇವಿಸೆಟ್ಟಿಯಲಿಂಗ ಬೇವಿನ ಸಿಂಗಯ್ಯ
ಕೋವಿದ ಕಾಟಿಗರ ದ್ಯಾವ |
ಮಾವ ಮಂಚಣ್ಣನ ಮಕ್ಕಳು ಸಹವಾಗಿ
ಭೋಗರನೇ ಕರೆಸಿದೆಲ್ಲರನು || ೬೫ ||

ಬಾದೂರಖಾನನು ಮಹಿಮೆಯ ಖಾನನು
ಕಾದುವ ಬಾಣವ ಬಸವ |
ಆದವನ್ನಿಯ ಅರಸುಮಕ್ಕಳ ಕರೆಸಿದ
ಬಾದಾವಿ ಬಸವ ರಾವುತನ || ೬೬ ||

ಹೊರ ಚಾವಡಿಯಿಂದ ಹೊರಟನು ರಾಮಯ್ಯ
ತೊರೆ ಮಾವಿನಮರಕಾಗಿ |
ಬಿರಿದನುಗ್ಗಡಿಸುವ ಭಟರೊಡಗೂಡಿನ್ನು
ಅರಿರಾಯರಗಂಡನೆನುತ || ೬೭ ||

ಎಲ್ಲರಿಗೊಂದೊಂದು ಒಳ್ಳೆ ತೇಜಿಯ ಕೊಟ್ಟು
ಬೊಲ್ಲನ ತರಿಸಿ ಬೇಗದೊಳು |
ನಿಲ್ಲದೆ ಅದನೇರಿ ದುವ್ವಾಳಿಸುತ ರಾಮ
ಎಲ್ಲ ಮಾನ್ಯರ ಕೂಡಿಕೊಂಡು || ೬೮ ||

ಇತ್ತ ರಾಮಯ್ಯನು ಕತ್ತಿ ಝಾಮಿನೊಳಿರೆ
ಅತ್ತ ಸುರಿತಾಳ ತಾನೆದ್ದು |
ಒತ್ತಿ ಕುಮ್ಮಟಕೆ ಮುತ್ತಿಗೆ ಮಾಡಬೇಕೆಂದು
ಉತ್ತಮಖಾನರ ಕರೆಸಿ || ೬೯ ||

ಮೊದಲು ಪೈಜೆಯನು ಮಾಡಿಸಿರೊ ನೀವ್ ಬೇಗದಿ
ಸದರಿಗೆ ಬಂದ ಸುರಿತಾಳ || ೭೦ ||

ಮೊದಲ ಕೂಚೆಗೆ ದಂಡೆಲ್ಲ ಎತ್ತರ ಹುಟ್ಟಿ
ಬೆದರಿ ಎದ್ದರು ತಮತಮಗೆ |
ಮುದದಿಂದ ಅನ್ನಪನ್ನಗಳ ಮಾಡಿಸಿಕೊಂಡು
ಹದಮಾಡಿ ರೊಟ್ಟಿಯ ಸುಟ್ಟು || ೭೧ ||

ಎರಡನೆ ಕೂಚೆಗೆ ಹೊರಟರು ಉಂಡುಟ್ಟು
ಬಿರಿದಂಕ ಖಾನರು ಎಲ್ಲ |
ಮರೆಯದೆ ಬಗಲಿಗೊಂದು ರೊಟ್ಟಿಯ ಕಟ್ಟಿ
ತೆರಳಿ ಮುಂದಕ್ಕೆ ಸಾಗಿದರು || ೭೨ ||

ಮೂರನೆ ಕೂಚೆಗೆ ತೆರಳಿತು ದಂಡೆಲ್ಲ
ದಾರಿಕಾರರ ಕರಕೊಂಡು |
ವಾರುವ ಲಕ್ಷ ಮಂದಿಯು ಹತ್ತು ಲಕ್ಷವು
ಧೀರರು ನಡೆದರರ್ತಿಯಲಿ || ೭೩ ||

ಅಲ್ಲಲ್ಲಿ ಕುದುರೆಯ ಪೌಜುಗಳೆದ್ದು ನಡೆದವು
ಝುಲ್ಲುಝುಲ್ಲೆನುತ ಖಾನರರು |
ನಿಲ್ಲದೆ ಆನೆಯ ಪೌಜು ಹೊರಟವು ಬೇಗ
ಬಿಲ್ಲಿನ ಮಂದಿ ಕಡೆಯಿಲ್ಲ || ೭೪ ||

ಎದ್ದನು ನೇಮಿ ಆನೆಯ ಹತ್ತಿ ನಡೆದನು
ಮುದ್ದುಖಾನರ ಕೂಡಿಕೊಂಡು
ಉದ್ದುರುಟಿದ ರಾಹುತರೆಲ್ಲ ಮುಂದಾಗಿ
ಎದ್ದರು ಕುಮ್ಮಟಕಾಗಿ || ೭೫ ||

ಖಾನ ನೇಮಿಯ ಕೂಡ ನಾಲ್ಕು ಲಕ್ಷ ವಾಜಿಯು
ಆನೆಯ ಹಿಂಡೊಂದು ಲಕ್ಷ |
ಮಾನಾವತಿಗಳು ಕಾಲ್ಬಲ ಹತ್ತು ಲಕ್ಷವು
ಮೌನವಿಲ್ಲದೆ ನಡೆದ ಖಾನ || ೭೬ ||

ಪಾಳೆಗಾರರ ಮಂದಿ ಮುಂಜೂಣಿ ನಡೆಯಿತು ಕ
ಹಳೆ ಢಮಾಮಿ ಹೊಯ್ಸುತಲಿ || ೭೭ ||

ಕೆಂಧೂಳು ಮುಗಿಲು ಆಕಾಶಕೆ ಮುಸುಗಿತು
ಬಂದಿತು ಮುಂದಕ್ಕೆ ದಂಡು |
ಢಂ ಢಮಢಮ ಎಂದು ಭೇರಿಯ ಹೊಯ್ಸುತ
ಗಂಡಿಯ ಒಳಹೊಕ್ಕರಾಗ || ೭೮ ||

ಕೆಂಡದ ಮೇಲೆ ನೊರಜು ಮುತ್ತವಂದದಿ
ದಂಡೆಲ್ಲ ಒಂದೆ ವಾದ್ಯದೊಳು |
ಹಿಂಡಾನೆ ಪೌಜು ಮುಂದಕೆ ಸಾಗಿ ಬಂದಿತು
ಕಂಡರು ರಾಮನ ಭಟರು || ೭೯ ||

ಮುಂಜೂಣಿ ಕುದುರೆ ಬಂದವು ಕುಮ್ಮಟಕಾಗಿ
ಅಂಜದೆ ಕುದುರೆಯ ಪೌಜು |
ಮಂಜು ಗುಡ್ಡಕೆ ಮುಸುಕುವಂತೆ ತೆರಳಿತು
ಸಂಜೆ ಮಬ್ಬಾಯಿತು ಕಮ್ಮಟವು || ೮೦ ||

ಸುತ್ತಣ ಕಣಿವೆಯ ಕಾದಿರ್ದ ರಾಮನ ಬಲ
ಮೊತ್ತದೊಳೊಂದುಂಡೆಯಾಗಿ |
ಕತ್ತಿಯ ಕಿತ್ತು ಕಹಳೆಯ ಹಿಡಿಸಿ ನಡೆದರು
ಮುತ್ತಿಕೊಂಡರು ಮಂಜೂಣಿಯಲಿ || ೮೧ ||

ನಡು ಬೆನ್ನು ತೊಡೆ ತೋಳು ಕುಡಿಯಳ್ಳೆ ಕೈ ಕಾಲು
ಒಡನೆ ಉರುಳಿ ಬಿದ್ದ ಹೆಣನು |
ಜಡಿದು ಭರ್ಜಿಯಲಿಂದ ಇರಿವುತ ಶಬರರು
ಕಡಿದರು ಚೂಣಿಯನೆಲ್ಲ || ೮೧ ||

ತಲೆಗಳು ಉದುರಿ ತೋಳ್ಗಳ ಕತ್ತರಿಸುತ
ಮೊಲೆಕಟ್ಟು ಎದೆಯ ತಟ್ಟುಗಿದು |
ಜಾಲರೆ ಒಡೆದು ಕರುಳು ಕುಪ್ಪೆ ಬಿದ್ದವು
ಗಲಭೆಯಾಯಿತು ರಣರಂಗ || ೮೨ ||

ಬಿಲ್ಲಿನ ಮಂದಿ ಹೊಕ್ಕಿರಿದರು ಖಾನರ
ನೆಲ್ಲ ಮುಸುಕಿ ಕೊಲ್ಲುತಿಹರು |
ಕಲ್ಲಕೋಟೆಯ ಚಿಕ್ಕ ಕಾಮಗೇತಿಯ ತಿಮ್ಮ
ಜಲ್ಲಿ ಬಿಲ್ಲಿನ ಬುಕ್ಕಿನಾಯ್ಕ || ೮೪ ||

ಎಲ್ಲ ಖಾನರ ಕೂಡ ರಹುಡೆಖಾನನ ಮೇಲೆ
ಬಿಲ್ಲಿಂದಲಿಟ್ಟು ಕೆಡಹಿದರು |
ಬಲ್ಲಿದ ಖಾನ ವಜೀರ ಬಿದ್ದನು ಎಂದು
ಎಲ್ಲ ಖಾನರು ಮರುಗಿದರು || ೮೫ ||

ಇಪ್ಪತ್ತು ಸಾವಿರ ವಜೀರರೆಲ್ಲರು
ತೊಪ್ಪನೆ ತೊಯ್ದು ರಕ್ತದಲಿ || ೮೬ ||

ಕೋಪದಿ ನೇಮಿ ಆನೆಯ ಮೀಟಿ ನಡೆದನು
ಧೂಪಿಸಿ ವಜೀರರೆಲ್ಲ |
ಆಪತ್ತು ಬಂದಿತು ತುರುಕರಿಗೆನುತಲಿ
ರೂಪರೋರಿದ ರಣದೊಳಗೆ || ೮೭ ||

ಎಂಬತ್ತು ಸಾವಿರ ವಾಜಿಯು ಏರಿತು
ದೊಂಬಿಯ ತುಂಬೂರಖಾನ |
ಕುಂಭಿನಿಪತಿ ರಾಮನ ಮಂದಿಯ ಮೇಲೆ
ಮುಂಬಾಗಿನಲಿ ಏರಿ ಬಂದ || ೮೮ ||

ಜೋಡು ಸಿಂಗಾಡಿ ಪೆಟಲುಗಳಿಂದ ಶಬರರು
ಕೂಡಿ ಬಂದೊದಗಿ ಮುತ್ತಿದರು |
ಕಾಡ ಬೇಡರ ಪಡೆ ಹಿಂದುಮುಂದಾಗಲು
ನೋಡಿದ ರಾಮಯ್ಯ ನಗುತ || ೮೯ ||

ಪಡೆ ಮುರಿದೋಡಿ ಬರುವದ ಕಂಡು ರಾಮಯ್ಯ
ಒಡನೆ ಬೊಲ್ಲನ ಮೀಟಿದನು |
ನಡೆಯಿತು ರಾಮನ ಹಿಂದೆ ಮನ್ನೆಯರೆಲ್ಲ
ಒಡೆಯನ ಎಡಬಲದಲ್ಲಿ || ೯೦ ||

ಹೊಕ್ಕು ರಾಮಯ್ಯ ರಣರಂಗದೊಳ್ ತುರುಕರ
ರಕ್ಕಸ ಪಡೆಯನೆಲ್ಲವನು |
ಸೊಕ್ಕಾನೆ ಕದಳಿಯ ವನದೊಳು ಹೊಡೆದಂತೆ
ಹೊಕ್ಕಿರಿದನು ರಣಕೊಬ್ಬ || ೯೧ ||

ಉರುಳಿತು ತುರುಕರ ಪಡೆ ಲೆಕ್ಕವಿಲ್ಲದೆ
ತಿರುಗಿದ ರಾಮಯ್ಯನೊಡನೆ || ೯೨ ||

ಹಿಂದುಮುಂದೆಲ್ಲರ ಕೂಡಿಸಿ ರಾಮಯ್ಯ
ಮುಂದಿಯ ಸಂದಣಿಯಿಂದ |
ಬಂದನು ಕುಮ್ಮಟಕಾಗಿ ಮಾನ್ಯರ ಕೂಡಿ
ನಿಂದನು ದುರ್ಗದ ಮುಂದೆ || ೯೩ ||

ರಣಮಯವಾಯಿತು ಹೆಣಮಯವಾಯಿತು
ಎಣಿಕೆಯ ಮಾಡಿತ ನೇಮಿ |
ಕೆಣಕಿ ಹೊಕ್ಕೆವು ರಾಮನ ಕೂಡೆ ಜಗಳವು
ಅಣಕವು ಅಲ್ಲ ಬಲ್ಲಿದನು || ೯೪ ||

ಭಾಪುರೆ ಭಾಪು ರಣರಂಗದೊಳ್ ರಾಮನು
ರೂಪುರೋರಿಸಿ ಹೊಕ್ಕು ಹೊರಟ |
ಈ ಪರಿ ರಾಯರಾವುತರ ಕಾಣೆನು ಎಂದು
ಭೂಪ ನೇಮಿಯು ಹೊಗಳಿದನು || ೯೫ ||

ಸಿಡಿಲೆರಗಿದಂತೆ ಹೊಕ್ಕನು ತನ್ನ ಮಂದಿಯ
ಕಡೆಹಾಯಿಸಿಕೊಂಡು ತಾ ಹೊರಟ |
ಒಡೆಯನಹುದು ರಾಜ್ಯದೊಳಗಿಲ್ಲ ಇವನಂಥ
ಪೊಡವಿಪತಿಗಳ ಕಾಣೆನೆಂದ || ೯೬ ||

ಒತ್ತಿ ಮುಂದಕೆ ಪೌಜ ನಡೆಸಿ ನೇಮಿಯಖಾನ
ಸುತ್ತ ಮುತ್ತಿಗೆಯ ಮಾಡಿದನು |
ಎತ್ತ ನೋಡಲು ಅತ್ತ ಕಡೆಯಿಲ್ಲ ದಂಡಿನ
ಮೊತ್ತವನೇನ ಬಣ್ಣಿಸುವೆ || ೯೭ ||

ಲಕ್ಕದ ಮೇಲೆ ತೊಂಬತ್ತಾರು ಸಾವಿರ
ಲೆಕ್ಕವಿಲ್ಲದ ಗುಡಿ ಹೊಯ್ದು |
ಅಕ್ಕರಾಣಿಯ ಗುಡಿಯೊಳು ನೇಮಿ ಇಳಿದನು
ಲಕ್ಷಾಧಿಪತಿ ಆನೆ ಇಳಿದ || ೯೮ ||

ಡೋಳು ಢಮಾಮಿ ವಾದ್ಯಗಳು ನಗಾರಿಯು
ಏಳೈಸುತ ನೇಮಿ ನಡೆದ |
ಪಾಳ್ಯಪಾಳೆಗಳು ಹಾಕಿತು ಅಲ್ಲಿಗಲ್ಲಿಗೆ
ಕೋಳು ಹೋಯಿತು ನೇಮಿ ದಂಡು || ೯೯ ||

ಕೋಟೆಯ ಸುತ್ತ ಮುತ್ತಲು ಇಳಿದರು ನೇಮಿ
ಪಾಟಿಸಿ ಪೌಜು ಅಲ್ಲಲ್ಲಿ || ೧೦೦ ||

ಕಡಿದರೆ ತೀರದು ಕಡೆಯಿಲ್ಲದ ದಂಡು
ಒಡನೆದ್ದು ನೋಡಿ ಕಂಪಿಲನು |
ಬಡವರು ನೋಡಿ ಕೆಣಕಿ ರಾಮ [ಕೊಂ]ದನು
ಕಡೆಹಾಯ್ದ ತೆರನಿಲ್ಲ ನಮಗೆ || ೧೦೧ ||

ಕರೆಸಿದನು ತನ್ನ ಮಂತ್ರಿ ಬೈಚಪ್ಪನ
ತೆರನೇನು ಮುಂದೆ ನಮಗಿನ್ನು |
ಧರೆಯೆಲ್ಲ [ಈದಂತೆ] ದಂಡು ಬಂದಿಳಿಯಿತು
ಕರೆಸಯ್ಯ ರಾಮನ ಬಲವ  || ೧೦೨ ||

ಬಂದು ರಾಮಯ್ಯ ತಂದೆಯ ಪಾದಕೆರಗಿದ
ವಂದಿಸಿ ಕರಗಳ ಮುಗಿದು |
ಅಂದಿನ ರಾಜ್ಯಕಾರ್ಯಂಗಳೆಲ್ಲವ ಪೇಳಿ
ಇಂದ್ಯಾಕೆ ನಮ್ಮ ಕರೆಸಿದಿರಿ || ೧೦೩ ||

ಧರೆಯೆಲ್ಲ [ಈದಂತೆ] ದಂಡು ಬಂದಿಳಿಯಿತು
ಸುರಿತಾಳನ ನೇಮು ಬಂದು |
ದೊರೆತನ ಉಳಿವ ದಾರಿಲ್ಲವೊ ರಾಮಯ್ಯ
ಕರೆಕರೆಯಾಯಿತು ನಮಗಿನ್ನು || ೧೦೪ ||

ಸಾಕಿನ್ನು ಬಿಡು ಚಿಂತೆ ಯಾಕೆ ನಿಮಗಾಯಿತು
ನಾಕಜಪತಿಯ ಜರಿವರೆ |
ನೂಕಿ ಹೆದ್ದೊರೆಯತನಕಲಿ ಮುರಿಯಲಿಸುವೆ
ಜೋಕೆ ಮಾಡುವೆನು ಕುಮ್ಮಟವ || ೧೦೫ ||

ಬಂದರೆ ಬರಲಿನ್ನು ನೇಮಿಖಾನರ ದಂಡ
ಸಂದೇಹವ್ಯಾಕಿನ್ನು ನಮಗೆ |
ಒಂದಿನದಾಹುತಿ ಇಲ್ಲವೊ ಕತ್ತಿಗೆ
ಚಂದದಿ ಕೇಳು ಬೈಚಪ್ಪ || ೧೦೬ ||

ಇಂದಿನ ರಾತ್ರಿಯೊಳು ಕಗ್ಗೊಲೆಯನು ಬಿದ್ದು
ಬಂಧೀಸಬೇಕು ತುರುಕರನು |
ಇರುಳ ಕಗ್ಗೊಲೆ ನೋಡಬಾರದೆಂದೆನುತಲಿ
ಭರದಿಂದ ಭಾಸ್ಕರನೋಡಿ || ೧೦೭ ||

ಇರಬಾರದೆಂದು ಪಡುವಣಾದ್ರಿಗೆ ಇಳಿದನು
ಮರೆಗೊಂಡ ದೊಡ್ಡ ಪರ್ವತವ |
ಸಂಜೆಯ ಮಹಲಕ್ಷ್ಮಿ ಬಂದಳು ಸದರಿಗೆ
ದರಿಗೆ ಮಂದೆದ್ದು ಕೈಮುಗಿದರೆಲ್ಲ || ೧೦೮ ||

ಕಾದ ಹೋಗಲಿಬೇಕು ರಾತ್ರಿ ಕಗ್ಗೊಲೆಗೆಂದು
ಮೇದುನಿಪತಿ ರಾಮ ಪೇಳೆ |
ಅಪ್ಪಣೆ ಕೊಡು ನಮಗೆ ನಿಮ್ಮಯ ಪಾದಕ್ಕೆ
ಒಪ್ಪಿಸುವೆನು ಊಳಿಗವ || ೧೦೯ ||

ರೊಪ್ಪದ ಆನೆ ಹಿಂಡಿಗೆ ಸಿಂಹ ಬಿದ್ದಂತೆ
ತಪ್ಪದೆ ಹೊಡೆವೆ ನೇಮಿಯನು |
ವೀಳ್ಯ ಉಡುಗೊರೆ ಕೊಟ್ಟು ಬಾದೂರಖಾನಗೆ
ಒಳ್ಳೆಯ ಮಂದಿಯನಾಯ್ದುಕೊಟ್ಟ || ೧೧೦ ||

ಚೋರಗಂಡಿಯಲಿ ಇಳಿದ ಬಾದೂರಖಾನ
ಕಾರೆಂಬ ಕತ್ತಲೆಯೊಳಗೆ |
ಧೀರ ಮನ್ನೆಯರೆಲ್ಲ ಒಳಹೊಕ್ಕು ನೇಮಿಯ
ಡೇರೆ ಹೊಗಬಿದ್ದರಾಗ || ೧೧೧ ||

ಕೊಲಲೊ ಕೊಲಿಲೊ ಎಂದು ಕೂಗಿ ಅಬ್ಬರಿಸುತ
ಹಲಿವು ಖಾನರನು ಕಡಿದೊಟ್ಟಿ |
ಗಲಿಬಿಲಿ ಆಯಿತು ದಂಡಿನೊಳಗೆಲ್ಲ
ಗಲಭೆ ಹತ್ತಿತ್ತು ತಮ್ಮೊಡನೆ || ೧೧೨ ||

ಹಗಲೆ ಬಂದಿತು ದಂಡು ರಾಮಯ್ಯ ಇರುಳಿಗೆ ಬಂದ
ಹೊಗುವರೆ ಠಾವಾವುದೆಮಗೆ |

ಹಗರಣವಾಯಿತು ದಂಡು ಗಜಬಜೆ ಎದ್ದು
ಜಗಳವಾಯಿತು ತಮತಮಗೆ || ೧೧೩ ||

ಎತ್ತಲೆಂದರಿಯದೆ ಕತ್ತಲೊಳಗೆ ತಾವು ಒತ್ತರವೆದ್ದು ಓಡಿದರು |
ಮುತ್ತಿತು ರಾಮನಾಥನ ಬಲ ಡೇರೇದ
ಸುತ್ತ ತಲೆಗಳ ಹೊಡೆದರಾಗ || ೧೧೪ ||

ಓಡಿದ ನೇಮಿ ಹಿಂದಕ್ಕೆ ಹರುದಾರಿಯ
ಕೂಡಿಕೊಂಡಿಲ್ಲ ಖಾನರನು |
ಕಾಡಬೇಡರ ಉಪಟಳದಿಂದ ದಂಡೆಲ್ಲ
ಕಾಡೆದ್ದು ಮುತ್ತಿಗೆ ತೆಗೆದು || ೧೧೫ ||

ಹತ್ತು ಸಾವಿರ ತಲೆಯನು ಹೊಯ್ದು ಕುದುರೆಯ
ಒತ್ತಿ ಹಿಡಿದರು ಕೈಸೆರೆಯ |
ಅರ್ತಿಯೊಳ್ ಹಿಂದಕ್ಕೆ ತಿರುಗಿಬಂದನು ಬೇಗ
ಮತ್ತೆ ಕುಮ್ಮಟ ಹೊಕ್ಕರವರು || ೧೧೬ ||

ಕೋಳಿ ಕೂಗಿತು ಬೆಳಗಾಯಿತು ಭಾಸ್ಕರ
ಧೂಳಿಗೋಟೆಯ ನೋಡುವರೆ
ಬಹಳ ಸಂತೋಷದಿ ಮೂಡಿ ಬಂದನು ತಾನು
ಕಾಳಗತ್ತಲೆ ಬೆಳಗಾಯಿತು || ೧೧೭ ||

ಓಡಿಹೋದಂಥ ನೇಮಿಯು ತಾನು ತಿರುಗಿದ
ಜೋಡು ಸಿಂಗಾಡಿಯಪ್ಪಾಜಿ |
ಕೋಟೆ ಕಾಲ್ಬಲ ಮುತ್ತಿತು ಕುಮ್ಮಟವನು
ಲೂಟಿಯಾಯಿತು ಹೊರ ಪ್ಯಾಟೆ || ೧೧೮ ||

ಕೋಟೆಯ ಸುತ್ತಮುತ್ತಲ ಬಂದು ಮುತ್ತಿತು
ಮೀಟದ ಖಾನ ಒಂದಾಗಿ |
ಜೂಟಿಸಿ ಬಂದು ಒಳ ಬೀದಿಯ ಹಿಡಿಯಿತು
ನೋಟಕೊಂದಾಶ್ಚರ್ಯವಾಯಿತು || ೧೧೯ ||

ಅಲ್ಲಲ್ಲಿ ಗಜವ ಹಾಕಿದರು ಸುರಿತಾಳನ
ಬಲ್ಲಿದ ವಾಜಿ ಜನರೆಲ್ಲ |
ನಿಲ್ಲಲಾರದೆ ರಾಮನ ಬಲದುರ್ಗವ
ಎಲ್ಲರು ಒಳಹೊಕ್ಕರಾಗ || ೧೨೦ ||

ಜೇರು ಮುತ್ತಿಗೆ ಮಾಡಿ ಶಬರರ ಪಡೆಯನೆಲ್ಲ
ಗಾರುಗತ್ತಲೆಯ ಮಾಡಿದರು |
ನೂರಾರು ಮಂದಿಯ ಕೊಂದರು ಖಾನರು
ಊರು ಹೊಗಿಸಿದರು ಶಬರರ || ೧೨೧ ||

ಒಳಹೊಕ್ಕು ಶಬರರು ಒಳ ಕೋಟೆಯ ಹೊಕ್ಕು
ಉಳಿಯದೆ ಬೇಡಪಡೆಯೆಲ್ಲ |
ಘಳಿಲನೆ ಅಟ್ಟಳೆಗಳನೇರಿ ಎಸೆದರು
ಸೆಳೆಗೋಲು ಬಿಲ್ಲು ಪೆಟಲುಗಳ || ೧೨೨ ||

ಸುಳಿದಾಡದ ಕೋಟೆಯ ಸುತ್ತ ಖಾನರ
ಸೆಳೆಸರಳುಗಳಿಂದ ಕೊಲ್ಲುತಲಿ |
ಹೊಳಕೆಯ ಮಂದಿ ಹೊರಟು ಹೊಕ್ಕು ಕಡಿದರು
ಅಳಿದಿತು ಖಾನರ ಪಡೆಯು || ೧೨೩ ||

ಮರೆಹೊಕ್ಕ ಖಾನರ ಕೊಡೆನೆಂಬ ಕಹಳೆಯು
ಒರಲು ತಿರ್ದವು ದುರ್ಗದೊಳಗೆ |
ಹೊರಡೆಂದು ಕರ್ಣಗಳುದರುತಲಿರಲು || ೧೨೪ ||

ಬಿಟ್ಟು ಹೋಗುವನಲ್ಲ ಬಾದೂರಖಾನನ
ಕೊಟ್ಟು ಒಂದಾಗುವುದು ಲೇಸು |
ಈ ಮೇಲೆ ಕುಮ್ಮಟ ಕಳಕೊಂಡು ಕೆಟ್ಟರು ಮುಟ್ಟಿ
ಪೇಳಿರೊ ಚರಪೋಗಿ || ೧೨೫ ||

ಬಂದು ಭಟರು ಪೇಳೆ ಕೇಳಿ ರಾಮಯ್ಯನು
ತಂದೆ ಅಪ್ಪಣೆಯಿಲ್ಲ ನಮಗೆ |
ಕೊಂದು ರಣಭೂತಕೆ ಹಬ್ಬವ ಮಾಡುವೆ
ಒಂದೆರಡಿನ ದಿನದೊಳಗೆ || ೧೨೬ ||

ಮಾಗಿದ ಹಣ್ಣಿಗೆ ಕೋಲು ಸೆಳೆಗಳೇಕೆ
ಈಗ ಲೆಗ್ಗೆಯ ಮಾಡ ಹೇಳೊ || ೧೨೭ ||

ಎಂದು ಮಾತನು ಕೇಳಿ ಬಂದರು ಭಟರೋಡಿ
ತಂದರು ಆದ ಸುದ್ದಿಯನು |
ಮುಂದಣ ರಾಜಕಾರ್ಯಗಳನು ಮಾಡುವ
ಅಂದವ ಪೇಳಿ ನೀವೆನಲು || ೧೨೮ ||

ಬಿಡು ಎಮ್ಮನೀಗ ಕುಮ್ಮಟಕೆ ಲಗ್ಗೆಯ ಮಾಡಿ
ಕಡಿದು ರಾಮುಗನ ಕೈಸೆರೆಯ |
ಹಿಡಿದು ತಂದು ನಿನ್ನ ಕೈಯಲಿ ಕೊಟ್ಟು ನಾವಿನ್ನು
ನಡೆವೆವು ಸುಳಿತಾಳ ನೆಡೆಗೆ || ೧೨೯ ||

ಇತ್ತ ನೇಮಿಯು ತನ್ನ ಖಾನವೀರಗೊಂ
ದರ್ತಿಯಲಿ ಮಾತನಾಡಿದನು |
ಅತ್ತ ರಾಮಯ್ಯ ಮಂತ್ರಿಯ ಕೂಡೆ ಹೇಳಿದ
ಕತ್ತಿಗೆ ನಡೆಯಬೇಕೆನುತ || ೧೩೦ ||

ಅಪ್ಪಣೆ[ಯನು] ಹೇಳೊ ಬೈಚಪ್ಪ ಬೇಗದಿಂ
ದೊಪ್ಪನೆ ಮಂದಿಮಕ್ಕಳಿಗೆ |
ತುಪ್ಪದೂಟವನುಣಿಸಿಕೊಂಡು ನಮ್ಮೆಲ್ಲರ
ಅಪ್ಪಣೆ ಕೊಡ ಹೇಳೊ ಅರಸ || ೧೩೧ ||

ಎಂದ ಮಾತನು ಕೇಳಿ ಬಂದನು ಬೈಚಪ್ಪ
ನಿಂದನು ಕಂಪಿಲನೆಡೆಗೆ |
ಕಂದಯ್ಯ ರಾಮ ಕಳುಹಿದ ನಿಮ್ಮ ಬಳಿಗೆಮ್ಮ
ಮಂದಿಯನುಣಿಸಬೇಕೆಂದ || ೧೩೨ ||

ನಾಳೆ ಪಯಣವಂತೆ ರಣರಂಗ [ಆ]ಜಿಗೆ ಕ
ಹಳೆಯ ಹಿಡಿಸಿ ರಾಮಯ್ಯ |
ಕೇಳಿ ಬಾರೆಂದ ಬಿಂದಿಗೆ ಹೊನ್ನ ನಿಮ್ಮನು
ಹೇಳಿದ ವೀರನೆಂದೆನುತ || ೧೩೩ ||

ಹರಿಯಲದೇವಿಗೆ ಅಡಿಗೆ ಮಾಡಿಸ ಹೇಳೊ
ಬಿರಿದಿನ ಬಂಟರಿಗೆಲ್ಲ |
ಕರೆತಂದು ಊಟವ ಮಾಡಿ ರಾಮಯ್ಯನ
ಹೊರಡ್ಹೇಳೊ ಮುಂಗಾಳಗಕೆ || ೧೩೪ ||

ಅಪ್ಪಣೆಯನು ಕೈಕೊಂಡು ಮಂತ್ರೀಶನು
ತಪ್ಪದೆ ರಾಮಯ್ಯನೆಡೆಗೆ |
ಒಪ್ಪವಾಯಿತು ನೀವು ಪೇಳಿದ ಮಾತಿನ್ನು ಕಂ
ದರ್ಪ ರೂಪನೆ ರಾಮಯ್ಯ || ೧೩೫ ||

ಅಂದಿನ ದಿನ ತನ್ನ ಅರಮನೆಯೊಳು ರಾಮ
ಚಂದ್ರಮುಖಿಯರ ಮೇಳದಲಿ |

ಚಂದದಿಂದುಂಡು ಸುಖನಿದ್ರೆಗೈದೆದ್ದು
ಒಂದು ಹೊತ್ತಿಲಿ ಎದ್ದ ರಾಮ || ೧೩೬ ||

ವಂದಿಸಿ ಜಟ್ಟಂಗಿಲಿಂಗ ರಾಮೇಶಗೆ
ಚೆಂದದಿಂ ಕೈ ಮುಗಿದನು |
ಇಂದಿನ ಭವಹರ ಚಂದ್ರಮೌಳೀಶ್ವರ
ತಂದೆ ನೀ ಗತಿಯೆನುತೆದ್ದ || ೧೩೭ ||

ಪನ್ನೀರ ಜಳಕದಿಂದಾಹಾರ ಭೋಜನ ಮಾಡಿ
ತನ್ನ ವಲ್ಲಭೆಯರನೆಲ್ಲ |
ಮನ್ನಿಸಿ ಕರೆದು ಮೈಜೋಡು ಒಡವೆಗಳನು
ತನ್ನಿರೆಂದನು ರಾಮ ನಗುವ || ೧೩೮ ||

ಒಡವೆ ವಸ್ತಂಗಳ ಪೆಟ್ಟಿಗೆಗಳ ತಂದು
ಒಡನೆ ರಾಮಯ್ಯನ ಮುಂದೆ |
ಪೆಟ್ಟಿಗೆಯ ಬಿಚ್ಚಿ ಒಂದೊಂದು ವಸನಂಗಳ
ಕೊಡುತಿರ್ದರೆಲ್ಲ ಬಾಲೆಯರು || ೧೩೯ ||

ಸುರಿತಾಳ ನೇಮಿಯಗಂಡನೆಂಬುವದೊಂದು
ಕೊರಳಪದಕವನಿಟ್ಟ ರಾಮ |
ಧರೆಯೊಳಗುಳ್ಳ ರಾಯರಗಂಡನೆಂಬಂಥ
ಬೆರಳ ಹೊನ್ನುಂಗುರವನಿಟ್ಟು || ೧೪೦ ||

ಉತ್ತುಂಗರಾಯನ ಗಂಡನೆಂಬುವ ಜೋಡ
ಮುತ್ತಿನ ಚವುಕುಳಿ ಇಟ್ಟ |
ಮುಂಗುಲಿರಾಯನ ಗಂಡನೆಂಬುವದೊಂದು
ಉಂಗುರ ಪಚ್ಚೆಯ ಕಡಗ || ೧೪೧ ||

ಹುಳಿಯೇರ ಮಾರಿಗೊಂಡನಗಂಡನೆಂಬಂಥ
ಉಳಿಯ ಸರಪಳಿಯ ಇಳಿಬಿಟ್ಟು |
ಮಿಕ್ಕ ಒಡವೆಯನೆಲ್ಲ ಲೆಕ್ಕವಿಲ್ಲದೆ ಇಟ್ಟು
ಅಕ್ಕರಾಣಿಯ ಮುತ್ತನಿಟ್ಟ || ೧೪೨ ||

ಬಂದರೈವರು ಸೇಸೆಯನಿಟ್ಟು ರಾಮಯ್ಯಗೆ
ವಂದಿಸಿ ವೀಳ್ಯವ ಕೊಟ್ಟು |
ಬಂದನು ತಾಯರಮನೆಗಾಗಿ ರಾಮಯ್ಯ
ವಂದಿಸಿ ಪಾದಕೆರಗಿದನು || ೧೪೩ ||

ಇಂದೊಂದು ದಿವಸ ನಾಳಿನ ದಿನ ರಣರಂಗ
ಬಂದಂಥ ನೇಮಿಯ ಮೇಲೆ |
ಎಂದ ಮಾತನು ಕೇಳಿ ಹರಿಯಲದೇವಿ ತಾ
ಕಂದನ ಪಿಡಿದಪ್ಪಿಕೊಂಡು || ೧೪೪ ||

ಉಂಡುಟ್ಟು ಬಂಟೆನುಣಿಸಿಕೊಂಡು ನೀನು
ಚಂದದಿ ಹೊರಡೊ ರಾಮಯ್ಯ |
ಎಂದು ಪೇಳಲು ಹರಿಯಮ್ಮನ ಮಾತಿಗೆ
ಮಂದಿಯ ಕರೆಸಿದ ಬೇಗ || ೧೪೫ ||

ರಾಣ್ಯ ರಾಹುತರು ಗುರಿಕಾರರು ಮನ್ನೆಯರು
ಠಾಣ್ಯದ ಗಡಿವಾಡದವರು |
ಅಣ್ಣ ಕಾಟಣ್ಣ ಅರಸುಮಕ್ಕಳೆಲ್ಲರು
ಉಣ್ಣ ಹೇಳೆಂದ ರಾಮಯ್ಯ || ೧೪೬ ||

ಚೊಕ್ಕ ಭೋಜನವನಿಕ್ಕಿಸಿ ಹರಿಯಮ್ಮನು
ಚೊಕ್ಕ ಬಿಳಿಯೆಲೆ ವೀಳ್ಯ ಕೊಡಿಸಿ |
ಮಕ್ಕಳು ನಿಮ್ಮ ಪಾಲಿಸಬಂದರೆನುತಲಿ
ಎಕ್ಕಟಿಗರಿಗೆ ಪೇಳಿದಳು || ೧೪೭ ||

ಅಡ್ಡಬಿದ್ದರು ಹರಿಯಮ್ಮನ ಪಾದಕ್ಕೆ
ದೊಡ್ಡರಮ್ಮ ರಾಮುಗನು |
ಮಂದಿಯನುಣ್ಣಿಸಿಕೊಂಡು ತಾ ಉಂಡುಟ್ಟು
ತಂದೆಯ ಪಾದಕ್ಕೆ ಬಿದ್ದ || ೧೪೮ ||

ಅಪ್ಪನ ಪಾದಕೊಂಡೊಪ್ಪದಿಂದಲಿ ಬಿದ್ದು
ಉಪ್ಪರಿಗೆಯನೇರಿ ನೋಡೊ |
ಒಪ್ಪಿಸುವೆನು ನಿಮ್ಮ ಊಳಿಗವ ನೇಮಿಯ
ಒಪ್ಪದಿ ಕಳುಹಿಸಿ ಕೊಡುವೆ || ೧೪೯ ||

ತಂದೆ ತಾಯಿ ಪಾದಕೆ ಬಿದ್ದು ರಾಮಯ್ಯನು
ಬಂದನು ಹೊರಚಾವಡಿಗೆ |
ಅಂದು ತನ್ನಯ ಮಂದಿ ಮಕ್ಕಳ ಕೂಡಿ ಕುಳಿತನು
ಒಂದರಗಳಿಗೆ ರಾಮಯ್ಯ || ೧೫೦ ||

ಕರೆಸಿದ ಮಂತ್ರಿ ಬೈಚಪ್ಪನ ಮಕ್ಕಳ
ಕರೆಸಿದನಾಗ ಬೊಲ್ಲುಗನ |

ಕರೆಸಿದ ಹಂಪರಾಜನ ಕಂಪರಾಜನ
ಕರೆಸಿದ ದೊರೆಮಕ್ಕಳನೆಲ್ಲ || ೧೫೧ ||

ಬಾದೂರಖಾನನು ಮಹಿಮೆಯಖಾನನ
ಸಾಧನೆ ಬಸವರಾಜಯ್ಯ |
ಆದಂಥ ಹಳೆಯ ರಾಹುತರನೆಲ್ಲರ ರಾಮ
ಕಾದಲಿ ಕರೆಸಿದನಾಗ || ೧೫೨ ||

ದೇವಿಸೆಟ್ಟಿಯಲಿಂಗ ಬೇವಿನ ಸಿಂಗಯ್ಯ
ಜೀವರತ್ನವು ಕೊಳ್ಳಿನಾಗ |
ಮಾವಗಳಾದ ಚಾರಮನ ಮಕ್ಕಳ ಬೇಗ
ಕೋವಿದ ರಾಮಯ್ಯ ಕರೆಸಿ || ೧೫೩ ||

ಹೊಳಕೆಯ ಬಂಟರ ಕರೆಸಿಕೊಂಡನು ರಾಮ ಎಣಿ
ಕೆಲಿ ನೂರು ಸಾವಿರವ |
ಎಣಿಕೆಯಿಲ್ಲದೆ ಕೊಟ್ಟ ಹಿಡಿಹೊನ್ನ ರಾಮಯ್ಯ
ಬಣಗಾರಗಂಡನೆಂದುನುತ || ೧೫೪ ||

ಸನ್ನೆಗಾಳೆಯ ಹಿಡಿಸಿದ ದುರ್ಗದೊಳಗೆಲ್ಲ
ಚೆನ್ನಗಾಳೆಯು ನೌಬತ್ತು |
ಉನ್ನತ ವಾದ್ಯ ಗಿಡಿಬಿಡಿ ನಾಗಸರ ಕೊಂಬು
ಸನ್ನೆ ನಗಾರಿ ಸಾರಿದವು || ೧೫೫ ||

ಅರವತ್ತು ಸಾವಿರ ಕುದುರೆ ಮಂದಿಯು ಕೂಡಿ
ಭರದಿಂದ ದುರ್ಗವನಿಳಿದು |
ಹೊರಬಾಗಿಲ ದಾಂಟಿ ಮುಂದಣ ಬಯಲಿಗ
ಬರುವಂಥ ರಾಮನ ನೋಡಿ || ೧೫೬ ||

ಇತ್ತ ರಾಮಯ್ಯ ದುರ್ಗವನಿಳಿದು ಬರುತಿರೆ
ಅತ್ತ ಸುರಿತಾಳನ ಚರರು |
ಅರ್ತಿಲಿ ಕುಳಿತಿರೆ ಮಾತನಾಡುವ ನೇಮಿ
ಒತ್ತರ ಸುದ್ದಿಯ ಪೇಳೆ || ೧೫೭ ||

ಎದ್ದು ನೇಮಿಯಖಾನನು ಕೂಚೆ ನಗಾರಿ
ಸದ್ದು ಮಾಡಿಸಿ ದಂಡಿನೊಳಗೆ |
ಮುದ್ದು ಖಾನರು ಕೂಡಿ ಏಳಿರೊ ಜಗಳಕ್ಕೆ
ಇದ್ದಲ್ಲಿಗೆ ರಾಮ ಬಂದ || ೧೫೮ ||

ಇದು ಪರನಾರಿ ಸೋದರ ರಾಮನಾಥನ
ಪದಕೃತಿಯೊಳಗೊಂದು ಪದನ |
ಕದನದಿ ನೇಮಿ ಕುಮ್ಮಟವ ಮುತ್ತಿದನಂತೆ
ಪದಗಳು ಮುಗಿಯೆ ಸಂಪೂರ್ಣ || ೧೫೯ ||

**ಅಂತು ಸಂದಿ ೧೧ಕ್ಕಂ ಪದನು ೧೧೩೧ಕ್ಕಂ ಮಂಗಳ ಮಹಾಶ್ರೀ**

## ಸಂಧಿ ೧೨ - ನೇಮಿಖಾನನ ಯುದ್ಧ ಮತ್ತು ಸೋಲು

ಶ್ರೀ ಗಿರಿಜಾ[ಸ್ಯಾಂಬುಜ ದಿನ] ನಾಯಕ
ಭೋಗಿಭೂಷಣ ಭಾಳನೇತ್ರ |
ಭಾಗೀರಥಿಧರ ಭವರೋಗವೈದ್ಯನೆ
ನಾಗ[ಕುಂಡಲ] ಶರಣೆಂಬೆ || ೧ ||

ಬಂದನು ಹೊನ್ನಂದಣನೇರಿ ರಾಮಯ್ಯ
ಮುಂದಣ ರಾಮೇಶ ಗುಡಿಗೆ |
ವಂದಿಸಿ ಕರಗಳ ಮುಗಿದಡ್ಡಬಿದ್ದನು
ಚಂದ್ರಶೇಖರ ಗರಿಯೆನುತ || ೨ ||

ಒಂದು ಹಿಡಿಯೊನ್ನ ಕಾಣಿಕೆನಿಟ್ಟು ರಾಮನು
ಗಂಧ ಪ್ರಸಾದ ಕೈಗೊಂಡು |
ಮುಂದಕ್ಕೆ ನಡೆದನು ರಣರಂಗ ವಾಜಿಗೆ
ಮಂದಿಯ ಮುಂದಿಟ್ಟು ಕೊಂಡು || ೩ ||

ಬೊಲ್ಲನ ಏರಿ ದುವ್ವಾಳಿಸುತಲಿ ರಾಮ
ನಿಲ್ಲದೆ ಪೇರಿ ಮಾಡುತಲಿ |
ಎಲ್ಲರು ಕುದುರೆಯನೇರಿ ನಡೆದರಾಗ
ಬಲ್ಲಿದ ರಾಮಯ್ಯನೊಡನೆ || ೪ ||

ಬಿಲ್ಲಿನ ಪೌಜೆಲ್ಲ ಮುಂಜೂಣಿ ನಡೆಯಿತು
ಭಲ್ಲೆದ ಈಟಿಯ ಪೌಜ |
ಎಲ್ಲರು ಎಡವಂಕ ಬಲವಂಕದೊಳು ಮುಂದೆ
ಕಲ್ಲಕೋಟೆಯ ಚಿಕ್ಕನವರು || ೫ ||

ಕುದುರೆಯ ಪೌಜು ಬೆನ್ನಮೇಲೆ ಇರಲೆಂದು
ಒದಗಿದ ಮನ್ನೆಯರೆಲ್ಲ |

ಇದಿರೇರಿ ಬರುವ ಖಾನರ ಮೇಲೆ ನಡೆಯೆಂದ
ಚೆದುರ ಚೆನ್ನಿಗ ರಾಮ ನಗುತ || ೬ ||

ಬೇರೊಂದು ಪೌಜ ಮಾಡಿದ ಕಾಟಣ್ಣಗೆ
ಆರಿಸಿ ಮಾನ್ಯರನೆಲ್ಲ |
ಚಾರಮರಾಯನ ಮಕ್ಕಳ ಕೂಡಿಸಿ
ಆರು ಸಾವಿರ ಕುದುರೆಯನು || ೭ ||

ಹೊಸಮಲೆದುರ್ಗದ ಹಳೆಯ ಮಂದಿಯ ಕೊಟ್ಟ
ದೆಸೆಯುಳ್ಳ ಮನ್ನೆಮನ್ನೆಯರ |
ಕುಸುರಿದರಿವ ಗಡಿವಾಡದ ಮಂದಿಯ
ಹೆಸರಾದ ಗುರಿಕಾರರನು || ೮ ||

ಎಡಬಲದಲಿ ಏರಿ ಬರುವಂಥ ಪೌಜಿಗೆ
ನಡೆಯೊ ಕಾಟಣ್ಣ ನೀ ಮುಂದೆ |
ಬಿಡಬೇಡ ಅತ್ತಿತ್ತ ಚದರಿದ ಕುದುರೆಯ
ಇಡಿಸಯ್ಯ ಬಿಲ್ಲಿನ ಕೂಡ || ೯ ||

ಹೊಣಕೆಯ ಭಟರೆಲ್ಲ ಬೇರೊಂದು ಗುಂಪಾಗಿ
ಕುಣಿವುತ ರಾಮನ ಮುಂದೆ |
ಕೆಣಕುತ ಎಡಬಲ ಬಾಹಂತ ಖಾನರ
ರಣಕೆ ಕಾಲ್ಗೆದರುತಲವರು || ೧೦ ||

ಒತ್ತರಿಸಿ ಬರುವ ರಾಮನ ಬಲವನು ಕಂಡು
ಮುತ್ತಿಗೆ ತೆಗೆದು ಓಡಿದರು |
ಹತ್ತಿತು ಗಲಿಬಿಲಿ ದಂಡಿನ ಒಳಗೆಲ್ಲ
ಸುತ್ತಲು ಗಲಭೆ ಗುಲ್ಲುಗಳ || ೧೧ ||

ಕೇಳಿದ ನೇಮಿಯು ಗಲಭೆಗಳನು ಎದ್ದು
ಊಳಿಗದವರನು ಕಳುಹಿ |
ಸಾಳುವ ರಾಮ ದುರ್ಗವನಿಳಿದು ಬಂದ
ಕಾಳಗಕಿದಿರಾಗಿ ನಮಗೆ || ೧೨ ||

ಸುದ್ದಿಯ ಕೇಳುತ ಎದ್ದನು ಸುರಿತಾಳ
ಗದ್ದಲಿಸುತ ಖಾನರನು |
ಮುದ್ದುಖಾನರ ಕೂಡಿ ಆನೆಯನೇರಿದ
ತಿದ್ದಿದ ಮುಖದ ಮೀಸೆಯನು || ೧೩ ||

ಎಡಬಲದಲಿ ಗಜವಿಂಡು ನಡೆದವಾಗ
ಅಡವಿಯ [ಮೊರ]ಡಿಯಿಂದದಲಿ |
ಪಡೆಯೆಲ್ಲ [ನೊರೆಯ] ಸಾಗರದಂತೆ ಮುಂದಕ್ಕೆ
ನಡೆಯಿತು ನೇಮಿಯ ಪೌಜು || ೧೪ ||

ಹಿಂದೆ ಬರುವ ವಾಜಿ ಎಂಬತ್ತು ಸಾವಿರ
ಮುಂದಣ ಪೌಜೊಂದು ಲಕ್ಷ |
ಬಂದಿತು ಎಡಬಲ ಐವತ್ತು ಸಾವಿರ ವಾಜಿ
ಸಂದಣಿಯೇನ ಬಣ್ಣಿಸುವೆ || ೧೫ ||

ಡೊಳ್ಳು ಢಮಾಮಿ ಗಿಡಿಬಿಡಿ ಕೊಂಬು ನಿಸ್ಸಾಳೆ
ಸ್ಸಾಳೆ ಕಹಳೆ ನಗಾರಿ ನೌಬತ್ತು |
ಪಾಳೆಗಾರರ ಪೌಜು ಅರುವತ್ತು ಸಾವಿರ
ಕ್ಷೋಣಿಪ ನೇಮಿ ನಡೆದನು || ೧೬ ||

ಮುಂದಕ್ಕೆ ಸಾಗಿ ಬಂದಿತು ಕುದುರೆಯ ಪೌಜು
ಒಂದೊಂದು ಗುಡ್ಡಗಳಂತೆ |
ಸಂಧಿಸಿ ಉಭಯ ಬಲವು ಕೂಡಿ ಕಡಿದಾಡೆ
ಅಂದವನೇನ ಬಣ್ಣಿಸುವೆ || ೧೭ ||

ಕೋಲು ಖಂಡ್ರಿಸಿ ಬೀಳೆ ಕರುಳಿನ ಮಲೆಯೊಳು
ಬಾಳೆಯಂದದಿ ತೊಡಕಿದವು || ೧೮ ||

ಉರುಳಿ ಬೀಳುವ ತಮ್ಮ ತಲೆಗಳ ತಿರುಹಿಟ್ಟು
ಶಿರವನರಿಯದೆ ಮುಂದೆ ನಡೆಯೆ |
ಈ ರೀತಿಯಲ್ಲಿ ಕಾಲ್ಬಲವು ಹೊಯ್ದಾಡಿತು
ಮೀರಿತು ರಣರಂಗದೊಳಗೆ || ೧೯ ||

ಎತ್ತ ನೋಡಿದರತ್ತ ವಾಜಿಗಳ ಪೌಜುಗಳು
ಒತ್ತಿ ಬಂದವು ರಾಮನೆಡೆಗೆ |
ಸುತ್ತಮುತ್ತಲು ತನ್ನ ಕುದುರೆಯ ಪೌಜನು
ಒತ್ತಿ ನಡೆಸಿ ಅವರ ಮೇಲೆ || ೨೦ ||

ವಿಭವದೊಳ್ ರಾಮನು ಅರಸುಮಕ್ಕಳ ಕೂಡಿ
ನಬಿಯಖಾನನ ಕೆಡಹಿದರು || ೨೧ ||

ರಾಮನ ಬಲವ ಒಡೆ ತುಳಿಸುತ ನೇಮಿಯ
ನೇಮಿಯ ಖಾನರು ಬೆನ್ನತ್ತಿ ಬರಲು |

ಭೂಮಿಯಾಕಾಶಕೆ ಕೆಂಧೂಳು ಮುಸುಕಲು
ಮಾಮನೆಯಾಯ್ತು ಶಬರರಿಗೆ || ೧೧ ||

ಇಕ್ಕೆಲದಲಿ ಏರಿ ಬರುವಂಥ ಪೌಜನು
ಗಕ್ಕನೆ ಕಂಡು ರಾಮಯ್ಯ |
ಹೊಕ್ಕನು ಬೊಲ್ಲನ ಝಾಡಿಸಿ ಮುಂದಕ್ಕೆ
ಒಕ್ಕಲಿಕ್ಕುತ ತುಳಿಸಿದನು || ೧೩ ||

ಎಡಬಲದಲಿರ್ದ ಮನ್ನೆಯರೆಲ್ಲರು
ಒಡನೊಂದು ಸಾವಿರ ಬಲವು |
ದೃಢಗಲಿ  ರಾಮ ಹೊಕ್ಕಿರಿಯಲು ತುರುಕರ
ಪಡೆ ಮುಳುಗಿತು ನಿವಹದೊಳಗೆ || ೧೪ ||

ಒಂದು ಬಾರಿಗೆ ಎತ್ತಿ ಕಡಿಯಲು ರಾಮಯ್ಯ
ಕೊಂದುದು ಬೊಲ್ಲ ನಾಲ್ವರನು |
ಮುಂದೆ ಸುಳಿವ ಖಾನನ ಕಚ್ಚಿ ಎಳೆಕೊಂಡು
ಬಂಧಿಸಿ ಕಾಲೊಳು ತುಳಿದು || ೧೫ ||

ಮನ್ನೂಲ ಮಾಚನು ತಲೆಯ ತಂದೊಪ್ಪಿಸೆ
ಮಾನ್ಯರೆಲ್ಲರು ಕೈಯ್ಯ ಮುಗಿದು |
ಚೆನ್ನ ಬಾಣದ ಬಸವಯ್ಯ ಬಾಣಕೆ ನಾಲ್ಕು
ಮುನ್ನೂರು ಕುದುರೆಯ ಕೊಂದ || ೧೬ ||

ಬೂಟಕ ಬೊಮ್ಮಯ್ಯ ಎಕ್ಕಟಿಗರು ಕೂಡಿ
ಬಿಟ್ಟರು ಸರಳಂಬುಗಳನು |
ನೆಟ್ಟವು ವಾಜಿಯ ಬೆನ್ನ ತಟ್ಟುಗುಚೆನ್ನು
ಬಿಟ್ಟು ಓಡುತ ತುರುಕರ ಪಡೆಯು || ೧೭ ||

ಗುತ್ತಿಯಖಾನನು ಹತ್ತಿ ಬರುವವರ ಮೇಲೆ
ಹತ್ತಿದ ತನ್ನ ಮಂದಿಯೊಳು |
ಕುತ್ತಿಗೆಗಳ ಕೊಯ್ಸುತ ತುರುಕರ ಪಡೆಯ
ಮುತ್ತಿಕೊಂಡನು ಸಾವಿರವ || ೧೮ ||

ಯನುಮಾಲ ಚಿತ್ತನು ಯರಬೋತು ಗಂಗನು
ಚಿನುಮದ ಚಿಕ್ಕ ತಮ್ಮುಗನು |
ಪೆನಗುಂಡೆ ಪಾಪನಾಯಕರು ಇವರೆಲ್ಲರು
ರಣಧೂಲಖಾನನ ಮುತ್ತಿ || ೧೯ ||

ಕೊಂದರು ಇವನೊಳು ಸಾವಿರ ಕುದುರೆಯ
ಮಂದಿಯೆಂಬುದು ಲೆಕ್ಕವಿಲ್ಲ |
ಮುಂದುವರಿದು ಬಂದು ಖಾನ ವಜೀರರ
ಕೊಂದರು ರಣಧೂಲ ಬಿದ್ದ || ೩೦ ||

ಕಬ್ಬುಲಿ ನಾಗ ಹೆಬ್ಬುಲಿ ಚಿಕ್ಕ ಬೈಯಣ್ಣ
ಅಬ್ಬಯ್ಯನಾಯಕನವರು |
ತಬ್ಬಿಬ್ಬಗೊಳಿಸುತ ತುರುಕರ ಪಡೆಯನು
ಅಬ್ದೂಲಖಾನನ ಹೊಯ್ದು || ೩೧ ||

ಅಸಗೋಡ ಬಸವನು ಅಕ್ಕಸಾಲೆರ ಚಿಕ್ಕ
ಹೊಸಮಂದಿಯನು ಕೂಡಿಕೊಂಡು || ೩೨ ||

ಕುಕ್ಕಲಿರಿದು ತಲೆಗಳ ಹೊಯ್ದು ಮುಂದಕ್ಕೆ
ಹೊಕ್ಕರು ನೇಮಿಯ ಮೇಲೆ |
ಹೊಕ್ಕರು ನೇಮಿಯಖಾನನ ಪೌಜಿಗೆ
ಇಕ್ಕೆಲದಲಿ ಮಂದಿ ಕೂಡಿ || ೩೩ ||

ಬುಕ್ಕನ ಪಾಲನು ಹೊಕ್ಕನು ರಣದೊಳು
ಕಕ್ಕುತ ಇಟ್ಟಿಹ ಪೌಜ || ೩೪ ||

ಅಗಣಿತ ಸಿಂಗನು ಬೆಂಗಳೂರ ಚಿಕ್ಕನು
ಬಗೆದು ಹೊಕ್ಕನು ರಣದೊಳಗೆ |
ಸುಗುಣ ಗಾಣೀಗ ಬೊಮ್ಮಕಾಮಗೇತಿಯ ತಿಮ್ಮ
ಜಗಳವೆಂದರೆ ಕಡೆಯಿಲ್ಲ || ೩೫ ||

ಒಕ್ಕಲಿಗರ ಮುದ್ದ ಹೊಕ್ಕನು ರಣದೊಳು
ರಕ್ಕಸ ಮಾದನು ಕೂಡಿ |
ಸೊಕ್ಕಿದ ನೇಮಿಖಾನರ ಮೇಲೆ ಇರಿದರು
ಹೊಕ್ಕು ಹೊಡೆದು ಭಾಷೆನುತ || ೩೬ ||

ನಲ್ಲೂರ ನಲ್ಲನು ನಿಡಿಗಲ್ಲ ಕಾಮನು
ಬಿಲ್ಲ ಪೆನ್ನನು ದ್ಯಾವನರು |
ಬಲ್ಲಿದ ಖಾನರ ಇರಿದು ಹಿಂದಕ್ಕೆ ಮೆಟ್ಟಿ
ನಿಲ್ಲದೆ ನೇಮಿಯ ಮೇಲೆ || ೩೭ ||

ಮಾದಿಗ ಹಂಪನು ಹೊಕ್ಕು ಬಂದನು ಬೇಗ
ಸಾಧಿಸಿ ಕೊಲುತ ತುರುಕರನು |

ಭೇದಿಸಿ ಕೊಂದು ಹಿಡಿಯಾಳ ಹಿಡಿದು ರಾಮ
ಗಾದ ಮಾನ್ಯರು ಒಕ್ಕಹೊಕ್ಕು || ೩೮ ||

ಹೊಲೆಯರು ಹೊನ್ನುಗ ಅಲಗಿನ ಭರ್ಚಿಯೊಳ್
ಹಲವು ಮಂದಿಯ ಕೂಡಿಕೊಂಡು |
ಬಲದಲ್ಲಿ ಬರುವಂಥ ಖಾನರ ಕೊಂದರು
ಛಲದಂಕ ರಾಮನ ಹುಜರ || ೧೯ ||

ಒಡಗೊಂಡು ಸಾವಿರ ಕುದುರೆಯ ಕೊಂದರು
ಹಿಡಿಯಾಳು ಲೆಕ್ಕ ಕಡೆಯಿಲ್ಲ |
ನೇಮಿಖಾನನ ಸುತ್ತಮುತ್ತ ಎಡಬಲದೊಳು
ಭೂಮಿಯೊಳಗೆ ರಕ್ತ ಹರಿದು || ೪೦ ||

ಬೊಲ್ಲನ ಜೂಟಿಸಿ ಬಿಟ್ಟನು ರಾಮಯ್ಯ
ನಿಲ್ಲದೆ ನೇಮಿಯ ಮೇಲೆ |
ಬಿಲ್ಲಿಂದ ಹೊಡೆದು ನ್ಯಾಜ್ಯದೊಳು ಹೊಕ್ಕಿರಿದನು
ಎಲ್ಲ ಖಾನರ ಮುತ್ತಿಕೊಂಡು || ೪೧ ||

ಲಕ್ಷ ಸಿಂಗಾಡಿ ಮುತ್ತಿತು ರಾಮನ ಮೇಲೆ
ಲಕ್ಷ ದಳವ ನೋಡೆ ತುಳಿದು |
ಪಕ್ಷಿಯಂದದಿ ಹಾರಿ ಬೊಲ್ಲ ಈ ಕಡಿಗಿನ್ನು
ದಕ್ಷಿಣ ಭಾಗದ ಪೌಜ || ೪೨ ||

ನೋಡಲು ನೇಮಿಯು ಓಡಿದ ಸಿಕ್ಕದೆ
ಕೂಡಿದ ಕುದುರೆಯ ಪೌಜ |
ಝಾಡಿಸಿ ಬೊಲ್ಲನ ಹಾಕಿ ಹಿಂದಕೆ ರಾಮ
ನೋಡಿರೆ ನೇಮಿಯನೆನುತ || ೪೩ ||

ಕಾಲಬಲದ ಮೇಲೆ ಬಿದ್ದರು ರಾಮಯ್ಯ
ಸಾಲುದಲೆಗಳ ಹೊಯ್ಸುತಲಿ |
ಸಾಲಾಗಿ ನಿಂತಿರ್ದ ಪೌಜಿಗೆ ಹೊಗಲೇರಿ
ಬಾಳೆಯೊಳು ಕರಿ ಹೊಕ ತೆರದಿ || ೪೪ ||

ಮುರಿಯಿತು ಕಾಲ್ಬಲ ಮೂರು ಸಾವಿರ ಮಂದಿ
ಒರಗಿತು ಗಾಯ ಕಡೆಯಿಲ್ಲ |
ಬಿರಿದಿನ ಬಂಟರು ಹೊಕ್ಕಿರಿಯಲು ಬಹು
ಅರುವತ್ತು ಸಾವಿರ ಬಲವು || ೪೫ ||

ಕಾಲಬಲದ ಮೇಲೆ ಬಿದ್ದ ರಾಮನು ಎಂದು
ಬಾಲದ ಬಣ್ಣದ ವಾಜಿ |
ಸಾಲಿಟ್ಟು ಐವತ್ತು ಸಾವಿರ ಕುದುರೆಯು
ಮೇಲೆ ಬಿದ್ದಿತು ರಾಮಯ್ಯಗೆ || ೪೬ ||

ಸಿಂಗಾಡಿ ಸೋನಯ ಮಳೆಯಂತೆ ಸುರಿವುತ
ಕಂಗೆಡಿಸುತ ಅರಿಬಲವ |
ಮಗಳ ಬೊಲ್ಲನನೇರಿ ರಾಮನ ಮೇಲೆ
ಮುಂಗುಲಿಖಾನ ತಾ ಹೊಡೆದ || ೪೭ ||

ಹೊಡೆದ ಪೆಟ್ಟನು ತಪ್ಪಿಸಿಕೊಂಡು ರಾಮಯ್ಯ
ಅಡ್ಡಹಾಯ್ದು ಬೊಲ್ಲನ ಮೀಟಿ |
ದೊಡ್ಡಖಾನನು ನೀನು ಅಹುದೆಂದು ಮಂಗುಲಿಯ
ಅಡ್ಡ ಹೊಯ್ದನು ಎರಡು ತುಂಡ || ೪೮ ||

ಬಿದ್ದ ಮುಂಗುಲಿಖಾನನೆಂದು ವಜೀರರು
ಎದ್ದು ರಾಮಯ್ಯನ ಮೇಲೆ |
ಇದ್ದಂಥ ಖಾನರೆಲ್ಲರು ಕೂಡಿ ಒಂದಾಗಿ
ಬಿದ್ದರು ರಾಮನ ಮೇಲೆ || ೪೯ ||

ಸುತ್ತಮುತ್ತಲು ವಾಜಿ ಸಿಂಗಾಡಿ ಪೆಟಲಿಗೆ
ತತ್ತಳಗೊಳುತ ಶಬರರು |
ಒತ್ತಿ ರಾಮಯ್ಯ ಖಾನರ ಮೇಲೆ ಹೊಯ್ದನು
ಮುತ್ತಿದ ತುರುಕರನೆಲ್ಲ || ೫೦ ||

ಕರುಳು ಹರಿದು ಕಾಲು ಖಂಡ್ರಿಸಿ ತೋಳ್ತೊಡೆ
ಉರುಳಿ ಬಿದ್ದರು ವಾಜಿಯಿಂದ |
ಕೊರಳ ಕತ್ತರಿಸಿ ಬೆರಳ ಗಾಯ ಘನವಾಗಿ
ತೆರಳಿ ಹೋದರು ತಮತಮಗೆ || ೫೧ ||

ಮೂಡಣ ಪೌಜಿಗೆ ಬೊಲ್ಲನ ಹಾಕಿದ
ಕೋಡುಗಲ್ಲಿನ ತನಕ ಗದುಮಿ |
ಕೂಡಿದ ತುರುಕರನೆಲ್ಲ ಸವರುತ ಪೋಗೆ
ಹೇಡಿಗೊಂಡಿತು ನೇಮಿ ಪೌಜು || ೫೨ ||

ಪಡುವಣ ಪೌಜಿಗೆ ಹಾಕಿದ ಬೊಲ್ಲನ
ಕಡಿದನು ರಣದೊಳು ಪೊಕ್ಕು |

ಒಡನೆ ಮನ್ನೆಯರೇರಿ ತಲೆಗಳನು ಕುಟ್ಟಲು
ಅಡೆಯೆ ತುರುಕ ರಾಹುತರು || ೫೩ ||

ಉತ್ತರ ದಿಕ್ಕಿನ ಪೌಜಿಗೆ ಬೊಲ್ಲನ
ಒತ್ತಿ ಮೀಟಿದ ರಾಮನಾಗ |
ಸುತ್ತಿ ತುರುಕರ ಪಡೆಯನೆಲ್ಲವ ಸವರಿ
ಒತ್ತಿದ ಕಡೆಕಲ್ಲ ತನಕ || ೫೪ ||

ಹಿಂದಕ್ಕೆ ಕುದುರೆಯ ಮೀಟಿ ರಾಮಯ್ಯನು
ಬಂದನು ಡೇರೆದ ಬಳಿಗೆ |
ಮುಂದುಳಿದಂಥ ತುರುಕರನೆಲ್ಲ ಕೊಲ್ಲುತ
ಹೊಂದಿ ಸವರುತ ಮುನ್ನೆಯರ || ೫೫ ||

ಜೋಳದ ಸೊಪ್ಪೆಯು ಹೊಲದೊಳು ಬಿದ್ದಂತೆ
ಹಾಳಾಯಿತು ನೇಮಿ ದಂಡು || ೫೬ ||

ಒಡೆದು ಓಡುವ ದಂಡನೆಲ್ಲ ಕೂಡಿಸಿ ನೇಮಿ
ಬಿಡದೆ ಪೌಜನು ಮಾಡಿಕೊಂಡು |
ಒಡನೊಂದು ಲಕ್ಷ ಮಂದಿಯು ವಾಜಿ ಕಡೆಯಿಲ್ಲ
ತಡೆಯದೆ ರಾಮನ ಮೇಲೆ || ೫೭ ||

ಇದಿರೇರಿ ಬರುವ ನೇಮಿಯ ಕಂಡು ರಾಮಯ್ಯ
ಅದ ಕೋ ಉಳಿದನೆಂದು ನೋಡಿ |
ಹದಲಿಲ್ಲ ಮನ್ನೇರ ಕೂಡಿ ಹೊಕ್ಕನು ರಾಯ
ಬೆದರಿತು ಕುದುರೆಯ ಪೌಜು || ೫೮ ||

ಸುತ್ತಲಿ ಕಡಿದಾಡಿ ಬರುತ ಕಾಟಣ್ಣನು
ಒತ್ತಿ ನೋಡಿದ ದೊಡ್ಡ ಪೌಜ |
ಮುತ್ತಿಕೊಂಡರು ರಾಮಯ್ಯನನೆನುತಲಿ
ಮತ್ತೋಡಿಬಂದು ಕೂಡಿದನು || ೫೯ ||

ಕಾಟನ ಒಡನಿದ್ದ ಮಾನ್ಯರು ರಾಹುತರು
ದೂಟಿಸಿ ಹೊಕ್ಕು ನೇಮಿಯನು || ೬೦ ||

ರಾಮನ ಮೇಲೆ ನಿಲ್ಲುವುದಿಲ್ಲ ದಂಡೆಂದು
ನೇಮಿ ಚಿಂತಿಸಿ ಮನದೊಳಗೆ |
ಕಾಮುಖಖಾನರ ಕೂಡಿ ಬಿದ್ದನು ಮೇಲೆ
ಭೂಮಿ ತಲ್ಲಣಿಸಿ ಭೋರಿಡುತ || ೬೧ ||

ಹೆಣಗಳು ಬಿದ್ದು ಮುಂಡಗಳು ಕುಣಿವುತ ಬರೆ
ರಮಣಮಯವಾಯ್ತು ಭೂಮಿಯಲಿ |
ರಮಣಮಯ ಹೆಣಮಯವಾಯ್ತು ರಣರಂಗ
ರಣರಂಗ ಬಿಟ್ಟು ಓಡಿದ ನೇಮಿಖಾನ || ೬೧ ||

ಕುಣಿದಾಡಿದವು ಶಾಕಿನಿ ಭೂತ
ಕುಣಿದಾಡಿ [ತಿಂದು]ತೇಗಿದವು |
ದಣಿಯಲೆ ತಿಂದು ರಾಮನ ಕೊಂಡಾಡಿದವು
ಅಣಕವಾಯಿತು ರಣದೊಳಗೆ || ೬೩ ||

ಹಬ್ಬವ ಮಾಡಿ ಉಣಿಸಿದ ರಾಮುಗನೆಂದು
ಉಬ್ಬಿ ಕೊಂಡಾಡುತ ಕುಣಿದು |
ಬೊಬ್ಬೆಯನಿಡುತ ರಣದೊಳು ಭೂತಗಳು ಕೂಗೆ
ಗಬ್ಬಿ ರಾಮಯ್ಯ ನೋಡಿದನು || ೬೪ ||

ಓಡಿಹೋದರು ತುರುಕರು ಎಲ್ಲ ಅಲ್ಲಲ್ಲಿ
ಕೂಡಿ ಮಾತಾಡಿಕೊಂಡವರು |
ನಾಡಿನೊಳ್ ರಾಮಗೆ ಇದಿರಿಲ್ಲವೆನುತಲಿ
ಜೋಡಿಸಿಕೊಂಡು ಗಂಟುಗಳ || ೬೫ ||

ಹೋಗುವ ನೇಮಿಯ ಬೆನ್ಹತ್ತೆ ರಾಮಯ್ಯ
ಬೇಗ ತೊರೆಯ ದಾಂಟಿ ನೇಮಿ |
ಸಾಗಿದ ಮುಂದಕೆ ಬಾದಾಮಿತನಕಲಿ
ಜಾಗ್ರತೆಯೊಳು ಹಗಲಿರುಳು || ೬೬ ||

ಹಿಡಿಸಿದ ಧರ್ಮಗಹಳೆಯನು ರಾಮಯ್ಯ
ಕಡಿವಂಥ ಮನ್ನೆಯರೆಲ್ಲ |
ಒಡನೆ ತಿರುಗಿ ಹಿಂದಕೆ ನಿಂತರೆಲ್ಲರು
ತಡೆದರು ಅಲ್ಲೊಂದು ದಿನವು || ೬೭ ||

ಒಡನೆದ್ದು ಹಿಂದಕ್ಕೆ ತಿರುಗಿ ರಾಮಯ್ಯನು
ಬಿಡಿಸಿದ ಸಿಕ್ಕಿದವರನು |
ಕಡೆಯಾಯಿತು ಕಾಟಣ್ಣ ಹೋಗುವ
ನಡೆಯೆಂದ ರಾಮಯ್ಯನೊಡನೆ || ೬೮ ||

ಹುಲ್ಲ ಕಚ್ಚಿದರ ಹುತ್ತವನೇರಿ ಜಲದೊಳು
ನಿಲ್ಲದೆ ನಿಂತವರ ನೋಡಿ |

ಎಲ್ಲರ ನೋಡಿಬಿಡು ಎನುತ ರಾಮಯ್ಯನು
ಉಲ್ಲಾಸದಿಂದ ಕುಮ್ಮಟಕೆ || ೬೯ ||

ಮಗ ಗೆದ್ದು ಬರುವ ಸುದ್ದಿಯ ಕೇಳಿ ಕಂಪಿಲ
ಸೊಗಸಿಂದ ತನ್ನ ಪಟ್ಟಣವ |
ಮಿಗೆ ಶೃಂಗರಿಸಿ ತಳಿರು ತೋರಣದಿಂದ
ಹೊಗಲಿ ಅರ್ತಿಯಲಿ ರಾಮಯ್ಯ || ೭೦ ||

ಬಂದನು ಐದಾರು ಗಳಿಗೆಗೆ ರಾಮಯ್ಯ
ನಿಂದನು ಕುಮ್ಮಟದ ಮುಂದೆ |
ಅಂದು ರಾಮೇಶಗೆ ಶರಣೆಂದು ಹೊಕ್ಕನು
ತಂದೆಯ ಕಾಣಬೇಕೆಂದು || ೭೧ ||

ಸೊಕ್ಕ ಸಾರಂಗನ ಏರಿ ರಾಮಯ್ಯನು
ಉಕ್ಕುಡವನು ಹೊಗುವಾಗ |
ತಕ್ಕಂತೆ ಕುರಿಯ ಕಡಿಸಿ ನಿವಾಳಿ ಹಾಕಿ
ಹೊಕ್ಕನು ರಾಜಬೀದಿಯಲಿ || ೭೨ ||

ಊರೊಳಗುಳ್ಳ ಹೆಮ್ಮಕ್ಕಳು ಶೃಂಗರಿಸಿ
ಆರಳಿಗಳ ತಂದರಾಗ |
ವೀರ ರಾಮಯ್ಯಗೆ ಎತ್ತಿ ಹರಸಲಾಗ
ಆರತಿಯೊಳಗೆ ಹೊನ್ನುಗಳ || ೭೩ ||

ಹರಿವಾಣದಾರತಿಗಳ ತಂದು ಹರಿಯಮ್ಮ
ಭರದಿಂದ ಮಗಗೆ ಎತ್ತಿದಳು |
ಧುರದೊಳು ಗೆದ್ದು ಬಂದಂಥ ರಾಮಯ್ಯಗೆ
ಹರಸಿ ಎತ್ತಿದರು ಆರತಿಯ || ೭೪ ||

ಅಕ್ಕ ಮಾರಮ್ಮ ಸಿಂಗಮ್ಮನವರ ರಾಮ
ತೆಕ್ಕಿಸಿಕೊಂಡು ಹರುಷದಲಿ |
ಮುಕ್ಕಣ್ಣ ಶಿವನ ದಯದಿಂದ ಬಂದನು ರಾಮ
ಅಕ್ಕತಂಗಿಯರು ಹರುಷದಲಿ || ೭೫ ||

ಮುತ್ತಿನಾರತಿಯನೆತ್ತಿದರು ರಾಮಯ್ಯಗೆ
ಅರ್ತಿಯಿಂದಲಿ ಹರಸಿದರು || ೭೬ ||

ಎಲ್ಲರ ಕಳುಹಿಸಿ ನಿಲ್ಲದೆ ತಾನೆದ್ದು
ಉಲ್ಲಾಸದಲಿ ಅರಮನೆಗೆ |

ಇತ್ತ ರಾಮನು ತನ್ನ ಅರಮನೆಯನು ಹೊಕ್ಕ
ಅತ್ತ ನೇಮಿಯಖಾನ ಪೋಗಿ || ೭೭ ||

ಬರೆಸಿದ ರಾಮನ ಮೇಲಿನ್ನು ಕಾರ್ಯವ
ಇರದೆ ಎಲ್ಲರು ಕೂಡಿಕೊಂಡು |
ಬರುತೇವೆ ನಾವಿನ್ನು ಬಿಡುವುದಿಲ್ಲ ರಾಮನ
ಸೆರೆಯಕೊಂಡೊಯ್ವೆವು ನಾವು || ೭೮ ||

ವೀರಬಲ್ಲಾಳಗೆ ಮಾಡಿಗೊಂಡಗೆ ದೊಡ್ಡ
ಓರುಗಲ್ಲರಸು ಮುಂಗುಲಿಗೆ |
ಬೇರೊಂದು ಗುತ್ತಿಯ ಜಗದಪ್ಪಗೆ ನೇಮಿಯು
ಸಾರಿ ಬರೆಸಿದನು ವಾಲೆಯನು || ೭೯ ||

ಎಲ್ಲ ದೊರೆಗಳಿಗೆಲ್ಲ ಹ್ಯಾವ ಪಂಥವನಿಕ್ಕಿ
ಮೆಲ್ಲಗೆ ಕೂಚ ಮಾಡಿಸಿ |
ಅಲ್ಲಿಂದ ಡಿಳ್ಳಿಗೆ ಸಾಗಿ ತಾ ಹೋದನು
ಬಲ್ಲಿದ ಆರು ತಿಂಗಳಿಗೆ || ೮೦ ||

ಎಲ್ಲ ದಂಡೆಲ್ಲ ಚಿಕ್ಕ ಡಿಳ್ಳಿಗೆ ಇಳಿದರು
ಅಲ್ಲಿಂದ ಉಂಡುಟ್ಟು ಹೊರಟು |
ನಿಲ್ಲದೆ ರಾತ್ರಿ[ಯ] ಹೊತ್ತಿಗೆ ಮನೆಗಳಿಗೆ
ಬಲ್ಲಂತೆ ಹೋದರು ತಮಗೆ || ೮೧ ||

ಮುರಿದೋಡಿ ಬಂದ ಸುದ್ದಿಯ ಕೇಳಿ ಸುರಿತಾಳ
ಸುರಿತಾಳ ಕರೆಸಿದ ನೇಮಿಖಾನರನು |
ಭರದಿಂದ ಬಂದಡ್ಡಬಿದ್ದು ಮುಜುರೆ ಮಾಡಿ
ಸರನದ್ದು ನಿಂದು ಕೈಮುಗಿಯೆ || ೮೨ ||

ಕೊಟ್ಟದ ಬೇಡ ರಾಮನ ಹಿಡಿತರುವರೆ
ಬಿಟ್ಟುಬರುವರೆ ನೇಮಿಖಾನ |
ಇಷ್ಟು ಮಾತ್ರಕೆ ಕೊಂದೆ ಕಾನ ವಜೀರರ
ಬೆಟ್ಟದ ರಾಮಗೆ ಅಂಜಿ || ೮೩ ||

ಭಾಪುರೆ ಪಾಚ್ಛಾ ಕೇಳ್ ಕೋಪವ ಮಾಡದೆ
ಮಾಡದೆ ಈ ಪರಿ ಕಾಳಗವಿಲ್ಲ |
[ಅಪಾ]ರಮಹಿಮ ಛಲದಂಕನಹುದು ರಾಮ
ಭೂಪರೊಳು ಹುಟ್ಟಲರಿದು || ೮೪ ||

ದುರ್ಗವೆಂಬುದು ತರುಗಿರಿಬೆಟ್ಟ ಕುಮ್ಮಟ
ಗರ್ವ ರಾಮಯ್ಯ ತಾ ಹೊರಟ |
ನುಗ್ಗುಮಾಡಿ ಖಾನಖಾನರನೆಲ್ಲರ ಹೊಂದನು
ಸ್ವರ್ಗದ ಪತಿ ಶಿವ ಬಲ್ಲ || ೮೫ ||

ರಾಮನ ಕತ್ತಿಗೆ ಇದಿರಿಲ್ಲ ರಾಜ್ಯದೊಳ್
ಕಾಮನ ರೂಪು ಚೆನ್ನಿಗನು |
ಭೂಮಿಯೊಳಗೆ ಅವ ಕೈಸೆರೆ ಸಿಕ್ಕುವನಲ್ಲ
ಸೋಮಶೇಖರ ಶಿವ ಬಲ್ಲ || ೮೬ ||

ಎಂದ ಮಾತನು ಕೇಳಿ ಸುರಿತಾಳ ಪಾಚಾವ ಇ
ನ್ನೊಂದು ಬಾರಿಗೆ ನೋಡಿಕೊಂಬ |
ಬಂದಂಥ ಖಾನರ ಸಮಜಾಯಿಸಿ ಸುರಿತಾಳ
ನಂದು ಮನೆಗೆ ಕಳುಹಿದನು || ೮೭ ||

ಇದು ಪರನಾರಿ ಸೋದರ ರಾಮನಾಥನ
ಪದಕೃತಿಯೊಳಗೊಂದು ಕಥೆಯ |
ಕದನದೊಳ್ ನೇಮಿಯ ಗೆದ್ದನು ರಾಮಯ್ಯ
ಪದಗಳು ಮುಗಿಯೆ ಸಂಪೂರ್ಣ || ೮೮ ||

**ಅಂತು ಸಂಧಿ ೧೨ಕ್ಕಂ ಪದನು ೧೨೧೯ಕ್ಕಂ ಮಂಗಳ ಮಹಾಶ್ರೀ**

## ಸಂಧಿ ೧೩ - ಬಲ್ಲಾಳರಾಯನ ಯುದ್ಧ ಮತ್ತು ಸೋಲು

**ಶ್ರೀ ಗಿರಿಜಾ[ಸ್ಯಾಂಬುಜ ದಿನ] ನಾಯಕ**
**ಭೋಗಿಭೂಷಣ ಭಾಳನೇತ್ರ |**
**ಭಾಗೀರಥಿಧರ ಭವರೋಗವೈದ್ಯನೆ**
**ನಾಗ[ಕುಂಡಲ] ಶರಣೆಂಬೆ || ೧ ||**

ತಂದೆ ಮಕ್ಕಳು ಕೂಡವೊಂದಿಲಿ ಕಾಟಣ್ಣ
ಬಂದು ಕುಳಿತರು ಬೇಗದೊಳು |
ಚಂದದೊಳುಂಡು ಕರ್ಪುರ ವೀಳ್ಯವ ಕೊಂಡು
ವಂದಿಸಿ ಹೊರಟರಾಕ್ಷಣದಿ || ೨ ||

ತಂದೆ ಮಕ್ಕಳು ಕೂಡ ಬಂದು ಹಜಾರಕ್ಕೆ
ಒಂದೇ ಸದರಿನಲ್ಲಿ ಕುಳಿತು |

[ಹಿಂ]ದುವ ರಾಮ ನಿನ ಮುಂದೆ ಕಡಿದಾಡಿದ
ಮಂದಿಯ ಸಮಜಾಯಿಸಿಕೊಳ್ಳೊ || ೩ ||

ಎಂದ ಮಾತನು ಕೇಳಿ ಪೇಳಿದ ಚರರಿಗೆ
ಮಂದಿಯನೆಲ್ಲ ಕರೆತನ್ನಿ || ೪ ||

ಚರರೋಡಿ ಹೋಗಿ ಸಮಸ್ತರ ಕರೆದರು
ದೊರೆಯ ಮಕ್ಕಳನು ರಾಹುತರ |
ಇರದೆ ನೀವ್ ಬನ್ನಿ ಮಾನ್ಯರಿಗೆಲ್ಲ ಸಾರುತ
ಕರೆದರು ಕೇರಿಕೇರಿಯೊಳು || ೫ ||

ಎಲ್ಲರು ಬಂದು ಕೈಮುಗಿಲು ಕಂಪಿಲ
ನಿಲ್ಲದೆ ಕುಳ್ಳಿರೆಂದೆನುತ |
ಉಲ್ಲಾಸದಲಿ ಮಂತ್ರಿ ಬೈಚಪ್ಪ[ಗೆ] ಹೇಳಿದ
ಎಲ್ಲ ವಸ್ತ್ರಂಗಳ ತರಿಸೊ || ೬ ||

ರಾಮಯ್ಯನೆಡೆಗೆ ತಂದಿರಿಸಯ್ಯ ಬೇಡಿದುದ
ಕ್ಷೇಮದೊಳೆನುತ ಕಂಪಿಲನು || ೭ ||

ದೊರೆಯ ಮಕ್ಕಳಿಗೆ ಕರೆದು ಕೊಟ್ಟನು ರಾಮ
ಮುರುಡಿ ಸರಪಳಿಯ ಪದಕಗಳ |
ನೆರೆ ಬಂದಂಥ ರಾಹಯುತರಿಗೆಲ್ಲವ ಕೊಟ್ಟು
ಪರಿಪರಿ ಒಡವೆ ವಸ್ತ್ರಗಳ || ೮ ||

ಬಿರಿದು ಬಾವುಲಿ ಕೊಟ್ಟು ಮಂದಿ ಮಕ್ಕಳಿಗೆಲ್ಲ
ಕರೆದು ಕೊಟ್ಟನು ಹೊನ್ನುಗಳ |
ಪರಿಪರಿ ಬಣ್ಣ ಉಡುಗೊರೆ ಕೊಟ್ಟು ಮನ್ನಿಸಿ
ಕರೆದು ಕೊಟ್ಟನು ವೀಳ್ಯಗಳನು || ೯ ||

ಗಾಯದವರಿಗೆ ಕೊಟ್ಟ ಜಾಳಿಗೆ ಹೊನ್ನನು
ನಾಯಕವಾಡಿಗಳಿಗೆಲ್ಲ |
ಆಯತವಾಗಿ ಕೊಟ್ಟನು ಉಡುಗೊರೆಯ
ಬಾಯೆಂದು ಕೊಟ್ಟ ವೀಳ್ಯವನು || ೧೦ ||

ಸಕಲ ಬಲವನೆಲ್ಲ ಸಮಜಾಯಿಸಿಕೊಂಡನು
ಯುಕುತಿಲಿ ರಾಮಯ್ಯ ನಗುತ || ೧೧ ||

ಇಂತು ಸಂತೋಷದೊಳು ರಾಮ ತಾನಿರುತಿರೆ
ಪಂಥದೊಳ್ ಬಲ್ಲಾಳರಾಯ |
ಇಂತಪ್ಪ ರಾಮನ ಸುದ್ದಿಯ ಕೇಳಿತ
ಚಿಂತೆಮಾಡುತಲಿರ್ದನಲ್ಲಿ || ೧೨ ||

ಸುರಿತಾಳ ನೇಮಿಯು ಬರೆದಂಥ ಕಾಗದ
ಚರರೋಡಿ ತಾ ಬಂದು ಕೊಡಲು |
ಅತ್ತವರನು ಕಳುಹಿ ತನ್ನ ಮಂತ್ರಿಯೊಳ್
ಇತ್ತ ಆಲೋಚಿಸುತಿರಲು || ೧೩ ||

ಮೀರಿದ ರಾಮನು ಸುರಿತಾಳನ ಗೆದ್ದ
ದಾರಿಗಂಜುವನವನೆಂದ || ೧೪ ||

ದಾರಿಯ ಸುದ್ದಿಯ ನೆಚ್ಚಿಗೆ ನಮಗಿಲ್ಲ
ಆರನಾದರು ನಾವು ಕಳುಹಿ |
ಓರುಗಲ್ಲಿಗೆ ಹೋಗಿ ಸುದ್ದಿಯ ತರುವಂತೆ
ಸಾರ ಅಪ್ಪಣೆ ಕೊಡಬೇಕು || ೧೫ ||

ಕಳುಹಯ್ಯ ಮಂತ್ರಿ ನರಸಿಂಗರಾಯನ ಬೇಗ
ಒಳಪಾಡಿನೊಳಿಗದವರ |
ಒಳಹೊಕ್ಕು ಪಟ್ಟಣದೊಳಗೆಲ್ಲ ಅಲ್ಲಲ್ಲಿ
ತಿಳಿಕೊಂಡು ಬರಲಿ ಸುದ್ದಿಯ || ೧೬ ||

ಧರೆಯೊಳು ರಾಮ ಬಲ್ಲಿದನಾಗಿ ರಾಜ್ಯದ
ದೊರೆದೊರೆಗಳ ಬಿರಿದುಗಳ |
ಧರಿಸಿದೆನೆಂಬ ಗರ್ವದಿ ತಮ್ಮ ತಂದೆಯೊಳ್
[ವಿ]ರಸಾಗಿ ಓರ್ಗಲ್ಲ ಸೇರಿ || ೧೭ ||

ತಂದೆಯ ಕೂಡಿನ್ನು ಮನ ಮುನಿಸಿ ನಾನಿನ್ನು
ಬಂದೆನು ನಿಮ್ಮನೋಲೈಸ |
ಲೆಂದುಃ ಅವರೊಳು ಒಳಹೊಕ್ಕು ತಾ ಹೋಗಿ
ನಿಂದ ಅವರ ಮುಖದೊಳು || ೧೮ ||

ಇಲ್ಲದ ತಳ್ಳಿಯ ಮಾಡಿ ಅವರ ಮಂದಿ
ನೆಲ್ಲರ ಕೊಂದು ಮೋಸದಲಿ |
ನಿಲ್ಲದೆ ಕಳ್ಳ ಬೇಡನು ಬೊಲ್ಲನ ತಂದ
ಬಲ್ಲಾಳರಾಯ ಕೇಳೊಡೆಯ || ೧೯ ||

ಬೊಲ್ಲನ ತಂದಂಥ ಗರ್ವದೊಳ್ ಹುಳಿಯೇರ
ನಿಲ್ಲದೆ ಮುತ್ತಿಗೆ ಮಾಡಿ |
ಪಲ್ಲವಿಸಿ ಪಂಜರಗಿಳಿಯನು ಆಕ್ಷಣ
ಕಲ್ಲರಸ ಕೊಟ್ಟ ಒಂದಾದ || ೧೦ ||

ಮತ್ತೆ ಮೇಲಾಗಿ ಕರಿಯ ಪಚ್ಚೆಯ ಕಲ್ಲ
ಕೊಟ್ಟನು ಹುಳಿಯಾರ ಮಾರ |
ಗುತ್ತಿಯ ಜಗದಪ್ಪ ಅಂಜಿ ಕೊಟ್ಟನು ಹೆಣ್ಣ
ಒತ್ತಿದ ರಾಮ ರಾಜ್ಯವನು || ೧೧ ||

ಸುತ್ತ[ಣ] ಸೀಮೆಯ ಕಟ್ಟಿ ಬಲ್ಲಿದನಾದ
ಕುತ್ತಿಗುಬ್ಬಸ ನಿಮಗೆಂದ || ೧೨ ||

ಪಗುಡಿಗೆ ಪಚ್ಚಾವ ಕಳುಹಿದ ಪಾವುಗೆಯ
ಜಗದೊಳಗವನು ಮೆಟ್ಟಿದನು ||
ಜಗಳಕ್ಕೆ ಡಿಲ್ಲಿಗೆ ಡಾವೆದಾರು ಆದ
ಹಗರಂವೇನು ಪೇಳುವೆನು || ೧೩ ||

ಅವನೊಳು ಸೆಣಸುವ ರಾಯರ ಕಾಣೆನ್ನು
ಭುವನದೊಳಗೆ ಆಶ್ಚರ್ಯ |
ಹವಣಿಲ್ಲ ಅವನ ಕೊಡೆಯು ಕಾನಝುಂಗೆಯು
ಶಿವನ ಒಲುಮೆಯ ಕುಮಾರ || ೧೪ ||

ಇಂತಪ್ಪ ಸುದ್ದಿಯ ಕೇಳುತ ಬಲ್ಲಾಳ
ಚಿಂತೆ ಯಾತಕೆ ನೇಮಿಗೆನುತ |
ಪಂಥವ ತಾಳಿ ಮನದೊಳಗೆ ಕ್ರೋಧವನಿಟ್ಟು
ಇಂತು ಬಿಡಬಲ್ಲೆನೆ ಅವನ || ೧೫ ||

ಗರ್ವವ ಮುರಿದು ಕುಮ್ಮಟವ ಕೈಸೆರೆಯನು
ಉರ್ವಿಯೊಳ್ ಪಿಡಿತಹೆನೆನುತ || ೧೬ ||

ಸುತ್ತಣ ರಾಜರಿಗೋಲೆ ಉಡುಗೊಡೆಗಳ
ಒತ್ತಿ ಬರೆಸಿ ಕಳುಹಿದನು |
ಇತ್ತ ಚರರೋಡಿ ಬಂದು ಎಲ್ಲರು ಕಂಡು
ಇತ್ತರು ವಾಲೆ ಉಡುಗೊರೆಯ || ೧೭ ||

ಓದಿಸಿಕೊಂಡು ಕೇಳಿದರಾಗ ಸುದ್ದಿಯ
ಕಾದುವರುಂಟೆ ರಾಮನೊಳು |

ಭೂದೇವಿ ಬಲ್ಲಳು ಎನುತಲವರು ಬಲ ಎಲ್ಲ
ಆದಂಥ ಕುದುರೆ ಮಂದಿಯನು || ೧೮ ||

ಚಿಪ್ಪಗಿರಿಯಲಿಂದ ಮೊಗಲ ತಾ ಬಂದನು
ಎಪ್ಪತ್ತು ಸಾವಿರ ಕುದುರೆ |
ತಪ್ಪದೆ ಏಳ್ನೂರ ಆನೆ ಸಹಿತವಾಗಿ
ಒಪ್ಪದಿ ಬಲ್ಲಾಳನೆಡೆಗೆ || ೧೯ ||

ಲಾಳ ಮಾಳವ ರಾಯರು ಕೂಡಿ ಮಾತಾಡಿ
ಆಳೊಂದು ಹತ್ತು ಸಾವಿರವು |
ಏಳ್ನೂರು ವಾಜಿ ಎಪ್ಪತ್ತು ಕರಿಗಳು ಸಹ
ಪಾಳೆಯಗಾರರು ಕಳುಹಿದರು || ೨೦ ||

ಮಲೆಯಾಳ ಕೊಂಕಣದೇಶದ ರಾಯರು
ಒಲಿದು ಬಲ್ಲಾಳನ ಮೇಲೆ |
ಸಲೆ ಹತ್ತು ಸಾವಿರ ಬಲವು ಸಾವಿರ ವಾಜಿ
ಬಲವಂತದವರ ಕಳುಹಿದರು || ೨೧ ||

ಅತ್ತ ಓರ್ಗಲ್ಲ ಪ್ರತಾಪರುದ್ರನ ಬಳಿಗೆ
ಮತ್ತೆ ಬಲ್ಲಾಳ ಮುತ್ತಿಗೆಯನು |
ಮಾಡಬೇಕು ಕುಮ್ಮಟಕೆಂದು ಉತ್ರ
ಉಡುಗೊರೆಯ ಕಳುಹಿದನು || ೨೧ ||

ಸಾರಿಹೋದರು ಮಂತ್ರಿಗಳೋರುಗಲ್ಲಿಗೆ
ವೀರ ಪ್ರತಾಪನ ಕಂಡು |
ಬೇಡೆ ಏಕಾಂತವ ಮಾಡಿ ಮಾತಾಡಿದರು
ಧೀರ ಮುಂಗುಲಿರಾಯನ ಬಳಿಗೆ || ೨೨ ||

ಸಾರಿ ಕರೆಸಿದನು ಗುರಿಕಾರ ಎಕ್ಕಟಿಗರ
ಓರುಗಲ್ಲಿಗೆ ಪಯಾಣವೆನುತ |
ಅರುವತ್ತು ಸಾವಿರ ಕುದುರೆಯ [ತಳುವದೆ]
ದೊರೆಯ ಮಕ್ಕಳ ಕಳುಹಿದನು || ೨೪ ||

ಬಿರಿದಿನೆಕ್ಕಟಿಗರು ಮೂವತ್ತು ಸಾವಿರ
ಹರುಷದಿ ಮುಂಗುಲಿರಾಯ |
ಮಗ ಸಿಂಗರಾಯನ ಕೂಡಿಸಿ ಕಳುಹಿದ
ಅಗಣಿತವಾದಂಥ ಪೌಜ || ೨೫ ||

ನಾಳಿನ ದಿನ ದಂಡ ಕೂಚೆಗಳನು ಮಾಡಿ
ಯಾಳಬೇಕೆಂದು ಕುಮ್ಮಟಕೆ |
ದಾಳಿಯ ಮಾಡಿನ್ನು ರಾಮನ ರಾಜ್ಯವ
ಕೋಳ ಹಿಡಿಯಲಿ ಬೇಕು ನಾವು || ೩೬ ||

ಮೊಗಲ ವಜೀರನ ಮಾತುಗಳನು ಕೇಳಿ
ಮಿಗೆ ರುದ್ರರಾಯ ತಾ ನುಡಿದ |
ಜಗಳಕೆ ಪಾಚ್ಛಾನೇಮಿಯು ಮುತ್ತಿ ಕಲ್ಲೊಳು
ನಗುಪಾಟಲಾಗಿ ತಾ ಹೋದ || ೩೭ ||

ಎಂದ ಮಾತನು ಕೇಳಿ ಸಿಂಗಯ್ಯನಾಡಿದ
ಮುಂದೊಂದು ದೊಡ್ಡ ಕೋಟೆಯನು |
ಬಂಧಿಸಿ ಮುತ್ತಿಕೊಂಡರೆ ರಾಮ ಬರುವನು
ಬಂದರೆ ನಾವ್ ಸುತ್ತಿಕೊಂಡು || ೩೮ ||

ಕಡಿಕಡಿದು ರಾಮನ ಕೈಸೆರೆಯನು
ಹಿಡಿದು ಡಿಲ್ಲಿಗೆ ಕಳುಹುವೆನು |
ಬಿಡದೆ ಕುಮ್ಮಟವ ಮುತ್ತಿಗೆಯನು ಮಾಡಿ
ಹಡೆಮುರಿಯನು ಕಟ್ಟಿಕೊಂಡು || ೩೯ ||

ಬೆಳಗೆದ್ದು ಊಟವ ಮಾಡಿನ್ನು ಹೊರಟರು
ಘಳಿಲನೆ ದಂಡು ಕೂಚಾಗಿ |
ಇಳಿಯಿತು ಬಂದು ಗಡಿದುರ್ಗಕ್ಕೆ ಮುತ್ತಿಗೆ
ತಳಿಗಳ ಹಾಕಿದರಾಗ || ೪೦ ||

ಸುತ್ತ ಮುತ್ತಿಗೆ ಮಾಡಿಕೊಂಡು ಬಂದಿಳಿದರು
ಎತ್ತ ನೋಡಲು ಅತ್ತ ಪೌಜು |
ಹತ್ತಿತು ಜಗಳವು ಕೋಟೆಯೊಳಗಳ ಮಂದಿ
ತತ್ತಾರದಲಿ ಹೊರಟು ಕಡಿದು || ೪೧ ||

ನಾಲ್ಕು ಕಡೆಗೆ ದಂಡು ನಾಲ್ಕು ಪೌಜನು ಮಾಡಿ
ನೂಕಿ ಇಳಿಯಿತು ಸುತ್ತಮುತ್ತ |
ಜೋಕೆ ಎಚ್ಚರ ರಾಮನು ಬರುವ ದಾರಿ
ಯೊಳು ಆಕಡೆ ಮೊಗಲ ತಾನಿಳಿದ || ೪೨ ||

ರಾಮನ ಸೀಮೆಗೆ ದಾಳಿಯನಿಕ್ಕುತ
ಗ್ರಾಮಗಳೆಲ್ಲವ ಸುಡುತ |
ಸೀಮೆಯನೆಲ್ಲವ ಸುಡುತ |

ಸೀಮೆಯನೆಲ್ಲವ ಕೈಸೆರೆಯ ಹಿಡಿವುತ
ಧಾಮಧೂಮ ಮಾಡಿ ಸುಡುತ || ೪೩ ||

ಗಡಿದುರ್ಗದೊಳಗಿರ್ದ ಕಾಟನಾಯಕ ತನ್ನ
ಕಡೆಯ ತಳವಾರರ ಕರೆಸಿ |
ಬಿಡದೋಡಿಹೋಗಿ ರಾಮಗೆ ಸುದ್ದಿಯನು ಪೇಳಿ
ತಡೆಯದೆ ಬನ್ನಿ ನೀವೆನಲು || ೪೪ ||

ಎಂದ ಮಾತನು ಕೇಳಿ ಬಂದರು ಚರರೋಡಿ
ನಿಂದರು ರಾಮಯ್ಯನಿದಿರ |
ಅಂದಡ್ಡಬಿದ್ದ ಕೈಮುಗಿದು ವಂದನೆ ಮಾಡಿ
ಬಂದಿತು ಮುತ್ತಿಗೆ ಎನಲು || ೪೫ ||

ಲೆಕ್ಕವಿಲ್ಲದ ದಂಡು ಕೂಡಿ ಬಲ್ಲಾಳನ
ರಕ್ಕಸ ಮೊಗಲ ತಾ ಸಹಿತ |
ಮಿಕ್ಕ ಮಾತಿನ್ನೇನು ಸುತ್ತಣ ರಾಯರು ಕೂಡಿ
ಹೊಕ್ಕರು ನಮ್ಮ ಸೀಮೆಯನು || ೪೮ ||

ಕೇಳಿದ ಸುದ್ದಿಗಳನೆಲ್ಲ ರಾಮಯ್ಯನು
ಹೇಳುವುದೇನು ನೀವು ಹೋಗಿ |
ನಾಳೆ ಹೊರಡುವೆ ಪ್ರಯಾಣವ ಮಾಡಿ
ಕಾಹಳೆಯ ಹಿಡಿಯೆಂದ ಭೂಪ || ೪೯ ||

ಬಂದಂಥ ಚರರಿಗನ್ನವನುಂಡು ಹೋಗೆಂದು
ಒಂದು ನಗಾರಿ ಮಾಡಿಸಿದ |
ನಿಲ್ಲದೆ ತಾನು ಮನ್ನೆಯರ ಬರ
ಹೇಳೆಂದು ಬಂದನು ತನ್ನ[ರ] ಮನೆಗೆ || ೫೦ ||

ಹಿರಿಯ ಹೆಂಡತಿ ರಾಮಲದೇವಿಯ ಕರೆದನು
ಬೆರಸು ಕೊಪ್ಪರಿ ಬಿಸಿನೀರ |
ಭರದಿಂದೆ ಹಾನಗಲ್ಲಿಗೆ ಪ್ರಯಾಣವೆನುತಲಿ
ತರಿಸು ಕಮ್ಮೆಣ್ಣೆ ಕಸ್ತೂರಿಯ || ೫೧ ||

ರಾಯನ ಮಾತ ಕೇಳುತ ರಾಮಲದೇವಿ
ಆಯತವಾಗಿ ತಾ ಬಂದು |
ಬಾಯೆಂದು ಕರೆದು ಕಮ್ಮೆಣ್ಣೆ ಮಂಡೆಗೆ ಊಡಿ
ಪ್ರಿಯದಿಂ ಮಜ್ಜನಗೈದು || ೫೨ ||

ಧೂಳುತವಿಟ್ಟು ನಾಮವನಿಟ್ಟು ರಾಮಯ್ಯ
ಹೋಳಿಗೆ ಮೃಷ್ಟಾನ್ನವುಂಡು |
ಪಾಳೆಗಾರರ ಗಂಡನೆಂಬಂಥ ಬಿರಿದನು
ತೋಳ ಬಾಪುರಿ ಇಟ್ಟ ರಾಮ || ೫೩ ||

ವೀರಜಡೆಯನು ಹೆಣಿಸಿದನು ರಾಮಯ್ಯನು
ಭಾರಿ ನಿಗಳವ ಧರಿಸಿದನು |
ಹಾರ ಮುತ್ತಿನ ಸರ ಕೊರಳ ಪದಕವನಿಟ್ಟ
ಧೀರ ಬಲ್ಲಾಳನಗಂಡ || ೫೪ ||

ಮುಂಗೈಯ್ಯ ಮುರುಡಿ ಸರಪಳಿ ಚವುಕಳಿನಿಟ್ಟು
ಶೃಂಗಾರವಾದ ರಾಮಯ್ಯ |
ಮಂಗಳ ಶುಭವೆಂದು ಗಂಧ ಪರಿಮಳವನು
ಅಂಗನೆಯರು ತಂದು ಪೂಜಿ || ೫೫ ||

ಗಂಧದೆಣ್ಣೆಯ ಕಸ್ತೂರಿ ಜವ್ವಾದಿಯ
ಚಂದದಿ ಧರಸಿ ರಾಮಯ್ಯ |
ಬಂದನು ತಾಯರಮನೆಗಾಗಿ ರಾಮಯ್ಯ
ನಿಂದಡ್ಡಬಿದ್ದ ಕೈ ಮುಗಿದ || ೫೬ ||

ಎಲ್ಲೆಗೆ ಪಯಾಣ ಎತ್ತಲ ರಾಜಕಾರ್ಯವು
ಸೊಲ್ಲಿಸೊ ರಾಮ ಎನ್ನೊಡನೆ |
ಬಲ್ಲಿದ ವೀರಬಲ್ಲಾಳ ಗಡಿದುರ್ಗವ
ನಿಲ್ಲದೆ ಮುತ್ತಿದನಂತೆ || ೫೭ ||

ರಾಮಯ್ಯನಿತ್ತ ಮಾತಾಡುತಲಿರಲಾಗ
ಕೋಮಲೆ ರತುನಿಯ ಬಿಟ್ಟು |
ಭೂಪ ಕಂಪಿಲರಾಯ ಹೊರಟ ಚಿಕ್ಕರಮನೆಯ
ಪ್ರೇಮದೊಳ್ ಹರಿಯಮ್ಮನೆಡೆಗೆ || ೫೮ ||

ಬಂದ ತಂದೆಯ ಪಾದಕೆರಗಿ ರಾಮಯ್ಯನು
ನಿಂದನು ಮು[ಕುಲ] ಹಸ್ತದೊಳು |
ಕಂದಯ್ಯ ವೀರ ಅರಸುಗಳೇನೊ ಅವರು
ಎಂದನು ಕಂಪಿಲಭೂಪ || ೫೯ ||

ಬಲ್ಲಾಳ ಮೊಗಲ ಮುಂಗುಲಿರಾಯನ ಮಗ
ಬಲ್ಲಿದ ಓರುಗಲ್ಲರಸು |

ಎಲ್ಲ ರಾಯರು ಕೂಡಿ ಮಾತಾಡಿ ಗಡಿದುರ್ಗವ
ನಿಲ್ಲದೆ ಮುತ್ತಿದರಂತೆ || ೬೦ ||

ಕರೆಸಿದನಾಕ್ಷಣ ಮಂತ್ರಿ ಬೈಚಪ್ಪನ
ಕರೆಸಿದ ಮಂಚಣ್ಣನವರ |
ಕರೆಸಿದ ಚೇರಮರಾಯನ ಮಕ್ಕಳ
ಕರೆಸಿದ ಅರಸುಮಕ್ಕಳನು || ೬೧ ||

ದೊರೆಯ ಮಕ್ಕಳು ಹಂಪರಾಜ ಕಂಪರಾಜನು
ಹಿಡಿಯ ಕುಮಾರ ಕಾಟಣ್ಣ |
ಕರೆದರಾಕ್ಷಣದೊಳು ಬಂದು ಕೈಮುಗಿಯಲು
ದೊರೆ ಕಂಪಿಲ ಕುಳ್ಳಿರೆಂದ || ೬೨ ||

ವೀರ ಬಲ್ಲಾಳನ ಗಂಡನೆಂಬುವುದೊಂದು
ಭಾರಿ ಪೆಂಡೆಯನಿಟ್ಟು ರಾಮ |
ಸಾರಿ ಮಾನ್ಯರನೆಲ್ಲ ಕರೆಸಿಕೊಂಡನು ಮುಂದೆ
ದೂರಣ ಪಯಣ ಬೈಚಪ್ಪ || ೬೩ ||

ಬಲ್ಲಾಳರಾಯನ ಬಲ್ಲವಲ್ಲದೆ ಮೊಗಲ
ರೆಲ್ಲ ರಾಯರ ಬಲ ಕೂಡಿ |
ಬಲ್ಲಿದ ಮುಂಗುಲಿರಾಯನ ಮಗ ಸಿಂಗ
ನಲ್ಲದೆ ಓರ್ಗಲ್ಲ ಅರಸು || ೬೪ ||

ನೇಮಿಯಪ್ಪಣೆಯಿಂದ ನಾಡದೊರೆಗಳು ಎಲ್ಲ
ಆ ಮಹಾ ಮೊಗಲರು ಸಹಿತ |
ಭೂಮಿ ಈದಂತೆ ಕೂಡಿಬಂದರೆಲ್ಲರು
ರಾಮನ ಮೇಲೆ ದಂಡೆತ್ತಿ || ೬೫ ||

ಊಟವ ಮಾಡಿಸಿ ಎಲ್ಲರನೊಡಗೊಂಡು
ದೂಟಿಸಿ ಬಂದ ಚಾವಡಿಗೆ || ೬೬ ||

ಹರಿಯಲದೇವಿ ಪಾದಕ್ಕೆರಗಿ ರಾಮಯ್ಯ
ಹರಕೆಯ ಕೈಕೊಂಡು ಹೊರಟ |
ತರಹೇಳೊ ಬೊಲ್ಲನ ಪೂಜೆಯ ಮಾಡಿ
ಬರಹೇಳೋ ಮನ್ನೆಯರನೆಲ್ಲ || ೬೭ ||

ಮುತ್ತಿನಂದಣವೇರಿ ಹೊರಟನು ರಾಮಯ್ಯ
ಹತ್ತಿದ ಸದರು ಚಾವಡಿಯ || ೬೮ ||

ಎರಡನೆಯ ಕೂಚೆಯಾಯಿತು ರಾಮ ಹೊರಟನು
ಮುರಹರ ರಾಮೇಶನೆಡೆಗೆ |
ವರಗಳ ಬೇಡಿ ಹೊನ್ನ ಕಾಣಿಕೆನಿಟ್ಟು
ಹೊರ ದಂಡನಿಳಿದ ರಾಮಯ್ಯ || ೬೯ ||

ಕುದುರೆ ಮಂದಿಯಗಣಿತ ಮಾಡಿಕೊಂಡನು
ಮದಗಜ ಹಿಂಡ ಮನ್ನೆಯರ |
ಪದುಳದಿ ಕೂಡಿತು ಇಪ್ಪತ್ತು ಸಾವಿರ
ಕುದುರೆ ಎಪ್ಪತ್ತು ಸಾವಿರವು || ೭೦ ||

ಮೂರು ಕೂಚೆಯ ಮಾಡಿ ಹೊರಟ ರಾಮಯ್ಯನು
ಏರಿದ ಬೊಲ್ಲನ ಬೇಗ |
ಎಡಬಲದಲಿ ಮನ್ನೆಯರು ಕುದುರೆಯ ಪೌಜು
ನಡೆದನು ತಿರುಪಳ್ಳಿಗಾಗಿ || ೭೧ ||

ಕಾಟಣ್ಣಗೊಂದು ಪೌಜನು ಮಾಡಿಕೊಟ್ಟನು
ಮೀಟಾದ ವಾಜಿಯನೆಲ್ಲ |
ಈಟಿ ಬರ್ಚಿಯ ಮಂದಿಯನೆಲ್ಲ ಕೊಟ್ಟನು
ಮೀಟಾದ ಮನ್ನೆಯರನೆಲ್ಲ || ೭೨ ||

ನಾಲ್ಕು ಪೌಜನು ಮಾಡಿ ನಡೆಯೆಂದು ಗುಜ್ಜಲೋಬ
ನಾಲ್ಕು ಬಗೆಯ ರಾಯರುಂಟು |
ನಿಲ್ಲದೆ [ನಡೆಯಿರೋ] ಸೂರ್ಯ ಉದಯಕೆ ನೀವು
ಬಲ್ಲಿದ ಮೊಗಲನ ಮೇಲೆ || ೭೩ ||

ಏರಿ ಬೊಲ್ಲ ರಾಮಯ್ಯ ಬಂದಿಳಿದನು
ನರಗುಂದದ ಹೊಳೆಗಾಗಿ |
ಕರೆಸಿದ ಕಳ್ಳಬಂಟರನೆಲ್ಲ ರಾಮಯ್ಯ
ಬರಹೇಳೋ ನಿನ್ನ ಮನ್ನೆಯರ || ೭೪ ||

ಇರದೋಡಿ ಹೋಗಿ ಗಡಿ ದುರ್ಗದ ಸುದ್ದಿಯ
ತರಹೇಳೊ ಸುದ್ದಿಗಳೆನುತ || ೭೫ ||

ಅಲ್ಲಿಂದ ನಾಲ್ಕೂರು ಪ್ರಯಾಣಕ್ಕೆ ರಾಮಯ್ಯ
ನಿಲ್ಲದೆ ಮುನವಳ್ಳಿಯೊಳಗೆ |
ಬಲ್ಲಿದ ಮನ್ನೆಯರ ಗುಜ್ಜಲೋಬಯ್ಯನ
ಎಲ್ಲರ ಕರೆಸಿ ಬೇಗದೊಳು || ೭೭ ||

ಏಕಾಂತವನಾಡಿ ಎಲ್ಲರು ಕೂಡಿನ್ನು
ಸಾಕಾರವಾದಂಥ ಮಾತ |
ನೂಕಿ ಹೊರಟು ನಾಳೆ ಮುತ್ತಿಗೆ ಎಬ್ಬಿಸಿ
ಹಾಕಿಸೊ ಝುಂಡೆಯವೆನುತ || ೭೮ ||

ಉದಯದೊಳೆದ್ದು ಊಟವ ಮಾಡಿ ರಾಮಯ್ಯ
ಸದರ ಡೇಡೆದೊಳು ಕುಳಿತ |
ಚದುರರು ನಾಲ್ಕು ಪೌಜನು ಮಾಡಿ ನ
ಡೆದರು ಚತುರಂಗ ಬಲ ಸಹವಾಗಿ || ೭೯ ||

ಬಿಡದೇರಿ ಬಂದ ಬಾದೂರನಖಾನು ಬಲದಿ
ಎಡವಂಕದಲಿ ಕಾಟಣ್ಣ |
ಕಡೆಯಲ್ಲಿ ಚಾರಮರಾಯನ ಮಕ್ಕಳು
ಮುಂದೆ ದೇಮಯ್ಯನ ಪೌಜು || ೮೦ ||

ಭೇರಿ ನಗಾರಿ ಹೊಯ್ಸುತ ರಾಮಯ್ಯ
ವಾರುವನೇರಿ ನಡೆದನು |
ವೀರ ಬಲ್ಲಾಳನ ಮುಂಜೂಣಿ ಕುದುರೆಯು
ಏರಿತು ರಾಮನ ಮೇಲೆ || ೮೧ ||

ಮುರಿಯಲಿರಿದನು ಮುಂಜೂಣಿಯ ಕಾಟಣ್ಣ
ಬೆರಸಿ ಹೊಯ್ದನು ತಿವಿತಿವಿದು || ೮೨ ||

ಬಂದು ಬಿದ್ದನು ರಾಮನೆನುತ ಬಲ್ಲಾಳ
ಮಂದಿಯನೆಲ್ಲವ ಕರೆದು |
[ಹಿಂದು]ವ ರಾಮನ ಕೈಸೆರೆ ಹಿಡಿಸುವೆ
ನೆಂದನು ರುದ್ರನ ಮುಂದೆ || ೮೩ ||

ಸುತ್ತಳ ಮಂದಿ ಪಾಳೆಗಾರರು ಕೂಡಿತು
ಎತ್ತ ನೋಡಲು ಅತ್ತ ಪೌಜು |
ಕತ್ತಲು ಮುಸುಗಿದಂತಾಯ್ತು ರಾಮನ ಮಂದಿ
ತತ್ತರಗೊ[ಳೆ] ತಮ್ಮೊಳಗೆ || ೮೪ ||

ಆರೆಯ ಚಾರಮರಾಯನ ಮಕ್ಕಳು
ಏರಿದರೆಡ ಬಲದಲ್ಲಿ |
ತೂರುತ ತಲೆಗಳ ತೆಗೆದಿಟ್ಟ ಗಗನಕ್ಕೆ
ತೋರಿಸಿದರು ಸಾಹಸವನು || ೮೫ ||

ಕೋಟೆಯ ಒಳಗಣ ಕಾಟನಾಯಕನ ಮಂದಿ
ಕೋಟಿ ದಂಡಿನ ಮೇಲೆ ಹೊರಟು |
ಲೂಟಿಯ ಮಾಡಿ ತಳಿಗಳ ಕಿತ್ತು ಈಡಾಡಿ
ದಾಟಿ ಮುಂದಕೆ ಒತ್ತಿ ಕಡಿದು || ೮೬ ||

ಇತ್ತ ರಾಮಯ್ಯ ತಾನೊತ್ತಿ ಬಂದನು ಮುಂದೆ
ಒತ್ತರಿಸುತ ಮನ್ನೆಯರ |
ಸುತ್ತಲಿ ಬಲವ ಸವರುತ ಕುಡಿವುತ
ಒತ್ತರವೇನ ಪೇಳುವೆನು || ೮೭ ||

ಮುತ್ತಿಗೆ ತೆಗೆದು ಮುಂದಕೆ ಹೋಗಿ ಬಲವೆಲ್ಲ
ಒತ್ತರದಲಿ ತಾವು ಕೂಡಿ |
ಸುತ್ತಲು ಕವಿದು ಮುತ್ತಿತು ರಾಮನ ದಂಡು
ಎತ್ತ ನೋಡಲು ತೆರಹಿಲ್ಲ || ೮೮ ||

ಬರುವ ಬಲವನು ಕಂಡು ನೋಡಿದ ರಾಮಯ್ಯ
ನಡೆಸಿದ ಬೊಲ್ಲನ ಮೀಟಿ |
ತುಡುಕಿ ಹೊಕ್ಕನು ಪರಬಲದ ಗುಂಪುಗಳು
ಒಡೆಯಲಿರಿದು ಪಡೆ ಸಹಿತ || ೮೯ ||

ಗಾಯವಾದವು ಬಾದೂರಖಾನನಂಬಿನ
ಮಾಯದ ಮಳೆಯಿಂದ ತೊಯ್ದು |
ಪಾಯದಳ ಮುರಿದು ಬರುವದ ಕಂಡು ರಾ
ಮಯ್ಯ ಝೀಯೆಂದು ಬೊಲ್ಲನ ಮೀಟಿ || ೯೦ ||

ಒಂದೆ ವಾದ್ಯದಲಿ ಏರಿದ ರಾಮಯ್ಯನು
ಬಂದನು ಬಾದೂರನಿದಿರ |
ಸಂದೇಹ ಬಡುವಂಥ ಮಂದಿಯ ಸಮಜಾಯಿಸಿ
ಮುಂದಕ್ಕೆ ನೂಕಿದ ಬಲವ || ೯೧ ||

ಹೊಕ್ಕನು ಮಿಸಿಮಿಲ್ಲಖಾನನ ಹೊಡೆದನು
ರಕ್ಕಸ ಮಾದ ಕೂಡಿದನು || ೯೨ ||

ಮಿಸಿಮಿಲ್ಲಖಾನ ಹೊಕ್ಕನು ರಾಮನ ಮೇಲೆ
ಹೆಸರಾದ ದೊರೆಯೆ ನೋಡೆನುತ |
ಮಸೆದಲಗಿನ ಕತ್ತಿಯಲಿ ಬಂದು ಹೊಯ್ದನು
ದೆಸೆಗೆ ಮಾನ್ಯರ ಗಂಡನ ಮೇಲೆ || ೯೩ ||

ಹೊಡೆದ ಪೆಟ್ಟನು ತಪ್ಪಿಸಿಕೊಂಡು ರಾಮಯ್ಯ
ಜಡಿದು ನೆತ್ತಿಯ ಠೌಳಿ ಮೇಲೆ |
ಕಡಿದ ಗಾಯಕೆ ಬೀಳಲು ಆನೆ ಮಲಗಲು
ಹೊಡೆದರು ಶಬರರು ತಲೆಯ || ೯೪ ||

ಸತ್ತನೆ ಶಿವಶಿವ ಮಿಸಿಮಿಲ್ಲಖಾನನು
ಮುತ್ತಿದ ತುರಕರನೆಲ್ಲ |
ಒತ್ತಿ ಕಡಿದು ಹಿಂದಕೆ ಹಾಕಿ ರಾಮಯ್ಯ
ಮತ್ತೆ ತಿರುಗಿದನೆಡಬಲಕೆ || ೯೫ ||

ಬಿದ್ದನು ಮೊಗಲ ವಜೀರನೆನುತಲಿ ರುದ್ರ
ಗದ್ದರಿಸುತ ಹೋಗಲೇರಿ |
ಬಿದ್ದರು ರಾಮನ ಶಬರರು ರುದ್ರರಸು
ಗೆದ್ದೆವೆನುತ ಹೋಗಲೇರಿ || ೯೬ ||

ಒತ್ತಿದ ಚಾರಮರಾಯನ ಮಕ್ಕಳ
ಮುತ್ತಿಕೊಂಡನು ಹಿಂದು ಮುಂದು |
ನೆತ್ತರ ಕಾಲುವೆ ಹರಿಯಿತು ರಣದೊಳು
ಸತ್ತಿತು ರಾಮನ ಬಲವು || ೯೭ ||

ಎಡವಂಕದಲಿ ಬರುತ ಕಂಡ ಕಾಟಣ್ಣನು
ಬಿಡದೆ ಹೊಕ್ಕನು ಅವರ ಮೇಲೆ |
ಕಡಿಯೆ ರುದ್ರರಸು ಗಾಯದೊಳು ಹಿಮ್ಮೆಟ್ಟಿದ
ಒಡನೆ ಸಿಂಗನ ಕಡಿಕೊಂಡ || ೯೮ ||

ಮುರಿದೋಡಿ ಹೋಯಿತು ಮೂಡಣ ದೊರೆಗಳು
ನಡೆದರು ತಮ್ಮ ಪಟ್ಟಣಕೆ |
ತಡೆಯಿಲ್ಲದೆ ಮಂದಿ ಹತ್ತು ಸಾವಿರ ಬಿತ್ತು
ಒಡೆದು ಹೋಯಿತು ಮೊಗಲ ಪೌಜು || ೯೯ ||

ಇತ್ತ ಬಲ್ಲಾಳನು ಒತ್ತಿ ಬರಲು ರಾಮ
ಇತ್ತರದಲಿ ಮನ್ನೆಯರು |
ನೆತ್ತರ ಕಾಲುವೆ ಹರಿವಂತೆ ಕಡಿದಾಡೆ
ಸತ್ತ ಮೊಗಲನ ಸುದ್ದಿ ಕೇಳಿ || ೧೦೦ ||

ಪಡೆಯೆಲ್ಲ ಮುಳುಗಿತು ತಡೆಯದೆ ಬಲ್ಲಾಳ
ನಡೆದಲು ತನ್ನಯ ಪುರಕೆ |

ಬಿಡದೆ ಬೆನ್ಹತ್ತಿ ರಾಮನ ಮನ್ನೆಯರೆಲ್ಲ
ಕಡಿದು ಗದುಮಿತು ಬೇಡಪಡೆಯು || ೧೦೧ ||

ಬಾದೂರಖಾನನು ಕಾಟಣ್ಣನ ಮನ್ನೆಯರು
ಕಾದಿ ಬಂದರು ರಾಮನೆಡೆಗೆ || ೧೦೨ ||

ಒಡೆಯನ ಕಳಕೊಂಡು ಮೊಗಲರು ಹೋದರು
ತಡೆಯದೆ ತಮ್ಮ ಪುರಕಾಗಿ |
ಜಡದೇಹಿ ಗಾಯದಿ ರುದ್ರರಸು [ಸಿಂ]ಗಯ್ಯ
ಕೆಡೆ ಮುರಿದೋಡಿದರವರು || ೧೦೩ ||

ಸುತ್ತ ಮೂರ್ಹರುದಾರಿ ಹೆಣಗಳು ಬಿದ್ದಿತು
ಒತ್ತು ಕೂಗುತ ಬೊಬ್ಬೆಯಿಡುತ |
ಕಾತರತನದಿಂದ ಉಂಡು ದಣಿವು ರಾಮ
ನಾಥನು ಕೊಂಡಾಡುತಿರಲು || ೧೦೪ ||

ಮರುಳು ಭೂತ ಹಿಂಡು ಮರೆಯದೆ ರಾಮನ
ಧರಣೀಶನಹುದೊ ರಾಮಯ್ಯ |
ಸ್ಥಿರವಾಗಿ ಬಾಳು ಅರಿಗಳ ಕೊಂದು ನಮಗಿನ್ನು
ಧರೆಯೊಳು ತೃಪ್ತಿಯ ಮಾಡಿ || ೧೦೫ ||

ಹಿಡಿಸಿದ ಧರ್ಮಗಹಳೆ ರಾಮಯ್ಯನು
ನಡೆಯೆಂದು ಮುಂದಕ್ಕೆ ದಂಡ |
ಬಿಡದೆ ಬೆನ್ಹತ್ತಿ ಹಾನ್ಗಲ್ಲ ಸುತ್ತಮುತ್ತಲಿ
ಬಿಡಿಸಿ ಇಳಿದಾನಲ್ಲಿ ದಂಡ || ೧೦೬ ||

ಬೆದರಿ ಬಂದೂರ ಹೊಹೊಕ್ಕನು ಬಲ್ಲಾಳರಾಯ
ರಾಮನ ಕತ್ತಿಗೆ ಅಂಜಿ |
ಬೆದರಿತು ಪಡೆಯೆಲ್ಲ ಮುಳುಗಿಹೋಯಿತು ಕೆಲವು
ಹದನೇನೊ ನರಸಿಂಗ ಮಂತ್ರಿ || ೧೦೭ ||

ಇಂತಪ್ಪ ರಣಮಯ ನೋಡಲಾರದೆ ಸೂ[ರ್ಯ]
ಅಂತ್ಯವಾದನು ಪಡುಗಡಲ || ೧೦೮ ||

ಬಂದನು ನಮ್ಮ ಪಟ್ಟಣಕೆ ಮುತ್ತಿಗೆ ರಾಮ
ಮಂದೆಲ್ಲ ಸತ್ತು ರಣದೊಳಗೆ |
ಹಿಂದಾದೆವವನೊಳು ಓಡಿಬಂದೆವು ನಾವು
ಕುಂದ ಹೊತ್ತೆವು ಮಂತ್ರೀಶ || ೧೦೯ ||

ಮುಂದಣ ಆಲೋಚನೆ ಹೇಳಿ ಮಂತ್ರೀಶ
ಎಂದು ವೀರಬಲ್ಲಾಳ |
ಇಂದಿಗೆ ಅವನೊಳು ಒಂದಾಗುವುದು ಲೇಸು
ಹಿಂದೆ ನೋಡುವ ರಾಯಕಾರ್ಯ || ೧೧೦ ||

ನರಸಿಂಗರಾಯ ಮಂತ್ರಿ ಹೊರಟುಬಂದನು
ಕರೆಸಿದನವರ ಮನ್ನೆಯರ |
ಬರಮಾಡಿಕೊಂಡು ಕೇಳಿದರವನ ಸುದ್ದಿಯ
ತೆರನೇನು ಮುಂದೆ ಕಾದುವರೆ || ೧೧೧ ||

ಕಡೆಯಲಿ ಮುರಿದೋಡಿ ಬಂದೆವು ಮಂತ್ರೀಶ
ಪಡೆಯೆಲ್ಲ ಸುತ್ತು ಗಾಯಗಳು || ೧೧೨ ||

[ಮಂ]ದೆಲ್ಲ ಅಂದ ಮಾತನು ಕೇಳಿ ಮಂತ್ರೀಶ
ನೊಂದಾಗುವುದು ಲೇಸೆಂದ |
ಮುಂದೆ ನೋಡಿಕೊಂಬ ರಾಜಕಾರ್ಯವನೆಂದು
ಮಂದಿಯ ಸಮಜಾಯ್ಸಿಕೊಂಡ || ೧೧೩ ||

ಬಲ್ಲಾಳರಾಯ ಕಾಗದ ಬರೆಸಿ ಕಳುಹಿದ
ಕಳುಹಿದ ಕೊಡುವೆವು ನಾವು ಕಪ್ಪವನು |
ಕಾದಾಕೆ ಶಕ್ತಿಯು ನಮಗಿಲ್ಲ ರಾಮಯ್ಯ
ಮಂದಿ ಮಾರ್ಬಲವೆಲ್ಲ ಹೋಯ್ತು || ೧೧೪ ||

ಎಂದು ಕಾಗದವ ಕಳುಹಿದನು ಬಲ್ಲಾಳರಾಯ
ನೊಂದು ಚರರು ತಂದುಕೊಡಲು |
ತಂದಂಥ ಕಾಗದವ ನೋಡಿಕೊಂಡು ರಾಮಯ್ಯ
ಹುಸಿನಗೆಗಳ ನಗುತಿರ್ದ || ೧೧೫ ||

ಒಂದು ಬಿಂದಿಗೆ ಹೊನ್ನ ಪಚ್ಚೆವರ್ಣದ ಶ್ಯಾಲೆ
ತಂದುಕೊಂಡ ಹೇಳೊ ಗುಜ್ಜಲೋಬ |
ಮುಂದೆರಡು ಹಿಡಿದೇಜಿ ತಂದುಕೊಟ್ಟಲ್ಲದೆ
ಒಂದಾಗುವುದು ಇಲ್ಲವೆಂದ || ೧೧೬ ||

ಎಂದ ಮಾತನು ಕೇಳಿ ಮುಂದಾಲ ಬೊಮ್ಮಯ್ಯ
ಹಿಂದಕೆ ಬಂದು ಹೇಳಿದನು || ೧೧೭ ||

ಕೇಳಿದ [ನರ]ಸಿಂಗರಾಯನು ಬಂದು
ಹೇಳಿದ ರಾಯನ ಕೂಡೆ |

ಹೇಳುವುದೇನು ಕೇಳಿದುದ ಕೊಟ್ಟು ಕಳುಹೊ
ಕೋಳುಹೋಯಿತು ದೊರೆತನವು || ೧೧೮ ||

ಪಚ್ಚೆದ ಸೀರೆಯು [ಬಿಂದಿ]ಗೆ ಹೊನ್ನು ಹಿಡಿದೇಜಿ
ರಚ್ಚೆ ಗಿಕ್ಕದೆ ತಂದುಕೊಟ್ಟ |
ಮೆಚ್ಚಿಸಿ ರಾಂಗೆ ಮುತ್ತಿನ ತುರಾಯವ
ಎಚ್ಚತ್ತು ಕಳುಹಿದ ಅರಸ || ೧೧೯ ||

ಆ ಮಹಾ ಮೊಗಲ ವಜೀರರ ಕೆಡಹಿದ
ನೇಮದಿ ಕೊಂದ ಖಾನರನು || ೧೨೦ ||

ಓರುಗಲ್ಲರಸಗೆ ಬರುಗಾಯವಾಯಿತು
ಜಾರಿಹೋದನು ಸಿಂಗನೊಡನೆ |
ಧಾರುಣಿಯೆಲ್ಲ ರಕ್ತದ ಮಳೆಯಾಯಿತು
ಸೂರೆಯಾಯಿತು ರಣರಂಗ || ೧೨೧ ||

ಬಾದೂರಖಾನಗೆ ಬಲು ಗಾಯವಾಯಿತು
ಜಾರಿಹೋದನು ಸಿಂಗನೊಡನೆ |
ಧಾರಿಣಿಯಲ್ಲಿ ಅಬ್ದೂಲಖಾನನು ಬಿದ್ದ ಹೊಳಕೆಯ
ಬಂಟರು ಮುಳುಗಿಹೋಯಿತು ರಾಯ
ಎಣಿಕೆಯನೇನ ಪೇಳುವೆನು || ೧೨೨ ||

ಭಾವ ಸಂಗಮದೇವ ದೇವಿಸೆಟ್ಟಿಯ ಲಿಂಗ
ಕೋವಿದ ಕೊಟಗರ ದ್ಯಾವ |
ಜೀವಕೆ ಭಯವಿಲ್ಲ ಹುಸಿಗಾಯವಾದವು
ದೇವರ ದಯವುಂಟು ನಮಗೆ || ೧೨೩ ||

ಪಟ್ಟಣವನು ಶೃಂಗರಿಸು ಗುಡಿ ತೋರಣ
ಕಟ್ಟಿಸೊ ಸಾಲು [ಬು]ರುಜಗಳ |
ಪಟ್ಟದರಸು ರಾಮ ಬರುವಂಥ ದಾರಿಗೆ
ದೃಷ್ಟಿ ನಿವಾಳಿಯ ತರಿಸೊ || ೧೨೪ ||

ಪೊಡವೀಶ ಕಂಪಿಲ ಹೊರಟುಬಂದನು ಬೇಗ
ಹಿಡಿದವು ಜೋಡು ಕರ್ಣೆಗಳು |
ತಂದೆದ್ದು ಬರುವ ರಭಸವ ಕೇಳಿ ರಾಮಯ್ಯ
ನಿಂದನು ತಾನೆದ್ದು ಬೇಗ || ೧೨೫ ||

ಇರದೆದ್ದು ಪೋಗಿ ತಂದೆಯ ಪಾದಕೆರಗಿದ
ಒದಗಿ ಕೈಪಿಡಿದೆತ್ತಿ ಮಗನ || ೧೧೬ ||

ರಾಮ ಕಂಪಿಲ[ರೆ]ದ್ದು ಬಂದರು ಹಂಪೆಯ
ಸ್ವಾಮಿ ಪೊಂಪಾಪತಿಯೆಡೆಗೆ |
ಆ ಮಹಾ ವಿರೂಪಾಕ್ಷಗಡ್ಡಬಿದ್ದರು ಆಗ
ಕ್ಷೇಮವ ಕೇಳುತಲವರು || ೧೧೭ ||

ಹಿಡಿಹೊನ್ನ ಕಾಣಿಕೆಗಳನಿಟ್ಟು ಸ್ವಾಮಿಗೆ
ಪೊಡವೀಶರಡ್ಡಬಿದ್ದರಾಗ |
ಒಡನೆದ್ದು ಗಂಧ ಪ್ರಸಾದವ ಕೈಕೊಂಡು
ನಡೆದರು ಕುಮ್ಮಟಕಾಗಿ || ೧೧೮ ||

ತಂದೆ ಮಕ್ಕಳು ಕೂಡಿ ಒಂದಾಗಿ ಬಂದರು
ಮಂದಿ ಮಕ್ಕಳ ಕೂಡಿಕೊಂಡು || ೧೧೯ ||

ಒಡನೆ ಬೈಚಪ್ಪನ ಕೂಡೆ ಮಾತಾಡುತ
ನಡೆದರು ರಾಮೇಶನೆಡೆಗೆ |
ಹಿಡಿಹೊನ್ನ ಕಾಣೀಕೆನಿಕ್ಕಿ ರಾಮೇಶಗೆ
ಪೊಡವೀಶ ತಾನಡ್ಡಬಿದ್ದ || ೧೨೦ ||

ಗಂಧ ಪ್ರಸಾದವ ಕೈಕೊಂಡು ರಾಮಯ್ಯ
ಬಂದನು ಊರ ಬಾಗಿಲಿಗೆ |
ನಿಂದಲ್ಲಿ ಕುರಿಗಳ ಹೊಯ್ಸಿ ನಿವಾಳಿಯ
ಮುಂದಕ್ಕೆ ನಡೆದ ರಾಮಯ್ಯ || ೧೨೧ ||

ಮಂಗಳ ನೀಲನ ಏರಿದ ರಾಮಯ್ಯ
ಶೃಂಗಾರ ಬಾಜಾರದೊಳಗೆ |
ಮಗ ಬರುವದ ಕಂಡು ಹರಿಯಲದೇವಿಯು
ಅಗಣಿತ ಹೆಮ್ಮಕ್ಕಳೊಡನೆ || ೧೨೨ ||

ಮಿಗೆ ಹರುಷದೊಳೊಂದು ಮುತ್ತಿನಾರತಿ ಎತ್ತಿ
ಬಿಗಿಯಪ್ಪಿ ಮಗನ ಮುಂಡಾಡೆ |
ಎರಡು ಪಾದಕ್ಕೆ ಎರಗಲು ಹರಿಯಮ್ಮ
ಹರಸುತ ಕರವಿಡಿದೆತ್ತಿ || ೧೨೩ ||

ತಂದೆ ಮಕ್ಕಳು ಕೂಡಿ ಬಂದರು ಸದರಿಗೆ
ಮಂದಿಮಕ್ಕಳ ಕೂಡಿಕೊಂಡು |

ನಿಲ್ಲದೆಲ್ಲರನು ಮನ್ನಿಸಿ ಅಪ್ಪಣೆಕೊಟ್ಟು
ಬಂದನು ತನ್ನರಮನೆಗೆ || ೧೩೪ ||

ಇದು ಪರನಾರಿ ಸೋದರ ರಾಮನಾಥನ
ಪದಕೃತಿಯೊಳಗೊಂದು ಕಥೆಯ |
ಸದೆದು ಬಲ್ಲಾಳನ ಕೂಡೆ ಕಪ್ಪವ ತಂದು
ಒದಗಿ ಮಂತ್ರಿಯೊಳು ತಾ ಕೊಟ್ಟ || ೧೩೫ ||

ತಂದೆಗೊಪ್ಪಿಸು ಎಂದು [ಹಿಂ]ದುವ ರಾಮಯ್ಯ
ಮಂದಿರದೊಳು ಸುಖವಿರಲು |
ತಂದು ಕಂಪಿಲನ ಮುಂದಿಟ್ಟ ಬೈಚಪ್ಪನು
ಸಂಧಿ ಅಲ್ಲಿಗೆ ಪೂರಾಯ್ತು || ೧೩೬ ||

**ಅಂತು ಸಂಧಿ ೧೩ಕ್ಕಂ ಪದನು ೧೩೫೫ಕ್ಕಂ ಮಂಗಳ ಮಹಾಶ್ರೀ**

## ಸಂಧಿ ೧೪ - ತುಂಗಭದ್ರೆಯಲ್ಲಿ ನೀರಾಟ

ಶ್ರೀ ಗಿರಿಜಾ[ಸ್ಯಾಂಬುಜ ದಿನ]ನಾಯಕ
ಭೋಗಿಭೂಷಣ ಭಾಳನೇತ್ರ |
ಭಾಗೀರಥಿಧೃ ಭವರೋಗವೈದ್ಯನೆ
ನಾಗ [ಕುಂಡಲ]ಶರಣೆಂಬೆ || ೧ ||

ರಾಮನ ನೆನೆ ಕಂಡ್ಯಾ ಮನವೆ ಜಟ್ಟಂಗಿಯ
ರಾಮನ ನೆ ಕಂಡ್ಯಾ ತನುವೆ |
ರಾಮರಾಮಾ ಎಂಬ ನಾಮವ ನೆನೆದರೆ
ಕಾಮಿತ ಫಲವೀವ ರಾಮು || ೨ ||

ಸಕ್ಕರೆ ಸವಿದಂತೆ ಮಧುರ ಮಾವಿನಹಣ್ಣು
ಉಕ್ಕುವ ತನಿಬೆಲ್ಲದಂತೆ |
ಮಕ್ಕಳ ಮಾಣಿಕದಂತೆ ರಾಮನ ಕೃತಿ
ಸತ್ಕವಿಗಳು ಲಾಲಿಪುದು || ೩ ||

ಮುಂದಕ್ಕೆ ಬೇಂಟೆಯ ಹೋಗದೆ ರಾಯನ ಕೂಡೆ
ಹಿಂದಕ್ಕೆ ತಿರುಗಿ ರಾಮಯ್ಯ |
ಬಂದನು ಊರುಳಗುಳ್ಳ ಹರುಗೋಲನು
ಒಂದುಳಿಯದೆ ತರಿಸಿದನು || ೪ ||

ಕಂಪಿಲರಾಯನ ಮಗನು ರಾಮಯ್ಯನು
ಹಂಪೆಯ ಹೊಳೆಗಾಗಿ ಬಂದ |
ಹಂಪರಾಜನು ಕಂಪರಾಜನ ಕೊಂಡೆಯರಾಜ
ಸಂಪಿಗೆರೆಯ ಸಿಂಗರಾಜ || ೫ ||

ಹಡಪದ ಬೊಲ್ಲುಗ ಕಡುಪ್ರಿಯ ಗಂಗಯ್ಯ
ಒಡಹುಟ್ಟಿದವನು ಕಾಟಣ್ಣ |
ತಡೆಯದೆ ಮಂತ್ರಿ ಬೈಚಪ್ಪನ ಮಕ್ಕಳು
ಒಡನೆ ನೀರಾಟಕೈದಿದರು || ೬ ||

ಮಾವ ಮಂಚಣ್ಣನ ಮಕ್ಕಳ ಕರೆಸಿದ
ಭಾವ ಸಂಗಮದೇವನವರ |
ಕಾವಲ ಕಾಟನಾಯಕನ ಮಕ್ಕಳ
ದೇವಿಸೆಟ್ಟಿಯ ಲಿಂಗಣ್ಣ || ೭ ||

ಚಾರಮರಾಯನ ಮಕ್ಕಳು ಬಂದರು
ಸಾರಂಗ ಗೊಲ್ಲರ ಗುಜ್ಜಯ್ಯ |
ಭೋರನೆ ಮನ್ನೆರೆಲ್ಲರ ಕೂಡಿಕೊಂಡಾಗ
ನೀರಾಟಕೆ ತೆರಳಿದರು || ೮ ||

ತಂದು ಹರುಗೋಲನು ಹಾಕಿದರು ಹೊಳೆಯೊಳು
ಬಂದು ಕುಳಿತ ಚೆನ್ನರಾಮ |
ಚೆಂದದಿ ಕಾಟಣ್ಣನ ಪರಿವಾರವು
ಒಂದೆಸೆಯಲಿ ಏರಿದರು || ೯ ||

ಎಲ್ಲರು ಒಂದೊಂದು ಹರುಗೋಲನೇರುತ
ನಿಲ್ಲದೆ ನೀರ ಚೆಲ್ಲುತಲಿ |
ಬಲ್ಲಿದ ರಾಮನ ಹರುಗೋಲಿನ ಮೇಲೆ
ಎಲ್ಲರು ತುಡುಕಿ ನೂಕಿದರು || ೧೦ ||

ಒತ್ತಿ ಬಂದರು ಕಾಟಣ್ಣನ ಪರಿವಾರ
ಮೊತ್ತದ ಹರುಗೋಲು ನೂರು |
ಸುತ್ತಗಟ್ಟಿಕೊಂಡು ರಾಮನಾಥನ ಮೇಲೆ
ಎತ್ತಿ ನೀರುಗಳ ಚೆಲ್ಲಿದರು || ೧೧ ||

ಚೆನ್ನದಂಡೆಯು ಬೆಳ್ಳಿಯಂತೆ ಜೇರ್ಕೊಳವಿಯು
ಉನ್ನತ ಮುತ್ತಿನಂಡೆಗಳು |

ಚೆನ್ನಿಗ ರಾಮಯ್ಯ ನೀರ ಮೊಗೆದು ತಂದು
ಮನ್ನೀರ ಮೇಲೆ ಚೆಲ್ಲಿದನು || ೧೨ ||

ಒತ್ತಿ ಬಂದನು ಭಾವಸಂಗಮದೇವನು
ಮುತ್ತಿನ ಬಿಳಿಕೋಲು ಪಿಡಿದು |
ಮತ್ತೆ ರಾಮಯ್ಯನ ಮುತ್ತಿಕೊಂಡೆಲ್ಲರು
ತಂತ್ರ ಭೀತಿಯನು ಮಾಡುತಲಿ || ೧೩ ||

ಭಾವನ ಮೇಲೆ ನೂಕಿದ ಹರುಗೋಲನು
ಸಾವಿರ ಬೆಳ್ಳಿ ಕೊಳವಿ ಸಹಿತ |
ಕೋವಿದ ರಾಮನ ನೀರಿಲಿ ಎಸೆವಂಥ
ಠೀವಿಯನೇನ ಬಣ್ಣಿಸುವೆ || ೧೪ ||

ತಪ್ಪನೆ ತೊಯ್ಸಿ ನೀರಿಲಿ ರಮಯ್ಯನ
ಇಪ್ಪತ್ತು ಹರುಗೋಲಿನಿಂದ |
ತಪ್ಪದೆ ಮಂತ್ರಿ ಬೈಚಪ್ಪನ ಮಕ್ಕಳು
ಎಪ್ಪತ್ತು ಹರುಗೋಲಿನಿಂದ || ೧೫ ||

ಎಲ್ಲರ ನೂಕಿ ಹೊಡೆವುತಲಿ ರಾಮಯ್ಯನು
ಚೆಲ್ಲಿದ ಮಳೆ ಬಂದ ತೆರದಿ |
ನಿಲ್ಲದೋಡಿದರು ಹಿಂದಕೆ ಹಿಮ್ಮೆಟ್ಟಲು
ಮೆಲ್ಲನೆ ಬಂದ ಕಾಟಣ್ಣ || ೧೬ ||

ಸುತ್ತಿಕೊಂಡನು ಬಂದು ಕಾಟಣ್ಣನೊಳಹೊಕ್ಕು
ಮೊತ್ತದಿ ಬೀಗರ ಮೇಲೆ |
ಎತ್ತ ನೋಡಲು [ಹುಬ್ಬಿ]ಮಳೆ ಬಂದ ತೆರನಂತೆ
ತೆರನಂತೆ ಕತ್ತಲಾಯಿತು ನೀರಾಟ || ೧೭ ||

ಆರೇರ ಚಾರಮರಾಯನ ಮಕ್ಕಳು
ನೂರಾರು ಹರುಗೋಲ ನೂಕಿ |
ಧೀರ ರಾಮಯ್ಯ ಕಾಟಣ್ಣನ ಮೇಲೆಸೆವುತ
ಏರಿ ಬಂದರು ಸುತ್ತಮುತ್ತ || ೧೮ ||

ಮಲೆನಾಡ ಸೋನೆ ಸುರಿವ ತೆರನಂದದಿ
ಮುಳುಗಿ ತೇಲುತಲಿ ಕಾಟಣ್ಣ |
ಬಳಲುವ ಅಣ್ಣನ ನೋಡಿ ರಾಮಯ್ಯನು
ಸಲೆ ತನ್ನ ಹರುಗೋಲ ನೂಕೆ || ೧೯ ||

ಒಂದೆ ವಾದ್ಯದಲಿ ಏರಿದ ರಾಮಯ್ಯನು
ಬಂದಡ್ಡಗಟ್ಟಿ ಎಲ್ಲರನು |
ಹಿಂದುಮುಂದನೆ ಮಾಡಿ ನೀರಿಲಿ ಎಲ್ಲರ
ಹಿಂದಕೆ ಹಾಕಿದ ನಗುತ || ೧೦ ||

ಮಂಚಣ್ಣನ ಮಕ್ಕಳೇರಿ ಬಂದರು ಬೇಗ
ಹೊಂಚುತ ರಾಮನ ಮೇಲೆ |
ಅಂಚೆಯ ಕಾದಿರ್ದ ಹಂಪರಾಜನು ಬಂದು
ಮುಂಚಡ್ಡಗಟ್ಟಿ ನೂಕಿದನು || ೧೧ ||

ತಣ್ಣನ ನೀರೊಳು ನೀರಾಟವನಾಡಿ
ದಣ್ಣನೆ ದಣಿಯಲಾಕ್ಷಣದಿ |
ಅಣ್ಣ ಕಾಟಣ್ಣನು ಮನ್ನೆಯರು ಸಹವಾಗಿ ಮು
ಕ್ಕ[ಣ್ಣ] ವಿರೂಪಾಕ್ಷನ ಗುಡಿಗೆ || ೧೨ ||

[ಬಂ]ದು ಕಾಣಿಕೆಯಿಕ್ಕಿ ವಿರೂಪಾಕ್ಷಲಿಂಗಗೆ
ಚೆಂದಚೆಂದದಲಿ ಮನ್ನೆಯರು |
ಗಂಧ ಪ್ರಸಾದವ ಕೈಕೊಂಡು ಬಂದರು
ಅಂದು ಹರುಷದಲಿ ಮನ್ನೆಯರು || ೧೩ ||

ಇಂದುಧರಗೆ ವಂದನೆ ಮಾಡಿ ರಾಮಯ್ಯ
ಬಂದನು ತನ್ನ ಮಂಟಪಕೆ |
ನಡೆದು ಬಂದನು ಅರಮನೆಗಾಗಿ ರಾಮಯ್ಯ
ಒಡನೆ ಪಾಠಕರು ಉಗ್ಗಡಿಸೆ || ೧೪ ||

ಬಂದ ಮಾನ್ಯರಿಗೆಲ್ಲ ಒಂದು ವೀಳ್ಯವ ಕೊಟ್ಟು
ನಿಂದು ಎಲ್ಲರ ಕಳುಹಿದನು |
ಚೆಂದದಿ ಕಾಟಣ್ಣನ ಹೋಗಹೇಳಿದ
ನಂದು ಹೊಕ್ಕನು ಅರಮನೆಯ || ೧೫ ||

ಇದು ಪರನಾರಿ ಸೋದರ ರಾಮನಾಥನ
ಪದಕೃತಿಯೊಳಗೊಂದು ಪದನು |
ಚದುರ ರಾಮಯ್ಯ ನೀರಾಟವಾಡಿದ
ಪದಗಳು ಮುಗಿಯೆ ಸಂಪೂರ್ಣ || ೧೬ |

# ಸಂಧಿ ೧೫ - ಹರಿಯಲದೇವಿಯಲ್ಲಿಗೆ ಚೆಂಡು ಬೇಡಲು ಹೋದುದು

ಶ್ರೀ ಗಿರಿಜಾ [ಸ್ಯಾಂಬುಜ ದಿನ]ನಾಯಕ
ಭೋಗಿಭೂಷಣ ಭಾಳನೇತ್ರ |
ಭಾಗೀರಥಿಧರ ಭವರೋಗವೈದ್ಯನೆ
ನಾಗ[ಕುಂಡಲ]ಶರಣೆಂಬೆ || ೧ ||

ರಾಮನ ನೆನೆ ಕಂಡ್ಯಾ ಮನವೆ ಜಟ್ಟಂಗಿಯ
ರಾಮನ ನೆನೆ ಕಂಡ್ಯಾ ತನುವೆ |
ರಾಮರಾಮಾ ಎಂಬ ನಾಮವ ನೆನೆದರೆ
ಕಾಮಿತಫಲವೀವ ರಾಮ || ೨ ||

ಸಕ್ಕರೆ ಸವಿದಂತೆ ಮಧುರ ಮಾವಿನಹಣ್ಣು
ಉಕ್ಕುವ ತನಿರಸದಂತೆ |
ಮಕ್ಕಳ ಮಾಣಿಕದಂತೆ ರಾಮನ ಕೃತಿ
ಸತ್ಕವಿಗಳು ಲಾಲಿಪುದು || ೩ ||

ತನ್ನರಮನೆಯಿಂದ ಬಂದನು ಕಾಟಣ್ಣ
ಚೆನ್ನ ರಾಮುಗನಿದ್ದೆಡೆಗೆ |
ಸಂತೋಷದಿಂದ ರಾಮಯ್ಯನಿದಿರಿನಲ್ಲಿ
ಬಿನ್ನೈಸಿದನಿಂತೆಂದು || ೪ ||

ಅರಿಯೆದೆ ಬಲ್ಲಾಳ [ಮೂರು]ರಾಯರಗಂಡ
ಪರಬಲ ನಿರ್ಧೂಮಧಾಮ |
ಎರಡೆಂಟು ದಿಕ್ಕಿಗೆ ವಾರ್ತೆಯಾಗಿಹುದಯ್ಯ
ಹರಿಯಮ್ಮನೊಶದಲಿದೆ ಚೆಂಡು || ೫ ||

ಅದ ತರಬೇಕು ಚೆನ್ನಿಗರಾಮ ನೀನೆಂದು
ಚದುರ ಕಾಟಣ್ಣ ತಾ ನುಡಿದ || ೬ ||

ಹೊತ್ತುಹೋಗದು ಚೆಂಡನಾಡಬೇಕೆನುತಲಿ
ಮತ್ತೆ ಆಯತವಾದ ರಾಮ |
ಮುತ್ತಿನ ವಾಲು ಚೆಮ್ಮುರಿ ಸುತ್ತಿ ರಾಮಯ್ಯ
ಮತ್ತಿಟ್ಟ ಸಣ್ಣ ನಾಮವನು || ೭ ||

ನಿಲುವುಗನ್ನಡಿಯ ನೆಳಲ ನೋಡಿ ರಾಮಯ್ಯ
ರುಳಿಯ ಪದಕವನಿಟ್ಟನೊಲಿದು |

ಸುಲಲಿತವಾದ ಕಂಠಮಾಲೆಯ ಧರಿಸಿದ
ಕಲಿಗಳರಸ ಚೆನ್ನರಾಮ || ೮ ||

ಸೂರ್ಯನ ಕಿರಣಕೆ ಸರಿಯಾದ ಪದಕವ
ವೀರ ರಾಮುಗನಿಟ್ಟುಕೊಂಡು || ೯ ||

ಎಳೆ ಮಿಂಚು ಹೊಳೆವಂತೆ ನೀಲನಾಮವನಿಟ್ಟ
ಕಳೆಯು ಏರಿದ ಚಂದ್ರನಂತೆ |
ಕಳಕಳಿಸುವ ಮುಖಕಾಂತಿ ರಂಜಿಸುತಿರೆ
ಬಲವಂತ ರಾಮನೊಪ್ಪಿದನು || ೧೦ ||

ಮೊರೆಯ ಹೊಕ್ಕವರ ಕೊಡುವ ರಾಯನ ಗಂಡ
ಧರೆಯೊಳು ನೇಮಿಯಮಿಂಡ |
ಮೊತ್ತದ ಖಾನಖಾನ ಮಲುಕರಗಂಡ
ಮುತ್ತಿನ ಖಡೆಯವನಿಟ್ಟ || ೧೧ ||

ಇನ್ನು ಮುನ್ನಿನ ರಾಮದೇವ ತಾನಲ್ಲದೆ
ಚೆನ್ನ ರಾಮಗೆ ಸರಿಯಿಲ್ಲ |
ಭಿನ್ನವಿಲ್ಲದೆ ಪರರಾಯರಗಂಡನೆಂದೆಂಬ
ರನ್ನದ ಖಡೆಯವನಿಟ್ಟ || ೧೨ ||

ಮಾಳವ ರಾಯರ ಗಂಡನೆಂದೆನಿಸುವ
ನೀಲಕಂಕಣ ರಾಮನಿಟ್ಟ |
ಸಾಳುವ ರಾಯರ ಗಂಡನೆಂಬವದೊಂದು
ತೋಳಬಾಪುರಿನಿಟ್ಟ ರಾಮ || ೧೩ ||

ಕನ್ನೋಜಿರಾಯರ ಗಂಡನೆಂದೆನಿಸುವ
ಉಂಗುರವನು ಇಟ್ಟ ರಾಮ |
ಮುಂಗುಲಿರಾಯರ ಗಂಡನೆಂಬವದೊಂದು
ಮುಂಗೈಯ್ಯ ಸರಪಳಿಯನಿಟ್ಟ || ೧೪ ||

ಪಡುವಲರಾಯರ ಗಂಡನೆಂದೆನಿಸುವ
ಕಡುಕು ತೊಂಗಲನಿಟ್ಟ ರಾಮ |
ಬಡಗಲ ರಾಯರ ಗಂಡನೆಂಬುವದೊಂದು
ಕಾಲಪೆಂಡೆವನಿಟ್ಟ ರಾಮ || ೧೫ ||

ಕೊಟ್ಟ ಭಾಷೆಗೆ ತಪ್ಪುವ ರಾಯರ ಗಂಡ
ದಿಟ್ಟ ರಾಮುಗ ಕರದಿಂದ |

ದೃಢಗಲಿ ನೇಮಿಯ ಗಂಡನೆಂಬುವದೊಂದು
ಎಡದ ಪಾದದ ಬೊಂಬೆ ಮೆರೆಯೆ || ೧೬ ||

ದಿಕ್ಕು ದೇಶದೊಳುಳ್ಳ ಮೊಗಲ ದೇವಾಂಗವ
ಬಿಗಿದುಟ್ಟ ಮಲ್ಲಗಾಸೆಯನು || ೧೭ ||

ಇತ್ತ ರಾಮುಗ ಶೃಂಗಾರವಾಗಲು ಕಂಡು
ಮತ್ತೆ ರಾಮಲದೇವಿ ನೋಡಿ |
ಮುತ್ತಿನಾರತಿಯ ರಚಿಸಿ ತಂದಳು ಬೇಗ
ಎತ್ತಿ ಚಾಂಗುರೆ ಭಲನೆರಲು || ೧೮ ||

ಸಾರಿದವರ ಕಾಯ್ವ ಮೀರದವರ ಕೊಲ್ವ
ಒರುಗಲ್ಲಿಗೆ ಕೋಳಹಳ |
ವೀರ ಕುಮಾರ ರಾಮಗೆ ಸರಿಯಿಲ್ಲೆಂದು
ಚೀರುವ ಕಹಳೆ ಕೂಗಿದವು || ೧೯ ||

ಹುಳಿಯೇರ ಮಾರಿಗೊಂಡ[ನ ಗಂಡ]ನೆಂದೆಂಬ
ಭಾರಿ ಪದಕವನಿಟ್ಟ ರಾಮ |
ಬಲ್ಲಾಳ ರಾಯರ ಗಂಡನೆಂಬ … ಮುಂತಿನ
ಕಾಲಪೆಂಡೆವನಿಟ್ಟ ರಾಮ || ೨೦ ||

ಪಟ್ಟಸಾಲಿಗಾಗಿ ಬಂದನು ರಾಮಯ್ಯ
ಕಟ್ಟಿಗೆಕಾರರ ಕರೆಸಿ |
ಪಟ್ಟಣದೊಳಗುಳ್ಳ ಮಂತ್ರಿ ಮನ್ನೆಯರನು
ತೊಟ್ಟು ಶೃಂಗಾರವಾಗ ಹೇಳೋ || ೨೧ ||

ಎಂದ ಮಾತನು ಕೇಳಿ ಕಟ್ಟಿಗೆಕಾರರು
ಬಂದರು ಕೇರಿಕೇರಿಯಲಿ |
ಮಂದಿಯ ಹೊರಡ ಹೇಳಿದ ರಾಮನಾಥನು
ಇಂದು ಚಂಡಾಟವಾಡುವರೆ || ೨೨ ||

ಗಮ್ಮನೆ ಆ ಮಾತ ಕೇಳುತ ಕೆಲಬರು
ಉಮ್ಮಾಯದೊಳು ಶೃಂಗರಿಸಿ || ೨೩ ||

ಒತ್ತಿ ಬಂದರು ಮತ್ತೆ ರಾಮಗೆ ಬಿನ್ನೈಸ
ಲಿತ್ತನೆಲ್ಲರಿಗೆ ವೀಳ್ಯವನು |
ಇತ್ತ ಮನ್ನೆಯರನು ಕೂಡಿಕೊಳ್ಳುತ ರಾಮ
ಹೆತ್ತ ತಾಯರಮನೆಗಾಗಿ || ೨೪ ||

ಮುತ್ತಿನಂದಣವೇರಿ ಹೊರಟನು ರಾಮಯ್ಯ
ಅರ್ತಿಲಿ ಚೆಂಡ ಬೇಡುವರೆ || ೧೫ ||

ಐವರು ಮನ್ನೆಯರು ಸಹವಾಗಿ ಬಂದನು
ಕೈಯ್ಯ ಮುಗಿದು ಹರಿಯಮ್ಮಗೆ |
ಹುಯ್ಯಲ ಲೆಗ್ಗೆಯ ಕಲಿಯಬೇಕೆನುತಲಿ
ಒಯ್ಯನೆ ಬಿನ್ನೈಸಿದನು || ೧೬ ||

ಬಂದ ಮಗನ ನೋಡಿ ಒಂದಾರು ಭುಜವಾಗಿ
ಗಂಧ ಪರಿಮಳವನು ಕೊಡಿಸಿ |
ಚಂದ್ರನ ಕಳೆಯ ರಾಮ ಕೋ ಎನುತಲಿ
ತಂದು ವಿಳ್ಯವ ಕೊಟ್ಟಳಾಗ || ೧೭ ||

ಎಲ್ಲಿಗೆ ಪ್ರಯಾಣವಿದೇಕೆ ಶೃಂಗರವಾದೆ
ಸೊಲ್ಲಿಸೆನ್ನೊಡನೆ ರಾಮುಗನೆ |
ಗಲ್ಲವ ಪಿಡಿದು ಮುದ್ದಿಸಿ ಹರಿಯಮ್ಮನು
ನಿಲ್ಲದೆ ಕೇಳಿದಳು ಮಗನ || ೧೮ ||

ಹೆತ್ತತಾಯೆ ಕೇಳು ಹಂಪೆಯ ಹೊಳೆಯಲ್ಲಿ
ಅತ್ತ ಮಾನ್ಯರ ಕೂಡಿಕೊಂಡು |
ಮತ್ತೆ ನೀರಾಟವಾಡಿ ಬಳಲಿ ಬಂದೆ
ಹೊತ್ತುಹೋಗದು ಕಾಣಮ್ಮ || ೧೯ ||

ಲೆತ್ತ ಪಗಡೆ ಜೂಜನಾಡಿದೆವಮ್ಮಾಜಿ
ಮತ್ತೆ ಆಡಿದೆವು ಚದುರಂಗವನು |
ಮುತ್ತೈಯ್ಯ ಮುಮ್ಮಡಿ ಸಿಂಗನ ಕಾಲದ
ಮುತ್ತಿನ ಚೆಂಡದೆಯಂತೆ || ೨೦ ||

ಆರ್ತಿಯಿಂದಲಿ ಅದ ಆಡಿನೋಡುವೆ ತಾಯೆ
ಇತ್ತು ಎಮ್ಮಗಳ ಕಳುಹಮ್ಮ || ೨೧ ||

ನೆಟ್ಟನೆ ಆ ಮಾತ ಕೇಳುತ ಹರಿಯಮ್ಮಗೆ
ನಿಟ್ಟೆಲು ಮುರಿದವಾಕ್ಷಣದಿ |
ಕೆಟ್ಟೆನೊ ಮಗನೆ ಎನಗೆ ಮಾರಿಯಾಯಿತ್ತು
ಹುಟ್ಟಿದ ದಿನ ಬಂತು ಶಿವನೆ || ೨೨ ||

ಮರೆದು ಹೋದ ಚೆಂಡ ಅರುಹಿದರಾರಪ್ಪ
ನೆರೆಗಲಿ ಚೆನ್ನಿಗರಾಮ || ೨೩ ||

ಆವ ಪಾಪಿಗಳು ಚೆಂಡದೆಯೆಂದು ರಾಮನ
ಜೀವಕ್ಕೆ ಮುನಿದು ಹೇಳಿದರು |
ದೇವರೆ ಇದಕೇನ ಮಾಡುವೆನೆನುತಲಿ
ಬೇವುತಿರ್ದಳು ಹರಿಯಮ್ಮ || ೩೪ ||

ಮುತ್ತೈಯ್ಯ ಮುಮ್ಮಡಿ ಸಿಂಗನ ಕಾಲದ
ಮುತ್ತಿನ ಚೆಂಡ ಕೊಡಮ್ಮ || ೩೫ ||

ಈ ಚೆಂಡು ಶ್ರೀಕೃಷ್ಣರಾಯನಾಡಿದ ಚೆಂಡು
ಈ ಚೆಂಡು ಅಭಿಮನ್ಯುವಾಡೆ |
ಈ ಚೆಂಡ ಮುಮ್ಮಡಿ ಸಿಂಗವಾಡಿ ಕೆಟ್ಟ
ಈ ಚೆಂಡ ಮಗ ರಾಮ ಬೇಡ || ೩೬ ||

ಕಿರಿದು ಬುದ್ಧಿಗಳೇಕೆ ಹರಿಯಮ್ಮಗೆನುತಲಿ
ಮರೆಯನು ವೀರ ರಾಮಯ್ಯ || ೩೭ ||

ಆರು ಹೇಳಿದರಪ್ಪ ಚೆಂಡಿನ ಸುದ್ದಿಯ
ಊರುಬಳಗರಸು ಹೆಣ್ಣುಗಳು |
ಸಾರಿ ಕೈತಪ್ಪಿ ಚೆಂಡತ್ತಿತ್ತ ಬಿದ್ದರೆ
ಆರು ಹೊರುವರಪಕೀರ್ತಿ || ೩೮ ||

ಚೆಲುವ ರಾಮಯ್ಯ ಬೇಡವೊ ಚೆಂಡಿನಾಟವು
ಚೆಲುವ ಹೆಣ್ಣುಂಟು ಕುಮ್ಮಟದಿ || ೩೯ ||

ತಂದೆ ಊರೊಳಗಿಲ್ಲ ಚಂದ್ರಮುಖಿಯರುಂಟು
ಕಂದ ನೀ ಕೇಳೊ ರಾಮಯ್ಯ |
ಇಂದಿಗೆ ಬೇಡ ಮತ್ತೊಂದಿನ ಆಡೆಂದು
ಕಂದಗೆ ಬುದ್ಧಿ ಹೇಳಿದಳು || ೪೦ ||

ಚಿಕ್ಕ ಸಿಂಗಮ್ಮನೋಪದಿ ಪರಸತಿಯರು
ಮಕ್ಕಳು ನಮಗೆ ಕಾಣಮ್ಮ |
ಮಿಕ್ಕ ಮಾತಿನ್ನೇನು ಪರಸ್ತ್ರೀಯರೆಂಬರು ನಮಗೆ
ಮಕ್ಕಳ ಸಮನು ಕಾಣಮ್ಮ || ೪೧ ||

ಅಕ್ಕ ಮಾರ್ಯಮ್ಮನೋಪದಿ ಸತಿಯರೆಲ್ಲರು
ಮಿಕ್ಕಿನ್ನೈವರು ಹೊರತಾಗಿ |
ಕಕ್ಕುಲತೆಯ ಮಾಡಿ ಕಳವಳಗೊಂಡರೆ
ಚಕ್ರಧರನ ಪಾದದಾಣೆ || ೪೨ ||

ಬೇಡ ರಾಮುಗ ನಿನ್ನ ನೋಡಿದ ಸತಿಯರು
ಮಾಡರು ಮನೆಗೆಲಸಗಳ |
ಊಡರು ತಮ್ಮ ಕಂದರಿಗೆ ಮೂಲೆವಾಲನು
ಕೂಡರು ತಮ್ಮ ಪುರುಷರ || ೪೩ ||

ಪರಸತಿಯೆಂಬವರು ಹಿರಿಯಕ್ಕ ಮಾರೆಮ್ಮ
ಮಾರೆಮ್ಮ ನಿಮ್ಮ ಸಮಾನ ಕೇಳಾಯ್ತಿ |
ಗುರುವಿನ ಸತಿಯ ಸಮಾನವು ನಮಗಿನ್ನು
ಹರುಷದಿ ಚೆಂಡ ಕೊಡಮ್ಮ || ೪೪ ||

ಹಿರಿಯರು ನೀವು ಎಲ್ಲರು ರಾಮಯ್ಯಗೆ
ತರುವಲಿ ಬುದ್ಧಿಗಲಿಸುವಿರೆ |
ಒರೆದು ಹೇಳಿದೆವಮ್ಮ ಕೇಳ[ನು]ರಾಮಯ್ಯ
ದೊರೆನುಡಿಗಳಿಗೆ ಅಂಜುವೆವು || ೪೫ ||

ಕೃತಯುಗ[ದಲಿ] ಹುಟ್ಟಿತು ಮಾಯಾಂಗನೆ
ಹತವ ಮಾಡಿಸಿತು ಕಾರ್ತಿವೀರನನು |
ಯತಿಶಾಪದಿಂದಲಿ ಪತಿ ಶಿರ ಹೋಯಿತು
ಸುತರ ಬಿಲ್ಲನು ಮುರಿ [ಯಿ]ಸಿತು || ೪೬ ||

ಹಿಂದಿನ ಕಾಲದಿ ದ್ರೌಪತಿ ವನವಾಸ ಮಾಡಿಸಿತು
ನೊಂದು ಕೀಚಕನ ಕೊಲಿಸಿತು |
ಮುಂದುಗೆಡಿಸುವುದು ರಾಮುಗ ಈ ಚೆಂಡು
ಕಂದರ್ಪ ಸಮರೂಪ ಕೇಳೊ || ೪೭ ||

ಪಟ್ಟಕ್ಕೆ ಸಲುವಂಥ ರಾಯರು ಪಿಡಿದಾಡುವ
ಕಟ್ಟಾಣಿ ಮುತ್ತ ಹುದುಗಿಹುದು |
ನೆಟ್ಟನೆ ಪೂಜೆಯ ಮಾಡುವ ಚೆಂಡಲ್ಲದೆ
ಇಟ್ಟಾಡುವ ಚೆಂಡು ಅಲ್ಲ || ೪೮ ||

ಪೃಥ್ವಿಯೊಳಗೆ ಇದು ಮಾಯಾಂಗನೆ ಸುರ
ಪತಿಯ ಐಶ್ವರ್ಯವ ಕೆಡಿಸಿ || ೪೯ ||

ಘನ ತಪಸಿಯ ವನದೊಳು ಮಾಯಾಂಗನೆ
ಬಿನುಗು ಸೂಕರನಾಗಿ ಜನಿಸೆ |
ಧನುವ ಹಿಡಿದುಕೊಂಡು ಹರಿಶ್ಚಂದ್ರನೆಸೆಯಲು
ಜನಿಸಿ ಮುತ್ತಿನ ಚೆಂಡಾಯಿತು || ೫೦ ||

ಕಾಳಿಂಗನೋಲಗಕೆ ಹೋಯಿತು ಈ ಚೆಂಡು
ಕಾಲನವರ ಚೆಂಡಾಡಿತು |
ನಾಳೆ ನಿಮ್ಮಪ್ಪ ಬಂದರೆ ಚೆಂಡನಾಡೆಂದು
ಹೇಳಿದಳು ಹರಿಯಲದೇವಿ || ೫೧ ||

ಅತಿಕಾಲ ವನದಲ್ಲಿ ಪುಟ್ಟಿತು ಈ ಮಾಯಿ
ಸುತರನ್ನೈವರ ತಿರುಗಿಸಿತು |
ಅತಿ[ಯಾಸೆಯಿಂ]ದ ಲೆತ್ತವನಾಡಿ ಕೆಡಿಸಿತು
ಹತವ ಮಾಡಿಸಿತು ಕೌರವರ || ೫೨ ||

ಆಸೆಯಿಂದಲಿ ದೇಶವ ಕೊಡಲೀಸದೆ
ಮೋಸದಿ ಕೌರವರ ಪಡೆಯ |
ಗಾಸಿಯ ಮಾಡಿತು ಕೇಳು ಮುಮ್ಮುಡಿಸಿಂಗನ
ಈಶ ಕುಮಾರ ರಾಮಯ್ಯ || ೫೩ ||

ಪೊಡವಿಯನಾಳ್ವ ರಾಯರ ಕೆಡಸಿತು ಮಾಯಿ
ನಡೆದು ಪೋಡಶ ರಾಯರುಗಳ |
ತಡೆಯದೆ ನಿಮ್ಮ ಮುಮ್ಮಡಿಸಿಂಗನಾಯಕನು
ಪಿಡಿದು ಆಡುವ ಚೆಂಡು ಅಲ್ಲ || ೫೪ ||

ಉಡುರಾಜನಂದದಿ ಮೈಯೆಲ್ಲ ಕೆಡುತಿರೆ
ಮಡಗಿ ಪೂಜಿಸುವರೊ ಮಗನೆ |
ಕಡುಗಲಿ ಚೆಲುವ ರಾಮ ಚೆಂಡ ಬೇಡೆಂದು
ನುಡಿದಳು ಹರಿಯಲದೇವಿ || ೫೫ ||

ಒಂದು ಹೊಮ್ಮಿಗವಾಗಿ ಜನಿಸಿತು ಈ ಚೆಂಡು
ಒಂದು ಜಲ್ಮದಲಿ ಚೆಂಡಾಯಿತು |
ಕಂದ ನೀನಾಡಲು ವಿಧಿ ಬೆನ್ನ ಹುತ್ತುವುದು
ಕೊಂಡೊಯ್ವುದು ರತ್ನಿ ಮನೆಗೆ || ೫೬ ||

ವಿಧಿಯಿಂದ ರಾಮರು ಕೆಟ್ಟರು ಎಲೆ ತಾಯೆ
ವಿಧಿಯಿಂದ ರಾವಳನಳಿದ |
ವಿಧಿಯಿಂದ ಪಾಂಡವರು ವನವಾಸ ಹೋದರು
ವಿಧಿಯಿಂದ ಕೀಚಕನಳಿದ || ೫೭ ||

ತಲೆ ಹೋಯಿತೆಂದು ಶೂದ್ರಿಕವೀರನು ತಾನು
ಸಲೆ ತನ್ನ ಕೈಕಾಲು ಹೊಯ್ಸಿ |

ಬಲು ಬುದ್ಧಿಯಿಂದ ಇರುವೆನೆಂದು ಇರುತಿರೆ
ತಲೆಯ ಕಟ್ಟಿತು ಕಂಚಾಲಕ್ಕೆ || ೫೮ ||

ಪೊಡವಿಯೊಳಗೆ ಹರಿಶ್ಚಂದ್ರರಾಯನು
ಸುಡುಗಾಡನು ಕಾಯ್ದುದಿಲ್ಲವೆ |
ಹೆಡತಲೆಯೊಳಗಣ ವಿಧಿ ಬೆನ್ನ ಬಿಡುವುದೆ
ಕೊಡು ತಾಯಿ ಚೆಂಡ ಬೇಗದಲಿ || ೫೯ ||

ನಿನ್ನ ಪಾಡೇನಪ್ಪ ಮುನ್ನಿನ ದೊರೆಗಳು
ಹೊನ್ನು ಬಂಗಾರವ ನೆಚ್ಚಿ |
ತನ್ನ ತಾನರಿಯದೆ ಕೆಟ್ಟುಹೋದರು ರಾಮ
ಇನ್ನು ಈ ಚೆಂಡಾಟ ಬೇಡ || ೬೦ ||

ಆಡಿದ ಮಾತಿಗೆ ಅಳುಕದೆ ರಾಮಯ್ಯ
ಬೇಡಿದ ಚೆಂಡ ಕೊಡಮ್ಮ |
ಕಾಡುವ ಶನಿಯು ಎಲ್ಲಿದ್ದರೆ ಬಿಡದಮ್ಮ
ಆಡಿದಲ್ಲದೆ ಬಿಡ ಚೆಂಡ || ೬೧ ||

ರಾಜಬೀದಿಯಲಿ ಲಗ್ಗೆಯನಾಡಬೇಡೆಂದು
ವಾಜಿಯ ಮಗಗೆ ಹೇಳಿದಳು |
ರಾಜಲಕ್ಷಣಕೆ ಆಯುಧ ವಿದ್ಯೆ ಚದುರಂಗ
ತೇಜಿಯ ಮೇಲೆ ವೈಹಾಳಿ || ೬೨ ||

ಮಂದಿಯ ತಡೆ ಕುದುರೆಯ ಕಟ್ಟು ಜೀತವ
ಸಂದುದು [ಚಾ]ರ ಸುಭಟರಿಗೆ |
ಮಂದತನವು ಬೇಡ ಮಕ್ಕಳಾಟಿಕೆ ಯಾಕೆ
ಮುಂದುಂಟು ಬಹು ರಾಜಕಾರ್ಯ || ೬೩ ||

ಗುತ್ತಿಯ ನಾಡನಿರಿದು ಜಗದಪ್ಪನ
ಒತ್ತಿ ಸಾಧ್ಯವ ಮಾಡಿಕೊಂಡೆ |
ಹತ್ತಿತು ಬಹಳ ಹುಳಿಯಾರ ಮಾರಿಗೊಂಡನ ಮೇಲೆ
ಇತ್ತ ಸಲ್ಲದು ಚೆಂಡಿನಾಟ || ೬೪ ||

ನವಲಕ್ಷ ಕುದುರೆಯ ವಾಜಿಯ ಬಂಟನ
ಅವನ ಕೊಡದೆ ಬಾದೂರನ |
ಬವರಕ್ಕೆ ಸುರಿತಾಳನ ದಂಡು ಬಂದರೆ ನಾಳೆ
ಹವನಾಗಿಹುದೆ ರಾಜಕಾರ್ಯ || ೬೫ ||

ವೀರ ಬಲ್ಲಾಳನ ಮುರಿಯಲಿಂದೆ ರಾಮ
ಓರುಗಲ್ಲವನ ಕೆಣಿಕಿಸಿದೆ |
ಹೋರಾಟವನು ಮಾಡಿಕೊಂಡೆ ತುರುಕರೊಳು
ಆರಿಂತು ಮೈಮರೆದಿಹರೆ || ೬೬ ||

ಚೆಂಡುಗಳನೆ ಆಡಿ ಕೈಕಾಲು ನೊಂದರೆ
ಆರು ಹೊರುವರಪಕೀರ್ತಿ |
ದಂಡೆತ್ತಿ ಬಾರದೆ ಬಿಡುವರೆ ಚೆಲ್ವರ
ಗಂಡ ಬೇಡವೊ ಚೆಂಡಿನಾಟ || ೬೭ ||

ಬುದ್ಧಿ ಹೇಳಲು ರಾಮ ಮುದ್ದುಮುಖವು ಬಾಡಿ
ಬಿದ್ದವು ಕಂಗಳ ಉದಕ |
ಎದ್ದಳು ಈ ನೋವು ಯಾಕೆಂದು ಹರಿಯಮ್ಮ
ಮುದ್ದಿಸಿ ಮಗನ ಸಂತೈಸಿ || ೬೮ ||

ಎನ್ನ ತಾಯೆ ಕೇಳು ನಿನ್ನ ಸೊಸೆಯರೊಳು
ಇನ್ನೈವರು ಹೊರತಾಗಿ |
ಪನ್ನಂಗಂಧರನಾಣೆ ಪರಸತಿ ಎಂಬವರು
ನಿಮ್ಮ ಸಮಾನ ಕಾಣಮ್ಮ || ೬೯ ||

ಊರ ನಾರೆರ ದೃಷ್ಟಿ ತಾಕಿತು ರಾಮಗೆ
ಮಾರಿ ಬಂದಿತು ಕುಮ್ಮಟಕೆ |
ಇತ್ತ ಕೇಳಿದಳು ಹೊಸ ಸುದ್ದಿಯ ರತ್ನಾಜಿ
ಮತ್ತೆ ಹೇಳಿದಳು ಸಂಗಿಯೊಡನೆ || ೭೦ ||

ತಂದೆ ಇಲ್ಲದೆ ಹಿಂದೆ ಕಂಡವರುಶ್ಯಾರರು
ಕಂದ ಕೇಳೆಲೊ ರಾಮಯ್ಯ |
ಎಂದು ಬುದ್ದಿಯ ಹೇಳಿ ಹರಿಯಲದೇವಿಯು
ನಿಂದು ರಾಮನಿಗೆ ಹೇಳಿದಳು || ೭೧ ||

ಇಷ್ವರ ಮೇಲಿನ್ನು ಚೆಂಡು ಬೇಕಾದರೆ
ಮುಟ್ಟೆ ಬಲಿಯ ಕೊಡು ಮಗನೆ |
ಅಷ್ಟ ದಿಕ್ಕಿನ ರಾಹು ದಣಿವಂತೆ ಬಲಿಯನು
ಕೊಟ್ಟು ಬೆಂಡನು ಒಯ್ಯೊ ಮಗನೆ || ೭೨ ||

ಏನು ಬಲಿಯು ಬೇಕು ಹೇಳಮ್ಮ ನಮಗಿನ್ನು
ನಾನು ತರಿಸುವೆನು ಈ ಕ್ಷಣದಿ |

ನಾನೂರು ಕುರಿಗಳು ಐನೂರು ಕೋಳಿಗಳು ಬಲಿಯ
ಕೊಟ್ಟೊಯ್ಯೊ ರಾಮಯ್ಯ || ೭೩ ||

ಎಂದ ಮಾತನು ಕೇಳುತ ರಾಮಯ್ಯ ತನ್ನ
ಮಂದಿಯ ಕರೆಸಿ ಹೇಳಿದನು |
ಬನ್ನಿರೊ ಮನ್ನಯರು ಹೋಗಿರೊ ದಿಕ್ಕುದಿಕ್ಕಿಗೆ
ತನ್ನಿರಿ ಕುರಿ ಕೋಳಿಗಳ || ೭೪ ||

ಸಂದೇಹವಿಲ್ಲದೆ ದಿಕ್ಕುದಿಕ್ಕಿಗೆ ಹೋಗಿ
ತಂದರೈನೂರು ಕೆಂಗುರಿಯ |
ಏಳ್ನೂರು ಕೋಳಿಯ ಏಳ್ನೂರು ರಸದಾಳಿ
ಏಳ್ನೂರು ಕಾಯಿ ಹಣ್ಣುಗಳ || ೭೫ ||

ಏಳು ಗಳಿಗೆ ಚೆಂಡಿಗೆ ಬಲಿಯ ಕೊಟ್ಟರು
ಲೋಲರಾಮನು ಕೈಮುಗಿದ |
ಗಂಧ ಅಕ್ಷತೆ ಧೂಪ ದೀಪ ನೈವೇದ್ಯಾದಿ
ತಂದು ಅರ್ಚಿಸಿದಳು ಹರಿಯಮ್ಮ || ೭೬ ||

ಭಾಷೆಪಾಲಕ ರಾಮ ಚೆಂಡು ಬೇಕಾದರೆ
ಲೇಸಿನ ಸತ್ಯವ ಮಾಡೊ || ೭೭ ||

ಎನ್ನ ತಾಯೆ ಕೇಳು ನಿನ್ನ ಸೊಸೆಯರೊಳು
ಇನ್ನೈವರು ಹೊರತಾಗಿ |
ಪನ್ನಂಗಧರನಾಣೆ ಪರಸತಿ ಎಂಬವರು
ನಿನ್ನ ಸಮಾನ ಕಾಣಮ್ಮ || ೭೮ ||

ಈ ಚೆಂಡ ನೀನಾಡಬೇಡ ಚೆನ್ನಿಗ ರಾಮು
ಈ ಚೆಂಡ ನಿನ್ನ ಕೆಡಸೀತು |
ಎಂದು ಬುದ್ದಿಯ ಹೇಳಿ ಹರಿಯಲದೇವಿಯು
ತಂದುಕೊಟ್ಟಳು ಚೆಂಡ ಬೇಗ || ೭೯ ||

ಕೃತಕಯುಗದಲ್ಲಿ ಹುಟ್ಟಿತು ಮಾಯಾಂಗನೆ
ಹತಮಾಡಿಸಿತು ಕಾರ್ತಿವೀರನ |
ಇಂದಿನ ಜಲ್ಮದಿ ಮಾಯಾಂಗನೆಯಾಗಿ
ಬಂದು ಜನಿಸಿತು ಕುಮ್ಮಟದಿ || ೮೦ ||

ತಾಯಿ ಹೇಳಿದ ಮಾತ ಕೇಳುತ ರಾಮಯ್ಯ
ಜೀಯ ಎನುತ ಪಾದಕೆರಗೆ |

ಆಯುಷ್ಯ ಬಲ್ಲಿದನಾಗೆಂದು ಪಿಡಿದೆತ್ತಿ
ರಾಯರಗಂಡನೆಂದೆನುತ || ೮೧ ||

ಮುತ್ತಿನಚೆಂಡು ಸಹಿತ ರಾಮಯ್ಯನು
ಮತ್ತೆ ಅಂದಳವೇರಿ ನಡೆದ |
ಎತ್ತಿತ್ತು ಸತ್ತಿಗೆ ರಾಮನಾಥಗೆ ಆಗ
ಮುತ್ತಿನ ಚೌರ ಢಾಳಿಸುತ || ೮೨ ||

ಪಟ್ಟಣ ಬೀದಿಲಿ ರಾಮಯ್ಯ ಬರುವಾಗ
ಭಟ್ಟರು ಉಗ್ಗಡಿಸುತಿರಲು |
ಕಟ್ಟದಿರಿನಲಿ ಸೀನಲು ರಾಮನಾಥನು
ಸೃಷ್ಟಿಗೀಶ್ವರನೆ ಗತಿಯೆನುತ || ೮೩ ||

ಚಿತ್ತಜರೂಪನ ನೋಡಬೇಕೆನುತಲಿ
ಅತ್ತ ಮಕ್ಕಳನೆತ್ತದಿಹರು |
ಇತ್ತರದಲಿ ನಿಂದು ನೋಡುವ ಸತಿಯರು
ಮತ್ತೆ ರಾಮಯ್ಯನ ನೋಡುತಲಿ || ೮೪ ||

ಹೆತ್ತತಾಯಿಗಳು ಮಗನ ನೋಡುತಿಹರೆಂದು
ಚಿತ್ತದೊಳ್ ರಾಮ ಹಿಗ್ಗಿದನು || ೮೫ ||

ಚೆಂಡನು ಇಸುಕೊಂಡು ಮಂಡಲೇಶ್ವರ ರಾಮ
ಕೊಂಡುಬಂದನು ಹರುಷದಲಿ |
ಚಂಡಮಿಕ್ರಮ ಕಾಟಣ್ಣನೆಡೆಗೆ ಬಂದು
ಚೆಂಡಿಗೆ ಆಳ ಹಂಚೆಂದ || ೮೬ ||

ಆಳ ಹಂಚೆಂದ ಮಾತನು ಕೇಳಿ ಕಾಟಣ್ಣ
ಬೋಳೈಸಿದ ಮನದೊಳಗೆ |
ಹೇಳಿದ ತನ್ನ ಎಕ್ಕಟಿಗ ನಾಯಕರಿಗೆ
ಭಾಳ ಹರುಷದಲಿ ಕೊಡೆಂದ || ೮೭ ||

ಹಟ್ಟಿಕಾರರು ಹಳ್ಳಿಕಾರರು ಎಲ್ಲರು
ದಿಟ್ಟ ಗಾಣಿಗ ಬೊಮ್ಮನವರು |
ಕಟ್ಟಾಳು ಕುಂಬಾರ ಸೋಮನು ಇರುಪನು
ಬೆಟ್ಟಗಳಂದದಿ ಹೊರಟು || ೮೮ ||

ನೆಲಗತ್ತಿ ಕಾಮ ಭಟ್ಟರ ಭೀಮ ಚಿಕ್ಕಯ್ಯ
ದಿಟ್ಟ ಮನೆಯರು ತಾವು ಬಂದು |

ಒಕ್ಕಲಿಗರ ಮುದ್ದ ಅಕ್ಕಸಾಲೆಯ ಚಿಕ್ಕ
ಮಿಕ್ಕ ಮೀನಿಗೆ ಬೊಮ್ಮನವರು || ೮೯ ||

ಹೊಕ್ಕು ಹೊಯ್ದು ಹೆಸರಾದ ಕೊಳ್ಳಿಯ ನಾಗ
ವೀರ ಮನ್ನೆಯರೆಲ್ಲ ಬಂದು |
ಯನುಮಲ ಚಿತ್ತನು ಯರಬೋತು ಗಂಗನು
ಮನಕೆ ಮನ್ನೂಲ ಚೆನ್ನನವರು || ೯೦ ||

ಬೂಟಕ ಬ್ರಹ್ಮನು ಮಿಡಿಗೇಸಿ ನಲ್ಲನು
ಕಟ್ಟಾಳು ರವಳಿಯ ಹನುಮ || ೯೧ ||

ಅರಸುಮಕ್ಕಳು ಹಂಪರಾಜ ಕಂಪರಾಜನು
ಅರಿಬಿರಿದಿನ ಮನ್ನೆಯರು |
ಮನ್ನಾಲ ಮಾಚನು ಮುದುಕೊಂಡ ಲೋಬನು
ಮನ್ನೆಯರ ಕೊಟಗರ ದೇವ || ೯೨ ||

ಬುಕ್ಕನ ಪಾಲನು ಹೊಳಕೆಯ ಕೆಂಚನು
ರಕ್ಕಸ ಚಿನುಮಾದನವರು |
ಕರೆಸಿದ ಕತ್ತಿಯ ವೀರಾಧಿ ವೀರರ
ಬಿರಿದಂಕ ಚೆನ್ನಿಗರಾಮ || ೯೩ ||

ಬಾದೂರಖಾನನು ಮಹಿಮೆಯಖಾನನು
ಸಾಧನೆ ಬಸವರಾಜಯ್ಯ |
ಭೇದಿಸಿ ಮಣಿಹದ ಮಲ್ಲನ [ಕರಿಸಿದ್ದ]ಬೇ
ಗದಿ ಕರೆಸಿದ ರಾಮ || ೯೪ ||

ಹಳದಿಯ ತಿಪ್ಪನು ಬಾರಿಯ ಮಲ್ಲನು
ದಳದುಳಿಯ ರಕ್ಕಸ ಮಾದ |
ಹೊಳಕೆಯ ಬಂಟರ ಕರೆಸಿದ ರಾಮಯ್ಯ
ಕಳುಹಿದ ಚೆನ್ನಿಗರಾಮ || ೯೫ ||

ಹೊನ್ನಮೊಳೆಯ ಕಠಾರಿ ಎಕ್ಕಟಿಗರು
ನಿನ್ನ ಕಡೆಯಲೊ ಕಾಟಣ್ಣ |
ಮನ್ನಿಸಿ ಉಡುಗೊರೆ ಕೊಂಬ ಎಕ್ಕಟಿಗರ
ತನ್ನ ಕಡೆಗೆ ಮಾಡಿಕೊಂಡ || ೯೬ ||

ತೆಲುಗ ಮನ್ನೆಯ ಮಕ್ಕಳು ಊರೊಳಗುಳ್ಳ
ಸಲೆ ರಾಜಪುತ್ರರೆಲ್ಲರನು |

ಗೆಲವುಳ್ಳವರ ಹಂಚಿಕೊಟ್ಟನು ಕಾಟಗೆ
ಛಲದಂಕ ಚೆನ್ನಿಗರಾಮ || ೯೭ ||

ಆವ ಠಾವಿಲಿ ಚೆಂಡನಾಡುವ ಕಾಟಣ್ಣ
ಆವ ಬಯಲು ಹಸ ನಮಗೆ |
ಕೋವಿದೆ ರತ್ನಾಜಿ ಚಿಕ್ಕಮ್ಮನರಮನೆಯ
ಠಾವಿಗೆ ನಡೆಯೊ ಕಾಟಣ್ಣ || ೯೮ ||

ಅಲ್ಲಿ ನೋಡಲಿ ಮಕ್ಕಳರ್ತಿಯ ಕಾಟಣ್ಣ
ಅಲ್ಲಿಗೆ ನಡೆಯೊ ಹಿರಿಯಣ್ಣ || ೯೯ ||

ಚಿನ್ನದ ಲೆಗ್ಗೆ ಬೆಳ್ಳಿಯ ಲೆಗ್ಗೆ ತೆಕ್ಕೊಂಡು
ಚೆನ್ನಾಗಿ ನಡೆಯೊ ಕಾಟಣ್ಣ |
ಉನ್ನತ ಹರುಷದಿ ಚಿಕ್ಕಮ್ಮನರಮನೆಗೆ
ಹೊನ್ನ ಉಪ್ಪರಿಗೆಯ ಬಳಿಗೆ || ೧೦೦ ||

ತಗ್ಗು ಮುಗ್ಗಿಲ್ಲದ ಠಾವಿಲಿ ಕಾಟಣ್ಣ
ಲೆಗ್ಗೆಯ ಮಾಡ ಹೇಳಿದನು |
ಒಗ್ಗೊಡೆಯದೆ ಕೂಡಿತು ಪರಿವಾರವು
ವೆಗ್ಗಳ ರಾಮನ ಭಟರು || ೧೦೧ ||

ಚಿನ್ನದವೇಳು ಬೆಳ್ಳಿಯವೇಳು ಲೆಗ್ಗೆಯ
ಚೆನ್ನಾಗಿ ಹೂಡ ಹೇಳಿದನು |
ತನ್ನ ಮನ್ನೆಯರು ಮಂದಿಗಳೆಲ್ಲ ಒಂದಾಗಿ
ಭಿನ್ನವಿಲ್ಲದೆ ಚೆನ್ನರಾಮ || ೧೦೨ ||

ಸರಿಯಾಗಿ ಹಂ[ಚೆ] ಇಕ್ಕೆಲದ ಮನ್ನೆಯರನಿ
ತ್ತರದ ಬೊಬ್ಬೇನು ಸಂಗಾಯಿ |
ಹೊರಗಣ ಲೆಗ್ಗೆಯ ಚೆಂಡಾಟವು ನೋಡಿ
ಸರಸಿಜಮುಖಿಗೆ ಹೇಳಿದಳು || ೧೦೩ ||

ಲೋಲ ರಾಮಯ್ಯ ಚೆಂಡಾಡುವ ಬಯಲಿಗೆ
ಸೂಳೆಯರೆಲ್ಲ ಶೃಂಗರಿಸಿ |
ಲೀಲೆಯಿಂದಲಿ ಹೊರಟು ಬಂದರು ಬೇಗದಿ
ಮೂಲೋಕ ಜನರು ಕಂಗೆಡಲು || ೧೦೪ ||

ಸೂಳೆ ಹಂಪಾಜಿ ಬಂದಳು ಬೇಗದಲಿಂದ
ಮೇಲೆ ರಹುಡೆಯನು ಹೊಡೆಸುತಲಿ |

ಬಾಳ ಪಂಥವನಾಡುವ ವಿಟರೆದೆಗೊಂದು
ಲಾಳರಸದ ಬೊಂಬೆಯಂತೆ || ೧೦೫ ||

ಕಳವಳಿಸುವ ಕಾಂತಿ ಹೊಳೆವುತ ನಡೆದಳು
ಲಲನೆಯರೆಡಬಲದಲ್ಲಿ |
ಹೊಳೆಯ ಹೊನ್ನೂರ ರಾಮಾಜಿ ಬಂದಳು ಬೇಗ
ಗೆಲವಿಂದ ಚೆಂಡ ನೋಡುವರೆ || ೧೦೬ ||

ಸರುರಾತ್ರಿಗೆ ಹಿಡಿ ಹೊನ್ನ ಕೊಂಬುವಳೊಬ್ಬ
ಸುರತದ ಸುಗ್ಗಿ ಎಂಬವಳು |
ಗುರುಮುಕೊಂಡದ ಸೋಮಿ ಹೊರಟುಬಂದಳು ಬೇಗ
ಭರದಿಂದ ಚಂಡ ನೋಡುವರೆ || ೧೦೭ ||

ಹೊಲಬುದಪ್ಪಿದ ಹುಲ್ಲೆಯಂತೆ ಹಂಬಲಿಸುತ
ಕಳೆಯುಳ್ಳ ನಗೆಯ ಮುಖಕಾಂತಿ |
ಇಳೆಗೆ ಇಕ್ಕೇರಿಯ ಪ್ರಾಣನಾಯಕಿ ಬಂದಳು
ಬಲವಂತೆ ದುರ್ಗಾಯಿ ಎದ್ದು || ೧೦೮ ||

ಬಾಳೆಯ ಸುಳಿಯಂತೆ ಬಳುಕುತ ಬಂದಳು
ಬಾಲೆವೆಣ್ಣುಗಳ ಕೈವಿಡಿದು |
ಪಾಳೇದ ಪಾಪಾಜಿ ಬಂದಳು ಒಲವಿಂದ
ಲೋಲ ರಾಮುಗನ ನೋಡುವರೆ || ೧೦೯ ||

ಹೊಳೆವ ಹೊಂಬಣ್ಣದ ಸೀರೆಯನುಟ್ಟಳು
ನಳಿನಾಕ್ಷಿಯು ತಾಳವಿಡಿದು |
ಹಳೆಯಬೀಡಿನ ಹಂಪಾಜಿ ಬಂದಳು ಬೇಗ
ನಲುವಿಂದ ಚೆಂಡ ನೋಡುವರೆ || ೧೧೦ ||

ನಾರಿ ಶಿರೋಮಣಿ ಬಾಣವಾರದ ಭದ್ರಿ
ಭೋರನೆ ತಾ ಬಂದು ನಿಂದಳು || ೧೧೧ ||

ಪಟ್ಟಾವಳಿಯ ಸೀರೆ [ಯು]ಟ್ಟು ಆಭರಣವ
ತೊಟ್ಟು ಶೃಂಗಾರ[ದಿ] ನಡೆದು |
ಕೊಟ್ಟೂರ ಕಾಮಾಜಿ ಬಂದು ನಿಂದಳು ಬೇಗ
ದಿಟ್ಟ ರಾಮುಗನ ನೋಡುವರೆ || ೧೧೨ ||

ಏಣಾಕ್ಷಿ ಬಾದಾವಿ ಬಸವಿ ಬಂದಳು ಪಂಚ
ಬಾಣ ರಾಮುಗನ ನೋಡುವರೆ || ೧೧೩ ||

ಗಂಧ ಕಸ್ತೂರಿ ತಿಲಕವನಿಟ್ಟು ನಡೆದಳು
ಚೆಂದಚೆಂದದ ಕೊನಬುಗಳ |
ಕುಂದುರ್ಪೆಯಿಂದಲಿ ನಡೆದು
ಬಂದಳು ಬೇಗ ಕೊನಬಿನ ಕೊಂಡಾಜಿ ಆಗ || ೧೧೪ ||

ಮುಡಿವಾಳ ಹೂವ ಮಲ್ಲಿಗೆ ಜಾಜಿ ಸಂಪಗೆ
ಎಡೆಯೆಡೆಯಲ್ಲಿ ಕುಂಕುಮವು |
ಬೇಲೂರ ಬೆನಕಾಜಿ ನಡೆದು ಬಂದಳು ಬೇಗ
ವಿಟರೆದೆ ಬೊಂಬೆಯಂದದಲಿ || ೧೧೫ ||

ಆದವನ್ನಿಯ ನಾಗಾಜಿ ಬಂದಳು ಬೇಗ
ಕಾದುವ ಮಾಸಾಳನಂತೆ || ೧೧೬ ||

ಕುಂಭಕೋಣೆಯ ವೀರಾಜಿ ಹೊರಟಳು ಬೇಗ
ಗಂಭೀರ ರಾಮನ ನೋಡುವರೆ || ೧೧೭ ||

ಹೊನ್ನ ಹಾವುಗೆ ಮೆಟ್ಟಿ ಹೊಳೆವ ಪಟ್ಟೆಯನುಟ್ಟು
ಚೆನ್ನೆಯರೊಡನೆ ತಾ ನಡೆದು |
ಕನ್ನಡಿ ಕದಪಿನ ನೀರೆ [ಯು]ಬಂದಳು
ಚೆನ್ನಪಟ್ಟಣದ ಚೆನ್ನಾಜಿ || ೧೧೮ ||

ಸಾಸುವೆ ಬಣ್ಣದ ಸೀರೆಯನುಟ್ಟಳು
ಮೋಸಮಾಡುತಲಿ ವಿಟರುಗಳ || ೧೧೯ ||

ಚಂದ್ರಗಾವಿಯನುಟ್ಟು ಬಂದಳು ಒಲವಿಂದ
ಚಂದ್ರ[ಕಳೆ]ಯ ಸೋಲಿಸುತ |
ನಿಂದಿರ್ದ ವಿಟರ ಕಾಲ್ಗೆಡಿಸುತ ಬಂದಳು
ಚಂದ್ರಗಿರಿಯ ಚೆಲ್ವ ಚೆನ್ನೆ || ೧೨೦ ||

ದಸುರಿ ಬಣ್ಣದ ಸೀರೆ ಹೊಸ ಮುತ್ತಿನೋಲೆಯು
ಕುಸುಮಶರನ ಸೋಲಿಸುತ |
ಹಸುರು ಕುಪ್ಪಸವು ಕಸ್ತೂರಿ ನೊಸಲೊಳಗಿಟ್ಟು
ಹೊಸಪ್ಯಾಟೆಯ ಜಂಬುಲಿಂಗಿ || ೧೨೧ ||

ಮಿಸುನಿ ಪುತ್ಥಳಿಯ ಪಿತಾಂಬರವನುಟ್ಟಳು
ಹೊಸಮುತ್ತಿನ ಬೊಟ್ಟನಿಟ್ಟು |
ಮಸೆದ ಅಂಬಿನ ಮೊನೆಯಂತೆ ನಡೆದು ಬಂದಳು
ವಸವಂತಪುರದ ಮಲ್ಲಾಜಿ || ೧೨೨ ||

ಏ[ಸು]ನೋಂಪಿಯ ನೋಂತು ಪಡೆದಳಿವನ ತಾಯಿ
ಈಶ ಕುಮಾರ ರಾಮಯ್ಯನ |
ಭಾಷೆಯ ಮಾಡಿಕೊಂಬರು ತಮ್ಮೊಳು ತಾವು
ಗಾಸಿಯಾದೆವು ಎಂದೆನುತ || ೧೧೩ ||

ಸೋತರು ತನುವನೀತನಿಗೆ ಭ್ರಮೆಯಾದರು ಈ
[ಭೂತಳ]ದ ರೀತಿಯಲ್ಲ || ೧೧೪ ||

ಕಟ್ಟಾಳುಗಳ ಕರೆಸುತ ರಾಮನಾಥನು
ಕೊಟ್ಟನು ಭೂಷಣವ |
ಪಟ್ಟಣದೊಳು ಕೂಗೆ ಬೊಬ್ಬಾಟ ಹತ್ತಿತು
ಉಟ್ಟು ಶೃಂಗರವಾಗುತಹಳೆ || ೧೧೫ ||

ಇದು ಪರನಾರಿ ಸೋದರ ರಾಮನಾಥನ
ಪದಕೃತಿಯೊಳಗೊಂದು ಕಥೆಯ
....................................
.................................... || ೧೧೬ ||

**ಅಂತು ಸಂಧಿ ೧೫ಕ್ಕಂ ಪದನು ೧೫೦೭ ಕ್ಕಂ ಮಂಗಳ ಮಹಾಶ್ರೀ**

## ಸಂಧಿ ೧೬ - ಕುಮಾರ ರಾಮಯ್ಯನ ಚೆಂಡಿನಾಟ

ಶ್ರೀ ಗಿರಿಜಾ [ಸ್ಯಾಂಬುಜ ದಿನ]ನಾಯಕ
ಭೋಗಿಭೂಷಣ ಭಾಳನೇತ್ರ |
ಭಾಗೀರಥಿಧರ ಭವರೋಗವೈದ್ಯನೆ
ನಾಗ [ಕುಂಡಲ] ಶರಣೆಂಬೆ || ೧ ||

ರಾಮನ ನೆನೆ ಕಂಡ್ಯಾ ಮನವೆ ಜಟ್ಟಂಗಿಯ
ರಾಮನ ನೆನೆ ಕಂಡ್ಯಾ ತನುವೆ |
ರಾಮರಾಮಾ ಎಂಬ ನಾಮವ ನೆನದರೆ
ಕಾಮಿತ ಫಲವೀವ ರಾಮ || ೨ ||

ಬೊಬ್ಬೆಯಬ್ಬರ [ವು] ಹಬ್ಬಿತು ಕುಮ್ಮಟದೊಳು
ನಿಬ್ಬೆರಗಾಯ್ತು ಪಟ್ಟಣವು |
ಗಬ್ಬಿ ರಾಮನ ಚಂಡಿನಾಟವು ಜನರಿಗೆ
ಹಬ್ಬವಾಯಿತು ಕಂಗಳಿಗೆ || ೩ ||

ಹೆಣ್ಣಿಂದಲಳಿವ ಕಂಟಕವುಂಟು ರಾಮಗೆ
ಹಣ್ಣಿತು ಚಂಡಿನಾಟಗಳು |
ಕಣ್ಣ ಮುಂದೆ ಲೆಗ್ಗೆ ಹುಯ್ಯಲು ನಡೆವುತ
ಬಣ್ಣಿಸಿ ಲೋಕಕೆ ಹರಿಯೆ || ೪ ||

ಭೂತಳದೊಳಗಿಲ್ಲ ಇವರ ಚಂಡಿನಾಟವು
ಮರ್ತ್ಯದಿ ದೇವ ದಾನವರು || ೫ ||

ಭೋರನೆ ಭೋರ್ಯ್ಸಿ ವೀರ ವಾದ್ಯಗಳಿಂದ
ಮೀರಿತು ಕಾಲಾಳ ಬೊಬ್ಬೆ |
ಊರ ಮುಂದಣ ಬೊಬ್ಬೆ ಕೇರಿಗೆ ನಿಲ್ಲಬಾರದು
ವೀರ ರಾಮನ ಚಂಡಿನಾಟ || ೬ ||

ಎತ್ತ ನೋಡಿದರತ್ತ ಹುಯ್ಯಲಬ್ಬರಗಳು
ಸುತ್ತಲು ಉಲಿವ ಬೊಬ್ಬೆಗಳು |
ಇತ್ತ ಕೇಳಿಯೆ ಹೊಸ ಸುದ್ದಿಯ ರತ್ನಾಜಿ
ಮತ್ತೆ ಹೇಳಿದಳು ಸಂಗಿಯೊಡನೆ || ೭ ||

ಎಲ್ಲಿಯ ಸುದ್ದಿಯು ಕೇಳಿ ಬಾ ಎನುತಲಿ
ನಲ್ಲೆ ಗಿಯ ಕಳುಹಿದಳು |
ಎಲ್ಲಿಯು ನೋಡಲು ನಿಲ್ಲದಬಲ್ಲರಗಳು
ಬಲ್ಲಿದ ರಾಮನಾಟಗಳು || ೮ ||

ಹೋಗು ಸಂಗಾಯಿ ನೀ ಕೇಳಿ ಬಾ ಸುದ್ದಿಯ
ಆಗ ರತ್ನಾಜಿ ಕಳುಹಿದಳು |
ಬೇಗ ಬಂದಳು ರಾಜಬೀದಿಯ ಮಧ್ಯದಿ
ಆಗ ಕಂಡಳು ರಾಮನಾಟಗಳ || ೯ ||

ರಾಮನಾಡುವ ಚೆಂಡು ಭೂಮಿಗ್ವಿಚಿತ್ರವು
ಕಾಮುಕನಾಟವ ಕಂಡು |
ಪ್ರೇಮದಿ ಸಂಗಿ ತಿರಿಗಿ ಅರಮನೆ ಹೊಕ್ಕು
ಕೋಮಲೆ ರತ್ನಿಯೊಳುಸುರೆ || ೧೦ ||

ಸುಮ್ಮಾನದಲಿ ರಾಮನಾಥನಾಡುವ ಚೆಂಡು
ಬ್ರಾಹ್ಮಾಂಡವನು ಮುಟ್ಟುತಿರಲು |
ಉಮ್ಮಯದಿಂದಲಿ ರತ್ನಿಗೆ ಸುದ್ದಿಯ
ಗಮ್ಮನೆ ಬಂದು ಪೇಳಿದಳು || ೧೧ ||

ಅತ್ತ ರಾಮಯ್ಯ ಚೆಂಡಾಡುವ ಸುದ್ದಿಯ
ಇತ್ತ ಕೇಳಿದಳು ರತ್ನಾಜಿ |
ಚಿತ್ತಜರೂಪನ ನೋಡಬೇಕೆನುತಲಿ
ಮತ್ತೆ ಶೃಂಗಾರವಾಗುತಹಳೆ || ೧೨ ||

ಚೆನ್ನಿಗ ರಾಮನ ನೋಡಬೇಕೆನುತಲಿ
ಕನ್ನೆ ಶೃಂಗಾರವಾಗುತಹಳೆ |
ಪನ್ನೀರ ಕೈಕೊಂಡು ಚೆನ್ನಾಗಿ [ತಳೆ]ಕೊಂಡು
ಚೆನ್ನೆ ಆಯತವಾಗುತಿರ್ದು || ೧೩ ||

ಕಾಲುಂಗುರ ಪಿಲ್ಲಿ ಮೇಲೆ ಹೊನ್ನುಡಿದಾರ
ತೋಳಬಾಪುರಿ ಭುಜಕೀರ್ತಿ |
ಸಾಲಮುತ್ತಿನ ಸರ ಕೊರಳ ಚಿಂತಾಕವು
ಬಾಲೆ ರತ್ನಿಗೆ ಅಳವಡಿಸಿ || ೧೪ ||

ಬೆರಳ ಹೊನ್ನುಂಗುರ ಕೊರಳ ಮುತ್ತಿನಹಾರ
ಹರಳು ತೆತ್ತಿಸಿದ ಸೂಡಂಗ || ೧೫ ||

ಚೆನ್ನನ ಸರ ಹೊನ್ನ ಹೂವು ಮುತ್ತಿನ ಕೊಪ್ಪು
ಚೆನ್ನಾಗಿ ಕರ್ಣಕಿಕ್ಕಿದಳು |
ಬಣ್ಣಿಸಿ ಬಾಚಿ ಬೈತಲೆ ತೆಗೆದು ರತ್ನಿ
ನುಣ್ಣಿಸಿ ತುರುಬನಿಕ್ಕಿದಳು || ೧೬ ||

ಕಣ್ಣ ಕಪ್ಪನೆ ಹಚ್ಚಿ ಕಸ್ತೂರಿ ತಿಲಕವು
ಚೆನ್ನಾಗಿ ನೊಸಲಿಗಿಕ್ಕಿದಳು || ೧೭ ||

ಉಟ್ಟ ಉಡಿಗೆ ಮೇಲೆ ಕಟ್ಟಿ ಸರಪಳಿ ಗೆಜ್ಜೆ
ತೊಟ್ಟು ಮುತ್ತಿನ ರವಿಕೆಗಳ |
ಇಟ್ಟ ಮೂಗುತಿಯು ಮುತ್ತಿನ ಬೊಟ್ಟು ನೊಸಲೊಳು
ದಿಟ್ಟ ರತ್ನಾಜಿಗಳವಡಿಸಿ || ೧೮ ||

ಇಟ್ಟಳು ಕಸ್ತೂರಿ ತಿಲಕವ ನೊಸಲೊಳು
ಉಟ್ಟಳು ಪಟ್ಟಾವಳಿಯನು |
ಇಟ್ಟು ತೊಟ್ಟು ಶೃಂಗಾರವಾಗಿ ನಿಂದಳು
ಕಟ್ಟಿದ ನಿಲುವುಗನ್ನಡಿಯ || ೧೯ ||

ದೃಷ್ಟಿಸಿ ನೋಡಿ ನಗುತಲಿ ರತ್ನಾಜಿ
ಕಟ್ಟಾಳು ರಾಮಗೆಣೆಯೆಂದು || ೨೦ ||

ಧುರಗಲಿ ರಾಮನ ನೋಡಬೇಕೆನುತಲಿ
ಗರುವೆ ಸಂಗಿಯನೊಡಗೊಂಡು |
ಇರದೆ ಉಪ್ಪರಿಗೆಯ ಬಳಿಗೆ ಬಂದಳು ಬೇಗ
ದೊರೆ ರಾಮುಗನ ನೋಡುವರೆ || ೧೧ ||

ಸಂಗಿಯ ನಾಗಿಯರೊಡಗೂಡಿ ಬಂದಳು
ತುಂಗ ಕುಚಗಳ ನಲುಗುತಲಿ |
ಅಂಗಜರೂಪ ರಾಮನ ನೋಡಬೇಕೆಂದು
ಮಂಗಳವಾಗಿ ರತ್ನಮ್ಮ || ೧೨ ||

ಚಿತ್ತಜ ಜಯತು ತ್ರಿಯಂಬಕ ಜಯತೆಂದು
ಹಸ್ತಿಗಮನೆ ಕೊಂಡಾಡಿದಳು |
ಇತ್ತ ನಮ್ಮಯ ಹರಕೆಯ ಪಾಲಿಸು ಎಂದು |
ಚಿತ್ತಜ ರಾಮನ ಬರಿಸೊ || ೧೩ ||

ಚೆನ್ನಿಗ ರಾಮನ ಚೆಂಡು ಎನ್ನ ಬಳಿಗೆ
ಭಿನ್ನವಿಲ್ಲದೆ ಬೀಳಲೊಡನೆ |
ಉನ್ನತ ಊರ ಮುಂದಣ ಮಾರ್ಯಮ್ಮಗೆ
ಮುನ್ನೂರು ಕೋಣ ಹೊಯ್ಸುವೆನು || ೧೪ ||

ಮಾನವ ರಾಮನಾಡುವ ಮುತ್ತಿನ ಚೆಂಡು
ಮೌನದಲೆನಗೆ ಸೇರಿದರೆ |
ಬೋನಗುರಿಯ ಹೊಯ್ಸುವೆನು ಮನದಣಿಯಲಿ
ಮನದಣಿಯಲಿ ಹಾರುಗೋಳಿಯ ಬಿಡಿಸುವೆನು || ೧೫ ||

ಹರಿದು ಹಬ್ಬವ ಮಾಡುವೆ ಗುತ್ತಿ ಎಲ್ಲಮ್ಮಗೆ
ಹರಿಯೆ ಹೊಯ್ಸುವೆನು ಕೋಣಗಳ |
ಮೂರು ಮಾಣಿಕದ ಆರತಿಯನು ಎತ್ತುವೆ
ಲೋಲ ರಾಮಯ್ಯ ಸಿಕ್ಕಿದರೆ || ೧೬ ||

ಹಿಡಿ ಹೊನ್ನ ಕಾಣಿಕೆ ಹುಲಿಗೆ ಹೊಸೂರಮ್ಮಗೆ
ಹಿಡಿವೆನೊಪ್ಪತ್ತಿನೂಟವನು |
ಮುಡುಪಿನ ಮುಂದಲೆಯನು ಕೊಡುವೆನು ಎ
ನ್ನೊಡೆಯ ಕಂಪಿಲಸ್ವಾಮಿ ನಿನಗೆ || ೧೭ ||

ಧರೆಯೊಳಗದೃಷ್ಟಮೂರುತಿ ತಿರುಮಲದೇವ
ಧುರಗಲಿ ರಾಮ ಸಿಕ್ಕಿದರೆ |

ಸುರತದೊಳಗೆ ಒಂದು ಶಿಶು ಹುಟ್ಟಿತಾದರೆ
ತಿರುಮುಡಿಯನು ಮಾಡಿಸುವೆನು || ೧೮ ||

ಸೋಮವಾರ ದಿನ ಉಪವಾಸ ಇರುವೆನು
ಪ್ರೇಮದಿ ಹುಲಿಗೆರೆಯಸರಸ |
ಸೋಮನಾಥನ ಕರುಣದಿ ರಾಮ ಸಿಕ್ಕಿದರೆ
ಹೇಮದ ಕಳಸ ಪರ್ವತಕೆ || ೧೯ ||

ಹೊಳೆವ ಮನ್ಮಥ ರಾಮನಿಟ್ಟ ಮುತ್ತಿನ ಚೆಂಡು
ಬಳಲಿ ಬೀಳಲಿ ಅರಮನೆಗೆ |
ತಳುವದುಪ್ಪರಿಗೆಯ ಮುಂದೆ ಬೀಳಲಿ ಹೊನ್ನ
ಕಳಸವ ಕೊಡುವೆ ದೇವರಿಗೆ || ೨೦ ||

ಅಕ್ಕನ ಮಗ ರಾಮ ಸಿಕ್ಕಿದುಂಟಾದರೆ
ಉಪ್ಪರಿಗೆಯ ಕಟ್ಟಿಸುವೆನು
ತಪ್ಪದೆ ಎಪ್ಪತ್ತೇಳು ಕಪಿಲೆಯನು
ಒಪ್ಪದಿಂದಲಿ ಬಿಡುವೆನು || ೨೧ ||

ಕಂಪಿಲರಾಯನ ಮಗನು ರಾಮಯ್ಯನು
ಸೊಂಪಿಂದಲೆನಗೆ ಸೇರಿದರೆ |
ಹಂಪೆಯಾಳ್ದಗೆ ಹಣ್ಣುಹಂಪಲಗಳಿಂದ
ಸಂಪತ್ತಿನಲೆ [ಸೇವಿಸುವೆ] || ೨೨ ||

ವಸುಧೆಯೊಳಗೆ ರಾಮನಾಡ್ವ ಮುತ್ತಿನ ಚೆಂಡು
ಪಸರಿಸಿಕೊಳಲೆನ್ನ ಮನೆಗೆ |
ಹೊಸಪೇಟೆಯ ಜಂಬುಲಿಂಗನಾಥಗೆ ನಾನು
ವಸಂತವನಾಡುವೆನು || ೨೩ ||

ಚಿಕ್ಕ ಪ್ರಾಯದ ರಾಮ ಸಿಕ್ಕಿದನಾದರೆ
ಹೊಕ್ಕುಳಗಂಟೆ ಸರಪಳಿಯು |
ಮುಕ್ಕಣ್ಣನ ಒಡನಾಡಿ ಬಸವೇಶಗೆ
ಅಕ್ಕರಿಂ ಕೊಟ್ಟು ಕೈಮುಗಿವೆ || ೨೪ ||

ಅಂಗಜರೂಪ ರಾಮಯ್ಯನಾಡುವ ಚೆಂಡು
ಹಿಂಗದೆ ಎನಗೆ ಸೇರಿದರೆ |
ತಿಂಗಳುಪವಾಸನಿರುವೆ ಗಂಗಾಧರಗೆ
ಮಂಗಳಾರತಿಯನೆತ್ತುವೆನು || ೨೫ ||

ಒಪ್ಪುವ ರಾಮನಾಥನಾಡುವ ಚೆಂಡು
ತಪ್ಪದೆ ಎನಗೆ ಸೇರಿದರೆ |
ಕಪಿನಿಪತಿ ನಂಜುಂಡಲಿಂಗಗೆ ನಾನು
ಕರ್ಪುರದಾರತಿಯನೆತ್ತುವೆನು || ೩೬ ||

ತೆತ್ತೀಸಕೋಟಿ ದೇವರ್ಕಳೆಲ್ಲರನು
ಚಿತ್ತದೊಳಗೆ ನೆನೆನೆದು |
ಪೃಥ್ವಿಯಪತಿ ಕಂಪಿಲರಾಯ ಕೇಳ್ದರೆ
ಮತ್ತೇನ ಪೇಳ್ವೆ ರತ್ನಾಜಿ || ೩೭ ||

ನೀನು ಬೇಂಟೆಯ ಪೋಗಿ ತಡೆಯಲೊಂದು ದಿನ
ನಾನು ದೇವರ ಬೇಡಿಕೊಂ[ಡೆ] || ೩೮ ||

ಶರಭ ಶಾರ್ದೂಲ ಸಿಂಹಗಳಟ್ಟಿ ನಿನ್ನನು
ಮುರಿದು [ಕೊಲದಿರಲೆಂ]ದೆನುತ |
ಪರವತ ಮಲ್ಲಿಕಾರ್ಜುನ ಗಂಗಾಧರನಿಗೆ
ಇರದೆ ಹರಕಯನಾಂತೆ ಭೂಪ || ೩೯ ||

ಇಂತು ಪರಿಯಲಿ ನಾನು ಉಪಾಯದಿಂದಲಿ ಪೇಳಿ
ಸಂತೋಷವನು ತೋರಿಸುವೆ || ೪೦ ||

ಪಾರ್ವತಿರಮಣನೆ ಉರ್ವಿಶರೊಡೆಯನೆ
ಗೀರ್ವಾಣಮುನಿಗಳೊಂದಿತನೆ |
ಸರ್ವಜೀವರ ಸಲಹುವ ಸೂತ್ರಧಾರನೆ
ಗರ್ವ ರಾಮನ ಪಾಲಿಸೆನಗೆ || ೪೧ ||

ಧುರಗಲಿ ರಾಮನ ನೋಡಬೇಕೆನುತಲಿ ಗರ್ವೆ
ಸಂಗಿಯನೊಡಗೊಂಡು |
ಇರದೆ ಉಪ್ಪರಿಗೆಯ ಬಳಿಗೆ ಬಂದಳು ಬೇಗ
ದೊರೆ ರಾಮನ ನೋಡುವರೆ || ೪೨ ||

ಆಡಬಹುದೆ ಚೆಂಡು ಹಸುಮಕ್ಕಳಂದದಿ
ನೋಡ ಬನ್ನಿ ಆಶ್ಚರ್ಯ |
ಗಾಡಿಕಾರಿಯು ಹಡಪದ ಸಂಗಿಯು
ಕೂಡೆ ಉಪ್ಪರಿಗೆಯನೇರಿದರು || ೪೩ ||

ಹತ್ತಿದಳೇಳು ನೆಲೆಯ ಉಪ್ಪರಿಗೆಯ
ಮತ್ತೆ ಸಂಗಿಯು ಸಹವಾಗಿ |

ಇತ್ತ ಕಂಡರು ರಾಜಬೀದಿಯ ಮಧ್ಯದಿ
ಅರ್ತಿಲಿ ಚೆಂಡನಾಡುವದ || ೪೪ ||

ಒಡೆಯನಾವನು ಬಂಟನಾರೆ ಎಂದೆನುತಲಿ
ಅಡರಿವೆ ಸತ್ತಿಗೆ ಬಳಸಿ |
ಕಡುಗಲಿಗಳು ಇವರಾರೆಂದು ಅರಿಯದೆ
ನುಡಿದು ಕೇಳಿದಳು ಸಂಗಿಯನು || ೪೫ ||

ಅಗಲನ ಸತ್ತಿಗೆ ಮುಗಿಲು ಮುಟ್ಟುವ ಜಲ್ಲಿ
ದಗಲೆ ಮೈಯ್ಯವನಾರೆ ಸಂಗಿ |
ತಗಿಲು ಬುಗಿಲು ಮಾಡಿ ಕಡಿವನು ರಣದೊಳಗೆ
ನೆಗಳೂರ ತಳವಾರ ಹರಿಯ || ೪೬ ||

ವಸವಂತ ಸತ್ತಿಗೆ ನೆಳಲಲ್ಲಿ ನಿಂದಿಹ
ಹಸುರುಗುಬ್ಬಸದವನ್ಯಾರೆ |
ದೆಸೆಗೆಡಿಸಿ ತುರುಕ ಮಾರ್ಬಲವನು ಕಡಿವನು
ಹೆಸರುರ್ಳಳ ಬಾದೂರಖಾನ || ೪೭ ||

ಸೂರೆಯ ಪುಟದ ಸತ್ತಿಗೆಯ ನೆಳಲಲ್ಲಿಹ
ಮಾರ ಸನ್ನಿಭನಾರೆ ಸಂಗಿ |
ಹೂರಲ ಹುಯ್ಯಲದೊಳು ಹೊಕ್ಕು ಕಡಿವನು
ಹಾವಳಿ ಲಿಂಗ ಕಾಣಮ್ಮ || ೪೮ ||

ಮಝು ಭಾಪುರೆ ಸಂಗಿ ಹಿಡಿ ಕರ್ಪೂರ ವೀಳ್ಯ
ಗುಜ್ಜಲನಾರೆ ಮನ್ನೆಯನು |
ನಿರ್ಜರದಲಿ ಡೊಳ್ಳು ಢಮ್ಮೆಂದಲಿರಿವನು
ಗುಜ್ಜಲ ಹರಿಯ ಕಾಣಮ್ಮ || ೪೯ ||

ಹೊಂಬಣ್ಣ ಸತ್ತಿಗೆ ನೆಳಲಲ್ಲಿ ನಿಂದಿಹ
ಗಂಭೀರ ಮನ್ನೆಯನಾರೆ |
ತುಂಬಿರ್ದ ದೊರೆಗಳ ನಡುವೆ ಹೊಕ್ಕಿರಿವನು
ಕುಂಬಾರ ಕಲ್ಲ ಕಾಣಮ್ಮ || ೫೦ ||

ಚಿಕ್ಕ ಪೀತಾಂಬರ ಸತ್ತಿಗೆ ನೆರಳಡಿಯ
ಅಕ್ಕರಿಂದಿಹನಾರೆ ಸಂಗಿ |
ಲಕ್ಷ ದಂಡಿಗೆ ಒಬ್ಬ ರಹುಡೆಯ ಸುರಿತಾಳ
ಒಕ್ಕಲಿಗರ ಮುದ್ದನಮ್ಮ || ೫೧ ||

ಗುಬ್ಬಿ ಸತ್ತಿಗೆ ಮೇಲೆ ಹಬ್ಬಿದ ಜಲ್ಲಿಯು
ಗಬ್ಬಿ ಮನ್ನೆಯನಾರೆ ಸಂಗಿ |
ಸಬ್ಬ ದಂಡಿನ ಮೇಲೆ ಒಬ್ಬನೆ ಕಡಿವನು
ಕಬ್ಬುಲಿಗರ ನಾಗನಮ್ಮ || ೫೧ ||

ನೆಗಳ ಸತ್ತಿಗೆ ಮೇಲೆ ಬಿರಿದ ಹೊಗಳಿಸಿಕೊಂಬ
ಹಗಲು ಪಂಜಿನ ಮಾನ್ಯನಾರೆ |
ಮಿಗೆ ಹಾಯ್ದು ತುರುಕರ ತಗರಾಗಿ ತಾಕುವ
ಅಗಣಿತ ಜಂಗಮರ ಬಸವ || ೫೨ ||

ಬಿಳಿಯ ಸತ್ತಿಗೆ ಮೇಲೆ ಬೀಗುವ ಚೌರವು
ಇಳೆಯೊಳಗಾವ ಮನ್ನೆಯನೆ |
ಹೊಳೆಯ ಕಾವಲ ಕಾವ ಮಡಿವಾಳ ಮಾಚಯ್ಯ
ಲಲನೆ ಕೇಳಮ್ಮ ರತ್ನಾಜಿ || ೫೩ ||

ಹಸುರು ಸತ್ತಿಗೆ ಮೇಲೆ ಹೊಸ ಹೊನ್ನ ಕಳಸವು
ದೆಸೆಯುಳ್ಳವನಾವ ಮನ್ನೆಯನೆ |
ವಸುಧೆಯೊಳಗೆ ಇವ ಕುಶಲನೆನಿಸಿಕೊಂಬ
ಅಸಗೋಡ ಬಸವ ಕಾಣಮ್ಮ || ೫೫ ||

ಕಂಚಿನ ಸತ್ತಿಗೆ ಮಿಂಚುಳ್ಳ ಜಲ್ಲಿಯು
ಗೊಂಚಲ ಕಟುಕಿನವನಾರೆ |
ಮುಂಚಿನ ಹುಯ್ಯಲೊಳಗೆ ಏರಿ ಕಡಿವನು
ಕಂಚುಗಾರ ಕಾಳನಮ್ಮ || ೫೬ ||

ಚಂಡಿಕುಮಾರರ ಗಂಡನೆನಿಕೊಂಬ ಭೂ
ಮಂಡಲಪತಿ ಅವನಾರೆ |
ಲೆಂಡ ಖಾನರ ಮೇಲೆ ಎದ್ದು ಕಡಿವನವ
ಗಂಡಿಕೋಟೆಯ ಗಂಗರಾಜ || ೫೭ ||

ಮಂಡಲದೊಳಗೆ ಉದ್ದಂಡನೆನಿಸಿಕೊಂಬ
ಚಂಡವಿಕ್ರಮನಾರೆ ಸಂಗಿ |
ಪಾಂಡುರಂಗ ದೇಶದ ರಾಯನಿವನಮ್ಮ
ಮಂಡಲವದನೆ ರತ್ನಾಜಿ || ೫೮ ||

ಹಳದಿ ಸತ್ತಿಗೆ ಮೇಲೆ ಹೊಳೆವ ಹೊಂಗಳಸವು
ನಳಿನಾಕ್ಷನವನಾರೆ ಸಂಗಿ |

ಇಳೆಯೊಳಧಿಕವಾಗಿ ಕಳಸ ಭಾಂಡವನಾಳ್ವ
ತುಳವರ ಗಿರಿಯ ಕಾಣಮ್ಮ || ೫೯ ||

ಪಚ್ಚೆದ ಸತ್ತಿಗೆ ನೆರಳಡಿಯ ನಿಂದಿಹ
ಹೆಚ್ಚುಳ್ಳ ಮನ್ನೆಯನಾರೆ |
ಹುಚ್ಚುಗೆಡಿಸಿ ತುರುಕುವ ದಂಡ ಕಡಿವನು
ಮುಚ್ಚಾಲ ಹನುಮ ಕಾಣಮ್ಮ || ೬೦ ||

ಅಲಗನ ಸತ್ತಿಗೆ ನೆರಳಲ್ಲಿ ನಿಂದಿಹ
ಜಗುಲಿ ಮೈಯ್ಯವನಾರೆ ಸಂಗಿ |
ತೊರಗಲ್ಲ ಬಾದಾಮಿ ನಾಡಿನ ಅರಸನು
ಹಳದಿ ಕೇಳಮ್ಮ ರತ್ನಾಜಿ || ೬೧ ||

ಚಿಕ್ಕ ಸತ್ತಿಗೆ ಕಾಲಿಕ್ಕಿದ ಕಡೆಯವು
ರಕ್ಕಸ ಮನ್ನೆಯನಾರೆ |
ಕಕ್ಕಸ ಕುಚದ ರತ್ನಿಯೆ ಕೇಳು ಪೇಳುವೆ
ಒಕ್ಕಲ ಮಿಡಿಗೇಸಿ ನಾಗ || ೬೨ ||

ಹಳದಿಯ ಬಿರಿದು ಮಾದಳಗಾವಿ ಸತ್ತಿಗೆ
ಸೆಳೆ ನಡುವಿನ ಜಾಣನಾರೆ |
ತುಳುಹದೆ ಹುಯ್ಯಲ ಕಂಡೇರಿ ಕಡಿವನು
ಹೊಳಲಕೆರೆಯ ಸಂಗನಮ್ಮ || ೬೩ ||

ಇಂದ್ರನ ತೋಪಿನ ಸತ್ತಿಗೆ ನೆರಳಡಿ ದೇ
ವೇಂದ್ರನಂತಿಹನ್ಯಾರೆ ಸಂಗಿ |
ಬಂದ ದಂಡನು ಹಿಂದುಮುಂದಾಗಿ ಕಡಿವನು
ಚಂದ್ರಗಿರಿಯ ಸಿದ್ಧನಮ್ಮ || ೬೪ ||

ಪಂಚವರ್ಣದ ಸತ್ತಿಗೆ ನೆರಳಡಿಯಲ್ಲಿ
ಹೊಂಚಿ ನಿಂದಿಹನಾರೆ ಸಂಗಿ |
ಮುಂಚಿನ ಚೂಣಿಯ ಮುರಿಯಲಿರಿವನಿವ
ಪಂಚಮರ ಬಸವ ಕಾಣಮ್ಮ || ೬೫ ||

ಉದ್ದನ ಸತ್ತಿಗೆ ನೆರಳಡಿ ನಿಂದಿಹ
ಮುದ್ದುಮುಖದವನಾರೆ ಸಂಗಿ |
ಉದ್ದಗಿರಿಯ ಸಿದ್ದರಾಜನ ಮಗನಮ್ಮ
ಮುದ್ದು ಕೋಮಲೆ ರತ್ನಿ ಕೇಳು || ೬೬ ||

ಗೊಂಡೇದ ಸತ್ತಿಗೆ ನೆಳಲಡಿಯ ನಿಂದಿಹ
ಚಂಡವಿಕ್ರಮನಾರೆ ಸಂಗಿ |
ದಂಡೆತ್ತಿ ಬಹ ತುರುಕರ ಗಂಡನೆಂದೆಂಬ ಪೆನ
ಗುಂಡೆಯ ಸೋಮ ಕಾಣಮ್ಮ || ೬೭ ||

ಎಕಲಂಜಿ ಸತ್ತಿಗೆ ನೆರಳಡಿಯ ನಿಂದಿಹ
ಲೋಕನಾಯಕನಾರೆ ಸಂಗಿ |
ನೂಕಿ ದಂಡೆತ್ತಿ ಬಾಹರಗಂಡನೆಂದೆಂಬ
ಏಕಾಂಗಿ ವೀರ ಕಾಣಮ್ಮ || ೬೮ ||

ಹಸುರು ಕಾವಿನ ಛತ್ರಿ ಬಸವನ ಮುದ್ರೆಯು
ಮಿಸುನಿಯ ಬಾಯವನಾರೆ |
ಅಸಮ ದಳದ ಮೇಲೆ ಎದ್ದು ಕಡಿವನಿವ
ಬಸವರಾಹುತ ಸಿದ್ಧನಮ್ಮ || ೬೯ ||

ಸಕಲಾತಿ ಸತ್ತಿಗೆ ನೆರಳಡಿಯ ನಿಂದಿಯ
ಮಕರಂಕನವನಾರೆ ಸಂಗಿ |
ಸಕಲ ದಂಡಿನ ಮೇಲೆ ಸಮರದಿ ಕಡಿವನು
ಅಕಳಂಕ ಸಿದ್ಧನೆಂಬವನು || ೭೦ ||

ಕೊಡೆಯ ಸತ್ತಿಗೆ ಮೇಲೆ ಗಿಡುಗನ ಬಿರಿದಿಕ್ಕಿ
ಸಡಗರದಲ್ಲಿಹನಾರೆ |
ಬಿಡದೆ ಬೆನ್ಹತ್ತಿ ಕಡಿವನು ರಾಣದೊಳು
ಮಿಡಿಗೇಸಿ ನಾಗ ಕಾಣಮ್ಮ || ೭೧ ||

ಎಡಬಲದಲ್ಲಿ ಚೌರ ಢಾಳಿಸಿಕೊಂಬ
ಬೆಡಗಿನ ಮಾನ್ಯನವನಾರೆ |
ಕೊಡುವೆಡೆಯೊಳು ಕರ್ಣನೆಂದೆನಿಸುವ
ನಿಡಿಗಲ್ಲ ಕಾಮ ನಿಸ್ಸಿಮ || ೭೨ ||

ಚಂದ್ರಗಾವಿಯ ಸತ್ತಿಗೆ ನೆರಳಡಿಯ
ಚೆಂದದಿಂದಿಹನಾರೆ ಸಂಗಿ |
ಕಂದರ್ಪ ಸಮರೂಪ ಕದನ ಪ್ರಚಂಡನು
ಕುಂದುರ್ಪೆ ತಮ್ಮ ಕಾಣಮ್ಮ || ೭೩ ||

ಹೊಳೆವ ಮನ್ಮಥರೂಪ ಥಳಥಳಿಸುತಲಿಪ್ಪ
ಕಳೆಯುಳ್ಳವನಾದ ಮನ್ನೆಯನೆ |

ಇಳೆಯೊಳಗಿವ ರಾಯದುರ್ಗದ ವೀರನು
ಕೆಳದಿ ಕೇಳಮ್ಮ ರತ್ನಾಜಿ || ೭೪ ||

ಕಾಗಿನ ಸತ್ತಿಗೆ ತೂಗುವ ಜಲ್ಲಿಯು
ಭೋಗದೊಳಿಹನಾರೆ ಸಂಗಿ |
ಕೂಗಿದ [ರಣಕಿವ] ಮೊಳ ಹೆಚಚುವನು ಕೇಳು
ಬೋಗಾರ ಮಲ್ಲ ಕಾಣಮ್ಮ || ೭೫ ||

ಬೊಂಬೆಯ ಸತ್ತಿಗೆ ನೆರಳಡಿಯ ನಿಂದಿಹ
ತುಂಬಿದ ಮೈಯವನಾರೆ |
ಹಂಬಲ ಹರಿದು ತುರುಕರ ದಂಡ ಕಡಿವನು
ಕುಂಭಕೋಣೆಯ ಕಲ್ಲನಮ್ಮ || ೭೬ ||

ಎತ್ತಿದ ನ್ಯಾಜ್ಯವು ಪಪ್ಪಾಳಿ ಸತ್ತಿಗೆ
ಎತ್ತಳ ನಾಡ ಮನ್ನೆಯನೆ |
ಉಗ್ಸಂಗಿದುರ್ಗದ ಪಡುವಲದೇಶದ
ಮತ್ತ ಕೋಕಿಲನು ಕಾಣಮ್ಮ || ೭೭ ||

ಕೊಡೆನೆಂಬ ಲೋಭಿಯ ಗಂಡನೆಂದೆನಿಸುವ
ಗಡಿಯಂಕ ಭೀಮನವನಾರೆ |
ಪೊಡವಿಯೊಳಗೆ ಎಣೆಗಾಣೆನು ಇವನಿಗೆ ಗಡಿಯಕೋಟೆಯ ದೇವನಮ್ಮ || ೭೮ ||

ಸುಲಿಪಲ್ಲ ಸತ್ತಿಗೆ ನೆರಳಡಿಯ ನಿಂದಿಹ
ಒಲವುಳ್ಳ ಮನ್ನೆಯನಾರೆ |
ಛಲದಂಕ ಸಾರಂಗಿ ಗೊಲ್ಲರ ಗುಜ್ಜಯ್ಯ
ಲಲನೆ ಕೇಳೆಲೆ ರತ್ನಾಜಿ || ೭೯ ||

ಸಕಲಾತಿ ಸತ್ತಿಗೆಯ ನೆರಳಲ್ಲಿ ನಿಂದಿಹ
ಮುಖ ದೊಡ್ಡನಾವ ಮನ್ನೆಯನೆ |
ಸಕಲ ವೈರಿಗಳೆದೆಗಂಕುಶವಾಗಿಹ
ಮಕರಂಕ ಮಾದಿಗ ಹಂಪ || ೮೦ ||

ಸುಳಿವಾಳೆ ಪಟ್ಟೆ ಸತ್ತಿಗೆ ನೆರಳಲಿ ನಿಂದಿಹ
ಮೇಳದ ಮನ್ನೆಯನಾರೆ |
ದಾಳಿಯ ಬಂದ ಖಾನರನೆಲ್ಲ ಕೊಲ್ಲುವ
ದಳಧೂಳಿ ಮಾದ ಕಾಣಮ್ಮ || ೮೧ ||

ಚೆನ್ನದ ಸತ್ತಿಗೆ ರನ್ನದ ಕಳಸವು
ಮನ್ನೆಯನ್ಯಾರೆಲೆ ಸಂಗಿ |
ಕನ್ನೋಜಿ ಖಾನರ ಗಂಡನೆನಿಸುವ ಕೇಳು
ಮನ್ನೂಲ ಮಾಚನೆಂಬವನು || ೮೧ ||

ಕುರುಹಿನ ಟೆಕ್ಕೆಯು ಅರಿಬಿರಿದಿನ ಜಲ್ಲಿ
ಮೆರೆವ ಮನ್ನೆಯನಾರೆ ಸಂಗಿ |
ಧರೆಯೊಳು ಕುರುಗೋಡ ಸಂಗಮ ಇವನೊಳು
ಬೆರಸಿ ಕಾದುವರಿಲ್ಲವಮ್ಮ || ೮೨ ||

ಜಗಜಂಪಿನ ಸತ್ತಿಗೆ ನೆರಳಲ್ಲಿ ನಿಂದಿಹ
ನಗೆಮುಖದವನಾರೆ ಸಂಗಿ |
ಜಗದೊಳು ಚೆನ್ನೂಲಗಿರಿದುರ್ಗದ ದೊಡ್ಡ
ಅಗಣಿತ ಸಿಂಗ ಕಾಣಮ್ಮ || ೮೪ ||

ಕನಕದ ಸತ್ತಿಗೆ ನೆರಳಡಿಯ ನಿಂದಿಹ
ಜನವಶ್ಯ ತಿಲಕದವನಾರೆ |
ಆನೆಯ ದಂಡನೆಲ್ಲವ ಕಡಿವನು ಇವ
ಮೀನಿಗರ ಲಕ್ಕ ಕಾಣಮ್ಮ || ೮೫ ||

ಪಚ್ಚೆ ಕಾವಿನ ಸತ್ತಿಗೆ ನೆರಳಲಿ ನಿಂದಿಹ
ಹೆಚ್ಚಳ್ಳನಾವ ಮನ್ನೆಯನೆ |
ಮೆಚ್ಚ ನುಂಗುವ ಲೋಭಿಯ ಗಂಡನೆನಿಸುವ
ಉಚ್ಚಂಗಿದುರ್ಗದ ಪಾಲ || ೮೬ ||

ಎಸೆವ ಸತ್ತಿಗೆ ಮೇಲೆ ಹೊಸ ಹೊನ್ನ ಕಳಸವು
ದೆಸೆಯುಳ್ಳನಾವ ಮನ್ನೆಯನೆ |
ಅಸಮದಳಕಿದಿರಾದ ಅಸುರರ ತಲೆ ರನ್ನ
ವಸದಾರಿ ಬಸವ ಕಾಣಮ್ಮ || ೮೭ ||

ಸತ್ತಿಗೆ ಎಲ್ಲಕೆ ಸುತ್ತಳ ಗೊಂಡೆವು
ಎತ್ತಳ ನಾಡ ಮನ್ನೆಯನೆ |
ಉತ್ತಮ ತೊರಗಲ್ಲ ಜಾಯಿಶೆಟ್ಟಿ ಬಸವಯ್ಯ
ಮತ್ತೆ ಕೇಳಮ್ಮ ರತ್ನಾಜಿ || ೮೮ ||

ಬೆಳ್ಳಿಯ ಕಾವಿನ ಸತ್ತಿಗೆ ನೆರಳಡಿಯ
ಒಳ್ಳೆವನಾವ ಮನ್ನೆಯನೆ |

ಡಿಳ್ಳಿಯ ಖಾನರ ಗಂಡನೆನಿಸಿಕೊಂಬ
ಬಳ್ಳಾರಿ ಹನುಮ ಕಾಣಮ್ಮ || ೮೯ ||

ಬಾವನ್ನ ಸತ್ತಿಗೆ ನೆರಳಡಿಯ ನಿಂದಿರ್ದ
ಕೋವಿದನಾವ ಮನ್ನೆಯನೆ |
ಜೀವದೊಳರ್ಧನೆನಿಸುವನು ರಾಮಗೆ
ದೇವಿಸೆಟ್ಟಿಯ ಲಿಂಗನಮ್ಮ || ೯೦ ||

ನೀಲಿಯ ಸತ್ತಿಗೆ ಮೇಲೆ ಹಬ್ಬಿದ ಬಿರಿದು
ಲೋಲ ಮನ್ನೆಯನಾರೆ ಸಂಗಿ |
ಬಾಲಕುಮಾರರ ಗಂಡನೆನಿಸಿಕೊಂಬ
[ಸ]ಲ್ಲುಂದಿ ಚೆನ್ನ ನಿನ ತಮ್ಮ || ೯೧ ||

ಮುಕ್ಕಣ್ಣ ನೇಜೆವು ಇತ್ತರದಲಿ ಜಲ್ಲಿ
ಕಂಕಣರುದ್ರನವನಾರೆ |
ಕೊಂಕಿ ಉರುಲ ಹಾಕಿ ಸೆಳೆವನು ರಣದೊಳು ನಿ
ಶ್ಶಂಕ ಕಂಪಿಲನಳಿಯನಮ್ಮ || ೯೨ ||

ಏಕಾಂಬ್ರ ಸತ್ತಿಗೆ ಹಾಕುವ ಚವುರವು
ಪಾಕಶಾನು ಇವನಾರೆ |
ಕಾಟಣ್ಣ ನಿಮ್ಮ ಹಿರಿಯ ಕುಮಾರನು
ಮೀಟು ಜವ್ವನೆ ಕೇಳು ರತ್ನಿ || ೯೩ ||

ನೇತ್ರಾವಳಿಯ ಸತ್ತಿಗೆ ನೆಳಲಲ್ಲಿ ನಿಂದಿಹ
ಗಾತ್ರ ಮನ್ನೆಯನಾರೆ ಸಂಗಿ |
ಯಂತ್ರವಾಹಕ ನಮ್ಮ ಅರಸಿನ ಕುಮಾರ
ಮಂತ್ರಿ ಬೈಚಪ್ಪನ ಮಗನು || ೯೪ ||

ಜಲ್ಲಿಯ ಸತ್ತಿಗೆ ನೆರಳಡಿಯ ನಿಂದಿಹ
ನಲ್ಲನಾಯಕನಾರೆ ಸಂಗಿ |
ಎಲ್ಲ ದಳಕಿಂದಲಿ ಬಿಲ್ಲಲಿ ಬಲ್ಲಿದ
ಕಲ್ಲಕೋಟೆಯ ಚಿತ್ತನಮ್ಮ || ೯೫ ||

ಛಪ್ಪನ್ನ ದೇಶದ ಮನ್ನೆಯರೊಳಗೊಬ್ಬ
ಪುಷ್ಪಚಾಪಿನ ರೂಪನಾರೆ |
ಎಪ್ಪ[ತ್ತೆರಡು]ಮಾನ್ಯಯರಿಗೆ ವೆಗ್ಗಳ
ಕೊಪ್ಪಳದ ತಿಮ್ಮ ಕಾಣಮ್ಮ || ೯೬ ||

ಎಪ್ಪತ್ತು [ಎರಡು] ಮನ್ನೆಯರ ಸತ್ತಿಗೆಗಳು
ತಪ್ಪದೆ ಉರಿಯಲೆ ಸಂಗಿ |
ಒಪ್ಪುವ ಚೆಲುವ ರಾಮನ ತೋರುತೋರೆಂದು
ಕರ್ಪೂರಗಂಧಿ ಆಡಿದಳು || ೯೭ ||

ಉನ್ನಂತ ರಾಮನ ತೋರೆಂದರೆ ನಾಡ
ಮನ್ನೆಯರ ಎನಗೆ ತೋರುವರೆ |
ಎನ್ನ ತನುವ ಸೂರೆಗೊಂಬ ರಾಮನ ತೋರೆ
ಹೊನ್ನ ಹೊಯ್ಸಿವೆ ಬಾಯಿತುಂಬ || ೯೮ ||

ನಾಲ್ಕು ಸತ್ತಿಗೆ ಮೇಲೆ ಚೌರ ಢಾಳಿಸಿಕೊಂಬ
ಲೋಕ ಮನ್ನೆಯನಾರೆ ಸಂಗಿ |
ಭೂಲೋಕಕತಿ ರೂಪ ಕಾಲನೇಮಿಯ ಗಂಡ
ಬಾಲಕುಮಾರ ರಾಮಯ್ಯ || ೯೯ ||

ಎಡಬಲದಲಿ ನಾಲ್ಕು ಮುತ್ತಿನ ಸತ್ತಿಗೆ
ನಡುವೆ ನಿಂದಿಹನಾರೆ ಸಂಗಿ |
ಪೊಡವಿಯೊಳುಳ್ಳ ದಿಕ್ಕಿನ ರಾಯರಗಂಡ
ಕಡುಗಲಿ ಚೆನ್ನಿಗರಾಮ || ೧೦೦ ||

ರಾಮನ ತೋರುತೋರೆಂದರೆ ಸಂಗಾಯಿ ನಾ
ಡ ಮನ್ನೆಯರ ತೋರಿಸಿದೆ |
ಕಾಮನ ಸಮರೂಪ ಕನ್ನಡಿ ಕುಖಧರ
ರಾಮನ ತೋರದೆ ನೀನು || ೧೦೧ ||

ರಾಮನೆಂಬಾ ಮಾತ ಕೇಳಿ ಸಂತೋಷದಿ ನಿ
ಸ್ಸೀಮನ ದೃಷ್ಟಿಸಿ ನೋಡಿ |
ಕ್ಷೇಮದಿ ತಲ್ಲಣಿಸುತ ತರಹರಿಸುತ
ಕಾಮ ಹುಟ್ಟಿತು ಮನದೊಳಗೆ || ೧೦೨ ||

ದೃಷ್ಟಿಸಿ ನೋಡಿ ರಾಮನ ಕಂಡು ಮನದೊಳು
ಹುಟ್ಟಿತು ತಾಪ ವೆಗ್ಗಳಿಸಿ |
ಕಟ್ಟಾಳು ರಾಮನ ಸಂಗವ ಹೊಕ್ಕು ಸವಿವೆನು
ದಿಟ್ಟೆಯಾಡಿದಳು ಸಂಗಿಯೊಡನೆ || ೧೦೩ ||

ಧರೆಯೊಳಾಡುವುದು ಬರಿ ಮಾತು ಮನ್ಮಥನ
ಉರುಹಿ ಸುಟ್ಟುದು ಸಟೆಯೆನುತ |

ಗರುವ ರಾಮನು ಸ್ತ್ರೀಯರ ತನುದುರ್ಗವ
ಇರದೆ ಮುತ್ತಿಗೆ ಮಾಡ ಬಂದ || ೧೦೪ ||

ಕಟ್ಟಾಳು ರಾಮಯ್ಯ ಹುಟ್ಟುವಾಗಲು ಶಿವ
ಕೊಟ್ಟಾನು ರೂಪನಿವನಿಗೆ |
ಸೃಷ್ಟಿಯೊಳಗೆ ರಾಮ ಸ್ತ್ರೀಯರ ಅಂಗವ
ಮುಟ್ಟಿ ಸೂರೆಯ ಮಾಡಬಂದ || ೧೦೫ ||

ಹೊನ್ನ ಪುತ್ಥಳಿಯಂತೆ ಹೊಳೆವ ಕನ್ನಡಿಯಂತೆ
ಮನ್ಮಥನ ಮರೆಸುವಂದದಲಿ |
ಕನ್ನಡಜಾಣ ರಾಮನ ಕಂಡು ಮನಸೋತು
ತನ್ನ ಮನದಣಿಯ ನೋಡಿದಳು || ೧೦೬ ||

ನೋಡಿದಾಕ್ಷಣದಲ್ಲಿ ಮೂಡಿತು ಮೊನೆ ಮೊಳೆ
ಕೂಡಿತು ರತ್ನಿಗೆ ತಾಪ |
ರೂಢಿಯೊಳ್ ಮನ್ಮಥ ತನ್ನೈದು ಬಾಣವ
ಹೂಡಿಬಿಟ್ಟನು ಇವಳೆದೆಗೆ || ೧೦೭ ||

ಮದನೈದು ಬಾಣವು ಎದೆಯ ತಟ್ಟುಗಿಯಲು
ಕದುಬಿ ಕಾತರಿಸಿ ಕಂಗೆಟ್ಟು |
ಹೃದಯ ತಲ್ಲಣಿಸಿ ಮೈಮರೆದ ವಿರಹದಲ್ಲಿ
ಬೆದರಿ ಬಿದ್ದಳು ರತ್ನಾಜಿ || ೧೦೮ ||

ಬಿದ್ದ ಭರಕೆ ರತ್ನಿ ಮುದ್ದುಮುಖವು ಬಾಡಿ
ಹೊದ್ದಿ ಬಳಸಿ ಕುಂತಳವಳು |
ನಿದ್ರೆಯಂದದಿ ಮೈಮರೆದಳು ವಿರಹದಿ
ಹೊದ್ದಿ ಹೊರಳಿದಳು ರತ್ನಾಜಿ || ೧೦೯ ||

ಹೊರಳಿದಳು ಬುಡುಬುಡುನುರುಳಿದಳು ಭೂಮಿಯಲಿ
ಸೊರಗಿದಳು ಮೋಹನಮೂರ್ಛೆಯಲಿ || ೧೧೦ ||

ಹವಣರಿಯದೆ ಇವಳು ಬಿದ್ದಿಹ ಸಮಯದಿ
ಭುವನೇಶ ಕಂಡರೆ ಇವಳ |
ಕಿವಿ ಮೂಗು ಮುಂದಲೆ ಕೊಯ್ಸದೆ ಬಿಡನೆಂದು
ಹವಣಿಸಿದಳು ಒಂದು ನೋವ || ೧೧೧ ||

ತವಕದಿ ಕಂಪಿಲರಾಯ ಬಂದರೆ ಇವಳ
ಜೀವಕ್ಕೆ ಮುನಿಯದೆ ಬಿಡನು |

ಇವಳು ಮೈಮರೆದು ಬಿದ್ದಳು ವಿರಹ ತಾಪದಲಿ
ಹವಣ ಕಾಣೆಲೆ ಸಂಗಾಯಿ || ೧೧೨ ||

ಅಂದು ಕಂಗೆಟ್ಟು ಸಂಗಾಯಿ ತನ್ನ ಮನದಲ್ಲಿ
ಮತ್ತೊಂದು ಬುದ್ಧಿಯನೆಣಿಸುತ |
ಪನ್ನೀರ್ಗಳನು ತಂದು ಕಣ್ಣಿಗೆ ಒತ್ತಲು
ತನ್ನ ಮರವೆ ತಿಳಿದೆದ್ದು || ೧೧೩ ||

ಇನ್ನು ಸಂಗಿಯ ಕೂಡ ನುಡಿದಳು ರತ್ನಾಜಿ
ಚೆನ್ನರಾಮನ ತೋರಿಸೆನುತ |
ಕನ್ನೆ ನಿನ್ನಯ ಬುದ್ಧಿ, ಸಣ್ಣವರಂದದಿ
ಚೆನ್ನಿಗಗೆ ನೀನು ಸೋಲುವರೆ || ೧೧೪ ||

ಆಡಲು ಚೆಂಡು ಇಲ್ಲಿಗೆ ಓಡಿ ಬರುವುದು
ಬೇಡಲು ಬರುವ ರಾಮಯ್ಯ |
ರೂಢಿಯೊಳಗೆ ಮನ್ಮಥನ ಕೈವಶವ
ಮಾಡಿಕೊಳ್ಳಮ್ಮ ರತ್ನಾಜಿ || ೧೧೫ ||

ಮಂದಗಮನೆ ಕೇಳು ಮನ್ಮಥರೂಪನು
ಬಂದಾನು ನಿನ್ನರಮನೆಗೆ |
ಸಂದೇಹಬೇಡವೆಂದೆನುತ ರತ್ನಾಜಿಗೆ
ಬಂದು ಬುದ್ಧಿಯನು ಹೇಳಿದಳು || ೧೧೬ ||

ಗಾದೆಯ ಮಾತ ಸಾವಿರವ ಹೇಳಿದರೇನು
ಬೋಧಿಸುವೆನೆ ಬುದ್ಧಿಯನು |
ನಿಧಾನವ ಕಂಡರೆ ಬಿಡುವರುಂಟೆ ಸಂಗಾಯಿ
ಉದಾರ ರಾಮನ ತೋರಿಸೆನಗೆ || ೧೧೭ ||

ತೋರೇನು ಏಳೆಂದು ನೀರೆಯ ಪಿಡಿದೆತ್ತಿ
ಮೇರುವೆಯನು ಹತ್ತಿ ನಿಂದು |
ಧಾರುಣಿಯೊಳು ಚೆಲ್ವರಗಂಡ ರಾಮ ತಾ
ನೀರೆ ರತ್ನಾಜಿ ನೀ [ನೋಡೆ] || ೧೧೮ ||

ಕಪ್ಪಹತ್ತಿದ ಮೀಸೆ ಕಸ್ತೂರಿ ತಿಲಕವು
ಬಲ್ಪಿನ ಚಿಮ್ಮುರಿ ಸುತ್ತಿ |
ಮಾರಸನ್ನಿಭನಿಸ ಅರಸು ನೇಮಿಯಗಂಡ
ಹರುಸಾದೆ ನೋಡೆ ರಾಮುಗನ || ೧೧೯ ||

ಒತ್ತಿ ಬರುವ ಮೀಸೆ ಕೆನ್ನೆ ಕಮರಗಡ್ಡ
ಉತ್ತಮ ಧೀರನಿವನೀಗ |
ಇತ್ತ ನೋಡೆಲೆ ರತ್ನಾಜಿ ರಾಮಯ್ಯನು
ಅರ್ತಿಲಿ ಚೆಂಡನಾಡುವದ || ೧೨೦ ||

ಚೆಂಡನಾಡುವ ರಾಮನ ಕಂಡು ಮನದಲ್ಲಿ
ಕೊಂಡಾಡಿದಳು ಹರುಷದಲಿ |
ಇಂದ್ರನೊ ಚಂದ್ರನೊ ಶೂದ್ರಿಕ ವೀರನೊದೇ
ವೇಂದ್ರನೆನುತ ಕೊಂಡಾಡಿದಳು || ೧೨೧ ||

ಇನ್ನೊಂದು ಬಾರಿ ರಾಮನ ತೋರು ತೋರಿಸೆ
ಮನ್ನಿಸಿ ಉಡುಗೊರೆನೀವೆ |
ರಾಮನಾಥನ ಕಂಡು ನೀರೆ ಮನಸೋತಳು
ಪ್ರೇಮ ಹುಟ್ಟಿತು ಮನದೊಳಗೆ || ೧೨೨ ||

ಸೃಷ್ಟಿಗಧಿಕ ಕಾಟಣ್ಣ ಮುತ್ತಿನ ಚೆಂಡ
ನೆಟ್ಟನೆ ಪಿಡಿದಿರೆ ಕಂಡು |
ಪಟ್ಟದಾನೆಯ ಕಾಟಣ್ಣ ಚೆಂಡನು ತಾರೊ
ಇಟ್ಟು ನೋಡುವೆನೊಂದು ಬಾರಿ || ೧೨೩ ||

ಚೆಂಡಾಟ ನೀನರಿಯೆ ಚೆನ್ನಿಗ ರಾಮಯ್ಯ
ಚೆಂಡನಾಡುವ ಪಾಯ ನೋಡು |
ರೂಢಿಯೊಳಧಿಕ ಕಾಟಣ್ಣನು ಬೊಬ್ಬಿರಿದು
ಈಡಾಡಿ ಇಟ್ಟ ಲೆಗ್ಗೆಯನು || ೧೨೪ ||

ಸರಗೋಲು ಮುರಿದು ಲೆಗ್ಗೆಯ ಹಲ್ಲೆ ನುಗ್ಗೆದ್ದು
ಉರುಳಿತು ಲೆಗ್ಗೆ ಭೋರ್ಮೊರೆದು |
ಹಿರಿಯಣ್ಣನಿಟ್ಟರೆ ತಡೆಯಬಾರದು ಎಂದು
ಕರವ ಮುಗಿದು ಬಲಿಗೊಟ್ಟ || ೧೨೫ ||

ಇತ್ತ ಕಾಟಣ್ಣನಾಡಿದ ಮುತ್ತಿನ ಚೆಂಡು ರಾಮ
ನೊತ್ತಿನ ಮನ್ನೆರುಗಳು |
ಚಿತ್ತದೊಳಗೆ ಹಿಗ್ಗುತ ಗುಜ್ಜಲ ಹರಿಯ
ನೆತ್ತಿ ಪಿಡಿದನಾ ಚೆಂಡ || ೧೨೬ ||

ಹಿಡಿದ ಚೆಂಡನು ಕಂಡು ರಾಮನ ಮನ್ನೆಯರು
ಗಿಡಿಬಿಡಿ ಕೊಳಲು ತಪ್ಪಟೆಯು |

ಬಿಡದೆ ಬಿದಿರಿನ ಕಹಳೆ ಹಿಡಿಯೆ ಬ್ರಹ್ಮಾಂಡವು
ಒಡೆವಂತೆ ಬೊಬ್ಬಿಡುತಿಹುದು || ೧೨೭ ||

ಹೂಡಿರೊ ಲೆಗ್ಗೆಯ ನೀಡಿರೊ ಚೆಂಡನು
ಓಡಿರೊ ನಾಲ್ಕು ದಿಕ್ಕಿನಲ್ಲಿ |
ಈಡಾಡಿ ದೇವಿಸೆಟ್ಟಿ ಲಿಂಗಣ್ಣಿಟ್ಟರೆ
ಬೇಡನಾಯಕರು ಬೆದರಿದರು || ೧೨೮ ||

ಬೂಟಕ ಬೊಮ್ಮನ ಮೊಳಕಾಲು ಮುರಿಯಿತು
ದಿಟ್ಟ ಗಾಣಿಯ ಬುಳ್ಳನವರು || ೧೨೯ ||

ದೇವಿಸೆಟ್ಟಿಯ ಲಿಂಗನಿಟ್ಟ ಮುತ್ತಿನ ಚೆಂಡ
ಭಾವ ಸಂಗಮನಾಥ ಪಿಡಿದ |
ಕೋವಿದ ಕಾಟಣ್ಣನ ಪರಿವಾರವು
ಆವಿಜ ಭೇರಿ ಮದ್ದಳೆಯು || ೧೩೦ ||

ಬುರುಗು ಜಾಗಟೆ ಚೆನ್ನಗಹಳೆ ತುತೂರಿ ಕೊಂಬು
ಬಿರುದಿನ ರಹುಡೆಯ ಹೊಯ್ಸಿ || ೧೩೧ ||

ಹರಿದು ಬಂದೆಲ್ಲ ಕಾಟಣ್ಣನ ಮನ್ನೆಯರು
ಬಿರಿದಿನೆಕ್ಕಟ್ಟಿಗರು ಸಹಿತ |
ಬಿರಿದಿನ ಕಹಳೆಯ ಹಿಡಿಸಿ ಲೆಗ್ಗೆಯ ಮಾಡಿ
ಉರುಳಲಿಟ್ಟರು ಲೆಗ್ಗೆಯನು || ೧೩೨ ||

ಹಲ್ಲೆಯ ನೋಡಿ ಇಟ್ಟರೆ ಚೆಂಡು ಭೋರೆಂದು
ನಿಲ್ಲದೆ ಬೊಬ್ಬಿರಿವುತಲಿ |
ಬಲ್ಲಿದ ರಾಮನ ಮನ್ನೆಯರೆಲ್ಲೆರ
ಕೊಲ್ಲದ ಬಿಡನೆಂದು ಚೆಂಡು || ೧೩೩ ||

ಭಾವ ಸಂಗಮನಾಥನಿಟ್ಟ ಮುತ್ತಿನ ಚೆಂಡು
ಕೋವಿದ ಕೋಟೆಗರ ದ್ಯಾವ |
ತೀವಿ ತಂದನು ರಾಮನ ಮನ್ನೆಯರೆಲ್ಲ
ತಾ ಒಡಗೂಡಿ ಬೊಬ್ಬಿರಿದು || ೧೩೪ ||

ಹಿಡಿವಂಥ ಚೆಂಡನು ತಂದು ರಾಮನ ಕೈಲಿ
ಕೊಡಲಿ ಕಾಟಣ್ಣನವರುಗಳು |
ಕಡುಗಲಿ ಇಟ್ಟರೆ ನಿಲ್ಲರು ಮನ್ನೆಯರು
ಬಿಡದೆ ಓಡಿತು ದೆಸೆದೆಸೆಗೆ || ೧೩೫ ||

ರಾಮನಿಡಲು ಚೆಂಡು ಭೂಮಿಯಾಕಾಶಕ್ಕೆ
ತಾಮಸವಿಲ್ಲದೆ ನೆಗೆಯ || ೧೩೭ ||

ನೆಗೆವ ಚೆಂಡನು ಕಂಡು ಜಗಲೂರು ಕಾಮಯ್ಯ
ಬಿಗಿದು ಹಿಡಿದನು ಕೈಯೊಳಗೆ || ೧೩೭ ||

ಹಾರೋರ ಲಿಂಗನ ಹರಣವು ಹತ್ತಿತು
ದೊರೆ ದೇವನ ಕನ್ನೆ ಒಡೆದು |
ಮರೆಳೆಯ ಪಾಪನ ಹಲ್ಲು ಹೋಯಿತು ನಾನಾ
ಕರುಳ ಬಿದ್ದವರು ಬಿದ್ದಿಹರು || ೧೩೮ ||

ಕೋವಿದ ರಾಮಯ್ಯನಿಟ್ಟ ಮುತ್ತಿನ ಚೆಂಡ
ಭಾವ ಸಂಗಮನಾಥ ತಡೆದ |
ಭಾವ ಸಂಗಮನಾಥನಿಟ್ಟ ಮುತ್ತನ ಚೆಂಡ
ಬಾದೂರಖಾನ ಬಂಧ್ಹಿಡಿದ || ೧೩೯ ||

ಕಂಡು ಬಾದೂರಖಾನ ಲೆಗ್ಗೆ ನೀಡಲು ಮುನ್ನ
ಮಂಡಲದುರಿತಾರಾಕ್ಷಣದಿ || ೧೪೦ ||

ಗುದ್ದುಗುದ್ದನು ಹೊಕ್ಕು ಕಾಟಣ್ಣನ ಮಂದಿಯು
ಬಿದ್ದರು ತಲೆಕೆಳಗಾಗಿ |
ಎದ್ದೆದ್ದು ನೋಡಲು ಉಬ್ಬಿ ಮನ್ನೆಯರೆಲ್ಲ
ಸದ್ದು ಮಾಡುತ ಚೆಂಡು ಬರಲು || ೧೪೧ ||

ಆ ಸಮಯದಿ ದೇವಿಸೆಟ್ಟ ಲಿಂಗಣ್ಣನು
ಕೇಸರಿ ಕೆರಳಿದಂದದಲಿ |
ಸಾಸಿರ ತುಡುಮು ಹೊಯ್ಸುತ ಲೆಗ್ಗೆ ಮಾಡುತ
ರೋಷದಿ ಚೆಂಡ ಬಂಧ್ಹಿಡಿದ || ೧೪೨ ||

ಕಡುಗೋಪದಲಿ ಬಂದು ದೇವಿಸೆಟ್ಟಿಯ ಲಿಂಗ
ಪಿಡಿದನು ಮುತ್ತಿನ ಚೆಂಡ |
ತಡೆಯದೆ ಲೆಗ್ಗೆಯ ನೋಡಿ ಇಟ್ಟರೆ ಮುನ್ನ
ಕೆಡಹಿತೈವರು ಮನ್ನೆಯರ || ೧೪೩ ||

ಮನ್ನೂಲ ಮಾಚನ ಮೂಗು ಬಿಚ್ಚಿತು ಆಗ
ಚೆನ್ನ ಕಂಪನ ಕಾಲೊಡೆದು |
ಚೆನ್ನದ ಕಾಸೆಯ ವಿರೂಪಯ್ಯತಾತನ
ಕೆನ್ನೆ ಹಾರಿತು ಆಕ್ಷಣದಿ || ೧೪೪ ||

ಇತ್ತ ಮನ್ನೆಯರು ನೊಂದುದ ಕಂಡು ರಾಮಯ್ಯ
ಮತ್ತೆ ಕೋಪವನು ತಾಳಿದನು |
ತೆತ್ತಿಸಿದವು ರೋಮ ಸರಳು ತೆತ್ತಿಸಿದಂತೆ
ಮತ್ತೆ ರಾಮನ ಮೈಗಳಲಿ || ೧೪೫ ||

ಭರದಿಂದ ಬಂದನು ಧುರಗಲಿ ರಾಮನು
ಬರುವ ಮುತ್ತಿನ ಚೆಂಡಿಗಾಗಿ |
ಧುರಧೀರ ಮುತ್ತಿನ ಚೆಂಡ ಪಿಡಿದಿರುವದ ಕಂಡು
ಪರಿದು ಭೂತಗಳು ಹತವಾಗೆ || ೧೪೬ ||

ಇತ್ತ ರಾಮನು ಲೆಗ್ಗೆಯನಿಡುವ ಸಂಭ್ರಮವನು
ಬಿತ್ತರಿಸುವರಳವಲ್ಲ |
ಮೃತ್ಯು ಬಂದಿತು ರಾಮಯ್ಯನ ಕೊರಳಿಗೆ
ಸತ್ಯಸಾ[ಧಕರು] ಲಾಲಿಪುದು || ೧೪೭ ||

ಹೂಡಿದ ಲೆಗ್ಗೆಯ ನೋಡಿ ಇಡಲು ಮುನ್ನ
ಓಡಿತು ನಾಲ್ಕು ದಿಕ್ಕಿನಲಿ |
ಉರವಣಿಸುತ ಬಂದು ದಿಕ್ಕಿದಿಕ್ಕಿಲಿ ಹೊಕ್ಕು
ಕರ ಬೇಗ ಲೆಗ್ಗೆ ಮಾಡಿದರು || ೧೪೮ ||

ಬಲ್ಲಿದ ಕಾಟಣ್ಣನಿಟ್ಟ ಮುತ್ತಿನ ಚೆಂಡು
ಚೆಲ್ಲೆಗಂಗಳ ರಾಮ ಪಿಡಿದ || ೧೪೯ ||

ಹಿಡಿ ಬೇಗ ಲೆಗ್ಗೆಯ ಕೆಡಹುವೆ ಕಾಲಾಳ
ಹೊಡೆವ ಕಾಟಣ್ಣನ ಎದೆಯ |
ಮೃಡನು ಬಲ್ಲಂತೆ ಭೋರ್ಮೊರೆವನು ರಾಮಯ್ಯ
ಬಿಡು ಕೈಯಿಂದಲಿ ತನ್ನ || ೧೫೦ ||

ಪ್ರೇಮದಿ ಕಾಟಣ್ಣ ಕೊಳ್ಳಿಯ ನಾಗಣ್ಣ
ಸೋಮಿದೇವನು ಚೆನುಮಾದ |
ಕಾಮಗೇತಿಯ ಚಿತ್ತನ್ನೈವರು ಮಾನ್ಯರು ಹೊ
ಕ್ಕು ಮುರಿಯದೆ ಬಿಡವೆಂದರವರು || ೧೫೧ ||

ಚೆಂಡ ಬಿನ್ನಹವ ಮಾ[ಡಿತು] ರಾಮಯ್ಯ
ಮಂದಿಯ ನೋಯಿಸಬೇಡ |
ಹಿಂದುಮುಂದಣ ಪೌಜು ಒದಗಿತು ನಾನೀಗ
ಚೆಂದಗೆಡಿಸುವೆ ಮನ್ನೆಯರ || ೧೫೨ ||

ನೆಗೆವೆನಾಕಾಶಕೆ ಬಗೆವೆನು ಭೂಮಿಯ
ತೆಗೆವೆ ಕಾಟಣ್ಣನಾಯಕನ |
ಉಗಿದು ಬೀಳುವೆನು ಮನ್ನಯರ ಕೈಯಿಂದ
[ಖ]ಗರಾಜಪತಿ ಬಿಡೊ ನಿನ್ನ || ೧೫೩ ||

ಮುತ್ತಿನ ಚೆಂಡನಿಡಲು ರಾಮಯ್ಯನು
ಅತ್ತ ತಾನೊಯ್ಯುವ ಪರಿಯ |
ಚಿತ್ತ ಒಲಿದು ಕೋವಿದರೆಲ್ಲ ಕೇಳಿರೊ
ಕೃತಕ[ದ ಚಂಡ] ಲೆಗ್ಗೆಯನು || ೧೫೪ ||

ಕೇಳಿರೊ ಚೆಂಡು ರತ್ನಗೆ ಸಿಕ್ಕುವಂದಾಗ
ಕೇಳಿರೊ ಒಯ್ವೋದ ಪರಿಯ |
ಭೋರು ಭುಗಿಭುಗಿಲೆನುತಲಿ ಬಂದುದು
ಏರಿ ಬೆಟ್ಟದಲಿಂದಲಿಳಿದು || ೧೫೫ ||

ಸೇರಿದನಾಗಳೆ ರಾಮನ ಚೆಂಡಿಗೆ
ಸಾರ್ವ ಹೆಗ್ಗಾಳೆಯಂದದಲಿ || ೧೫೬ ||

ಮುಂದಾಣೆಯಲಿ ಸರ್ವ ಮೊಳಗುತಲಿರುತಿರೆ
ಬಂದನು ರಾಮ ಬೊಬ್ಬಿರಿದು |
ಚೆಂದದಿಂದಲಿ ಲೆಗ್ಗೆಯ ನೋಡಿ ಇಟ್ಟರೆ
ಕೆಂಧೂಳು ಕವಿಯಿತಂಬರಕೆ || ೧೫೭ ||

ಸಿಡಿಲು ಪರ್ವತದ ಚೆನ್ನ ಕಳಸವ ಹೊಡೆವಂತೆ
ಹಿಡಿದು ಒಯ್ದನು ವಾಯುದೇವ |
ತಡೆಯದೆ ರತ್ನಿಯ ಅಂಗಳದೊಳು ಹೋಗಿ
ಕೆಡಹಿದ ಮುತ್ತಿನ ಚೆಂಡ || ೧೫೮ ||

ದಿಟ್ಟ ರಾಮನ ಚೆಂಡ ಸೆಳಕೊಂಡು ರತ್ನಾಜಿ
ಪಟ್ಟಸಾಲೆಯ ಮುಂದೆ ಹಾಕಿ |
ಉಟ್ಟ ಉಡಿಗೆಯ ಕಳೆಯಲರಿಯದೆ ರತ್ನಿ
ದಿಟ್ಟೆ ಚೆಂಡಿನ ಮೇಲೆ ಬಿದ್ದು || ೧೫೯ ||

ಘಳಿಲನೆ ಅರಮನೆ ಒಳಯಕೆ ತೆಕ್ಕೊಂಡು
ಹೊಳೆವ ಕಂಗಳಿಗೊತ್ತಿಕೊಂಡು || ೧೬೦ ||

ತರಿಸಿದಳುದಕ ಪನ್ನೀರು ಚಳಯವಗೊಟ್ಟು
ವರವ ಬೇಡಿದಳು ಚೆಂಡನಗೆ |

ದುರಧೀರ ರಾಮನ ಸಮವೆಂದು ಚೆಂಡನು
ಉರದಲ್ಲಿ ತೆಗೆದಪ್ಪಿಕೊಂಡು || ೧೬೧ ||

ಭರವಾಸದಲ್ಲಿ ರತ್ನಾಜಿ ಚೆಂಡಿನ ಮೇಲೆ
ಕರ ತವಕದಿ ಬಿದ್ದು ಹೊರಳೆ || ೧೬೨ ||

ಮುದ್ದು ರಾಮನ ಸಮವೆನುತ ಮುತ್ತಿನ ಚಂಡ
ನಿರ್ಧಾರದಲಿ ತೆಗೆದಪ್ಪಿ |
ಸಧ್ಯಾಫಲದಿ ರಾಮ ಸಿಕ್ಕಿದನೆನುತಲಿ
ಬಿದ್ದಳು ಚೆಂಡಿನ ಮೇಲೆ || ೧೬೩ ||

ಮುತ್ತಿನ ಚೆಂಡನು ಪಿಡಿಕೊಂಡು ರತ್ನಾಜಿ
ಮತ್ತೆ ರಾಮನ ಸಮವೆಂದು |
ಒತ್ತಿದಳೋ ನಖರೇಖೆಯ ಚೆಂಡಿಗೆ
ಚಿತ್ತಿನಿಜಾತಿ ರತ್ನಾಜಿ || ೧೬೪ ||

ಕುಶಲ ರಾಮನ ಸಮವೆನುತ ಚೆಂಡಿನ ಮೇಲೆ
ದಶ ವಸ್ತ್ರಗಳನು ಹಾಕಿದಳು |
ವಸುಧೆಯೊಳಗೆ ಎನ್ನ ಭಾಗ್ಯ ಬಂದಿತು ಎಂದು
ಕುಶಲೆ ರತ್ನಾಜಿ ಹೆಚ್ಚಿದಳು || ೧೬೫ ||

ಅಳಿಪಾದವು ಸೋಂಕಿದಂತೆ [ಕಮಲ]ಮುಖ
ಕಳೆಯು ಏರಿತು ಚೆಂಡು ಬರಲು || ೧೬೬ ||

ಎದಿಗೊತ್ತಿ ಬದಿಗೊತ್ತಿಕೊಂಡಳು ಆ ಚೆಂಡ
ಮುದದಿ ಮುದ್ದಿಸಿ ಮುಂಡಾಸಿದಳು |
ಚದುರ ರಾಮನ ಸಮವೆನುತ ಮುತ್ತಿನ ಚೆಂಡ
ಮದನಗೃಹಕೆ ವೊಂದಿಸಿದಳು || ೧೬೭ ||

ಹರಸಿದ ಹರಕೆಯು ಕೈಗೂಡಿತೆನುತಲಿ
ಪುರುಷ ಬಂದೆನುತ ರತ್ನಾಜಿ |
ತರಿಸಿ ಪುಣುಗು ಜ್ವಾದಿ ಕಸ್ತೂರಿಯನು
ಸರಸಿಜಮುಖಿ ಲೇಪಿಸಿದಳು || ೧೬೮ ||

ಪಟ್ಟೆ ದೇವಾಂಗವನು ಸುತ್ತಿನ್ನು ಚೆಂಡಿಗೆ
ಇಟ್ಟಳು ಗಂಧ ಕಸ್ತೂರಿಯ |
ತರತರದಲಿ ಮುತ್ತಿನಾರತಿ ಸಹಿತಲಿ
ತೆರಳಿ ಒಸಗೆ ಪಾಡುತಲಿ || ೧೬೯ ||

ಬಂದು ರಾಮಯ್ಯನ ಚೆಂಡಿಗೆ ಇದಿರಾಗಿ
ನಿಂದು ಆರತಿಯನೆತ್ತಿದಳು |
ಚೆಂದದಿಂದಲಿ ರತ್ನಾಯಿ ತಿರಿಗಿಬಂದು
ತಂದು ಇಟ್ಟಳು ಮಂಚದ ಮೇಲೆ || ೧೭೦ ||

ಇತ್ತ ಚಿನ್ನದ ಗದ್ದುಗೆ ಮಾಡಿ ಚೆಂಡಿಗೆ
ಅಂದದಿ ಪೂಜೆ ಮಾಡಿದಳು |
ಸುತ್ತ ಮಂಚಕ್ಕೆ ಕಾವಲನಿಟ್ಟು ಮನವನು
ಇತ್ತ ಹರುಷದಲಿ ರತ್ನಾಜಿ || ೧೭೧ ||

ಮುತ್ತಿನ ಚೆಂಡಿಗೆ ರಾಮಯ್ಯ ಬಂದಂತೆ
ಕಿತ್ತು ಬಲುವೇಷ ಮಾಡಿದಳು |
ಹರುಷದಿ ರತ್ನಾಜಿ ಇರದೆ ಏಕಾಂತದಿ
ತರುಣೆಗೈಶ್ವರ್ಯ ಬಂದಂತೆ || ೧೭೨ ||

ತರುಣಿ ಬೇಗದದಾಗ ಸಂಗಿಯ ಕರೆದಳು
ಹೊರಗೆ ಕಾವಲ ಇರು ಎನುತ |
ಗರುವೆ ಮುತ್ತಿನ ಕಾಲುಮಣಿಯ ಮಂಚದ ಮೇಲೆ
ಅರಸಿ ರತ್ನಾಜಿ ಚೆಂದದಲಿ || ೧೭೩ ||

ತಂದೆ ಇಲ್ಲದ ಅರಮನೆಗೆ ತಾ ಹೋದರೆ
ಕುಂದು ಬರುವದೆಂದು ರಾಮ |
ಎಂದು ಬಾಹನೊ ಬಾರದಿರುವನೋ ರಾ ತಾ
ಸಂದೆಹಿಸುತಲಿ ರತ್ನಾಜಿ || ೧೭೪ ||

ಅನುಮಾನವಾಗಿ ತಾ ಮೂಗಿನೊಳ್ ಬೆರಳಿಟ್ಟು
ನೆನೆದಳು ಕುಟಿಲ ದೇವಿಯರ |
ಕೊನರಿಸಿ ಮೂಗಿಗೆ ಬೆರಳಿಟ್ಟು ರತ್ನಾಜಿ
ನಿಂತು ಬಾಗಿಲನು ನೋಡಿದಳು || ೧೭೫ ||

ಅತ್ತ ರಾಮಯ್ಯನ ಚಿಂತಿಲಿ ರತ್ನಾಜಿ
ಯಾತಕೆ ಬಾರನೊ ರಾಮ |
ಚಿಂತೆ ವೆಗ್ಗಳವಾಗಿ ಇರುವಳು ರತ್ನಿಯು
ಮತ್ತೆ ರಾಮುಗನ ನೆನೆನೆನೆದು || ೧೭೬ ||

ಇತ್ತಲಿ ಮನ್ನೆಯರು ಚೆಂಡು ಹೋಯಿತು ಎಂದು
ಮತ್ತೆ ಸ್ಯೆವೆರಗಾಗಿ ನಿಂದು |

ಮೃತ್ಯು ಬಂದಿತು ಎಂದು ಚಿಂತಿಸಿ ಕಾಟಣ್ಣ
ನಿಂತ ಬಳಿಗೆ ಸಂಧಿ ಮುಗಿಯೆ || ೧೭೭ ||

ಇದು ಪರನಾರಿ ಸೋದರ ರಾಮನಾಥನ
ಪದಕೃತಿಯೊಳಗೊಂದು ಕಥೆಯ |
ವಿದಿತ ಪಾಶದಿ ಚೆಂಡನಾಡಿದನೆಂದೆಂಬ
ವಿದಿತ ಪಾಶದಿ ಚೆಂಡನಾಡಿದನೆಂದೆಂಬ
ಅಧಿಕ ಸಂಧಿಯು ಸಂಪೂರ್ಣ || ೧೭೮ ||

**ಅಂತು ಸಂಧಿ ೧೬ಕ್ಕಂ ಪದನು ೧೬೫೮ಕ್ಕಂ ಮಂಗಳ ಮಹಾಶ್ರೀ**

## ಸಂಧಿ ೧೭ - ಕೊಮಾರ ರಾಮಯ್ಯನನ್ನು ರತ್ನಾಜಿ ಮೋಹಿಸಿದುದು

ಶ್ರೀ ಗಿರಿಜಾ [ಸ್ಯಾಂಬುಜ ದಿನ]ನಾಯಕ
ಭೋಗಿಭೂಷಣ ಭಾಳನೇತ್ರ |
ಭಾಗೀರಥಿಧರ ಭವರೋಗವೈದ್ಯನೆ
ನಾಗ [ಕುಂಡಲ]ಶರಣೆಂಬೆ || ೧ ||

ರಾಮನ ನೆನೆ ಕಂಡ್ಯಾ ಮನವೆ ಜಟ್ಟಂಗಿಯ
ರಾಮನ ನೆನೆ ಕಂಡ್ಯಾ ತನುವೆ |
ರಾಮರಾಮಾ ಎಂಬ ನಾಮವ ನೆನೆದರೆ
ಕಾಮಿತ ಫಲವೀವ ರಾಮ || ೨ ||

ಕಂಪಿಲರಾಯ ಕೇಳಿದರೆ ಏನೆಂಬನೊ
[ಹಂ]ಪಿ ಲಿಂಗಯ್ಯ ಕಂಗೆಡುತ |
ಬೇಡವೆಂದರೆ ಕೇಳೆ ರಾಮ ಚೆಂಡಾಟವ
ಆಡಬಂದೆಯೊ ನಿಲ್ಲಗೊಡದೆ || ೩ ||

ಚೆಂಡನೇತಕೆ ಕೊಂಡಳು ತಾಯಿ ಚಿಕ್ಕಮ್ಮ
ಬಂಡಾಟದ ಮಾತು ಬೇಡ |
ಕಂಡು ಚಿಕ್ಕಮ್ಮನ ಪಾದಕ್ಕೆ ಶರಣೆಂದು
ಕೊಂಡು ನೀ ಬಾರೊ ಕಾಟಣ್ಣ || ೪ ||

ಭೀತಿಯಿಲ್ಲದೆ ಹೋಗಿ ಚಿಕ್ಕಮ್ಮನಲ್ಲಿಗೆ
ಮಾತೆ ಅಮ್ಮನ ಪಾದಕೆರಗಿ |
ಮಾತೆಯ ಕೈಯಲ್ಲಿ ಚೆಂಡನು ತಂದು ಬೇಗದಿ
ಭೀತಿಯೆಲ್ಲವ ಬಿಡಿಸುವೆನು || ೫ ||

ಒಂದು ಬಾರಿಗೆ ಹೋಗಿ ಬೇಡು ನೀ ಚೆಂಡನು
ಕೊಂಡು ಬಾ ಕಾಟಣ್ಣ ನೀನು |
ಕಂದನು ನಿಮ್ಮ ಚೆನ್ನಿಗ ರಾಮನಿಟ್ಟರೆ
ಬಂದಿತು ಕೈತಪ್ಪಿಯೆಂದು || ೬ ||

ನಿಂದು ಅಂಗಳದಲ್ಲಿ ಚೆಂಡ ನೀ ಬೇಡಣ್ಣ
ಕಂದಿದ ಮುಖ ದುಗುಡದಲಿ |
ಎಂದ ಮಾತನು ಕೇಳಿ ಮೆಲ್ಲನೆ ಕಾಟಣ್ಣ
ಬಂದನು ಚೆಂಡ ಬೇಡುವರೆ || ೭ ||

ಗಮ್ಮನೆ ಹೋಗಿ ಹೊಕ್ಕನು ಕಾಟಣ್ಣನು
ನೆಮ್ಮಿದ ಸಂಗಿಯ ಕಂಡು |
ಚಿಮ್ಮಿದ ಹಾಗೆ ಚೆಂಡಿಲ್ಲಿಗೆ ಬಂದಿತು
ಗಮ್ಮನೆ ಕೊಡು ಚೆಂಡ ಬೇಗ || ೮ ||

ನಿಮ್ಮಾಣೆ ನಮ್ಮ ಕಣ್ಣಿಗೆ ಸಂಧಿಸಲಿಲ್ಲ
ಅಮ್ಮಾಜಿ ನೋಡೆ ಕಾಟಣ್ಣನ |
ತಮ್ಮ ಮುತ್ತಿನ ಚೆಂಡು ನಮ್ಮಲ್ಲಿ ಇದೆಯೆಂದು
ನಿಮ್ಮ ಕುಮಾರ ಬಂದಿಹನೆ || ೯ ||

ಚೆಂಡು ಇಲ್ಲಿದೆಯೆಂದು ಬಂದವನಾರೆಲೊ
ಗಂಡಸಿಲ್ಲದ ಅರಮನೆಗೆ |
ಗಂಡಾಳು ನಿಮ್ಮ ಹಿರಿಯಮಗನು ಕಾಟ
ಚೆಂಡ ಬೇಡರೆ ಬಂದೆ ನಾನು || ೧೦ ||

ಯಾಕೆ ಬಂದೆಲೊ ಕಾಟ ಅರಸಿಲ್ಲದರಮನೆಗೆ
ಜೋಕೆಯೆ ನಿನಗಿದು ಗುಣವೆ |
ನೂಕೆಂದು ನೂಕಿಸೆ ಮುಖ ಖಿನ್ನನಾಗಲು
ಆಕೆ ಮಗನ ದಬ್ಬಿಸಿದಳು || ೧೧ ||

ಆಡಬಂದರೆ ನಮ್ಮ ಸತಿಯರು ನಿಮ್ಮೊಳು
ನೋಡಿರೆ ಇವನೊಡಲುರಿಯ |
ಕಾಡಬೇಡವೊ ಹೋಗು ಚೆಂಡಿಲ್ಲಿಗೆ ಬಂದಿಲ್ಲ
ನೋಡಿಕೊ ಹೋಗೊ ಇದ್ದಲ್ಲಿ || ೧೨ ||

ಪದ್ಮದವನೆ ಕೇಳು ಬಂತು ಮುತ್ತಿನ ಚೆಂಡು
ಮುಂದೆ ನೀ ತರಿಸಿ ಕೊಡಮ್ಮ |

ಕೊಂಡುಹೋದೆನು ಚೆಂಡ ನೀ ಬೇಗ ಕೊಡಿಸು ಭೂ
ಮಂಡಲದೊಡತಿ ಚಿಕ್ಕಮ್ಮ || ೧೩ ||

ಚೆಲ್ಲೆಗಂಗಳ ರಾಮನಿಟ್ಟ ಚೆಂಡು
ಎದ್ದು ನಿಮ್ಮಂಗಳಕೆ ಬಂತು || ೧೪ ||

ಶೃಂಗಾರದೋಟದೊಳಗೆ ನೋಡುವೆನೆಂದು
ಅಂಗನೆ ತೆರಳ್ದು ಅರ್ತಿಯಲಿ |
ರತ್ನಾಜಿ ಕಾಟಣ್ಣ ಸಂಗಿಯನೊಡಗೊಂಡು
ತೋಟಕೆ ಬಂದರು ಬೇಗ || ೧೫ ||

ಪಾಟಿಸಿ ಬೆಳೆದ ಪುಷ್ಪದ ಗಿಡದೊಳಗೆಲ್ಲ
ನೋಟದಿ ನೋಡಿದರಾಗ || ೧೬ ||

ಬಲ್ಲಿದ ರಾಮಯ್ಯನಿಟ್ಟ ಮುತ್ತಿನ ಚೆಂಡು
ಮಲ್ಲಿಗೆ ಗಿಡಗಳಡಿಯಲ್ಲಿ |
ಅಲ್ಲಲ್ಲಿ ಅರಸಿ ಕಾಣದೆ ಆಗ ರತ್ನಾಜಿ
ಎಲ್ಲಿ ಹೋಯಿತೋ ಚೆಂಡು ಮಗನೆ || ೧೭ ||

ಒಚ್ಚರೆಗಂಗಳ ರಾಮನಿಟ್ಟ ಚೆಂಡು
ಪಚ್ಚೆದ ಗಿಡಗಳಡಿಯಲ್ಲಿ |
ಕಂಫಿಲರಾಯನ ಮಗನಿಟ್ಟ ಮುತ್ತಿನ ಚೆಂಡು
ಸಂಪಿಗೆ ಗಿಡಗಳಡಿಯಲ್ಲಿ || ೧೮ ||

ಕೋವಿದ ರಾಮಯ್ಯನಿಟ್ಟ ಮುತ್ತಿನ ಚೆಂಡು
ಭಾವಿಯ ತಡಿಯಲ್ಲಿ ನೋಡಿ |
ಆವ ಕಡೆಗೆ ಹೋಯಿತು ಚೆಂಡು ಕಾಟಣ್ಣ
ಆವ ಬಳಿಯಲಿ ಮಾಜಿದರೊ || ೧೯ ||

ಗಂಭೀರ ರಾಮಯ್ಯನಿಟ್ಟ ಮುತ್ತಿನ ಚೆಂಡು
ನಿಂಬೆಯ ಗಿಡದ ಅಡಿಯಲ್ಲಿ || ೨೦ ||

ತಿರಿಗಿ ಬಂದಳು ಅರಮನೆಗಾಗಿ ರತ್ನಾಜಿ
ದೊರೆಯು ಕಾಟರ್ಣಣನೆಡೆಗೆ |
ಧುರಗಲಿ ರಾಮಯ್ಯನಿಟ್ಟ ಚಂಡರಸಿಯೆ
ತಿರಿಗಿ ರತ್ನಾಜಿ ಬೇಗದಲಿ || ೨೧ ||

ಬಂದ ಕಾಟರ್ಣಣಗೆ ಗಂಧ ವೀಳ್ಯವನಿತ್ತು
ಕುಂದದೆ ನುಡಿದವನೊಡನೆ |
ಕಂದ ರಾಮನ ನೋಡಬೇಕೆಂದು ರತ್ನಮ್ಮ
ಮುಂದುವರಿದು ಹೇಳಿದಳು || ೧೧ ||

ಇಮ್ಮಡಿ ರಾಮನ ಸಮನಲ್ಲವೆಲೆ ತಾಯೆ
ನಿಮ್ಮಯ ಹಿರಿಯ ಕುಮಾರ |
ತಮ್ಮ ರಾಮುಗ ಬರಲರಿಯ ಮುತ್ತಿನ ಚೆಂಡ
ಗಮ್ಮನೆ ಕೊಡಿಸು ಚಿಕ್ಕಮ್ಮ || ೧೩ ||

ಕಂದನ ನೋಡುವೆ ಬೇಗ ನೀ ಬರಹೇಳೊ
ಎಂದು ಹೇಳಿದಳು ಕಾಟನಿಗೆ |
ಚೆಂಡಿನ ನೆವದಲಾದರು ಮಗನನು ಕಂಡು
ತಂದುಕೊಡುವೆ ಸಂತೋಷದಲಿ || ೧೪ ||

ಕೊಂಡೊಯ್ಯಲಿ ತನ್ನ ಮನಬಂದ ವಸ್ತುವ
ಗಂಡುರಾಮನ ಬರಹೇಳೊ |
ತಮ್ಮ ರಾಮನು ಬರಲರಿಯ ಬುದ್ಧಿ ಸಾಲದು
ಗಮ್ಮನೆ ಚೆಂಡು ತಾರಮ್ಮ || ೧೫ ||

ಮಗ ಬಂದರಲ್ಲದೆ ಕೊಡೆಹೋಗು ಚೆಂಡನು
ನಗೆಮೊಗದವನೆ ಕಾಟಣ್ಣ |
ಜಗದೊಳು ತಾಯಿ ಮಕ್ಕಳಿಗೆ ನಾಚಿಕೆಯುಂಟೆ
ಹಗೆಯ ರಾಮನಿಗೆ ಎನ್ನ ಮನೆಯು || ೧೬ ||

ತಲೆಯು ಇದ್ದಂತೆ ಮುಂಡಕೆ ಶಾಸೆಯಿಡುವರೆ
ಲಲನೆ ಕೇಳಮ್ಮ ಚಿಕ್ಕಮ್ಮ || ೧೭ ||

ಎನ್ನಯ ಮೋಹದ ಮಗ ಬಂದರಲ್ಲದೆ
ನಿನ್ನಾಣೆ ಕೊಡೆನೊ ಕಾಟಣ್ಣ |
ರನ್ನದ ತೂಗುಮಂಚದಿ ಪೂಜೆ ಮಾಡ್ಯೆತೆ
ತನ್ನನೊಯ್ಯಲಿ ಬರಹೇಳೊ || ೧೮ ||

ಸರಸವ್ಯಾತಕೆ ಮಕ್ಕಳ ಕೂಡೆ ಚಿಕ್ಕಮ್ಮ
ತರಿಸಿ ಕೊಟ್ಟೆನ್ನ ನೀ ಕಳುಹು |
ಹಿರಿಹರಿಗಿದು ಗುಣವೆ ಎಂದು ಕೇಳಲು
ತರಳೆ ನುಡಿದಳೊಂದು ಮಾತ || ೧೯ ||

ಅಕ್ಕನ ಮಗನು ಕುಮಾರ ರಾಮಯ್ಯನ
ಚಿಕ್ಕಂದು ಮೊದಲು ನಾನರಿಯೆ |
ಚಿಕ್ಕ ಕುಮಾರ ರಾಮಯ್ಯನು ಬಂದರೆ
ಮುತ್ತಿನ ಚೆಂಡ ಕೊಡುವೆನು || ೩೦ ||

ಆರ ಚೆಂಡನು ನಾನಾರಿಗೆ ಕೊಡಲಪ್ಪ
[ಸೇರದು]ದಾಯಾದ್ಯ ಜಲ್ಮ |
ತೋರ ಮುತ್ತಿನ ಚೆಂಡ ನಿನಗಿತ್ತೆನಾದರೆ
ಹೋರಾಟ ಬಹುದು ಇಬ್ಬರಿಗೆ || ೩೧ ||

ರಾಮುಗಗೇನು ನಾಯಕತನ ಬಂದುದೊ
ಪ್ರೇಮದಿ ಚೆಂಡ ಬೇಡುವರೆ |
ತಾಮಸಗಣ್ಣ ಯೌವನದ ಮದವೊ ಎಂದು
ಕೋಮಲೆ ರತ್ನಿ ಆಡಿದಳು || ೩೨ ||

ಆ [ಧೀರ] ನೇಮಿಯೊಡನೆ ರಾವನಾಥನು
ಕಾದಿ ಗೆಲಿದೆನೆಂಬ ಗರ್ವ |
ಮೇದುನಿಯೊಳು ತಾಯಿಮನೆಗೆ ಮಕ್ಕಳು ಬಂದು
ಭೇದವಿಲ್ಲದೆ ಬೇಡುವರೆ || ೩೩ ||

ಚಿಕ್ಕಂದು ಮೊದಲು ಎನ್ನೊಳು ನೀವು ಕೂಡುಂಡು
ಸೊಕ್ಕಲಿ ಬಹುದೆ ನೀವೀಗ |
ಚಿಕ್ಕಮ್ಮನಲ್ಲವೆ ನಿಮಗೆ ನಾ ಕಾಟಣ್ಣ
ಮಕ್ಕಳಲ್ಲವೆ ನೀವು ಎನಗೆ || ೩೪ ||

ಠಕ್ಕುತನದ ನೋವನಿಕ್ಕಿ ರತ್ನಮ್ಮನು
ಒಕ್ಕಳು ಹುಸಿಯ ಕಂಬನಿಯ |
ಚಿಕ್ಕಮ್ಮ ನಿನಗೀ ದುಃಖವೇತಕೆಯೆಂದು
ಗಕ್ಕನೆ ಪಾದಕೆರಗಿದನು || ೩೫ ||

ಎಲೆ ತಾಯೆ ನಿನ್ನ ಕಂಬನಿ ಬೀಳುವಾಗಲಿ
ತಲೆ ಬೀಳಬೇಕು ರಾಮುಗನ || ೩೬ ||

ಚೆಂಡು ಬೇಕಾದರೆ ರಾಮನ ಬರಹೇಳೊ
ಚೆಂಡ ಕೊಡುವೆನೆಂದಳವಳು |
ಎಂದ ಮಾತನು ಕೇಳಿ ಮೆಲ್ಲನೆ ಕಾಟಣ್ಣ
ಬಂದು ರಾಮಗೆ ಹೇಳಿದನು || ೩೭ ||

ಹಳೆಯ ಬಲ್ಲುಗನ ಕರೆಯಲು ಬಂದು ಬಿನ್ನೈಸಲು
ಧುರಗಲಿ ರಾನಿಂತೆಂದ |
ಮರುಳ ರತ್ನಿಯ ಮನೆಗೆ ನೀ ಹೋಗು ಬಲ್ಲುಗ
ಧುರಧೀರ ಚೆಂಡು ಬೇಡುವರೆ || ೩೮ ||

ಒಡೆಯ ರಾಮಯ್ಯ ಕಳುಹಲು ಆಗ ಬಲ್ಲುಗ
ನಡೆದನು ಚಂಡ ಬೇಡುವರೆ || ೩೯ ||

ಭರದಿಂದ ಬಂದು ಬಿನ್ನೈಸಿದ ಬಲ್ಲುಗ
ಗರುವೆ ರತ್ನಾಜಿಗಿಂತೆಂದ |
ಪರನಾರಿಸೋದರ ರಾಮನ ಚೆಂಡನು
ಸರಸಿಜಮುಖಿಯೆ ತಾರಮ್ಮ || ೪೦ ||

ರಾಮನ ಬಿರಿದ ಕೊಂಡಾಡಿದೆ ಬಲ್ಲುಗ
ಕಾಮುಕನಹುದೊ ಊಳಿಗವು |
ಸೀಮೆಯೊಳಗೆ ಆರನೊಲಿಸಿದೊ ಬಲ್ಲುಗ
ಕಾಮುಕವಿಟ್ಟವ ನುಡಿಯೆ || ೪೧ ||

ತಾಯಿಮನೆಗೆ ಬಂದು ಮಗ ಚೆಂಡ ಬೇಡಲು
ನ್ಯಾಯವೇತಕೆ ಬರಹೇಳೊ |
ಆಯುತಾಕ್ಷಿಯ ಮಾತನು ಕೇಳಿ ಬಲ್ಲುಗ
ರಾಯನಲ್ಲಿಗೆ ಬಿಜಗೈದ || ೪೨ ||

ಭಾವದಿಂದಲಿ ಹೋಗಿ ಚೆಂಡನು ಬೇಡಿದೆ
ಕೋವಿದ ಚೆನ್ನಿಗ ರಾಮ |
ನೀವು ಬಂದಲ್ಲದೆ ಕೊಡಳಂತೆ ಚೆಂಡನು
ಆವ ಹದನೊ ನಾನರಿಯೆ || ೪೩ ||

ರಾಮಯ್ಯ ಎಂದನು ವಿಧಿ ಬೆನ್ನ ಬಿಡುವುದೆ
ಮುನ್ನಿನ ಸುಕೃತದ ಫಲವ |
ಸಂಗಡವಿಲ್ಲದೆ ಅರಮನೆಗೆ ಹೋಗುವರೆ
ಶೃಂಗಾರವನು ತೆಗಿ ತಮ್ಮ || ೪೪ ||

ಎಂದ ಕಾಟಣ್ಣನ ನುಡಿಗೇಳಿ ರಾಮಯ್ಯ
ನಿಂದು ಹಾರವ ತೆಗೆದುಕೊಟ್ಟ |
ಹೆಸರುಳ್ಳ ರಾಯರಗಂಡೆನು ಎಂಬ ಬಿರುದಿನ
ಕುಸುರಿ ಪೆಂಡೆಯವನು ತೆಗೆದ || ೪೫ ||

ಭೂಮಿಯೊಳುಳ್ಳ ರಾಯರಗಂಡ
ರಾಮಯ್ಯ ತೆಗೆದನು ಕೊರಳ ಪದಕವ || ೪೬ ||

ಅಷ್ಟದಿಕ್ಕಿನ ರಾಯರಗಂಡನೆಂಬಂಥ
ಇಟ್ಟ ಬಾಪುರಿಯನು ತೆಗೆದ |
ಸುತ್ತಣ ರಾಯರಗಂಡನೆಂಬುವದೊಂದು
ಸುತ್ತಿದೆ ಚಿಮ್ಮುರಿಯನಳಿದ || ೪೭ ||

ಕನ್ನೋಜಿ ರಾಯರಗಂಡನೆಂಬುವದೊಂದು
ಹೊನ್ನುಂಗುರವ ತೆಗೆದುಕೊಟ್ಟ |
ಮನ್ನೆಯ ಮಗಧ ರಾಯರಗಂಡನೆಂಬಂಥ
ರನ್ನದ ಪದಕವ ತೆಗೆದ || ೪೮ ||

ದಂಡೆತ್ತಿ ಬರುವ ರಾಯರಗಂಡನೆಂಬುವ ಕಾಲ
ಪೆಂಡೆವ ತೆಗೆದುಕೊಟ್ಟ |
ಗಂಡುಗಲಿಯು ರಾಮ ಬಲು ಕಂಠಮಾಲೆಯ
ದಂಡೆ ಹಾರವ ತೆಗೆದುಕೊಟ್ಟ || ೪೯ ||

ರನ್ನದ ಕಡಗ ಚಿನ್ನದ ಸರಗಳ ರಾಮ
ಉನ್ನತ ನಡುವಿನುಡುದಾರ |
ಭಿನ್ನವಿಲ್ಲದೆ ರಾಮಯ್ಯ ತೆಗೆದುಕೊಟ್ಟ
ಅಣ್ಣ ಕಾಟಣ್ಣನ ಕೈಗೆ || ೫೦ ||

ಪಡುವಣ ರಾಯರಗಂಡನೆಂಬವದೊಂದು
ತೊಡರು ಪೆಂಡೆಯವನು ತೆಗೆದ |
ಗಡಿಯಂಕ ಮನ್ನೆಯರ ಗಂಡನೆಂಬುವದೊಂದು
ಕಡುಕು ಚೌಕುಳಿಯನು ತೆಗೆದ || ೫೧ ||

ಬಂಗಾಳ ರಾಯರ ಗಂಡನೆಂಬುವುದೊಂದು ಬೆರ
ಳುಂಗುರವನು ತೆಗೆದುಕೊಟ್ಟ |
ಪಿಂಗಾಳ ರಾಯರ ಗಂಡನೆಂಬುವದೊಂದು
ಅಂಗದಾಭರಣವ ಕೊಟ್ಟ || ೫೨ ||

ಕಡೆಯವು ಕಾಲೊಳುಲಿವ ಸರಪಳಿಗಳನು
ಲೋಲ ರಾಮನು ಮಡಗಕೊಟ್ಟ |
ಚಿತ್ತಜ ಸಮರೂಪ ರಾಮಯ್ಯ ಮಂಡೆಯ
ನೊತ್ತಿ ಬಿಗಿದ ಎಣ್ಣೆಗಂಟ || ೫೩ ||

ಹೊನ್ನ ನಾಮವನು ತೆಗೆವುತ ರಾಮಯ್ಯ
ರನ್ನದ ಕಡಗವ ಕಳೆದ |
ಭಿನ್ನವಿಲ್ಲದೆ ಕಾಟಣ್ಣಗೆ ಶರಣೆಂದು
ಚೆನ್ನ ರಾಮುಗನೆಡೆಗೊಂಡ || ೪೫ ||

ಸಾಗರಗಂಭೀರ ಸಲಹೊ ಜಟ್ಟಂಗಿಯ
ನಾಗಭೂಷಣ ನಂದಿಕೇಶ || ೫೫ ||

ಪರನಾರಿಯ  ಸಹೋದರನೆಂಬ ಕಡೆಯವ
ಧರಿಸಿದ ಎಡದ ಕಾಲೊಳಗೆ |
ದೊರೆ ರಾಮಯ್ಯ ಬರುವ ಸಂಭ್ರಮವನು ಕಂಡು
ಧರ್ಮದೇವತೆ ಬೆನ್ನಬಿಡಳು || ೫೬ ||

ಬಲ್ಲಿದ ರಾಮಯ್ಯ ಬರುವಾಗ ಬಾಗಿಲ
ಗೊಲ್ಲರು ಎದ್ದು ಕೈ ಮುಗಿಯೆ |
ನಿಲ್ಲಿ ಕುರ್ಳಳಿರಿ ಎಂಬ ಸನ್ಮಾನದಲಿ ರಾಮ
ಅಲ್ಲಿ ಹೊಕ್ಕನು ಅರಮನೆಯ || ೫೭ ||

ಬಾಗಿಲೊಳಗೆ ಅಲ್ಲಿರ್ದಂತೆಕ್ಕಟಿಗರು
ಬಾಗಿ ತಾವ್ ಕರಗಳ ಮುಗಿಯೆ |
ನಿಲ್ಲಿರಿ ಕುಳ್ಳಿರಿ ಎನುತಲಿ ರಾಮಯ್ಯ
ಮೆಲ್ಲನೆ ಒಳೆಯಾಕೆ ಪೊಕ್ಕ || ೫೮ ||

ಚೆನ್ನಿಗ ರಾಮಯ್ಯ ಒಳಬಾಗಿಲ ಪೊಕ್ಕು
ಚೆನ್ನದುಪ್ಪರಿಗೆಗೆ ಬರಲು |
ಕನ್ನೆವೆಣ್ಣಿಗೆ ಸನ್ನೆ ಮಾಡುತ ರತ್ನಿಯು
ರನ್ನದ ಹುಡೆಯ ಸೇರಿದಳು || ೫೯ ||

ಚೆನ್ನದ ಪಂಜರದೊಳಗಿರ್ದ ಅರಗಿಳಿ
ತನ್ನ ಜಾಳಿಂದ್ರದಿ ನೋಡಿ |
ಇನ್ನಿವನಾವ ದೇಶದ ರಾಯನೆನುತಲಿ
ಚೆನ್ನ ರಾಮನ ಕೇಳಿತಾಗ || ೬೦ ||

ಬಂದ ರಾಮನ ನೋಡಿ ನುಡಿಯಿತು ಅರಗಿಳಿ
ಚಂದ್ರಲೋಕದ ಚೆನ್ನಿಗನೊ |
ಇಂದು ಕಂಪಿಲರಾಯನಿಲ್ಲದ ಅರಮನೆಗೆ
ಬಂದವನಾರೆಲೊ ಪಾಪಿ || ೬೧ ||

ಅರಸಿಲ್ಲದರಮನೆಯನು ಹೊಕ್ಕವರಾರು
ಸರಸವೆ ಕಂಪಿಲಸನೊಡನೆ |
ಅರಸಿ ನಮ್ಮಕ್ಕಗ ಕಂಡು ಹೇಳುವೆ ನಾನು
ಬೆರಸಿ ಕಟ್ಟುವೆ ಹೆಡತಲೆಯ || ೬೨ ||

ಎಂದ ಅರಗಿಳಿಯ ಮಾತನು ಕೇಳಿ ರಾಮಯ್ಯ
ನಿಂದಾಗ ಮಾತನಾಡಿದನು || ೬೩ ||

ಏನೆಲೊ ಗಿಳಿರಾಮ ಎನ್ನ ನೀ ಮರೆದೆಯಾ
ನಾನು ರಾಮನು ಎಂಬುದರಿಯಾ |
ಕಾನನದೊಳು ಕಣ್ಣದಪ್ಪಿದಂತಾಗಿದೆ
ನೀನು ವಿಸ್ತವಾಗಿ ಹೇಳೊ || ೬೪ ||

ಹುಳಿಯೇರ ಮಾರಗೊಂಡನ ಮೇಲೆ ದಾಳಿಯ
ಗಳಿಲನೆ ನಾ ಹೋಗಿ ಅಂದು |
ಗಳುಹದೆ ನಿನ್ನ ಕಪ್ಪವ ಕೊಂಡುಬಂದವ
ಚೆಲುವ ರಾಮಯ್ಯನೆಂದರಿಯಾ || ೬೫ ||

ನಾನು ಕಂಪಿಲರಾಯನ ಕುಮಾರನು
ನಾನು ಮಾನ್ಯರ ಕೂಡಿಕೊಂಡು |
ಆನಂದ ಅರ್ತಿಲಿ ಚೆಂಡನಾಡಿದೆ ಕೇಳು
ನಾನೀಗ ಚೆನ್ನಿಗ ರಾಮ || ೬೬ ||

ಏನು ಕಾರಣ ಚೆನ್ನಿಗ ರಾಮಯ್ಯ
ನೀನು ಇಲ್ಲಿಗೆ ಬರಬಹುದೆ |
ಮಾನವಮದದಾನೆ ಮನ್ಮಥರೂಪನೆ
ಏನು ಹದನು ಹೇಳನಗೆ || ೬೭ ||

ಒತ್ತಿ ಬಲಿದು ನಾನು ಲೆಗ್ಗೆಯಿಡಲು ಮುನ್ನ
ಮತ್ತೆ ಉಪ್ಪರಿಗೆಯ ದಾಂಟಿ |
ಇತ್ತ ಚಿಕ್ಕಮ್ಮನರಮನೆಯೊಳು ಬೀಳಲು
ಹೆತ್ತ ತಾಯನು ಕೇಳಬಂದೆ || ೬೮ ||

ನಿನ್ನ ಚೆಂಡಿನ ಮನೆ ಮಂಟೆಯಾಯಿತು ರಾಮ
ನಿನ್ನ ಜೀವಕೆ ಮೂಲಬಂತು |
ಉನ್ನತದಿಂದಲಿ ಹಿಂದಕೆ ತಿರುಗೆಂದು
ಚೆನ್ನ ರಾಮಗೆ ಹೇಳಿತಾಗ || ೬೯ ||

ಅಯ್ಯಯ್ಯೋ [ಗಿಳಿರಾಮ]ನೊಂದೆಯಾತಕೆ ಕೇಳು
ಅಯ್ಯನ ರಾಣಿ ಚಿಕ್ಕಮ್ಮ |
ಕೈಯಲ್ಲಿ ಚೆಂಡದೆ ಕೈಮುಗಿವೆನು ನಾನು
ಒಯ್ಯನೆ ಬಿನ್ನೈಸುವೆನು || ೭೦ ||

ಚೆಂಡು ಬೇಕಾದರೆ ಸಾವಿರ ಬಂದಾವು
ಗಂಡು ನಿನ್ನನು ಪೋಲ್ವರಿಲ್ಲ |
ಬಂಡು ಆಗದೆ ನೀನು ತಿರುಗು ಹಿಂದಕೆ ಎಂದು ಪ್ರ
ಚಂಡ ರಾಮಗೆ ಹೇಳಿತಾಗ || ೭೧ ||

ರತ್ನಜಿಯು ನಿನ್ನ ಮೇಲೆ ವಿರಹಂಗಳ
ಯತ್ನವ ಮಾಡಿಕೊಂಡಿಹಳೆ |
ಜತ್ನವಾಗಿದ್ದಂತೆ ಹೋಗು ನೀ ರಾಮಯ್ಯ
ಯತ್ನಕ್ಕೆ ಒಳಗಾಗಬೇಡ || ೭೨ ||

ಬಿಡು ನಿನ್ನ ಚೆಂಡನು ಪಾಪಿ ನಾ ಸಾರಿದೆ
ಕೆಡಬೇಡ ತಿರುಗೊ ರಾಮಯ್ಯ || ೭೩ ||

ಮೊನೆಗಾರನೆಂಬ ಸತ್ವದಿ ನೀನಾ ರತ್ನಿಯ
ಮನೆಯನು ಹೋಗಬೇಡ ರಾಮ |
ನಿನಗೀಗ ಪ್ರಾಣದ ನೆಲೆಗೆ ಬರುವುದಿನ್ನು
ಚಿನುಮಯನಾಣೆ ಸಾರಿದೆನೊ || ೭೪ ||

ಎಂದು ನಾ ನಿನ್ನ ಮುಖವನು ನೋಡಲಿಲ್ಲವೊ
ಇಂದು ಕಂಡೆನು ನಿನ್ನ ಮುಖವ |
ಕಂದರ್ಪರೂಪ ಅಪಕೀರ್ತಿಯು ಬರುತ್ತದೆ
ಹಿಂದಕ್ಕೆ ತಿರುಗೆಂದು ಗಿಳಿಯು || ೭೫ ||

ಎಂದ ಗಿಳಿಯ ಮಾತನು ಕೇಳಿ ರಾಮಯ್ಯ
ನೊಂದುಕೊಂಡನು ಮನದೊಳಗೆ |
ಇಂದುಧರನೆ ಜಟ್ಟಿಂಗಿ ರಾಮೇಶನೆ
ಇಂದು ಕಂಟಕವ ಪರಿಹರಿಸೊ || ೭೬ ||

ಎನ್ನ ಪಣೆಯಲಿ ಬರೆದ ಕಲ್ಪನೆಯನ್ನು
ಇನ್ನು ಮೀರುವರಳವಲ್ಲ |
ಚೆನ್ನಿಗ ರಾಮಯ್ಯ ಗಿಳಿಯ ಮಾತನು ಕೇಳಿ
ಪನ್ನಗಧರ ಗತಿಯೆನುತ || ೭೭ ||

ಬಂದುದು ಬರಲಿ ಕಂಡುದ ಕಾಂಬೆನೆನುತಲಿ
ಮುಂದಕೆ ತಾನಡಿಯಿಟ್ಟ |
ನಂದಿವಾಹನ ಗತಿಯೆನುತಲಿ ಅಲ್ಲಿಂದ
ಬಂದ ಸಂಗಾಯಿ ಇದ್ದಡೆಗೆ || ೭೮ ||

ಚಿಂತೆಮಾಡುತ ರಾಮ ಎಂತಹುದೆನುತಲಿ
ಅಂತರಿಸುತ ಬರುತಿರಲು |
ಕಾಂತೆ ರತ್ನಮ್ಮ ಹಡಪದ ಸಂಗಿಯು
ನಿಂತಿರುವದ ಕಂಡ ರಾಮ || ೭೯ ||

ಕಂಡಳಾಗಳೆ ರಾಮಯ್ಯನ ಬರವನು
ದಂಡ[ಪ್ರಣಾಮ] ತಾನು ಮಾಡಿ |
ಗಂಡುಗಲಿಯು ರಾಮ ಬಂದೆಯಾತಕೆ ಎಂದು
ದಿಂಡೆಯು ಸಂಗಿ ಕೇಳಿದಳು || ೮೦ ||

ಬಂದ ಕಾರಣವೇನೊ ಧರೆಯ ರಾಯರಗಂಡ
ಎಂದು ಕೇಳಿದಳು ಸಂಗಾಯಿ |
ಚೆಂದದಿ ಮನ್ನೆಯರು ಸಹಿತ ಚೆಂಡಾಡಿದೆ
ಬಂದಿತು ನಿಮ್ಮರಮನೆಗೆ || ೮೧ ||

ಕಳುಹಿದೆ ಚೆಂಡು ಬೇಡುವರೆ ಕಾಟಣ್ಣನ
ಕಳುಹಿದೆ ಹಳೆಯ ಬಲ್ಲುಗನ |
ಕಳುಹಿದವರ ಕೂಡೆ ಚೆಂಡು ಕೊಡದೆ ನೀವು
ಬಳಲಿಸುವದು ಗುಣವಹುದೆ || ೮೨ ||

ಅರಮನೆಯೊಳು ಚೆಂಡು ಮುಟ್ಟಲಮ್ಮೆವು ನಾವು
ಸರಸವ ನಿಮ್ಮೊಳು ನಮಗೆ |
ಗರುವೆ ರತ್ನಮ್ಮನ ಬಳಿಯಲಿ ಚೆಂಡಿದೆ
ದೊರೆಗಳ ದೇವ ನೀ ಬೇಡು || ೮೩ ||

ಎಂದ ಸಂಗಿಯ ಮಾತನು ಕೇಳಿ ರಾಮಯ್ಯ
ನೊಂದುಕೊಂಡನು ಮನದೊಳಗೆ |
ಚಂದ್ರಶೇಖರ ಜಟ್ಟಂಗಿ ರಾಮೇಶನೆ
ಬಂದ ಕಂಟಕವ ಪರಿಹರಿಸೊ || ೮೪ ||

ಬಂದಿದೆ ಕಂಟಕ ಮುಂದಕ್ಕೆ ನಡೆದರೆ
ಇಂದುಧರನೆ ಗತಿಯೆನುತ |

ಮುಂದೇನು ಬಾಹುದೊ ಕಾಬೆನೆನುತ ರಾಮ
ಬಂದನು ಚೆಂಡ ಬೇಡುವರೆ || ೮೫ ||

ಭರದಿಂದ ಬಂದು ರತ್ನಾಜಿಗೆ ರಾಮಯ್ಯ
ಕರವ ಮುಗಿದು ನಮಿಸಿದನು |
ಹರಿಯಲದೇವಿಯವೋಪಾದಿ ಚಿಕ್ಕಮ್ಮ
ಹರುಷದಿ ಚೆಂಡ ಕೊಡಮ್ಮ || ೮೬ ||

ಬಂದು ನಿಂದುದನು ಕಂಡಳು ರತ್ನಾಜಿಯು
ಚಂದ್ರನ ಪೋಲ್ವ ರಾಮುಗನ |
ಕಂದ ನೀ ಬಾರೊ ಚೆಂಡಾಡಿ ದಣಿದೆಯೊ ಎಂದು
ಮಂದಿರಕವನ ಕರೆದಳು || ೮೭ ||

ಮಾಣಿಕದಂತೆ ಹೊಳೆವ ಗದ್ದುಗೆ ಹಾಸಿ
ಪ್ರಾಣ ಬಂದಂತೆ ಹಿಗ್ಗಿದಳು |
ಜಾಣ ರಾಮುಗ ಕುಳ್ಳಿರು ಬಾರೆಂದರೆ
ಏಣಲೋಚನೆ ಒಲ್ಲೆನೆಂದ || ೮೮ ||

ಇಂದು ಚೆಂಡಿಲ್ಲದೆ ನಿಂತಿದೆ ಆಟವು
ತಂದು ಕೊಡಮ್ಮ ಚಿಕ್ಕಮ್ಮ |
ಎಂದ ಮಾತನು ಕೇಳಿ ಒಂದಾರು ಭುಜವಾಗಿ
ನಿಂದು ಮಾರ್ನುಡಿದಳು ರತ್ನಾಜಿ || ೮೯ ||

ಇತ್ತ ಕೇಳೆಲೊ ನಿಮ್ಮ ಹೆತ್ತ ತಂದೆ ಮಂಚದಿ
ಮುತ್ತಿನ ಚೆಂಡು ಮಡಗಿದೆ |
ಅದೆ ಹೋಗು ಮುತ್ತಿನ ಚೆಂಡು ಮಂಚದ ಮೇಲೆ
ಮದನಸನ್ನಿಭನೆ ರಾಮಯ್ಯ || ೯೦ ||

ಸೆಜ್ಜೆಯ ಗೃಹಕ್ಹೋಗಿ ಹೆಜ್ಜೆಯನಿಡುವಾಗ
ಹುಜ್ಜಾರಿ ಮಂಚದೊಳಿರುವ |
ವೆಜ್ಜವಿಲ್ಲದ ಮುತ್ತು ಬಿಗಿದಿಹ ಚಂಡಿಗೆ
ಸಜ್ಜನ ರಾಮ ಕೈ ತುಡುಕೆ || ೯೧ ||

ಉರವಣೆಯಲಿ ಹೋಗಲೀಸದೆ ರಾಮನ
ತರಳೆ ಹಿಡಿದಳು ಮುಂದೆಲೆಯ |
ಗರುವ ರಾಮುಗ ನಿನ್ನ ರೂಪಿಗೆ ಮನಸೋತೆ
ನೆರೆದುಳುಹೊ ಎನ್ನ ಬೇಗದಲಿ || ೯೨ ||

ಹೊಕ್ಕು ಸಮಯದೊಳು ಒಳಪೊಕ್ಕು ರಾಮನ
ಅಕ್ಕರಿಂದಲಿ ತಬ್ಬಿಕೊಂಡಳು |
ಚಿಕ್ಕಮ್ಮ ಎನ್ನ ಪಡೆದ ತಾಯೆ ನೀನು
ಇಕ್ಕಲಿ ಬಹುದೆ ಈ ಮನಸ || ೯೩ ||

ಹರಿಯಲದೇವಿಯೋಪಾದಿ ಎನುತಿರ್ದೆ
ಪರಿಹರಿಸೆನ್ನ ಪಾತಕವ |
ಸಿಕ್ಕಿದೆ ಎನ್ನಯ ಭಾಗ್ಯದ ನಿಧಿಯೆಂದು
ಅಕ್ಕರದಿಂದ ಆಡಿದಳು || ೯೪

ಅಮ್ಮಾಜಿ ನೀ ನನ್ನ ಹಿಡಿಯ ಸಲ್ಲದು ತಾಯೆ
ನಿರ್ಮಳವಾಗಿ ಪೇಳೆನಗೆ |
ಹೆಮ್ಮೆ ಬೇಡವೊ ರಾಮ ಸಿಕ್ಕಿದೆ ಬಿಡಲಾರೆ
ಕಮ್ಮಗೋಲನ ಬಾಧೆ ಘನವು || ೯೫ ||

ಹರಹರಾ ಎನುತೆರಡು ಕಿವಿ ಮುಚ್ಚಿ
ರಾಮಯ್ಯ ಪರಿಹರಿಸೆನ್ನ ಪಾತಕವ || ೯೬ ||

ಕನಸಿನೊಳಗೆ ಬಂದು ಕಾಡುತಲಿರೆ ರಾಮ
ಮನಸಿಲ್ಯಾತಕೆ ಸುಮ್ಮನಿರ್ದೆ |
ಮುನಿಸು ಸಲ್ಲದು ಮುಂದುಗೆಟ್ಟನು ವಿರಹದಿ
ಮನಸಿಜರೂಪ ನೀ ಕಾಯೋ || ೯೭ ||

ಅತಿಮಾತು ಬೇಡ ಚಿಕ್ಕಮ್ಮ ಮುಂದಲೆ ಬಿಡು
ಸುತನಲ್ಲವೆ ನಾನು ನಿನಗೆ |
ಸತಿಯಲ್ಲವೆ ನಮ್ಮ ಕಂಪಿಲರಾಯಗೆ
ಮತಿಗೆಡುವರೆ ಚಿಕ್ಕಮ್ಮ || ೯೮ ||

ಶೂಲದ ಹಬ್ಬದಿ ನಿನ್ನ ಕಂಡೆನೊ ರಾಮ
ಬಾಳುವ ಕಾಲವ ಮರೆದೆ |
ಭೂಲೋಕದೊಳಗಿಂಥ ಚೆಲುವನ ಶಿವ ತಾನು
ಲೋಲನ ಪುಟ್ಟಿಸಬಹುದೆ || ೯೯ ||

ಬಾಲೆ ಹೆಣ್ಣು ಬಯಸಿ ಬಂದು ಹಿಡಿದರೆ
ಒಲ್ಲೆನೆಂಬುವದು ಗುಣವೇನೊ |
ಚಿನ್ನವು ಕೈಸೇರಿದರೆ ಬಿಡುವವರುಂಟೆ
ಹೆಣ್ಣು ಮೇಲಿಕ್ಕಿ ಮೋಹಿಸಿದರೆ || ೧೦೦ ||

ಹೆಣ್ಣಿನಳಲು ಹೊಲ್ಲೆವೆಂಬ ರಾಮನ ಮೇಲೆ
ಮಣ್ಣ ತೂರಿದಳು ರತ್ನಾಜಿ |
ಕಣ್ಣನೀರಿಲಿ ಕೈಯ್ಯ ತೊಳೆದು ಉಂಗು[ಟ ಕಚ್ಚಿ]
ಬಣ್ಣಗುಂದಿದಳು ರತ್ನಜಿ || ೧೦೧ ||

ಚಿತ್ತ ಒಲಿದು ಒಪ್ಪತ್ತಿನ ಭೋಗವ
ನಿತ್ತು ಮನ್ನಿಸಿ ಮಾತನಾಡೊ |
ಮುತ್ತು ಮಾಣಿಕ ನವರತ್ನ ಬಂಗಾರವ
ನಿತ್ತಪೆ ಬೇಗ ಕೂಡೆನ್ನ || ೧೦೨ ||

ದೃಷ್ಟಿಸಿ ನೋಡಿ ಮಾತಿಗೆ ಮಾತನಾಡುತ
ನೆಟ್ಟಗೆ ಮುನಿಸಿದಂತಿಹಳು |
ಬಟ್ಟ ಕುಚವ ತೋರುವಳು ಎದೆಗೆಡಹೇಳಿ
ದಿಟ್ಟ ಕುಮಾರ ರಾಮಯ್ಯಗೆ || ೧೦೩ ||

ಹೊಸಮಲೆದುರ್ಗವ ನಿನ್ನೊಶಮಾಡುವೆ
ದೆಸೆಯ ಮನ್ನೆಯರ ಕಾಣಿಸುವೆ |
ವಿಷಮದ್ದನಿಕ್ಕಿ ಕೊಲುವೆ ಮುದಿ ಕಂಪಿಲನ
ಹೊಸಪಟ್ಟ ನಿನಗೆ [ಮಾಡಿಸುವೆ] || ೧೦೪ ||

ಭೂತದೊಳು ತಾಯಿ ಮಕ್ಕಳ ಬಯಸಿದರೆ
ಪಾತಕಕೊಳಗಾಗಬಹುದೆ |
ಮಾತಲ್ಲ ಬಿಡು ನಿನ್ನ ಮನಸಿಲಿ ನೋಡಿಕೋ
ನೀತಿಯೆ ನಿನಗಿದು ಗುಣವೆ || ೧೦೫ ||

ಕೊಂದು ಹೋಗಲೊ ರಾಮ ನಿಂದು ಸೈರಿಸಲಾರೆ
ಮುಂದುಗೆಟ್ಟೇನೊ ವಿರಹದಲಿ |
ಒಂದು ಗಳಿಗೆ ಭೋಗವನಿತ್ತು ಸೈರಿಸು
ಕಂದರ್ಪ ಸಮರೂಪ ರಾಮ || ೧೦೬ ||

ಯಾತಕೆ ಚಿಕ್ಕಮ್ಮ ಬಯಲ ಕಾತರವದು
ಕಾಕು ಆಗುವರೆ ಬಲ್ಲವರು |
ಲೋಕ ನಿಂದಿಸುವುದು ಕೇಳಿದವರು ಬೇಗ
ವಾಕರಿಸುವರು ಚಿಕ್ಕಮ್ಮ || ೧೦೭ ||

ಮರೆ ಯಾಕೆ ರಾಮ ರತ್ನಾಜಿಯ ಮಗನೆಂದು
ನೆರೆ ಹೊಯ್ಸುವೆನು ಡಂಗುರವ || ೧೦೮ ||

ಸಾಕಿದಾಕೆಯು ಹರಿಯಮ್ಮನು ತಾನೆಂದು
ಹೆತ್ತಾಕೆ ರತ್ನಮ್ಮನೆಂದು |
ಲೋಕಕರಿಕೆಯನು ಮಾಡುವೆನು ಕಂಪಿಲರಾಯ
ಭೂಕಾಂತ ಮೆಚ್ಚುವಂದದಲಿ || ೧೦೯ ||

ಬೇಡ ಬೇಡಪಕೀರ್ತಿ ನಾಡೊಳು ಮಕ್ಕಳ
ಕೂಡುವೆನೆಂದು ಬಯಸುವರೆ |
ಬೇಡ ಚೆಂಡನು ಕೊಡು ಹೋಹೆ ಮನ್ನೆಯರೆಲ್ಲ
ನೊಡುವರೆನ್ನ ದಾರಿಯನು || ೧೧೦ ||

ಚೆಂ[ಡೇನೊ ಪಾವನ] ಚೆಲುವ ರಾಮುಗ ನೀನು
ಭಂಡಾರ [ಸಿರಿ]ಯ ಭಾಗ್ಯವನು |
ಕೊಂಡೊಯ್ಯೊ ಆಶೆಯ ಬಿಡಿಸೊ ನೀ ಎನ್ನಯ
ಹೆಂಡತಿಯನು ಮಾಡಿಕೊಳ್ಳೊ || ೧೧೧ ||

ಪಾಪವ ಕೇಳಿದೆ ಜಟ್ಟಂಗಿ ರಾಮೇಶ
ಆಪತ್ತು ತರುವರೆ ಎನಗೆ |
ಈ ಪರಿ ಅಲ್ಪಬುದ್ಧಿಯನೆಣಿಸುವರೆ ತಾಯಿ
ಭೂಪಾಲ ಕಂಪಿಲನರಸಿ || ೧೧೨ ||

ಹಲವು ಮಾತೇನಮ್ಮ ಕೇಳು ಮದುವೆಯಾದ
ಲಲನೆರಲ್ಲದೆ ಪರಸತಿಯ |
ಒಲಿದು ಮೋಹಿಸಿದವನವನು ಸತ್ಪುರಷನೆ
ಹೊಲೆಯನಲ್ಲವೆ ಭೂಮಿಯೊಳಗೆ || ೧೧೩ ||

ನೀತಿಶಾಸ್ತ್ರವ ಕೇಳಬ[ದೆನೊ] ನಿನ್ನೊಳು
ಯಾತರ ಧರ್ಮದ ನಡತೆ |
ಸೋತವಳೊಡನೆ ಮನ್ನಿಸೊ ಸನ್ನಿಭಭೂಪ
ಕಾತರಿಸುತ ಹಲುಬಿದಳು || ೧೧೪ ||

ಕಥೆಯನೋದುವರೆಲ್ಲ ವ್ರತಗೆಟ್ಟು ಹೋದರು
ಪೃಥ್ವಿಯೊಳಗೆ ಬ್ರಹ್ಮ ತನ್ನ |
ಸುತೆಯ ಮದುವೆಯಾದ ಕೇಳರಿಯ ರಾಮ ನೀ
ಸತಿಗೊಳಗಾಗದವರ್ಯಾರೊ || ೧೧೫ ||

ಮಳೆಗಾಲದೊಳು ಮಲ್ಲಿಗೆ ಕಾತ ತೆರನಂತೆ
ಅಳಿವೆನೊ ಮುದಿಕಂಪಲಿಗೆ |

ಹೊಳೆವ ಮನ್ಮಥರಾಮ ಒಲಿದೆನ್ನ ಕೂಡೆಂದು
ನಳಿನಾಕ್ಷಿ ರತ್ನಿಯಾಡಿದಳು || ೧೧೬ ||

ಚಿಕ್ಕಮ್ಮ ನೀ ನನ್ನ ಪಿಡಿಯ ಸಲ್ಲದು ನಿನ್ನ
ಚಿಕ್ಕಂದು ಹುಟ್ಟಿದ ಮಗನು |
ತರ್ಕೈಸಿಕೊಂಡ ಮುಂದಲೆಯನು ಬಿಡುಯೆಂದು
ಅಕ್ಕರಿಂದಲಿ ಆಡಿದನು || ೧೧೭ ||

ಆಡಿದ ಮಾತನು ಕೇಳಿ ರತ್ನಮ್ಮನು
ತೋಡಿದಳಾಕೆ ಮಾರ್ನುಡಿಯ |
ಬೇಡ ರಾಮಯ್ಯ ಎನ್ನೊಳು ಪಂಥವ್ಯಾತಕೆ
ರೂಢಿಯೊಳಗೆ ಹೊಸಮಾತು || ೧೧೮ ||

ಇನ್ನು ನಿನ್ನನು ನಾನು ಬಿಡುವೆನೆ ರಾಮಯ್ಯ
ನನ್ನ ಹರಕೆ ಕೈಸೇರಿತು || ೧೧೯ ||

ಹರಕೆಯ ಕಳೆವೆನೊ ಮನಸಿಜ ತಾಪವ
ಹರಿವೆ ನಿನ್ನಾಣೆ ಸಟೆಯಲ್ಲ |
ನೆರೆಗಲಿ ರಾಮಯ್ಯ ಅಂಜಬೇಡವೊ ಇಂದು
ನೆರೆದೆನ್ನ ಒಲಿದು ಕೂಡುವುದು || ೧೨೦ ||

ಬೇಡುವೆ ಚಿಕ್ಕಮ್ಮ ಆಡಬಾರದು ಮಾತ
ಕೇಡುಬಹುದು ಇದರಿಂದ |
ಬೇಡ ಕೇಳ್ ಧರೆಯೊಳು ಮಾಡಬಾರದ ಪಾಪ
ಬೇಡವೆ ಇನ್ನು ನಾನರಿಯೆ || ೧೨೧ ||

ಬೇಡವೊ ಚೆನ್ನಿಗ ರಾಮಯ್ಯನೆನುತಲಿ
ಕಾಡಿ ಬಿಡದೆ ಮರುಗಿದಳು |
ಕೆಡಬೇಡವೆಲೆ ರಾಮ ಸತಿಯರ ಶಾಪವು
ಬಿಡದೆನ್ನ ಹೆಣ್ಣುತನದನುವ || ೧೨೨ ||

ಪಿಡಿದು ಸರಳಿಂದ ನಿನ್ನ ನಾ ಹೊಡೆದಿನ್ನು
ಬಿಡುವೆನು ರಾಮಯ್ಯ ಕೇಳು || ೧೨೩ ||

ರೂಪ ನೋಡಲಿ ಬೇಡ ಚಿಕ್ಕಮ್ಮ ನೀ ನನ್ನ
ರೂಪಾದರೇನು ನಿನ್ನ ಮಗನು |
ರೂಪ ನೋಡಿ ಎನ್ನ ಪಾಕಕ್ಕೆ ಗುರಿ [ಯಾದೆ]
ಕೋಪವ ಬಿಡು ಎನ್ನ ತಾಯೆ || ೧೨೪ ||

ಶೂಲದ ಹಬ್ಬದಿ ನಿನ್ನ ಕಂಡೆ ಮೊದಲು
ಬಾಳುವ ಕಾಲವ ಮರೆದೆ |
ಲೀಲೆಯೊಳಿಂತಪ್ಪ ಚೆಲುವನ ಬಿಡಲಾರೆ
ಪಾಲಿಸಿ ಪ್ರಾಣವನುಳುಹೊ || ೧೨೫ ||

ಏಕಾಂತದಲ್ಲಿ ಕಂಪಿಲರಾಯನಿಗೆ ಹೇಳಿ
ಅನೇಕ ರಾಜ್ಯದ ಬಿಡಸುವೆನು |
ಹೊಸಮಲೆದುರ್ಗವ ನಿನ್ನೊಶ ಮಾಡುವೆ ರಾಮ
ಹೊಸಪಟ್ಟ ನಿನಗೆ ಚೆನ್ನಿಗನೆ || ೧೨೬ ||

ನರರಿಗಿನ್ನೆಲ್ಲಿಯ ಪಾಪವು ಧರೆಯೊಳು
ಹರುಷದಿ ಎನ್ನ ಕೂಡೊಲಿದು |
ಭುವನದೊಳಗೆ ನಾ ಹೆಂಡತಿ ನೀ ಗಂಡ
ರಾಜಪಟ್ಟವನು ಕಟ್ಟಿಸುಎ || ೧೨೭ ||

ಚಿಕ್ಕಂದು ನಿನಗೆ ತೆಗೆದ ಹೆಣ್ಣು ರಾಮಯ್ಯ
ಇತ್ತ ಕಂಪಿಲ ತಂದ ತನಗೆ |
ಹೆತ್ತ ತಾಯಲ್ಲವೊ ನಿನಗೆ ನಾ ಸೋದರ
ಅತ್ತೆಯ ಮಗಳೊ ರಾಮಯ್ಯ || ೧೨೮ ||

ಅಲ್ಲವೆ ಚಿಕ್ಕಮ್ಮ ಹೆತ್ತಿಹ ತಾಯನು
ಎಲ್ಲಾದರೆ ಕೂಡೋದುಂಟೆ |
ತಂದೆ ಏರುವ ಪಲ್ಲಕ್ಕಿಯ ರಾಮಯ್ಯ
ಕಂದರು ಏರುವುದಿಲ್ಲವೆ || ೧೨೯ ||

ಕಲ್ಯಾಣದೊಳು ರಾಮನಾಯಕನ ಹೆಂಡತಿ
ಅಲ್ಲಿ ಚಿಕ್ಕಯ್ಯನ ಭ್ರಮಿಸೆ |
ಒಲ್ಲದೆ ಹೋದರೆ ತಲೆಯು ಹೋಯಿತು ರಾಮ
ಮೆಲ್ಲನೆ [ಮುಂದಣೆಚ್ಚರಿಕೆ] || ೧೩೦ ||

ಕೊಂದು ಹೋಗೆಲೊ ರಾಮ ನಿಂದು ಸೈರಿಸಲಾರೆ
ಮುಂದುಗೆಟ್ಟೆನು ವಿರಹದಲಿ |
ತಂದೆ ಬಾಸಿಗಗಟ್ಟಿ ಮದುವೆಯಾದವಳಲ್ಲ
ಕಂದನಲ್ಲವೊ ನೀನು ಎನಗೆ || ೧೩೧ ||

ಆರಿಗೆ ತಾಯಿ [ನಾ] ನೀನಾರಿಗೆ ಮಗನೆಂದು
ಕೋಮಲೆ ರತ್ನಿ ಆಡಿದಳು |

ನಾರಿ ಹರಿಯಮ್ಮನು ಪೆತ್ತಳು ನಿನ್ನನು
ಗರುವ ರಾಮುಗ ಕೇಳುವ ನೀನು || ೧೩೨ ||

ಹರಿಯಮ್ಮನೊಬ್ಬಳೆ ಪಟ್ಟದ ರಾಣಿಯು
ಗರುವ ರಾಮನೆ ನೀ ಕೇಳೊ |
ಕರೆದು ವಿಚಾರಿಸು ಸಂಗಾಯ ನೀನೆಲ್ಲ
ದೊರೆ ಇಟ್ಟ ಊಳಿಗದವಳು || ೧೩೩ ||

ಪೊಂಬಣ್ಣವನುಟ್ಟು ತಂದೆತಾಯೊಡಗೂಡಿ
ತಂದವಳಲ್ಲವೊ ನಾನು |
ಅಂದು ಕಂಪಿಲರಾಯ ಸೋಲಗೊ[ಳಿ]ಸಿ ತಂದ
ಸಂದೇಹವ್ಯಾಕೆ ರಾಮುಗನೆ || ೧೩೪ ||

ಕಡು ಪಾಪಿ ಹೋಗೆಂದು ಒದರಿ ಕಾಲಲಿ ನೂಕೆ
ಮುರಿದು ಮರಳಿ ತೊಡರುವಳು |
ಮುಡಿ ಮುಸುಗನು ಇಟ್ಟು ಕುಳಿತಳು ನೆಲದಲ್ಲಿ
ಬಿಡಿಮುತ್ತು ಹರಿದೋಲೆ ಸಡಿಲೆ || ೧೩೫ ||

ಮುಂದಲೆಯನು ಪಿಡಿದು ಬಿಡದೆ ತಾ ತೊಡರುತ
ಮುಂದೆ ಬಾಗಿಲನು ಹಾಕೆನುತ |
ನೊಂದ ರಾಮಯ್ಯನ ಶಿಖಿಯನು ಪಿಡಿದಳು
ನೊಂದು ಕೋಪದಲೊದೆವುತಲಿ || ೧೩೬ ||

ಒದವಿದ ಬಿರುಸಿಗೆ ಹದಿನಾರು ತುಂಡಾಗಿ
ಕೆದರಿತು ರತ್ನದ ಹಾರ |
ಹೆದರಿ ಹೆಮ್ಮೈಸಿ ಕಂಗಳ ಮುಚ್ಚಿ ರತ್ನಾಜಿ
ಮದನಬಾಣದ ತಾಪದಲಿ || ೧೩೭ ||

ಒಡೆದವು ಬಳೆಗಳು ಸಿಡಿದವು ಮಾಣಿಕ
ತೊಡಿಗೆ ಬೆಸುಗೆ ಬಿಚ್ಚಿದವು |
ಪುಡಿಯಾಯಿತು ರಸದಾಂಬೂಲ ಬಾಯೊಳು
ಹಿಡಿದಲೆ ತರಗಾದವಾಗ || ೧೩೮ ||

ಮುದ್ದುಮುಖದ ರಾಮಯ್ಯ ಚೆಂಡು ಸಿಗದೆಂದು
ಸದ್ದುಮಾಡದೆ ಪೋದನಾಗ |
ಗದ್ದುಗೆಯನು ತಾ ಇಳಿದು ಬಂದನು ಬೇಗ
ಸಿದ್ಧಲಿಂಗನು ಬಲ್ಲನೆನುತ || ೧೩೯ ||

ಹೊರಳಿದಳು ಬುಡುಬುಡು ಮರಳಿದಳು ರತ್ನಿಯು
ತರಹರಗೊಂಡು ಮರುಗಿದಳು |
ನೆರೆಗಲಿ ರಾಮಯ್ಯ ಬಂದನು [ಹೊ]ರಮನೆಗೆ
ತರಹರಿಸದಲೆ ಕಾತರದಿ || ೧೪೦ ||

ಇತ್ತ ಬಂದನು ಹೊರಬಾಗಿಲ್ಯೆದನು ದಾಂಟಿ
ಸುತ್ತ ನೋಡಿದರಾರುಯಿಲ್ಲ |
ಚಿತ್ತಜಹರ ಬಲ್ಲನೆನುತ ರಾಮಯ್ಯನು
ಪೃಥ್ವಿಗಧಿಕ ನಡೆತಂದ || ೧೪೧ ||

ಆಟದ ಮನ್ನೆಯರನು ಕಳುಹಿದನಾಗ
ಪಾಟಕರನು ಕಳುಹಿದನು |
ಕಾಟಣ್ಣನಾಗಲೆ ಕಳುಹಿದ ರಾಮಯ್ಯ
ಕೋಟಲೆಯಲಿ ಹೊಕ್ಕನರಮನೆಯ || ೧೪೨ ||

ಪರನಾರಿಯರ ಸೋದರನೆಂಬ ಭಾಷೆಯ
ಒರೆದು ನೋಡಿದ ಉಮೆಯರಸ |
ಹಿರಿಯ ಮಗನು ರಾಮ ರಾಜ್ಯವನಾಳಲಿ
ಪರಿಹರಿಸುವೆವು ಪಾತಕವ || ೧೪೩ ||

ಕೇಳು ಪಾರ್ವತಿ ಹಿಂದಣ ಕಾಲದೊಳರ್ಜುನನ
ಮೇಲೆ ಕೋಪವ ತಾಳಿ ನೀನು |
ಹೇಳಿ ರಂಭೆಯನಟ್ಟಿ ಒಳಗುಮಾಡೆಂದವನ
ಲೀಲೆಯಿಂ ಕಳುಹಿದೆ ಛಲದಿ || ೧೪೪ ||

ಬಾಲೆ ರತ್ನಾಜಿ ರಾಮನ ಸೋಲಿಸಲಿಲ್ಲ
ಮೇಲಾದುದೆನ್ನಯ ಛಲವು |
ನೀಲಲೋಚನೆ ರಾಮ ಬಲ್ಲಿದನಹುದಯ್ಯ
ಗೆಲಿದನು ಛಲ ಬಿರಿದುಗಳ || ೧೪೫ ||

ಪರನಾರಿಯರ ಸೋದರನೆಂಬ ಬಿರಿದೀಗ
ಇರದೆ ಸಲ್ಲುವುದು ಇವಗೆನುತ |
ಒರೆದು ನೋಡಿದಳು ಪಾರ್ವತಿ ಛಲಛಲರೆಂದು
ಕರುಣ ದೃಷ್ಟಿಯಲಿ [ಒಲಿ]ದಳು || ೧೪೬ ||

ಮಕ್ಕಳಾಟಿಕೆಯಾಯ್ತು ನಮ್ಮಯ ಭಾಗ್ಯವು
ದುಃಖವಾಯಿತು ರಾಮನಿಗೆ |

ಅಕ್ಕರಿಂದಲಿ ತನ್ನ ಅರಮನೆಯನು
ಹೊಕ್ಕು ಎಕ್ಕಟಿಗರ ಕಳುಹಿದನು || ೧೪೭ ||

ಇದು ಪರನಾರಿ ಸೋದರ ರಾಮನಾಥನ
ಪದಕೃತಿಯೊಳಗೊಂದು ಕಥೆಯು |
ವಿಧಿ ರತ್ನಿ ಚೆಂಡ ಮಡಗಿಕೊಂಡಿರ್ದಳು
ಪದಗಳು ಮುಗಿಯೆ ಸಂಪೂರ್ಣ || ೧೪೮ ||

**ಅಂತು ಸಂಧಿ ೧೭ಕ್ಕಂ ಪದನು ೧೮೨೯ ಕ್ಕಂ ಮಂಗಳ ಮಹಾಶ್ರೀ**

## ಸಂಧಿ ೧೮ - ಕಂಪಿಲರಾಯನಿಗೆ ರತ್ನಾಜಿ ಚಾಡಿ ಹೇಳಿದುದು

ಶ್ರೀ ಗಿರಿಜಾ[ಸ್ಯಾಂಬುಜ ದಿನ]ನಾಯಕ
ಭೋಗಿಭೂಷಣ ಭಾಳನೇತ್ರ |
ಭಾಗೀರಥಿಧರ ಭವರೋಗವೈದ್ಯನೆ
ನಾಗ [ಕುಂಡಲ] ಶರಣೆಂಬೆ || ೧ ||

ಗಂಗೆಯ ಜಡೆಯೊಳು ಧರಿಸಿದ ಲಿಂಗನೆ
ತಿಂಗಳ ಸೂಡಿದಭವನೆ |
ಮಂಗಳಮೂರ್ತಿ ಪಾವಚರಿತನೆ
ಸಂಗಮೇಶ[ನೆ] ಸಲಹೆನ್ನ || ೨ ||

ನಾನು ರಾಮನ ಕೂಡೆ ಹೆಣಗುವಾಗಲೆ ಸಂಗಿ
ನೀ ನನ್ನ ಒದಗಿ ಬರಲಿಲ್ಲ |
ನಾನಾ ಕಾಲ ನಾ ಬಯಸಿದ ಬಯಕೆಯು
ಏನೂ ಕೈಸೇರಿದುದಿಲ್ಲ || ೩ ||

ಇಬ್ಬರು ಹಿಡಿದು ಬಾಗಿಲ ಮುಚ್ಚಿ ಒಬ್ಬನ
ತ[ಬ್ಬಿ] ಹೋಗಲಿ ಏನಹುದು |
ದಬ್ಬಿ ತರ್ಕೈಸಿ ದೈನ್ಯವ ಮಾಡಿ ಆಮೇಲೆ
ಇಬ್ಬರೊಂದಾಗಿ ಕೂ[ಡಿದೆನೆ] || ೪ ||

ಇದ್ದವನೊಬ್ಬನ ಇಬ್ಬರು ಹಿಡಿದರೆ
ಎದ್ದುಹೋಗುವ ರಾಮ[ನಾಥನ] |
ಬಿದ್ದು ಪಾದಕೆ ದೈನ್ಯವ ಆಡಿ ಆಮೇಲೆ
ಮುದ್ದು ಮಾತಿಂದ ಮೆಚ್ಚಿ [ದೆನೆ] || ೫ ||

[ಆಗಲೆ]ಕರೆದು[ಹೇಳಿ]ದಿಲ್ಲ ರತ್ನಾಜಿ
ಈಗ ಬಯಸಿದರೇನು ಬಹುದು |
ನಾಗಲಿಕನು ಚೆಲ್ವ ರಾಮಯ್ಯ ಬರುವನೆ
ಹೋಗಲೇತಕ ಮರೆಯೆಂದು || ೭ ||

ಎಂತು ಮರೆವೆನೆಲೆ ಸಂಗಾಯಿ ತುರುಗರೇ
ವಂತ ರಾಮಯ್ಯನ ಮೇಲೆ ಅ |
ನಂತ ಕಾಲವು ಬಯಕೆಯು ಎನ್ನ ಮನದೊಳು
ಚಿಂತೆ ಪರಿಹರಿದಿಲ್ಲ ಸಂಗಿ || ೭ ||

ಹಲವು ಪರಿಯಲಿ ಹಂಬಲಿಸುತ ರತ್ನಾಜಿ
ಮಲಗುವ ಸಜ್ಜೆಗೃಹದಲ್ಲಿ |
ಕೆಲಬಲದಲಿಯಿರ್ದ ತೆರೆಯ ಮಂಚದ ಸುತ್ತ
ಲಲನೆ ಆಲುತ ಕರೆದಳು || ೮ ||

[ಏರುಂಡ] ಹುಲಿಯಂತೆ ಚೀರಿ ನೆಲನ ಹಾಯ್ದು
ಮೀರಿದ [ಬಿಸಿಯ] ಕೋಪದಲಿ |
ಬೇರೆ ಬೇರೆಲ್ಲರ ಬೈವುತ ಹೊಯ್ವುತ
ನೀರೆ ಸ್ವೈವೆರಗಾಗಿ ನಿಂದು || ೯ ||

ಬರಿ ಮಾತ ಬಿಡು ಇನ್ನು ರಾಮನ ಹಂಬಲ ಕೆಡಹಿ
ಕೆಡಹಿ ಕೊರಳ ಕೊಯ್ಸುವೆನು || ೧೦ ||

ಅತ್ತು ಕಂಪಿಲರಾಯಗೆ ಚಾಡಿಯ ಹೇಳಿ
ಮತ್ತೆ ರಾಮನ ಪಿಡಿತರಿಸಿ |
ಒತ್ತಿ ಶಿರವನರಿಸಿದಲ್ಲದೆ ಉಂಡರೆ
ಹೊತ್ತವು ಮೊಲೆಯಲ್ಲ ಸಂಗಿ || ೧೧ ||

ಹಾರವ ಹರಿದಿಟ್ಟು ಸೀರೆಯ ಸೆಳೆದಿಟ್ಟು
ನಾರ ಸೀಳಿದ ಹಾಗೆ ಸೀಳಿ || ೧೨ ||

ಹೊಸ ಗಾಯವಾದವು ನಖರೇಖೆಗಳ ಮೇಲೆ
ಅಸಿಯುಳ ತೋಳು ತೊಡೆಯೊಳು |
ಹುಸಿ ದಿಟವನು ಮಾಡಿ ಸೋಲಿಸುವೆನೆನುತಲಿ
ಮಸೆದಳು ಕದನದಾಯುಧವ || ೧೩ ||

ಮದನಹರನು ಬಲ್ಲಗೆನುತಲಿ ರತ್ನಾಜಿ
ಮದನಗೃಹಕೆ ಒದಗಿಳು |

ಹೊಟ್ಟೆಬೇನೆಗಳಾದಂತೆ ರತ್ನಾಜಿಯು
ಒಟ್ಟೆಸಿದಳು ಅಗ್ಗಷ್ಟಿಗೆಯ || ೧೪ ||

ಇರಲಿತ್ತ ಕಂಪಿಲರಾಯನ ಬೇಂಟೆಯ
ಪರಿಯ ಕೇಳುವುದು ಕೋವಿದರು || ೧೫ ||

ಬೆಟ್ಟದ ಮೇಲೆ ಬೇಂಟೆಯನಾಡಿ ಕಂಪಿಲ
ಬಿಟ್ಟನು ಮೊಲಕೆ ನಾಯಿಗಳ |
ಅಟ್ಯಾಡಿ ಹುಲಿ ಹಂದಿ ಸಾರಂಗ ಮೊದಲಾದ
ಒತ್ತಿ ಇರಿದು ಭಟರುಗಳು || ೧೬ ||

ಎಡಬಲದಲ್ಲಿ ಬಳಸಿ ಬೇಂಟೆಯನಾಡಿ
ಕಡು ಬೆಮರಿಲಿ ಬಳಿವಿಡಿದು |
ತೊಡರು ಕಲ್ಲಿಯೊಳು ನಾನಾ ಪಕ್ಷಿಗಳ ಹಾಕಿ
ನಡೆದವು ಬಂದಿಯ ಮೃಗವು || ೧೭ ||

ವನದ ಮೃಗಗಳನ್ನೆಲ್ಲ ಬಂಡಿಲಿ ಹೇರಿಸಿ
ಮೊನೆಗಾರ ಕಂಪಿಲರಾಯ |
ದಕ್ಕಡಿರಾಯರಗಂಡ ಕಂಪಿಲನೆಂದು
ಹೊಕ್ಕನು ಬಂದು ಕುಮ್ಮಟವ || ೧೮ ||

ಭೇರಿ ಮೃದಂಗ ತಂಬಟೆ ಕಹಳೆ ಹೊಡೆಸುತ
ಭೋರೆಂದು ನಾದಮಾಡಿದವು |
ತುಡುಮು ತಂಬಟೆ ಭೇರಿ ಗಿಡಿಬಿಡಿ ನಿಸ್ಸಾಳ
ಬಿಡದೊದರುವ ಚಿನ್ನಗಹಳೆ || ೧೯ ||

ಕೆಲರ ಕೈಯ್ಯಲಿ ಮೊಲ ಕೆಲರ ಕೈಯ್ಯಲಿ ಉಡ
ಕೆಲರ ಕೈಯಲಿ ನವಿಲುಗಳು |
ಕಂಪಿಲರಾಯ ಮನ್ನೆಯರಿತ್ತ ಸಹಿತಲಿ
ಸೊಂಪಿಲಿ ಹೊಕ್ಕ ಪಟ್ಟಣದ || ೨೦ ||

ಒಡೆಯ ಕಂಪಿಲ ಬೇಂಟೆಯ
ನಾಡಿ ಬಂದಾಗ ತವಕದಿಂದಲಿ ಅರಮನೆಗೆ |
ಪಡುವಣ ಸೂರ್ಯನು ಇಳಿವಂತೆ ಕಂಪಿಲ
ಒಡನೆ ಹೊಕ್ಕನು ಅರಮನೆಯ || ೨೧ ||

ಬಂದು ಹಜಾರದ ಮುಂದೆ ನಿಂದನು ರಾಯ
ಮಂದಿ ಮಾರ್ಬಲ ನೋಡಿದನು |

ನೊಂದು ಬೇಂಟೆಯನಾಡಿ ಬಳಲಿದಿರಿ ನೀವೆಂದು
ಎಂದು ಎಲ್ಲರ ಕಳುಹಿದನು || ೧೨ ||

ಕರೆಸಿದ ಬಾದೂರಖಾನನ ಕಂಪಿಲ ಈ
ಪರಿ ಬೇಂಟೆ ನೋಡೆನುತ |
ಷಡುಚಕ್ರವರ್ತಿಗಳು ಪೊಗಳುವರೆನ್ನಳವೆ
ಪೊಡವಿಪ ನಿಮ್ಮಯ ಬೇಂಟೆ || ೧೩ ||

ಹೋಗಿ ಬೈಚಪ್ಪ ಖಾನರು ಬಳಲಿದಿರೆಂದು
ಹೋಗಿರ್‍ಯೆ ತೆಲುಗ ಮನ್ನೆಯರು || ೧೪ ||

ಹಿರಿಯರು ಮನೆಯ ಹೆಮ್ಮಕ್ಕಳು ಹರಿಯಮ್ಮ
ಹರಿವಾಣದಾರತಿ ಸಹಿತ |
ಪುರದೊಳಗುಳ್ಳ ನಾರಿಯರು ಆರತಿಗಳ
ಪಿಡಿದೆತ್ತಿ ಹರಸಿ ಕಂಪಿಲನ || ೧೫ ||

ಹೆಣ್ಣುಮಕ್ಕಳು ಚೊಕ್ಕ ಬಣ್ಣ ಬಂಗಾರವಿಟ್ಟು
ಪುಣ್ಯಸ್ತ್ರೀಯರುಗಳು ನಡೆದರು |
ಬಣ್ಣಿಸಿ ಪಾಡಿ ಭೂಪಾಲ ಕಂಪಿಲಗಗ್ರ
ಗಣ್ಯಗಾರತಿಯನೆತ್ತಿದರು || ೧೬ ||

ಚಿತ್ತದೊಲ್ಲಭೆ ಬಾರಳೆನುತ ಕಂಪಿಲರಾಯ
ಮತ್ತೆ ಮನದಲಿ ಅತಿ ನೊಂದು |
ಚಿತ್ತದಿಂ ಬವಣೆಗೊಳುತಲಾಗ ಭೂಪತಿ
ಒತ್ತಿ ನಡೆದನರಮನೆಗೆ || ೧೭ ||

ಮಾನಿನಿ ಮುನಿದಳೆನುತ ಕಂಪಿಲರಾಯ
ತಾನೈದಿದನರಮನೆಗೆ |
ಏನ ಬೇಡಿದಡೆ ಈವೆನು ಮನದಣಿವಂತೆ
ಭಾನುಸಖನ ಮುಖದವಳೆ || ೧೮ ||

ಚಿಕ್ಕರಮನೆಗೆ ಕಂಪಿಲರಾಯ ಬರುವಾಗ
ಇಕ್ಕಿತು ಗೌಳಿಯ ಶಕುನ |
ಸೊಕ್ಕಿದ ರತ್ನಿಯಸಜ್ಜೆಗೃಹವ ತಾನು
ಹೊಕ್ಕು ನೋಡಿದನು ಹೊಸಪರಿಯ || ೧೯ ||

ಹೊಸಪರಿಯಾಗಿದೆ ಮಂಡೆಗೆ ಮಸಿ ಪೂಸಿ
ಮಿಸುನಿಯ ಬಳೆಯೊಡೆದಿವೆ ಕೋ |

ಮುಸುಕಿದ ಕೋಪವಿದೇಕೆಂದು ಕಂಪಿಲ
ಬೆಸಗೊಂಡ ತನ್ನ ರಾಣಿಯನು || ೩೦ ||

ತನ್ನ ವಲ್ಲಭನ ಕಾಣುತಲಾಗ ರತ್ನಾಜಿ ಮೆ
ಲ್ಲನೆ ಮಂಚದೊಳಿರ್ದು ಕುಟಿಲ |
ಕುಟಿಲ ಮಾಯಗಳ ಮಾಯದೊಳಿಟ್ಟು ರತ್ನಾಜಿ
ಬಂದ ಗಂಡನ ಕೂಡೆ ಹೇಳಿ || ೩೧ ||

ಮುತ್ತಿನ ಹಾರವು ಹರಿದು ಕುರುಳ್ಗುಂದಿವೆ
ಹಸ್ತದ ಬಳೆ ಒಡೆದಿವೆ ಕೋ |
ಒತ್ತಿದ ನಖರೇಖೆ ಇವು ಎಲ್ಲಿಯವೆಂದು
ಮತ್ತೆ ಕೇಳಿದನು ಮಡದಿಯನು || ೩೨ ||

ಎಲೆ ಪ್ರಿಯಳೆ ಮಾಜಲಿಬೇಡ ಈ ಮೈಯ್ಯ
ಕಲೆಗಳೆಲ್ಲಿಯವು ನಿನ್ನಾಣೆ |
ಸುಮ್ಮನಿರಲು ಕಂಪಿಲರಾಯ ಬೆರಗಾಗಿ
ಗಮ್ಮನೆ ಮುಖವ ನೋಡಿದನು || ೩೩ ||

ಸತಿಯು ಕುಹಕವನು ಹೇಳಿದಳು ಗಂಡನ ಕೂಡೆ
ಹಿತವುಳ್ಳ ಮಗನು ನೀನೆಂಬೆ |
ಕಥೆಯ ಇನ್ನೆಂದು ಮರೆವೆ ಈಗ ಸಾವೆನು
ಸುತನು ಎಂಬುವನು ಎಣಿಸಿದನು || ೩೪ ||

ಬೇಟೆಗೆ ಬಾರದೊಂದಾಟವ ಕೈಕೊಂಡು
ನೋಟಕೆ ಚೆಂಡನಾಡಿದನು |
ಪಾಟಿಸಿ ಬಂದು ಮನೆಯಹೊಕ್ಕು ಮಾಡಿದ
ಮಾಟವ ಕೇಳು ಮಹರಾಯ || ೩೫ ||

ಚೆಂಡು ಬಿದ್ದ ನೆವದಿ ನಿನ್ನಯ ಮಗ ಬಂದು
ಬಂಡು ಮಾಡಿದನು ಮೈ ಕೆಡಿಸಿ |
ಹೊಕ್ಕು ಒಗತನವನು ಮಾಡಲಾರೆನು ನಾನು
ತಂದೆ ಮಗನಿಗೆ ಒಬ್ಬಳಾದೆ || ೩೬ ||

ಒಗತನವನು ಮಾಡಲರಿಯೆ ನಿನ್ನೊಳು ನಾನು
ನಗೆಗೇಡಲ್ಲವೆ ರಾಯ ನಿನಗೆ |
ನಗುವರ ಮುಂದೆ ನಿನ್ನಯ ಮಗ ಮಾಡಿದ
ಬಗೆಯ ನಾನೇನ ಬಣ್ಣಿಸುವೆ || ೩೭ ||

ನಿನ್ನ ಹೆಂಡತಿ ನಿನ್ನ ಮಗನಿಗೆ ಹೆಂಡತಿ
ವನಿತೆ ಒಬ್ಬಳಿಗಿಬ್ಬರುಂಟೆ |
ಮನದೊಳು ನೀ ನನ್ನ ಮೇಲಣಾಸೆಯು ಬೇಡ
ತನುಜಗೆ ಒಪ್ಪಿಸು ಎನ್ನ || ೩೮ ||

ಒಲ್ಲೆನೆಂದರೆ ಎನ್ನ ಬಲುಹಿಂದಲಪ್ಪಿದ
ಗಲ್ಲಕ್ಕೆ ರೇಖೆಯನೊತ್ತಿ |
ಸಲ್ಲದು ಇದು ಮಾತಲ್ಲವೆಂದರೆ ರಾಮ
ಚೆಲ್ಲಿದ ಬಿಡಿಮುತ್ತ ಹರಿದು || ೩೯ ||

ಹಿಡಿದೆಳೆದರೆ ಕೈಯ್ಯ ಮುರಿದು ಬಿಡಿಸಿಕೊಂಡೆ
ಒಡನೆ ಬಿಡದೆ ತೊಡರಿದನು |
ಬಿಡು ಪಾಪಿ ಹರಿಯಮ್ಮನೋಪಾದಿ ಎಂದರೆ
ಕಡುಪಾಪಿ ಅವನು ಅಂಜುವನೆ || ೪೦ ||

ಭಂಗಿಸೆನ್ನಂಗವ ಪಿಡಿದುಕೊಂಡಾಕ್ಷಣ
ಮುಂಗೈಯ್ಯ ಪಿಡಿದೆನ್ನನೆಳೆದ |
ಅಂಗಕ್ಕೆ ಹತ್ತಿರ ಬಂದೆನ್ನ ತುಡುಕಲು
ಭಂಗಕ್ಕೆ ಒಳಗಾದೆ ರಾಯ || ೪೧ ||

ಗಂಡನೆಂಬವ ಮುಪ್ಪ ಮಿಂಡಿ ಹೆಂಗಡು ನೀನು
ಪುಂಡರಿಕಾಕ್ಷಿ ಬಾರೆನುತ |
ದಂಡಿಸಿ ಮೈಯೇರಿ ಎಳೆದು ನಿನ್ನಯ ಮಗ
ಬಂಡು ಮಾಡಿದ ಮೆಯ್ಯ ಕೆಡಿಸಿ || ೪೨ ||

ಕಾವಲ ದುರ್ಗಕ್ಕೆ ಮತ್ತೊಬ್ಬರಿಲ್ಲದೆ
ಗಾವುದಿಗನ ಇರಿಸುವರೆ |
ಅಸಗೊಳ್ಳದಲೆ ರಾಮ ಮಾಡಿದ ಮಾಟಕ್ಕೆ
ಸೊಸೆಯಾದೆನು ರಾಯ ನಿನಗೆ || ೪೩ ||

ಕಳೆಯುಳ್ಳವನಾದರೆ ತನ್ನ ಹೆಂಡರಿಗೆ
ಜೋಕೆಯೊಳ್ಬಾಳಿಸಬೇಕು |
ಸಾಕಾಗಿ ಪ್ರಾಣವ ತೊರೆದು ಪರಸ್ತ್ರೀಯರ
ಸೊಕ್ಕಿ ಪಿಡಿವರೆ ಮುಂದಲೆಯ || ೪೪ ||

ಕುಂಭಕುಚವು ಬಿ[ಚ್ಚಿ]ಅಂಗವು ತೋರಲು
ತಿಂಗಳರೇಖೆಯ ಕಂಡ |

ಭಂಗಭಡಿಸಿದನು ನಿನ್ನಯ ಮಗ ಬಂದು
ಸಂಗಿಯ ಕೇಳು ಹೇಳುವಳು || ೪೫ ||

ಬಸುರೊಳು ಬರಬೇಕೆ ಮಗನಲ್ಲವೆ ತಾನು
ದಶಪಾತಕ ದ್ರೋಹಿ ಅವನು |
ಕುಸುರಿದರಿದು ತಲೆಯನು ತಾರದಿರ್ದರೆ
ವಿಷವ ಕೊಂಬೆನು ನಿನ್ನ ಮುಂದೆ || ೪೬ ||

ಎಂದ ಮಾತನು ಕೇಳಿ ಕಂಪಿಲರಾಯನು
ನೊಂದು ಕೋಪದಲುರಿದೆದ್ದು |
ಬಂದು ಭಂಡಾರಿ ಬುಕ್ಕಣ್ಣನ ಕರೆಸಿದ
ಇಂದೊಂದು ಕಂಪಿಲ ನುಡಿದ || ೪೭ ||

ಕರೆಸಿದಿರೇಕೆಂದು ಬಂದು ಭಂಡಾರಿಯು
ಕರೆಯೊ ಬೈಚಪ್ಪನ ಬೇಗ |
ಬರಹೇಳು ಬೇಗದಿ ತಡೆಯದೆ ಎಂದಾಗ
ಇರದೆ ಅಟ್ಟಿದನರಮನೆಗೆ || ೪೮ ||

ಬಂದು ಭಂಡಾರಿಯು ಬೈಚಣ್ಣನ ಕೂಡೆ
ನಿಂದು ಬಿನ್ನಹವ ಮಾಡಿದನು |
ಕಂದ ರಾಮಯ್ಯನ ಕೊಲ್ಲಬೇಕೆನುತಲಿ
ನಿಂದು ಇಹನೆ ಕಂಪಿಲನು || ೪೯ ||

ಸತಿಯು ಕುಹಕವ ಹೇಳಲು ಗಂಡನ ಕೂಡೆ
ಸುತನ ಕೊಲಲೆಂಬ ಕಂಪಿಲನು |
ಕತೆಯಾಯಿತು ಇಂದಿಗೆ ಕಾಂತಿ ಅಳಿದಿತು
ಹತವಾಯಿತು ಕುಮ್ಮಟವು || ೫೦ ||

ಕರೆಸಿದಿರೇಕೆಂದು ಬೈಚಪ್ಪ ಬಂದಿನ್ನು
ಹೊರೆಯಲ್ಲಿ ಬಿನ್ನೈಸಿದನು |
ಧರೆಯೊಳಗಿಲ್ಲದ ಪಾಪವ ಮಾಡಿದ
ಹಿರಿಯಾಕೆಯ ಮಗ ರಾಮ || ೫೧ ||

ಮಗ ರಾಮ ಮಾಡಿದ ಹಗರಣವನು ಕೇಳು
ಜಗಕೊಂದು ಕಥೆಯ ಮಾಡಿದನು |
ಜಗದೊಳಗಿಲ್ಲದ ಪಾಪವನೆಣಿಸಿದ
ನಘಧರ ಚೆನ್ನಿಗರಾಮ || ೫೨ ||

ಎತ್ತಣ ಮಾತು ಎನುತಲಿ ಬೈಚಪ್ಪ
ಒತ್ತಿ ಕೇಳಿದನೊರೆದೊರೆದು |
ಹೆತ್ತ ಮಗನು ಕುಮಾರ ರಾಮಯ್ಯನು
ತ್ತದೊಳೆಣಿಸುವನಲ್ಲ || ೫೩ ||

ತಂದೆಯ ಕಾಲದ ಹಿರಿಯನಲ್ಲವೆ ನೀನು
ಬಂದು ನೋಡರಮನೆಯೊಳಗೆ |
ಕೊಂದು ರಾಮನ ಅಂಗವ ತಾರದಿರ್ದರೆ ಈ
ನಿಂದ್ಯವ ನೀನೆ ಮಾಡಿದೆ || ೫೪ ||

ಹೇಳಿದ ಮಾತನು ಕೇಳುತ ಬೈಚಪ್ಪ
ತಾಳಿದ ಮನದಲ್ಲಿ ನೋವ |
ಹಾಳಾಯಿತು ಹೊಸಮಲೆಯು ಕುಮ್ಮಟವೆಂದು
ಹೇಳಿ[ದ] [ತ]ನ್ನೊಳು [ತಾ]ನು || ೫೫ ||

ಒಡೆಯನ ಮಾತನು ಮೀರದೆ ಬೈಚಪ್ಪ
ನುಡಿದು ಹೇಳಿದನೊಂದು ಮಾತ |
ಹಿಡಿದನು ಕತ್ತಿಯ ಮಂತ್ರಿಶಿರೋಮಣಿ
ನುಡಿದನು ಕಂಪಿಲನೊಡನೆ || ೫೬ ||

ದೇವ ಕಂಪಿಲರಾಯ ನಿಧಾನಿಸಿ ನೋಡು
ತೀವಿ ಕೋಪದ ಮನಸಿನಲಿ |
ಕಾವುದಿಲ್ಲವೆ ಒಮ್ಮೆ ಎನುತ ಪ್ರಧಾನರ
ದೇವ ನುಡಿದನು ಕಂಪಿಲಗೆ || ೫೭ ||

ಇಂದೇನು ನೋಡುವೆನೆನುತಲಿ ಕಂಪಿಲ
ತನ್ನ ಮಗನ ಕೋಪದಲಿ |
ಚೆನ್ನರಾಮನ ಈ ಕ್ಷಣ ಕೊಲ್ಲದಿರ್ದರೆ
ನಿನ್ನ ಮೇಲಾಣೆಯೆಂದೆನುತ || ೫೮ ||

ಒಡೆಯ ಕಂಪಿಲರಾಯನ ಮಾತ ಕೇಳುತ
ಹಿಡಿಯಬೇಕೆಂದು ಬೈಚಪ್ಪ |
ತಡೆಯದೆ ತನ್ನರಮನೆಗೆ ಬಂದನು ಬೇಗ
ಬಿಡದೆಣಿಸಿದನು ಬುದ್ಧಿಯನು || ೫೯ ||

ಬಂದು ಪ್ರಧಾನಿಗಳರಸ ತನ್ನರಮನೆಗೆ
ಒಂದು ಬುದ್ಧಿಯನೆಣಿಸಿದನು |

ಕುಂದದೆ ತಾನು ನೆನೆದು ತನ್ನ ಮನದೊಳು
ಕಂದರ್ಪರೂಪನ ಮೇಲೆ || ೬೦ ||

ಹುಲಿಯಡಗಿದ ಮೆಳೆಯಂತಿರ್ದ ರಾಮನ
ಕೊಲುವರೆ ಕೈಯೇಳವೆಂದ |
ಚೆಲುವರ ಗಂಡ ಚೆನ್ನಿಗ ರಾಮನಳಿದರೆ
ಲಲನೆಯರೆಂತು ಬಾಳುವರು || ೬೧ ||

ದಿಟ್ಟ ಚೆನ್ನಿಗರಾಮನಳಿದರೆ ಸುದ್ದಿಯು
ಹುಟ್ಟದಿಹುದೆ ಡಿಳ್ಳಿಯೊಳಗೆ |
ನೆಟ್ಟನೆ ತುರುಕರ ಮಾರ್ಬಲ ಕೂಡಿಬಂದರೆ
ತೊಟ್ಟು ಕಾದುವರಿನ್ನಾರು || ೬೨ ||

ಕಟ್ಟಾಳು ರಾಮನ ಮಡಗಿ ಕಾರ್ಯವ ಕಾಬೆ
ಬೆಟ್ಟ ಕುಮ್ಮಟವನುಳುಹುವೆನು |
ದಿಟ್ಟ ಕಂಪಿಲಗೆ ಆಪತ್ತು ಬಂದಾಗಲೆ
ಕೊಟ್ಟವ ರಾಮನ ತೋರು[ವೆ] || ೬೩ ||

ಇದು ಪರನಾರಿ ಸೋದರ ರಾಮನಾಥನ
ಪದಕೃತಿಯೊಳಗೊಂದು ಕಥೆಯ |
ವಿಧಿಮುಂಡೆ ರತ್ನಿ ರಾಮನ ಕೊಲ್ಲಹೇಳಿದ
ಪದಗಳು ಮುಗಿಯೆ ಸಂಪೂರ್ಣ || ೬೪ ||

**ಅಂತು ಸಂಧಿ ೧೮ಕ್ಕಂ ಪದನು ೧೮೯೩ಕ್ಕಂ ಮಂಗಳ ಮಹಾಶ್ರೀ**

## ಸಂಧಿ ೧೯ - ಕೊಮಾರ ರಾಮಯ್ಯನಿಗೆ ನೆಲಮನೆ ವಾಸ

ಶ್ರೀ ಗಿರಿಜಾ[ಸ್ಯಾಂಬುಜ ದಿನ]ನಾಯಕ
ಭೋಗಿಭೂಷಣ ಭಾಳನೇತ್ರ |
ಭಾಗೀರಥಿಧರಭವರೋಗವೈದ್ಯನೆ
ನಾಗ[ಕುಂಡಲ]ಶರಣೆಂಬೆ || ೧ ||

ರಾಮನ ನೆನೆ ಕಂಡ್ಯಾ ಮನವೆ ಜಟ್ಟಂಗಿಯ
ರಾಮನ ನೆನೆ ಕಂಡ್ಯಾ ತನುವೆ |
ರಾಮರಾಮಾ ಎಂಬ ನಾಮವ ನೆನೆದರೆ
ಕಾಮಿತ ಫಲವೀವ ರಾಮ || ೨ ||

ಮಂತ್ರಿ ಬೈಚಪ್ಪನು ಯೋಚನೆ ಮಾಡಿನ್ನು
ಬಂದನು ಕಂಪಿಲನ ಬಳಿಗೆ |
ಕೊಂಡೆರ ಮಾತಿಗೆ ರಾಮನ ಕೊಲ್ವರೆ
ಮಂಡಲವೆಲ್ಲ ಕೆಡುವುದು || ೩ ||

ಹೆಣ್ಣಿಂದ ವಾಲಿ ಸುಗ್ರೀವರು ಕೆಟ್ಟರು
ಹೆಣ್ಣಿನ ಮಾತ ನಂಬುವರೆ |
ಹೆಣ್ಣಿಂದ ರಾಮರು ಕೆಟ್ಟರು ಎಲೆ ರಾಯ
ಹೆಣ್ಣಿಂದ ಕೀಚಕನಳಿದ || ೪ ||

ಯಾತರ ಮಾತನಾಡಿದೆ ನೀನು ಬೈಚಪ್ಪ
ಕೀರ್ತಿಯಾಯಿತು ನಮ್ಮ ಬದುಕು || ೫ ||

ಕೊಂದೆಯಾತಕೆಯೆಂದು ಹಿಂದೆ ನೋಯಲಿಬೇಡ
ಸಂದೇಹವಿಲ್ಲದೆ ಹೇಳಯ್ಯ |
ಎಂದ ಬೈಚಪ್ಪನ ನುಡಿಗೇಳಿ ಕಂಪಿಲ
ಇಂದಿತ್ತ ನಂಬುಗೆಯ ಕೊಟ್ಟು || ೬ ||

ಕೊಲ್ಲಲಿಂತೆಂದರೆ ಕೊಲ್ಲುವೆ ತಪ್ಪದೆ
ಬಲು ನಂಬಿಗೆಯ ಪಾಲಿಸೆನಗೆ |
ಸಲೆ ನಂಬುಂಬೆಂದು ಕಂಪಿಲರಾಯನು
ಬಲುಹಿಂದ ಹೇಳಿದನಾಗ || ೭ ||

ನಿಲ್ಲದೆ ಮಂತ್ರಿಗೆ ವೀಳ್ಯಯವನು ಕೊಟ್ಟು
ಕೊಲ್ಲೆಂದು ಕಳುಹಿದ ರಾಯ |
ಕೊಲ್ಲೆಂದ ಮಾತಿಗೆ ಕೊಲ್ಲದಿರ್ದಡೆ ನಿನ್ನ
ಕಲ್ಲಗಾಣಕೆ ಹಾಕಿಸುವೆನು || ೮ ||

ಒಪ್ಪವ ಕೊಡುವುದ ಕಾಣುತ ಬೈಚಪ್ಪ
ತಪ್ಪದೆ ಕಡೆಗಣ್ಣೆಲುದಕ |
ಒಂದೆರಡು ಭಾಷೆಯ ತಪ್ಪದೆ ತಕ್ಕೊಂಡು ಕರೆ
ಸಿದ ತನ್ನ ಮಂದಿಯನು || ೯ ||

ಬನ್ನಿರೊ ಹಳೆಯ ಎಕ್ಕಟಿಗರೆಲ್ಲರು ನೀವು
ಬನ್ನಿರೈ ತೆಲುಗು ಮನ್ನೆಯರು |
ಚೆನ್ನಿಗ ರಾಮನ ಹಿಡಿಯಬೇಕೆನುತಲಿ
ತನ್ನ ಬಂಟರಿಗೆ ಹೇಳಿದನು || ೧೦ ||

ಒಡೆಯನ ಮಾತನು ಕೇಳುತ ಬೈಚಪ್ಪ
ಹಿಡಿಯಬೇಕೆಂದ ರಾಮುಗನ |
ಕಡುಗಲಿ ರಾಮಯ್ಯ ಕೈಕೊಂಡನಾದರೆ
ಪೊಡವಿಯೊಳಗೆ ಇದಿರಿಲ್ಲ || ೧೧ ||

ದೊರೆ ರಾಮಯ್ಯನ ಬಳಿಗೆ ಬಂದ ಬೈಚಪ್ಪ
ಭರದಿಂದ ಬಿನ್ನೈಸಿದನು || ೧೨ ||

ಏಕಾಂಗಿ ವೀರ ರಾಮಯ್ಯ ಬೈಚಪ್ಪನು
ಏಕಾಂತದ ಮನೆಗೈದು |
ಯಾಕೆ ಬಂದೆಯೊ ಮಂತ್ರಿ ಬಂದ ಕಾರಣವೇನು
ಎಂದು ಕೇಳಿದನು ರಾಮಯ್ಯ || ೧೩ ||

ಇಂದು ನಿನಗೆ ರಾಮ ರತ್ನಿಯಿಂದಪಕೀರ್ತಿ
ಬಂದಿದೆ ಕೇಳು ಚೆನ್ನಿಗನೆ || ೧೪ ||

ಕೊಲ್ಲೆಂದು ಕಳುಹಿದ ಕಂಪಿಲರಾಯನು
ಕೊಲ್ಲದಿರ್ದಡೆ ನಿನ್ನ ನಾನು |
ಕಲ್ಲುಗಾಣಕ್ಕೆ ಹಕಿಸುವೆನೆನು
ತಲಿ ಅರಸು ಕೋಪಿಸಿದ ಎನ್ನ ಮೇಲೆ || ೧೫ ||

ಎತ್ತಣ ಮಾತು ಎಲ್ಲಿಯ ಬಹು ಸುದ್ದಿಯು
ಹೊತ್ತಿತು ಬಯಲಪಕೀರ್ತಿ |
ಎಲ್ಲಿಯ ಮಾತಿನ್ನು ಹೊಂದಿತು ಬೈಚಪ್ಪ
ನಿಲ್ಲದೆ ಕೇಳ್ದ ರಾಮಯ್ಯ || ೧೬ ||

ಇಲ್ಲಿಗೆ ಹೋಯಿತು ಈ ಕ್ಷಣವೆ ಪ್ರಾಣವು
ಕೊಲ್ಲು ಪ್ರಧಾನಿಗಳರಸ || ೧೭ ||

ಮೊತ್ತದ ಪರಿವಾರ ಸಹಿತ ಮುತ್ತಿನಚೆಂಡ
ಅರ್ತಿಯಿಂದಲಿ ಆಡುತಿರಲು |
ಒತ್ತಿ ಇಡಲು ಚೆಂಡು ಬೀಳಲು ತರಹೋದೆ
ಮತ್ತೆ ಚಿಕ್ಕಮ್ಮನರಮನೆಗೆ || ೧೮ ||

ಚಿಕ್ಕಮ್ಮನೆಂದು ನಾ ಚೆಂಡ ತರಹೋದೆ
ತಕ್ಕೈಸಿ ಮುಂದೆ ಪಿಡಿದಳು |
ಅಮ್ಮಾಜಿ ನೀ ನನ್ನ ಪಿಡಿಯಸಲ್ಲದು ಎಂದೆ
ಕಲಶ ಕುಚಗಳನು ತೋರಿದಳು || ೧೯ ||

ಮುಕ್ಕಣ್ಣ ಜಟ್ಟಂಗಿ ರಾಮೇಶ್ವರನಾಣೆ
ಚಿಕ್ಕಮ್ಮಗೆರಡೆಣಿಸಿದರೆ || ೨೦ ||

ಇನಿತಿಷ್ಟು ತಪ್ಪ ಮಾಡಿದುದಿಲ್ಲ ಬೈಚಪ್ಪ
ಅನುಮಾನವೇಕೆ ಕೊಲ್ಲಯ್ಯ |
ಮಾನಿನಿಯರ ಮಾತು ಕುಟಿಲ ಕೌತುಕವನು
ಏನೆನ್ನಬಹುದು ಸಿದ್ಧಾಂತ || ೨೧ ||

ಅಪ್ಪನ ರಾಣಿಗೆ ತಪ್ಪದೆನಾದರೆ
ಸರ್ಪಭೂಷಣ ಶಿವ ಬಲ್ಲ |
ತಪ್ಪು ಉಂಟಾದರೆ ಕೊಲ್ಲೊ ಪ್ರಧಾನಿ ಎಂ
ದೊಪ್ಪಿಸಿದನು ಕಠಾರವನು || ೨೨ ||

ತಪ್ಪು ಉಂಟಾದರೆ ಕೊಲ್ಲುವೆ ರಾಮಯ್ಯ
ತಪ್ಪುವನಲ್ಲ ಪರಸತಿಗೆ |
ತಪ್ಪೆನು ನಿನ್ನ ಪ್ರಾಣಕೆ ಎಂದು ಬೈಚಪ್ಪ
ಅಪ್ಪಿಕೊಂಡನು ಭುಜತುಂಬ || ೨೩ ||

ಆವ ಠಾವಿಲಿ ಮಡಗುವೆನೆಂದು ಬೈಚಪ್ಪ
ಭಾವದೊಳಗೆ ಧ್ಯಾನಿಸಿದನು |
ದೇವ ಜಟ್ಟಂಗಿರಾಮನ ಗುಡಿಯೊತ್ತಿಲಿ
ದೇವೇಂದ್ರಸುತನ ಮಡಗುವೆನು || ೨೪ ||

ಉಪ್ಪಲಿಕರ ಸಿಂಗಯ್ಯನ ಕರೆಸಿದ
ತಪ್ಪದೆ ಏಕಾಂತವಾಡಿ |
ಒಪ್ಪದಿಂದಲಿ ಬೆಳಗಾಗದ ಮುನ್ನಲಿ
ಇಪ್ಪಂತೆ ಮಾಡೊಂದು ಗೃಹವ || ೨೫ ||

ಮುನ್ನೂರು ಹಾರೆ ಗುದ್ದಲಿ ಸಲಿಕೆ ಸಹವಾಗಿ
ಚೆನ್ನಾಗಿ ತೋಡೊ ಮಾಳಿಗೆಯ || ೨೬ ||

ಎಂದ ಮಾತನು ಕೇಳಿ ಉಪ್ಪಾರ ಸಿಂಗಯ್ಯ
ಅಂದು ಮಾಳಿಗೆಯ ತೋಡಿದನು |
ಬಂದು ಕಾಮಾಟರು ಮಂತ್ರಿಗೆ ಪೇಳಲು
ಬಂದು ನೋಡಿದನು ಬೈಚಪ್ಪ || ೨೭ ||

ಚೆಂದವಾಗಿದೆಯೆಂದು ಮಂತ್ರಿ ಬೈಚಪ್ಪನು
ತಂದುಕೊಟ್ಟನು ಉಡುಗೊರೆಯ |

ಏಳು ತಿಂಗಳಿಗೆ ಅಕ್ಕಿ ಕಡಲೆ ಗೋದಿಗಳಾಗ
ಬೇಳೆ ಬೆಲ್ಲವು ಸಹವಾಗಿ || ೧೮ ||

ದೀಪದೆಣ್ಣೆಯು ತೂಗುಮಂಚ ರಾಮಯ್ಯಗೆ
ತಪ್ಪದೆ ತಂದಿರಿಸಿದರು |
ಉಪ್ಪು ಮೆಣಸು ಅಡಕೆ ಬಿಳಿಯಲೆ ಸುಣ್ಣವ
ತಪ್ಪದೆ ತಂದಿರಿಸಿದರು || ೧೯ ||

ದೇವಿಸೆಟ್ಟಿಯ ಲಿಂಗ ಕೊಳ್ಳಿಯ ನಾಗಣ್ಣ
ಭಾವಸಂಗಮ ಗುಜ್ಜಲೋಬ |
ಕೋವಿದ ಕೋಟಗರ ದ್ಯಾವ ಮಾದಿಗ ಹಂಪ
ಹಾವಳಿಕಾರನು ಹನುಮ || ೨೦ ||

ಲಿಂಗ ಕಾಟಣ್ಣನು ನಲ್ಲನಾಯಕ ಸಹ
ಸಿಂಗಯ್ಯ ಮುಮ್ಮಡಿಯೆನಿಪ |
ಅಂಗಜರೂಪ ನೆಲಮಾಳಿಗೆಯೊಳು ಆರು
ತಿಂಗಳು ನೀವಿರಿಯೆಂದು || ೨೧ ||

ಸಂಗಡದವರು ಹನ್ನೆರಡು ಮಾನ್ಯರು ಸಹ
ಹಿಂಗದೆ ಇರಿಯೆಂದು ಮಡಗಿ || ೨೨ ||

ಆರು ತಿಂಗಳ ಬೀಯ ಅಡಕೆಲೆ ಸಹವಾಗಿ
ತೋರಿದ ರಾಮಯ್ಯಗಾಗ |
ಆರು ತಿಂಗಳ ಸನ್ನಹವನು ತೋರಿಸಿ
ಧೀರ ರಾಮನ ಮಡಗಿದನು || ೨೩ ||

ಭಾವಜರೂಪನ ಮಡಗಿ ಬೈಚಪ್ಪನು
ನೋವ ತಾಳಿದನು ಮನದೊಳಗೆ |
ಬೇಗದಿ ತಿರಿಗಿಬಂದನು ಬೈಚಪ್ಪ
ಖಳರಾಮ ಬಂಟನಿದ್ದೆಡೆಗೆ || ೨೪ ||

ಅಳಿವ ಕಾಲವು ಬಂತು ನಿನಗೆ ಎನುತಲಿ ಈಗ
ಉಳಿಯಲೀಸನು ಕಂಪನೃಪತಿ || ೨೫ ||

ಪಾಪಿಯ ಪ್ರಾಣವ ಕಾಯ್ದೆ ಇಷ್ಟು ದಿನ
ಭೂಪ ಕಂಪಿಲ ಬೇಂಟೆಯಲಿ |
ಕೋಪವ ಮಾಡಿದ ನನ್ನ ಮೇಲೆನುತಲಿ
ಉಪಾಯದಿ ಬೈಚಪ್ಪ ನುಡಿದ || ೨೬ ||

ಒಡೆಯ ಕಂಪಿಲರಾಯ ಕೋಪಿಸಲ್ಯಾತಕೆ
ಕೊಡುವೆನು ನನ್ನ ಪ್ರಾಣವನು |
ಪೊಡವಿಯೊಳೀ ಕಾಯ ಇರಬಂದಿಲ್ಲೆಂದು
ತಡೆಯದೆ ಖಳರಾಮ ನುಡಿದ || ೩೭ ||

ಪ್ರಾಣವನಾದರೆ ಕೊಡುವೆನೊ ಪ್ರಧಾನ
ಮಾಣದೆನಗೆ ಉಸುರೆನಲು |
ಏಣಾಕ್ಷಿ ರತ್ನಿಯರಮನೆಗೆ ಹೋಗಿ
ತಾ ಕೇಣವಿಲ್ಲದೆ ಚೆಂಡ ಬೇಡೆ || ೩೮ ||

ಜಾಣ ರಾಮುಗನ ಕೊಲ್ಲೆಂದು ಕಂಪಿಲರಾಯ
ಮಾಣದೆನ್ನೊಳು ಉಸುರಿದನು |
ಬಾಣವೈದುಳ್ಳ ರೂಪನ ಕೊಲ್ಲಲಾರದೆ
ಮಾಣದೆ [ಬಂ]ದೆ ನಿನ್ನೆಡೆಗೆ || ೩೯ ||

ಬಂದರೆ ಒಳ್ಳಿತಾಯಿತು ಮಂತ್ರಿಗಳದೇವ
ಇಂದೆನ್ನ ಪ್ರಾಣವ ಕೊಡುವೆ |
ಇಂದೆನ್ನ ಪ್ರಾಣವ ಕೊಡುವೆನು ಬೈಚಪ್ಪ ಕೇ
ಳೆಂದನು ಖಳಬಂಟರಾಮ || ೪೦ ||

ಒತ್ತಿಸಿ ಮೀಸೆಯೆಲ್ಲವನು ಬವರಿಯ ತಿದ್ದಿ
ಕಸ್ತೂರಿ ತಿಲಕವನಿಟ್ಟು |
ಮುತ್ತಿನ ಕಡುಕಿಕ್ಕಿ ವೀರಜಡೆಯ ಹೆಣೆದು
ಮತ್ತೆ ರಾಮನ ಸರಿಯೆನಿಸಿ || ೪೧ ||

ಜಡಿದು ಸುರಗಿಯನು ಪಿಡಿದೆದ್ದು ಬೈಚಪ್ಪ
ಬಿಡದೆ ರಾಮುಗನೆ ಪೇಳೆನಲು |
ಕೊಡುವೆ ಜಟ್ಟಂಗಿರಾಮಗೆ ಎನ್ನ ತಲೆಯನು
ನುಡಿದನು ಖಳಬಂಟರಾಮ || ೪೨ ||

ನುಡಿದ ಮಾತನು ಕೇಳುತಲಾಗ ಬೈಚಪ್ಪ
ಬಿಡದೆ ತನ್ನಿಷ್ಟದೈವರನು |
ತಡೆಯದೆ ನೆನೆದು ಮೃಡ ನೀನೆ ಬಲ್ಲೆಂದು
ಒಡನೆ ಗರ್ಜಿಸಿ ತುಂಡ್ರಿಸಿದನು || ೪೩ ||

ಕಡಿಯಲು ಖಳರಾಮನ ತಲೆ ಬಿದ್ದಿತು
ಒಡನೆ ನಾಲ್ವರು ಬೊಬ್ಬೆಯಿಡುತ |

ಪೊಡವಿಯೊಳಗೆ ಬ್ರ[ಹ್ಮ] ತ್ಯವಾಯಿತು ಎಂದು
ಒಡನೆ ಬೈಚಪ್ಪನಿಂತೆಂದ || ೪೪ ||

ಮು[ನ್ನ ಸೆರೆ]ಯೊಳಿರ್ದ ಹನ್ನೆರಡು ಮಂದಿಯ
ಚೆನ್ನಭಿನ್ನವಮಾಡಿ ಕಡಿದ |
ಬಿನ್ನಾಣದಿಂದ ತಲೆಯನು ತಂದು ಬೈಚಪ್ಪ
ಗನ್ನದ ಕೊಲೆಯ ತೋರಿದನು || ೪೫ ||

ಹೆಚ್ಚಿದವರ ಶಿರ ಛೇದನ ಮಾಡಿದ
ಮಚ್ಚರದವರನು ಕಡಿದ || ೪೬ ||

ಇತ್ತ ರಾಮನ ಪ್ರತಿರೂಪಿನ ತಲೆಯನು
ಎತ್ತಿ ತಂದರು ಎಳೆದೆಳೆದು |
ಅರ್ತಿಯಿನೆಲ್ಲ ಕಂಪಿಲರಾಯ ನೋಡೆಂದು
ಮತ್ತೆ ಸಂಜೆಯಲಿ ತೋರಿದರು || ೪೭ ||

ಈ ತಲೆ ದೇವಿಸೆಟ್ಟಿಯ ಲಿಂಗನ ತಲೆ
ಈ ತಲೆ [ಭಾವ ಸಂಗ]ನದು |
ಈ ತಲೆ ಕೊಳ್ಳಿಯ ನಾಗನ ತಲೆಯೆಂದು
ಈ ತಲೆ ಗುಜ್ಜಲೋಬನದು || ೪೮ ||

ಈ ತಲೆ ಹಾವಳಿಕಾರ ಹನುಮನ ತಲೆ
ಈ ತಲೆ ಲಿಂಗ ಕಾಟನದು |
ಈ ತಲೆ ನಲ್ಲನಾಗನ ತಲೆ [ದ್ಯಾವ]ನದು
ಈ ತಲೆ ಮುಮ್ಮುಡಿಸಿಂಗನದು || ೪೯ ||

ಈ ತಲೆ ಮಾದಿಗ ಹಂಪನ ತಲೆಯೆಂದು
ಮಾತನಾಡಿದ ಮಂತ್ರಿಯೊಡನೆ |
ಯಾತಕಿವರನೆಲ್ಲ ಹೊಯ್ಸಿದೆ ಬೈಚಪ್ಪ
ನೀತಿಯೆ ಕಂಪಿಲ ನುಡಿದ || ೫೦ ||

ಇದು ಸುರಿತಾಳನಗಂಡನೆಂದೆಂಬಂಥ
ಚದುರನ ತಲೆಯ ತೋರಿಸಿದ |
ಇದು ಕಾಮಭೀನ ರೂಪನ ತಲೆಯೆಂದು
ಮುದದಿ ತೋರಿದನು ಪ್ರಧಾನಿ || ೫೧ ||

ಇದು ಸುರಿತಾಳನೇಮಿಯ ಗಂಡನೆಂದೆಂಬ
ಒದಗಿ ಬಲ್ಲಾಳರಾಯನವರ |

ಎದೆಶೂಲ ಓರ್ಗಲ್ಲಸಿನಗಂಡನೆಂದೆಂಬ
ಚದುರನ ತಲೆಯ ತೋರಿಸಿದ || ೫೨ ||

ಕೊಂದೆ ಯಾತಕೊ ಕಾಟಲಿಂಗನ ಎನುತಲಿ
ತಂದೆ ಕಂಪಿಲರಾಯ ನುಡಿದ |
ಬಂದು ರಾಮನ ಕೊಂದುಹೋದೆ[ನೆಂ]ದರೆ ತಾವು
ಹಿಂದಟ್ಟೆ ಹರಿ[ಯೆ] ಹೊಯ್ಸಿದೆನು || ೫೩ ||

ಈಸು ಮಾಡಿದ ರಾಮ [ಗಾಸಿ]ಯಾದನು ಈಗ
ಭಾಷೆಯವಳ ಕರೆಸೆನಲು |
ಅರಗಿಳಿ ನುಡಿಯಂಥ ಕನ್ನಡಿಮುಖದವಳ
ಕರೆಸು ರತ್ನಾಜಿರಾಣಿಯನು || ೫೪ ||

ಹಾಸಿದ ಹಾಸಿಕೆ ಪೂಸಿದ ತಲೆಮದ್ದು
ಮಾಸಿದ ಸೀರೆ ಸೋಲ್ಮುಡಿಯು |
ಭಾಷೆಗೆ ತಪ್ಪದ ರಾಯ ಕಂಪಿಲನೆಂದು
ಆಸೆಕಾತಿಯು ಹೊರಹೊಂಟು || ೫೫ ||

ಅಲ್ಲಲ್ಲಿ ನಿಲ್ಲುತ ಅಲ್ಲಲ್ಲಿ ನೋಡುತ
ಮೆಲ್ಲಮೆಲ್ಲನೆ ಅಡಿಯಿಡುತ |
ಗಲ್ಲದ ಮೇಲೆ ಕರವಿಟ್ಟು ರತ್ನಾಜಿಯು
ಅಲ್ಲಿಗೆ ಬಂದಳು ನಗುತ || ೫೬ ||

ದೃಷ್ಟಿಸಿ ನೋಡಿದಳು ರಾಮನ ತಲೆಯನು
ಮೆಟ್ಟಿ [ನಿಲ್ವೆನು] ಎಲೋ ಮಂತ್ರಿ |
ನಿಷ್ಠುರಿ ಹಾಗೆಂದು ನೀಕರಿಸಿ ತಲೆಯನು
ಕಟ್ಟಕಡೆಗೆ ಹಾಕಿಸಿದಳು || ೫೭ ||

ಕಷ್ಟವ ನುಡಿವುತ ಮಂತ್ರಿಯ ರತ್ನಾಜಿ
ಪಟ್ಟಸಾಲೆಯನೊಳಪೊಕ್ಕು || ೫೮ ||

ಕುರುಹಿನ ಕಡೆಯ ಪೊಂಗಲು ಕಂಠಮಾಲೆಯ
ಮರೆಮಾಡಿ ತಂದು ತೋರಿಸಿದ |
ಕುರುಹನು ತಂದು ತೋರಲು ಕಂಪಿಲರಾಯ
ಬೆರಗಾದನು ದಿಟವೆನುತ || ೫೯ ||

ಮುಂದರಿಯದೆ ವಿಚಾರವ ಮಾಡದೆ
ಹಿಂದಣ ಹಗೆಯುಂಟೆ ನಿನಗೆ || ೬೦ ||

ಮೂರು ಮಾತನು ಕೇಳುವರು ಪ್ರಧಾನರು
ಏರಿತೆ ಹುಚ್ಚು ತಲೆಗೆನಲು |
ಮೀರಿ ಆಜ್ಞೆಯ ಮಾಡಿದೆ ನೀನು ರಾಮನ
ತೋರೆಂದು ರಾಯನಾಡಿದನು || ೬೧ ||

ನಿರ್ಧಾರವಹುದೇನೋ ಎನಲು ಕಂಪಿಲರಾಯ
ಬಿದ್ದನು ಮುಖ ಅಡಿಯಾಗಿ || ೬೨ ||

ಗಬ್ಬಿ ರಾಮಯ್ಯನ ಕೊಲ್ಲೆಂದು ನಿನಗೆ
ನಾ ಉಬ್ಬಿ ಕೊಟ್ಟೆನೆ ಸಲೆ ಚೀಟಿ |
ಹೆಬ್ಬುಲಿ ರಾಮನ ತೋರೆಂದು ಕಂಪಿಲ
ನುಬ್ಬಿ ಬಿದ್ದನು ಧರಣಿ ಮೇಲೆ || ೬೩ ||

ಅರಸಿಗೆ ಆರುಬಾಯೆಂಬುದು ತಪ್ಪದು
ಸರಸವೆ ನಿಮ್ಮೊಳು ನಮಗೆ || ೬೪ ||

ಹೊನ್ನಮೂಳೆಯ ಕಠಾರಿಯ ತೆಗೆದಿತ್ತ
ರನ್ನ ಮಾಣಿಕದ ಉಂಗುರವ |
ಚೆನ್ನ ಸರ ಕಾಲಪೆಂಡೆಯ ತೆಗೆದಿಟ್ಟ
ಹೊನ್ನ ಒರೆಯ ಮಂಕುಡಿಯ || ೬೫ ||

ಹೊ[ನ್ನ]ದೇವಾಂಗ ಹಚ್ಚಡವ ತೆಗೆದುಕೊಟ್ಟ
ಹನಿವ ರಕ್ತದ ತಲೆ ಸಹಿತ |
ಇನಿತು ತಲೆಯನು ಕಟ್ಟಿದ ಚಂದ್ರಗಾವಿಯ
ಅನುವಾಗಿ ಕೊಟ್ಟ ಕಂಪಿಲಗೆ || ೬೬ ||

ಕೊಲುವಾಗ ಏನೆಂದ ಚೆನ್ನಿಗ ರಾಮಯ್ಯ
ಸೊಲ್ಲ ಹೇಳೆನಗೊಂದು ಬಾರಿ || ೬೭ ||

ಪರಿವಾರ ಮಂತ್ರಿ ರಾಹುತರು ಮನ್ನೆಯರೆಲ್ಲ
ಸ್ಥಿರವಾಗಿ ಬಾಳಲಿನ್ನೆಂದ |
ದೊರೆಯು ಶಿರೋಮಣಿ ಕಂಪಿಲರಾಯನು
ಧರೆಯನೆಲ್ಲವನಾಳಲೆಂದ || ೬೮ ||

ಅಪ್ಪನ ಮೋಹದ ರಾಣಿ ಚಿಕ್ಕಮ್ಮನು
ಮುಪ್ಪಿನ ಮುತ್ತೈದೆಯಾಗಿ |
ಕಪ್ಪುಗೊರಳನ ಕರುಣದಲಿ ಸ್ಥಿರಬಾಳಲಿಯೆಂದು
ತಪ್ಪದೆ ಹರಕೆಯ ಕೊಟ್ಟ || ೪೯ ||

ಹಗಲು ಕಗ್ಗೊಲೆಯ ಸಾಹಸಭೀಮ ರಾಮಯ್ಯ
ಮರೆಯದೆ ನಿನಗೆ ಹೇಳೆಂದ |
ಅಗಣಿತವಾಗಿ ರತ್ನಮ್ಮ ಹೇಳಿದ ಮಾತ
ಉಗುಳ ದಾಟಲಿಬೇಡವೆಂದ || ೭೦ ||

ಎಂದೆಂದು ರತ್ನಮ್ಮ ಹೇಳಿದ ಮಾತನು
ಒಂದಿಷ್ಟು ಮೀರಬೇಡೆಂದ |
ಕುಂದದೆ ಇಬ್ಬರು ಸ್ಥಿರವಾಗಿ ಬಾಳಲಿ
ಎಂದು ಹರಕೆಯ ಕೊಟ್ಟ ರಾಮ || ೭೧ ||

ಏಳೇಳು ಜಲ್ಮಕ್ಕೆ ಕಂಪಿಲ ತಂದೆಯು
ಏಳೇಳು ಜಲ್ಮಕೆ ರತ್ನಾಜಿ |
ಏಳೇಳು ಜಲ್ಮಕೆ ತಾಯಾಗಲಿಯೆಂದು
ಲೋಲ ರಾಮಯ್ಯ ಹರಸಿದನು || ೭೨ ||

ಏಳೇಳು ಜಲ್ಮಕೆ ಜಟ್ಟಂಗಿ ರಾಮೇಶ
ಭಾಳಲೋಚನನಾಗಲೆಂದ |
ಏಳೇಳು ಜಲ್ಮಕೆ ಕಾಟಣ್ಣನಂತಣ್ಣ
ಏಳು ಜಲ್ಮದಲಾಗಲೆಂದ || ೭೩ ||

ಏಳೇಳು ಜಲ್ಮಕೆ ಮಾರಮ್ಮ ಸಿಂಗಮ್ಮ
ಏಳು ಜಲ್ಮಕೆ ಹರಿಯಮ್ಮ |
ಏಳು ಜಲ್ಮದಿ ಒಡಹುಟ್ಟಿದವರಾಗಲಿಯೆಂದು
ಕೋಳಾಹಳನು ರಾಮ ನುಡಿದ || ೭೪ ||

ಹರಕೆಯ ನಮಗಿತ್ತು ಜಟ್ಟಂಗಿರಾಮನ
ವರಪಾದವನು ಸೇರಿಕೊಂಡ |
ಹರುಷದಿ ಮೂಡ ಮುಂದಾಗಿ ಕುಳಿತು ರಾಮ
ಶಿರವನಿತ್ತನು ಕಡಿಯೆನುತ || ೭೫ ||

ಬಾಯನೆತ್ತದೆ ಹೊಯ್ದು ಶಿರವನು ನಾನು
ಕಾಯವ ಕಡಿತಂದೆನೆಂದ |
ಆ ಮಾತ ಕೇಳಿ ಕಂಪಿಲರಾಯ ಶೋಕದಿ
ಭೂಮಿಪ ಧರಣಿಗೆ ಕೆಡೆದ || ೭೬ ||

ಕಾಯವ ಮರೆದು ಕಂಗಳ ಮುಚ್ಚಿ ಧರೆಯೊಳು
ಬಾಯಬಿಟ್ಟನು ದೆಸೆದೆಸೆಗೆ || ೭೭ ||

ಹೆಸರಡಗಿತು ಕುಮಾರರಾಮಯ್ಯನ
ದೆಸೆಹೋಯಿತು ಕಂಪಿಲನ |
ಅಸುರರ ದಂಡು ಬಂದರೆ ಕಾದುವರಾರು
ದೆಸೆಯ ಮಾನ್ಯರ ಕಾಣೆನೆಂದ || ೭೮ ||

ಉಕ್ಕುವ ಕೋಪದಿ ರಾಯ ಬೀಳಲು ಮಂತ್ರಿ
ತರ್ಕೈಸಿ ತಬ್ಬಿ ಕುಳ್ಳಿರಿಸಿ |
ಮುಕ್ಕಣ್ಣ ಸಾಕೆಂದರೆ ರಾಮನಳಿದನು
ದುಃಖವ ಬಿಡು ರಾಯನೆನಲು || ೭೯ ||

ಬಿಡು ಇನ್ಯಾಕೆ ರಾಮನ ಹಂಬಲಯೆಂದು
ಬೇಡಿಕೊಂಡನು ಕಂಪಿಲನ |
ಗನ್ನ ಘಾತಕಿ ರತ್ನಿಗೆ ರಾಮನ ತಲೆಯ
ಕೊಂಡಿರೆಂದು ಕಂಪಿಲ ನುಡಿಯೆ || ೮೦ ||

ಖಿನ್ನವಿಲ್ಲದೆ ತೋರೆಂದ ಕಂಪಿಲರಾಯ
ತನ್ನ ಮಂತ್ರಿಯೊಳು ಕಳುಹಿದನು || ೮೧ ||

ಕೊಡ ಬಂದರು ಹರಿವಾಣದಿ ತಲೆಯನು
ದಿಂಡೆ ರತ್ನಿಗೊಪ್ಪಿಸಲು |
ಬಂಡುಮಾಡಿದ ತಲೆಯೆಂದು ರಾಮಯ್ಯನ
ಮಂಡೆಯನೊಲಿದು ನೋಡಿದಳು || ೮೨ ||

[ಗಾಸಿ]ಯ ಮಾಡಿದ ಕುಮಾರರಾಮಯ್ಯನ
ಮೀಸೆಯ ಪಿಡಿದು ನೋಡಿದಳು |
ಬೇಡ ಹೆತ್ತ ತಂದೆಯ ಅಪಮಾನಕ್ಕೆ
ನಿಲ್ಲದೆ ಎಳಸಿದ ದ್ರೋಹಿ || ೮೩ ||

ಒಲ್ಲದಿರ್ದರೆ ಎನ್ನ ಭವಗೆಡಿಸಿದನೆಂದು
ಗಲ್ಲವ ಪಿಡಿದು ನೋಡಿದಳು || ೮೪ ||

ಜಗದೊಳಗಿನ್ನೇನು ಜಿಗುರಿ ಕಾಡಿದನೆಂದು
ಬಿಗಿದ ತಲೆಯನು ಮೆಟ್ಟಿನಿಂದು |
ತೆಗೆದುಹಾಕಿದರು ರಾಮಯ್ಯನ ತಲೆಯನು
ಅಗುಳಿಗೆ ಬಿಸುಟರಾಕ್ಷಣದಿ || ೮೫ ||

ಬೊಬ್ಬಿಟ್ಟು ಅಳುತಿರೆ ರಾಮನ ತಲೆ[ಯಿ]ನ್ನು
ಗಬ್ಬಿ ರಾಮುಗ ನಿಜವೆನುತ |

ಉಬ್ಬಿದಳಾಗ ಮನದಲಿ ರತ್ನದೇವಿಯು
ತಬ್ಬಿಬ್ಬಗೊಂಡಳಾಕ್ಷಣದಿ || ೮೭ ||

ನರೆಗಲಿ ರಾಮನ ಕೊಂದರೆಂದೆನುತಲಿ
ಹಿರಿದು ಹಿರ್ರನೆ ಹಿಗ್ಗಿದಳು || ೮೭ ||

ಇತ್ತ ಕೇಳ್ದಳು ರಾಮ ಸತ್ತ ಸುದ್ದಿಯನವನ
ಹೆತ್ತತಾಯಿ ಹರಿಯಲದೇವಿ |
ಹೆತ್ತ ಒಡಲನಾಗ ಹೊಯ್ಕೊಂಡು ಮರುಗಿದಳು
ಮತ್ತೆ ಅಂಗಜರಾಮನಳಿದ || ೮೮ ||

ಎಲ್ಲಿಯ ಮಾತು ರಾಮಯ್ಯನೇನಾದನೊ
ಹೊಲ್ಲಹ ಸ್ವಪ್ನವ ಕಂಡೆ |
ನಿಲ್ಲದೆ ಬಲಗೈಯ ಕಂಕಣ ಮುರಿವುದು
ಬೊಲ್ಲನು ತೊಡಕಿ ಬಿದ್ದಿಹುದು || ೮೯ ||

ಸಂದೇಹವಾಗಿ ಬೈಚಪ್ಪನ ಕರೆಸಿದಳು
ಇಂದು ಮನೆಗೆ ಬಾರದ್ಹೋದ |
ತಂದಳು ದಾಳಿಯ ರತ್ನಾಜಿ ಎಂದೀಗ
ಅಂದು ಸೋದರರಳಲಿದರು || ೯೦ ||

ಹೊಟ್ಟೆಹೊರಕರಂತೆ ಹೊರಸಿಗೆ ತಲೆಯನು
ಗೊಟ್ಟು ಸಾವರೆ ಗಂಡುಮರಿಯೆ |
ಮೆಟ್ಟಿ ಇರಿದು ಖಂಡೆಯದ ಕೈಮಾಡದೆ
ಪೆಟ್ಟಿಗೊಳಗಾಗೊರೆ ಮಗನೆ || ೯೧ ||

ಮುಟ್ಟಬಂದವರ ಮುಂದಲೆಯನೆಳೆದು ಸುತ್ತಿ
ಹೊಟ್ಟೆಯ ಬಗಿಯದೆ ನೀನು |
ದಿಟ್ಟತನದಲಿ ಬಂದವರ ಕೊಲ್ಲದೆ ರಾಮ
ನಿತ್ತೆ ಪ್ರಾಣವನು ನೀ ಮಗನೆ || ೯೨ ||

ಮುತ್ತಿ ಬಂದವರನು ಇರಿದು ಕೊಲ್ಲದೆ ನೀನು
ಇತ್ತೆ ಪ್ರಾಣವನು ನೀ ಮಗನೆ || ೯೩ ||

ಅಟ್ಟಿ ಹಿಡಿವರನೆಲ್ಲ ಮನೆಯ ಬಾಗಿಲ ಮುಂದೆ
ಒಟ್ಟಬಾರದೆ ತಲೆಗಳನು |
ಪಟ್ಟಣ ಮೊರೆದು ಎದ್ದರೆ ಕಾದಿ ಕೊಲ್ಲದೆ
ಕಟ್ಟಿಗೆ ನೀ ಸಿಕ್ಕಬಹುದೆ || ೯೪ ||

ಬಲ್ಲಿದ ರಾಮನ ನಿನ್ನದೆ ಕರೆದೊಯ್ದು
ಮೆಲ್ಲನೆ ಕೊರಳ ಮುರಿದರೊ |
ಕಲ್ಲು ಮರನ ಹಾಯ್ದು ಅತ್ತಳಾ ಹರಿಯಮ್ಮ
ಬಲ್ಲಿದನರಮನೆಯೊಳಗೆ || ೯೫ ||

ಮತ್ಸರದಿಂದ ಮಾನಿನಿ ರತ್ನಾಜಿಯು
ಎಚ್ಚಳೆ ಗುರಿಮಾಡಿ ನಿನ್ನ |
ಹೆಚ್ಚಳವಾಯಿತೆ ಕಂಪಿಲರಾಯಗೆ
ಮುಚ್ಚಿತೆ ರಾಮನ ಕಣ್ಣ || ೯೬ ||

ಮಣ್ಣ ಹೊಯ್ಸುವರೆ ನೋಡುವ ಕಣ್ಣುಗಳೊಳು ಮು
ಕ್ಕಣ್ಣನೆ ಎನುತ ಮರುಗಿದಳು |
ಅಣ್ಣ ರಾಮಣ್ಣನ ನೋಡುವ ಕಣ್ಣಿಗೆ
ಸುಣ್ಣವ ತೊಡೆದಂತಾಯ್ತು || ೯೭ ||

ಹೆಣ್ಣುಮಕ್ಕಳ ಅರ್ತಿಯ ಸಲಿಸುವ
ತಮ್ಮ ರಾಮನ ಕೊಂದ್ಯಾ ಶಿವನೆ || ೯೮ ||

ಶೂಲದ ಹಬ್ಬಕಿನ್ನಾರ ಮನೆಗೆ ಹೋಹೆ
ಬಾಲೆ ಮರುಗಿದಳು ಸಿಂಗಮ್ಮ |
ಸಾಲುಮುತ್ತಿನ ಸರ ಲೋಲ ಚಿಂತಕ ನೀನು
ಕಳುಹುವೆಯಲ್ಲೊ ಎಮಗೆ || ೯೯ ||

ಪಟ್ಟೆಪಟ್ಟಾವಳಿ ದೇವಾಂಗ ಆಭರಣ
ಪೆಟ್ಟಿಪೆಟ್ಟಿಗೆಯನು ತುಂಬಿ |
ಕೊಟ್ಟು ದೀಪಾವಳಿ ಮಾಡಿಪ ರಾಮ ಒಡ
ಹುಟ್ಟಿದ ಅಣ್ಣ ತಾನಳಿದ || ೧೦೦ ||

ಟ್ಟದೆ ಏಳೆಂಟು ದಿನದೊಳಗೆಲ್ಲ ಗೋ
ಳಿಟಟು ಬೀಳಲಿ ರಾಮನಂತೆ || ೧೦೧ ||

ವಾಲೆಗಳು ಹರಿದವು ಕೀಲು ಕಂಕಣ ಸಡಿಲಿ
ಸಲುಮುತ್ತಿನ ಸರ ಹರಿದು |
ಬಾಲೆ ಸಿಂಗಮ್ಮನು ಬಿಡದುರುಳಿದಳಾಗ
ಲೋಲ ರಾಮಯ್ಯನ ನೆನೆದು || ೧೦೨ ||

ದೇವರೆ ಈ ನೋವ ಆವಾಗ ಮರೆಯಲೊ
ಆವ ಮಕ್ಕಳ ನೋಡಲ್ಯೆಸೆ |

ಗೋವಿಂದ ಬ್ರಹ್ಮ ಶಿವನೆ ಮೊರೆಯೊ ಎಂದು
ಬೇವುತಿರ್ದಳು ಹರಿಯಮ್ಮ || ೧೦೩ ||

ಮುಡುಬನ ಕೊಡದೆ ಕೆಡಿಸಿದೆ ಪಾಪಿದೇವರೆ ಎ
ನೊನ್ನಡಲಿಗೆ ಕಿಚ್ಚ ಹೊಯ್ಕೊಂಡೆ |
ಬಡವಿಯ ಮಕ್ಕಳು ಎಲ್ಲರು ಸತ್ತಂತೆ
ಸುಡು ಸಂಸಾರವೆಂದೆನುತ || ೧೦೪ ||

ಬ್ಯಾರೊಂದು ಅರಮನೆಯೊಳು ರಾಮನಾಥನ
ನಾರಿಯರೆಲ್ಲ ಚಿಂತಿಸುತ |
ವೀರ ಕುಮಾರ ರಾಮಯ್ಯ ನಮ್ಮರಮನೆಗೆ
ಬಾರದ ಕಾರಣವೇನೋ || ೧೦೫ ||

ಎಂದು ರಾತ್ರಿಯ ಸ್ವಪ್ನದೊಳಗೆ ನಮ್ಮರಮನೆ
ನಿಂದ ಹೆಗ್ಗಂಬ ಮುರಿವುದು |
ಅಂದು ನಮ್ಮಮ್ಮಾಜಿ ಕಳುಹಿದ ಕರಬಾನ
ಒಂದುಳಿಯದೆ ಕೆಡೆದಿಹವು || ೧೦೬ ||

ಹಿರಿಯ ಹೆಂಡತಿ ರಾಮಲದೇವಿ ಸ್ವಪ್ನದಿ
ಇರದೆ ಹೇಳುವ ಸಮಯದಲಿ |
ಕಿರಿಯಾಕೆ ಹೇಳಿದಳ್ ಅಕ್ಕ ಕೇಳೆನ್ನಯ
ತುರುಬ ನಿಂದುರಿವುದ ಕಂಡೆ || ೧೦೭ ||

ಚಿಕ್ಕ ಹೆಂಡತಿ ತಿಮ್ಮಾಜಿ ಹೇಳಿದಳಂದು
ಲೆಕ್ಕವಿಲ್ಲದ ಸ್ವಪ್ನಗಳನು |
ಅಕ್ಕರಿಂದಲಿ ಎನ್ನ ಕೊರಳ ಮುತ್ತಿನಹಾರ
ಉಕ್ಕುಳಿಸಿ ಬೀಳ್ವದು ಧರೆಗೆ || ೧೦೮ ||

ರಾಮಗೆ ಹಿಡಿವ ಸತ್ತಿಗೆ ಮುರಿವುದ ಕಂಡೆ
ಪ್ರೇಮದಿ ನಾನಿಟ್ಟ ವಾಲೆ |
ಭೂಮಿಗೆ ಕಳಚಿ ಬೀಳ್ವದ ಕಂಡೆ ಇರುಳಲಿ
ಕಾಮಾಯಿ ಹೇಳಿದಳು ಕನಸ || ೧೦೯ ||

ಮತ್ತೊಬ್ಬ ಸತಿಯು ಭೂಮಾಯಿ ಹೇಳಿದಳೊಂದು
ಚಿತ್ತಜ ಸಮರೂಪ ರಾಮ |
ಅರ್ತಿಯಿಂದೇರುವ ಬೊಲ್ಲನು ಸ್ವಪ್ನದಿ
ಸತ್ತುದ ಕಂಡೆ ನಿನ್ನಿರುಳು || ೧೧೦ ||

ಉತ್ತುಮ ಸತಿಯರ ನೋಡಿ ಇಂದಿಗೆ ನಿಮ್ಮ
ಮುತ್ತೈದೆತನಗಳು ಬತ್ತೆ |
ಚಿತ್ತಜ ಸಮರೂಪದ ರಾಮುಳಿದನೆಂದು ಅವ
ರತ್ತೆ ಹೇಳಿದಳು ಸುದ್ದಿಯನು || ೧೧೧ ||

ಏನು ಕಾರಣ ರಾಮಳಿದನೆನ್ನುತಲಾಗ
ಮಾನಿನಿಯರೆಲ್ಲ ಕೇಳಿದರು |
ಏನೆಂದರಿಯೆ ರತ್ನಾಜಿ ಕಂಪಿಲನೊಳು
ಏನು ತಂತ್ರಗಳ ಹೇಳಿದಳೊ || ೧೧೨ ||

ಇಂದ್ರ ಮಹೇಂದ್ರಜಾಲವಹ ಳಿ ಕಂಪಿಲಗೆ
ಚಂದ್ರನ ಪೋಲ್ವ ರಾಮನನು || ೧೧೩ ||

ನಾವು [ಪಡೆದ] ಫಲವಿಷ್ಟೆಂದು ತಮ್ಮೊಳು
ತಾವೆ ಮಾತಾಡಿ ನಿಶ್ಚೈಸಿ
ಮಾವನಿದ್ದೆಡೆಗೈದು ಕಿಚ್ಚ [ಬೀಳು]ವೆವೆಂದು
ಭಾವಕಿಯರು ತೆರಳಿದರು || ೧೧೪ ||

ದುಕುಲವ ಸಣ್ಣ ನಡುವಿಗುಟ್ಟು ನವರ
ತ್ನ ಖಚಿತದಾಭರಣವನಿಟ್ಟು |
ಮಕರಂಕನರಸಿಯ ಪಳಿವಂತೆ ರಾಮನ
ಸಖಿಯರೆಲ್ಲರು ತೆರಳಿದರು || ೧೧೫ ||

ಪಿಡಿದು ಕಠಾರಿಯ ಬಲಗೈಯ್ಯಲೈವರು ಎಡಗೈಯ್ಯ
ಕನ್ನಡಿ ನಿಂಬೆ ವಸ್ತ್ರಗಳು |
ನಡೆದು ಬಂದರು ಕಂಪಿಲರಾಯನೋಲಗಕೆ
ತಡೆಯದೆ ಕಿಚ್ಚ ಬೇಡುವರೆ || ೧೧೬ ||

ನೋಡುತ ಕನ್ನಡಿಯನು ನಲಿದಾಡುತ
ಪಾಡುತಲಾಗ ರಾಮಯನ || ೧೧೭ ||

ಎಳೆಮೀಸೆ ಕೊನೆಮೀಸೆ ಬರುವಂಥ ಭೂಮಿಯ
ದಳಪತಿ ರಾಯರ ಗಂಡ |
ಕಳೆಯುಳ್ಳ ಚೆಲುವ ಚೆನ್ನಿಗರಾಮನೆನುತಲಿ
ನಲಿದು ಗಂಡನ ಪಾಡಿದರು || ೧೧೮ ||

ಭೀಮ ವಿಕ್ರಮ ರಾಮ ಬಿಟ್ಟಗಲುವರೆ ನಿ
ಸ್ಸೀಮಗೆ ಗುಣವಹುದೇನೊ || ೧೧೯ ||

ಖಾನ ವಜೀರರ ಮೇಲೆ ನೀ ದಂಡೆತ್ತಿ
ಏನ ಹೇಳದೆ ನಮ್ಮೊಡನೆ |
ಹೊನ್ನಂಬ ಬಿಟ್ಟು ಹೋದರೆ ನಾವು ಬಿಡುವೆವೆ ಹಾ!
ನಿನ್ನನಗಲಿ ಜೀವಪೆವೆ || ೧೨೦ ||

ಹಾ! ಎಮ್ಮ ಬಿಟ್ಟು ಅಗಲುವರೆ ಚೆನ್ನಿಗ ರಾಮ
ಹಾ! ನಿನ್ನ ಮುಖವನು ತೋರೋ |
ಇಂದು ರಾಮನ ಸಿಂಹದ ಮೇಲೆ ನೀ ಬಿಟ್ಟು
ಕೊಂದೆಯೊ ಕಂಪಿಲ ಮಾವ || ೧೨೧ ||

ಆವ ಠಾಣ್ಯಕೆ ರಾಮನ ಕಳುಹಿದೆ ಮಾವಾ
ಆವ ರಾಯರ ಮೇಲೆ ದಂಡ |
ಆವ ರಾಜ್ಯವನು ನೀ ದಾಳಿಯ ಮಾಡೆಂದು
ರಾಮನ ಕಳುಹಿದೋ ಮಾವ || ೧೨೨ ||

ಮಲೆವರಾಯರ ಪಿಡಿ ತರಹೇಳಿ ಈ ಕ್ಷಣ ಒಲಿದು
ಕಳುಹಿದೆಯಾ ಕಂಪಭೂಪ |
ಚೆಲುವ ರಾಮನ ಎಲ್ಲಿ ಕಳುಹಿದೆ ಎನುತಲಿ
ಬಲುಹಿಂದೆ ಕೇಳಿ ನುಡಿದರು || ೧೨೩ ||

ಬಲ್ಲಾಳರಾಯಗ ಬಳಿಗೆ ನೀ ಕಳುಹಿದೆಯೊ ಓ
ರ್ಗಲ್ಲ ಪ್ರತಾಪನ ಮೇಲೆ || ೧೨೪ ||

ಗುತ್ತಿಯ ಜಗದಪ್ಪರಾಯನ ಠಾಣ್ಯಕ್ಕೆ
ಮುತ್ತಿಗೆಯನು ಕಳುಹಿದೆಯೊ |
ಮೊತ್ತದಿ ಹುಳಿಯೇರ ಮಾರಗೊಂಡನ ಮೇಲೆ
ಒತ್ತಿ ಕಳುಹಿದೆಯೊ ರಾಮಯನ || ೧೨೫ ||

ಅಂಬಲಿಗಾಗಿ ಅಮೃತಾನ್ನವ ಚೆಲ್ಲಿದೆ
ಕಂಬಳಿಗಾಗಿ ದೇವಾಂಗವನು |
ಡೊಂಬಿತಿ ರತ್ನಿ ಮಾತನು ಕೇಳಿ ಮಾವಾಜಿ
ಕುಂಭಿನಿಪತಿಯ ಕೊಲ್ಲಿಸಿದೆ || ೧೨೬ ||

ಮಡದಿಯ ಮಾತ ನಿಶ್ಚಯಮಾಡಿ ಕಂಪಿಲ
ಕಡಿಯೆಂದು ಚೆಲುವ ರಾಮಯನ |
ನುಡಿದು ಅಪ್ಪಣೆಯಿತ್ತು ಕಳುಹಿದೆ ನಿನ್ನಯ
ಒಡಲು ಮರುಗದೆ ಮಾವಾಜಿ || ೧೨೭ ||

ಗಂಡನಾಜ್ಞೆಯ ಮೀ[ರ]ದ ಪತಿವ್ರತೆ
ಹೆಂಡಿರುಂಟಲ್ಲದೆ ಮಾವಾ |
ಹೆಂಡಿರ ಮಾತಿಗೆ ಸುತರ ಕೊಲ್ಲಿಸುವಂಥ
[ಗಂಡಂದಿರುಂಟೆ] ಲೋಕದೊಳು || ೧೨೮ ||

ಶಂಕೆಯಿಲ್ಲದ ನಮ್ಮ ಮುತ್ತೈದೆತನಗಳಿಗೆ
ಬೆಂಕಿಯನಿಕ್ಕಲಿಬಹುದೆ || ೧೨೯ ||

ತಂದೆ ಆಜ್ಞೆಯ ಮೀರಬಾರದು ಸತ್ಯಕ್ಕೆ
ಬಂದು ತಲೆಯ ಕೊಟ್ಟನೈಸೆ |
ಹಿಂದಣ ರಾಯರು ಮುಂದಣ ರಾಯರು
ಮುಂದೆ ನಿಲ್ಲುವರೆ ರಾಮಯನ || ೧೩೦ ||

ನಿನ್ನ ಅಪ್ಪಣೆಯಿಂದ ಕೊಂದ ಧರ್ಮಾತ್ಮಗೆ
ಎಂತು ಕೈ ಎದ್ದವೊ ಶಿವನೆ |
ಮನ್ನೆಯ ರಾಮನ ಮಡಗಿರ್ದರಾದರೆ
ಏನ ಬೇಡಿದರು ಕೊಡುವೆವು || ೧೩೧ ||

ಅಯ್ಯಯ್ಯೋ ರಾಮನ ಕೊಂದ ಪುಣ್ಯಾತ್ಮಗೆ
ಕೈಯೆಂತು ಎದ್ದವೊ ಶಿವನೆ |
ದೈವವೆ ಬಲ್ಲುದು ನಮ್ಮ ಸೂರೆಯನೆಂದು
ಐವರಾಡಿದರು ತಮ್ಮೊಳಗೆ || ೧೩೨ ||

ಕಕ್ಕೆಗಾಗಿ ಕಲ್ಪವೃಕ್ಷವ ಕೆಡಿಸಿದೆ
ಎಕ್ಕೆಗಾಗಿ ಬಾವನ್ನವನು |
ಚಿಕ್ಕಹೆಂಡತಿಯ ಮಾತನು ಕೇಳಿ ಮಾವಾಜಿ
ಲಕ್ಷಾಧಿಪತಿಯ ಕೊಲ್ಲಿಸಿದೆ || ೧೩೩ ||

ನಿಚ್ಚಟ್ಟ ರಾಮಯ್ಯ ಮುಂಚೆ ಹೋದನು ನಮ
ಗಾಶ್ಚರ್ಯವಾಯಿತು ಈಗ |
ನಿಶ್ಚಯಿಸಿರಾಮನ ಕೂಡೆ ಪೋಪೆವು ನಾವು
ಕಿಚ್ಚ ಪಾಲಿಸೊ ಕಂಪ ಮಾವಾ || ೧೩೪ ||

ಬೇಡಿ ನಿಮ್ಮತ್ತೇರ ಕೂಡಿನ್ನು ಸುಖದಲ್ಲಿ
ನಾಡ ಹಂಚಿಸಿ ಕೊಡಿಸುವೆನು |
ರೂಢಿಯೊಳಗೆ ರಾಮನ ಬಿಟ್ಟು ಇರುವುದು
ಖೋಡಿಯಲ್ಲವೆ ಕಂಪ ಮಾವಾ || ೧೩೫ ||

ರಂಡೆತನಕ ಬೇರೆ ರಾಜ್ಯವ ಕೊಡಿಸುವೆ
ಚಂಡಿತನವ ಮಾಡಬ್ಯಾಡ |
ಮಂಡಲದೊಳಗೆ ರಾಮನ ಬಿಟ್ಟು ಇರುವುದು
ಭಂಡಲ್ಲವೆ ಕಂಪ ಮಾವಾ || ೧೩೬ ||

ಆಡಿದ ಮಾತ ಕೇಳದೆ ಮೂರ್ಖತನ[ವನು]
ಮಾಡುತಿರಲು ಕೋಪದಲಿ |
ನೋಡು ಬೈಚಪ್ಪ ನೀನಿದಕೊಂದುಪಾಯವ
ಮಾಡೆಂದು ಮತ್ತೆ ನುಡಿದ[ನು] || ೧೩೭ ||

ಏನ ಕೇಳಿದರು ಕೇಳದ ರಾಮನಾಥನ
ಮಾನಿನಿಯರ ಕರೆದೊಯ್ದು ಮಾ |
ರನು ಮದನನು ಮ[ಡದಿಹ] ಠಾವಿಗೆ
ನೀನಿವರನು ಕಳುಹೆಂದ || ೧೩೮ ||

ಪೊಡವೀಶ ನುಡಿದ ಮಾತನು ಕೇಳಿ ರಾಮನ
ಮಡದಿಯರನು ಕರೆದೊಯ್ದು |
ತಡೆಯದೆ ಬುದ್ಧಿಯ ಹೇಳಿ ತಮ್ಮರಮನೆಗೆ
ನಡೆಯೆಂದು ಕಳುಹಿ ಬೈಚಪ್ಪ || ೧೩೯ ||

ಸತ್ತನೆಂದೆನಬೇಡಿರಿ ನಿಮ್ಮೆಲ್ಲರ
ಚಿತ್ತದೊಳಗೆ ಇರಲೆಂದು |
ಮೃತ್ಯುಂಜಯನ ವರ ಕರುಣವು ರಾಮಗೆ
ಮತ್ತೆ ಬೈಚಪ್ಪ ಹೇಳಿದನು || ೧೪೦ ||

ರಾಮನ ಮಡದೇರ ಕೊಂದುದುಂಟಾದರೆ
ಭೂಮಿಭಾರದ ದಂಡುಬಹುದು |
ತಾಮಸೆ ಬೇಡರುದಿಂಗಳು ರಾಣಿವಾಸವು ನಿ
ಸ್ಸೀಮ ಪ್ರಧಾನ ತಿರುಗಿದನು || ೧೪೧ ||

ನಿಲ್ಲಬೇಕಾರು ತಿಂಗಳು ರಾಣಿವಾಸವು
ಕೊಲ್ಲಬಾರದು ರಾಯನೆನಲು |
ಬಲ್ಲಿದ ರಾಮುಗ ಸ್ತಾಮಾತಗೈದರೆಂ
ಬಲ್ಲಿದ ಸಂಧಿ ಪೂರಾಯ್ತು || ೧೪೨ ||

ಇದು ಪರನಾರಿ ಸೋದರ ರಾಮನಾಥನ
ಪದಕೃತಿಯೊಳಗೊಂದು ಕಥೆಯ |

ವಿದಿತ ವಿಶ್ವಾಸದಿ ನೆಲಮಾಳಿಗೆಯೊಳು
ಮುದದಿಂಬಿಟ್ಟ ಸಂಧಿ ಮುಗಿಯೆ || ೧೪೩ ||

**ಅಂತು ಸಂಧಿ ೧೯ಕ್ಕಂ ಪದನು ೨೦೩೫ಕ್ಕಂ ಮಂಗಳ ಮಹಾಶ್ರೀ**

## ಸಂಧಿ ೨೦ - ನೇಮಿಖಾನನಿಂದ ಕುಮ್ಮಟದ ಮುತ್ತಿಗೆ

ಶ್ರೀ ಗಿರಿಜಾ[ಸ್ಯಾಂಬುಜ ದಿನ]ನಾಯಕ
ಭೋಗಿಭೂಷಣ ಭಾಳನೇತ್ರ |
ಭಾಗೀರಥಿಧರ ಭವರೋಗವೈದ್ಯನೆ
ನಾಗ[ಕುಂಡಲ] ಶರಣೆಂಬೆ || ೧ ||

ರಾಮನ ನೆನ ಕಂಡ್ಯಾ ಮನವೆ ಜಟ್ಟಂಗಿಯ
ರಾಮನ ನೆನೆ ಕಂಡ್ಯಾ ತನುವೆ |
ರಾಮಾರಾಮಾ ಎಂಬ ನಾಮವ ನೆನೆದರೆ
ಕಾಮಿತ ಫಲವೀವ ರಾಮ || ೨ ||

ದೊರೆಯು ಕಂಪಿಲರಾಯ ಕೊಲಿಸಿದ ಸುದ್ದಿಯು
ಹರಿಯಿತು ಭೂಲೋಕದೊಳಗೆ |
ಕುಮಾರರಾಮನ ಕೊಲಿಸಿದ ಸುದ್ದಿಯ
ಸೀಮೆಯ ರಾಯರು ಕೇಳಿ || ೩ ||

ನೆಟ್ಟನೆ ಕುಮಾರರಾಮನಳಿದ ಸುದ್ದಿ
ಕೊಟ್ಟದ ಬೇಡರು ಕೇಳಿ |
ಕಟ್ಟಿದೋಲೆಯು ವಸುಧೆಗೆ ದಿಕ್ಕುದಿಕ್ಕಿಗೆ
ಹುಟ್ಟತು ಸುದ್ದಿ ಡಿಳ್ಳಿಯಲಿ || ೪ ||

ರಾಮನಳಿದ ಸುದ್ದಿ ಆಗ ಸುರಿತಾಳ ಕೇಳಿ
ಕೋಮಲೆಯರ ಮಾತಿಗಾಗಿ |
ಈ ಮಹಿಯೊಳು ಹೊಡೆಸಿದನಂತೆ ಕಂಪಿಲ
ಪ್ರೇಮದಿ ಸುದ್ದಿ ಕೇಳಿದನು || ೫ ||

ಚೆನ್ನದ ಒರಗು ಮುಡೆಯ ನೆಮ್ಮಿ ಸುರಿತಾಳ
ತನ್ನ ಮಂತ್ರಿಯ ಕರೆಸಿದನು |
ಚೆನ್ನರಾಮನ ಕಂಪಿಲ ಕೊಲಿಸಿದ ಸುದ್ದಿ
ನಿನ್ನೆ ಹುಟ್ಟಿತು ಪುರದೊಳಗೆ || ೬ ||

ಹಮ್ಮಿನ ಮಾತನಾಡಿದನು ಸುರಿತಾಳನು
ನಿರ್ಮಿಸು ನೇಮಿ ಕಾಳಗವ || ೭ ||

ಯಾಕೆ ಈ ಮಾತ ನುಡಿಯಬಪ್ಪುದೆ ನೀನು
ಭೂಕಾಂತಗೆ [ಮರಣ]ಹುದೆ |
ಯಾಕೆಂದು ನೇಮಿ ಮುಖವ ತಿರುಹಿದನಂದು
ಲೋಕಕ್ಕೆ ಇದು ಸಟೆ ಮಾತು || ೮ ||

ಸಟೆಯೆಂದು ಮಾತ ಕೇಳುತ ಸುರಿತಾಳನು
ಘಟ್ಟಿಸಿ ನುಡಿದ ಮಂತ್ರಿಯನು |
ಪಟುತರವಾದ ಖಾನರ ಹೋಗಹೇಳಿದ
ದಿಟದಿ ಕುಮ್ಮಟದುರ್ಗಕಾಗಿ || ೯ ||

ಹಣವ ಗಳಿಸಿಕೊಂಡು ವಿನಯದಿ ಎನ್ನಯ
ಮನೆಯ ಒಡವೆಯ ಹಾಳುಮಾಡಿ || ೧೦ ||

ಕದನವೆಂದರೆ ಹೋಗಲಮ್ಮೆಯೊ ನಿನ್ನಯ
ಹದನನು ನಾವ್ ಬಲ್ಲವೆನುತ |
ಒದಗಿದ ಹುಯ್ಯಲೊಳಟ್ಟಿ ಹೊಯ್ಸಿಕೊಂಡು
ಬೆದರುಂಟು ನಿನಗೆಂದು ನೇಮಿಯನು || ೧೧ ||

ಹಲವು ಮಾತುಗಳಾಡಿ ಒಡವೆಯ ನೀ ತಿಂದು
ಬಲುಜೀವನ ಬುದ್ಧಿ ನಿನಗೆ |
ಕಲಹವೆಂದರೆ ಹೋಹಲಮ್ಮೆಯೊ ಬಿಡು ನಿನ್ನ
ದಳ ಹೇಡಿತನದ ಮಾತುಗಳ || ೧೨ ||

ಭೂಪತಿ ಭೂಪಾಲ ಕೋಪವ್ಯಾತಕ ದೇವ
ಕಾಪಾಲಿ ಕೃಪೆಯುಳ್ಳವನು |
ಭೂಪ ಕಂಪಿಲನ ಕುಮಾರರಾಮನಳಿದರೆ
ಆ ಪೃಥ್ವಿ ಪರಿವಾರನೆಲ್ಲ || ೧೩ ||

ಕರೆಸು ಚರರ ಕಳುಹಿಸು ಕುಮ್ಮಟಕತ್ತ
ಬೆರಸಿ ಸುದ್ದಿಯ ಪತಿಕರಿಸು |
ನೆರೆಸು ವಾರುವವನು ಮನ್ನೆಯರುಗಳನು
ಬರಿಸೊ ದೇಶಾಧಿಪತಿಗಳನು || ೧೪ ||

ಅಚ್ಚಾಳು ಕುದುರೆಯ ಪಯಣವ ಮಾಡಿಸೊ
ಒಳ್ಳೆಯ ಸುರುತಾಳನೆನಲು || ೧೫ ||

ಡಿಳ್ಳಿಯ ಅರಸು ಸುರಿತಾಳ ಕುಮ್ಮಟಕತ್ತ
ಒಳ್ಳೆಯ ಬೇಹಿನ ಚರರ |
ನಿಲ್ಲದೆ ಕಳುಹಲವರು ಬಂದು ಪಯಣವ
ಮೆಲ್ಲನಿಳಿದರು ಗಂಗಾ ತಡಿಯ || ೧೬ ||

ಬಿಟ್ಟಲ್ಲಿ ಬಿಡದೆ ಬಂದರು ಬೇಹಿನ ಚರರು
ತಟ್ಟನೆ ಕುಮ್ಮಟಕ್ಕಾಗಿ |
ಪಟ್ಟಣಗಳ ಹೊಕ್ಕು ಸುದ್ದಿ ವಾರ್ತೆಗಳನು
ಮುಟ್ಟಿ ಕೇಳಿದರು ಅಲ್ಲಲ್ಲಿ || ೧೭ ||

ಮನೆಮನೆ ಅಂಗಡಿ ಬೀದಿಬೀದಿಗಳಲ್ಲಿ
ಜನ ಬಹುಜನರು ಇದ್ದಲ್ಲಿ |
ತನುಜ ರಾಮುಗ ಸತ್ತನೆಂಬ ವಾರ್ತೆಗಳನು
ಮನಮುಟ್ಟಿ ಕೇಳಿದರಾಗ || ೧೮ ||

ಯಾತಕೆ ರಾಮಯ್ಯ ಸತ್ತನೆಂದೆನುತಲಿ
ಭೀತಿಗೊಳುತಲಿ ಕೇಳಿದರು |
ಆತು ಇಡಲು ಚೆಂಡು ಅರಮನೆಯೊಳು ಬೀಳೆ
ಭೀತಿಗೊಳ್ಳುತ ಕೇಳಹೋದ || ೧೯ ||

ನಿಂದು ರಾಮಯ್ಯನು ಚೆಂಡು ಕೇಳಲು
ಹೋದ ಕಂದರ್ಪನ ವಿರಹದಲಿ |
ಚಂದಿರವದನೆಗೆ ಒಳಗಾಗದೆ ತಾನು
ಬಂದನು ಹೊರಯಾಕೆ ಹೊರಟು || ೨೦ ||

ಚೆಂದದಿ ರಾಮ ಹೋಗಲು ಕಂಡು ರತ್ನಾಜಿ
ನಿಂದಳು ವಿರಹತಾಪದಲಿ |
ಬಂದ ಕಂಪಿಲನೊಳು ಇಲ್ಲದೊಂದನು ಹೇಳೆ
ತಂದೆಯು ಮಗನ ಕೊಲಿಸಿದನು || ೨೧ ||

ಕೇಳಿಯೆ ಸುದ್ದಿಯನಾಗ ಊರೊಳಗೆ ಅಲ್ಲಲ್ಲಿ
ಪಾಳ್ಯಪಾಳ್ಯಗಳನು ತಿರುಗಿ |
ಕುಮ್ಮಟವನು ಬಿಟ್ಟು ತೆರಳಿದರು ಬೇಗದಿ ಚಿಕ್ಕ
ಡಿಳ್ಳಿಗೆ ಬಂದರಾಗ || ೨೨ ||

ಅಲ್ಲಿಂದ ಮುಂದಕೆ ತೆರಳಿಬಂದರು ಜೀಯ
ಡಿಳ್ಳಿಯ ಶೃಂಗಾರವನಕೆ |

ಬಲ್ಲಿದ ಚರರೋಡಿ ಬಂದರು ಆ ಕ್ಷಣ
ವಲ್ಲಭ ಸುರಿತಾಳನೆಡೆಗೆ || ೧೩ ||

.........................................
..........ದಿಟವಹುದೆಣದು ನುಡಿದರು |
ರಾಯ ಸುರಿತಾಳ ಕರೆಸಿದ ನೇಮಿಯನಾಗ
ದಾಯಾದಿ ಬಂದಿತು ನಮಗೆಲ್ಲವು || ೧೪ ||

ಸ್ತ್ರೀಯಳ ಮಾತಿಗೆ ಕೋಪಿಸಿದ ಕಂಪಿಲ
ಬಯಲಾಯಿತು ಕುಮ್ಮಟವು || ೧೫ ||

ಇದು ನಿಶ್ಚಯವಹುದೆನುತ ಸುರಿತಾಳನು
ಹದನ ಹೇಳಿದ ಮಂತ್ರಿಯೊಡನೆ |
ಚೆದುರ ಕುಮ್ಮಟಕೆ ನಿನ್ನ ಕುದುರೆ ಮಂದಿಯು ಸಹ
ಸದಳ ಸಹಿತ ತೆರಳೆಂದ || ೧೬ ||

ಎಂದ ಮಾತನು ಕೇಳುತ ನೇಮಿಖಾನನು
ವಂದನೆಯನು ಮಾಡಿಕೊಂಡ |
ಬಂಧಿಸಿ ನಾಡ ಸೆರೆಯ ಪಿಡಿತಹೆನೆಂದು
ನಿಂದು ಪಾಚ್ಛಾವುಗಡ್ಡಬಿದ್ದ || ೧೭ ||

ಅಡ್ಡಬಿದ್ದ ನೇಮಿಯ ಕಂಡು ಸುರಿತಾಳನು
ದೊಡ್ಡ ತೇಜಿಯ ತರಿಸಿದನು || ೧೮ ||

ಮೂರು ತಿಂಗಳ ಮೇಲೆ ಅರ್ಧ ದಿವಸದೊಳು
ಧಾರುಣಿಪತಿ ಸುರಿತಾಳ |
ಘೋರನೆ ಕೂಚೆ ಮಾಡಿಸಿದ ಕುಮ್ಮಟಕೆಂದು
ವೀರ ನೇಮಿಯ ಕಳುಹಿದನು || ೧೯ ||

ಕಳುಹಲೊಡನೆ ಹದಿನೆಂಟು ಸಾವಿರ ಗಜ
ದಳಪತಿ ನೇಮಿಯ ಕಂಡ |
ಹೊಳೆವ ನ್ಯಾಜದ ಖಾನಖಾನರೆಲ್ಲರು ಎದ್ದು ನಡೆವುದು
ದಳ ಲಕ್ಷ ಮೊದಲಾಗಿ || ೨೦ ||

ಭೇರಿ ತಮ್ಮಟೆ ಗಿಡಿಬಿಡಿ ನಿಸಾಳ ಕೊಂಬು
ವೀರ ವಾದ್ಯದ ರಭಸದಲಿ |
ಭೂರಿ ಕಾಲಾಳು ಒಂಬತ್ತು ಲಕ್ಷವು ಸಹ
ಘೋರನೆ ಬೇಗ ತೆರಳಿದರು || ೨೧ ||

ಕರೆಕರೆ ಖಾಮಮಲುಕ ಗುಜ್ಜ ರಾಹುತರ
ಕರೆಕರೆ ಆರೆಯ ದೊರೆಯ |
ಕರೆಕರೆ ಗೌಳುಗುಜ್ಜರ ರಾಹುತರನ್ನು
ಬರೆದು ವಾಲೆಯ ಕಳುಹಿದನು || ೩೧ ||

ಲಾಳವದೇಶದ ಮರಾಳಖಾನರಿಗೆಲ್ಲ ಹೇಳಿ
ವಾಲೆಯ ಕಳುಹಿದನು ಬ |
ಹಳ ಪಂಥದ ಕುಮ್ಮಟದ ರಾಮುಗ ಸತ್ತ
ವೀಳ್ಯ ಬಂತಿತು ನಮಗೀಗ || ೩೩ ||

ಬರಹೇಳಿದೈವತ್ತುಆರು ದೇಶದರೆಲ್ಲ
ಬರಹೇಳೆ ಕನ್ನೋಜಿಯವರ |
ನೆರೆದಿತು ಸುರಿತಾಳನ ವಾಲಗಕಾಗ
ತೆರಳಿತು ಕುಮ್ಮಟಕಾಗಿ || ೩೪ ||

ಕರೆಸಿದ ಸಿಂಧುಮರಾಳದೇಶದವರ
ಕರೆಸಿದ ಮಗಧರಾಯರನು |
ಕರೆಸಿದ ಮಾಳವ ಮನ್ನೆಯರನು ಬೇಗ
ಕರೆಸಿ ವೀಳ್ಯವನಿತ್ತನಾಗ || ೩೫ ||

ದುರ್ಜಟಿಖಾನ ಬಬ್ಬಿರಖಾನ ಸೈದ್ರಲ್ಲಿ
ಜಿಜ್ಜಾಟಿ ಹರಟೆಯಖಾನ |
ಹೆಜ್ಜೆಹೆಜ್ಜೆಗೆ ಗೆಲ್ವ ಜಂಬಾರಖಾನನು
ಲುಬ್ಧಖಾನನು ಒದಗಿದರು || ೩೬ ||

ರಾರಾಜಿಖಾನನು ರಾಜೆಯಖಾನನು
ಮಾಮುದ್ದುಸಾಹೇಬಖಾನ || ೩೭ ||

ಎಂಬತ್ತುಸಾವಿರ ಕುದುರೆ ಕಟ್ಟಿಹನೊಬ್ಬ
ಡೊಂಬಿ ತುಂಬೂರನೆಂಬವನು |
ತುಂಬಿದ ಜೋಡು ಸಿಂಗಾಡಿಯ ತುರುಕ
ರು ಬಂದರು ಸುರಿತಾಳನೆಡೆಗೆ || ೩೮ ||

ಎಕಲಾಸಖಾನ ಎದ್ದೂಲಖಾನರು
ಮತ್ತೊಬ್ಬ ಮಖರಂಕಖಾನ |
ಸಕಲ ವೈರಿಗಳಿಗೆ ಶೂಲವೆಂದನಿಸುವ
ರುಕುಮಸಖಾನ ಸಹವಾಗಿ || ೩೯ ||

ಬಬಾಜಿಖಾನನುಮಬ್ದೂಲಖಾನನು
ಬಾಬಖಾನ ಮುಸಲಖಾನ ಸಾ |
ಹೇಬಖಾನನು ಸಕಲಲಿಖಾನನು
ಹೈದರಖಾನ ಮೊದಲಾಗಿ || ೪೦ ||

ನೆರೆದು ಸುರಿತಾಳರಾಯನೋಲಗದೊಳು
ಬರಹದೊಂಬತ್ತು ಲಕ್ಷ ವಾಜಿ |
ಸಾರಿಹೇಳಲು ಕೇಳುತ ಖಾನಖಾನರು
ಹೇರುಗಳ ಬಂಡಿಯ ತುಂಬಿ || ೪೧ ||

ಭೋರೆಂದು ತಿತ್ತಿಯ ಸವರಿಸಿಕೊಂಡಾಗ
ಸಾರಾಯಗಳನು ತುಂಬಿದರು |
ಸಾರಿಸಿದನು ನೇಮಿ ಪಾಳೆಯವೆಲ್ಲಕ್ಕೆ
ಭೇರಿಸನ್ನೆಯ ಮಾಡಿಸುತಲಿ || ೪೨ ||

ಕಹಳೆಗಳೊದರೆ ಪಾಳೆಯಕೆಲ್ಲ ಸಾರುತ
ನಾಳೆ ಪಯಣಗಳು ನಿಜವೆನುತ |
ವೀಳ್ಯಗಳನು ಕೊಟ್ಟು ಬೆಳಗಾಗೊ ಹೊತ್ತಿಗೆ
ಪಾಳೆವ ತೆರಳಬೇಕೆಂದ || ೪೩ ||

ಗಂಗ ಸಾಗರದ ಕೋಟೆಗೆ ಒಂದು ಸಾವಿರ
ಸಡಗನೇನ ಬಣ್ಣಿಸುವೆ || ೪೪ ||

ಆಯತವನು ಮಾಡಿ ಆಹಾರವೆಲ್ಲವ
ಜಾಜಿಕಾಯಿ ಜಾಪತ್ರೆಗಳ |
ಬೇಯಿಸಿ ರೊಟ್ಟಿ ತಿತ್ತಿಗಳನೆ ತುಂಬಿಸಿ
ಆಯತವಾಗಿ ನಿಂದಿಹರು || ೪೫ ||

ಗಕ್ಕನೆ ತುರುಕರ ದಂಡೆದ್ದು ನಡೆಯಿತು
ಚೆಕ್ಕಡಿಳ್ಳಿಯ ಪಟ್ಟಣ[ದಿ] |
ಉಕ್ಕಿತು ಕೆಂಧೂಳ ಸೂರ್ಯಮಂಡಲಕಾಗಿ
ದೊಕ್ಕನೆ ತಾಕಿ ಮುಸುಕಿತು || ೪೬ ||

ತೆಗೆದು ತೆರಳಿತು ಕುದುರೆಗಳ ಫೌಜುಗಳಲ್ಲಿ
ಒಗಮಿಗಿಲಾಗಿ ನಡೆದರು |
ಅಗಣಿತ ಹರುಷದಿ ಭಾಗೀರಥೀಯ ದಾಂಟಿ
ಸೊಗಸಿಂಸ ತೆರಳಿತು ದಂಡು || ೪೭ ||

ಹತ್ತುಸಾವಿರ ವಾಜಿ ಇತ್ತರದಲಿ ನಡೆಯೆ
ಮೊತ್ತದ ಕಾಲಾಳು ಸಹಿತ || ೪೮ ||

ಉರವಣಿಸುತ ದಂಡಿನ ಚೂಣಿ ನಡೆಯಿತು
ಮಿರುಜೆಯ ಪಟ್ಟಣಕಾಗಿ |
ಮಿರುಜೆಯ ಪಟ್ಟಣದಿಂದ ನೇಮಿಯ ದಂಡು
ಇರದೆ ಅರುಣಾವತಿಗಿಳಿದು || ೪೯ ||

ಎಂಟು ಪಯಣವನು ನಾಲ್ಕು ಪಯಣವ ಮಾಡಿ
ಒಂಟೆಯ ಹಿಂಡ ನಡೆಸಿದರು || ೫೦ ||

ಹತ್ತು ಪಯಣವನು ಐದು ಪಯಣ ಮಾಡಿ
ಒತ್ತಿ ಮುಂದಕೆ ನಡೆವಾಗ |
ಸುತ್ತಣ ಲೋಕದೊಳಗೆ ಇಹರು ಎಲ್ಲ
ಎತ್ತಣ ಮಾರಿ ಬಂತೆನುತ || ೫೧ ||

ವಿಪರೀತದ ದಂಡು ನಡೆಯಿತು ಮುಂದಕ್ಕೆ
ಅಪರಿಮಿಯದಿಂದ ತೆರಳಿತು |
ಕುಪಿತ ಮಂತ್ರಿಯ ಕರೆಸಿದ ನೇಮಿಖಾನನು
ಉಪಮಿಸೊ ಒಂದು ಶಕುನವ || ೫೨ ||

ಸಾಕು ಪಂಥವು ಮುಂದಕೆ ಇಲ್ಲಿಂದಲಿ
ಶಕುನವಿಲ್ಲದೆ ಹೋಗಬ್ಯಾಡ |
ಮಕರಂಕರೂಪ ಸುರಿತಾಳನ ಮಂತ್ರಿಯು
ಶಕುನವ ನೋಡ ಹೇಳಿದನು || ೫೩ ||

ನೂರೊಂದು ಶಾಸ್ತ್ರಿಗಳನು ಕರೆಸಿದನಾಗ
ಕಾರಣಿಕವನು ಪೇಳೆಂದ || ೫೪ ||

ಗಂಭೀರವುಳ್ಳಂಥ ಟಗರ ತರಿಸಿ ನೇಮಿ
ಸಂಭ್ರಮದಲಿ ತನ್ನ ಪೆಸರ |
ಹೆಂಬೇಡಿಯಾದ ಟಗರ ತರಸಿ ನೇಮಿ
ತುಂಬಿ ರಾಮನ ಹೆಸರಿಡಿಸಿ || ೫೫ ||

ತನ್ನಯ ಪೆಸರಿನ ಟಗರಿಗೆ ಬಂದಿತು
ಉನ್ನತ ಮುತ್ತಿನ ದಂಡೆ |
ಮನ್ನೆಯ ರಾಮನ ಪೆಸರಿನ ಟಗರಿಗೆ
ಬಣ್ಣದ ಹೂವಿನ ದಂಡೆ || ೫೬ ||

ಕಡುಗಲಿ ನೇಮಿಯ ಪೆಸರಿನ ಟಗರಿಗೆ
ಹಿಡಿಯೆ ಮುತ್ತಿನ ಸತ್ತಿಗೆಯು |
ಬಡವನು ಎಂದು ರಾಮಯ್ಯನ ಟಗರಿಗೆ
ಕೊಡೆಯ ಸತ್ತಿಗೆ ಪಿಡಿಸಿದನು || ೫೭ ||

ಬೊಬ್ಬಿಡುತಲಿ ಟಗರಿನ ಕಿವಿಯೊಳಗಾಗ
ಅಬ್ಬರಿಸುತ ಹೋಗಬಿಡಲು |
ನಿಬ್ಬರದಲಿ ಸನ್ನೆದೆಗದವು ಹಿಂದಕ್ಕೆ
ಹಬ್ಬಿಗೆಯಲ್ಲಿ ತಾಕಿದವು || ೫೮ ||

ನಾಲ್ಕು ಸನ್ನೆಗೆ ನೇಮಿಯ ಟಗರೋಡಿತು
ತಾಕಿತು ತಲೆಮುರಿವಂತೆ |
ನೂಕಿ ತಿವಿಯೆ ಗುಂಡಿಗೆಯನು ಒಡೆಹಾಯೆ
ಸಾಕೆಂದು ನೇನಿ ನಿಲ್ಲಿಸಿದ || ೫೯ ||

ಕೋಳಿಯ ಹುಂಜನ ತರಹೇಳಿ ನೇಮಿಯು
ಆಳ ಹರಿಯಬಿಡಲಾಗ |
ಊಳಿಗದವರು ತಂದಿರಿಸಲು ನಿಮಿಷಕೆ
ಕಾಳಗ ಮಾಡಹೇಳಿದನು || ೬೦ ||

ಬಲ್ಲೆಹ ಹುಂಜನ ತರಿಸಿ ನೇಮಿಯಖಾನ
ನಿಲ್ಲದೆ ಕವಳ ಹಾಕಿಸಿದ |
ಹೆಂಬೇಡಿ ಹುಂಜನ ತರಿಸಿ ನೇಮಿಯಖಾನ
ಅಲ್ಲಿ ರಾಮನ ಪೆಸರಿಡಿಸಿ || ೬೧ ||

ಹೊಸ ಸಾಣೆಲು ಹಿಡಿಸಿದ ಕತ್ತಿಯ ತನ್ನ
ಹೆಸರ ಹುಂಜಕೆ ಕಟ್ಟಿಸಿದನು |
ಮಸೆಯದ ಮೊಂಡಗತ್ತಿಯ ತಂದು ರಾಮನ
ಹೆಸರ ಹುಂಜಕೆ ಕಟ್ಟಿಸಿದನು || ೬೨ ||

ಎರಡು ಹುಂಜನ ಕಾಣದಟ್ಟಿಸಿ ಮುಖದೊಳು
ಉರವಣಿಸಿಯೆ ಹೋಗಬಿಡಲು |
ಹೊರಳಿ ತಪ್ಪಿಸಿಕೊಂಡು ರಾಮನಾಥನ ಹುಂಜ
ಕೊರಳ ಕಚ್ಚಿಯೆ ಒದೆವಾಗ || ೬೩ ||

ಒಂದುಬಾರಿಗೆ ನೇಮಿಯ ಹುಂಜನೊಳಪೊಕ್ಕು
ಸಂದು ಹರಿಯಲೊದೆವಾಗ |

ನಿಂದಿರ್ದ ಖಾನರು ನೋಡಿ ಬೆರಗಾದರು
ನೊಂದು ಮೂಗಿಗೆ ಬೆರಳಿಟ್ಟು || ೬೪ ||

ನಮ್ಮ ಹುಂಜನು ಟಗರೋಡಿತು ಜಯವಿಲ್ಲ
ನಿಮ್ಮ ಚಿತ್ತದಲಿ ಇದ್ದಂತೆ |
ಬ್ರಹ್ಮದೇವರ ಕೃಪೆ ರಾಮಗೆ ಉಂಟೆಂದು
ನಮ್ಮ ಶಾಸ್ತ್ರಕೆ ಅಳವಲ್ಲ || ೬೫ ||

ಹಿಂದಕ್ಕೆ ತಿರುಗಿಹೋದರೆ ಸುರಿತಾಳನು
ಸಂದು ಹರಿಯೆ ಹೊಯ್ಸುವನು |
ಮುಂದೇನು ಬಂದುದ ಕಾಬೆನೆನುತ ನೇಮಿ
ಬಂದನು ಮುಂದಕ್ಕೆ ತೆರಳಿ || ೬೬ ||

ತೆರಳಿತು ದಂಡು ಚತುರಂಗಬಲ ಸಹವಾಗಿ
ತೊರಗಲ್ಲು ಬಾದಾಮಿ ಬಳಿಗೆ |
ಹರಿದು ದಾಳಿಯ ಮಾಡಿ ನಾಡನೆಲ್ಲವ ಸುಟ್ಟು
ಭರದಿಂದ ದಂಡು ನಡೆಯಿತು || ೬೭ ||

ತೊರಗಲ್ಲು ಬಾದಾಮಿ ಮುಂದೆ ನೇಮಿಯ ದಂಡು
ಕರೆಸಿದ ಮನ್ನೆಯರನೆಲ್ಲ |
ಪರಿಪರಿ ವಸ್ತ್ರ ವೀಳ್ಯಗಳನೆಲ್ಲರಿಗಿತ್ತು
ಸರ್ವ ದಂಡೆಲ್ಲ ಬರುವಾಗ || ೬೮ ||

ಗಲ[ಗಲಿ] ವಿಜಯಪುರದ ನಡುವೆ ಬಂದು
ಚೆಲುವ ನೇಮಿಯು ದಂಡು ಬಿಡಿಸೆ |
ನೆಲ ಬೆಸಲಾದಂತೆ ತುರುಕ ನೇಮಿಯ ದಂಡು
ಇಳಿಯಿತು ಮೂಗಾವುದದಿ || ೬೯ ||

ನೇಮಿಯ ದಂಡಿನ ರಭಸಕ್ಕೆ ರಾಮನ
ಸೀಮೆಯೆಲ್ಲವು ಹೊಲಸೆದ್ದು || ೭೦ ||

ಕಾಡಮೊಲ್ಲೆಯ ಸೊಪ್ಪ ಓಡಿಲಿ [ಹು]ರಿತಿಂಬ
ಬೇಡನಾಯಕ ಮಕ್ಕಳೆಲ್ಲ |
ಕೂಡೆ ಕೈಯ್ಯಲಿ ನಾಯಿ ಬಡಿಕೋಲು ಸಹವಾಗಿ
ಬೇಡರು ಗೂಳೆಯ ನಡೆಯೆ || ೭೧ ||

ನೆತ್ತಿಮೇಲಣ ಮೊಟ್ಟೆಗಂಟು ಬೇಡರಿಗೆಲ್ಲ
ಹಸ್ತದ ಮೇಲಣ ಗಿಡುಗ |

ಇತ್ತರದಲಿ ಹಕ್ಕಿಯ ಗೂಡು ಬೇಡರು
ಹೊಕ್ಕು ಗೂಳೆಯದೊಳು ನಡೆಯೆ || ೭೨ ||

ಹೆಬ್ಬಲೆ ಕಿರುವಲೆ ಮೊಲವಲೆ ಕಾಲ್ವಲೆ
ಗುಬ್ಬಿಯ ಹಕ್ಕಿಯ ಬಲೆಯು |
ಸರ್ಬಮೃಗವ ಕೊಂದು ಬೇಂಟೆಯನಾಡುವ
ಕಬ್ಬಾರ ಹೂಳೆಯ ನಡೆಯೆ || ೭೩ ||

ಕುರಿಯ ಹಿಂಡುಗಳನ್ನು ತೆರಳಿಸಿಕೊಂಡಾಗ
ಮರಿಗಳಹೆಗಲಿಗೆ ಹೊತ್ತು |
ಮರುಗುವ ಹೆಂಡಿರ ಕೈಯ್ಯ ಪಿಡಿದುಕೊಂಡು ಗೊ
ಲ್ಲರ ಗೂಳೆಯ ನಡೆಯರ || ೭೪ ||

ದೆಸೆಯುಳ್ಳ ಗಟ್ವಣಿಗೆ ಕೊಡತಿ ಹೆಗಲ ಮೇಲೆ
ಅಗಸರ ಗೂಳೆವು ನಡೆಯೆ || ೭೫ ||

ಓದುವ ಹಲಗೆ ಕಡತ ಬಳಹವುಗಳು
ವೇದದ ಪೆಟ್ಟಿಗೆ ಮುಂದೆ |
ಓದಿಸುವಣ್ಣಗಳೊಡನೆ ಹೆಮ್ಮಕ್ಕಳು
ಸಾಧಿಸಿ ಗೂಳೆವು ನಡೆಯೆ || ೭೬ ||

ಪಟ್ಟಣಸ್ವಾಮಿಯ ಕೂಡಿಕೊಂಡಾಗಲು
ಸೆಟ್ಟರ ಗೂಳೆಯ ನಡೆಯೆ || ೭೭ ||

ಅಡಿಗಲ್ಲು ತಿದಿಮುಟ್ಟು ಪಿಡಿವ ಇಕ್ಕಳ ಕೈಯ್ಯ
ಬಿಡದೆ ಕೆತ್ತುವ ಉಳಿ ಬಾಚಿಗಳು |
ಎಡದೆಕೈಲಿ ಉಳಿ ಕೊಡತಿಯು ಸಹವಾಗಿ
ಬಡಗಿ ಕುಂಬಾರು ತಾ ನಡೆಯೆ || ೭೮ ||

ಅಚ್ಚ  ಕುಂಚಿಗೆಗಳು ನಿಚ್ಚಲುಂಕೆಯ ಮಾಳ್ಪ
ಹಚ್ಚಡ ಕುಂಚಿಗೆಗಳನು |
ರಚ್ಚುಹೊರುವ ಮಕ್ಕಳನೆತ್ತಿಕೊಳುತ
ಲಿ ಜಾಡರ ಗೂಳೆವು ನಡೆಯೆ || ೭೯ ||

ಮಿಕ್ಕ ನಾನಾ ಜಾತಿಗಳು ಎಲ್ಲರು ಕೂಡಿ
ಗಕ್ಕನೆ ಗೂಳೆವು ನಡೆಯೆ |
ಮುಪ್ಪಿನ ಮುದುಕರು ಚಿಪ್ಪಿಗರೆಲ್ಲರು
ಉಪ್ಪಾರು ಗೂಳೆವು ನಡೆಯೆ || ೮೦ ||

ಕುಂಬಾರು ಬಲು ರಂಬೆ ಡೊಂಬರ ಗೂಳೆವು
ಸಂಭ್ರಮದಿಂದಲಿ ನಡೆಯೆ ಬ್ರಾಹ್ಮ |
ರು ಬಾಲ ಉಪಾಧ್ಯರು ಜೋತಿಷ್ಯರು
ನಾಯಿಂದ್ರ ಗೂಳೆವು ನಡೆಯೆ || ೮೧ ||

ಎರಳೆ ಕುಪ್ಪಳೆಯ ಕುಪ್ಪಳಿಸುತ ಬೇಡರು
ಬರುವಂಥ ಕುದುರೆಯನಿಡುತ || ೮೨ ||

ಎಡದಲಿ ಬರುವಂಥ ಕುದುರೆಯನೆಚ್ಚರೆ
ಮಡಿದು ಬಿದ್ದವು ಧರೆಯೊಳಗೆ |
ಬಿಡದೆ ರಾಹುತರನು ಬಿಚ್ಚಿ ಹಾಕುತಲಾಗ
ಅಡಿಬಿದ್ದೋಡಿದವು ವಾಜಿಗಳು || ೮೩ ||

ಬಲದಲ್ಲಿ ಬಾಹಂತ ಕುದುರೆಯನೆಚ್ಚರೆ
ಬಳೆಯ ಹೇರನು ನೆಗ್ಗಿದಂತೆ |
ಮಲ್ಲರಾವುತರನು ಮಲಗಿಸಿದರು ಮುಂದೆ
ಕಲಿ ರಾಮನ [ಗ]ಡಿಯರು || ೮೪ ||

ಎಳೆವಾಸಿ ಬಾಹಂತ ಕುದುರೆಯನೆಚ್ಚರೆ
ನೊಂದವು ಬಿಲ್ಲುಗಾಯದಲಿ |
ಮುಂದರಿಯದೆ ಬಾಹ ಕುದುರೆಯನೆಚ್ಚರೆ
ಡೊಂಬ ಲಾಗವನು ಹೊಡೆದಂತೆ || ೮೫ ||

ತಂಡತಂಡದಿ ಬಾಹ ಕುದುರೆಯನೆಚ್ಚರೆ
ದಿಂಡುರುಳಿದವು ಭಾಮಿಯಲಿ |
ಕಂಡ ನೇಮಿಯು ತನ್ನವರ ಸಂತೈಸುತ ಮು
ಕ್ಕೊಂಡು ಹೊಕ್ಕನು ರಣದೊಳಗೆ || ೮೭ ||

ತೊರಗಲ್ಲು ಬಾದಾಮಿ ಮುಂದೆದ್ದು ಹುಯ್ಯಲು
ಉರುಬಿ ಕಾಳಗವ ಮಾಡುತಲಿ |
ತರಹರಿಸದೆ ಖಾನರ ಮಡುಹುತಲಿ
ಹರಿದು ಹೊಕ್ಕನು ಕುಮ್ಮಟವ || ೮೮ ||

ನಡೆದ ಗೂಳೆಯ ನೋಯಲೀಸದೆ ಬೇಡರು
ಹೇಡಿಗೊಳ್ಳದೆ ಖಾನರು |
ಹತ್ತುಸಾವಿರ ಆಳು ಕುದುರೆಯ ಕೊಂದರು
ಉತ್ತುಮ ಕರಿಗಳೈನೂರು || ೮೯ ||

ಏಳು ತಿಂಗಳಿಗೆ ಬಂದಿತು ತುರುಕರ ದಂಡು
ದಾಳಿಮಾಡಿಯೆ ನಡೆಸುತಲಿ |
ಕೋಳಾಹಳವ ಮಾಡುತ ಬಂದು ಹೊಕ್ಕರು
ಧೂಳುಗೋಟೆಯ ಕೊಂಬೆವೆನುತ || ೯೦ ||

ಬಿಡದೆ ಬೆನ್ನಟ್ಟಿ ಕೊಲ್ಲುವ ರಾಮ ಹೋದನು
ಹುಡೆಯಗಳನು ಕಡೆಹೆನುತ |
ನಾಡೊಳು ನಗೆಗೇಡಮಾಡಿ ಕೊಲ್ಲುವೆನೆಂದು
ಆಡಿದ ನೇಮಿ ಕೋಪದಲಿ || ೯೧ ||

ಹರುಷವೇರಿಯೆ ನೇಮಿಯಖಾನ ಬೇಗದಿ
ಕೆರೆಸಿ ಭಟ್ಟರ ಕಳುಹಿದನು |
ಸರಸವು ಬೇಡ ನೇಮಿಯ ಕೂಡೆ ಕಂಪಿಲ
ಇರಿಸದೆ ಕೊಡು ಬಾದುರನ || ೯೨ ||

ಬಿಟ್ಟ ಸೂಟಿಯಲೇರಿದವೈದು ಕುದುರೆಯು
ಬಿಟ್ಟರು ಕೈವಾರಿಸುತಲಿ |
ಅಟ್ಟಳೆಗಳನೇರಿ ಕೋಟೆಯ ಪಾರುತ
ಇಟ್ಟರು ಕಾಗದಗಳನು || ೯೩ ||

ಬೆಟ್ಟವ ನಂಬಿ ಕೆಡಬೇಡ ಬಾದೂರನ
ಕೊಟ್ಟು ಸುಖ ಬಾಳೋದು ಲೇಸು |
ಹುಟ್ಟುಗೆಡಿಸಿ ಕೊಲ್ಲುವೆ ಕೊಡದಿರ್ದಡೆ
ಬೆಟ್ಟದ ಒಡೆಯ ಕಂಪಿಲನೆ || ೯೪ ||

ಇಷ್ಟು ದಿನದ ಹಾಗೆ ನೋಡಬೇಡವೊ ನೀನು
ಕೊಟ್ಟದ ರಾಮುಗನಿಲ್ಲ |
ನೆಟ್ಟನೆ ಬಾದೂರನ ಕೊಟ್ಟು ಕಪ್ಪವ ನೀನು
ನೆಟ್ಟನೆ ಕಳುಹೊ ನೇಮಿಯಗೆ || ೯೫ ||

ಮೊರೆಹೊಕ್ಕು ಖಾನನ ಕೊಡನೆಂಬ ಬಿರುದನು
ಒರಲುತಿರಲು ಕಹಳೆ ದುರ್ಗದೊಳು |
ಬರಲಿ ಅಲ್ಲಿಂದ ಪ್ರಾಣವನೊಲ್ಲದಿರ್ದರೆ
ಇರಿವೆನು ಹೆದ್ದೊರೆ ತನಕ || ೯೬ ||

ವಿಷದ ಹುಟ್ಟಿಗೆ ಮುತ್ತಿದ ನೊಣ ಬಾಳ್ವುದೆ
ಅಸವೇನೊ [ನೀನು] ಎಮ್ಮೊಡನೆ |

ಅಸುರ ನೇಮಿಯ ಕೂಡೆ ಕಷ್ಟಬೇಡವೊ ಎಂದು
ಬೆಸಸಿ ಭಟರ ಕಳುಹಿದನು || ೯೭

ಮಂಜು ಮುಸುಕಿದರೆ ಅಂಜುವದೆ ಬೆಟ್ಟವು
ರಣಜಿಸುವುದು ಲೇಸಾಗಿ |
ಕುಂಜರದಾನೆಗೆ ಜಂಬುಕ ತಾ ಬಲ್ಲುದೆ
ಅಂಜುವುದೇಕೆ ಬರಹೇಳೊ || ೯೮ ||

ಬಂದ ಭಟರಿಗೆ ಉಡುಗೊರೆ ಕೊಟ್ಟು ಕಂಪಿಲ
ಚೆಂದಚೆಂದದ ಮನದಣಿಸಿ |
ಹಿಂದಿಟ್ಟುಕೊಂಡ ಖಾನನ ಕೂಡೆ ಹೋಗೆಂದು
ಬಂದ ಭಟರ ಕಳುಹಿದನು || ೯೯ ||

ನಿಬ್ಬರದಲ್ಲಿ ತಿರುಗಿದವೈದು ಕುದುರೆಯು
ಅಬ್ಬರ ಸುದ್ದಿಯ ಕೊಂಡು |
ಬಗ್ಗನೆ ಬಂದು ಹೇಳಿದರು ಒಡೆಯನ ಕೂಡೆ
ದಿಗ್ಗನೆ ಹೊರಟ ಕಂಪಿಲನು || ೧೦೦ ||

ತಲ್ಲಣಿಸುತ ತಳ ಕೆಳಗಾಗಿ ಪಟ್ಟಣ
ನಿಲ್ಲಲಾರದೆ ದ್ರವಗುಂದಿ |
ಅಲ್ಲಿಗಲ್ಲಿಗೆ ಮಂದಿ ನೆರೆದು ಗುಜುಗುಟ್ಟುತ
ಹಲ್ಗಿರಿದು ಬಾಯ್ಬಿಡುತಿಹರು || ೧೦೧ ||

ಬಂದ ದಂಡನು ಕಂಡು ಕಂಪಿಲರಾಯನು
ಕಂದನ ನೆನೆದು ಚಿಂತಿಸಿದ |
ಬಂದ ದುರಿತವನು ಕಾಯ್ವರಾರಿಲ್ಲವೆಂದು
ನೊಂದು ಕಂಪಿಲ ಮನದೊಳಗೆ || ೧೦೨ ||

ನೊಂದ ನೋವನು ಸಂತೈಸಿ ಆ ಕ್ಷಣದೊಳು
ಬಂದು ಕುಳಿತ ಚಾವಡಿಯೊಳಗೆ |
ಸಂದೇಹದಿಂದ ಕರೆಸಿದ ಕಂಪಿಲರಾಯ
ಚೆಂದದಿ ಮಂತ್ರಿ ಬೈಚಪನ || ೧೦೩ ||

ಚಾವಡಿಗೈದು ಕಂಪಿಲಭೂಪ ಮಂತ್ರಿಯ
ಕೋವಿದರನು ಕರೆಸಿದನು |
ಕೆಟ್ಟೆನು ನಾನು ಬಾಯಿಬಿಟ್ಟರೆ ಬರುವುದೆ
ಪಟ್ಟಣವನು ಶೃಂಗರಿಸೊ || ೧೦೪ ||

ಹೂಡೆಯು ಹುಲಿಮುಖಗಳ ನೋಡಿ ಕಂಪಿಲ
ರೂಢೀಶ ಕೊತ್ತಳಕೆಲ್ಲ |
ಹೂಡಿಸೊ ಪೆಟಲು ಬಾಣಗಳಲ್ಲಿಗಲ್ಲಿಗೆ
ನೋಡಬೇಕೆಲೊ ಅಂಜಬೇಡ || ೧೦೫

ರಕ್ಕಸ ರಣಗಲಿಯೆಂಬ ಕೊತ್ತಳಕಾಗ
ಇಕ್ಕಿಸೊ ರಣಬಲಿಗಳನು |
ದಿಕ್ಕನೆ ಹೆಬ್ಬಾಗಿಲ ಚೋರಗಂಡಿಗೆ
ಇಕ್ಕಿಸೊ ರಣಭೂತ ದಣಿಯೆ || ೧೦೬ ||

ಭಾರ್ಗವ ರಾಮನ ಕೊಲಿಸಿದೊ ಕಂಪಿಲ
ದುರ್ಗಕ್ಕೆ ಮುತ್ತಿಗೆಯ ತಂದ್ಯೊ |
ದುರ್ಗಾಧಿಪತಿ ಕಂಪಿಲ ನಿನ್ನ ಅರಸಿಯ
ಅಗ್ಗಳೆ ರತ್ನಿಯ ಕರಸೊ || ೧೦೭ ||

ಕೂಗುಮಾಡಿ ರಾಮನ ಕೊಲ್ಲ ಹೇಳಿಂದು
ಈಗ ಚಿಂತಿಸಿದರೇನಹುದು |
ನೀಗಿದೆ ಮಗನ ಕರೆಸು ರತ್ನಾಜಿಯ
ಬೇಗ ಮುತ್ತಿಗೆಯ ತೆಗೆಸೆಂದು || ೧೦೮ ||

ಒಂದೊಂದನಂದು ಭಂಗಿಸುವರೆ ಬೈಚಪ್ಪ
ತಂದೆಯ ಕಾಲದ ಹಳಬ |
ಬಂದಿತು ದುರ್ಗಕ್ಕೆ ಮುತ್ತಿಗೆ ಎಲೆ ಮಂತ್ರಿ
ಚಂದವೇನಿದಕೆ ಹೇಳೆಂದ || ೧೦೯ ||

ಧುರಧೀರ ವೀರಕಂಪಿಲ ನಿನ್ನ ಸೇನೆಯ
ಕರೆಸು ಕಗ್ಗೊಲೆಗೆಂದ ಮಂತ್ರಿ |
ಬೆರೆಸಿ ಕಾದಿಸೊ ನಿನ್ನ ಕಿರಿಯ ಹೆಂಡತಿಯನು
ಕರೆಸಿ ನೇಮಿಯ ದಂಡ ತೆಗೆಸೊ || ೧೧೦ ||

ಎಂದ ಮಾತನು ಕೇಳಿ ಕಂಪಿಲರಾಯನು
ನೊಂದನು ತನ್ನ ಮನದೊಳಗೆ ಕೊ |
ಲ್ಲೆಂದ ಮಾತಿಗೆ ಕೊಲ್ಲುವರೆ ಬೈಚಪ್ಪ
ನಿಲ್ಲಬಾರದೆ ಅರಗಳಿಗೆ || ೧೧೧ ||

ಅರಸಗೆ ಆರು ಬಾಯೆನುತಲಿ ಬೈಚಪ್ಪ
ಬೆರೆಸಿ ಹೇಳಿದನು ಕಂಪಿಲಗೆ |

ಸಲೆ ವೀಳ್ಯವನು ಕೊಟ್ಟು ಕೊಲ್ಲೆಂದು ಕಳುಹಿದೆ
ಒಲವಿಂದ ಹೇಳಿದೆಯಾಗ || ೧೧೨ ||

ಕರೆಸಿದ ಕಂಪಿಲ ತನ್ನ ಎಕ್ಕಟಿಗರ
ತರಿಸಿದ ಗಂಧ ವೀಳ್ಯವನು |
ಹರುಷದಿ ವೀಳ್ಯವ ಎಲ್ಲರು ಪಿಡಿದರು
ತೆರಹುಗೊಡದೆ ತಮತಮಗೆ || ೧೧೩ ||

ಬಂದು ವೀಳ್ಯವ ಎಲ್ಲರು ಪಿಡಿದರು ಮನ್ನೆಯರೆಲ್ಲ
ನಿಂದರು ವಾಲಗದೊಳಗೆ || ೧೧೪ ||

ಕರೆಸಿದ ಬಾದೂರಖಾನನ ಕಂಪಿಲ
ಹರುಷದಿ ವೀಳ್ಯವಿತ್ತವರ್ಗೆ |
ನೆರಹಿದ ಕಗ್ಗೊಲೆಗೆಂದು ಕಂಪಿಲರಾಯ
ಕರೆಸಿದ ತನ್ನ ಮನ್ನೆಯರ || ೧೧೫ ||

ಇಂದು ಓಡಿಸುವೆವು ತುರುಕರ ದಂಡನು
ಎಂದು ಬುದ್ಧಿಯನೆಣಿಸಿದರು |
ಇಂದಿನಿರುಳೆ ಕಗ್ಗೊಲೆ ಬೀಳಬೇಕೆಂದು
ಮಂದಿಯ ಕರೆದು ಹೇಳಿದರು || ೧೧೬ ||

ಹೊಳೆವ ಖಂಡವ ಪಿಡಿದು ಬಾದೂರಖಾನನು
ಘಳಿಲನೆ ವೀಳ್ಯವ ಪಿಡಿದ |
ವೀಳ್ಯವ ಪಿಡಿದು ಬಾದೂರಖಾನ ತನ್ನೊಳು
ಏಳ್ನೂರು ಕುದುರೆ ಮಂದಿಯನು || ೧೧೭ ||

ಪಾಳೆಯದೊಳು ಪಿಡಿತಹೆನೆಂದು ಬಿರುದಿನ
ಕಾಳೆಯ ಹಿಡಿಸಿ ನಡೆದನು |
ಪಡುವಣಾದ್ರಿಯೊಳು ಇಳಿದನು ದಿವಕರ
ಉಡುಪತಿ ಉದಯದೋರಿದನು || ೧೧೮ ||

ಇಳಿದರು ಚೋರಗಂಡಿಯೊಳೆಂಟು ಸಾವಿರ
ಘಳಿಲನೆ ಬೇಡನಾಯಕರು |
ಇಳಿದಿಹ ನೇಮಿಯ ದಂಡ ಕಡಿವೆನೆಂದು
ಕಲಿಭಟರುಗಳೊದಗಿದರು || ೧೧೯ ||

ಚೋರಗಂಡಿಯೊಳಿದ್ದರು ಹೊಳಕೆ ಬಂಟರು
ಕಾಳಗತ್ತಲೆ ನಡುವಿರುಳೆ |

ವ್ಯಾಳ್ಯವಾಯಿತು ನಾವು ಕಡಿಯಬೇಕೆನುತಲಿ
ಪಾಳ್ಯಯವನು ಹೊಕ್ಕರಾಗ || ೧೨೦ ||

ಸೇರಿದರಾಗಲೆ ತುರುಕರ ಪಾಳೆವ
ವೀರರು ಕೈಯ್ಯ ಮಾಡಿದರು |
ವೀರಗಳೈವರು ಒದಗುತ ಪಾಳೆಯದೊಳು
ಸೂರೆಮಾಡಿದರರಿಬಲವ || ೧೨೧ ||

ಹಿಡಿದರು ಸಾವಿರ ಕುದುರೆ ಕಾಲಾಳನು
ಗುಡಿಯ ಬಿಟ್ಟೋಡಿ ಕಂಗೆಟ್ಟು |
ನಡೆದರು ಆನೆಯ ಕುದುರೆಯ ಕಾಣದೆ
ಕಡಿದರು [ತಮ್ಮ] ತಮ್ಮೊಳಗೆ || ೧೨೨ ||

ಕಗ್ಗೊಲೆಯನು ಬಿದ್ದು ಕಡಿದರು ತುರುಕರ
ವೆಗ್ಗಳ ವೀರ ಪರಿವಾರ |
ನುಗ್ಗೇಳ ಹೊಯ್ದು ಭೂತಗಳು ಮರಳೆ
ಸುಗ್ಗಿಯಾಯಿತು ರಣದೊಳಗೆ || ೧೨೩ ||

ಕತ್ತಲೆಯೊಳು ನೀನು ತಾನೆಂದರಿಯದೆ
ಮೊತ್ತವಾಯಿತು ಪರಿವಾರ |
ಅತ್ತಲಾ ಪರಿಯಾಯಿತು ನೇಮಿಯ ದಂಡು
ಇತ್ತ ಕಂಪಿಲನ ಮನ್ನೆಯರು || ೧೨೪ ||

ಒತ್ತಿ ಪಾಳೆದ ಮೇಲೆ ಬಿದ್ದು ಕಡಿಯೆ ರಣ
ಗತ್ತಲಾಯಿತು ಖಾನರಿಗೆ || ೧೨೫ ||

ಏಳಲೀಸದೆ ಮುಂದಲೆಗಳ ಪಿಡಿದುಕೊಂಡ
ಬೀಳಲಿರಿದು ಕೆಡಹುತಲಿ |
ತೋಳು ತೊಡೆಯ ಮೆಟ್ಟಿ ಕೊರಳನರಿದು ಬಲು
ಕೋಳಾಹಳವ ಮಾಡಿದರು || ೧೨೬ ||

ಕತ್ತಲೆಯೊಳು ಮುಂದುಗಾಣದೆ ಮಲಗಿರೆ
ಎತ್ತಿ ಶಿರಗಳನು ಚೆಂಡಾಡಿ |
ಹುತ್ತವನೇರಿ ಹುಲ್ಲನೆ ಕಚ್ಚಿ ಕಂಗೆಟ್ಟು
ಬತ್ತಲೆ ಹರಿದೋಡಿದರು || ೧೨೭ ||

ಧಾರುಣಿಪತಿಗಳೊಂದಾಗಿ ಮಾತಾಡಿ
ತಿರುಗು ಹೊಕ್ಕರು ತಮ್ಮ ಪುರವ || ೧೨೮ |

ಪಿಡಿದು ಸಾವಿರ ವಾಜಿ ಕರಿಘಟೆ ನೂರಾರು
ಪಿಡಿದರು ಕೈಸೆರೆಗಳನು |
ಪಡೆ ಸಹಿತಲಿ ಬಂದು ಹೊಕ್ಕರು ಕಂಪಿಲನವರು
ತಡೆಯದೆ ತಮ್ಮ ಪಟ್ಟಣವ || ೧೨೯ ||

ಗಿಡಿಬಿಡಿ ಕೊಳಲು ತಪ್ಪಟೆ ಕೊಂಬು ನಿಸ್ಸಾಳ
ಬಿಡದೊದರುವ ಚಿನ್ನಗಾಳೆ |
ಗಡಣದಿಂದಲಿ ಬಂದು ಕಂಪಿಲಭೂಪಗೆ
ಸಡಗರದಲಿ ಕೈಮುಗಿದು || ೧೩೦ ||

ಪಿಡಿದಾಳು ಕುದುರೆ  ಕೈಸೆರೆಯ ಕಾಲಾಳನು
ತಡೆಯದೆ ತಂದು ಒಪ್ಪಿಸಲು |
ಪೊಡವಿಪ ಕಂಪಿಲನ ಪರಿವಾರಕೆ ಕೊಟ್ಟು
ಹಿಡಿಹೊನ್ನು ಜಲ್ಲಿ ಪಟ್ಟೆಯವ || ೧೩೧ ||

ಕಗ್ಗೊಲೆಯಲ್ಲಿ ಸಿಕ್ಕಿತು ನೂರಾನೆಯು
ಒಗ್ಗಲಿ ಸಾವಿರ ಕುದುರೆ |
ಅಗ್ಗಳೆ ಬಾದೂರಖಾನ ತಂದೊಪ್ಪಿಸಲು
ದುರ್ಗಾಧಿಪತಿ ಕಂಪಿಲಗೆ || ೧೩೨ ||

ಧರೆಯ ಮಧ್ಯದಲಾಗ ಹಿರಿದು ಪಾಳೆಯಗಳು
ಪುರದ ನಾಲ್ಕು ಬಾಗಿಲಲ್ಲಿ || ೧೩೩ ||

ಲಕ್ಷ ಸಂಖ್ಯೆಯ ಮಂದಿ ಎತ್ತಿ ದುಮ್ಮಾನವ
ಲಕ್ಷದ ವರೆ[ಗೆ] ಗುಡಿಹೊಯ್ದು |
[ದಿಕ್ಕು] ದಿಕ್ಕಿಗೆ ಪಸರಿಸಿ ಪಾಳೆಯ ಮಾಡಿಬಿಡೆ
ರಕ್ಕಸ ರಾಯ[ನ] ದಂಡ || ೧೩೪ ||

ಮುತ್ತಿನ ಗುಡಿಯು ಪಚ್ಚೆದ ಗುಡಿ ಹೊಯ್ದವು
ಸುತ್ತ ಕೆಂಪಿನ ಗುಡಿ ಹೊಯ್ದು |
ಮತ್ತೆ ರತ್ನದ ಕೆಲಸ ಕಳಸಗ[ಳು] ಮೆರೆದವು
ಅರ್ತಿಲಿ ನೇಮಿಖಾನನಿಗೆ || ೧೩೫ ||

ಚೊಕ್ಕ ಚಿನ್ನದ ಕಳಸಗಳಿಕ್ಕಿ ಮೆರೆದವು
ದಿಕ್ಕುದಿಕ್ಕಿಗೆ ಕಣ್ಣುಗೆಡವು || ೧೩೬ ||

ಮಂದಿ ಕುದುರೆ ಕಂಡು ನೊಂದ ಕಂಪಿಲರಾಯ
ಚಿಂತಿಸಿದನು ಮನದೊಳಗೆ |

ಕಂದನಳಿದ ಕಾರಣದಿಂದ ಬಯಲಾಯ್ತು
ತಂದುಕೊಂಡೆನು ಮಾರಿಯನು || ೧೩೭ ||

ಮಗ ಸತ್ತ ಸುದ್ದಿಯು ಮಿಗಿಲಾಯಿತು ಎಂದು
ಹೊಗಲಾಯಿತು ನೇಮಿ ಬಂದು |
ನಗೆಗೇಡಾಯಿತು ಪರರಾಜರಿಗೆ ನಾವು
ದುಗುಡವಾದನು ಕಂಪಿಲನು || ೧೩೮ ||

ತುತ್ತಾದೆವು ನಾವು ತುರುಕರ ಬಾಯಿಗೆ
ಮಿತ್ತಾದಳು ನಮ್ಮ ರತ್ನಿ |
ಬಿಗಿಯಿಂದಸುತ್ತಲು ಹತ್ತಿ ಮುತ್ತಿಗೆಮಾಡಿ
ತೆಗೆವು ಬಿಟ್ಟಂತೆ ಕುಮ್ಮಟವು || ೧೩೯ ||

ದಾಳಿಯು ಮುತ್ತಿಗೆಯಾದುದ ಕಂಡು ಬೈಚಪ್ಪ
ಹೇಳಿದ ಕಂಪಿಲನೊಡನೆ |
ಹಾಳಾಯಿತು ಹೊಸಮಲೆಯು ಕುಮ್ಮಟವೆಂದು
ಹೇಳಿದ ನಿಮ್ಮೊಡನಂದೇ || ೧೪೦ ||

ಕೇಳದೆ ಹೋದೆ ಮಂತ್ರೀಶ ನಿನ್ನಯ ಮಾತ
ಹೇಳಿದೆ ನಮ್ಮೊಡನಂದೇ |
ಕಾಳಗವನು ಮಾಡಹೇಳೊ ನೀ ಬೈಚಪ್ಪ
ದಾಳಿ ಬಂದಿದೆ ದುರ್ಗಕೆಂದ || ೧೪೧ ||

ಕೃತಯುಗದಲ್ಲಿ ರೇಣುಕೆ ಪುಟ್ಟಿ ಕಾರ್ತಿಕರ
ಹತಮಾಡಿದಳು ನಿಮಿಷದಲಿ |
ಸತಿಯಾಗಿ ಪುಟ್ಟಿ ದ್ರೌಪತಿ ಪಾಂಡವರನು
ಅತಿಶಯದಿಂ ತಿರಿಗಿಸಿದಳು || ೧೪೨ ||

ಚೆನ್ನರಾಮನ ನೋಡಿ ಕನ್ನೆ ತಾ ಮನಸೋತು
ತನ್ನ ಊಳಿಗರನು ಕಳುಹಿ |
ಅನ್ಯಾಯವನು ಮಾಡಿ ಕೇಳದಿರ್ದರೆಯು
ನಿನ್ನ ಮಗನ ಕೊಲ್ಲಿಸಿದಳು || ೧೪೩ ||

ಪಾಪಿಯ ನುಡಿಗೇಳಿ ಭೂಪನ ಕೊಲ್ಲಿಸಿ
ಪಾಪನಿಂದ್ಯಕೆ ಒಳಗಾದೆ |
ಆಪತ್ತು ಬಂದಿದೆ ಕಾಯ್ವರೊಬ್ಬರ ಕಾಣೆ
ಭೂಪ ಪ್ರಾಣಕೆ ಬಂದಿತೀಗ || ೧೪೪ ||

ಕರೆಸು ನಿನ್ನರಸಿಯ ತರಿಸು ವಾಹನವೀಗ
ತೆರೆಸು ದುರ್ಗದ ಬಾಗಿಲನು || ೧೪೫ ||

ಜೋಡು ತೊಡಿಸು ಕುದುರೆಯ ಕೊಟ್ಟು ಭಲ್ಲೆವ
ನೀಡಯ್ಯ ರತ್ನಿಯ ಕೈಗೆ |
ರೂಢೀಶ ನೇಮಿಯ ಮುರಿಯಲಿರಿಸು ಎಂದು
ಆಡಿದ ಮಂತ್ರಿ ಬೈಚಪ್ಪ || ೧೪೬ ||

ಯಾಕೆ ಬೈಚಪ್ಪ ನೀ ಕಾಕು ಮಾಡಲಿಬೇಡ
ಸಾಕು ಮೂಗಿನ ಮೇಲೆ ಸುಣ್ಣ |
ಪೋಕನಾದೆನು ನಿನ್ನ ಮಾತು ಕೇಳದೆ ನಾನು
ಲೋಕಾಧಿಪತಿಯ ಕೊಲಿಸಿದೆ || ೧೪೭ ||

ಅರಗಿನ ಮೇಲೆ ಕೆಂಡಮಳೆ ಸುರಿದಂತೆ
ಕರ ನೊಂದು ನುಡಿದ ಕಂಪಿಲನು || ೧೪೮ ||

ಹಿತವೆ ಹೆಂಡತಿಯೆಂದು ಸತಿಗೆ ನೀನೊಲಿದರೆ
ಕಥೆಯ ಮಾಡಿದಳು ಕುಹಕದಲಿ |
ಸುತನು ರಾಮಯ್ಯನ ಹತವ ಮಾಡಿದರಿಂದ
ಕಥೆಯಾದೆ ಮೂರು ಲೋಕದಲಿ || ೧೪೯ ||

ರಾಮನಿಲ್ಲದೆ ನೇಮಿ ಭೂಮಿಯ ಹೊಕ್ಕನು
ಭೂಮಿಯೊಳಪ್ರತಿವೀರ |
ತಾಮಸ ಮಾಳ್ಪನೆ ದಳವ ಕಂಡರೆ ಅಂಥ
ರಾಮನೆಂದಿಗೆ ಪುಟ್ಟುವನು || ೧೫೦ ||

ಸತ್ತವರೆದ್ದು ಬಹರೇನು ಕಂಪಿಲ
ಮೃತ್ಯು ನುಂಗಿದ ತುತ್ತು ಬಹುದೆ |
ಹೆತ್ತಂಥ ಮಗನ ಕೊಲ್ಲಿಸಿದ ಅಪಕೀರ್ತಿ
ಆದೀತು ಚಂದ್ರನುಳ್ಳನಕ || ೧೫೧ ||

ಸಕ್ಕರೆ ಇದ್ದಂತೆ ಮುಕ್ಕಿದೆ ಮಣ್ಣನು
ರಕ್ಕಸಿಯಳ ಮಾತಕೇಳಿ |
ದುಃಖಿಸಿ ಅತ್ತರೆ ರಾಮನು ಬರುವನೆ
ಎತ್ತಳ ಮಾತು ಎಂದೆನುತ || ೧೫೧ ||

ಅರಸು ರಕ್ಕಸನಾದರೆ ಮಂತ್ರಿ ಹೆಬ್ಬುಲಿ
ಬೆರಸಿ ಮುರಿದು ತಿಂಬಂತೆ

ಅರಸಿ ಒಂದು ಮಾತನಾಡಲು ಮುನ್ನಂದು
ತರಿಸಿದೆ ಕೊರಳನಾಕ್ಷಣದಿ || ೧೫೩ ||

ನಾನೊಂದು ಮಾತನಾಡಿದರೆ ಕಂಪಿಲರಾಯ
ನೀನವಳಿಗೆ ಒಳಗಾದೆ |
ನಾನಾ ಅಪಕೀರ್ತಿಯ ತಾಳಲಾರದೆ ರಾಯ
ಜ್ಞಾನಿ ರಾಮಯ್ಯನ ಕೊಲ್ಲಿಸಿದೆ || ೧೫೪ ||

ಮಗನಹ ಬಲ ಬಿಡು ಬಗೆದು ಬಂಗಾರವ
ಮಿಗೆ ವೆಚ್ಚಮಾಡು ಉಡುಗೊರೆಯ |
ಬಗೆಬಗೆಯಿಂದ ರಾಹುತರ ಪರಿವಾರಕ್ಕೆ
ಸೊಗಸಿಂದ ಹಿಡಿಹೊನ್ನ ಕೊಡಿಸೊ || ೧೫೫ ||

ಅರ್ಥದಾಸೆಯ ಬಿಟ್ಟು ಕೊಟ್ಟೆಯಾದರೆ ನಿನ್ನ
ಪುತ್ರರಿಂದಲಿ ಬಂಟರುಂಟು |
ಚಿತ್ತೈಸು ಕಾದಿಸುವೆನು ರಾಯನೆನುತಲಿ
ಹತ್ತು [ಕಣ್ಣಿನೆ] ದಣಿವಂತೆ || ೧೫೬ ||

ಬೇಡ ಬೈಚಪ್ಪ ನೀ ಕಾಡದಿರೆನ್ನನು
ಆಡೆದ್ದು ಹುಲಿಯ ಮುರಿವುದೆ |
ರೂಢಿಗೊಡೆಯ ಸುರಿತಾಳನ ದಂಡಿಗೆ
ನಾಡವ[ರೆದು]ರು ಆಗುವರೆ || ೧೫೭ ||

ವಾರುಧಿ ಮೇರೆದಪ್ಪಿದ ಹಾಗೆ ದಂಡಿದೆ
ಬಾರೊ ಬೈಚಪ್ಪ ನೀ ಹೇಳೊ || ೧೫೮ ||

ಬೇಗ ಬಂಟರು ಬಂದು ಕಾಳಗಕೇಳೆಂದು
ಆಗ ಕಂಪಿಲನ ಕರೆದರು |
ಈಗ ಬಾದೂರನ ಕೊಡದಿದ್ದರೆ ನೀನು
ಬೇಗ ಕಾಳಗಕೆ ಏಳೆಂದು || ೧೫೯ ||

ಮುಂದೆ ರಾಮಯ್ಯನ ತೋರುವಲ್ಲಿಗೆ ಈಗ
ಸಂದಿತು ಪದ ಮುಂದೆ ನೋಡು || ೧೬೦ ||

ಇದು ಪರನಾರಿ ಸೋದರ ರಾಮನಾಥನ
ಪದಕೃತಿಯೊಳಗೊಂದು ಕಥೆಯ |
ಕದನದಿಂದಲಿ ನೇಮಿ ಕುಮ್ಮಟವ ಮುತ್ತಿದ
ಪದಗಳು ಮುಗಿಯೆ ಸಂಪೂರ್ಣ || ೧೬೧ ||

**ಅಂತು ಸಂಧಿ ೨೦ಕ್ಕಂ ಪದನು ೨೧೯೬ಕ್ಕಂ ಮಂಗಳ ಮಹಾಶ್ರೀ**

## ಸಂಧಿ ೨೧ - ನೇಮಿಖಾನನ ಕಾಳಗ ಮತ್ತು ಸೋಲು

ಶ್ರೀ ಗಿರಿಜಾ[ಸ್ಯಾಂಬುಜ ದಿನ]ನಾಯಕ
ಭೋಗಿಭೂಷಣ ಭಾಳನೇತ್ರ |
ಭಾಗೀರಥಿಧರ ಭವರೋಗವೈದ್ಯನೆ
ನಾಗ[ಕುಂಡಲ] ಶರಣೆಂಬೆ || ೧ ||

ರಾಮನ ನೆನೆ ಕಂಡ್ಯಾ ಮನವೆ ಜಟ್ಟಂಗಿಯ
ರಾಮನ ನೆನೆ ಕಂಡ್ಯಾ ತನುವೆ |
ರಾಮರಾಮಾ ಎಂಬ ನಾಮವ ನೆನೆದರೆ
ಕಾಮಿತ ಫಲವೀವ ರಾಮು || ೨ ||

ಹೇಳಿದ ಕಂಪಿಲರಾಯಗೆ ಮಂತ್ರೀಶ
ಮೇಳೈಸೊ ದುರ್ಗಸ ರಣೆಯ |
ಕಾಳಗಕನುವ ಮಾಡಿಸೊ ಕಂಪಿಲಭೂಪ
ಹಾಳಾಯಿತಿನ್ನು ಕುಮ್ಮಟವು || ೩ ||

ನಳಿನಪತ್ರದೊಳಿಹ ಜಲದಂತೆ ಕುಮ್ಮಟ
ಕಳವಳಿಸುತ ಭಯಗೊಂಡು |
ತಳಮಳಗೊಳುತ ಕಂಪಿಲಗೆ ಹೇಳಿದ ಬಂದು
ಉಳಿಯದು ದುರ್ಗವೆಂದೆನುತ || ೪ ||

ಒಂದು ಸುತ್ತಿನ ಕೋಟೆಯ ತೆಕ್ಕೊಂಡರು
ನಿಂದರು ಹುಲಿಮುಖದೊಳಗೆ |
ಬಂದು ಮೂದಲಿಸಿ ನೇಮಿಯ ಪರಿವಾರವು
ನಿಂದವಂಬಿನ ಮಳೆಗರೆದು || ೫ ||

ಕುಂಭಿನಿಯೊಳಗೆ ತಾ ಬೈಚಪ್ಪನಿಂತೆಂದ
ಇಂಬಿಡೆ ಎನ್ನ ಮುಂದೆ[ಸೆ]ಗೆ |
ಹಂಬಲಿಪರೆ ಕಂಪಭೂ ನೀ[ನೆಂ]ದು
ಕಂಬನಿ [ತೊ]ಡೆದು ಸಂತೈಸಿ || ೬ ||

ಇಂಬಿಡುವೆನು ಎಂದು ಬೈಚಪ್ಪ ನುಡಿದನು
ಕುಂಭಿನಿಗೊಡೆಯ ಎಂದೆನುತ |

ಧೀರ ನೀ ಏಳು ನೆಲೆಯ ಉಪ್ಪರಿಗೇರು
ತೋರುವೆ ಬಲುಗಾಳಗವ || ೭ ||

ಹೆದ್ದೊರೆ ತನಕ ಮುರಿಸುವೆನು ತುರುಕವ ಗಂಡ
ತಿದ್ದುವೆ ರಕುತ ಕಾಲುವೆಯ |
ಗೆದ್ದೆನೆನಿಸಿಕೊಂಬೆನು ಮರುಳ್ಗಳ ಕೈಯ್ಯಲಿ
ಇದ್ದಂತೆ ನೋಡೊ ಕಂಪಿಲನೆ || ೮ ||

ಎಂದು ಕಂಪಿಲನ ಉಪ್ಪರಿಗೆಯನೇರಿಸಿ
ಬಂದು ದುರ್ಗವ ಹೊರಹೊಂಟ |
ಇಂದುಧರನ ರಾಮೇಶನ ಗುಡಿಗಾಗಿ
ಬಂದನು ಮಂತ್ರಿ ಬೈಚಪ್ಪ || ೯ ||

ಭೇರಿ ತಂಬಟೆ ಡೊಳ್ಳು ವಾರಾಣ ಗಿಡಿಬಿಡಿ
ಭೋರಿಡುವವು ವಾದ್ಯಗಳು || ೧೦ ||

ಬಂದನು ಬೇಗ ಪ್ರಧಾನ ಬೈಚಪ್ಪನು
ತಂದು ಕಾಣಿಕೆಯ ಮಡಗಿದನು | ಮುಂದೆ ಜಟ್ಟಂಗಿರಾಮೇಶಗೆ ಮಂತ್ರಿಶ
ಅಂದದ್ದಬಿದ್ದು ಕೈಮುಗಿದ || ೧೧ ||
ಏಳ್ನೂರು ಎಪ್ಪತ್ತು ಕೋಣನು ಸಾವಿರ

ಏಳ್ನೂರು ಎಪ್ಪತ್ತು ಕೋಣನು ಸಾವಿರ
ಏಳ್ನೂರು ಕೋಳಿ ಕುರಿಯನು |
ಬಲಿಯ ಆಹಾರ ಕೊಟ್ಟು ಬಂದೆನು ಬೈಚಪ್ಪ
ಏಳಯ್ಯ ರಾಯರಗಂಡ || ೧೨ ||

ತಳಮಳಗೊಂಡು ದುರ್ಗವು ಕಣುಗೆಡುತದೆ
ಚೆಲುವ ಬಾಯೆಂದು ಕರೆಯಲು || ೧೩ ||

ಭಾಷೆಯನಿತ್ತು ಬಂದೆನು ನಿಮ್ಮ ತಂದೆಗೆ
ಭಾಷೆಪಾಲಕ ಚೆನ್ನರಾಮ |
ದೇಶಾಧಿಪತಿ ರಾಮನಿರ್ದ ಬಳಿಗೆ ಬಂದು
ಸಾಸಿರ ಕುರಿಯ ಹೊಯ್ಸಿದನು || ೧೪ ||

ಹರುಷದಿ ಕುರಿ ಕೋಣನ ಬಲಿಯನಿಕ್ಕಿಸಿ
ಭರದಿಂದ ಕರೆದ ಮಂತ್ರೀಶ |
ಕರೆದರೆ ನುಡಿಯದಿರಲು ಕಂಡು ಬೈಚಪ್ಪ
ತಿರಗಿ ಬಂದಾಲಿಸಿ ಕೇಳಿ || ೧೫ ||

ಧರಧೀರ ರಾಮನ ಉಲುಹಿಲ್ಲವೆನುತಲಿ
ಭರದಿಂದ ಕರೆದ ಮಂತ್ರೀಶ || ೧೬ ||

ಚದುರಂಗ ಪಗಡೆಯನಾಡುತ ಪೇಳಿದ
ಮದದಾನೆ ಚೆನ್ನಿಗರಾಮ |
ಮುದದಿಂದ ಕಾಟಣ್ಣನೊಳು ಇಂತೆಂದನು
ಚೆದುರ ಪ್ರಧಾನ ಬಂದಿಹನೆ || ೧೭ ||

ಏನು ಕಾರಣ ಬಂದೆ ಬೈಚಪ್ಪ ನೀನೆಂದು
ತಾನು ಕೇಳಿದನು ರಾಮಯ್ಯ |
ಏನು ಹೇಳುವೆನು ಕುಮಾರ ಚೆನ್ನಿಗರಾಮ
ಹಾನಿ ಬಂದಿದೆ ಕಂಪಿಲಗೆ || ೧೮ ||

ಬಂದ ಹದನ ಹೇಳು ನೀನು ಮಾಜದ ಬೇಗ
ಎಂದು ರಾಮಯ್ಯ ಕೇಳಿದನು |
ಅಂದಿನ ಕಾಲಕ್ಕೆ ಕೊಂದನಲ್ಲವೆ ಕೇಳು
ಇಂದ್ಯಾಕೆ ನಿಮಗೆ ನಮ್ಮಾಸೆ || ೧೯ ||

ಇಂದೊಂದು ತಪ್ಪನು ಕಾಯಯ್ಯ ನಮಗೀಗ
ಸಂದೇಹಬೇಡ ಚಿತ್ತೈಸು || ೨೦ ||

ಸಾಕು ಬೈಚಪ್ಪ ಸಂಸಾರದ ಸುಖ ದುಃಖ
ಬೇಕಿಲ್ಲ ದೊರೆತನ ನಮಗೆ ಕು |
ಹಕು ಮಾಡಿದನು ಹೆಂಡತಿಯ ಮಾತನು ಕೇಳಿ
ನಾಕಜನರು ಬಲ್ಲರೆನುತ || ೨೧ ||

ನೆಲಮಾಳಿಗೆಯಿಂದಿನ್ನೇಳು ಚೆನ್ನಿಗರಾಮ
ಕಳೆಯುಳ್ಳ ಬಿದಿಗೆ ಚಂದ್ರಮನೆ |
ಛಲದಂಕ ತುರುಕರು ನಿಮ್ಮ ತಂದೆಯ ಜೀವ
ಕಳೆವೆವೆನ್ನುತಲಿ ನಿಂದಿಹರೆ || ೨೨ ||

ತಂದೆ ತಾಯಿಗಳಿಲ್ಲ ಬಂಧುಬಳಗವಿಲ್ಲ
ಹಿಂದೆಮುಂದಾರು ಎನಗಿಲ್ಲ |
ಕಂದರ್ಪದಹನ ಜಟ್ಟಂಗಿಲಿಂಗನ ಪಾದ
ಹೊಂದುವುದು ಲೇಸೆಂದ ರಾಮ || ೨೩ ||

ಏಳೋ ಚೆನ್ನಿಗರಾಮ ಏಳೋ ರಾಯರಗಂಡ
ಏಳೋ ಸುರಿತಾಳಮರ್ದನನೆ |

ಏಳಯ್ಯ ಏಳಪ್ಪ ಏಳೋ ಚೆನ್ನಿಗರಾಮ
ಏಳಯ್ಯ ರಣರಂಗಧೀರ || ೧೪ ||

ಕಾಳಮೇಘದವೋಲು ಕವಿದು ತುರುಕರ ದಂಡ
ಹಾಳಮಾಡುವ ಧೀರ ಏಳೋ |
ಏಳದಿದ್ದರೆ ನಿಮ್ಮ ತಂದೆ ಕಂಪಿಲನಾಣೆ
ಕುಲಗುರುವಿನ ಪಾದದಾಣೆ || ೧೫ ||

ಬಲದ ಪಟ್ಟದರಾಣಿ ಹರಿಯಮ್ಮನಾಣೇಳೋ
ಲಾಳವಿಂಡಿಗೆಯ ತೆಗಸಿದೆನು || ೧೬ ||

ನೆರೆದು ಮಂತ್ರಿಯೊಳು ಮಾತಾಡುವ ಸಮಯಕೆ
ಅರಸು ಕಂಪಿಲರಾಯನಿತ್ತ |
ಪುರವ ಮುತ್ತಿದರೆಂಬ ಭರವಸವನು ಪೇಳಿ
ಕರೆಸಿದ ಮಂತ್ರಿಯನರಸ || ೧೭ ||

ಕರೆಯಲಾಕ್ಷಣದಿ ರಾಮಯ್ಯನ ಮುಖವನು
ನೆರೆಗಲಿ ಮಂತ್ರಿ ನೋಡಿದನು |
[ಭರದೆ]ಬೈಚಪ್ಪನ ನುಡಿಗೇಳಿ ರಾಮಯ್ಯ
ಒಂದಾರು ಭುಜವಾಗಿ ಹಿಗ್ಗಿ || ೧೮ ||

ಚಂದದಿಂ ಸಹಿತ ಕಾಟಣ್ಣ ತಾ ಪೊರಮಟ್ಟು
ಅಂದದಿ ನೆಲಮಾಳಿಗೆಯ |
ಎದ್ದು ಬಂದಂಥ ರಾಮಯ್ಯನ ಮುಖನೋಡಿ
ಹೊದ್ದಿ ಬೈಚಪ್ಪ ಮುದ್ದಾಡಿ || ೧೯ ||

ನೆಲಮಾಳಿಗೆ ಬಿಟ್ಟು ಒಡಗೂಡಿ ಬಂದನು
ಛಲದಂಕ ರಾಮಯ್ಯ ನಡೆದ || ೨೦ ||

ತನ್ನೊಡನೈವರು ಮನ್ನೇರು ಸಹವಾಗಿ
ಚೆನ್ನಿಗ ನಡೆದನರ್ತಿಯಲಿ |
ಖಿನ್ನವಿಲ್ಲದೆ ಕಾಟಣ್ಣ ಕೊಳ್ಳಿಯ ನಾಗ
ಚೆನ್ನ ಹಂಪನು [ಸಿಂಗ]ಯ್ಯ || ೨೧ ||

ಕೋವಿದ ಕೊಟಗಾರ ದ್ಯಾವ ರಾಮಯ್ಯನು
ಭಾವಜ ಮಂತ್ರಿ ಬಚಪ್ಪ |
ಗಂಡರಗಂಡನು ಕದನ ಪ್ರಚಂಡ ಮುಂ
ಕೊಂಡು ಬಂದನು ರಾಮನಾಥ || ೨೨ ||

ಕಂದನ ಕವಿಡಿದ್ಯೆತಂದು ಬೈಚಪ್ಪ
ಬಂದನು ತನ್ನರಮನೆಗೆ |
ಚಂದಚಂದದಲ ಆರತಿಯೆತ್ತಿ ಸ್ತ್ರೀಯರು
ಅಂದದಿಂದಲಿ ಪಾಡಿದರು || ೩೩ ||

ಹರಕೆಯ ಕೈಕೊಂಡು ಬಂದ ಚೆನ್ನಿಗರಾಮ
ತರಿಸಿದ ತನ್ನ ಆಯುಧವ |
ಅರಸು ಕಂಪಿಲನ ಕುಮಾರ ಚೆನ್ನಿಗರಾಮ
ಬರಿಸಿದ ತನ್ನ ವಾರುವನ || ೩೪ ||

ಗಳಿಗೆಯೊಳ್ಯಾಲ ಗಗ್ಗರ ಕೊರಳೊಳ್ ಗೆಜ್ಜೆ
ಹೊಳೆವ ಮಾಣಿಕದ ಹಲ್ಲಣವು |
ತಳುಪು ರನ್ನದ ಪಟ್ಟೆ ಮುತ್ತಿನ ಬಾಸಿಂಗ
ಚೆಲುವ ರಾಮುಗನ ವಾರುವಿಗೆ || ೩೫ ||

ಲಕ್ಷ ಕುದುರೆಗಳ ಒಕ್ಕಲಿಕ್ಕುವೆನೆಂದು
ರಕ್ಕಸರಾಯನ ತೇಜಿ |
ಹಕ್ಕರಿಕೆಯ ಮೇಲೆ ಇತ್ತರದಲಿ ಝುಲ್ಲಿ
ಕಕ್ಕಸ ಕದನ ಬಲ್ಲೆಯವು || ೩೬ ||

ಬಂದ ಬೊಲ್ಲಗೆ ರಾಮ ಗಂಧ ಅಕ್ಷತೆನಿಟ್ಟು
ವಂದಿಸಿ ಏರಿ ಬೊಲ್ಲನನು |
ಒಡೆಯ ಚೆನ್ನಿಗರಾಮನಹುದೆಂದು ಪೊಡವಿಯೊಳ್
ಸಡಗರದಲಿ ಬೊಲ್ಲ ನೋಡಿ || ೩೭ ||

ಆರು ತಿಂಗಳ ಮೇವ ನೀರನೊಲ್ಲದೆ ತಾನು |
[ಧೀರ]ರಾಮನ ಕಾಣದಿರಲು |
ತೋರಿತು ಹರುಷವು ರಾಮನ ತೇಜಿಯು
ಹಾರಿತು ಪಕ್ಷಿಯಂದದಲಿ || ೩೮ ||

ಬೇಗ ರಾಮಯ್ಯಗೆ ಜೋಡು ವಜ್ರಂಗಿಯ
ಆಗ ಬೈಚಪ್ಪನು ತೊಡಿಸಿ |
ರಾಗವಳಿಯ ತಲೆ ಠೌಳಿಯ ಮೊದಲಾಗಿ
ತ್ಯಾಗವು ದೃಷ್ಟಿಗಳೆನುತ || ೩೯ ||

ಕಾಯವ ದಂಡಿಸಿದನು ರಾಮನಾಥನು
ಮಾಯಕಾರನು ಬೈಚಪ್ಪ |

ರಾಯರಾಹುತನೆಂಬ ಪೆಸರವನಿಗೆ ಇತ್ತು
ಆಯತದಲಿ ನಡೆತಂದ || ೪೦ ||

ಎಲ್ಲಿಂದ ಬಂದ ಈ ಮಾನ್ಯ ರಾಹುತನೆಂದು
ಎಲ್ಲರು ಕೇಳಿದರಾಗ |
ಕಲ್ಯಾಣದಿಂದ ಬಂದನು ರಾಹುತನೆಂದು
ಎಲ್ಲಕ್ಕೆ ಪೇಳಿದ ಮಂತ್ರಿ || ೪೧ ||

ಹೊಸದಾಗಿ ಬಂದ ಮಾನ್ಯ ರಾಹುತನಿಗೆ
ವಶಮಾಡಿ ಹಳೆಯ ಮಂದಿಯನು |
ಹೆಸರುಳ್ಳ ಕುದುರೆಯ ಕೊಟ್ಟು ಪೌಜನೆ ಮಾಡಿ
ಸಸಿಮಾವಿನ ಮರದಡಿಯ || ೪೨ ||

ಶೃಂಗಾದೋಟದೊಳಗೆ ನಿಲ್ಲಿಸಿ ಮಂತ್ರಿ
ಕಂಗಳ ಬೊಲ್ಲನ ತರಿಸಿ || ೪೩ ||

ಕರೆಸಿದ ಮಾನ್ಯರನರಸಿದ ರಾಮನ
ತರಿಸಿದ ಗಂಧ ವೀಳ್ಯಯವ |
ಸುರಿತಾಳನ ಮಂತ್ರಿ ನೇಮಿಯ ದಂಡಿಗೆ
ಇರಿಸಿದ ಇದಿರು ಪೌಜುಗಳ || ೪೪ ||

ದೇವಿಸೆಟ್ಟಿಯ ಲಿಂಗ ಬೇವಿನ ಸಿಂಗಯ್ಯ
ಭಾವಸಂಗಮ ಹಾರೋ ಲಿಂಗ |
ಕೋವಿದ ಕೊಟಗರ ದ್ಯಾವನು ಇರುಪನು
ಹಾವಳಿಕಾರ ಹಂಪಯ್ಯ || ೪೫ ||

ಮಾದಿಗ ಹಂಪನು ಮುದುಗೊಂಡ ಲೋಭನು
ಸಾಧನೆ ಬಸವರಾಜಯ್ಯ |
ಭೇದವಿಲ್ಲದೆ ಬಂದ ಬಾದೂರಖಾನನು
ಮೂದಲಿಸುತ ಭಟರುಗಳು || ೪೬ ||

ಎನುಮಾಲ ಚಿತ್ತನು ಎರಬೋತು ಗಂಗನು
ಮನಕೆ ಬೆಟ್ಟದ ಸಿಂಗನವರು |
ಮರುಳೆಯ ಪಾಪನು ಬೂಟಕ ಬೊಮ್ಮನು
ಉರಿವ ಕೊಳ್ಳಿಯ ನಾಗಣ್ಣ || ೪೭ ||

ಹೊಸತಾಗಿ ಬಂದಂಥ ರಾಯರಾಹುತನಿಗೆ
ವಶಮಾಡಿ ಹಳೆಯ ಮಂದಿಯನು || ೪೮ ||

ತಿರುಗಿಬಂದನು ಮಂತ್ರಿ ಬೈಚಪ್ಪ ಆಗಲೆ
ಅರಸು ಕಂಪಿಲರಾಯನೆಡೆಗೆ |
ಬರಹೇಳು ನಿನ್ನ ಮಂದಿ ಕುದುರೆಯನೆಲ್ಲ
ಧುರಕಿದಿರಾದ ಮನ್ನೆಯರ || ೪೯ ||

ನೋಡು ಕಂಪಿಲ ನಿನ್ನೊಳಾಡಿದ ಮಾತಿಗೆ
ನಾಡೊಳು ಹೊಸ ರಾಹುತನ |
ತಳಮಳಗೊಂಡು ದುರ್ಗವು ಕಣುಗೆಡುತದೆ
ಚೆಲುವನೆ ಬಾಯೆಂದು ಕರೆಯೆ || ೫೦ ||

ಗಾಢದಿ ತಪ್ಪನೆ ತಂದೆನೊ ಭೂಪಾಲ
ನೋಡು ನಿನ್ನಯ ಮನದಣಿಯೆ || ೫೧ ||

ರಾಮನ ಪೋಲ್ವರ ಭೂಮಿಯೊಳ್ಕಾಣೆನೊ
ಸೀಮೆಯೊಳಪ್ರತಿವೀರ |
ತಾಮಸ ಮಾಳ್ಪನೆ ದಳವ ಕಂಡರೆ ಅಂಥ
ರಾಮನೆಂದಿಗೆ ಪುಟ್ಟುವನೊ || ೫೨ ||

ಪೊಡವಿಗೆ ಒಡೆಯ ಕಂಪಿಲರಾಯ ತನ್ನಯ
ಒಡನೆ ಎಕ್ಕಟಿಗರ ಕರೆಸಿ |
ಕಡುಗಲಿ ನೇಮಿಯ ಬಲವ ತರಿವೆನೆಂದು
ನಡೆದರು ರಾಯ ಮನ್ನೆಯರು || ೫೩ ||

ಪೊಡವಿಯೊಳಗೆ ಅರಿರಾಯಮರ್ದನನೆಂದು
ಹೊಡೆದರು ರಾಯಭೇರಿಯನು |
ಕಡುಗಲಿ ಅಬ್ದುಲಖಾನ ನಡೆದ ಮುಂದೆ
ತಡೆಯದೆ ಹೆಬ್ಬಾಗಿಲೊಳಗೆ || ೫೪ ||

ಹೆಬ್ಬಾಗಿಲನು ತೆಗೆಸಿದನು ಅಬ್ದುಲಖಾನ
ಉಬ್ಬಿತು ಸಾವಿರ ಗಜವು || ೫೫ ||

ಬಾಗಿಲ ಹೊರಹೊಂಟು ಏರಿ ತುರುಕರ ಮೇಲೆ
ಸಾಗರದೊಲು ವಾರುವನು |
ಬೇಗದಿ ಬಂದು ನೂಕಿತು ಹೊಸ ರಾಹುತನ
ಮೂಗ ಸನ್ನೆಯಲಿ ರಾಹುತರು || ೫೬ ||

ಬಾದೂರಖಾನನು ಬರಲು ತುರುಕರ ದಂಡು
ಕ್ರೂರಮಾಡಿತು ತಮ್ಮೊಳಗೆ |

ಕಾದುವೆನೆಂಬ ಸಮಯಕ್ಕೆ ನೇಮಿಯ ದಂಡ
ಮೂದಲಿಸಿದನು ಬಾದೂರ || ೫೭ ||

ಹೋಗದಿರೆಲೊ ಹೇಡಿಗಳಿರಾ ನೀವೆಂದು
ಆಗ ಹೊಕ್ಕನು ಬಾದೂರನು |
ಸಾಗಿ ಐದಾರೇಳು ಸಾವಿರ ಗಜವಿಂಡು
ಬೇಗ ನೇಮಿಯಖಾನನೊಡನೆ || ೫೮ ||

ಭಾಪುಭಾಪುರೆ ಮಝುರೆ ಧೀರ ಬಾದೂರ
ಕೋಪವ್ಯಾತಕೆ ನಿಮ್ಮೊಡನೆ |
ಈ ಪರಿ ಕದನವ ನೇಮಿಖಾನನ ಕೂಡೆ
ತಾ ಪಿರಿದೆನಿಸಿಕೊಂಡಿಹನು || ೫೯ ||

ಹಿಂದಣ ಭಯ ಬಂದಿತೆಂದು ನೇಮಿಯಖಾನ
ಮಂದಿಯ ಮುಖವ ನೋಡಿ |
ಇಂದುವ ರಾಮ ಸತ್ತುದು ಸಟೆಯನುತಲಿ
ಬಂದನು ಕದನಕ್ಕೆ ನೇಮಿ || ೬೦ ||

ಏರಿತು ನಾಲ್ಕು ಪೌಜನುಮಾಡಿ ಕಂಪಿಲನ
ವೀರಮಾನ್ಯಯರುರವಣಿಸಿ |
ತೋರುತ ಸಾಹಸಗಳ ವೈರಿಶಿರಗಳ
ತೂರುತ ನಡೆದರೊಂದೆಸೆಯ || ೬೧ ||

ಒಂದೆಸೆಯಲ್ಲಿ ಹೊಸರಾಹುತನ ಪರಿವಾರ
ಒಂದು ಕಡೆಯಲ್ಲಿ ಕಂಪಿಲನ |
ಮುಂದೆ ಮನ್ನೆಯರೊಂದು ಕಡೆಯಲ್ಲಿ ಸವರುತ
ಬಂದು ನಿಂದನು ರಾಮನಾಥ || ೬೨ ||

ಬಲಿದು ತೊಡೆಯನೊತ್ತಲು ಕಲಹ ದಾಂಟಿತು
ಕಲಿ ಕಾದ ಕೈಯ್ಯನೆತ್ತಿದನು || ೬೩ ||

ಎತ್ತ ನೋಡಿದಡತ್ತ ಬಾಯನು ತೆರವುತ
ಮತ್ತೆ ರಾಮಯ್ಯನ ತೇಜಿ |
ಕತ್ತಿಯ ಕಿತ್ತು ಜಡೆಯ ಬೋಳೈಸಿ [ದ]
ಮೃತ್ಯುಂಜಯ ಜಯವೆನುತ || ೬೪ ||

ಬೊಲ್ಲನ ಏರಿ ದೂವಾಳಿಸಿ ರಾಮಯ್ಯ
ಮಲ್ಲಖಾನರನು ಎಲ್ಲರನು |

ಕೊಲ್ಲುತ ತತ್ತರದರಿವುತ ರಣದೊಳು
ಬಲ್ಲೆಯದಲಿ ತಿವಿತಿವಿದ || ೬೫ ||

ಚಪ್ಪೆಲು ಮುರಿದು ನಿಟ್ಟೆಲು ಮೊಲೆ ಖಂಡ್ರಿಸಿ
ಇಬ್ಬರೊಂದಾಗಿ ಹೊಯ್ದಾಡಿ |
ರಣದೊಳು ರಾಮನಲ್ಲದೆ ಹೀಗೆ ಕಾದುವ
ಬಣಗರಿಗೆಲ್ಲಿಯದೈಸೆ || ೬೬ ||

ಆ ಬರವಿಂಗೆ ತಲೆ ಹೊಡೆದರೆ ಖಂಡ್ರಿಸಿ
ಕುಪ್ಪಳಿಸುತ ಕಾಲು ಮುರಿದು |
ಒಪ್ಪ ನೇಮಿಯ ದಂಡನೆಲ್ಲ ಸಂಹರ ಮಾಡಿ
ಕುಪ್ಪೆಯನೊಟ್ಟಿದಂತಾಯ್ತು || ೬೭ ||

ಹಣಿವನೆ ತುರುಕರ ದಂಡಿಗೆ ಇವನೆಂದು
ಎನಿಸಿಕೊಂಡರು ಜಾಣರುಗಳು || ೬೮ ||

ಸಾವಿರಕೊಬ್ಬ ರಣವ ಹೊಕ್ಕು ಕಡಿವನು
ಇವನಾರು ಎನುತ ರಣದೊಳಗೆ |
ವಿವರಿಸಿ ನೋಡಲು ಇವ ರಾಮನೆನುತಲಿ
ಕವಿದು ಕಂಗೆಟ್ಟು ನೋಡಿದರು || ೬೯ ||

ವಾದಿಸುವರು ರಾಮನಹುದೆಂದು ಮನದೊಳು
ಭೇದಿಸುವರು ಜೂಜನಾಡಿ |
ಮೂದಲಿಸಿಯೆ ಮಾತನಾಡಲಮ್ಮರು ಅವ
ಕಾದುವ ತೋಟಿಯ ನೋಡಿ || ೭೦ ||

ಕನ್ನವನಿಕ್ಕಿ ಕಳ್ಳನು ಮನೆಯನು ಹೊಕ್ಕು
ಕೆಮ್ಮಿದಂತಾಯಿತು ನೇಮಿ |
ಇನ್ನೇನು ಹೋದೆನೆಂದರೆ ರಾಮ ಬಿಡುವನೆ
ಎನ್ನುತಿರ್ದರು ತಮತಮಗೆ || ೭೧ ||

ಪೊಡವಿಪ ನೇಮಿಯ ಎಡಬಲದೊಳಗಿರ್ದ
ಕಡುಗಲಿ ವೀರ ರಾಹುತರು |
ತಡೆಯದೆ ರಾಮನ ಕಡಿದು ಶಿರವ ಬೇಗ
ಬಿಡದೆಮಪುರಕೆ ಕಾಣಿಪೆವು || ೭೨ ||

ಕುಡುಗಲಿ ರಾಮನ ಹೊಡೆವೆವು ರಣದೊಳು
ಒಡನೆ ಬಾದೂರನೆಂಬವ[ನ] |

ಹೆಡಗಯ್ಯ ಕಟ್ಟಿ ತರುವೆವು ಬಾದೂರನೆಂದು ತ
ಮ್ಮೊಡೆಯನ ಬೆಸನ ಬೇಡಿದರು || ೭೩ ||

ತಟ್ಟನೆ ಕವಿದು ಕಾರ್ಮುಗಿಲಂತೆ ಖಾನನು
ನೆಟ್ಟನೆ ಸೇರಿ ನಿಂದೆಸೆಯೆ |
ತಟ್ಟನೆ ರಾಮನು ಅದ ಕಂಡು ಜೇಯೆಂದು
ತಟ್ಟಿದ ಕುದುರೆ ಕಂಧರವ || ೭೪ ||

ಏರಿ ಬೊಲ್ಲನ ರಾಮ ಸೇರುವೆಯನು ಕೂಡಿ
ಧೀರ ಮನ್ನೆಯರನು ಕರೆಸೆ |
ವಾರಣ ತುರಗ ಕಾಲಾಳು ಮನ್ನೆಯರೆಲ್ಲ
ಭೋರನೇರದರಿದಿರಾಗಿ || ೭೫ ||

ಸುರಿತಾಳನ ಮಂತ್ರಿ ನೇಮಿಖಾನನ ಮೇಲೆ
ಉರುವಣಿಸುತಲಿದಿರಾಗಿ |
ಭರದಿಂದಲೇರಿಸು ಕುದುರೆ ಕಾಲಾಳೆಲ್ಲ
ಕರಿಘಟೆಗಳು ಇದಿರಾಗಿ || ೭೬ ||

ಧುರಧೀರ ರಾಮನ ಬೊಲ್ಲನು ರಣದೊಳು
ತುರುಗಗಳನು ಸದೆಬಡೆದು |
ಪರಬಲದಿದಿರಿಲಿ ನೆರೆದು ಪೌಜನು ಮಾಡಿ
ಸರಿ ಪೆಟ್ಟಿನಲ್ಲಿ ಹೊಯ್ದಾಡಿ || ೭೭ ||

ಆರೆ ರಾವುತ ಮಝುರೆ ತುಂಬೂರಖಾನ
ಸರಸದಿ ನಿಲ್ಲುನಿಲ್ಲೆನುತ |
ಹತ್ತೆಂಟು ಸಾವಿರ ಚತುರಂಗ ಬಲಕೂಡಿ
ಮುದದಿ ಮೂದಲಿಸಿ ರಾಮಯ್ಯ || ೭೮ ||

ಕದನಕ್ಕೆ ಖಡ್ಗವ ಝಳ್ಪಿಸಿ ಮನ್ನೇರು
ಒದಗಿತು ರಾಮಯ್ಯನೊಡನೆ |
ಸಿಕ್ಕಿತು ಊರದಲ್ಲಿ ಬೆನ್ನಲುಗಿದು ಬೀಳೆ
ಒಕ್ಕಲಿಕ್ಕುತ ಅರಿಬಲವ || ೭೯ ||

ಒಡೆದುದು ನಡುಬೆನ್ನು ಕುಡಿಯಳ್ಳೆ ತೊಡೆಗಳು
ಕಡೆಗೆ ನೆತ್ತಿಯ ಚಿಪ್ಪು ಹಾರಿ |
ತಡೆಯದೆ ಗೋಣ ಖಂಡ್ರಿಸಿ ನೆಲದೊಳು ಬೀಳೆ
ಕಡುಗಲಿ ತುಂಬೂರನಳಿದ || ೮೦ ||

ಅರರೆ ತುಂಬೂರಖಾನನಳಿದನೆಂದು ಪರಿ
ವಾರ ಒದಗಿತು ಹುಯ್ಯಲ ಕಾಳಗಕೆ || ೮೧ ||

ಮತ್ತೆ ಮುರಿದು ತಿರುಗಿತು ಹರಿಗೆಯ ಬಲ
ಸುತ್ತಲಡ್ಡೈಸಿ ರಾಮಯ್ನ |
ಮುತ್ತಿಕೊಂಡರು ರಾಮ ಸಿಕ್ಕಿದನೆನುತಲಿ
ಹತ್ತಿತ್ತು ಉರವಣಿಗೆಯಲಿ || ೮೨ ||

ಹರಿಗೆಯ ಬಲವನಬ್ಬರಿಸಿ ಹೊಯ್ಯಲು ರಾಮ
ಹರಿದು ಮಿದುಳು ಚಿಪ್ಪುವೊಡೆದು |
ಕರುಳು ಹರಿದು ಕಾಳಿಜ ತಂಡು ತುಂಡಾಗಿ
ಮರುಳು ಭೂತಕೆ ಉಣಿಸಿದರು || ೮೩ ||

ಹಬ್ಬವಾಯಿತು ರಣಭೂತಪ್ರೇತಗಳಿಗೆ
ಬೊಬ್ಬಿಡುವರು ತಮತಮಗೆ || ೮೪ ||

ರಾಮನು ಸತ್ತ ಸುದ್ದಿಯ ಕೇಳಿ ಬಂದೆವು
ಸೀಮೆಯ ಮೆಟ್ಟಿದೆವು ನಾವು |
ಭೂಮಿಯ ಬಗೆದು ಹೊಕ್ಕರೆ ನಮ್ಮ ಬಿಡನೆಂದು
ನೇಮಿ ಚಿಂತಿಸಿ ತಿರುಗಿದನು || ೮೫ ||

ಕತ್ತಿಯ ಬೆಳಕ ರೂಪಿಗೆ ರೂಪನು ಕಂಡು
ಮತ್ತೆ ಬಂದನು ರಾಮನೆನುತ |
ಹುತ್ತವನ್ನೇರಿ ಹುಲ್ಲನೆ ಕಚ್ಚಿ ತುರುಕರು
ಬತ್ತಲೆ ಪರಿದು ಓಡಿದರು || ೮೬ ||

ಅಟ್ಟ ಬೆಟ್ಟವು ಗವಿಗಳ ಗಹ್ವರ ಬಿದ್ದು
ಬಟ್ಟೆ ಕಾಣದೆ ಓಡಿದರು |
ಅಟ್ಟಿ ಹೆದ್ದೊರೆಯ ತನಕಲು ರಾಮಯ್ಯನು
ಗಟ್ಟಿಸಿ ಬೊಲ್ಲನ ತಟ್ಟಿದನು || ೮೭ ||

ತೊರಗಲ್ಲು ಬಾದಾಮಿಯ ಊರ ಮುಂದಲ್ಲಿ
ತುರಗವನಿಳಿದ ಬಾದೂರ |
ಮುರಿದೋಡಿಹೋದ ಬಲವ ಕಂಡು ಕಂಪಿಲ
ಕರೆಸೆಂದ ಬೈಚಪ್ಪನೊಡನೆ || ೮೮ ||

ಕಂಡ ಕಂಪಿಲ ಉಪ್ಪರಿಗೆಯೊಳಗೆ ಇರ್ದು
ದಂಡ ಬಿಟ್ಟೋಡುವರ ನೋಡಿ |

ಚಂಡವಿಕ್ರಮ ಬೈಚಪ್ಪನೊಳಿಂತೆಂದ
ಕಂಡೆನೊ ಹೊಸ ರಾಹುತನ || ೮೯ ||

ಧೀರನಹುದು ನಿನ್ನಯ ಬಂಟ ಬೈಚಪ್ಪ
ವೀರನಹುದು ರಣದೊಳಗೆ |
ಹೇರಿದ ನೇಮಿಯ ಮೇಲೆ ಕೂರ್ಗಣೆಗಳ
ತೋರಿದ ಕೈಯ್ಯ ಚಳಕವ || ೯೦ ||

ರಾಮನಲ್ಲದೆ ರಣದೊಳು ಕಾದುವರಿಲ್ಲ
ಪ್ರೇಮದಿ ಎನ್ನೊಳಗುಸುರೊ |
ಆ ಮಹಾ ಸುರಿತಾಳ ರಾಯಮರ್ದನನೆಂದು
ಭೂಮಿಪ ಕಂಪಿಲ ನುಡಿದ || ೯೧ ||

ಸತ್ತವರೆದ್ದು ಬಹರೆ ಕೇಳು ಕಂಪಿಲ
ಮೃತ್ಯು ನುಂಗಿದ ತುತ್ತು ಬಹುದೆ |
ಮತ್ತೊಬ್ಬ ಹೊಸ ರಾಹುತನೆಂದು ಬೈಚಪ್ಪ
ಪೃಥ್ವಿಪಾಲಕಗೆ ಹೇಳಿದನು || ೯೨ ||

ಅವನ ಕರೆಸು ಮಂತ್ರಿ ದಳದುಳಿಕಾರನ
ಅವನ ಕರೆಸು ನಿನ್ನವನ |
ಅವನ ಕರೆಸೊ ಮಂತ್ರಿಗಳ ಶಿರೋಮಣಿಯೆ
ಅವನ ಕರೆಸು ಕರೆಸೆಂದ || ೯೩ ||

ಹಿಂದಕೆ ಐದಾರು ಗಾವುದ ಅಟ್ಟಿ ರಾಮಯ್ಯ
ಬಂದನು ತನ್ನ ಕುಮ್ಮಟಕೆ |
ಸಂದೇಹವಿಲ್ಲದೆ ಕಂಪಿಲರಾಯನ
ಕಂದ ರಾಮಯ್ಯ [ನು] ಭರದಿ || ೯೪ ||

ಬೆಳ್ಳಿ ಕಾಲಾಟದ ಕುದುರೆಯನೇರಿದ
ಮೆಲ್ಲನೊಂದೆರಡು ಪೇರಿಯನು |
ಬಲ್ಲ ಪರಿಯಲ್ಲಿ ಪೇರಿಯಮಾ [ಡೆ] ತೇಜಿಯ
ಅಲ್ಲಿ ಸಂಶಯವು ಕಂಪಿಲಗೆ || ೯೫ ||

ಕರೆಯಲಟ್ಟಿದನು ಬೈಚಪ್ಪ ಪ್ರಧಾನನು
ಅರಸು ಕಂಪಿಲರಾಯನೆಡೆಗೆ |
ಬರಹೇಳು ಕಂಪಿಲಭೂಪನ ಎನ್ನಲು ಸ
ತ್ಕರಿಸಿ ತೇಜಿಯ ರಾಮನಿಳಿದ || ೯೬ ||

ಭರದಿಂದ ಬಂದು ತಂದೆಗೆ ಕಾಣಿಕೆಯಿಟ್ಟು
ಸೆರೆಯ ಹಿಡಿದವರ ಒಪ್ಪಿಸಲು |
ಧುರಧೀರ ಕಂಪಿಲರಾಯನು ಮನಮೆಚ್ಚಿ
ಧರೆಯೊಳಿವಗೆ ಎಣೆಗಾಣೆ || ೯೭ ||

ತಲೆಯ ತೌಳಿಯ ವಜ್ರಾಂಗಿಯ ತೆಗೆತೆಗೆ
ಚೆಲುವರ  ಗಂಡನೆ ನೀನು |
ಕಲಿಗಳರಸೆ ಏಳು ತಿಂಗಳು ಕಾಣೆವು ಸುಲಭ
ರಾಮಯ್ಯ ಮುಖದೋರೊ || ೯೮ ||

ಎನಲು ತಲೆಯ ಮೇಲೆ ತೌಳಿಯ ತೆಗೆಯಲು
ತನುಜನ ಮುಖ ನೋಡಿದನು || ೯೯ ||

ಮಗನ ಮುಖವ ನೋಡಿ ಬಾಯೊಳು ಬಾಯಿಟ್ಟು
ಮಿಗೆ ದುಃಖಮಾಡಿ ಕಂಪಿಲನು |
ಒಗುವ ಕಂಬನಿದುಂಬೆ ರಾಮನ ಮೋಹದ
ಬಗೆಯ ನಾನೇನ ಪೇಳುವೆನು || ೧೦೦ ||

ತಂದೆ ಕಂಪಿಲನ ದುಃಖವ ನೋಡಿ ರಾಮಯ್ಯ
ಇಂದೊಂದ ನುಡಿದ ಮೇಲ್ಮಾತ
ಸಂದೇಹವ್ಯಾಕೆನ್ನ ಮನಸನು ಕಾಣದೆ
ಕೊಂದೆಯೊ ಚಿಕ್ಕಮ್ಮಗಾಗಿ || ೧೦೧ ||

ರಕ್ತ ಕಾಯವ ತೊಳೆಸಿ ಕಂಪಿಲರಾಯ
ಉತ್ತುಮ ವಜ್ರಾಂಗಿ ತೊಡಿಸಿ |
ಹತ್ತು ಸಾವಿರ ಹೊನ್ನ ದಾನಧರ್ಮವ ಮಾಡಿ
ಮುತ್ತ ನಿವಾಳಿಯ ಚೆಲ್ಲಿ || ೧೦೨ ||

ಎನಲೇಳುತ ಬೀಳುತ ಹರಿಯಮ್ಮ ಆ
ಮನುಜನಿಗೆ ಹಿಡಿಹೊನ್ನ |
ಕಂದನ ನೋಡಬೇಕೆನುತಲಿ ಹರಿಯಮ್ಮ
ಬಂದಳು ಅಂದಣವೇರಿ || ೧೦೩ ||

ಏಳು ತಿಂಗಳು ನಿನ್ನ ಮುಖವ ಕಾಣೆನೊ ರಾಮ
ಬಾಳುವ ಕಾಲವ ಮರೆದೆ |
ಹೇಳುವುದೇನು ವಿಧಿಯಿಂದ ಹರಿಯಮ್ಮ
ಗೋಳಿಟ್ಟು ಮರುಗಿ [ನುಡಿದಳು] || ೧೦೪ ||

ಅಕ್ಕ ಮಾರಮ್ಮನು ಕರ ಮಿಗೆ ಕಂಬನಿ
ಒಕ್ಕಳು ದುಃಖದೊಳಾಗ |
ತಂಗಿ ಸಿಂಗಮ್ಮ ಅಳಲುವ ಸಮಯಕ್ಕೆ
[ಬಿ]ನ್ನನೆ ರಾಮಲದೇವಿ || ೧೦೫ ||

ಸಂಗಡ ನಾಲ್ಕೈದು ಸವತೇರು ಸಹವಾಗಿ
ಪಾದಂಘ್ರಿಗಳಿಗೆ ಎರಗಿದರು |
ಎರಗಲೆಬ್ಬಿಸಿ ಸತಿಯರ ರಾಮನಾಥನು
ಕರ ಮೋಹಿಸಿದನಾಕ್ಷಣದಿ || ೧೦೬ ||

ಎತ್ತಿ ಸಾರುವ ಕಹಳೆಗಳ ಬಿರಿದುಗಳನು
ಇತ್ತ ಕೇಳಿದಳು ರತ್ನಾಜಿ |
ಎತ್ತಳ ಕಹಳೆಯು ನೋಡಿ ಬಾ ಎನುತಲಿ
ತೊತ್ತು ಸಂಗಿಯ ಕಳುಹಿದಳು || ೧೦೭ ||

ತೊತ್ತು ಹರಿದು ಬಂದು ಮೃತ್ಯು ಬಂದಿತು ಎಂದು
ಸತ್ತ ರಾಮುಗ ಬಂದೆನೆನಲು |
ಕಿತ್ತಲಗಿನ ಮೊನೆ ಎದೆಯ ಕೊಳ್ಗೊಂಡಂತೆ
ಚಿತ್ತ ಬೆರಗಾದಳು ರತ್ನಿ || ೧೦೮ ||

ನೋಡು ಸಂಗಾಯಿ ಕಂಪಿಲರಾಯ ಮರೆಮಾಡಿ
ಮಾಡಿದ ಮಾಟವನೆಂದು |
ಹೂಡಿದಳಾಗ ಕೊರಳಿಗೆ ನೇಣುಗಳನು
ಈಡಾಡಿದಳು ಪ್ರಾಣವನು || ೧೦೯ ||

ಕಂಪಿಲನರಸಿ ಭಾವೆ ರತ್ನಾಜಿಯು
ಕೋಪಿಸಿ ಪ್ರಾಣವ ಬಿಡಲು || ೧೧೦ ||

ಒಡತಿ ಸತ್ತುದ ಕಂಡು ಹಡಪದ ಸಂಗಿಯು
ಒಡಲನಿನ್ನೇನ ಹೊರೆವೆನು |
ಕಡಿದುಕೊಂಡಳು ತಾನು ಕಠಾರಿಯ ತೆಕ್ಕೊಂಡು
ಮಡಿದು ಬಿದ್ದಳು ಸಂಗಿಯತ್ತ || ೧೧೧ ||

ನೆರದಿರ್ದ ಸತಿಯರು ಪರಿದೋಡಿಬಂದರು
ಇರದೆ ಹೇಳಿದರು ಕಂಪಿಲಗೆ |
ಆಗಲೆ ಸತ್ತಳೆಂಬುದ ಕೇಳಿ ಕಂಪಿಲ
ಹೋಗಲಿ ಅವಳು ಪಾತಕಿಯು || ೧೧೨ ||

ಆನೆಯ ಕಾಲಿಗೆ ಕಟ್ಟಿ ಎಳೆಸು ಎಂದು
ನುಡಿದನು ಮಂತ್ರೀಶನೊಡನೆ |
ಯಾತಕೆ ಸತ್ತಳು ಚಿಕ್ಕಮ್ಮನೆನುತಲಿ
ಭೀತಿಗೊಳ್ಳುತ ರಾಮ ಕೇಳಿ || ೧೧೩ ||

ಮನ್ನೆಯ ಮಗುಟವರ್ಧನ ಖಾನಖಾನರು
ಕನ್ನೋಜಿ ಶ್ಯಾನೆ ಮಾರ್ಬಲವು |
ಚೆನ್ನಾಗಿ ತುರುಕರ ಬಲವೆಲ್ಲ ಕಳುಹಿಸಿ
ತನ್ನರಮನೆಯನು ಹೊಕ್ಕ || ೧೧೪ ||

ನೇಮಿ ಬಂದುದ ಕೇಳಿ ಸುರಿತಾಳ ಕಳುಹಿದ
ಸೀಮೆಯೊಳಗಾದ ಕಾರ್ಯವನು |
ಪ್ರೇಮದಿ ಬಂದು ಹೇಳಿದ ತನ್ನ ಸುದ್ದಿಯ
ರಾಮ ಬಂದೆನ್ನ ರಣದೊಳು || ೧೧೫ ||

ಸತ್ತ ರಾಮನು ಎಂತು ನೇಮಿಯ ದಂಡನು
ಮುತ್ತಿಕೊಂಡನು ಎಂಬ ಸುದ್ದಿ |
ಮತ್ತೆ ಕೇಳುತಲಾ ಸುರಿತಾಳ ನೇಮಿಯ
ಒತ್ತಿಗೆ ಕರೆದು ಹೇಳಿದನು || ೧೧೬ ||

ಹೇಗಾಯಿತು ನೀನು ಹೋದ ಸುದ್ದಿಯು ಈಗ
ಬೇಗವೆಮ್ಮೊಡನೆ ಪೇಳೆನಲು |
ಕೂಗಿ ಜಡಿದು ಕುಮ್ಮಟವನು ಮುತ್ತಲು
ಆಗ ವೇಗದಿ ರಾಮ ಬಂದು || ೧೧೭ ||

ಮುತ್ತಿಗೆ ತೆಗೆಸಿ ತತ್ತರ ತರಿದೊಟ್ಟಿದ
ಮೃತ್ಯು ತಾ ಮುರಿದು ಹೊಕ್ಕಂತೆ |
ತಾಳಿದ ಕೋಪದಿ ಪೇಳ್ದ ರತ್ನಾಜಿಯ
ಹಾಳು ಹೆಣನ ತೆಗಸೇಳು || ೧೧೮ ||

ತನ್ನ ಪರಾಣಕೆ ತಾನು ಮುನಿದಳ ಎಳೆತಂದು
ಭಿನ್ನವಿಲ್ಲದೆ ಅಗುಳೊಳಗೆ |
ಅನ್ಯಾಯಕಾತಿಯು ಹೋಗಲೆನುತ ಮಂತ್ರಿ
ಚೆನ್ನಾಗಿ ಎಳೆದು ಹಾಕಿಸಿದ || ೧೧೯ ||

ನೆರದ ಜನರು ಎಲ್ಲ ಪರಿದೋಡಿ ಬಂದಾಗ
ವಿರಸದವಳ ಎಳೆದೊಯ್ದು |

ತಿರುಗಿ ಎಲ್ಲರು ಯಮದೂತರ ಕೈಯೊಳು
ಗುರಿಮಾಡಿ ಪುರಜನರೆಲ್ಲ || ೧೨೦ ||

ಇದು ಪರನಾರಿ ಸೋದರ ರಾಮನಾಥನ
ಪದಕೃತಿಯೊಳಗೊಂದು ಕಥೆಯು |
ವಿದಿತ ವಿಶ್ವಾಸದಿ ದೆಶೆ ಅಷ್ಟ ಶೂನ್ಯದ
ಸುದತಿ ಅಳಿದ ಸಂಧಿ ಮುಗಿಯೆ || ೧೨೧ ||

**ಅಂತು ಸಂಧಿ ೨೧ಕ್ಕಂ ಪದನು ೨೩೧೭ಕ್ಕಂ ಮಂಗಳ ಮಹಾಶ್ರೀ**

## ಸಂಧಿ ೨೨ - ಕೊಮಾರ ರಾಮಯ್ಯನಿಗೆ ಪಟ್ಟಕಟ್ಟಿದುದು

ಶ್ರೀ ಗಿರಿಜಾ[ಸ್ಯಾಂಬುಜ ದಿನ]ನಾಯಕ
ಭೋಗಿಭೂಷಣ ಭಾಳನೇತ್ರ |
ಭಾಗೀರಥಿಧರ ಭವರೋಗವೈದ್ಯನೆ
ನಾಗ[ಕುಂಡಲ]ಶರಣೆಂಬೆ || ೧ ||

ರಾಮನ ನೆನೆ ಕಂಡ್ಯಾ ಮನವೆ ಜಟ್ಟಂಗಿಯ
ರಾಮನ ನೆನೆ ಕಂಡ್ಯಾ ತನುವೆ |
ರಾಮರಾಮಾ ಎಂಬ ನಾಮವ ನೆನೆದರೆ
ಕಾಮಿತ ಫಲವೀವ ರಾಮ || ೨ ||

ರಾಮಗೆ ಪಟ್ಟವ ಕಟ್ಟಬೇಕೆನುತಲಿ
ನೇಮಿಸಿದನು ಮನದೊಳಗೆ |
ಭೂಮೀಶ ಕಂಪಿಲ ತನ್ನ ಪ್ರಧಾನನೊಳ್
ಆಲೋಚನೆಯ ಮಾಡಿದನು || ೩ ||

ಕರಸಿಕೊಂಡನು ಆಗ ಮಂತ್ರಿ ಬೈಚಪ್ಪನ
ಬೆರಸಿ ಮಾತಾಡಿದರಾಗ |
ಧುರಧೀರ ರಾಮಗೆ ದೊರೆತನವನು ಮಾಡಿ
ಹರುಷವ ನೋಡಬೇಕೆಂದ || ೪ ||

ಮುಪ್ಪಾದೆವು ಎಪ್ಪತ್ತು ವರುಷವು ತುಂಬಿ
ಇಪ್ಪೆವೆ ಸ್ಥಿರಕಾಲವಾಗಿ |
ಅಪ್ಪಾಜಿ ಕೇಳು ನೀ ಮಂತ್ರಿ ಬೈಚಪ್ಪಗೆ
ಬೆರೆಸಿ ಮಾತಾಡಿದರಾಗ || ೫ ||

ಹಾಗೆಯಾಗಲಿ ನಿನ್ನ ಮನಸಿನಂತೆ ರಾಯ
ಈಗ ಕರೆಸು ಜೋಯಿಸರ |
ಕರೆಸಿದ ತನ್ನಯ ರಾಜಪುರೋಹಿತರ
ಕರೆಸಿದ ವೇದಪಾಠಕರ || ೬ ||
ಬಂದರು ಜೋಯಿಸ ಬ್ರಾಹ್ಮರು ದಿವ್ಯರು
ನಿಂದರು [ಮ]ಖದಲೆ ಅವರು |
ಗಂಧ ಅಕ್ಷತೆ ಖರ್ಜೂರ ಕದಳಿಗಳನು
ಮುಂದಿಟ್ಟು ಹರಕೆಯನಾಂತು || ೭ ||

ಕರೆಸಿದಿರೇಕೆಮ್ಮ ಅರಸೆ ಕಂಪಿಲರಾಯ
ದೊರೆ ಕೊಡು ಎಮಗೆ ಬುದ್ಧಿಯನು |
ಧುರಧೀರ ರಾಮಗೆ ಪಟ್ಟಗಟ್ಟಲಿಬೇಕು
ಒರೆದು ಪೇಳಿರಿ ಶುಭ ದಿವಸ || ೮ ||

ಇಂದಿನ ದಿವಸ ಒಳ್ಳೆಯದು ಅಮೃತಯೋಗ
ಬಂದಿದೆ ಶುಭಲಗ್ನಯೋಗ |
ಕಂದ ರಾಮಯ್ಯಗೆ ಪಟ್ಟಾಗಬೇಕೆಂದು
ನಿಂದು ಹೇಳಿದರು ಜೋಯಿಸರು || ೯ ||

ತರಿಸಿ ವಸ್ತ್ರಾಭರಣ ಪುಷ್ಪಂಗಳೆಲ್ಲವ
ಕರೆಸಿದ ಮಾನ್ಯರನೆಲ್ಲ |
ಹರುಷದಿ ತನ್ನ ಹಳಬರನೆಲ್ಲ ಕರೆಸಿದ
ಅರಸುಮಕ್ಕಳ ರಾಹುತರ || ೧೦ ||

ಎಲ್ಲರ ಕರೆಸಿಕೊಂಡಾಗ ಕಂಪಿಲರಾಯ
ಉಲ್ಲಾಸದಿಂದ ತಾನೆದ್ದು |
ಬಲ್ಲಿದ ರಾಮಗೆ ಪಟ್ಟದ ಪಿರಂಗಿಯ
ನಿಲ್ಲದೆ ಕೊಟ್ಟು ಕರೆಸಿದನು || ೧೧ ||

ಉಡುಗೊರೆ ಉತ್ಸಾಹ ಒಡವೆ ವಸ್ತುಗಳನು
ಕೊಡೆ ಕೊಟ್ಟ ಕಂಪಿಲರಾಯ |
ದೃಢಗಲಿ ರಾಮಯ್ಯ ಸ್ಥಿರಪಟ್ಟವಾಳೆಂದು
ಕೊಡೆ ಒಳ್ಳೆ ಬುದ್ಧಿಲಿ ಕೊಟ್ಟ || ೧೨ ||

ಸದರೆಲ್ಲ ಎದ್ದು ಕೈಮುಗಿದರು ರಾಮಯ್ಯಗೆ
ಮುದದಿಂದ ಬೈಚಪ್ಪ ಸಹಿತ |
ಬುಧರೆಳ್ಳ ಎದ್ದು ಮಂತ್ರಾಕ್ಷತೆ ಇತ್ತಾಗ
ಮದಮುಖ ರಾಮನ ಹರಸಿ || ೧೩ ||

ಪಟ್ಟಾಭಿಷೇಕವ ಮಾಡಿ ರಾಮಯ್ಯಗೆ
ಪಟ್ಟಣವೆಲ್ಲ ಶೃಂಗರಿಸಿ |
ನೆಟ್ಟನೆ ಆನೆಯ ಮೇಲೆ ಸಕ್ಕರೆ ಹೇರಿ
ಕೊಟ್ಟರು ಸಕಲ ಜನಕೆಲ್ಲ || ೧೪ ||

ಬಂದ ಬ್ರಾಹ್ಮರಿಗೆಲ್ಲ ನಿಂದು ಕೈಮುಗಿದರು
ತಂದಿಕ್ಕಿದರು ಹಿಡಿಹೊನ್ನ |
ವಂದನೆಗೈದು ವೀಳ್ಯವಕೊಟ್ಟು ಕಳುಹಿದ
ಕಂದ ರಾಮಯ್ಯ ಅರ್ತಿಯಲಿ || ೧೫ ||

ಬಂದವರೆಲ್ಲರಿಗೆ ಗಂಧ ವೀಳ್ಯವನಿತ್ತು
ಸಂದೇಹವಿಲ್ಲದೆ ರಾಮ |
ತಂದೆಯ ಪಾದಕ್ಕೆ ಬಿದ್ದು ವಂದನೆಮಾಡಿ
ಮಂದಿರವನು ಒಳಪೊಕ್ಕು || ೧೬ ||

ಹರಿಯಲದೇವಿ ಪಾದಕ್ಕೆರಗಿ ರಾಮಯ್ಯ
ಕರವೆತ್ತಿ ಕೈಮುಗಿದನು |
ಸ್ಥಿರಪಟ್ಟವಾಳೆಂದು ಹರಕೆಯ ಕೊಟ್ಟಳು
ಪರನಾರಿ ಸಹೋದರನಾಗು || ೧೭ ||

ಮುತ್ತಿನಾರತಿಗಳ ಎತ್ತಿಸಿ ರಾಮಗೆ
ಮುತ್ತೈದೆರೆಲ್ಲ ಹರಸಿದರು |
ಸುತ್ತಳ ರಾಯರ ಗೆಲ್ಲೆಂದು ಹರಕೆಯ
ನಿತ್ತರು ಅಕ್ಕತಂಗಿಯರು || ೧೮ ||

ಅಲ್ಲಿಂದ ಅಪ್ಪಣೆ ತೆಕ್ಕೊಂಡು ರಾಮಯ್ಯ
ನಿಲ್ಲದೆ ತನ್ನರಮನೆಗೆ |
ಮೆಲ್ಲನೆ ಬಂದು ಪಟ್ಟೆಮಂಚದಿ ಮಲಗಿದ ತನ್ನ
ವಲ್ಲಭೆಯರ ಮೇಳದಲಿ || ೧೯ ||

ಉದಯದೊಳೆದ್ದು ಊಟವಮಾಡಿ ರಾಮಯ್ಯ
ಸದರಿಗೆ ಬಂದು ಕುಳಿತನು |
ಒದಗಾಗಿ ಕರೆಯೊರೊ ಮನ್ನೆ ರಾಹುತರನು
ಮುದದಿಂದ ಗಣತಿಗೆ ಎನುತ || ೨೦ ||

ಕರೆಸಿದ ಕರಣಿಕ ಲಿಂಗನ ಬೇಗದಿ
ಬರಕೊಳ್ಳೊ ಮಂದಿ ಲೆಕ್ಕವನು || ೨೧ ||

ಇಟ್ಟು ತೊಟ್ಟು ಶೃಂಗಾರವಾಗಿ ಮಾನ್ಯರನೆಲ್ಲ
ನೆಟ್ಟನೆ ಠಾಣ್ಯ ರಾಹಿತರ |
ಕಟ್ಟಿಗೆಕಾರರ ಕಳಿಸಿದ ರಾಮಯ್ಯ
ತಟ್ಟನೆ ಕರೆತನ್ನಿ ಎನುತ || ೧೧ ||

ಕೇರಿಕೇರಿಯೊಳೆಲ್ಲ ಸಾರುತ ಬಂದರು
ವೀರ ಮನ್ನೆಯ ರಾಹುತರು |
ಕಾರಣಿಕದ ರಾಮ ಕರೆಯೆಂ[ದ] ಗಣತಿಗೆ
ಧೀರ ಮನ್ನೆಯರೆಲ್ಲ ಬನ್ನಿ || ೧೩ ||

ಶೃಂಗಾರವಾಗಿ ಸಂಗಡ ನಿಮ್ಮ ಮಂದಿಯ
ಶೃಂಗರಿಸಿಕೊಂಡು ಬನ್ನೆನಲು |
ನಿಲ್ಲದೆ ತಾವು ತಮ್ಮ ಮಂದಿ ಕೂಡಿಸಿಕೊಂಡು
ಉಲ್ಲಾಸದಲಿ ಬಂದರಾಗ || ೧೪ ||

ಬೂಟಕ ಬೊಮ್ಮನು ಬಂದು ಕೈಮುಗಿದನು
ಗಟ್ಟ್ಯುಳ್ಳ ಮಂದಿ ನೂರಾರು |
ದಿಟ್ಟನಿವನು ಎಂದು ಕೊಟ್ಟ ರಾಮಯ್ಯನು
ಪಟುನೂಲು ಕೊರಳಪದಕವ || ೧೫ ||

ಮನ್ನಾಲ ಮಾಚನು ಬಂದು ಕೈಮುಗಿದನು
ಇನ್ನೂರು ಆಳು ತಾ ಸಹಿತ |
ಮನ್ನೆಯ ಇವ ಬಲ್ಲಿದನೆಂದು ರಾಮಯ್ಯ
ಹೊನ್ನ ಸರಪಳಿ ಕೊಟ್ಟನವಗೆ || ೧೬ ||

ಗಡಿಯಕೋಟೆಯ ದೇವ ಬಂದು ಕೈಮುಗಿದನು
ಒಡನೆ ನೂರಾಳು ತಾ ಸಹಿ |
ಪಡೆ ಮುರಿದರೆ ಹೊಕ್ಕು ಕಡಿವನು ಇವನೆಂದು
ಕಡುಕು ಕಂಠಮಾಲೆಯ ಕೊಟ್ಟ || ೧೭ ||

ಯನುಮಾಲ ಚಿತ್ತನು ಬಂದು ಕೈಮುಗಿದನು
ಅನುವಾದ ಬಂಟರೈವತ್ತು |
ಮೊನೆಗಾರ ಇವನೆಂದು ಮೆಚ್ಚಿನ ಮಾನ್ಯಗೆ
ಕನಕಮಣಿಯನಿತ್ತನವಗೆ || ೧೮ ||

ಮರುಳೆಯ ಪಾಪನು ಬಂದು ಕೈಮುಗಿದನು
ಅರುವತ್ತು ಬಿಲ್ಲಿನ ಮಂದಿ |

ಪರಬಲಾಂತಕನಿವ ಬಲ್ಲಿದನಹುದೆಂದು
ಸರಮುತ್ತು ಚವುಕಳಿ ಕೊಟ್ಟ || ೧೯ ||

ಎರಬೋತು ಕಾಮನು ಬಂದು ಕೈಮುಗಿದನು
ಬರುಚೆಯ ಮಂದಿ ನೂರಾಳು |
ಕರೆದು ರಾಮಯ್ಯನು ಅವನಿಗೆ ಕೊಟ್ಟನು
ಬಿರಿದುಬಾವುಲಿ ಸರಪಳಿಯ || ೨೦ ||

ತುಳುವರ ಹಿರಿಯ ಬಂದು ಕೈಮುಗಿದನು
ಒಳಕಾವಲ ಮಂದಿ ಇನ್ನೂರು |
ಹಳದಿ ಬಿರಿದು ಮುತ್ತಿನೊಂಟಿಯು ಕಡೆಯವ
ಬಳಸಿ ಕೊಟ್ಟನು ರಾಮಯ್ಯ || ೨೧ ||

ನೆಲಗತ್ತಿ ತಿಪ್ಪನು ಬಂದು ಕೈಮುಗಿದನು
ಹೊಣಕೆಯ ಮಂದಿ ಇನ್ನೂರು |
ಹಳದಿ ಬಿರಿದು ಮುತ್ತಿನೊಂಟಿಯು ಕಡೆಯವು
ಬಳಸಿ ಕೊಟ್ಟನು ರಾಮಯ್ಯ || ೨೨ ||

ಕೊಟಗರ ದೇವನು ಬಂದು ಕೈಮುಗಿದನು
ಮೀಟಾದ ಮುನ್ನೂರು ಹರಿಗೆ |
ಅಟಮಟಗೊಳಿಸುವ ತುರುಕರ ಇವನೆಂದು
ಕುಟುಕು ಮುರುಡಿಯ ಸರಪಳಿಯ || ೨೩ ||

ಒಕ್ಕಲಿಗರ ಮುದ್ದ ಬಂದು ಕೈಮುಗಿದನು
ಮುಕ್ಕಣ್ಣ ಬಲ್ಲೆವು ನೂರು |
ರಕ್ಕಸಘಾತ ತುರುಕರ ಮೇಲೆ ಇವನೆಂದು
ಹೊಕ್ಕುಳಗಂಟೆಯ ಕೊಟ್ಟ || ೨೪ ||

ಮಾದಿಗ ಹಂಪನು ಬಂದು ಕೈಮುಗಿದನು
ಅವಗೆ ಐದೂರು ಉಮ್ಮಳಿಯ || ೨೫ ||

ಅಸಗೋಡ ಬಸವನು ಬಂದು ಕೈಮುಗಿದನು
ಹೊಸಕಟ್ಟಿನ ಈಟಿ ಇನ್ನೂರು |
ದೆಸೆಗೆಡಿಸುವ ತುರುಕರನೆಂದು ರಾಮಯ್ಯ
ಬಸವಗೆ ಕೊಟ್ಟ ಜವಳಿಯನು || ೨೬ ||

ಅಕ್ಕಸಾಲೆರ ಚಿಕ್ಕ ಬಂದು ಕೈಮುಗಿದನು
ಉಕ್ಕುವ ಬಾಣ ನೂರಾರು || ೨೭ ||

ಮಲೆಯ ಕಾವಲ ಕಾಟಿನಾಯಕ ಕೈಮುಗಿಯಲು
ಹಳೆಯ ಮಂದಿಯು ಮುನ್ನೂರು |
ಇಳಿದಿಹ ದಂಡಿಗೆ ಇದಿರೇರಿ ನಡೆವನು ಜ
ಗಳಕ್ಕೆ ಕೊಟ್ಟ ಉಡುಗೊರೆಯ || ೩೮ ||

ಬಾಣದ ಬಸವನು ಬಂದು ಕೈಮುಗಿದನು
ಬಾಣದ ಮಂದಿ ನೂರಾರು |
ಚೂಣಿಕಾಳಗ ಹಿಡಿವನು ಎಂದು ರಾಮಯ್ಯ
ಜಾಣ ಕೊಟ್ಟನು ಹಿಡಿಹೊನ್ನ || ೩೯ ||

ದಳಧೂಳಿ ಮಾದನು ಬಂದು ಕೈಮುಗಿದನು
ಒಳಕಾವಲ ಮಂದಿ ನೂರು |
ಅಳುಕಿ ತುರುಕರ ತಲೆಯ ತರಿವನು ಇವನೆಂದು
ಬಳೆಯ ಕೊಟ್ಟನು ರಾಮನವಗೆ || ೪೦ ||

ಬುಕ್ಕನ ಪಾಲನು ಬಂದು ಕೈಮುಗಿಯಲು
ಮುಕ್ಕಣ್ಣ ಬರುಚಿ ಮುನ್ನೂರು |
ಕಕ್ಕಸಗಾರ ಮನ್ನೆಯನೆಂದು ಇವನಿಗೆ
ಲೆಕ್ಕವಿಲ್ಲದೆ ಕೊಟ್ಟ ಹೊನ್ನ || ೪೧ ||

ಗುತ್ತಿಯ ಕಾಚನು ಬಂದು ಕೈಮುಗಿದನು
ಕತ್ತಿಗಾರಿಕೆ ನೂರಾರು |
ಕತ್ತಲೊಳಗೆ ಕಗ್ಗೊಲೆ ಬಿದ್ದು ಕಡಿವನೆಂದು
ಮುತ್ತಿನಾಭರಣವ ಕೊಟ್ಟ || ೪೨ ||

ಗುಜ್ಜಲ ಓಬನು ಬಂದು ಕೈಮುಗಿಯಲು
ಗಾಜಿನ ಮಂದಿ ಮುನ್ನೂರು |
ಹೆಜ್ಜೆಹೆಜ್ಜೆಗೆ ಡೊಳ್ಳು ಥಂಮೆಂದರಿರಿವನು
ಮಝು ಬಾಪುರಿ ಕೊಟ್ಟ ರಾಮ || ೪೩ ||

ರಕ್ಕಸ ಮಾದನು ಬಂದು ಕೈಮುಗಿದನು
ಮುಕ್ಕಣ್ಣ ಭಲ್ಲೆ ಮುನ್ನೂರು |
ಪಚಾರಿಸಿ ಖಾನರನಿಟ್ಟು ಕೆಡಹುವನೆಂದು
ಪಚ್ಚೆದ ಕಡಗವ ಕೊಟ್ಟ || ೪೪ ||

ಕುಂಬಕೋಣೆಯ ವೀರ ಬಂದು ಕೈಮುಗಿದನು
ಕಂಬಿಮರ ಬಿಲ್ಲು ಮುನ್ನೂರು |

ಅಂಬಿಗೊಬ್ಬೊಬ್ಬರ ಕೆಡಹಿ ತೋರುವನೆಂದು
ತುಂಬಿಕೊಟ್ಟನು ಜಾಳಿಗ್ಹೊನ್ನ || ४೫ ||

ಹಗ್ಲಾದ ಮಾದ ಬಂದು ಕೈಮುಗಿದನು
ಬಿಲ್ಲೊಂದು ನೂರು ಮನ್ನೆಯರು |
ಕದ್ದು ಕಗ್ಗೊಲೆಮಾಡಿ ಕುದುರೆ ತರುವನು
ಇವ ಹುಗ್ಗಿ ತುಪ್ಪಕೆ ಊರ ಕೊಟ್ಟ || ४೭ ||

ನಲ್ಲೂರ ನಲ್ಲನು ಬಂದು ಕೈಮುಗಿದನು
ತಂದು ನೂರಾಳು ಮನ್ನೆಯರು |
ಹಿಂದು ಮುಂದಾದ ಖಾನರ ಕಡಿವನುಯೆಂದು
ಚಂದ್ರಗಾವಿಯ ಬಿರಿದ ಕೊಟ್ಟ || ४೮ ||

ರಾಯದುರ್ಗದ ರಾಮ ಬಂದು ಕೈಮುಗಿದನು
ಕಾಲಸರದ ಮಂದಿ ನೂರು |
ಅವನಿಗೆ ಕೊಟ್ಟನು ಹೊನ್ನು ಜವಳಿಗಳ
ಉನ್ನತ ವಸ್ತ್ರ ಭೂಷಣವ || ४೯ ||

ಬಿರಿದು ಬಾವುಲಿ ಕೊಟ್ಟ ಕಾಲಸರವ ಕೊಟ್ಟ
ಮೇಲಾದಾಭರಣವ ಕೊಟ್ಟ || ೫೦ ||

ಎಪ್ಪತ್ತು [ಎರಡು] ಮಾನ್ಯರಿಗೆಲ್ಲ ವೀಳ್ಯವ
ತಪ್ಪದೆ ಕೊಟ್ಟನು ರಾಮ |
ಒಪ್ಪಿ ತುರುಕ [ಗೆ]ಹೆಚ್ಚಾಳ ಕಟ್ಟುವದೆಂದು
ಒಪ್ಪದಿ ಪೇಳಿದ ರಾಮ || ೫೧ ||

ಕುದುರೆಯ ಪೌಜ ಬರಹೇಳಿರೊ ರಾಹುತರು
ಒದಗಿ ಬರಲು ಬೇಗದಲಿ |
ಮದಗಜ ಹಿಂಡು ರಾಹುತರ ಬರಹೇಳೆಂದು
ಚೆದುರ ರಾಮಯ್ಯ ಪೇಳಿದನು || ೫೨ ||

ಆರೆಯ ಚಾರಮರಾಯನ ಮಕ್ಕಳು
ಸ್ವಾರಿಯ ವಾಜಿ ಸಾವಿರವು ||
ದೂರಳ ದಂಡಿನ ದಾರಿಯ ಕಾಯ್ವಂತ
ಭಾರಿಯ ವಾಜಿ ಏಳ್ನೂರು || ೫೩ ||

ದೇವಿಸೆಟ್ಟಿಯ ಲಿಂಗ ಭಾವ ಸಂಗಮದೇವ
ಜೀವರತ್ನದ ಮಲ್ಲಿದೇವ |

ಆವಾಗ ರಾಮನ ಕಾದುಕೊಂಡಿರುವಂಥ
ಕಾವಲ ವಾಜಿ ಸಾವಿರವು || ೫೪ ||

ಹಳಬಿಕೆ ತುರುಕರು ಹಂಡೆಯ ರಾಹುತರು
ಒಳಹೊಕ್ಕು ನೇಮಿ ಬರುವಾಗ |
ತಳುಹದೆ ಹೆಗಲೇರಿ ಇರಿದಿರಿದು ಕಡಿವಂಥ
ಒಳ ಲಾಯ ಕುದುರೆ ಸಾವಿರವು || ೫೫ ||

ಅಣ್ಣ ಕಾಟಣ್ಣನ ಮುಂದೆ ಕಾದುವಂಥ
ಬಣ್ಣಕೊಂದ್ವಾಜಿ ಸಾವಿರವು |
ಮುಕ್ಕಣ್ಣ ನೇಜ್ಯದ ವಾಜಿ ಒಂದೈನೂರು
ಹೊಕ್ಕುಬಂದವು ರಾಮನೆಡೆಗೆ || ೫೬ ||

ಕುದುರೆಯ ಪೌಜ ನೋಡಿದ ರಾಮನಾಥನು
ಸದರಿಗೆ ಕರೆಸಿ ರಾಹುತರ |
ಮುದದಿಂದಲವರ ಬಾಟಣೆಯ ಲೆಕ್ಕವ ಮಾಡಿ
ಚದುರ ಉಡುಗೊರೆ ವೀಳ್ಯಕೊಟ್ಟ || ೫೭ ||

ಲಕ್ಷದ ಮೇಲೆ ತೊಂಬತ್ತಾರು ಸಾವಿರ
ಲೆಕ್ಕವಾಯಿತು ಬಾಟಣೆಯು |
ಬೊಕ್ಕಸ ತೆಗೆಸಿ ಹಣವ ಕೊಟ್ಟನವರಿಗೆ
ಲಕ್ಷಾಧಿಪತಿ ರಾಮನಾಥ || ೫೮ ||

ಕರಣಿಕ ಲಿಂಗನ ಕರೆಸಿ ಕೇಳಿದನಾಗ
ಬರೆದಿರುವ ಲೆಕ್ಕವೇನಾಯ್ತು |
ಇರುವಂಥ ಲೆಕ್ಕವ ಬರೆದು ಪೇಳೆನಗೆಂದು
ಧುರಧೀರ ರಾಮ ಕೇಳಿದನು || ೫೯ ||

ಹತ್ತುಸಾವಿರ ವಾಜಿ ಮೂವತ್ತು ಸಾವಿರ ಬಲ
ಮತ್ತೆ ಆಯಿತು ಧುನ್ನೆದಾರ |
ಚಿತ್ತೈಸು ಎಂದು ಕರಣಿಕ ಮಂತ್ರಿ ಆ ಕ್ಷಣ
ಒತ್ತಿ ಮಾಡಿದನು ಬಿನ್ನಪವ || ೬೦ ||

ಸಾಲದು ಪೌಜಿನ್ನು ಹೇಳುವ ಮಾತೇನು
ನಾಳೆ ಸುರಿತಾಳ ಬರುತಾನೆ |
ಕಾಳಗದೊಳು ಅವನ ಮಡುಹದಿದ್ದರೆ ನಮಗೆ
ದಾಳಿ ತಪ್ಪುವುದೆ ಬೈಚಪ್ಪ || ೬೧ ||

ಲಕ್ಷ ಮಂದಿಯು ವಾಜಿ ಮೂವತ್ತು ಸಾವಿರವ
ಸುಕ್ಷೇಮದಲಿ ನೀನು ಕಟ್ಟೊ |
ಶಿಕ್ಷೆ ನೇಮಿಯ ಕೊಲ್ಲದಿರ್ದಡೆ ನಮಗೆಯು
ಅಕ್ಷಯವಿಲ್ಲೆಂದನಾಗ || ೬೧ ||

ಕರೆದು ರಾಹುತರ ಕರ್ಪೂರ ವೀಳ್ಯವ ಕೊಟ್ಟು
ಉಡುಗೊರೆಗಳನು ಮಾಡಿದನು |
ಮರೆಯಬೇಡಿರಿ ಹೆಚ್ಚು ಮಂದಿ ಕುದುರೆಯನು
ಕರೆಸೆಂದು ರಾಮ ಹೇಳಿದನು || ೬೩ ||

ಮನ್ನೆಯರ ಕರೆದನು ಮನ್ನಣೆಯಲಿ ರಾಮ
ಇನ್ನು ಹೆಚ್ಚಾಳ ಕಟ್ಟೆಂದ |
ಮನ್ನಿಸಿ ಅವರನು ಮನೆಗೆ ಅಪ್ಪಣೆ ಕೊಟ್ಟು
ಆಗ ಲಿಂಗನ ಕರೆಸಿದನು || ೬೪ ||

ಬೈಗಿನ ಸರದಿಗೆ ಬಂದಾನು ರಾಮಯ್ಯ
ಮೈಗಾವಲು ಮಂದಿ ಸಹಿತ |
ಬೇಗ ಬೈಚಪ್ಪನ ಕರೆತರ ಹೇಳಿದ
ಆಗ ಲಿಂಗನ ಕರೆಸಿದನು || ೬೫ ||

ಬಂದು ಬೈಚಪ್ಪನು ವಂದನೆಯನು ಮಾಡಿ
ನಿಂದು ಕರಂಗಳ ಮುಗಿದು
ತಂದೆ ಕಂಪಿಲರಾಯ ಹೊರಟು ಬಂದನು ಬೇಗ
ಹೊಂದಲೈದರು ಎಲ್ಲ ಆಗ || ೬೬ ||

ಅಪ್ಪನ ಪಾದಕ್ಕೆ ಬಿದ್ದನು ರಾಮಯ್ಯ
ಒಪ್ಪದಿ ಮಗನ ಎತ್ತಿದನು |
ಮುಪ್ಪಿನವರು ನಾವು ರಾಜ್ಯದ ಭಾರವ
ಒಪ್ಪಿಸಿದೆನು ರಾಮ ನಿನಗೆ || ೬೭ ||

ಪಟ್ಟಾಭಿಷೇಕ ರಾಮಯ್ಯಗಾಯಿತು ಎಂದು
ಪಟ್ಟಣದ ಪ್ರಜೆಗಳು ತಾವು |
ಶೆಟ್ಟಿ ಮಾನ್ಯಯರುಗಳು ಗೌಡ ಒಕ್ಕಲುಗಳು
ಪಟ್ಟದುಡುಗೊರೆ ತಂದರಾಗ || ೬೮ ||

ಬನ್ನಿ ಕುಳ್ಳಿರಿ ಎಂದು ಮನ್ನಿಸಿದ ರಾಮ ಹಾ
ಗೆನ್ನಲು ಪ್ರಜೆಗಳು ಬಂದು |

ಹೊನ್ನು ಕಾಣಿಕೆ ಉಡುಗೊರೆ ಕೊಟ್ಟು ರಾಮಗೆ
ಮನ್ನಣೆಯಲಿ ಕುಳಿತರಾಗ || ೬೯ ||

ಬಂದ ಪ್ರಜೆಗಳಿಗೆಲ್ಲ ವಂದಿಸಿ ರಾಮಯ್ಯ ನಿ
ಮ್ಮಿಂದ ಎಮ್ಮಯ ದೊರೆತನವು |
ಮುಂದೆ ನಿಮ್ಮ ಕಾದು ನಡೆಸುವೆ ನಾನೆಂದು
ಗಂಧ ವೀಳ್ಯವ ಕೊಡಿಸಿದನು || ೭೦ ||

ಕರೆದನು ತನ್ನಯ ಮಂತ್ರಿ ಬೈಚಪ್ಪನ
ಬರೆಸೊ ವಾಲೆಗಳ ನೀನೆಂದ |
ಬರಮಾಡೊ ಸುತ್ತಣ ರಾಜ್ಯದ ಗೌಡರ
ಕರೆಸಯ್ಯ ನಾಡಿಗರನೆಂದ || ೭೧ ||

ದೊರೆ ರಾಮ ಹೇಳಿದ ವಾಕ್ಯವ ಕೇಳುತ
ಬರೆಸಿದ ವಾಲೆ ಉತ್ರಗಳ |
ಬರಹೇಳಿ ಸುತ್ತಣ ಸೀಮೆ ಗೌಡರನೆಲ್ಲ
ಇರದೆ ಕರೆಸಿದನು ಮಂತ್ರೀಶ || ೭೨ ||

ಹುಕ್ಕೇರಿ ಸೀಮೆಯ ಒಕ್ಕಲು ಗೌಡರು
ಲೆಕ್ಕದ ಕುಲರಣಿಕರು |
ಒಕ್ಕುಳ ಹೊನ್ನುಡುಗೊರೆ ಹಣ್ಣು ಫಲ ತಂ
ದಿಕ್ಕಿ ರಾಮಗೆ ಕೈಮುಗಿಯೆ || ೭೩ ||

ಇಕ್ಕೇರಿ ಸೀಮೆಯ ನಾಡಿಗ ಗೌಡರು ಬಂದು
ಲಕ್ಷ ಹನ್ನೊಂದು ಸಾವಿರವು || ೭೪ ||

ಕಲ್ಯಾಣ ಕಲುಬುರುಗಿ ಸೀಮೆಯ ಗೌಡರು
ಎಲ್ಲಾ ಸೀಮೆಯ ನಾಡಿಗರು |
ಉಲ್ಲಾಸದಿಂದ ಐದು ಲಕ್ಷ ಹೊನ್ನನು
ಭೂವಲ್ಲಭ ರಾಮಯ್ಯನೆಡೆಗೆ || ೭೫ ||

ಸಗರದ ಸೀಮೆಯ ಶೆಟ್ಟಿಯು ಪ್ರಜೆಗಳು
ಸೊಗಸಿಂದ ಗೌಡ ಕರಣಿಕರು || ೭೬ ||

ತಂದರು ಐದು ಲಕ್ಷ ಹೊನ್ನನುಡುಗೊರೆಯ
ಬಂದರು ರಾಮಯ್ಯನೆಡೆಗೆ |
ಮುಂದಿಟ್ಟು ಕೈಮುಗಿದು ರಾಮಯ್ಯನಾಥಗೆ
ಮುಂದೆಮ್ಮ ಸಲಹಬೇಕೆಂದು || ೭೭ ||

ತೊರಗಲ್ಲು ಬಾದಾವಿ ಸೀಮೆಯ ಗೌಡರು
ಮರಿ[ಗೌಡ] ಮನ್ನಿನ ಮುದಿಗೌಡ |
ಹರುಷದಿ ಎರಡು ಸಾವಿರ ಹೊನ್ನು ಉಡುಗೊರೆ
ಬಿರುದಾಂಕ ರಾಮನ ಮುಂದೆ || ೭೮ ||

ಸೀರೆದ ಸೀಮೆಯ ಗೌಡರು ಬಂದರು
ಸಾರನಗೌಡ ನಾಗಗೌಡ |
ಆರು ಲಕ್ಷ ಹೊನ್ನ ಉಡುಗೊರೆ ಫಲಗಳ
ದೊರೆಗಳ ಪಟ್ಟಗಾಣಿಕೆಯು || ೭೯ ||

ಬಸವಪಟ್ಟದ ಸೀಮೆ ಗೌಡರು ಬಂದರು
ಹಸುಮಗ ಮುದ್ದನಗೌಡ |
ಹೊಸಗಾಣಿಕೆ ಐವತ್ತು ಸಾವಿರ ಹೊನ್ನು
ಅಸಮ ಬಲಗೆ ಒಪ್ಪಿಸಿದರು || ೮೦ ||

ಆದವನ್ನಿಯ ಸೀಮೆ ರಡ್ಡಿ ಕರಣಿಕರು
ಒದಗಿ ಬಂದರು ಕುಮ್ಮಟಕೆ |
ಹದಿನೆಂಟು ಸಾವಿರ ಹೊನ್ನ ಮೋಹರುಗಳ
ಮುದದಿ ಮುಂದಿಟ್ಟು ಉಡುಗೊರೆಯ || ೮೧ ||

ಉಮ್ಮಳಿದಾರರು ಪುರವರ್ಗದವರೆಲ್ಲ
ಗಮ್ಮನೆ ತಾವೆಲ್ಲ ಕೂಡಿ |
ಒಮ್ಮನ ಹೊನ್ನು ಉಡುಗೊರೆಗಳ ತಂದರು
ಇಮ್ಮಡಿ ರಾಮಗೆ ಕೊಟ್ಟು || ೮೨ ||

ಬಂದವರನ್ನೆಲ್ಲ ಮನ್ನಿಸಿ ರಾಮಯ್ಯ
ಬಂದವರನೆಲ್ಲ ಕಳುಹಿದನು |
ಚೆಂದದಿ ಉಡುಗೊರೆಗಳ ಕೊಟ್ಟು ರಾಮಯ್ಯ
ನಂದು ಕಳುಹಿದನವರುಗಳ || ೮೩ ||

ತಂದೆಯ ಪಾದಕ್ಕೆ ವಂದಿಸಿ ರಾಮಯ್ಯ
ಬಂದನು ತನ್ನರಮನೆಗೆ |
ಬಂದಂಥ ಹೊನ್ನನು ಮುಂದಿಟ್ಟು ರಾಮಯ್ಯ
ಮಂದಿರಗಳನೊಳಪೊಕ್ಕ || ೮೪ ||

ಗುತ್ತಿಯನಾಳ್ವ ಜಗದಪ್ಪರಾಯನು ಕೇಳಿ
ಉತ್ರ ಉಡುಗೊರೆಯ ಕಳುಹಿದನು |

ಇತ್ತ ಚಾರರು ಓಡಿಬಂದು ರಾಮಯ್ಯಗೆ
ಮತ್ತೆ ಸುದ್ದಿಯನು ಪೇಳಿದರು || ೮೫ ||

ಕರೆಸಿದ ಬಂದ ಹೇಜಿಬರ ರಾಮಯ್ಯ
ಹರುಷದಿ ಕೇಳಿದನವರ |
ದೊರೆ ಜಗದಪ್ಪ ಕ್ಷೇಮವೆ ನಮ್ಮ ಮಾವಾಜಿ
ಇರುವನೆ ಸಂತೋಷದಲ್ಲಿ || ೮೬ ||

ಬಂದ ಕಾರ್ಯಗಳೇನು ಇಂದ್ಯಾಕೆ ಕಳುಹಿದ
ನೆಂದು ರಾಮಯ್ಯ ಬೆಸಗೊಳಸಲು |
[ಹಿಂ]ದುವ ರಾಯ ನಿಮ್ಮ ಪಟ್ಟವಾಯಿತೆಂಬ ಆ
ನಂದವ ಕೇಳಿ ಕಳುಹಿದನು || ೮೭ ||

ಪಟ್ಟದ ಉಡುಗೊರೆ ಪೆಟ್ಟಿಗೆ ಬಂಗಾರ
ಸೃಷ್ಟೀಶ ಕಂಪಿಲದೊರೆಗೆ |
ಪಟ್ಟಪಟ್ಟಾವಳಿ ಮುತ್ತಿನಾಭರವಣ
ಕೊಟ್ಟು ಕಳುಹಿದನು ರಾಮಯ್ಯ || ೮೮ ||

ಮಗಳು ರಾಮಕ್ಕಗೆ ಮುತ್ತಿನಾಭರಣವು
ಮಿಗಿಲಾದ ಜೀಬಿ ನಾಣ್ಯಗಳು |
ಬಗೆಮಾಡಿ ಐದೂರು ಉಮ್ಮಳಿಯನು ಕೊಟ್ಟ
ಜಗದಪ್ಪರಾಯ ರಾಮಯಗೆ || ೮೯ ||

ಬಂದವರ ಮನ್ನಿಸಿ ಒಂದಡುಗೊರೆ ಕೊಟ್ಟು
ಒಂದೊಂದು ಸಾವಿರ ಹೊನ್ನ |
ಅಂದು ಕೊಟ್ಟರು ರಾಮಗೆ ಉಡುಗೊರೆ ಕೊಟ್ಟು
ಬಂದವರ ಬೇಗ ಕಳುಹಿದನು || ೯೦ ||

ಇದು ಪರನಾರಿ ಸೋದರ ರಾಮನಾಥನ
ಪದಕೃತಿಯೊಳಗೆ ಮೇಲ್ಗತೆಯ |
ವಿದಿತ ಈಶ್ವರನ ದರುಶನ ಮಾಡುವ
ಸಂಧಿ ಪದ ಮುಂದೆ ಸಂಪೂರ್ಣ || ೯೧ ||

**ಅಂತು ಸಂಧಿ ೨೨ಕ್ಕಂ ಪದನು ೨೪೦೮ಕ್ಕಂ ಮಂಗಳ ಮಹಾಶ್ರೀ**

# ಸಂಧಿ ೨೩ - ಜಟ್ಟಂಗಿ ರಾಮೇಶ್ವರನ ದರ್ಶನ

ಶ್ರೀ ಗಿರಿಜಾ[ಸ್ಯಾಂಬುಜ ದಿನ]ನಾಯಕ
ಭೋಗಿಭೂಷಣ ಭಾಳನೇತ್ರ |
ಭಾಗೀರಥಿಧರ ಭವರೋಗವೈದ್ಯನೆ
ನಾಗ[ಕುಂಡಲ] ಶರಣೆಂಬೆ || ೧ ||

ಉದಯದೊಳೆದ್ದು ವಂದಿಸಿ ಜಟ್ಟಿಂಗೀಶಗೆ
ಚೆದುರ ರಾಮಯ್ಯ ಕೈಮುಗಿದ |
ಒದಗಿ ತಾನೆದ್ದು ಮುಖ ಮಜ್ಜನಂಗಳ ಮಾಡಿ
ಕದುಬಿದ ಸಣ್ಣ ನಾಮನವನು || ೨ ||

ಪಟ್ಟಸಾಲಿಗೆ ಹೊರಟುಬಂದನು ರಾಮಯ್ಯ
ಕಟ್ಟಿಗೆಕಾರರ ಕರೆಸಿ |
ನೆಟ್ಟನೆ ಹೋಗಿ ಬೈಚಪ್ಪನ ಕರೆಯಿರೊ ಎಂ
ದಟ್ಟಿದ ಸೃಷ್ಟೀಶ ರಾಮ || ೩ ||

ಚರರೋಡಿ ಬಂದು ಬೈಚಪ್ಪಗೆ ಕರೆದರು
ಬರಬೇಕು ಮಂತ್ರೀಶ ಬೇಗ |
ದೊರೆ ರಾಮ ಶೀಘ್ರದಿ ಕರೆತರ ಹೇಳಿದ
ಅರಿಕೆ ಮಾಡಿದೆವಯ್ಯ ಮಂತ್ರಿ || ೪ ||

ಬಂದನು ಬೇಗದೊಳಗೆ ಬೈಚಪ್ಪನು
ನಿಂದನು ರಾಮನ ಹುಜರ |
ಇಂದಿನ ಪಯಣವ ಪೇಳೆಂದು ರಾಮಯ್ಯ
ಚಂದ್ರಶೇಖರನ ದರುಶನಕೆ || ೫ ||

ಮೃತ್ಯುಂಜಯನ ದರುಶನಕೆ ಹೋಗಲಿಬೇಕು
ಸತ್ಯವಂತನೆ ಬೈಚಪ್ಪ |
ಮತ್ತೆ ಹಾಕಿಸಬೇಕು ಮೋಪನಾಕ್ಷಣದಲ್ಲಿ
ಅರ್ತಿಲಿ ಉಂಡುಟ್ಟು ಬರಬೇಕು || ೬ ||

ಅಪ್ಪನ ಕೂಡಿನ್ನು ಹೇಳಯ್ಯ ಈ ಮಾತ
ಅಪ್ಪಣೆ ತೆಕ್ಕೊಳ್ಳೊ ಬೇಗ |
ಮುಪ್ಪುರವ ಗೆಲಿದ ಜಟ್ಟಂಗಿ  ರಾಮೇಶಗೆ
ಒಪ್ಪದಿ ಪಯಣಮಾಡೆಂದ || ೭ ||

ತಂದೆ ಮಕ್ಕಳು ನಾವು ವಂದಿಸಿ ಸ್ವಾಮಿಗೆ
ಕಂದುಗೊರಳ ಪರಶಿವಗೆ |
ಇಂದು ನಾವೀಗ ಕುಟುಂಬ ಜಾತ್ರೆಗಳನು
ವೊಂದಿಲಿ ತೆರಳಬೇಕೆಂದ || ೮ ||

ರಾಮು ಹೇಳಿದ ಸುದ್ದಿ ಕೇಳುತ ಬೈಚಪ್ಪ
ಆ ಮಹಾ ಸಂತೋಷದಲ್ಲಿ |
ಭೂಮೀಶರಾಯ ಕಂಪಿಲನ ಬಳಿಗೆ ಬಂದು
ಪ್ರೇಮವನುಸುರಿದ ಬೇಗ || ೯ ||

ಮಂತ್ರಿಯ ಮಾತನು ಕೇಳುತ ಕಂಪಿಲ
ಸಂತೋಷ ಅತಿ ಹರುಷದಿಂದ || ೧೦ ||

ಅಕ್ಕಿ ಬೇಳೆಯು ಗೋದಿಹಿಟ್ಟು ಸಂಬಾರವು
ಸಕ್ಕರೆ ಹೇರು ಬೆಲ್ಲವನು |
ಮುಕ್ಕಣ್ಣ ಹರನ ನೈವೈದ್ಯಕೆ ಬೇರೆ ಸ
ಣ್ಣಕ್ಕಿ ಹೇರುಗಳನು ಹೊಡಸೊ || ೧೧ ||

ಆದ ಅಡಕೆ ಬಿಳಿಯೆಲೆ ಕರ್ಪುರಗಳ
ಮಾದಾಳ ಖರ್ಜೂರಫಲವು || ೧೨ ||

ಹಾಲುಮೊಸರಿಗೆ ನಮ್ಮ ಕಂಪಳಕೆ ಹೇಳಿರೊ
ಆಲೆ ರಸದಾಳಿ ಕ್ಷೀರವನು |
ಸಾಲಿಟ್ಟು ಕೊಡಗಳ ಕಳುಹಿದನು ಮಂತ್ರೀಶ
ಆಲಸ್ಯ ಬೇಡವೊ ನಡೆಯೊ || ೧೩ ||

ಬೊಕ್ಕಸದೊಳು ಹೊಕ್ಕು ಕಟ್ಟಿಸೊ ಜವಳಿಯ
ರೊಕ್ಕ ಹೊನ್ನುಗಳ ತೆಕ್ಕೊಳ್ಳೊ |
ಮುಕ್ಕಣ್ಣನಿಗೆ ಪಾದಗಾಣಿಕೆ ಮಾಡುವೆನು
ಲೆಕ್ಕದ ಮೇಲೆ ತರಿಸಯಯ || ೧೪ ||

ತೆರಳಿ ಬಂದನು ಮಂತ್ರಿ ಬೈಚಪ್ಪ ಚಾವಡಿಗೆ
ಭರದಿಂದ ಬಂದು ಕುಳಿತನು |
ಕರೆಸಿದ ಕಟ್ಟಿಗೆಯವರ ಕಾಮಾಟದ
ಪರಿವಾರದವರನು ಬೇಗ || ೧೫ ||

ಬಂದು ಕಟ್ಟಿಗೆಯವರು ನಿಂದು ಕೈವ ಗಿಯಲು
ಇಂದುಶೇಖರನ ಬೆಟ್ಟಕ್ಕೆ |

ಮುಂದಾಗಿ ತೆರಳಿ ನೀವೋಪ [ಸಾ]ಗಿಸಿಕೊಂಡು ಹೋ
ಗೆಂದು ಹೇಳಿದನು ಬೈಚಪ್ಪ || ೧೬ ||

ಹತ್ತು ಖಂಡುಗ ಹೇರು ಅಕ್ಕಿಯ ತುಂಬಿರೊ
ಮತ್ತೈದು ಖಂಡುಗ ಬೇಳೆ |
ಮುತ್ತಿನ ಸರದ ಸಣ್ಣಕ್ಕಿಯು ಸಹವಾಗಿ
ಮತ್ತೆ ತುಂಬಿಸಿರೊ ಬೇಗದೊಳು || ೧೭ ||

ಪುನಗು ರಾಜಾನ್ನವು ಗಿಣಿಮೂಗಿನಕ್ಕಿಯ
ಕಣಕದ ಹೇರೊಂದು ನೂರು || ೧೮ ||

ಬೆಲ್ಲದ ಹೇರು ಐವತ್ತು ಬೇಳೆಯ ಹೇರು
ಕಲ್ಲುಸಕ್ಕರೆ ಹೇರೊಂದ್ಶೈದು |
ಎಲ್ಲ ಉಗ್ರಾಣದೊಳು ತುಂಬಿಸಿಕೊಂಡರು ಬೇಗ
ನಿಲ್ಲದೆ ತೆರಳಬೇಕೆಂದ || ೧೯ ||

ತುಪ್ಪದ ನಗಗಳು ಐವತ್ತು ಆಗಲೆ
ಇಪ್ಪಿಯ [ಹ] ಣ್ಣೇರು ಹತ್ತೆಂಟು |
ಕಡಲೆಯ ಹೇರು ಹುರುಳಿಯ ಹೇರು ಇನ್ನೂರು
ಬಿಡಬ್ಯಾಡಿ ಬಿದಿರ ಅಕ್ಕಿಯನು || ೨೦ ||

ಅರಿಷಿಣ ಶುಂಠಿ ಮೆಣಸು ಕೊಬ್ಬರಿಯ ಹೇರು
ಪರಿಪರಿ ಸಂಬಾರದ್ಹೇರು |
ಅರಮನೆ ಎತ್ತು ಸಾವಿರ ನಡೆಯಿತು
ಗಿರಿಯ ಜಟ್ಟಂಗೀಶ್ವರಗೆ || ೨೧ ||

ಅಡಿಯಿಟ್ಟು ನಡೆಯಿತು ಐದುಸಾವಿರ ಬಲ
ಹಡಪದ ಬಲ್ಲುಗ ಸಹಿತ || ೨೨ ||

ಬಂದನು ರಾಮಯ್ಯ ತಂದೆ ಪಾದಕೆ ಬಿದ್ದು
ವಂದನೆಮಾಡಿ ಕೈಮುಗಿದು |
ಸಂದೇಹವ್ಯಾತಕೆ ತೆರಳಬೇಕೆಂದನು
ಚೆಂದದಿ ತಾಯಿ ಕೂಡೆ || ೨೩ ||

ತೆಗೆದಪ್ಪಿ ಮಗನ ಮುದ್ದಾಡಿ ತಾ ಹೇಳಿದ
ಜಗದಪ್ಪರಾಯ ಮಾವನಿಗೆ |
ಝುಗಝುಗಿಸುವ ಜೀಬಿ ನಾಣ್ಯವ ಕಟ್ಟಿಸಿ
ಸೊಗಸಿಂದ ಕಳುಹೊ ರಾಮಯ್ಯ || ೨೪ ||

ತಂದೆ ತಾಯಿಗಳ ಹೊನ್ನಂದಣವನೇರಿಸಿ
ತಂದರು ಬೇಗದೊಳವರ |
ಜಗದಪ್ಪರಾಯಗೆ ಉಡುಗೊರೆಯನು ಕಟ್ಟಿ
ಅಗಣಿತವಾದ ವಸ್ತ್ರಗಳ || ೧೫ ||

ಪಲ್ಲಕ್ಕಿ ಪಲ್ಲಕ್ಕಿ ಸಾಲಿಟ್ಟು ನಡೆದವು
ನಿಲ್ಲದೆ ಕಂಪಿಲನೆಡೆಗೆ |
ಹಿರಿಯ ಸೊಸೆ ಕಂಚಲವ್ವನ ಕರೆಸಿದ
ಅರಸು ಮಕ್ಕಳ ಹೆಮ್ಮಕ್ಕಳನು || ೧೬ ||

ಇಂದುಶೇಖರ ಪೊಂಪಾಪತಿಗಳ ಗುಡಿಗಾಗಿ
ಬಂದು ಇಳಿದರು ಬೇಗದಲಿ |
ಸ್ನಾವ ಮಾಡಿ ಮಡಿಯನುಟ್ಟು ಎಲ್ಲರು
ಗ್ಯಾನದಿ ವಿರೂಪಾಕ್ಷನ ಗುಡಿಗೆ || ೧೭ ||

ಬಂದಡ್ಡಬಿದ್ದು ಕಾಣಿಕೆಯಿಕ್ಕಿ ಹಿಡಿಹೊನ್ನ
ಗಂಧ ಪ್ರಸಾದ ಕೈಕೊಂಡು |
ಅಂದಲ್ಲಿ ನಿಂತು ಪರುವಮಾಡಿ ಜಂಗಮಕೆ
ಚೆಂದದಿ ಕಂಪಿಲರಾಯ || ೧೮ ||

ಲಕ್ಷ ಬ್ರಾಹ್ಮರಿಗೆ ಸಮಾರಾಧನೆ ಮಾಡಿಸಿ
ದಕ್ಷಿಣೆ ತಾಂಬೂಲವಿತ್ತು |
ಲಕ್ಷಾಧಿಪತಿ ಕಂಪಿಲರಾಯ ಮನ್ನಿಸಿ ಮಂ
ತ್ರಾಕ್ಷತೆ ಕೈಕೊಂಡನಾಗ || ೧೯ ||

ಎಲ್ಲರು ಉಂಡುಟ್ಟು ಸಂತಸದಲಿ ಕಂಪಿಲ
ನಿಲ್ಲದೆ ಹೊರಟನು ಬೇಗ |
ಅಲ್ಲಿಂದ ಕಂಪಿಲ [ಸೋ]ಮೇಶಗೆ ಬಂದನು
ಬಲ್ಲಿದ ರಾಮಯ್ಯ ಸಹಿತ || ೨೦ ||

[ಸೋ]ಮೇಶ್ವರನ ಪೂಜೆಯ ಮಾಡಿ ಕಂಪಿಲ
ಆ ಮಹಾಪರುವ ಮಾಡಿಸಿದ |
ಪ್ರೇಮದಿ ಹಿಡಿಹೊನ್ನ ಕಾಣಿಕೆಗಳನಿಟ್ಟು
ಕ್ಷೇಮದಿ ಹೊರಟನಲ್ಲಿಂದ || ೨೧ ||

ಪಲ್ಲಕ್ಕಿನೇರಿದ ಕಂಪಿಲರಾಯನು
ನಿಲ್ಲದೆ ಹೊರಟ ಬೇಗದಲಿ |

ಜಟ್ಟಂಗಿರಾಮನ ಬಲ್ಲಿದ ಗಿರಿಯ
ಕೆಳಗೆ ಉಲ್ಲಾಸದಿಂದ ಬಂದು ಇಳಿದ || ೩೧ ||

ಬಿಟ್ಟರು ದಂಡೆಲ್ಲ ಕಟ್ಟಿತು ಗುಡಿಗಳ
ನೆಟ್ಟನೆ ಸಾಲು ಪಾಳೆಯವ |
ಹುಟ್ಟಿತು ಬೀದಿ ಬಾಜಾರ ಅಂಗಡಿಸಾಲು
ನೆಟ್ಟನೆ ಗಿರಿಯ ಮಧ್ಯದಲಿ || ೩೩ ||

ದೇವಸಮುದ್ರವೆಂಬುವದೊಂದು ಕರೆಯುಂಟು
ಬಾವಿ ಪೂದೋಟ ವನವುಂಟು |
ಕಾವಲ ಮಲೆಯುಂಟು ಕಸ್ತೂರಿಮೃಗವುಂಟು
ದೇವನ ಗಿರಿಯ ಮಧ್ಯದಲಿ || ೩೪ ||

ಎಲ್ಲರು ಅಭ್ಯಂಗಸ್ನಾನವ ಮಾಡಿದರು
ನಿಲ್ಲದೆ ಗಿರಿಯನೇರಿದರು |
ಮಲ್ಲಿಕಾರ್ಜುನ ಜಟ್ಟಂಗೀಶನ ಗುಡಿಗಾಗಿ
ನಿಲ್ಲದೆ ಕಂಪಿಲ ಬಂದ || ೩೫ ||

ಕಲರು ಬಂದಡ್ಡಬಿದ್ದು ಕಾಣಿಕೆಯಿಟ್ಟು
ಅಕಳಂಕ ಮಹಿಮನ ಭಜಿಸಿ |
ಭಕ್ತಿಲಿ ಹಣ್ಣುಫಲಗಳಿಂದ ಪೂಜಿಸಿ
ಮುಕ್ತಿಪದವ ಬೇಡಿಕೊಂಡು || ೩೬ ||

[ಪಂಚಾ]ಭಿಷೇಕವ ಮಾಡಿಸಿ ರಾಮಯ್ಯ
ಪಂಚಭಕ್ಷವು ಪರಮಾನ್ನ |
ಪಂಚಮುಖನು ಪರಮಾತ್ಮಗೆ ಒಪ್ಪಿಸಿ
ಪಂಚಾರತಿಗಳ ಬೆಳಗಿ || ೩೭ ||

ಲಕ್ಷ ಸಮರಾಧನೆಯನು ಮಾಡಿಸಿ
ದಕ್ಷಿಣೆ ಕೊಟ್ಟು ಬ್ರಾಹ್ಮರಿಗೆ |
ಲಕ್ಷ ಜಂಗಮಕೆ ಭೋಜನವನು ಮಾಡಿಸಿದ
ಲಕ್ಷಾಧಿಪತಿ ಕಂಪಭೂಪ || ೩೮ ||

ಬಂದಂಥ ಗುರಿಕಾರ ಎಕ್ಕಟಿಗಾರರು
ವೊಂದಿನ ಹಳೆಯ ರಾಹುತರು |
ಮಂದಿ ಮಕ್ಕಳು ಮನ್ನೆಯರ ವಿನಿಯೋಗಕ್ಕೆ
ಸಂಧಿಸು ಪಡಿ ರೋಜುಗಳ || ೩೯ ||

ಕರಣಿಕ ಲಿಂಗಗೆ ಕರೆದು ಹೇಳಿದ ರಾಮ
ದೊರೆ ಮಕ್ಕಳಿಗೆ ಉಲುಪೆಯನು |
ನೆರೆದಂಥ ಜನರು ಪರಿವಾರವೆಲ್ಲಕೆ ನೀನು
ಕರೆಕೊಂಡು ಹೋಗೆಂದನಾಗ || ೪೦ ||

ಹರಿಯಮ್ಮ ಮಾಡಿದಳು ಪರಿಪರಿ ಪೂಜೆಯ
ನೆರೆದು ಹೆಮ್ಮಕ್ಕಳು ಸಹಿತ |
ದೊರೆತನ ರಾಮಗೆ ಸ್ಥಿರವು ಆಗಲಿಯೆಂದು
ಹರಕೆಯ ಬೇಡಿದಳಂದು || ೪೧ ||

ಒಂದೆರಡು ದಿನವಿರ್ದು ಮೂರನೆ ದಿನದಲ್ಲಿ
ಬಂದರು ಕುಮ್ಮಟವಾಗಿ |
ಗಂಧ ಪ್ರಸಾದವ ಕೈಕೊಂಡು ರಾಮಯ್ಯ
ಒಂದ ನೆನೆಸಿದ ಮನದೊಳಗೆ || ೪೨ ||

ನರಜಲ್ಮದೊಳಗೆನ್ನನೇಕೆ ಪುಟ್ಟಿಸಿದಯ್ಯ ಈ
ದೊರೆಯ ಗರ್ಭದೊಳು ನಾ ಜನಿಸಿ |
ಧರಿಸಿದ ಬಿರಿದ ದಕ್ಕಿಸಿ ರಣರಂಗದಿ
ಕರೆದೊಯ್ಯಬೇಕೆನ್ನ ನೀನು || ೪೩ ||

ಎಂದಿದ್ದರೀ ಕಾಯ ಎನಗೆ ನಂಬುಗೆಯಿಲ್ಲ
ಕಂದನ ಮೇಲೆ ದಯಮಾಡೊ |
ಸಂದೇಹವಿನ್ಯಾಕೆ ನಿಮ್ಮ ಸಮೀಪಕ್ಕೆ
ಎಂದಿದ್ದರೆ ಬರಬೇಕು || ೪೪ ||

ಅತಿ ಬೇಡಿಕೊಂಡ ಭಾವಕ್ಕೆ ತಾ ಶಿವ ಮೆಚ್ಚಿ
ಇತ್ತನು ಬೇಡಿದ ವರವ |
ನೆತ್ತಿಯಳಿರ್ದ ಮಲ್ಲಿಗೆಯ ಪುಷ್ಪಂಗಳ
[ಭೃತ್ಯ]ರಾಮಯ್ಯಗೆ ಕೊಟ್ಟ || ೪೫ ||

ಕೊಟ್ಟ ಪ್ರಸಾದವ ಕೈಕೊಂಡು ರಾಮಯ್ಯ
ಇಟ್ಟನು ಮಂಡೆಯೊಳೊಲಿದು |
ಧೀರ ರಾಮಯ್ಯ ತಾನೆಲ್ಲರನೊಡಗೊಂಡು
ಸೃಷ್ಟೀಶ ಹೊಕ್ಕ ಕುಮ್ಮಟವ || ೪೬ ||

ಬಂದನು ಕಂಪಿಲವೊಂದಿಲಿ ರಾಮಯ್ಯ
ನಿಂದು ಹಜಾರದೊಳ್ ತಾವು |

ಮಂದಿ ಮಕ್ಕಳನೆಲ್ಲ ಮನೆಗೆ ಅಪ್ಪಣೆಕೊಟ್ಟು
ಅಂದುಹೊಕ್ಕನು ಅರಮನೆಯ || ೪೭ ||

ಉದಯದೊಳೆದ್ದು ವಂದಿಸಿ ತಂದೆ ತಾಯಿಗೆ
ಮದಗಜದಾನೆ ರಾಮಯ್ಯ |
ಮುದದಿಂದ ಕೇಳಿ ಬಿನ್ನೈಸುವೆ ನಾ ನನ್ನ
ಹೃದಯದ ಅಂತರಂಗವನು || ೪೮ ||

ಇಷ್ಟು ಕುದುರೆ ಮಂದಿ ನಿಲಿಸಿದನೆಂಬಂತೆ
ಸಿಟ್ಟು ಮಾಡಲಿಬೇಡ ಭೂಪ |
ಪಟ್ಟಾಭಿರಾಮನ ಮಾಡಿದೆ ಜಗದೊಳು
ಮುಟ್ಟುವುದು ಡಿಳ್ಳಿಗೆ ಸುದ್ದಿ || ೪೯ ||

ಸುರಿತಾಳನ ಮಗಳು ತನಗಾಗಬೇಕೆಂದು
ಕುರುಹು ನೇಮದಿ ತಾನಿಹಳೊ |
ಪರಿಪರಿ ವಿಧದಿಂದ ತಂದೆಗೆ ಪೇಳುವಳು
ತರಿಸು ರಾಮನ ಎಂಬುವಳು || ೫೦ ||

ಹಿಡಿಯಾಳ ಮಾಡಿ ಹಿಡಿತರಿಸೆಂದು ಪೇಳಿದಳು
ಬಿಡದೆ ಬಾಹನು ನೇಮಿ ತಾನು |
ಕಡೆಯ ಮಾತೇನು ನೇಮಿಯ ನುಂಗಿದಿರ್ದರೆ
ಬಿಡದು ಮುಂದಣ ರಾಜಕಾರ್ಯ || ೫೧ ||

ಪರನಾರಿ ಸಹೋದರನೆಂಬ ಬಿರಿದನು
ಧರಿಸಿದೆ ಕಾಲೊಳು ನಾನು |
ಮರೆಯ ಮಾತೇನು ದಕ್ಕಿಸಿಕೊಂಬಂಥದು
ಸರಸಿಜಭವ ತಾನೆ ಬಲ್ಲ || ೫೨ ||

ಇಂದಿನ ಮಾತಲ್ಲ ಬಂದವು ಕಾರ್ಯವು
ಮುಂದಣ ತಾಗುಬಾಗುಗಳು || ೫೩ ||

ಅಪ್ಪಣೆ ಕೇಳಿ ತನ್ನರಮನೆಗೆ ಬಂದನು
ಒಪ್ಪದಿ ಸತಿಯರು ಸಹಿತ |
ಚಪ್ಪರ ಮಂಚದಿ ತಾ ನಿದ್ರೆಗೈದೆದ್ದು
ಒಪ್ಪದಿ ಊಟವ ಮಾಡಿ || ೫೪ ||

ಶೃಂಗಾರವಾಗಿ ಹೊರಹೊಂಟನು ರಾಮಯ್ಯ
ಮಂಗಳ ನೀಲನ ಏರಿ |

ಸಂಗಡ ಬೈಚಪ್ಪ ತನ್ನ ಮನ್ನೆಯರನು
ಹಿಂಗದೆ ಕರಕೊಂಡು ಬೇಗ || ೫೫ ||

ಹೊಸಮಲೆದುರ್ಗವ ಹೊಕ್ಕನು ರಾಮಯ್ಯ
ಅಸಹಾಯ ಮಾನ್ಯರಿಗೆಲ್ಲ |
ಕುಸುಮ ಗಂಧವು ಹೊನ್ನ ಹಂಚಿಕೊಟ್ಟನು ರಾಮ
ದೆಸೆವಂತ ಮಾನ್ಯರಿಗೆಲ್ಲ || ೫೬ ||

ಬಿದ್ದಿದ್ದ ಕೋಟೆಯನಿಕ್ಕಿಸಿ ಬೊಕ್ಕಸ
ಇದ್ದುವ ನೋಡಿ ಒಕ್ಕಲಿಗೆ |
ಬುದ್ಧಿಯ ಪೇಳಿ ಎಲ್ಲರಿಗೆ ತಾ ಹೊರಟನು
ಇದ್ದ ಗಡಿಗಳ ನೋಡುತಲಿ || ೫೭ ||

ಎಲ್ಲ ಗಡಿಗಳನು ತಾ ನೋಡಿಬಂದನು ರಾಮ
ನಿಲ್ಲದೆ ಭದ್ರವ ಮಾಡಿ |
ಬಲ್ಲಂತೆ ಕಣಜ ಬೊಕ್ಕಸಗಳ ಬಲಿಸಿದ
ಉಲ್ಲಾಸದಲಿ ರಾಮನಾಥ || ೫೮ ||

ಕೆರೆಯ ಕಟ್ಟಿಸಿದ ಪೂದೋಟವ ಹಾಕಿಸಿ
ಸೆರೆಯ ಬಿಡಿಸುತ ಸಿಕ್ಕಿದವರ |
ಮರೆಯದೆ ಹಸಿದು ಬಂದವರಿಗೆ ಅನ್ನವ
ಇರಿಸೆಂದು ಕಟ್ಟುಮಾಡಿಸಿದ || ೫೯ ||

ಎಲ್ಲೆಲ್ಲಿ ನೋಡಿದರೆ ಕೆರೆಯು ಕಾಲುವೆ ಬಾವಿ
ಎಲ್ಲಿ ನೋಡಲು ತೋಪು ವನವು |
ಮಲ್ಲಿಗೆ ಶೃಂಗಾರದೋಟ ಮಂಟಪಗಳು
ಬಲ್ಲಿದ ರಾಮಯ್ಯ ನಿಲಿಸಿ || ೬೦ ||

ಸೀಮೆಯ ಒಕ್ಕಲ ಕರೆಸಿದ ರಾಮಯ್ಯ
ಪ್ರೇಮದಿ ವೀಳ್ಯವ ಕೊಟ್ಟು |
ಕ್ಷೇಮದಿ ಸುಖಿ ಬಾಳಿ ನೀವೆಂದು ಪ್ರಜೆಗಳಿಗೆ
ಪ್ರೇಮದಿ ಮನ್ನಿಸಿದನವರ || ೬೧ ||

ಕೊಟ್ಟ ಮಾತಿಗೆ ಕೌಲು ತಪ್ಪುವುದಿಲ್ಲವೊ
ಗಟ್ಯಾಗಿ ದುಡುಕೊಂಡು ಇರುಹೋಗಿ || ೬೨ ||

ಅನ್ನಛತ್ರವು ಅರವಟ್ಟಿಗೆ ಮಠಮಾನ್ಯ
ಉನ್ನತ ಅಗ್ರಹಾರಗಳು |

ಚೆನ್ನಾಗಿ ಕೊಟ್ಟು ಬ್ರಾಹ್ಮರಿಗೆಲ್ಲ ರಾಮಯ್ಯ
ಉನ್ನತ ಹರುಷದೊಳ್ ತಾನು || ೬೩ ||

ಈ ಪರಿಯಲಿ ತಂದೆ ಮಕ್ಕಳು ರಾಜ್ಯದ
ತಾವು ಪಿರಿದಾಗಿ ಆಳುತಲಿ |
ಭೂಪಾ[ಲರೊ]ಳು ಇಂಥ ದೊರೆಗಳಿಲ್ಲವು ಎಂದು
ರೂಪ ಕೇಳಿದ ಸುರಿತಾಳ || ೬೪ ||

ಅಪ್ಪಾಜಿ ಕರೆಸು ರಾಮಯ್ಯನ ಬೇಗದಿ
ಕಪ್ಪವ ಮೊದಲಾಗಿ ನೀನು |
ತಪ್ಪದೆ ನೇಮಿಯ ಕಳುಹಿಸು ಬೇಗ
ದಿ ಮುಪ್ಪಾಗಿ ಹೋದೆನಯ್ಯಯ್ಯೋ || ೬೬ ||

ಮಗಳ ಮನ್ನಿಸಿ ಸುರಿತಾಳನು ಮನದೊಳು
............................................ |
............................................................
ಅಗಣಿತ ಸಂಧಿ ಪೂರಾಯ್ತು || ೬೭ ||

**ಅಂತು ಸಂಧಿ ೧೩ ಪದನು ೧೪೭೫ಕ್ಕಂ ಮಂಗಳ ಮಹಾಶ್ರೀ**

## ಸಂಧಿ ೧೪ - ಮಾತಂಗಿಯ ದಾಳಿ - ತೆಲುಗರ ಸಂಚು

ಶ್ರೀ ಗಿರಿಜಾ [ಸ್ಯಾಂಬುಜ ದಿನ]ನಾಯಕ
ಭೋಗಿಭೂಷಣ ಭಾಳನೇತ್ರ |
[ಭಾಗೀರಥಿಧರ ಭವರೋಗವೈದ್ಯನೆ
ನಾಗಕುಂಡಲ] ಶರಣೆಂಬೆ || ೧ ||

ದಾನವ ಸುರಿತಾಳನ ಮಂತ್ರಿಯು
ಭುವನೇಶ[ನ] ಚಿತ್ರಪಟವ |
ತವಕದಿ ರಾಮನಂಗವ ಬರೆದು ತಂದು
ಕುವರಿಯ ಕೈಯಲ್ಲಿ ಕೊಟ್ಟ || ೨ ||

ಚಿತ್ರಪಟವ ಕಾಣುತ ಸುರಿತಾಳನ
ಪುತ್ರಿಯಗಿದು ಮೂರ್ಚೆಯಾಗಿ |
ಇತ್ತಲು ಸುರಿತಾಳ ಕುವರಿಗೆ ವಿರಹಾಗ್ನಿ
ಒತ್ತರಿಸಲು ಮನೆಯೊಳಗೆ || ೩ ||

ಎತ್ತಣ ವಿಧಿಯು ಇದೇನು ತಾಪವುಯೆಂದು
ಮತ್ತೆ ಭೂಪತಿಯು ಚಿಂತಿಸಿದ |
ಏನು ಮನದ ನೋವು ಮಗಳೆ ನೀ ಹೇಳೆಂದು
ಮಾನವೇಶ್ವರನು ಕೇಳಿದನು || ೪ ||

ಖಾನ ವಜೀರ ನಿನ್ನಯ ಮಂತ್ರಿ ನೇಮಿಯ
ಖಾನ ತೋರಿದ ಮನೋವ್ಯಾಧಿ |
ಕುಮ್ಮಟದರಸು ರಾಮನ ಚಿತ್ರಪಟವಿದು
ನನ್ನಯ ಮನ ಸೂರೆಗೊಂಡ || ೫ ||

ಹಿಂದಣ ದ್ವಾಪರದಲಿ ದ್ರುಪದನಂದನೆಯಾಗಿ
ಬಂದೀಗ ಕಲಿಯುಗದಲ್ಲಿ |
ಸುರಿತಾಳನ……………………………
ಮಂದಿರದಲಿ ಜನಿಸಿದಳು || ೬ ||

ಅಂದೈವರ ರಾಣಿಯಾಗಿ ದೇವೇಂದ್ರನ
ನಂದನ ನೆರೆದ ಶಾಪದಲಿ |
ಕುಂದದೆ ಅರ್ಜುನನೆಂದು ಭೋಗಕೆಯೆಂದು
ಸಂದು ಹುಟ್ಟಿದಳು ಡಿಳ್ಳಿಯೊಳಗೆ || ೭ ||

ನಂದನೆಯಾಗಿ ರಾಮನ ಹೊಂದುವೆನೆಂದು
ಚೆಂದದ ಚೆಲುವಲಂಕರಿಸಿ |
ಬಂದು ಜಾನಿಸೆ ರಾಮನ ಮೇಲೆ ವಿರಹದಿ
ನೊಂದು [ಮಮ್ಮಲನೆ] ಸುರಿತಾಳ || ೮ ||

ಸತ್ತನೆಂದೇ ಹೋದ ರಾಮನ ಸುದ್ದಿಯ
ಮತ್ತೆ ಮಂತ್ರಿಯು ಮಡಗಿದನು |
ಕರ್ತು ಪ್ರಧಾನ ರಾಮನ ತಂದು ಕಾಣಿಸಿ
ಹೆತ್ತ ತಾಯಿ ತಂದೆ ಕಾಣಿಸಿದ || ೯ ||

ಭಾಪು ಭಾಪುರೆ [ಹಿಂ]ದುವಿನ ಮಂತ್ರಿಯೆಂದು
ಭೂಪತಿ ಸುರಿತಾಳ ಮೆಚ್ಚಿ |
ಈ ಪರಿ ಬುದ್ಧಿ ಪ್ರಧಾನರು ನಮಗಿಲ್ಲ
ಕೋಪದಿ ನೇಮಿಯ ಬೈದ || ೧೦ ||

ಅರಮನೆಯಳು ಸುರಿತಾಳನ ಸುತೆ ಮತ್ತೆ
ವಿರಹತಾಪದಿ ಸೊರಗಿದಳು |

ಕರೆದು ಮಗಳ ನಾನು ಕರೆಸುವ ಸಮಯಕ್ಕೆ
ನೆರೆದುದು ದಿಲ್ಲೀಶ ದೊರೆಯು || ೧೧ ||

ದ್ವಾಪರಯುಗದಲ್ಲಿ ದ್ರುಪದನಂದನೆಯಾಗಿ
ಭೂಪರನೈವರ ಕಾಡಿ |
ಈ ಪರಿ ಕಲಿಯುಗದೊಳು ಸುರಿತಾಳನ
ಭೂಪನಂದನೆಯಾಗಿ ಜನಿಸಿ || ೧೨ ||

ಶ್ರೀಪತಿ ಮೈದುನ ಪಾರ್ವತಿ ವರದಿಂದ
ಭೂಪ ಕಂಪಿಲನ ಮಗನಾಗಿ |
ಈ ಪರಿಯಲ್ಲಿ ಇಳೆಯೊಳಗುಳ್ಳರಾಯರ
ಕೋಪದಿ ಚೆಲ್ಲ ಬಡಿದನು || ೧೩ ||

ಎಂದು ಪೇಳಲು ಸುರಿತಾಳನಾ ಕ್ಷಣದಲ್ಲಿ
ಬಂದನು ಹೊರ ಚಾವಡಿಗೆ || ೧೪ ||

ಮತ್ತೆ ಕೇಳೆಲೋ ಮಂತ್ರಿ ನೇಮಿಯವರ ತಂದೆ
ಇತ್ತನಂತೆ ದೊರೆತನವ |
ಒತ್ತಿ ಪಟ್ಟವನು ಕಟ್ಟಿದರಂತೆ ರಾಮಗೆ
ಮತ್ತೆ ಕೇಳಿದೆ ಮಂತ್ರಿ ಸುದ್ದಿ || ೧೫ ||

ಹತ್ತು ಲಕ್ಷವು ವಾಜಿ ಕಾಲಾಳು ಕರಿಘಟೆ
ಮುತ್ತಲುಹೋಗಿ ಕುಮ್ಮಟಕೆ |
ನೆತ್ತರ ಹರಿವಂತೆ ಕಡಿವಾಗಲು ರಾಮ
ಹತ್ತು ತಲೆಯ ರಾವಣ[ನೆ] || ೧೬ ||

ಕೊಟ್ಟದ ಬೇಡನೆಂಬಿರಿ ಜಗವೆಲ್ಲವು
ಮುಟ್ಟಲಮ್ಮಗೆ ತಿರುಗಿದಿರಿ |
ದಿಟ್ಟನಹುದು [ಹಿಂ]ದುವ ರಾಯ ಕದನಕ್ಕೆ
ಅಷ್ಟದಿಕ್ಕಿಗೆ ಕಂಪಸುತನು || ೧೭ ||

ಒಪಡವಿಯೊಳಗೆ ಓರ್ಗಲ್ಲ ಪ್ರತಾಪನು
ಅಡಿಯಾದ ಹಮ್ಮೀರರಾಯ |
ಪಿಡಿತಹೆನೆಂದು ಮಾತಾಡಿ ಹೋದವರೆಲ್ಲ
ಮಡಿದು ಹೋದರು ಅವನ ಕೈಯ್ಯ || ೧೮ ||

ಚೆಪ್ಪರಿಗಿಯ ಮೊಗಲ ಎಪ್ಪತ್ತು ಸಾವಿರ ವಾಜಿ
ತಪ್ಪದೆ ತಾ ಹೋಗಿ ಮಡಿದ |

ಕಡುಗಲಿ ಆ ನಾಡ ಗುತ್ತಿ ಜಗದಪ್ಪನ
ಕಡಿದು ಹೆಣ್ಣನು ತೆಕ್ಕೊಂಡ || ೧೯ ||

ರಾಮನಿದಿರಿಗೆ ದಂಡು ನಿಮಿಷವು ನಿಲ್ಲದು
ನೇಮಿಯೊಬ್ಬನು ಏನಹನು |
ಸೀಮೆಯೊಳಗೆ ಸುತ್ತ ತರುಗಿರಿ ಕುಮ್ಮಟ
ಭೂಮಿಯೊಳೈಶ್ವರ್ಯ ದುರ್ಗ || ೨೦ ||

ಮುಗಿಲ ಸೆರಗಿನಂತೆ ಮಿಗಿಲಾದ ದುರ್ಗವ
ಬಗೆಯನದಾರು ಬಣ್ಣಿಪರು |
ಹಗೆಯಾದೆವು ಸುರಿತಾಳಗೆ ನಾವಿನ್ನು
ಹೊಗಬಾರದು ಕುಮ್ಮಟವ || ೨೧ ||

ಹೋಗುವ ಸೇನೆಯು ಸಹ ನೇಮಿ [ಹಿಂ]ದುವ ರಾಯ
ಹಾಗೆನ್ನಲವನು ಬಲ್ಲಿದನೆ |
ಸೋಗೆಗಂಗಳ ರಾಮ ರಾಯ ಬಲ್ಲಿದನೆಂದು
ನಾಗಲೀಕನ ತಾಹರಿಲ್ಲ || ೨೨ ||

ಎಲ್ಲಿಗಾದರೆ ನನ್ನ ಕಳುಹಯ್ಯ ದಂಡನು
ಬಲ್ಲಿದ ರಾಮನ ಮೇಲೆ |
ಇಲ್ಲಿಗೆ ತರಿಸಿಕೋ ಕಪ್ಪವ ಕುಮ್ಮಟ
ದಲ್ಲಿಗೆ ಕಳುಹಬೇಡೆಂದ || ೨೩ ||

ಕಳುಹು ಗುಜರಾತಿಯ [ಮೇಲೆ] ತೆಲುಗರ ಮೇ[ಲೆ]
ಕಳುಹು ಮಲೆಯಾಳರ ಮೇಲೆ |
ಕಳುಹು ಮಗಧ ವಡ್ಡದೇಶದ ಮೇಲಿನ್ನು
ಕಳುಹಲು ಬೇಡ ಕುಮ್ಮಟಕೆ || ೨೪ ||

ಈಗ ಹೋಗುವೆನು [ಹಿಂ]ದುವಿನ ರಾಯರ ಮೇಲೆ
ಬೇಗ ತಾಹೆನು ಕೈಸೆರೆಯ |
ನಾಗಲೋಕಕೆ ಹೋಗೆಂದರೆ ಹೋದೇವು
ಹೋಗಲಾರೆವು ಕುಮ್ಮಟಕೆ || ೨೫ ||

ಇಂತೆಂಬ ಮಾತನು ಕೇಳುತ ಸುರಿತಾಳ
ಚಿಂತೆಯಾದನು ಮನದೊಳಗೆ |
ಪಂಥವನಾಡಿ ಪಿಡಿತರದೆ ಹೋದಿರಿ ಕಾ
ಲಾಂತಕನವನೇನೊ ರಾಮ || ೨೬ ||

ಹೋದಹೋದವರೆಲ್ಲ ಕಾದಿ ನುಗ್ಗಾದಿರಿ
ಬಾದೂರಖಾನನ ತರದೆ |
ಮಾದಿಗಿತ್ತಿಯು ಪುಟ್ಟಿ ಬಂದು ಮಾತಂಗಿಯು
ನಿಂದು ಬಿನ್ನೈಸಿ ಸುರಿತಾಳಗೆ || ೧೭ ||

ರಾಮನ ತರುವೆನು ಎಂದು ಮಾತಂಗಿಯು
ಪ್ರೇಮದಿ ವೀಳ್ಯ ಪಾಲಿಸೆನಲು |
ಎಂದ ಮಾತನು ಕೇಳಿ ಸುರಿತಾಳನು ತಾನು
ನಿಂದ ಮಂತ್ರಿಯ ಮುಖನೋಡಿ || ೧೮ ||

ಹೇಡಿ ಮಂತ್ರಿಯೆ ಕೇಳು ಹೆಂಗೂಸು ತರುತಾಳೆ
ಎಂದು ಮೂದಲಿಸೆ ಸುರಿತಾಳ |
ಎಂದು ಮಾತನು ಕೇಳಿ ಎಲೆ ರಂಡೆ ತರುತೀಯ
ಎಂದು ಕೇಳಿದನು ಮಂತ್ರೀಶ || ೧೯ ||

ಮಂತ್ರಿ ನೇಮಿಯೆ ಕೇಳು ತರುತೇನೆ ರಾಮುಗನ
ಮಂತ್ರಿಗೆ ಉಸುರಿದಳು ಎಂದ |
ಮಾತನು ಕೇಳಿ ಮಂತ್ರಿ ಸೋಜಿಗಬಟ್ಟು
ಚಿಂತಿಸುತಿರ್ದ ಮನದೊಳಗೆ || ೨೦ ||

ಮಾದಿಗಿತ್ತಿಗೆ ವೀಳ್ಯವ ಕೊಟ್ಟು ಸುರಿತಾಳ
ತರುಹೋಗು ರಾಮುಗನ ಎನುತ |
ಚೆಲುವುಳ್ಳ ಚೆನ್ನಾರಿ ಒನಪು ಹೊಂತಕಾರಿ
ಬಲವುಳ್ಳ ಮಾನಿನಿ ರನ್ನೆ || ೨೧ ||

ತುರಗ ಶೃಂಗಾರಕೆ ಒಪ್ಪುವ ಹೊನ್ನಾಯುಧ
ಸರಪಳಿ ಝುಲ್ಲಿ ಜಮದಂಡೆ |
ಆದರಿವಳ ಕೂಡೆ ಹೋಗಿ ನೀವೆಲ್ಲರು
ಹೋಗಿರಿ ಎನ್ನಯ ಮುಂದೆ || ೨೨ ||

ನವಲಕ್ಷ ಕುದುರೆ ಕಾಲಾಳು ಕೋಟಿಯು ಮತ್ತೆ
ಭುವನದ ಸೂರೆಗೊಂಬಂತೆ |
ಹವಣಿಸಿ ಸುರಿತಾಳ ನೇಮಿಯ ಕಳುಹಲು
ನವ ರಾಮನಾಥನ ಮೇಲೆ || ೨೩ ||

ಹತ್ತು ಲಕ್ಷವು ಆಳು ನವಲಕ್ಷ ವಾಜಿಯು
ಮತ್ತೆ ಗಜವಿಂಡೊಂದು ಲಕ್ಷ |

ಇತ್ತರದಲಿ ನೆರೆದಿಹ ಪರಿವಾರವು
ಮುತ್ತಿ ನಡೆಯಿತು ಕುಮ್ಮಟವ || ೩೪ ||

ಇತ್ತಲಿ ಸುರಿತಾಳರಾಯ ಮಾತಂಗಿಗೆ
ಮೊತ್ತದ ವೀಳ್ಯವನಾಗ |
ಇತ್ತರದಲ್ಲಿ ನಿಂದಿರುವ ಪರಿವಾರವ
ಸತ್ಕರಿಸಿದನು ಸುರಿತಾಳ || ೩೫ ||

ಹೋಗಿರೈ ನೇಮಿ ಬೇಗದಿ ಕುಮ್ಮಟಕೆಂದು
ಆಗ ಹೇಳಿದ ಸುರಿತಾಳ |
ಎದ್ದು ಮಾತಂಗಿ ಸುರಿತಾಳನ ಪಾದಕ್ಕೆ
ಬಿದ್ದಳು ತುಂಬಿದೋಲಗದಿ || ೩೬ ||

ಭಾಷೆಯ ಕೊಟ್ಟಳು ಆ ಸುರಿತಾಳಗೆ
ದೇಶವರಿಯೆ ಕಂಪಿಲನ |
[ಗಾಸಿ]ಯ ಮಾಡಿ ರಾಮನ ಕಟ್ಟಿ ತಹೆನೆಂದು
ಲೇಸಾಗಿ ಸುರಿತಾಳನ ಮುಂದೆ || ೩೭ ||

[ತೆಂ]ಕಣದೇಶದ ಮಧ್ಯದಿ ಮಾತಂಗಿ
ಶಂಕೆಯಿಲ್ಲದೆ ದಂಡ ಬಿಟ್ಟು |
ಬಿಂಕವ ಮುರಿವೆ ರಾಮನ ದುರ್ಗವನೆಂದು
ಅಂಕಕಾತಿಯು ಬರುತಹಳು || ೩೮ ||

ಮುತ್ತಿನ ಗುಡಿಯು ಸಾವಿರ ಮಾತಂಗಿಗೆ
ಇತ್ತರದಲ್ಲಿ ಸತ್ತಿಗೆಯು |
ಹತ್ತುಸಾವಿರ ಕಾಲಾಳು ಕುದುರೆಗಳು
ಒತ್ತಿಲಿ ನೇಮಿಯ ದಂಡು || ೩೯ ||

ಇಲ್ಲಿಗೆ ಮುನ್ನೂರು ಅರುವತ್ತು ಗಾವುದ
ಅಲ್ಲಿಹ ಕುಮ್ಮಟದುರ್ಗ |
ಅಲ್ಲಿಗಲ್ಲಿಗೆ ಅಂಚೆ ಕುದುರೆಯನಿಟ್ಟಳು
ನಿಲ್ಲದೆ ದಾಳಿ ಮಾಡಿದಳು || ೪೦ ||

ಮುಂಜೂಣಿ ಕುದುರೆಯ ಬಿಟ್ಟಳು ಮಾತಂಗಿ
ಸಂಜೆಯ ಅಡಗುಗಳಡಗಿ |
ಮಂಜು ಮುಸುಕಿದಂತೆ ರಾಮನ ರಾಜ್ಯವ
ಅಂಜಿಕಿಲ್ಲದೆ ಒಳಪೊಕ್ಕು || ೪೧ ||

ಅಲ್ಲಲ್ಲಿ ಬಿಡದೆ ಬಂದಳು ಮಾತಂಗಿಯು
ನಿಲ್ಲದೆ ಪಯಣ ಗತಿಯಲ್ಲಿ |
ಕೊಲ್ಲದ ಕೊಲೆಯ ಕೊಲ್ಲುವೆನೆಂದು ಮಾತಂಗಿ
ಎಲ್ಲ ಪೌಜನು ಮಾಡಿಕೊಂಡು || ೪೨ ||

ಬಿಟ್ಟಲ್ಲಿ ಬಿಡದೆ ಬಂದಳು ಮಾತಂಗಿಯು
ಬೆಟ್ಟವಾವುದು ಕಂಪಿಲನ |
ಮುಟ್ಟಿ ತರಿದು ರಾಮನ ಹೆಡಗೈಯ್ಯನು
ಕಟ್ಟಿ ಸುರಿತಾಳನೆಡೆಗೆ || ೪೩ ||

ಗಡಿಯ ದಾಟಿದಳು ಮಾತಂಗಿಯು ಬೇಗದಿ
ಪಿಡಿತಹೆನೆಂದು ಬಾದೂರನ |
ಇಂದಿನ ದಿನವಿರಳು ಬೆಳಗ ಕಳೆದೆವಾದರೆ
ಚಂದ್ರಶೇಖರ ಶಿವನಿಂದ || ೪೪ ||

ಹಿಂದೆ ಮರಳಿ [ತಾ]ಯಿ ಗರ್ಭದೊಳ್ ಬಂದಂತೆ
ಎಂದು ನುಡಿ[ಯುತೆ] ತಮ್ಮೊಳಗೆ |
ಬಂದ ದಂಡನು ಕಂಡು ರಾಮನಾಥನು ತನ್ನ
ತಂದೆ ಬಳಿಗೆ ಆಳ ಕಳುಹಿ || ೪೫ ||

ಒಂದು ದಿನಕೆ ಹತ್ತು ಸಾವಿರ ಹೊನ್ನನು
ಮಂದಿಗೆ ಕಳುಹ ಹೇಳಿದನು |
ಕಡೆಯಕಲ್ಲನೆ ಹತ್ತಿ ನೋಡುತ ರಾಮಯ್ಯ
ಒಡನೆ ಮಾನ್ಯರು ಸಹವಾಗಿ || ೪೬ ||

ವಸುಧೆ ಎಲ್ಲವು ಬೆಸಲಾದಂತೆ ತುರುಕರ ದಂಡು
ದೆಸೆದೆಸೆಯಲ್ಲಿ ಪೌಜುಗಳು |
ಅಸದಳವಾಗಿದೆ ಕಂಪಿಲರಾಯನ
ಹೊಸದುರ್ಗಕೆ ಹೋ[ಗೆ]ನಲು || ೪೭ ||

ಇಂತೆಂದು ತಂದೆಗೆ ಹೇಳಿ ಕಳುಹಿ ರಾಮ
ಸಂತೋಷವಾದನು ಮನದಿ |
ಸಂದೇಹವ್ಯಾತಕೆ ಹೊಯ್ದು ಕೆಡುಹುವೆನೆಂದು
ಪಂಥವ ಬಿಡೆನೆಂದ ರಾಮ || ೪೮ ||

ಸ್ವರ್ಗ ಮರ್ತ್ಯ ಪಾತಾಳದಿ ಕೀರ್ತಿಯು
ವೆಗ್ಗಳವಾಗಿ ಪಡೆವೆನು |

ದುರ್ಗಕ್ಕೆ ತನಗೆ ಮದುವೆಯೆಂದು ರಾಮಯ್ಯ
ಒಗ್ಗಿನ ಮಾತನಾಡಿದನು || ೪೯ ||

ದೇಶದಿಂದಲಿ ದೇಶಕೆ ಬಂದು ಬಾದೂರ
ಆಶೆಯಮಾಡಿ ಮರೆಹೊಕ್ಕ |
ಮೀಸಲಾಯಿತು ನನ್ನ ತಲೆಯು ಸುರಿತಾಳಗೆ
ಭಾಷೆಯ ಬಿಡೆನೆಂದ ರಾಮ || ೫೦ ||

ಮಂಡಲದೊಳು ಜಟ್ಟಂಗಿರಾಮನ ವರ
ಪಿಂಡವು ತಾನು ಎಂದೆನುತ |
ತಂಡತಂಡವಾಗಿ ಕಡಿವೆನು ತುರುಕರ
ಗಂಡುಗಲಿಯು ರಾಮ ನುಡಿದ || ೫೧ ||

ಎಂದು ನುಡಿದನು ರಾಮಯ್ಯನು ಹಾಗೆಂದು
ತಂದೆ ಕಂಪಿಲರಾಯನೆಡೆಗೆ |
ಸಂದೇಹವಿಲ್ಲದೆ ಕಡಿದು ಕಾದುವೆನೆಂದು
ಅಂದು ಬಿನ್ನಹವ ಮಾಡಿದನು || ೫೨ ||

ಹೇಳಿದ ಮಾತ ಕೇ[ಳುತ] ಕಂಪಿಲರಾಯ
ತಾಳಿದ ಮನದಿ ಚಿಂತೆಯನು |
ಹಾಳಾಯಿತು ಹೊಸಮಲೆದುರ್ಗ ಕುಮ್ಮಟವೆಂದು
ಮೇಳೈಸಿದ ಹೊಸಮಲೆಗೆ || ೫೩ ||

ಕಂಡನಾಗಲು ರಾಮ ಬಾದೂರಖಾನನ
ಕೊಂಡಲ್ಲದೆ ಹೋಗರಿವನ |
ಹೆಂಡರು ಮಕ್ಕಳು ಸಹವಾಗಿ ಬೈಚಪ್ಪ
ಭಂಡಾರವನು ತೆರಳೆಂದ || ೫೪ ||

ಹೊಕ್ಕುಳ ಗಂಟೆಯ ಐನೂರು ಕುದುರೆಯ
ಗಕ್ಕನೆ ಕಳುಹಿದ ರಾಮ || ೫೫ ||

ಇತ್ತ ಕುಮ್ಮಟವ ಹೊರಟನು ರಾಮಯ್ಯನು
ಒತ್ತಿ ಮಾಡಿದ ಮುಂ[ಗಾ]ಳಗವ |
ಒತ್ತರಿಸಿ ಬರುವ ತುರುಕರ ದಂಡ ಕಣಿವೆಯೊಳ್
ಮುತ್ತಿ ಕಡಿದು ಮುರಿಯಲೊತ್ತಿ || ೫೬ ||

ರಣಭೀತಿ ಹೆಣಭೀತಿ ಮಾಡಿ ರಾಮಯ್ಯನು
ಕುಣಿಸುತ ಭೂತಪ್ರೇತಗಳ |

ಉಣಿಸಿ ಮರುಳು ತಂಡವೆಲ್ಲಕೆ ದಣಿವಂತೆ
ಹೊಣಕೆಯ ಬಂಟರು ಸಹಿತ || ೫೭ ||

ತಿರಿಗಿ ಬಂದನು ಕುಮ್ಮಟಕಾಗಿ ರಾಮಯ್ಯ
ಭರದಿಂದ ತನ್ನ ದುರ್ಗದೊಳು |
ಇರುತಿರಲಾಕ್ಷಣ ತಂದೆ ಬಳಿಗೆ ಸುದ್ದಿ
ಬರೆಸಿ ಕಳುಹಿ ಚರರಟ್ಟಿ || ೫೮ ||

ಹರಿಯಲದೇವಿಗೆ ಪರಿತಂದು ಸುದ್ದಿಯ
ನೊರೆದರು ಊಳಿಗದವರು |
ಅರಸು ಭಂಡಾರದೊಳೆರಡು ಖಂಡುಗ ಹೊನ್ನ
ತರಿಸಿ ರಾಮಗೆ ಕಳುಹಿದ[ಳು] || ೫೯ ||

ಮುಂಜೂಣಿ ಕಾಳಗಕೆ ಹೋಗಿರ್ದ ರಾಮಯ್ಯ
ಮಂದಿ ಮಕ್ಕಳು ಸಹವಾಗಿ |
ಕುಂಜರದಾನೆ ಕುದುರೆಯ ಪಿಡಿಕೊಂಡು
ಸಂಜೆಲಿ ಹೊಕ್ಕ ಅರಮನೆಯ || ೬೦ ||

ಕೊಬ್ಬಿ ದಾಳಿಯ ಬರುತಿರಲು ಮಾತಂಗಿಯು
ಸಬ್ಬ ದಂಡಿಗೆ ಇದಿರಾಗಿ |
ಹೆಬ್ಬಾಗಿಲ ತೆಗೆತೆಗೆಯೆಂದು ರಾಹುತರು
ಉಬ್ಬಿ ರಾಮಗೆ [ಕಲಿ]ಮಂದಿ || ೬೧ ||

ಬಿಲ್ಲ ಮಂದಿಯು ಹರಿಗೆಯ ಮಂದಿ ಸಹವಾಗಿ
ಎಲ್ಲರು ಕೋಟೆಯ ಮೇಲೆ |
ಭಾಷೆಕೊಡಲು ನಳಿನಸಖನಸ್ತನಾದನು
ಕಳೆಯು ಏರಿತು ಕುಮ್ಮಟವು || ೬೨ ||

ತಳೆದವು ಕೈದೀವಿಗೆಯು ಕೋಟೆಯ ಮೇಲೆ
ಹೊಳೆಯಿತು ಕಾವಲ ಮಂದಿ |
ಬಿಲ್ಲ ಮಂದಿಯು ಹರಿಗೆಯ ಮಂದಿ ಸಹವಾಗಿ
ಎಲ್ಲರು ಕೋಟೆಯ ಮೇಲೆ || ೬೩ ||

ಎಲ್ಲಿ ನೋಡಿದರಲ್ಲಿ ತುಳುವ ಎಕ್ಕಟಿಗರು
ಸೊಲ್ಲೆರಡಿಲ್ಲ ಪಟ್ಟಣದಿ || ೬೪ ||

ಈ ಪರಿಯಲ್ಲಿ ಬೆಳಗಾಯಿತು ಕುಮ್ಮಟ
ಭೂಪನೈದಿದ ರಾಮನಾಥ |

ಶ್ರೀಪತಿ ಶರಣು ಎನ್ನುತ ನಿಶ್ಚೈಸುತ
ಭಾಪುರೆಯೆಂದು ಮನದೊಳಗೆ || ೭೫ ||

ತನ್ನರಮನೆಗಾಗಿ ಬಂದನು ರಾಮಯ್ಯ
ಮನ್ನೆರನೆಲ್ಲ ಕರೆಸಿದನು |
ಚೆನ್ನಾಗಿ ಊಟ ಮಾಡಿಸಿ ಉಡುಗೊರೆಯಿತ್ತು
ಮನ್ನಿಸಿದನು ರಾಹುತರ || ೭೬ ||

ತಂದರು ವಸ್ತ್ರಾಭರಣವನೆಲ್ಲವ
ಮುಂದಿರಿಸಿದರು ರಾಮಯನ |
ಗಂಧ ಕಸ್ತೂರಿ ಕುಂಕುಮ ಕಾದಂಬವ
ಮಂದಿ ಎಲ್ಲಕ್ಕೆ ಕೊಡುತಿರ್ದ || ೭೭ ||

ಮಂಡಲದೊಳಗುಳ್ಳ ರಾಯರಗಂಡನೆಂಬ
ಚರಣದೊಳುಲಿಯೆ ಪೆಂಡೆಯವು || ೭೮ ||

ಮುತ್ತಿನ ಜೋಡು ಪಚ್ಚೆದ ಜೋಡು ಚೆನ್ನದ
ಚಿತ್ರದ ಜೋಡು ವಜ್ರಂಗಿ |
ಸುತ್ತುಗಟ್ಟಿದ ಕುಮುದ ಝುಲ್ಲಿ ಕುದುರೆಗೆ
ಮಸ್ತಕಕೆ ಮೆರೆವ ಲಲಾಟ || ೭೯ ||

ಬಂದರು ಭಟರು ಉಗ್ಗಡಿಸುತ ಬಿರಿದನು
ನಿಂದರು ರಾಮನೊಂದಿನಲಿ |
ಮುಂದೆ ಹೆಬ್ಬಾಗಿಲ ತೆಗೆಯೆಂದು ರಾಹುತರು
ನಿಂದು ರಾಮನ ಪಚಾರಿಸುತ || ೮೦ ||

ಎತ್ತಿತು ಮುತ್ತಿನ ಸತ್ತಿಗೆ ರಾಮಗೆ
ಮತ್ತೆ ಬಿರುದಿನ ಡೊಳ್ಳುಗಳು |
ಚಿತ್ರದ ಮುಖದ ಟೆಕ್ಕೆಯವೆತ್ತಿ ಬರಲಾ
ಮೊತ್ತವ ಕಂಡು ಮಾತಂಗಿ || ೮೧ ||

ಅರರೆ ರಾಮುಗನೆಂದು ಕೊಂಡಾಡಿದರಾಗ
ಧುರಧೀರ ನೀನಹುದೆನುತ || ೮೨ ||

ಅಬ್ಬರದಲಿ ರಾಮನಿಳಿದನು ದುರ್ಗವ
ಹೆಬ್ಬಾಗಿಲ ತೆಗಿಸಿದನು |
ನಿಬ್ಬರದಲಿ ಕಾಣುತಲೆದ್ದು ತಿವಿದರು
ಒಬ್ಬರೊಬ್ಬರನು ಮೂದಲಿಸಿ || ೮೩ ||

ಎಡವಂಕದಲಿ ನೋಡುತ ರಾಮನಾಥನು
ಬಡಿದಾಡಿತು ಬಲವಂಕ || ೭೪ ||

ಹೋದ ಮಂದಿಯು ತಿರುಗದುಯೆಂದು ಮಾತಂಗಿ
ಮೂದಲಿಸುತ ಏರಿದಳು |
ಆದಕೊಂಡರು ರಾಮನ ಮಂದಿ ತುರುಕರ
ಮಾದಿಗಿತ್ತಿಯು ಬೆರಾಗೆ || ೭೫ ||

ಬಲ್ಲಂತೆ ಕಡಿ ಹೊಡಿ ಎನುತಲಿ ರಾಮಯ್ಯ
ಎಲ್ಲಕೆ ಕೈಯ್ಯ ಬೀಸಿದನು |
ಹೊಳಕೆಯ ಮಂದಿಯಂಕವ ನೋಡಿ ಕಡಿವಾಗ
ಎಣಿಕೆಯಿಲ್ಲದೆ ಡೇರೆ ಪೊಕ್ಕು || ೭೬ ||

ತಳುವಿಲ್ಲದೆ ಕುದುರೆಯ ಪಿಡಿದೆಳೆದರು
ಘಳಲನೆ ಒಡೆಯಗೊಪ್ಪಿಸಿ || ೭೭ ||

ಹೆಣಮಯವಾಯಿತು ಕದನದೊಳೆಲ್ಲವು
ದಣಮಯವದ್ಭತವಾಯ್ತು |
ಹೊಣಿಕೆಯ ಮಂದಿಗೆ ಸರಿಯಲ್ಲ ರಾಮನ
ಕೆಣಕಿ ಕೆಟ್ಟೆವು ನೊಂದೆವೆನುತ || ೭೮ ||

ನುಗ್ಗುಮಾಡಿಯೆ ಕಡಿದರು ಕಣಿವೆಯ ಕಟ್ಟೆ
ಕಗ್ಗೊಲೆಯ ಕೆಲಬಲರ |
ಬಾಗಿಹೋಗುತ ಗಿಡುಗಳ ಮೆಳೆಯ ಹೋಗುತ
ಅಗ್ಗಾಗಿ ಓಡಿತು ದಂಡು || ೭೯ ||

ಕೆಟ್ಟು ಓಡಿತು ಮಾತಂಗಿಯ ಬಲವೆಲ್ಲ
ಅಷ್ಟದಿಕ್ಕಿಗೆ ಬಾಯಬಿಡುತ || ೮೦ ||

ನಾಲ್ಕು ಕಾಲುಗ ಕಟ್ಟಿರಿಸುತ ಕುದುರೆಯ
ನೂಕಲಮ್ಮದೆ ನಿಂದಿಹರು |
ಬೇಕಾಗಿ ಮಾತಂಗಿ [ಏ]ರಲು ರಾಮಯ್ಯ
ತಾ ಕೈಕೊಂಡ ಕಾಳಗವ || ೮೧ ||

ಎರಡು ಲಕ್ಷವು ಕುದುರೆಗಳೇರೆ ರಾಮನ
ಗರುಬಿ ಹಿಡಿವೆನು ಎಂದೆನುತ |
ಕರದ ಪಟ್ಟೆಯದಲಿ ಕಡಿಕಡಿದೊಟ್ಟಲು
ಒರಲುತ ಮುರಿದ ಓಡಿದರು || ೮೨ ||

ಕುದುರೆ ಕುದುರೆಗಳ ಸಂದಣಿ ರಾಮನು
ಕದಬುತ ಕತ್ತಿಯ ಹೊಯ್ದು |
ಕದಳಿಯೊಳಗೆ ಒಂದು ಮದಕರಿ ಹೊಕ್ಕಂತೆ
ಮೆದೆಗೆಡಹಿದನು ತುರುಕರನು || ೮೩ ||

ಖಂಡೆಯದಲಿ ಹೊಡೆಯಲು ತೋಲು ಖಂಡಿಸಿ
ಗುಂಡಿಗೆ ಒಡೆದು ಡೆಂಢಣಿಸಿ |
ತುಂಡುತುಂಡುಗಳಾಗಿ ಕಡಿದನು ರಾಮನು
ಗಂಡುಗಲಿಯು ರಾಹುತರ || ೮೪ ||

ತುರುಕ ರಾಹುತರೆಲ್ಲರು ಮಡಿವಂತಹ
ಪರಿಯನದಾರು ಬಣ್ಣಿಪರು _
ಮೊರೆದವು ಮರುಳ ತಂಡದ ಹಿಂಡು ಬಂದಿತು
ದೊರೆ ರಾಮನ ಪರಸುತಲಿ || ೮೫ ||

ತಂಡತಂಡದ ಭೂತಗಳುಂಡು ದಣಿದವು
ಕೊಂಡಾಡಿದವು ರಾಮುಗನ |
ಮಿಕ್ಕಾದ ಮರುಳ ತಂಡವನೆಲ್ಲ ದಣಿಸಿದ
ದಿಕ್ಕಿನೊಳಗೆ ವೀರ ರಾಮ || ೮೬ ||

ಹೆಣಮಯವಾಯಿತ್ತು ಆಳುವೇರಿಯ ಸುತ್ತ
ರಣವನಿಕ್ಕಿದರು ಕುಮ್ಮಟಕೆ || ೮೭ ||

ಕೋಟೆಗೆ ತುರುಕರ ಬಲಿಯನು ಇಕ್ಕಿನ್ನು
ಕಾಟಣ್ಣ ಹಿಂದಕ್ಕೆ ಮರಳಿ |
ನಾಟಕವಲ್ಲ ರಾಮನ ಕೊಡೆ ಕಾಳಗ
ಕೋಟಲೆಯಾಯ್ತು ನಮಗೆಂದ || ೮೮ ||

ಕೊಪ್ಪರಿಗೆಯೊಳಗೆ ಕಾದ ಎಣ್ಣೆಯ ತಂದು
ಖಾನರ ಮೇಲೆ ಚೆಲ್ಲಿದರು |
ಕಾದ ಬೊಗ್ಗನು ತಂದು ಖಾನರ ಮೇಲಿನ್ನು
ಚೆಲ್ಲಲು ಅಯ್ಯೋ ಎಂದೆನುತ || ೮೯ ||

ಕಾದುವರಸದಳವೆನುತಲಿ ಮಾತಂಗಿ
ಮೂದಲಿಸುತಲೇರಿದಳು || ೯೦ ||

ಕಲ್ಲೊಳು ಕಾದ[ಬಹು]ದು ರಾಮನ ಕೂಡೆ
ನಿಲ್ಲಬಾರದು ಎಂದೆನುತ |

ಭಲ್ಲೆಯ ಖಾನ ವಜೀರರ ಕೂಡಿಸಿ
ಝಲ್ಲನೆ ಹಿಂದಕ್ಕೆ ತಿರುಗಿ || ೯೧ ||

ಹಿಂದಕ್ಕೆ ತಿರುಗಿ ಬಂದಳು ಮಾತಂಗಿಯು
ಒಂದುಗಾವುದ ದಾರಿಯನು |
ಸಂದೇಹವಿಡಿದು ಕಾದುವ ಬಗೆಯಿಲ್ಲ
ವೆಂದು ಚಿಂತಿಸಿ ಮನದೊಳಗೆ || ೯೨ ||

ನಿಲ್ಲದೆ ತಮ್ಮೊಳು ತಾವು ಮಾತಾಡುತ
[ಅಲ್ಲಿಹ] ತೆಲುಗ ಮನ್ನೆಯರು |
ಬಲ್ಲಿದ ರಾಮನ [ಕೊಲ್ಲಿ]ಸಬೇಕೆನುತಲಿ
ಎಲ್ಲ ರಾಯರು ಕಾಗದ ಬರಿಸಿ || ೯೩ ||

ನವಲಕ್ಷ ತೆಲುಗರ ಗಂಡನೆಂಬ ಕಡೆಯವ
ಇವನಿಕ್ಕಬಹುದೆ ಕಾಲೊಳಗೆ |
ತವಕದಿ ತಮ್ಮೊಳು ತಾವೆ ರೋಷವ ತಾಳಿ
ಇವನ ಕೊಲ್ಲಿಸಬೇಕೆನುತ || ೯೪ ||

ಹೋಗಬೇಡವು ತಿರುಗುಯೆಂದು ಮಾತಂಗಿಗೆ
ಆಗಲೆ ತೆಲುಗ ಮನ್ನೆಯರು |
ಬಾಗಿಲ ತೆಗೆದುಕೊಟ್ಟೇವು ಬರಹೇಳೆಂದು
ಬೇಗದಿ ಬರಸಿ ಕಳುಹಿದ[ರು] || ೯೫ ||

ಇದು ಪರನಾರಿ ಸೋದರ ರಾಮನಾಥನ
ಪದಕೃತಿಯೊಳಗೊಂದು ಕಥೆಯ |
ಸುದತಿ ಮಾತಂಗಿ ಕುಮ್ಮಟ ಮುತ್ತಿ ಮುರಿದೋಡಿ
ಹೆದರಿ ಓಡಿದ ಕಥೆ ಪೂರಾಯ್ತು || ೯೬ ||

**ಅಂತು ಸಂಧಿ ೧೪ಕ್ಕಂ ಪದನು ೧೫೬೯ಕ್ಕಂ ಮಂಗಳ ಮಹಾಶ್ರೀ**

## ಸಂಧಿ ೧೫ - ಮಾತಂಗಿಯೊಡನೆ ಕೊಮಾರ ರಾಮಯ್ಯನ ಯುದ್ಧ

ಶ್ರೀ ಗಿರಿಜಾ [ಸ್ಯಾಂಬುಜ ದಿನ]ನಾಯಕ
ಭೋಗೀಭೂಷಣ ಭಾಳನೇತ್ರ |
ಭಾಗೀರಥಿಧರ ಭವರೋಗವೈದ್ಯನೆ
ನಾಗ[ಕುಂಡಲ]ಶರಣೆಂಬೆ || ೧ ||

ಬಿಟ್ಟೋಡಿ ಹೋದಂಥ ಮಾತಂಗಿ ತಾ ಬಂದು
ಬಿಟ್ಟಳು ಕುಮ್ಮಟಕಾಗಿ |
ಕೊಟ್ಟದ ಬೇಡರು ಕಡಿಕಡಿದೊಟ್ಟುವ
ದಿಟ್ಟವನೇನ ಬಣ್ಣಿಸುವೆ || ೧ ||

ಬಂದಂಥ ವಾಲೆಯ ನೋಡುತ ಮಾತಂಗಿ
ನಿಂದಳು ಸಂತೋಷದಲ್ಲಿ |
ಮಂದಿ ಕುದುರೆ ಪರಿವಾರ ರಾಹುತರೆಲ್ಲ
ಬಂದಳು ತಿರುಗಿ ಮಾತಂಗಿ || ೨ ||

ಹೇಳಿದ ಮಾತ ಕೇಳುತಲಿ ಮಾತಂಗಿಯು
ದಾಳಿ ಮಾಡಿದಳು ಕುಮ್ಮಟಕೆ || ೪ ||

ತಿರುಗಿ ಬಂದನು ಕುಮಾರ ಕಾಟಣ್ಣನು
ಅರಮನೆಗಾಗಿ ಬೇಗದೊಳು |
ಅರಸುಯಿಲ್ಲದೆ ಕಾಳಗವಿನ್ನು ಜಯಿಸದು
ಧುರಧೀರ ರಾಮ ಚಿತ್ತೈಸು || ೫ ||

ಆಳ ಕಾದಿಸಿ ನೋಡುವ ರಾಯರಗಂಡ
ಕೇಳಿ ಕಾಟಣ್ಣನ ಮಾತ |
ತಾಳಿ ಮನದಲ್ಲಿ ಸಂತೋಷದಿ ನಲಿವುತ
ಹೇಳೆಂದು ಮತ್ತೆ ನುಡಿದನು || ೬ ||

ಕಾಲನ ಕಾಮಾಟವಾಗಿದೆ ಕುಮ್ಮಟ
ಲೀಲೆಯಾಗಿದೆ ದುರ್ಗದೊಳಗೆ |
ಬಾಲಕ ಮಕ್ಕಳೆಲ್ಲರು ಕಡಿದಾಡಿದರು
ಹೇಳಲಿನ್ನೇನು ಪಟ್ಟಣವ || ೭ ||

ಕೆಳಗೋಟೆ ಹೋಯಿತು ಎಲೊ ರಾಯರಗಂಡ
ಬಳಿಕ ನೀ ಮಾಡುವುದೇನು |
ಒಳಗೊಟ್ಟರು ನಮ್ಮ ತೆಲುಗ ಮನ್ನೆಯರೆಲ್ಲ
ಇಳುಹೊ ಲೆತ್ತವನು ಬೇಗದಲಿ || ೮ ||

ಮನ್ನೆಮನ್ನೆಯರೆಲ್ಲ ತುರುಕರಿಗೊಳಗಾದ
ರೆನ್ನುವ ಸುದ್ದಿಯ ಕೇಳಿ |
ಇನ್ನದು ಚೋದ್ಯವೆಂದು ರಾಮನಾಥನು
ತನ್ನೊಳು ತಾನು ನಿಶ್ಚೈಸಿ || ೯ ||

ಈಗಲೆ ಕಡಿವೆನು ತುರುಕರ ದಂಡನು
ಹೋಗದೆ ಮರೆತು ಕಾದಿದರೆ |
ನೀಗುವೆನೆನ್ನ ಪ್ರಾಣವನೆಂದು ರಾಮಯ್ಯ
ಸಾಗಿ ಬಂದನು ತನ್ನರ ಮನೆಗೆ || ೧೦ ||

ತಿರುಗಿ ತನ್ನರಮನೆಗಾಗಿ ರಾಮಯ್ಯನು
ಅರಸಿಯರನು ಕರೆಸಿದನು |
ತರಿಸಿ ಮುತ್ತಿನ ಗದ್ದುಗೆ ಮೇಲೆ ಕುಳಿತಿರ್ದು
ಹರುಷದಿ ಮಾತಾಡಿದನು || ೧೧ ||

ಕಿಚ್ಚ ಕಂಡು ಕಣ್ಣುಗೆಡಬೇಡಿ ಮನದೊಳು
[ಒಚ್ಚೆಯ] ತಂದುಕೊಳ್ಳೆನುತ |
ನಿಶ್ಚೈಸಿ ತನ್ನ ಕೂಡಲಿ ಬನ್ನಿಯೆನುತಲಿ
ಮೆಚ್ಚಿನ ಮಡದೆರ್ಗೆ ಉಸುರೆ || ೧೨ ||

ಮಡದಿಯರಿಗೆ ಬುದ್ಧಿ ಹೇಳಿನ್ನು ರಾಮಯ್ಯ
ಮಡಿದೆನೆಂದರೆ ಎನ್ನೊಡನೆ |
ಬಿಡುವುದು ಪ್ರಾಣವ ಎನುತ ತಾಂಬೂಲವಿತ್ತು
ಕಡುಗಲಿ ಕಳುಹಿಸಿಕೊಂಡ || ೧೩ ||

ಉಟ್ಟನು ಪಟ್ಟೆ ವಂಕುಡಿದಾರವ ರಾಮ
ನೆಟ್ಟನೆ ಏಕಾಂಗವೀರ |
ಪಟ್ಟದರಾಣಿ ತಂದಳು ಅಮೃತಾನ್ನವ ಹೊಂ
ಬಟ್ಟಲೊಳಗೆ ರಾಮಯಗೆ || ೧೪ ||

ಹುಟ್ಟಿದ ಒಡಹುಟ್ಟು ಕಾಟಣ್ಣ ಸಹಿತ ಪೊಂ
ಬಟ್ಟಲೊಳಮೃತಾನ್ನವು |
ಕಟ್ಟಿಳಿಲ್ಲದೆ ಪರಿವಾರಕ್ಕೆ ಹೊನ್ನ
ತಟ್ಟೆಲಿ ಇತ್ತ ವೀಳ್ಯಯವ || ೧೫ ||

ತುಂಬಿತು ಪಣೆಯ ಬರಹವು ಜಟ್ಟಂಗಿಯ
ಶಂಭುಲಿಂಗನ ಕೃಪೆ ತಪ್ಪಿ || ೧೬ ||

ತನ್ನೊಳಗೈದು ಬಂದಿತು ನಾಲ್ಕು ಸಾವಿರ
ಹೊನ್ನ ಕಟ್ಟಿನ ಬಿಲ್ಲಿನವರು |
ಮನ್ನಿಸಿ ಕರ್ಪುರ ವೀಳ್ಯವನಿತ್ತನು
ಚೆನ್ನರಾಮಯ್ಯ ಧನು ಪಿಡಿದ || ೧೭ ||

ಧನುವ ಪಿಡಿದುಕೊಂಡು ಚೆನ್ನಿಗರಾಮಯ್ಯ
ಘನ ಕೋಪಾಟೋಪದಲೆದ್ದು |
ಚೆನುಮಯ ಜಟ್ಟಂಗಿ ರಾಮೇಶ ಗತಿಯೆಂದು
ಅನುವಾಗಿ ಹೊರಟ ಕಾಳಗಕೆ || ೧೮ ||

ದ್ವಾರವಾಟದಲಿ ನಿಂದನು ರಾಮನಾಥನು
ಆರು ಬಿದ್ದರು ಎಂದೆನಲು || ೧೯ ||

ನಲ್ಲ ನಾಗನು ಬಿದ್ದ ಬಿಲ್ಲ ಪೆನ್ನನು ಬಿದ್ದ
ಅಲ್ಲಿ ಮೀನಿಗ ಸಿಂಗ ಬಿದ್ದ |
ಜಲ್ಲಿಬಿಲ್ಲಿನ ಬುಕ್ಕಿನಾಯಕ ಮೊದಲಾದ
ಕಲ್ಲಕೋಟೆಯ ಚಿಕ್ಕ ಬಿದ್ದ || ೨೦ ||

ಮೂದಲಿಸುತ ಮಾದಿಗ ಹಂಪ ರಣದೊಳು
ಭೇದವಿಲ್ಲದೆ ಹೊಯ್ದಾಡಿ |
ಸಾಧಿಸಿ ಒಳಪೊಕ್ಕು ಬಾಹ ತುರುಕರೊಳು
ಕಾದಿ ಬಿದ್ದನು ಸಂಗ್ರಾಮದೊಳು || ೨೧ ||

ಎಕ್ಕಟಿಗರು ಬಿದ್ದರೇಳೊ ಚೆನ್ನಿಗರಾಮ
ಅಕ್ಕಸಾಲೆರ ಚಿಕ್ಕ ಬಿದ್ದ |
ದಿಕ್ಕು ದಿಕ್ಕಿಗೆ ಬಲು ಬಲಿಗಳನಿಕ್ಕುತ
ರಕ್ಕಸ ಮನ್ನೆಯ ಬಿದ್ದ || ೨೨ ||

ಖಂಡೆಯಕಾರ ತುಳುವರ ಮಂದಿ ಬಿದ್ದಿತು
ಗಂಡುಗಲಿಯೆ ವೀರರಾಮ |
ಕೊಂಡುಬಂದು ಕದನದ ಮೇಲೆ ಕೆಡಹುವ
ಲೆಂಡ ಕೊಳ್ಳಿಯ ನಾಗ ಬಿದ್ದ || ೨೩ ||

ತೊಲಗದೆ ಹೊಯ್ದಾಡಿ ಅಲ[ಗಿಗೆ] ಗುರಿಯಾಗಿ
ಬಲವಂತ ಬೇವಿನ ಸಿಂಗ |
ಕಲಿರಾಮ ನಿನ್ನ ಮೋಹದ ಎಕ್ಕಟ್ಟಿಗನು
ಹೊಲೆಯರ ಹಳ್ಳುಗ ಬಿದ್ದ || ೨೪ ||

ಹೇಳಿದ ಮಾತನು ಕೇಳುತ ರಾಮನು
ತಾಳಿದ ಮನ[ದಿ] ರೋಷವನು |
ಹೋಳುಹೋಳಾಗಿ ಕಡಿವೆ ತುರುಕರ ದಂಡ
ಕಾಳಗದಲಿ ಮೂದಲಿಸಿ || ೨೫ ||

ಈ ಕಡೆಯ ಹೋಗಿ ಕಾದಿಸೊ ಕಾಟಣ್ಣ
ಬೇಕಾದ ಮಂದಿಯ ಕೊಂಡು |
ಏಕಾಂಗವೀರರೆಲ್ಲರು ಕೋಟೆಯ ಹತ್ತಿ
ನೂಕಿ ತಿವಿದು ಸಬಳದಲಿ || ೧೬ ||

ಸಂಭ್ರಮದಲಿ ಇಳಿದನು ರಾಮು ದುರ್ಗವ
ಕೊಂಬಿನ ನಾದ ಹೆಗ್ಗಾಳೆ |
ಬೊಂಬುಳಿ ವಾದ್ಯ ನಿಸ್ಸಾಳ ವಾದ್ಯಗಳಿಂದ
ಕುಂಭಿನಿ ನಾಲ್ಕು ದೆಸೆಯಲ್ಲಿ || ೧೭ ||

ಕಹಳೆಯ ಧ್ವನಿಯನು ತುರುಕರು
ಪಾಳೆಯ ಗದಗದಿಸುತಲಿ |
ದಾಳಿಯ ಬರು [ತಾ]ನದಕೋ ರಾಮಯ್ಯನು
ಕರದಲ್ಲಿ ಧನುವ ಜೇವೊಡೆದು || ೧೯ ||

ಮೆಲ್ಲನೆ ದುರ್ಗವನಿಳಿದು ರಾಮಯ್ಯನು
ಬೊಲ್ಲನ ತಂದು ನಿಲ್ಲಿಸಲು |
ಜಲ್ಲನೆ ಏರಿ ದುವ್ವಾಳಿಸಿ ರಾಮಯ್ಯ
ಎಲ್ಲ ಕುದುರೆಯ ಪೌಜಿನಿಂದ || ೨೦ ||

ಏರಿ ಆನೆಯ ಮೇಲೆ ಬರುವ ಮಾತಂಗಿಗೆ
ತೋರಿದರು ಇವ ರಾಮನೆನುತ |
ಧಾರುಣಿಯೊಳು ಚೆಲ್ವರಗಂಡ ರಾಮನ ಕ
ಣ್ಣಾರೆ ನೋಡಿದಳು ಮಾತಂಗಿ || ೨೧ ||

ಮಾದಿಗಿತ್ತಿಯ ತೋರೆನುತಲಿ ರಾಮಯ್ಯ
ಕಾದುತ ಕೇಳಿದನಾಗ |
ಮೂದಲಿಸುತ ಬಂದಳು ರಾಮಗಿದಿರಾಗಿ
ಕಾದುತ ಮಾತಂಗಿ ನಿಂದಳು || ೨೧ ||

ನಿನ್ನ ನೀನರಿಯೆ ನೋಡೆನುತ ಮಾತಂಗಿ ಅ
ಹನ್ನೆ ಹೇಳಿದಳು ರಾಮನಿಗೆ |
ತನ್ನ ಸಮಾನದ ದೊರೆಗಳು ಸಹವಾಗಿ
ಚೆನ್ನಿಗ ರಾಮನ ಮೇಲೆ || ೨೨ ||

ರಕ್ಕಸ ಮಾದಿಗಿತ್ತಿಯ ಮೇಲೆ ಎಸೆವುತ
ಲೆಕ್ಕವಿಲ್ಲದೆ ಸಿಂಗಾಡಿಯನು |

ಸೊಕ್ಕಾನೆ ಕುದುರೆ ಕಾಲಾಳು ರಾಹುತರೆಲ್ಲ
ಇಕ್ಕೆಲದಲ್ಲಿ ಏರಿದರು || ೩೪ ||

ಸಿಡಿಲ ತಡೆಯನೊಡೆದಂತೆ ಸಿಂಗಾಡಿಯು
ಕಾಡಿನೊಳೆಸೆದ ಕಾರ್ಮುಗಿಳೆಯು |
ಕಡುಗಲಿ ರಾಮನು ಒಳ ಕಣಿವೆಯ ಪೊಕ್ಕು
ಕಡಿದನಾನೆಯ ಶಿರದೆಡೆಯ || ೩೫ ||

ಪಿಡಿದೆಳೆಯಲು ವೀರಜಡೆಯ ಮಾತಂಗಿಯ
ಪಡೆ ಮುರಿದುದು ದೆಸೆದೆಸೆಗೆ |
ತಡೆಯದೆ ರಾಮನವಳ ನೋಡಿ ಮನ್ನಿಸಿ
ಕಡುಗಲಿ ಮನದೊಳಿಂತೆಂದ || ೩೬ ||

ಸಂಗ್ರಾಮದೊಳು ಕಾದಿ ಹೆಂಗಡ ಕೊಂದರೆ ದು
ಸ್ಸಂಗ ತಪ್ಪದು ಸ್ವರ್ಗದಲಿ |
ನಿಂಗಿ ಹೋಗೆನುತ ಮುಂದಲೆಯನು ಬಿಡಲಾಗ
ಸಿಂಗಾಡಿಯಲಿ ತೆಗೆದೆಚ್ಚಳು || ೩೭ ||

ಹೊಕ್ಕಳು ಮೂದಲಿಸುತ ಮಾತಂಗಿಯು
ಇಕ್ಕೆಲದಲ್ಲಿ ಕರ್ಕಸದ |
ಲೆಕ್ಕವಿಲ್ಲದ ಅಂಬುಗಳನು ತೆಗೆತೆಗೆ[ತೆಗೆ]
ದಿಕ್ಕಿ ದೊರೆ ರಾಮನ ಮೇಲೆ || ೩೮ ||

ಆಲುತ ಬೊಬ್ಬಿರಿದೆಚ್ಚರೆ ರಾಮನ ಕೀಲಿಸಿ
ಕೀಲಿಸಿ ತಲೆಯ ತಟ್ಟುಗುಚಿ |
ಕೋಳಾಹಳವ ರಾಮ ನೋಡಿ ಇಂದಿನದಲ್ಲಿ
ಹಾಳಾಯಿತು ಕುಮ್ಮಟವು || ೩೯ ||

ಕಿತ್ತನು ರಾಮ ತನ್ನದೆಯ ಅಂಬನು ಆಗ
ಒತ್ತಿ ಹರಿವ ರಕುತವನು |
ಅತ್ಯಂತ ಹರುಷದಿ ನೋಡಿ ಹಾಹಾಯೆಂದು
ಮತ್ತೆ ಮನದೊಳಗೆ ಇಂತೆಂದ || ೪೦ ||

ರಾಮನು ಧರೆಯ ರಾಯರಗಂಡನೆಂದೆಂಬ
ನಾಮವಳಿಯಿತು ಇಂದಿನಲಿ |
ಹಾಹಾ ವಿಧಿಯೆ ಎಂದೆನುತಲಿ ರಣದ ನಿ
ಸ್ಸೀಮ ನುಡಿದ ರಾಮನಾಥ || ೪೧ ||

ಧಾರುಣಿಯೊಳು ತೋಳ ಬೀಸಿ ನಡೆವ ದೊರೆಯ
ವೀರ ರಾಯರಗಂಡನೆಂಬ |
[ಬಿರಿದಿ]ದೀಗಳಿಯಿತೆ ಎನುತಲಿ ರಾಮಯ್ಯ
ಮಾರಸನ್ನಿಭನು ತಾ ನುಡಿದ || ೪೧ ||

ಬಲವಂತ ರಾಮನೆಕ್ಕಟಿಗರೆಲ್ಲರು ತಮ್ಮ
ಅಲಗನುಗಿದು ಬೊಬ್ಬಿರಿದು |
[ಕೆಲ]ಬಲದಲ್ಲಿ ಬಾಣದ ಮಳೆಗರೆಯಲು
ಕೊಲಲೊಯೆಂದು ಏರಿದರು || ೪೨ ||

ಕೆಣಕುತ ಕಿಚ್ಚಿನ ರೋಷದಿ ಎಕ್ಕಟಿಗರು
ರಣಮಯವರ್ಭುತವಾಗೆ |
ದಣಿಯದೆ ಬಾಣದ ಬಸವಯ್ಯ ನೇಮಿಗೆ
ಹಣಿದನು ಖಾನಖಾನರನು || ೪೪ ||

ಹೆಬ್ಬುಲಿ ಪಶುವಿನ ಹಿಂಡಿನೊಳಗೆ ಹೊಕ್ಕು
ಅಬ್ಬರದಲಿ ಹೊಯ್ದಂತೆ |
ತಬ್ಬಿಬ್ಬಿಗೊಳ್ಳದೆ ಬಾಣದ ಬಸವಯ್ಯ
ನಿಬ್ಬರದಿ ಬಿದ್ದ ರಣದೊಳಗೆ || ೪೫ ||

ಇಟ್ಟಣಿಸುವ ಮುಂದಲ ಕಾಳಗದೊಳಗೆ
ಒಟ್ಟಿತು ಹೆಣದ ರಾಸಿಗಳು |
ಅಟ್ಯಾಡಿ ಕಡಿದರು ತುರುಕರ ದಂಡನು
ನೆಟ್ಟನೆ ರಾಮನ ಭಟರು || ೪೬ ||

ಹುಲಿಮುಖದಲ್ಲಿ ಕವಿಚೆಚ್ಚರು ಖಾನರು
ಕಲಿ ರಾಮನ ಮುಸುಕಿದರು |
ಅಲಗಿನ ತಡೆಯ ಬಿಟ್ಟಂತೆ ಕಾಲಾಳ
ತಲೆಗಳ ಚೆಂಡಾತಿರಲು || ೪೭ ||

ಕೊಂದನು ಕೈದಣಿಯದೆ ಮೈದಣಿಯದೆ
ಬಂದ ಮಲ್ಲೂಖಾನರನು |
ಬಂದನು [ಗೂ]ಗೆಗಲ್ಲಿನ ಮೇಲೆ ರಾಮಯ್ಯ
ಮಂದಿ ಬಿದ್ದಿತು ಹಿಂದೆಮುಂದೆ || ೪೮ ||

ಕಾಟಣ್ಣನೊಂದು ಕಡೆಯಲಿ ಕಾದುತಲಿರ್ದ
ನೋಟ ರಾಮನ ಮೇಲೆ ಹರಿದು |

ಕೂಟದ ಮಂದಿ ಸಂಗ್ರಹನೆಲ್ಲವ ಕೂಡಿ
ದಾಟಿಬಂದನು ರಾಮನೆಡೆಗೆ || ೪೯ ||

ಹರಿದೋಡಿ ಬಂದು ಹೊರಬಿದ್ದನು ಕಾಟಣ್ಣ
ದೊರೆ ರಾಮನ ಕಾಲ ಮೇಲೆ |
ಪರಬಲಾಂತಕ ವೈರಿಯಗಂಡನೆಂದೆಂಬ
ಬಿರಿದು ಸಲ್ವದೊ ರಾಮ ನಿನಗೆ || ೫೦ ||

ಕಡುಗಲಿ ಕಾಟನ ಕರೆದು ಹೇಳಿದನಾಗ
ದೃಢಗಲಿ ಚೆನ್ನಿಗರಾಮ |
ಪಡೆಯಡಗಿತು ನೀ ಮನೆಗ್ಹೋಗೊ ಕಾಟಣ್ಣ
ಒಡೆಯರಿಲ್ಲವು ಹೆಮ್ಮಕ್ಕಳಿಗೆ || ೫೧ ||

ಒಡಹುಟ್ಟಿದವನ ಬಿಟ್ಟು ಬಂದರೇನೆಂಬಳು
ಪಡೆದ ತಾಯಿ ಹರಿಯಮ್ಮ |
ಕಡುಗಲಿ ನೀ ಹೋಗು ಹೋಗೆನುತ ರಾಮಯ್ಯ
ಅಡಿಗೆರಗಿದನು ಕಾಟಣ್ಣಗೆ || ೫೨ ||

ಒಡನೊಡನರಸಿ ರಾಮಯ್ಯ ಕಾಟಣ್ಣಗೆ
ಒಡಲ ಗಾಯವು ಸೊಕ್ಕಿತೆನಗೆ |
ಪಡೆದ ತಾಯಿ ಹರಿಯಮ್ಮಗೆ ನೀ ಹೇಳು
ಕಡೆಯವನೊಪ್ಪಿಸುಯೆಂದ || ೫೩ ||

ಸುಣ್ಣ ಸಾಸುವೆಯ ತನ್ನೊಡಲೊಳು ಹೊಯ್ದಂತೆ
ಕಣ್ಹೋದ ಸಿಂಹ ಮುರಿಯಂತೆ |
ಪುಣ್ಯವಿಂದಿಗೆ ಹಾಳಾಗಿ ಹೋಯಿತೆ
ಎನ್ನುತ ಕಾಟಣ್ಣ ನುಡಿದ || ೫೪ ||

ಜೀವಗಳ್ಳರಗುಡ ಎನ್ನ ಸಹೋದರ ರಾಮ
ಆವಲ್ಲಿ ಗಾಯ ಪಡೆದೇಯೊ |
ದೇವ ಜಟ್ಟಂಗೀಶ್ವರನ ಕೃಪೆ ತಪ್ಪಿತು
ಸಾವೆನೊ ನಿನ್ನೊಡನೆಂದ || ೫೫ ||

ಆರು ಎಚ್ಚರು ಚೆಲ್ವರಗಂಡ ರಾಮಯ್ಯ
ಧಾರಣಿಯೊಳು ಸುಪ್ರಚಂಡ |
ತೋರಿಸು ನನಗವನ ಖಾನ ವಜೀರನ
ಬೇರು ಮಟ್ಟವು ಕಿತ್ತು ತರುವೆ || ೫೬ ||

ಹೆಂಗುಸು ಎನುತ ಬಿಟ್ಟೆನು ಮಾತಂಗಿಯ
ಸಂಗ್ರಾಮದೊಳು ಕವಿದೆ[ಚ್ಚೆ] |
ಹಿಂಗದೆ ಎದೆಯನು ತಾಕಿತು ಕಾಟಣ್ಣ ನೀ
ಕಂಗೆಡಬೇಡೆಂದ ರಾಮ || ೫೭ ||

ನನ್ನ ಸಂತೋಷಕ್ಕೆ ಕಿಚ್ಚನಿಕ್ಕಿದೆಯಲ್ಲೊ
ಮಾನ್ಯ ಕುಮಾರರಗಂಡ |
ಇನ್ನಾವ ಕಾಲಕ್ಕೆ ನಿನ್ನಂಥ ಬಿರಿದುಳ್ಳ
ಚೆನ್ನನ ಕಾಬೆನೊ ತಮ್ಮ || ೫೮ ||

ಇರುವೆಯ ಗೂಡಿಗೆ ಕಿಚ್ಚನಿಕ್ಕಿದೊ ರಾಮ
ಅರಿಬಿರಿದಿನ ಹೊಂತಕಾರ |
ಹರಿಯಮ್ಮಗೇನೆಂದು ಹೇಳಲಪ್ಪೆನು ಚಾರಿ
ವರಿಯರೆ ಈ ಸುದ್ದಿ ಕೇಳಿ || ೫೯ ||

ಕಂಗೆಡದಿರಪ್ಪ ನಾ ಸಂಗ್ರಾಮದೊಳು ಕಾದಿ
ಹಿಂಗದೆ ಕೀರ್ತಿಯ ತಂದೆ |
ತುಂಗವಿಕ್ರಮ ಬಿದ್ದನೆನುತಲಿ ಕಾಟಣ್ಣ
ಅಂಗನೆಯರಿಗೆಲ್ಲ ಪೇಳೊ || ೬೦ ||

ಹೋಗೊ ಬೇಗದೊಳು ನನ್ನಣ್ಣ ದೊಡ್ಡಣ್ಣ
ಹೋ[ಗದ] ಅಭಿಮಾನಗಳನು |
ಚೇಗಿ ಮಾಡಲಿಬೇಡ ರಾಣಿವಾಸವ ಕೊಲ್ಲು
ಹೋಗೆಂದು ನುಡಿದ ರಾಮಯ್ಯ || ೬೧ ||

ತಂದೆಯ ವಂಶಕ್ಕೆ ಕುಂದ ತಂದವನಲ್ಲ
ಅಂದೆ ಕೊಂದಳು ಚಿಕ್ಕಮ್ಮ |
ಕಂದರ್ಪರೂಪ ಕಾಟಣ್ಣ ಕೇಳೆನುತಲಿ
ನೊಂದು ನುಡಿದ ರಾಮನಾಥ || ೬೨ ||

ನಲಿದು ನನ್ನ ಪೆತ್ತ ತಾಯಿ ಹರಿಯಮ್ಮಗೆ
ಬಲು ಖತಿಯನು ಹೇಳಬೇಡ || ೬೩ ||

ಇನ್ನು ನೀ ಗಾಯದಲಳಿ[ದೆ ಎಂ] ದೆಂಬುದು
ಎನ್ನಲ್ಲಿ ಇನಿತಿಲ್ಲ ರಾಮ |
ಮನ್ನಿಸೊ ನಿನ್ನ ಪ್ರಾಣವನೊಂದು ಗಳಿಗೆಗೆ
ನಿನ್ನೊಳಯದುವೆನೆಂದ ಕಾಟ || ೬೪ ||

ಅಂಗವ ಕೊಡಬೇಡ ನಾ ಬರುವನಕಲಿ
ಸಂಗ್ರಾಮದೊಳು ಓಡಬೇಡ |
ಕಂಗಳು ಮೂರುಳ್ಳ ಜಟ್ಟಂಗಿರಾಮನ
ಲಿಂಗನ ಕೃಪೆ ತಪ್ಪಿತೆಮಗೆ || ೬೫ ||

ತರಿಹರಿಸದೆ ಓಡಿಬಂದನು ಕಾಟಣ್ಣ
ಉರಿಗೊಂಡ ಕರ್ಪುರದಂತೆ || ೬೬ ||

ಹೇಳುತ ದುಃಖದೊಳಾಡುತ ಕಾಟನ
ಕೇಳಿ ಕಂಪಿಲ ಮೂರ್ಛೆಗೈದ |
ಕೇಳಿದಳಾಗಲೆ ಹರಿಯಮ್ಮ ಸುದ್ದಿಯ
ಗೋಳಿಟ್ಟು ಹುಡಿಯೊಳು ಹೊರಳಿ || ೬೭ ||

ಕಡುಗಲಿ ರಾಮನ ಒಡಹುಟ್ಟಿದವರೆಲ್ಲ
ಹುಡಿಯಲ್ಲಿ ಬಿದ್ದು ಹೊರಳಿದರು |
ನುಡಿದರು ಜನರೆಲ್ಲ ತಮತಮಗಿಂದಿಗೆ
ಕಡೆಗಾಲವಾಯಿತೆಂದರೆಲ್ಲ || ೬೮ ||

ತಡೆಯದೆ ಹರಿಯಮ್ಮನೊಳು ಪೇಳಿ ಪಾದಕೆ ಬಿದ್ದು
ನಡೆದು ಬಂದನು ಕುಮ್ಮಟಕೆ || ೬೯ ||
ಬಂದನು ರಾಮಯ್ಯನ ಮಡದಿಯರೆಲ್ಲರ
ನಿಂದು ಶೃಂಗಾರ ಮಾಡಿಸಿದ |

ಚೆಂದದಿ ಮೊರೆವುತ ಆಡುತ ಪಾಡುತ
ಬಂದರು ರಾಜಬೀದಿಯಲಿ || ೭೦ ||

ಬಂದರು ರಮನ ಮಡದಿಯರೆಲ್ಲರು
ಚೆಂದಚೆಂದದಲಿ ಮೆರೆವುತ |
ಇಂದೆಮ್ಮ ಜೋಡುಗಲುವರೆ ಚೆನ್ನಿಗರಾಮ
ಕಂದರ್ಪರೂಪ ಎಂದೆನುತ || ೭೧ ||

ವೀರಾಧಿವೀರ ಹಾ ವೀರ ರಣಶೂರ ಹಾ
ಮಾರಾಂತರ ಗಂಡ ಮಹಾ |
ಧಾರುಣಿಯೊಳು ಚೆಲ್ವರಗಂಡ ಹಾಯೆಂದು
ನಾರಿಯರೆಲ್ಲ ಮೊರೆದು || ೭೨ ||

ಮಳಲಗೌರಿಯ ನೋಂತರು ಏಳು
ಜಲ್ಮಕೆ ದೊರೆ ರಾಮಗೆ ಗಂಡನೆನುತ |

ಅರಸು ಕಂಪಿಲರಾಯ ಮಾವಲನಾಗಲಿ ನಮಗೆ
ಹರಿಯಮ್ಮ ಅತ್ಯಾಗಲೆಂದು || ೭೩ ||

ಓಡಿಬಂದರು ಕೊಂಡವಹತ್ತಿ ಬೇಗದಿ
ಗಾಢದಿ ಹತ್ತಿ ಕೆಂಡವನು |
ನೋಡುತ ನಸುನಗೆ ನಗುತ ರಾಮಯ್ಯನ
ಪಾಡುತ ದುಮುಕಿದರಾಗ || ೭೪ ||

ಕಿಚ್ಚ ಹಾಯ್ವಾಗಲಿ ಹೆಚ್ಚಿತು ಬೊಬ್ಬೆಯು
[ಬೆ]ಚ್ಚಿತು ಕುಮ್ಮಟದುರ್ಗ |
ಒಚ್ಚೊತ್ತಿಗೆಲ್ಲರ ಕಿಚ್ಚಿನೊಳಗೆ ನೂಕಿ
ನಿಶ್ಚೈಸಿ ತಿರುಗಿದ ಕಾಟ || ೭೫ ||

ತನ್ನರಮನೆಗಾಗಿ ಬಂದನು ಕಾಟಣ್ಣ
ಉನ್ನತ ಕಿಚ್ಚುರಿವುತಿರೆ |
ಮನ್ನೆಯ ರಾಮನ ಮಡದೇರ ಕೊಂದೆನು
ಎನ್ನುತ ಕಾಟ ಪೇಳಿದನು || ೭೬ ||

ತಡಬೇಡ ಎನ್ನನು ಕಡಿ ಬೇಗ ಎಂದಳು
ಕಡುಗಲಿ ಕಾಟಣ್ಣನರಿಸ |
ಬಿಡು ನನ್ನ ಮೇಲನ ಆಸೆಯನೆಂದಳು
ನುಡಿದಳು ತನ್ನರಸನ ಕೂಡೆ || ೭೭ ||

ಕಡಿಯೊ ಎನ್ನಯ ಜೀವದಾಸಿಲ್ಲ ಕಾಟ
ಹಿಡಿಯಿರಿಯೆನೆ ಖಂಡೆಯವ |
ಬಿಡದೆ ಖಂಡೆಯವೆತ್ತಿ ಜಲ್ಪಿಸಿ ಕಾಟನು
ನಡುವುರದ ಮೇಲಿನ್ನು ಇರಿದ || ೭೮ ||

ಸುರಿವ ರಕ್ತವ ಕಂಡು ಬಾಯೊಳು ಬಾಯಿಟ್ಟು
ಒರಗಿಸಿದನು ರಾಣಿಯನು |
ತರಿಗೆಂಡವ ತನ್ನ ಒಡಲೊಳು ಹೊಯ್ದಂತೆ
ತಿರುಗಿದ ರಾಮನಿದ್ದೆಡೆಗೆ || ೭೯ ||

ಹೆಮ್ಮಕ್ಕಳ ಕೊಂದು ತಿರುಗಿ ಕಾಟಣ್ಣನು
ನಿರ್ಮಳವಾಯಿತೆಂದೆನುತ |
ತಮ್ಮ ರಾಮಯ್ಯನೇನಾದನೆನುತ ಬಂದು
ಉಮ್ಮಳಿಸುತಲಿ ಕಾಟಣ್ಣ || ೮೦ ||

ಊರು ಹೋಯಿತು ಒಳಹೊಕ್ಕರು ತುರುಕರು
ಧೀರ ರಾಮನ ಎಕ್ಕಟಿಗರು |
ಸೇರಿ ನಿಂದರು ತಮ್ಮೊಡೆಯನ ಸುತ್ತಲಿ
ಹೋರಾಡಿ ಹೊಯ್‌ಹೊಯ್ದೆಳೆದು || ೮೧ ||

ಮುಂದಿದ್ದ ದೇವಿಸೆಟ್ಟಿಯ ಲಿಂಗ ನುಡಿದ ನಾ
ನೆಂದೆಂದು ನಿನಗಿತ್ತೆ ಪ್ರಾಣ |
ಇಂದಿನ ಕಾಳಗದೊಳು ಎನ್ನ ನೋಡೆಂದು
ಕೊಂದನು ಖಾನ ಮಲುಕರ || ೮೨ ||

ಕಾಯವೆಲ್ಲವು ತಾತತೂತಾಗಲೆಚ್ಚರೆ
ಗಾಯದಿ ಕಡಿಕಡಿದೊಟ್ಟಿ |
ರಾಯ ಕಂಪಿಲನ ಕುಮಾರನೆ ನೋಡೆಂದು
ಆಯೆಡೆಯಲಿ ಬಿದ್ದ ಲಿಂಗ || ೮೩ ||

ಬಂಟತನಕೆ ಪ್ರಾಣ ಲಿಂಗಣ್ಣ ನೀನಳಿದೆ ಇ
ನ್ನುಂಟೆ ಎನಗೆ ಜೀವದಾಸೆ |
ಒಂಟಿಲಿ ಸಿಂಹದ ಮರಿಯಂತೆ ಕುಳಿತಿರ್ದ
ಕಂಟಾಯಿಸದೆ ರಾಮನಾಥ || ೮೪ ||

ಏಳು ವೀರರಗಂಡ ಕೈಯ್ಯ ಮರೆಯ ಬೇಡ
ಏಳು ಬಲ್ಲಾಳರಗಂಡ |
ಏಳು ಸುರಿತಾಳನ ಗಂಡ ರಾಮಯ್ಯ
ಏಳೆನ್ನ ಕಷ್ಟ ನೋಡೆಂದ || ೮೫ ||

ಬೊಲ್ಲನ ಏರಿರ್ದ ಬಲ್ಲೇವ ಪಿಡಿದಿರ್ದ
ಹೊಡೆದ ಅಂಬಿಗ ಗಾಯದಲಿ |
ಬಾಣದಿ ಹೊಡೆಯಲು ತಗುಲಿತು ರಾಮೈಗೆ
ನಿಂತಿತು ಬೊಲ್ಲ ಜೂಕರಿಸಿ || ೮೬ ||

ಬಾಣದ ತಾಪ ಬಂದಿತು ರಾಮನಾಥಗೆ
ಮೇಳೈಸಿ ಕಣ್ಣ ಮುಚ್ಚಿದನು |
ನೇಜದ ಮೊನೆಯನು ನಿಲಹಾಕಿ ರಾಮಯ್ಯ
ಮೂರ್ಛೆಯು ಆಗಿ ನಿಂತಿಹನು || ೮೭ ||

ಏಳು ರಾಯರಗಂಡ ಕಾಟಣ್ಣನೆನಲಾಗಿ
ತಪ್ಪನೆ ಕಣ್ಣ ತೆರೆದನು |

ಕಣ್ಣನು ತೆರೆಯಲು ಕಂಗೆಟ್ಟು ಓಡಿದರು ಕಾ
ಟಣ್ಣ ನೋಡಿ ಬೆನ್ಹತ್ತಿ || ೮೮ ||

ಮಾದಿಗಿತ್ತಿಯನು ತೋರೆಂದು ಕಾಟಣ್ಣನು
ಮೂದಲಿಸುತ್ತ ಏರಿದನು |
ಕಾದಿಸಿ ತನ್ನ ತಮ್ಮನ ಎಚ್ಚಳೆನುತಲಿ
ಭೇದಿಸಿ ನೋಡಿದನವಳ || ೮೯ ||

ಹತ್ತುಸಾವಿರ ಸಿಂಗಾಡಿಯ ತುರುಕರು
ಮತ್ತೆಚ್ಚರಂಬಿನಲಿ ಮುಳುಗಿ |
ಸುತ್ತ ತಿರಿಗಿ ನೋಡಿದ ಕಾಟಣ್ಣನು ಮಾದಿ
ಗಿತ್ತಿಯು ಸಿಕ್ಕಳೆನುತ್ತ || ೯೦ ||

ಕರುಳ ಹರಿದು ಚೆಲ್ಯಾಡಿ ಅವಳ ಸೀಳಿ
ಸುರಿಸುವೆ ರಕುತವನೆಂದ |
ದೊರೆ ರಾಮ ನನ್ನ ತಮ್ಮನ ಎಚ್ಚಳೆನುತಲಿ
ಉರಿವ ಗಾಯದಲಿ ಬೊಬ್ಬಿರಿದ || ೯೧ ||

[ಅದ್ದ]ರಿಸುತ ಖಾನಖಾನರ ತರಿದನು
ಹದ್ದು ಹಕ್ಕಿಯ [ಪೊ]ಯ್ವಂತೆ |
ಮುದ್ದು ಎನ್ನಯ ಒಡಹುಟ್ಟಿದವ ನೋಡೆಂದು
ಬಿದ್ದನು ರಣದೊಳು ಕಾಟ || ೯೨ ||

ಮಡಿದೆಯೊ ಎನ್ನ ಒಡಹುಟ್ಟಿದಣ್ಣಾ ಎಂದು
ಕಡಿದೆಯೊ ಖಾನಖಾನರನು |
ಬಿಡದೆ ನಿನ್ನೊಡನೀಗ ಪಯಣವು ನನಗೆಂದು
ನುಡಿದನು ಚೆನ್ನಿಗರಾಮ || ೯೩ ||

ಇದು ಪರನಾರಿ ಸೋದರ ರಾಮನಾಥನ
ಪದಕೃತಿಯೊಳಗೊಂದು ಕಥೆಯ |
ಚದುರ ತಾ ಕಾ[ದೆ] ಮಾತಂಗಿ ರಾಮಯ್ಯನ
ಚದುರಿಟ್ಟ ಗಾಯ ಸಂಪೂರ್ಣ || ೯೪ ||

**ಅಂತು ಸಂಧಿ ೧೫ಕ್ಕಂ ಪದನು ೧೬೬೩ಕ್ಕಂ ಮಂಗಳ ಮಹಾಶ್ರೀ**

# ಸಂಧಿ ೨೬ - ಕೊಮಾರ ರಾಮಯ್ಯನ ಮರಣ - ಕೈಲಾಸ ಗಮನ

ಶ್ರೀ ಗಿರಿಜಾ[ಸ್ಯಾಂಬುಜ ದಿನ]ನಾಯಕ
ಭೋಗಿಭೂಷಣ ಭಾಳನೇತರ |
[ಭಾಗೀರಥಿಧರ ಭವರೋಗವೈದ್ಯನೆ
ನಾಗಕುಂಡಲ]ಶರಣೆಂಬೆ || ೧ ||

ತಿರಿಗಿಬಂದಳು ಮಾತಂಗಿ ರಾಮನ ಮೇಲೆ
ಧುರಗಲಿತನದಿಂದಲೆಚ್ಚು |
ಪರಿದು ಮುತ್ತಿತ್ತು ತುರುಕರ ದಂಡು ಸುತ್ತಲಿ
ನೆರಹುಗೊಡದೆ ರಾಮಯನ || ೨ ||

ನೆಟ್ಟವು ಸರಳು ರಾಮಯ್ಯನ ಮೈತುಂಬ
ಬೊಟ್ಟ ತೂರುವರೆ ಇಂಬಿಲ್ಲ |
ದಿಟ್ಟ ಕುಮಾರರಾಮಯ್ಯ ಬೊಬ್ಬಿಟ್ಟಿರೆ
ಬೆಟ್ಟವೆಲ್ಲವು ಆರ್ಭಟಿಸೆ || ೩ ||

ತುಟ್ಟಯಿಸಿತು ಕೂರಂಬಿನ ಗಾಯವು
ಕೆಟ್ಟಿತು ಹೊಸಮಲೆದುರ್ಗ |
ದಿಟ್ಟ ಕಂಪಿಲನ ದೆಸೆಯು ಹಾರಿಯೋಯಿತು
ಬಿಟ್ಟನು ರಾಮ ಪ್ರಾಣವನು || ೪ ||

ಉಳಿದಂಥ ಮಂದಿ ರಾಹುತರೆಲ್ಲ
ಒಳಿತಾಗಿ ಕಡಿದಾಡಿ ಬಿದ್ದರು |
ಕಳಕಳಿಸುವ ರಾಮಯ್ಯನ ಸಂಗಡ
ಅಳಿದರು ಎಲ್ಲ ಮನ್ನೆಯರು || ೫ ||

ಧುರಧೀರ ರಾಮನ ಮನವ ನೋಡುವೆನೆಂದು
ಪರಮೇಶ್ವರ ಪ್ರಾಣವಿತ್ತ || ೬ ||

ಕೂಗುತ ಬಂದ ರಾಮಯ್ಯನ ಮೇಲೊಂದು
ಕಾಗೆ ಕುಳಿತರೆ ಸತ್ತನೆಂದು |
ಸಾಗಿಬಂದಿತು ಮಾತಂಗಿಯ ಬಲವೆಲ್ಲ
ಬೇಗ ರಾಮನ ಸುತ್ತ ಬಳಸಿ || ೭ ||

ಕೇಳಿ ಮನ್ನೆಯರೆಲ್ಲ ಕೊಂದೇನೆನುತ ಬಂದು
ಒತ್ತಿ [ನಿಂ]ದರು ಬೊಲ್ಲನೆಡೆಗೆ |

ಬಂದು [ಮಾತಂಗಿ]ಯು ರಾಮನ ಎಳೆದಳು
ಒಲಿದು ಬಿದ್ದನು ರಣದೊಳಗೆ || ೮ ||

ತೆರೆದು ಕಣ್ಣನು ನೋಡಲು ರಾಮ ತುರುಕರು
ಮುತ್ತಿ ಕೊಲ್ಲು[ವ]ನೆಂದು ನಮಿಸೆ |
ತ[ರಿ]ವೆನೆನುತ ಮುಂದಕೆ ತಾ ತೆರಳಿದರೆ
ಸುರಲೋಕದ ನಾರಿಯರು || ೯ ||

ಕರೆದೊ[ಯ್ವೆ]ಕ ತಮ್ಮ ನೆರೆವುದೆಂದೆನು[ತಿರೆ]
ಚರಣವ ಹಿಮ್ಮೆಟ್ಟಿದನು |
ಪರನಾರಿಯ ಸಹೋದರನೆಂಬ ಸತ್ಯವು
ಬಿರಿದು ದಕ್ಕಿದರೆ ಸಾಕೆನುತ || ೧೦ ||

ಧುರದೊಳು ಹೊ[ದ್ದಿದ]ನೆಂಬ ಅಪಕೀರ್ತಿಯು
ಬರುವದೆಂದು ಹಿಮ್ಮೆಟ್ಟಿದನು |
ಧುರಹೇಡಿಯಾದನೆಂದೆನುತಲಿ ಜರಿವುತ
ಸುರಲೋಕದ ನಾರಿಯರು || ೧೧ ||

ತಿರಿಗಿದರತ್ತಲಿ ಕಲಿ ರಾಮನಾಥನು
ಮರಣವಾದನು ನಿಮಿಷದಲಿ || ೧೨ ||

ಬಿಟ್ಟು ಕಣ್ಣವ ಕಾಣುತ ಬರುತಾನೆಂದು
ಕೆಟ್ಟೋಡಿ ತುರುಕರ ದಂಡು |
ಮುಟ್ಟಲಮ್ಮದೆ ಮಾತಂಗಿಯ ಪರಿವಾರ
ಕಟ್ಟಕಡೆಯಲಿ ನಿಂದಿಹರು || ೧೩ ||

ಮತ್ತೆ ಮೇಲಾಗಿ ಕಾಗೆ ಬಂದು ಕುಳ್ಳಿರಲು
ಸತ್ತನು ಎನುತ ನಿಶ್ಚೈಸಿ |
ಮುತ್ತಿ ಸಹಬಲವು ರಾಮಯ್ಯನ
ಒತ್ತಿ ತಿವಿದು ನೂಕಿದರು || ೧೪ ||

ಹತ್ತಿರೆ ಬಂದು ಮಾತಂಗಿ ಖಾನರ ಕೂಡಿ
ಸತ್ತನೆನುತ ತಲೆಗೊಯ್ದು |
ಬೊಲ್ಲನ ಪಿಡಿಯಬೇಕೆನುತಲಿ ತುರುಕರು
ಮೆಲ್ಲನೆ ಸರಪಳಿ ತಂದು || ೧೫ ||

ಸರಪಳಿ ಬೊಲ್ಲಗೆ ಹಾಕಿ ಹಿಮ್ಮಡಿ ತಪಪಿಸಿ
ಝೂಗಿಸಿ ಎಳೆದು ಬೊಲ್ಲನನ |

ಎಳೆಯಲಾಕಾಶಕ್ಕೆ ಪಕ್ಷಿಯಂದದಿ ಹಾರಿ ಮ
ರಳಿ ಬಿದ್ದಿತು ಧರಣಿ ಮೇಲೆ || ೧೬ ||

ರಾಮನ ತಲೆಯನು ಕೊಯ್ದರು ತುರುಕರು
ನೇಮದಿ ಡಿಳ್ಳಿ ಮುಟ್ಟಿಪೆವು |
ಮುತ್ತು ಮಾಣಿಕ ಚೆನ್ನವ ಬಾಯೊಳು ತುಂಬಿ
ಸುತ್ತಿ ದೇವಾಂಗವ ತಲೆಗೆ || ೧೭ ||

ಸಾಯಬಹುದೆ ಚೆನ್ನಿಗರಾಮ ಮಲೆವಂತ
ರಾಯವಜೀರರಗಂಡ |
ಕಾಯಜರೂಪ ಎನುತ ಖಾನ ಮಲುಕರು
ಹಾಯೆಂದು ಬೊಟ್ಟ ಕಚ್ಚಿದರು || ೧೮ ||

ಗಂಧ ಕಸ್ತೂರಿ ಕುಂಕುಮ ಕಾದಂಬವ
ತಂದರು ಖಾನಮಲುಕರು |
ಮು……………ರಳುವ ಜಾಜಿ ಮಲ್ಲಿಗೆ ಸಂಪಗೆ
ತುಂಬಿ ನಿಂದು ರಾಮನ ಶೃಂಗರಿಸಿ || ೧೯ ||

ಮ[ನವೇಗ] ತೇಜಿಯ ತರಿಸಿ ಅದರ ಮೇಲೆ
ಘನ ವೀರರಾಮನ ತಲೆಯ |
ದಿಕರನುದಯವಾಗದ ಮುನ್ನ ನೀವು ಹೋಗಿ
ಎನುತ ಸುರಿತಾಳನ ಬಳಿಗೆ || ೨೦ ||

ಒಂದೆರಡು ದಿವಸದ ಮಧ್ಯಾಹ್ನದೊಳು ತಲೆ
ಬಂದಿತು ಡಿಳ್ಳಿ ಪಟ್ಟಣಕೆ |
ಮುಂದೆ ಬಂದ್ಹೇಳಿದರು ಸುರಿತಾಳರಾಯಗೆ
ನೊಂದು ವೀಳ್ಯವನುಗುಳಿದನು || ೨೧ ||

ತರಹೇಳು ತಲೆಯೆನುತ ಸುರಿತಾಳನು
ವರಸುತೆ ಸಹ ತಾವು ಬಂದು |
ಹಿರಿದು ದುಃಖವನು ಮಾಡಿದರು ತಲೆಯ ನೋಡಿ
ದೊರೆದೊರೆಗಳು ಮುರುಗಿದರು || ೨೨ ||

ಇದ್ದಾಗೆ ತರಹೇಳಿದೆ ನಾನು ರಾಮನ
ನಿರ್ದೈಸಿ ಕೊಲ್ಲ ಹೇಳಿದೆನೆ? |
ಮುದ್ದುಮುಖದ ಚೆನ್ನಿಗರಾಮ ಹಾಯೆಂದು
ಬಿದ್ದನು ಸುರಿತಾಳ ಹೊರಳಿ || ೨೩ ||

ಸುರಿತಾಳನ ಮಗಳು ಈ ತಲೆಯನು ಕಂಡು
ಸ್ಥಿರಕಾಲವು ಬಯಸಿರ್ದೆ |
ಪುರುಷ ನೀನಳಿಯಬಹುದೆ ಈಗ ನೀನೆಂದು
ಹರುಷದಿ ಮುಖವ ನೋಡಿದಳು || ೧೪ ||

ನಿನ್ನನು ಪ್ರಾಣಸಹಿತ ತಂದರೆನುತಲಿ
ಚೆನ್ನಾಗಿ ನಂಬಿರ್ದೆ ಬೇಗ |
ಇನ್ನು ನೀನಳಿಯಬಹುದೆ ಎಂದೆನುತಲಿ
ಉನ್ನತ ಶೋಕ ಮಾಡಿದಳು || ೧೫ ||

ನೋಡಿದ ಸುರಿತಾಳನು ತನ್ನ ತನುಜೆಯ
ಬೇಡಿಕೊಂಡತಿ ಬುದ್ಧಿ ಪೇಳಿ |
ಬೇ[ಡವ್ವ]ರೂಢಿಗೆ ಅಪಕೀರ್ತಿಯು ಎಂ
ದಾಡಿದ ಇದ ಬಿಡು ಮಗಳೆ || ೧೬ ||

ಕಡುಗಲಿ ರಾಮನ ಬಿಡಲಾರೆನುತವನ
ಜಡೆಯ ಮುತ್ತಿನ ಗೊಂಡೆಯವ |
ಮುಡಿಸಿ ತನ್ನಯ ತುರುಬಿನ ಮೇಲೆ ಕಟ್ಟಿದಳು
ಕಡು ಶೋಕವ ಮಾಡಿದಳು || ೧೭ ||

ದೇಶದೊಳಗೆಲ್ಲ ವಸ್ತುವನೆಲ್ಲ ತರಿಸಿದಳು
ರಾಸಿಗಳನು ಮಾಡಿಸಿದಳು |
ಭೂಸುರರಿಗೆ ದಾನವನಿತ್ತು ದಣಿಸಿದಳು
ಮೀಸರಗಂಡನೆಂದೆನುತ || ೧೮ ||

ಕಡುಗಲಿ ರಾಮನ ತಲೆಯ ತೆಗೆದುಕೊಂಡು
ತೊಡೆಯ ಮೇಲಿಟ್ಟು ನೋಡಿದಳು |
ಪಡೆದೆಯೊ ನಿನ್ನ ಚೆಲ್ವಿಕೆಯ ಬ್ರಹ್ಮನ ಕೈಲಿ
ನುಡಿದು ಶೋಕವನು ಮಾಡಿದಳು || ೧೯ ||

ಕಳೆಯಲಿ ಬಿದಿಗೆ ಚಂದ್ರ ದಿವ್ಯರೂಪಿಲಿ
ಇಳೆಯೊಳು ನೀನು ಮನ್ಮಥನೊ |
ತಳುಹದೆ ನಾ ನಿನ್ನ ಬಯಸಿದಲ್ಲದೆ ನೋಡಿ
ಕಳುಹಿದ ಸುರಿತಾಳ ದಂಡ || ೨೦ ||

ನೀನೆ ನನಗೆ ಗಂಡನಾಗಬೇಕೆನುತಲಿ
ನಾ ನಿನ್ನ ಬಯಸಿದೆ ನೋಡಿ |

ಖಾನರ ಕಳುಹಿಸಿ ಕೈಸೆರೆ ತಾರೆಂದೆ
ಹಾನಿ ಮಾಡಿದರು ಪಾಪಿಗಳು || ೩೧ ||

ಪೊಡವಿಪ ತಂದೆ[ಗೆ] ಕಿಚ್ಚ ಬೇಡಿದಳಾಗ
ಕಡುಗಲಿ ರಾಮನ ತಲೆಯ |
ಉಡಿಯಲಿ ತಾ ಕಟ್ಟಿಕೊಂಡು ಬೀಳುವೆನೆನಲು
ನುಡಿದ[ನು]ಸುರಿತಾಳನೊಡನೆ || ೩೨ ||

ಅಪಕೀರ್ತಿಯ ಮಾಡಿಕೊಂಬರೆ ಕಂದಯ್ಯ
ವಿಪರೀತ ನಿನ್ನಯ ಮಾತು |
ತಪವಿರುವಾ ಸತ್ತ ತಲೆಯನು ಪಿಡಿಕೊಂಡು
ಅಪಹರಿಸೆಂ[ದೂ]ರ[ಲಿ]ದನು || ೩೩ ||

ತಂದೆಯ ಮಾತ ಮೀರದೆ ನೋಡಿ ತಲೆಯನು
ಕಂದಪ್ಪ ಸಮರೂಪ |
ಎಂದಿಗೆ ನಿನ್ನಂತ ಚೆಲುವ ಪುಟ್ಟುವನೆಂದು
ಕುಂದದೆ ಬಿಗಿದಪ್ಪಿದಳು || ೩೪ ||

ಪ್ರಾಣವಿಲ್ಲದೆ ಇಷ್ಟು ಕಳೆಯಲ್ಲಿ ನೀನಿರ್ದೆ
ಜಾಣತನದ ದೇಹವನು |
ಕಾಣಿಸಿ ನೆರೆವ ಸ್ವರ್ಗಲೋಕವ ಸುಟ್ಟು
ಊನ್ಯ[ವ]ಲ್ಲ[ವೆ] ಮುದ್ದುರಾಮ || ೩೫ ||

ಒಂದು ಗಳಿಗೆ ನಿನ್ನ ಭೋಗದೊಳಿದ್ದರೆ
ಹಿಂದೇಳು ಮುಂದೇಳು ಜಲ್ಮ |
ಕುಂದದೆ ಪಾವನವಾಗದೆ ಪೋ[ಗ]ದೆ
ಕಂದರ್ಪನ ಸಮರೂಪ || ೩೬ ||

ದುಂಡುಮಲ್ಲಿಗೆ ಸಂಪಗೆ ಕೇತಕಿಯನು
ಮಂಡೆ ತುಂಬಲಿ ಮುಡಿಸಿದಳು |
ಗಂಡರಗಂಡ ಚೆಲ್ವರಗಂಡನೆನುತಲಿ
ಮುಂಡಾಡಿ ಮುಖವ ನೋಡಿದಳು || ೩೭ ||

ಕಾಳಗದಲಿ ಕಲಿಪಾರ್ಥನೊ ಭೀಮನೊ
ಆಳುತನಕೆ ಮನ್ಮಥನೊ |
ಸೂಳಿಟ್ಟು ಮುಂಡಾಡಿ ಮುಖದೊಳು ಮುದ್ದಿಸಿ
ಊಳಿಗದರ ಕೈಗೆ ಕೊಡಲು || ೩೮ ||

ತಂದು ಕಟ್ಟಿದರು ಸುರಹೊನ್ನೆಯ ಮರದಲ್ಲಿ
ಬಂದು ಕುಳಿತ ಸುರಿತಾಳ |
ಬಂದರು ಪುರದ ಜನರು ರಾಮಯ್ಯನ
ಅಂದವ ನೋಡಿ ಮರುಗಿದರು || ೩೯ ||

ಒಂದು ದಿವಸ ಅಲ್ಲಿ ಇರಲಾಗ ಆ ತಲೆ
ಮುಂದುಗೆ[ಟ್ಟಿತು] ಪಟ್ಟಣವು |
ಸಂದಿತು ಮಧ್ಯರಾತ್ರಿಯ ನಡುವಿರುಳಲಿ
ಬಂದವು ಅಭೂರ್ತಗಳು || ೪೦ ||

ಡಿಳ್ಳೆಲ್ಲ ನಡುಗಿತು ರಾಮನ ಬೊಬ್ಬೆಗೆ
ನಿಲ್ಲಲಾರದೆ ಕಂಗೆಡುತ |
ಇಲ್ಲಿ ಇದ್ದರೆ ಪಟ್ಟಣ ಕೆಡುವುದು ಎಂದು
ಎಲ್ಲ ಶಾಸ್ತ್ರಿಕರು ಪೇಳಿದರು || ೪೧ ||

[ಹಿಂ]ದುವ ರಾಯನ ತಲೆ ನಮ್ಮ ಪಟ್ಟಣದ
ಮಂದಿಯನೆಲ್ಲ ಕೊಲುತಿಹುದು |
ಬಂದರು ಖಾನ ವಜೀರರು ತಲೆಯನು
ತಂದು ಹಾಕಿದರಗುಳೊಳಗೆ || ೪೨ ||

ಕೂ[ಗುವ] ರಾಮನ ಧ್ವನಿಗೇಳಿ ಕಂಗೆಟ್ಟು
ಆಗ ಮಡಿವುದು ಪಟ್ಟಣದಿ |
ನೀಗಿದೆವೆನುತಲಿರ್ದೆವು ನಮ್ಮ ಡಿಳ್ಳಿಗೆ
ಬೇಗೆಯನಿಕ್ಕ ಬಂದನೆನುತ || ೪೩ ||

ದಿನವೊಂದಕೆ ಲಕ್ಷವು ಲಕ್ಷ ಮಡಿವುದು
ಘನ ರಾಮನ ಧ್ವನಿಗೇಳಿ |
ಮನದೊಳು ಅನುಮಾನವ ಮಾಡಿ ಸುರಿತಾಳ
ತನುಗುಂದಿ ಚಿಂತಿಸುತಿರ್ದ || ೪೪ ||

ಕಳುಹಿದ ಸುರಿತಾಳರಾಯನು ಭಟ್ಟನ
ತಳುಹುದೆ ಕಂಪಿಲನೆಡೆಗೆ |
ಬೆಳಗಾಗೊ ಹೊತ್ತಿಗೆ ತಮ್ಮ ರಾಮನ ತಲೆಯ
ಗಳಿಲನೊಯ್ವಂತೆ ಮಾಡೆಂದ || ೪೫ ||

ಬಂದನು ಸುರಿತಾಳರಾಯನ ಭಟ್ಟನು
ಒಂದಾರುದಿವಸ ಬೇಗದಲಿ |

ನಿಂದಾಗ ಕಂಪಿಲರಾಯಗೆ ಪೇಳಿದ
ತಂದುಕೋ ಮಗನ ತಲೆಯನು || ೪೬ ||

ನೀವೆ ತಂದರೆ ಆಗುವುದೆಂದು ಭಟ್ಟನ
ದೇವ ಕಂಪಿಲ ಬೆಸಗೊಂಡ |
ಕೋವಿದ ಲಕ್ಷವ ಖೋಯೆಂದು ಕೊಲುವನು
ನಾವು ಮುಟ್ಟುವರಳಲ್ಲ || ೪೭ ||

ನಿಮ್ಮಲ್ಲಿ ಇರುವಂಥ ಭಟ್ಟನ ಕಳುಹೆಂದು
ನಿಮ್ಮ ರಾಮಯ್ಯನ ಬಿರಿದ |
ಸುಮ್ಮಾನದಿಂದ ಕೊಂಡಾಡಲು ಬರುವುದು
ನಮ್ಮಲ್ಲಿ ಮುಟ್ಟುವರಿಲ್ಲ || ೪೮ ||

ಭಟ್ಟರ ರೂಪಿದೇವಯ್ಯನ ಕರೆಸಿದ
ಹಚ್ಚಡ ದಟ್ಟಿ ಕಬಾಯಿ |
ಕೊಟ್ಟು ಕಂಪಿಲರಾಯ ಕಳಹಲು ಡಿಳ್ಳಿಗೆ
ಬಿಟ್ಟಲ್ಲಿ ಬಿಡದೆ ಬಂದಿಳಿದ || ೪೯ ||

ಈ ಪರಿಯಲ್ಲಿ ಸುದ್ದಿಯ ವಾಲಗದೊಳು
ಭೂಪಾಲ ಸುರಿತಾಳನೊಡನೆ |
ರೂಪಿದೇವಯ್ಯ ಬಂದನೆಂದು ಪೇಳಿದ
ಭೂಪತಿಗವರು ಬಿನ್ನೈಸೆ || ೫೦ ||

ಕರೆಸಿದ ಭಟ್ಟರ ರೂಪಿದೇವಯ್ಯನ
ಸುರಿತಾಳರಾಯ ಬೇಗದಲಿ |
ಹರುಷದಿ ಪಲ್ಲಕ್ಕಿ ಇಳಿದು ತಾ ಬಂದನು
ಬಿರಿದೆತ್ತಿ ಕೊಂಡಾಡಿದನು || ೫೧ ||

ಮಲೆವ ಮಾನ್ಯರ ಗಂಡ ಬಲುಗಜ ಕಂಠೀರವ
ಬಲವಂತರಿಗೆ ಅಂಕುಶವೆ |
ಕುಲದೀಪ ಸುರಿತಾಳ ಡಿಳ್ಳಿಯಾಳುವನೆಂದು
ನಲಿದು ಕೊಂಡಾಡಿದ ಭಟ್ಟ || ೫೨ ||

ಕೊಂಡಾಡಿದ ಭಟ್ಟನ ನೋಡಿ ಸುರಿತಾಳ
ದಿಂದುದಿಂಡಿನ ಉಡುಗೊರೆಯ |
ದಂಡಿಗೆ ಸತ್ತಿಗೆ ದಣಿವಷ್ಟು ವಸ್ತುವ
ಮಂಡಲೇಶ್ವರನು ಕರೆದಿತ್ತ || ೫೩ ||

ಇತ್ತನು ಸುರಿತಾಳರಾಯನಾ ಭಟ್ಟಗೆ
ಮುತ್ತಿನ ದಂಡೆ ಪದಕವ |
ಚಿತ್ತಜ ಸಮರೂಪ ರಾಮನ ತಲೆಯನು
ಎತ್ತಿಕೊಂಡಿನ್ನು ಪೋಗೆನಲು || ೫೪ ||

ನಾಳಿನ ಉದಯಕ್ಕೆ ರಾಮನ ತಲೆಯ ಹೇ
ಳದೆ ನಾನು ಕೊಂಡೊಯ್ವೆನೆನಲು |
ಕೇಳಿ ಸಂತೋಷದಿ ಸುರಿತಾಳ ಭಟ್ಟಗೆ
ವೀಳ್ಯವ ಕೊಟ್ಟು ಮನ್ನಿಸಿದ || ೫೫ ||

ಬೀಡಾರಕೆ ಬಂದು ರೂಪಿದೇವಯ ಊಟ
ಮಾಡಿ ಮಲಗೆ ಸ್ವಪ್ನದಲ್ಲಿ |
ರೂಢಿರಾಯರಗಂಡನೆಂಬ ರಾಮಯ್ಯನು
ಆಡಿದನವಗೆ ಮೂದಲಿಸಿ || ೫೬ ||

ಡಿಳ್ಳಿನಾಳುವ ಸುರಿತಾಳನ ಗಂಡ
ಬಲ್ಲಿದ ರಾಯರಗಂಡ |
ಎಲ್ಲರ ರಾಯರಗಂಡ |
ಎಲ್ಲ ತುರುಕರ ಗಂಡನೆಂದೆಂಬ ಬಿರಿದನು
ಇಲ್ಲಿ ಹೊಗಳು ನಾನು ಬಹೆನು || ೫೭ ||

ಸುರಿತಾಳನ ನಾನಿರುವಂಥ ಠಾವಿಗೆ
ಕರೆತಂದು ಅವನ ಮುಂದೆನ್ನ |
ಭಟ್ಟಾ ಕೇಳಲೋ ನೀನು ನಿನಗೆ ನಾ ಸಿಕ್ಕುವೆ[ನು]
ಉನ್ನತ ಬಿರಿದ ಕೊಂಡಾಡು || ೫೮ ||

ಸುರಿತಾಳನ ಮಗಳು ಮಿಂದು ಮಡಿಯನುಟ್ಟು
ಒಂದೊತ್ತು ಉಪವಾಸದಿಂದ |
ಎರಡು ಕೈಯ್ಯಲ್ಲಿ ಆರತಿಯನೆ ಪಿಡಿಕೊಂಡು
ನಿಂದು ಹಜಾರದ ಮುಂದೆ || ೫೯ ||

ಬಲದಲ್ಲಿ ಸುರಿತಾಳ [ಎ]ಡದಲ್ಲಿ ಆಕೆಯು
ಚೆನ್ನಾಗಿ ನಿಂತು ಹೊಗಳಿದರೆ |
ಪರಿಪರಿ ಬಿರಿದು ಕೊಂಡಾಡಲು ನಿನ್ನೊಳು
ಬರುವೆನೆನುತ ರಾಮು ನುಡಿದ || ೬೦ ||

ಛಪ್ಪನ್ನ ದೇಶದ ರಾಯರಗಂಡನೆಂದು
ತಪ್ಪದೆ ನನ್ನಯ ಬಿರಿದ |

ಒಪ್ಪದಿ ಕೊಂಡಾಡೆ ಬರುವೆನಲ್ಲದೆ ನಾನು
ಅಪ್ಪಳಿಸುವೆನು ಡಿಳ್ಳಿಯನು || ೬೧ ||

ಕಣ್ಣುದೆರೆದು ನೋಡಿದ ರೂಪಿದೇವಯ್ಯ
ಇನ್ನಿದು ಚೋದ್ಯವೆಂದೆನುತ |
ಚೆನ್ನಿಗರಾಮಯ್ಯ ತನ್ನ ಬಿರಿದನೆಲ್ಲ
ಇನ್ನ ಕೊಂಡಾಡ ಹೇಳಿದನು || ೬೨ ||

ದೈವವೆ ಬಲ್ಲವೆನುತ ರೂಪಿದೇವಯ್ಯ
ಸುಯ್ಯುತ ಸುರಿತಾಳನೊಡನೆ || ೬೩ ||

ಗಂಡರಗಂಡ ಖಾನರಗಂಡ ಡಿಳ್ಳಿಯ
ಮಾಂಡಲಿಕರ ಗಂಡನೆಂದು |
ಹಿಂದು ಮಾನ್ಯರಗಂಡನೆಂಬಂಥ ಬಿರಿದನು
ಕೊಂಡಾಡೆ ನಾ ಬರುವೆನೆಂದ || ೬೪ ||

ಹೀಗೆಂದು ಕೊಂಡಾಡೆ ಬರುವೆನೆಂದನು ರಾಮ
ಬೇಗ ಕೊಂಡಾಡದುಳಿದರೆ |
ನೀಗುವೆ ಸುರಿತಾಳನ ಡಿಳ್ಳಿಯನೆಂದು
ಈಗ ಹೇಳಿದನು ಸ್ವಪ್ನವನು || ೬೫ ||

ಸಾವುದೊಳ್ಳಿತೆ ಬರುವೆನು ರಾಮನಾಥನ
ಆವ ಪರಿಯಲಿ ನೀನು ಪೊಗಳೊ |
ನಾವು ಮಾಡಿದ ಫಲವೆನುತಲಿ ಸುರಿತಾಳ
ನೋವುತ ಬಂದನಾಯೆಡೆಗೆ || ೬೬ ||

ನಡೆದು ಬಂದನು ವೀರ ರಾಮನ ಬಳಿಗಾ
ಮುಡಿಯಿರುವಲ್ಲಿಗೆ ಬೇಗ |
ಎಡೆಯಲ್ಲಿ ನಿಂದು ಸುರಿತಾಳನು ಭಟ್ಟನ
ನುಡಿದನು ಕೊಂಡಾಡು ಎನುತ || ೬೭ ||

ಎಂದು ರಾಮಯ್ಯನ ಬಿರಿದನೆಲ್ಲವ ತನ್ನ
ಮುಂದೆ ಕೊಂಡಾಡಲು ತಲೆಯು |
ಬಂದೀತೆ ನಿನ್ನ ಬಳಿಗೆ ಎಂದು ಸುರಿತಾಳ
ಕುಂದದೆ ನುಡಿದ ಭಟ್ಟನಿಗೆ || ೬೮ ||

ಗಂಡುಗಲಿಯು ರಾಮಯ್ಯನ ಬಿರಿದನು
ಕೊಂಡಾಡಲು ಬಾರದಿರಲು |

ತುಂಡುತುಂಡಾಗಿ ಕಡಿಸು ಎನ್ನನು ಎಂದು
ಕೊಂಡಾಡಿದ ವೀರಭಟ್ಟ || ೭೯ ||

ಧರೆಯನಾಳುವ ಸುರಿತಾಳರಾಯನ ಗಂಡ
ಉಳಿದ ರಾಯರ ಗಂಡ ರಾಮ |
ತುರುಕರ ಗಂಡ ಚೆಲ್ವರ ಗಂಡನೆಂದು
ದೊರೆ ರಾಮನ ಕೊಂಡಾಡಿದನು || ೮೦ ||

ಕಾಟಣ್ಣ ಕಂಪಿಲನಲ್ಲದೆ ಉಳಿದೊಂದು
ಕೋಟ್ಯಾನುಕೋಟಿ ವೈರಿಗಳ |
ಕಾಟಕ ನಾಲ್ಕು ದಿಕ್ಕಿನ ರಾಯರಗಂಡ
ಸಾಲ್ಲ ರಾಮಯ್ಯ ನಿನಗೆ || ೮೧ ||

ಭುಗಿಭುಗಿಲೆನುತಲಿ ಎದ್ದಿತು ಆ ತಲೆ
ಬಂದಿತು ಗುಡಿಗುಡಿಸುತಲಿ |
ಬಂದು ಆ ತಲೆಯೊ[ಡನೆ] ಕುಳ್ಳಿರಲು
ಆ ತಲೆ ಪಕಪಕನೆ ನೋಡಿ ನಗುತಲಿ || ೮೨ ||

ಇದ್ದಂಥ ಖಾನಮಲುಕ ಸುರಿತಾಳರು
ನಿರ್ಧಾರದಲಿ ಬೆರಗಾಗಿ || ೮೩ ||

ಕಸ್ತೂರಿ ನಾಮವ ತಿದ್ದುತ ಸುರಿತಾಳ
ಮುತ್ತಿನ ಚೌಕುಳಿ ಇಟ್ಟ |
ಮತ್ತೆ ಹೆಣಿಸಿ ವೀರಜಡೆಯ ಶೃಂಗಾರಕ್ಕೆ
ಸುತ್ತಿದ ಜಾಜಿ ಮಲ್ಲಿಗೆಯ || ೮೪ ||

ಗಂಧವಿಡಿಯ ಕುಂಕುಮ ಕದಂಬವ
ತಂದು ರಾಮಯ್ಯನ ತಲೆಗೆ |
ಚೆಂದದಿ ಶೃಂಗಾರಮಾಡಿ ಭಟ್ಟನ ಕೈಗೆ
ತಂದು ಇಟ್ಟನು ಸುರಿತಾಳ || ೮೫ ||

ಇನ್ನಾದರು ಹೋಗೆನುತಲಿ ಸುರಿತಾಳ
ತನ್ನ ಕರಂಗಳ ಮುಗಿದು |
ಚೆನ್ನಿಗ ರಾಮನ ಕಳುಹಿ ತನ್ನರಮನೆಗೆ
ಉನ್ನತ ಹರುಷದಿ ಬಂದ || ೮೬ ||

ಡಿಳ್ಳಿಯ ಕಳೆದು ರೂಪಿದೇವಯ್ಯನು
ನಿಲ್ಲದೆ ನಾಲ್ಕಾರು ದಿನಕೆ |

ಬಲ್ಲಿದ ರಾಮನ ತಲೆಯನಿಳುಹಿ ಇತ್ತ
ನಲ್ಲಿ ವಿಶಾಲ್ಯ[ಕ್ಕೆ] ಪೋದ || ೭೭ ||

ತಿರುಗಿ ತಾ ಬಂದು ನೋಡಲು ರಾಮನ ತಲೆ
ಇರಿಸಿಹೋದಲ್ಲಿ ಇರಲಿಲ್ಲ |
ಕರೆದನು ಚೆಲ್ವರಗಂಡ ರಾಮಯ್ಯನ
ಮರದ ಮೇಲಿದ್ದು ಓಯೆನಲು || ೭೮ ||

ಅಡಗದೆ[ನಿನ್ನ] ಪರಾಕ್ರಮ ಕೀರ್ತಿಯು
ಉಡುಗಿ ಹಾಳಾಗದೆ ಎನುತ |
ಕಡುಗೋಪದಿ ರೂಪಿದೇವಯ್ಯ ಮರ ಹತ್ತಿ
ಪಿಡಿಯಲು ಪ್ರಾಣವಳಿಯಿತು || ೭೯ ||

ಭಟ್ಟನ ಶಾಪದಿ ರಾಮಯ್ಯನ ಪ್ರಾಣ
ಬಿಟ್ಟುಹೋಯಿತು ಆ ತಲೆಯ |
ಇಟ್ಟ ಕಸ್ತೂರಿ ಕಾದಂಬ ಸಹಿತ ಬಂದು
ಕೊಟ್ಟನು ಕಂಪಿಲರಸಗೆ || ೮೦ ||

ಉಡುಗೊರೆ ವೀಳ್ಯವ ದಟ್ಟಿ ಕಬಾಯವ
ಕಡೆಯದ ಪದಕ ಚೌಕಳಿಯ |
ಕಡುಗಲಿ ಕಂಪಿಲರಾಯ ಭಟ್ಟಗೆ ಕೊಟ್ಟು
ತಡೆಯದೆ ಕಳುಹಿದನವನ || ೮೧ ||

ತಲೆಯ ಕಾಣುತಲಿ ದುಃಖದೊಳದ್ದು ಕಂಪಿಲ
ಹಲಬುದಪ್ಪಿದ ಹುಲ್ಲೆಯಂತೆ |
ಬಲುಹು ಹಾಳಾಯಿತೊ ಕಂದಯ್ಯ ಎನುತಲಿ
ಚೆಲುವರ ಗಂಡನೆಂದೆನುತ || ೮೨ ||

ಅಂದು ರತ್ನಿಯ ಮಾತ ಕೇಳುತ ನಿನ್ನನು
ಕೊಂದೆನೊ ಏ ಎನ್ನ ಕಂದ |
ಬಂದಪಕೀರ್ತಿಯು ಕಳೆದ ಬೈಚಪ್ಪನು
ಮುಂದೆ ನನಗಿನ್ನು ಗತಿಯಾರೊ || ೮೩ ||

ಮೂಜಗದೊಳು ನಿನ್ನ ದೆಸೆಯಿಂದ ಕಂದಯ್ಯ
ರಾಜ್ಯವನಾಳಿದೆ ಇನ್ನು |
ಪೂಜ್ಯ ಹೋಯಿತು ದೆಸೆಗೇಡಿಯಾದೆನೊ ನಿನ್ನ
ನೇಜದ ಮೊನೆಗೆಣೆಯುಂಟೆ || ೮೪ ||

ಆವ ಮಗನ ನೋಡಿ ರಾಜ್ಯವನಾಳಲಿ
ಆವ ಸುತನ ನೋಡಿ ನಿನ್ನ |
ಆವ ಪರಿಯ ನಿನ್ನ ಗುಣ ಹೇಗೆ ಮರೆಯಲಿ
ದೇವ ಕಂಪಿಲ ಮರುಗಿದನು || ೮೫ ||

ಹೀನಜಾತಿಯ ಕೈಲಿ ಅಳಿಯೆಂದು ಹಣೆಯಲ್ಲಿ
ಏನೆಂದು ಬರೆದನೊ ಬ್ರಹ್ಮ |
ನಾನೀಗ ಪುತ್ರ ಶೋಕವನೆಂತು ಮರೆಯಲೊ
ಖಾನ ವಜೀರರಗಂಡ || ೮೬ ||

ಪಟ್ಟದ ರಾಣಿ ಹರಿಯಮ್ಮ ಸಹಿತ ಒಡ
ಹುಟ್ಟಿದವರೆಲ್ಲ ಬಾಯಿ ಬಿಡುತ |
ಕಟ್ಟೆವು ನಮ್ಮಯ ಸಿರಿಯು ಸಂತೋಷವು
ಸುಟ್ಟಹೋಹದೆ ಅಣ್ಣಾಜಿ || ೮೭ ||

ಕಂತುಸನ್ನಿಭ ಚೆನ್ನಿಗರಾಮ ನಿನಗಿದಿ
ರಾಂತು ಬಾಳುವರಿಲ್ಲವೆಂದು |
ಸಂತೋಷದಲ್ಲಿ ನಂಬಿದ್ದೆವು ತಮ್ಮನೀ
ನಿಂತು ಕೆಡಿಸಿ ಹೋಗುವರೆ || ೮೮ ||

ಪೊಡವಿಯೊಳಗೆ ನಿನಗಿದಿರಿಲ್ಲವೆನುತಲಿ
ಕಡು ನಂಬಿರ್ದೆವೊ ಅಣ್ಣ |
ಬಿಡದೆ ನೀನೀ ಪರಿಯಲಿ ನಮ್ಮ ಬಾಯಲಿ
ಹುಡಿಯನು [ಹೊಯ್ದು ] ಹೋಗುವರೆ || ೮೯ ||

ಮಾದಿಗಿತ್ತಿಯ ಕೈಲಿ ಅಳಿಯೆಂದು ಪಣೆಯಲ್ಲಿ
ಸಾ[ಧಿ]ಸಿ ಬರದಂಥ ಬ್ರಹ್ಮ |
ಹೋದ ದಾರಿಯು ಹಾಳಾಗಲಿ ಎನುತಲಿ
ಸೋದರರೆಲ್ಲ ಮರುಗಿದರು || ೯೦ ||

ಲೆ[ಕ್ಕವಿಲ್ಲ]ದೆ ತಾಯಿ ಒಡಲಿಗೆ ಕಿಚ್ಚನು
ಇಕ್ಕಿ ಹೋಗುವರೆ ಕಂದಯ್ಯ |
ದಿಕ್ಕುಗೇಡ್ಯಾದೆನೊ ಎನುತಲಿ ಹರಿಯಮ್ಮ
ದುಃಖದಲತಿ ಮರುಗಿದಳು || ೯೧ ||

ಸಿರಿಯು ಸಂತೋಷವು ದೊರೆತನವೆಲ್ಲವ
ನುರುಹಿ ಹೋಗುವರೆ ಕಂದಯ್ಯ |

ರಾಮನ ವರದಿಂದ ಪಡದೆನೊ ಜಟ್ಟಂಗಿ
ಸ್ವಾಮಿಗೆನ್ನಯ ಉಲಿಮುಟ್ಟ || ೯೨ ||

ಅರೆಯಾಯುಷ್ಯವ ನಿನಗೆ ಬರೆದಂಥ
ನೆರೆ ಬ್ರಹ್ಮನ ಮನೆ ಉರಿ[ಯಾ] |
.........................................
ಹರಿಯಮ್ಮ ಬಿದ್ದು ಹೊರಳಿದಳು || ೯೩ ||

ಭೂಮಿಯೊಳುಳ್ಳಂಥ ದೇವರನೆಲ್ಲವ
ನೇಮದಿ ಭಜಿಸಿ ಜಟ್ಟಂಗಿ |
ಹರನು ನಾರಾಯಣ ನನ್ನಂತೆ ದುಃಖ
ವೆರಸಲಿ ಪುತ್ರಶೋಕದಲಿ || ೯೪ ||

ದೇವ ಬ್ರಹ್ಮನು ನಾರಾಯಣ ನನ್ನಂತೆ
ಮೂವರು ಚಾಲ್ವರಿವುದ |
ಆವ ಕಾಲಕೆ ಕೇಳುವೆನೆಂದು ಹರಿಯಮ್ಮ
ದೇವಿ ಬಿದ್ದಳು ದುಃಖದಲಿ || ೯೫ ||

ಒಡ್ಡುಗೆಡೆದು ದುಃಖಮಾಡೆ ಹರಿಯಮ್ಮನ
ನೋಡಲು ಕಂಪಿಲನಾಗ || ೯೬ ||

ಇರುವೆಯ ಗೂಡಿಗೆ ಕಿಚ್ಚನಿಕ್ಕಿದೆ ಬಂದು
ಅರೆಮಾಡಿ ನಮ್ಮ ಮೋಹವನು |
ಬರುಕೈಯಮಾಡಿ ಹೋಗುವರೆ ರಾಮಯ್ಯ
ಸ್ಥಿರ [ಮಾಡಿ] [ಎ]ನಗೆ [ದುಃಖವನು] || ೯೭ ||

ಹೆಂಡರು ಮಕ್ಕಳು ಸಹವಾಗಿ ಕಂಪಿಲ
ಮುಂಡಾಡಿ ಮುದ್ದಾಡಿ ಮಗನ |
ಕೊಂಡುಹೋಗಿರೊ ಕಾಶಿಯಪಟ್ಟಣಕೆಂದ
ಗಂಡಾಳು ರಾಮನ ತಲೆಯ || ೯೮ ||

ದೇಶಾಧಿಪತಿ ರಾಮಯ್ಯನ ತಲೆಯನು
ಕಾಶಿಯ ಪಟ್ಟಣಕೊಯ್ದು |
ಈಶ್ವರನ ಪಾದಕರ್ಪಿಸುಯೆಂದು ಕಂಪಿಲ
ಆ ಸಮಯದಿ ಕಳುಹಿದನು || ೯೯ ||

ಇತ್ತಲೀ ತಲೆಯ ಕಂಪಿಲರಾಯ ಕಳುಹಿದ
ಅತ್ತಲೀಶ್ವರ ಮನಮೆಚ್ಚಿ |

ನೆತ್ತರ ಕಾಯವ ತರಹೇಳಿ ಚರರಟ್ಟಿ
ಅರ್ತಿಲಿ ತೆಗೆಸೆ ಕಾಯವನು || ೧೦೦ ||

ಹಿಂದಣ ಶಾಪದಿ ರಾಮನ ತಲೆಹೋಗಿ
ಸಂದಿತು ಡಿಳ್ಳಿಪಟ್ಟಣಕೆ |
ಕುಂದದೆ ಉಳಿದಂಥ ಕಾಯವ……
...................................... || ೧೦೧ ||

..........................................
ಕಾಯಾ ಒಣಗಿಸಿ ನೋಡದಿ |
..........................................
ಶಿವನೊಯ್ದನೆಂದೆನುತ || ೧೦೨ ||

ಎಲ್ಲರು ರಣವ ಶೋಧಿಸಿಕೊಳುತ ಬಂದರು
ಬಲ್ಲಿದ ರಾಮನ ಕಾಯ |
ಇಲ್ಲವೆನುತ ಪೇಳಿದರೆಲ್ಲ ಬೈಚಪ್ಪ
ಎಲ್ಲಿ ಹೋಯಿತೊ ರಾಮನ ಕಾಯ || ೧೦೩ ||

ಕಾಯವಿದ್ದರೆ ತಲೆ ಮುಂಡವ ಕೂಡಿಸಿ
ಸಾಯುಜ್ಯಪದವಿಯ ಮಾಡಿ |
ಕಾಯ[ವೆ]ರಸಿ ಕಳುಹುವೆ ಕಾಶಿ ನದಿಗಾಗಿ
ಕಾಯ ಸಿಕ್ಕದೆ ಹೋಯಿತೊ ಮಂತ್ರಿ || ೧೦೪ ||

ತಲೆಯ ಕಳುಹಿಸೊ ಮಂತ್ರಿ ಬೇಗ ಕಾಶಿಗಾಗಿ
ನಿಲ್ಲಿಸಬೇಡೊಂದು ಗಳಿಗೆ |
ಕಲಿ ರಾಮನಾಥನ ತಲೆಯ ಭಟ್ಟರು ಕೂಡಿ
ಒಲಿದು ಬ್ರಾಹ್ಮರ ಕೊಟ್ಟುಕಳುಹೆ || ೧೦೫ ||

ಕಾಶಿಯಪಟ್ಟಣಕೊಯ್ದು ಈ ತಲೆಯನು
ಲೇಸಿಂದ ಭಾಗೀರಥಿಯೊಳಗೆ |
ವಾಸವಮಾಡಿಯೆ ಕಾಶಿಯ ಈಶ್ವರಗೆ
ಲೇಸು ಆರಾಧನೆ ಮಾಡಿ || ೧೦೬ ||

ಅನ್ನಶಾಂತಿಯ ಮಾಡಿ ನೀವು ಬನ್ನೆನುತಲಿ
ಮನ್ನಿಸಿ ಹಣ ಹೊನ್ನು ಕೊಟ್ಟು |
ಉನ್ನತ ಮಾತನೆಲ್ಲವ ಹೇಳೆ ಕಂಪಿಲ
ಚೆನ್ನಾಗಿ ಪುರೋಹಿತರಿಗೆ || ೧೦೭ ||

ಅಪ್ಪಣೆ ತೆಗದು ಪುರೋಹಿತರು ಅವರಾಗ
ತಪ್ಪದೆ ಕಾಶಿಪಟ್ಟಣಕೆ |
ಒಪ್ಪದಿ ಬಂದು ಸ್ನಾನವಮಾಡಿ ನದಿಯೊಳು
ಸುಪ್ವಾಣಿ ರಾಮನ ತಲೆಯ || ೧೦೮ ||

ಆಗಲೆ ತಲೆಯ ನದಿಯೊಳು ಹಾಕುವರೆಂಬ
ಯೋಗವ ತಿಳಿದು ಗುರುಡಾಳು |
ಬೇಗ ಆಕಾಶದೊಳ್ ಕಾದು ತಾನಿರ್ದು
ತೂಗಿ ಬೀಸಾಡುವದ ಕಂಡು || ೧೦೯ ||

ಬಂದ ಬ್ರಾಹ್ಮರು ಮಂತ್ರಯೋಗದಿಂದ ತಲೆಯ
ನಿಂದು ಹಾಕಲು ನದಿಯೊಳಗೆ |
ಅಂದು ತಲೆಯು ನದಿಯೊಳು ಬೀಳುವಾಗಲು
ಬಂದು ಗುರುಡಾಳು ಕೊಂಡೊಯ್ಯೊ || ೧೧೦ ||

ನದಿಯೊಳು ತಲೆ ಬಂದು ಬೀಳುವ ಸಮಯದಿ
ಒದಗಿ ಅಂತರ ಮಾರ್ಗದಲಿ |
ಮುದದಿಂದ ಕಚ್ಚಿಕೊಂಡೊಯ್ದ ಗುರುಡಾಳನು
ಚೆದುರ ರಾಮಯ್ಯನ ತಲೆಯ || ೧೧೧ ||

ಇದು ಚೋದ್ಯವೆಂದು ಬಂದವರೆಲ್ಲ
ನೋಡಲು [ಒಯ್ದಿತು] ಕೈಲಾಸಪುರಕೆ |
ಒದಗಿ ನಾನಾ ದಾನ ಧರ್ಮವನು ಮಾಡಿ
ಕದಲಿ ಬಂದರು ಈಶನೆಡೆಗೆ || ೧೧೨ ||

ಕಾಶಿಯ ಈಶ್ವರಗೆ ನೈವೇದ್ಯವ ಮಾಡಿ
ಲೇಸಿಂದ ಮಾಡಿದರಾಗ |
ದೋಸಿಗ ಬ್ರಾಹ್ಮರಿಗೆಲ್ಲ ದಾನವನಿತ್ತು
ಆ ಸಖೆಯರ ಕೂಡಿಕೊಂಡು || ೧೧೩ ||

ಇಲ್ಲಿಂದ ತೀರ್ಥ ಪ್ರಸಾದವ ತೆಕ್ಕೊಂಡು
ಮೆಲ್ಲನೆ ಕುಮ್ಮಟಕಾಗಿ |
ಎಲ್ಲರು ಕೂಡಿ ಒಂದಾಗಿ ಮಾತಾಡುತ
ನಿಲ್ಲದೆ ಕಂಪಿಲನೆಡೆಗೆ || ೧೧೪ ||

ಇತ್ತ ಜೋಯಿಷ್ಯರು ಕುಮ್ಮಟಕಾಗಿ ಬಂದರು
ಅತ್ತ ಗರುಡಾಳು ಬೇಗದೊಳು |

ಎತ್ತಿ ತಲೆಯನು ತಂದು ಈಶ್ವರನ ಸದರಿಗೆ
ಮತ್ತೆ ಗರುಡಾಳು ಬಿನ್ನೈಸೆ || ೧೧೫ ||

ಹರನು ವಾಲಗದೊಳು ಸಕಲ ಗಣಂಗಳು
ಹರಿ ಬ್ರಹ್ಮ ರುದ್ರಾದಿಗಳು |
ಇರಲುಮೆ ಸಹ ಈಶ ನುಡಿದನು ರಾಮನ ಪರಿಯ
ಪರಿಯ ಕಂಡಿರ ಕಂಡಿರೆನುತ || ೧೧೬ ||

ನರಜಲ್ಮದಲ್ಲಿ ಪುಟ್ಟಿಸಿ ನೋಡಿದೆವು ಅವನ
ಪರನಾರಿಯರ ಸಹೋದರನ |
ಬಿರಿದ ಕಾಲೊಳು ಹಾಕಿ ಗೆದ್ದನು ಪಾರ್ಥನು
ಕರೆತನ್ನಿ ಅವರ ನೋಡುವರೆ || ೧೧೭ ||

ತಲೆ ಮುಂಡ ಗೂಡಿಸಿ ಪ್ರಾಣವಿತ್ತನು ಈಶ
ನಲಿವುತ………………..ರಾಮಯ್ಯ |
ಬಲವಂತನಹುದೊ ನಮ್ಮ ಜೂಜ ಗೆಲಿಸಿದೆ
ಕಲಿಪಾರ್ಥ ನೀನಹುದೆಂದ || ೧೧೮ ||

ಬಂದಡ್ಡಬಿದ್ದ ಉಮೆಯರಸಗೆ ರಾಮಯ್ಯ
ನಿಂದನು ಕೈಯ್ಯನು ಮುಗಿದು |
ಅಂದಚೆಂದವು ನರರೂಪಿನ ಕಾಂತಿಯು
ಅಂದೆಲ್ಲ ಹರಸಿ ಗಣ ನೋಡಿ || ೧೧೯ ||

ನಾರಾಯಣ ನಿನ್ನ ಮೈದುನ ಬಂದನು
ಈರೇಳು ಭುವನವ ಗೆದ್ದು |
ನಾರಿಯ ಶಾಪವ ಕಳೆದು ಹುಜುರು ಬಂದ
ವೀರಪಾರ್ಥನು ತಾನಹುದು || ೧೨೦ ||

ಪಾರ್ವತಿ ಕಂಡು ಪಾರ್ಥವ ಅತಿನಿಷ್ಠೆಯ
ಊರ್ವಿಯಳಗೆ ರಾಯರನೆಲ್ಲ |
ಗರ್ವವ ಮುರಿದು ಊರ್ವಶಿ ರಂಭೆಯ ಗೆದ್ದು
ನಿರ್ವಾಹ ಮಾಡಿದನು ಮಾತ || ೧೨೧ ||

ಬಲ್ಲಿದನಹುದೀಗ ಶಿವ ನಿಮ್ಮ ಪಾರ್ಥನ
ಗೆಲ್ಲಲಿಲ್ಲವು ನಮ್ಮ ರಂಭೆ |
ಉಲ್ಲಾಸ……[ಉ]ಮೆ ಹರಕೆಯ ಕೊಟ್ಟಳು
ಮೆಲ್ಲನೆ ನಾರಾಯಣನೊಡನೆ || ೧೨೨ ||

ಹೋಗಯ್ಯ ವೈಕುಂಠಪುರಕೆ ಸಾಗಿ ನೀನು
ಬೇಗದಿ ಹರಿಯನೆಡೆಗೊಂಡು |
ಆ ಗಳಿಗೆಯೊಳು ಸಾಯುಜ್ಯಪದವಿಯ ಕೊಟ್ಟು
ನೀಗೆಂದು ನರಜಲ್ಮವನು || ೧೨೩ ||

ನಾರಾಯಣ ಪಾರ್ಥರಿಬ್ಬರು ಗರುಡನ
ಏರಿಕೊಂಡು ಹರುಷದಲಿ |
ಹಾರಿತು ಅಲ್ಲಿಂದ ವೈಕುಂಠಪುರಕಾಗಿ
ನಾರಾಯಣನೊಡಗೊಂಡು || ೧೨೪ ||

ರಾಮನಾಥನ ಕಥೆಯನು ಕೇಳಿದ ಜನರಿಗೆ
ಭೂಮಿದಾನವನಿತ್ತ ಫಲವು |
ಪ್ರೇಮದಿ ಸಕಲ ಐಶ್ವರ್ಯವು ದೊರಕುವುದು
ಆ ಮಹಾದೇವ ರಕ್ಷಿಸುವ || ೧೨೫ ||

ಸಂಗ್ರಾಮಧೀರನ ಚರಿತೆಯ ಕೇಳಲು
ಹಿಂಗದೆ ಸಂತಾನಫಲವು
[ಬಂಗಾರ] ರಾಜ್ಯವು ಸ್ಥಿರವು ಜಟ್ಟಂಗಿಯ
ಲಿಂಗನ ಕೃಪೆಯಿಂದಲಹುದು || ೧೨೬ ||

ಕಂದರ್ಪರೂಪ ರಾಮಯ್ಯನ ಚರಿತೆಯ
ಚೆಂದದಿಂದಲಿ ಕೇಳಿದವರ್ಗೆ |
ಬಂಧನ ಪೋಗಿ ಸಂತೋಷ ಬರುವುದಿಂದು
ಚಂದ್ರಶೇಖರನ ದಯದಿಂದ || ೧೨೭ ||

ಕರುಣದಿಂ ಕಾಪಾಡುವ ಪೊಂಪಾಪತಿ
ವಿರೂಪಾಕ್ಷಲಿಂಗ ರಕ್ಷಿಸುವ |
ಶರಣು ದಯಾಳು ಜಟ್ಟಂಗಿಯ ಸ್ವಾಮಿಯ
ಕರುಣದಿ ಸುಖ ಬಾಳ್ವರವರು || ೧೨೮ ||

ಈ ಮಹಾಕೃತಿಯನು ಓದಿ ಬರೆದು ಕೇಳಿ
ದಾ ಮಹಾಪುರುಷನಾವನಿಗೆ |
ಭೂಮಿಯೊಳ್ ಶನಿಹತ್ತಿರೆ ಬಿಟ್ಟು ಓಡುವುದು
ಸ್ವಾಮಿ ಈಶ್ವರ ಶಿವನಾಣೆ || ೧೨೯ ||

ಇದು ರಾಮನ ಸ್ತುತಿಯ ಬರೆದೋದಲು
ಪದೆಪದೆ ಲಕ್ಷ ಸ್ಮರಣೆಯ |

ಮಧುಸೂದನ ದಾರಿದ್ರವ ಕಳೆದಿನ್ನು
ಒದಗಿಸುವನು ಸೌಭಾಗ್ಯವನು || ೧೩೦ ||

ಪಾರ್ವತದೇವಿ ಪರಮೇಶ ವಾಲಗದೊಳು
ಊರ್ವಿಯೊಳರ್ಜುನ ಪುಟ್ಟಿ |
ದೇವ ಜಟ್ಟಂಗಿ ರಾಮೇಶ್ವರನ ವರದಿಂದ
ಊರ್ವಶಿ ರಂಭೆಯ ಗೆಲಿದ || ೧೩೧ ||

ಇದು ಪರನಾರಿ ಸೋದರ ರಾಮನಾಥನ
ಪದಕೃತಿಯೊಳಗೊಂದು ಕಥೆಯ |
ಸುದತಿಯೂರ್ವಶಿ ರಂಭೆಯ ಗೆದ್ದನರ್ಜುನ
ಪದಗಳು ಮುಗಿಯೆ ಈ ಸಂಧಿ || ೧೩೨ ||

ಪರನಾರಿಯರ ಸೋದರನೆಂಬ ಬಿರಿದನು
ಧರಿಸಿ ಧರಿಸಿಕೊಂಡ ರಾಮ |
ಪರಮಾತ್ಮ ಕೃಪೆಮಾಡಿ ಹುಜುರು ಕರೆಸಿಕೊಂಡು
ಸರಸದ ಸಂಧಿ ಸಂಪೂರ್ಣ || ೧೩೩ ||

**ಅಂತು ಸಂಧಿ ೨೬ಕ್ಕಂ ಪದನು ೨೭೯೬ಕ್ಕಂ ಮಂಗಳ ಮಹಾಶ್ರೀ**